ಟೆಲಿಫೋನ್ ನಂ. 792

|| ವಂದೇ ಮಾತರಂ ||

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

[illegible]

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ [illegible]ಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

SADHVI . LEADING NATIONALIST DAILY OF MYSORE

ಸಂಪುಟ [illegible] ] MYSORE : SATURDAY 1-8-1953 : ಮೈಸೂರು : ಶನಿವಾರ [illegible] [ ಸಂಚಿಕೆ [illegible]

# ಆಫ್ರಿಕಾ ವರ್ಣಭೇದ ನೀತಿ ಬಗ್ಗೆ ನೆಹರೂ ಎಚ್ಚರಿಕೆ

## ವರ್ಧಂತಿ ಸತ್ಕಾರ ಕೂಟ

ಮೈಸೂರು ೧

ಶ್ರೀಮನ್ಮಹಾರಾಜರವರು ತಮ್ಮ ವರ್ಧಂತಿಯ ಅಂಗವಾಗಿ, ನೆನ್ನೆ ಸಂಜೆ ಜಗನ್ಮೋಹನ ಭವನದಲ್ಲಿ ಒಂದು ಸೊಗಸಾದ ಸತ್ಕಾರಕೂಟವನ್ನು ಏರ್ಪಡಿಸಿದ್ದರು ಅತಿಥಿಗಳನ್ನು ಮಹಾರಾಜರವರ ಆಪ್ತ ಕಾರ್ಯದರ್ಶಿ ಶ್ರೀ ನಫಿದಾರಾಮಾ, ಹುಜೂರ್ ಸೆಕ್ರೆಟರಿ ಶ್ರೀ ಹೆಚ್. ಎಲ್. ಪಾಳೇಗಾರ್, ಮುಂತಾದ ಅಧಿಕಾರಿಗಳು ಸ್ವಾಗತಿಸಿದರು ೬೦೦ ಜನ ಮಹಿಳೆಯರೂ ಮಹನೀಯರೂ ಆಹ್ವಾನಿಸಲ್ಪಟ್ಟಿದ್ದರು ಉಪಾಹಾರಾನಂತರ ಶ್ರೀಮನ್ಮಹಾರಾಜರವರು ಅತಿಥಿಗಳ ನಡುವೆ ಸ್ವಲ್ಪ ಹೊತ್ತು ಇದ್ದರು.

ನಂತರ ಸಮಾರಂಭದ ಅಂಗವಾಗಿ ಅರಮನೆಯ ವಿದ್ವಾಂಸರುಗಳಿಂದ ಸಂಗೀತ ಗೋಷ್ಠಿಯೂ, ಶ್ರೀ ಯು ಎಸ್ ಕೃಷ್ಣರಾಯರು ಮತ್ತು ಪಾರ್ಟಿಯವರಿಂದ ನೃತ್ಯವೂ, ಲಾರೆನ್ಸ್ ಸ್ಕೂಲ್ ಮತ್ತು ಮೈಸೂರು ಆರ್ಕೆಸ್ಟ್ರಾಗಳಿಂದ ವಾದ್ಯಗೋಷ್ಠಿಯೂ ನಡೆದುವು. ಮೈಸೂರು ಗೀತೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಸಮಾರಂಭಕ್ಕೆ ಮಂತ್ರಿಮಂಡಲದ ಸದಸ್ಯರಾರೂ ಬಂದಿರಲಿಲ್ಲ

ಮುಖ್ಯ ಮಂತ್ರಿಯವರು ವರ್ಧಂತಿಗಾಗಿ ಪ್ರಭುಗಳಿಗೆ ಶುಭಾಶಯಗಳನ್ನು ಕಳುಹಿಸಿರುತ್ತಾರೆ

**ತೆಂಗಿನಕಾಯಿ ಅಂಗಡಿಗಳಿಗೆ ನಾಳೆ ರಜಾ**

ರಾಜಧಾನಿಯ ತೆಂಗಿನಕಾಯಿ ವರ್ತಕರ ಸಂಘದ ಮೊದಲನೇ ವಾರ್ಷಿಕೋತ್ಸವವು ಶ್ರೀರಂಗಪಟ್ಟಣದಲ್ಲಿ ನಾಳೆ ನಗರ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನೆರವೇರುವುದು ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಆರಂಭೋತ್ಸವವನ್ನು ನೆರವೇರಿಸುವರು. ವಾರ್ಷಿಕೋತ್ಸವದ ಪ್ರಯುಕ್ತ, ನಾಳೆ ನಗರದ ಎಲ್ಲಾ ತೆಂಗಿನಕಾಯಿ ಅಂಗಡಿಗಳೂ ಮುಚ್ಚಲ್ಪಡುವುವು

## ರಕ್ಷಾ ಗಡಿ ಉಲ್ಲಂಘನೆ ಬಗ್ಗೆ ಅಮೆರಿಕಕ್ಕೆ ಪ್ರತಿಭಟನೆ

ಅಮೆರಿಕ ಮಿಲಿಟರಿ ವಿಮಾನವೊಂದು ಕಳೆದ ೨೯ನೇ ತಾ|| ವ್ಲಾಡಿವೊಸ್ಟಾಕ್ ನಗರದ ಪ್ರದೇಶದ ಬಳಿ ರಕ್ಷಾ ಗಡಿಯನ್ನು ಉಲ್ಲಂಘಿಸಿ ಪರಿಶೀಲನೆ ನಡೆಸಿದುದಾಗಿ ಅಮೆರಿಕಾ ಸರ್ಕಾರಕ್ಕೆ ರಷ್ಯವು ತೀವ್ರ ಪ್ರತಿಭಟನೆಯನ್ನು ಸೂಚಿಸಿರುತ್ತದೆ ವಿಮಾನವನ್ನು ತಡೆಗಟ್ಟಲು ಪ್ರಯತ್ನಪಟ್ಟ ಎರಡು ರಷ್ಯಾ ವಿಮಾನಗಳ ಮೇಲೆ ಅಮೆರಿಕ ವಿಮಾನವು ಗುಂಡು ಹಾರಿಸಿ ಒಂದಕ್ಕೆ ಹಾನಿ ಮಾಡಿರುವುದೆಂದೂ ವರದಿಯಾಗಿದೆ

## ಕಲ್ಕತ್ತಾದಲ್ಲಿ ೭೫೦ ಪ್ರದರ್ಶನಕಾರರ ಬಿಡುಗಡೆ

ಟ್ರಾಂ ದರಗಳನ್ನು ಹೆಚ್ಚಿಸಿದ ಬಗ್ಗೆ ಪ್ರತಿಭಟನಾ ಚಳುವಳಿ ನಡೆಸಿ, ಬಂಧಿತರಾದ ೭೫೦ ಮಂದಿಯನ್ನು ಕಲ್ಕತ್ತದ ವಿವಿಧ ನ್ಯಾಯಾಸ್ಥಾನದವರು ಖುಲಾಸೆಗೊಳಿಸಿರುತ್ತಾರೆ. ಅವರುಗಳ ಮೇಲೆ ಅಪಾದನೆಯು ಸಾಬೀತಾಗುವ ಸಾಕ್ಷ್ಯವಿರಲಿಲ್ಲ.

## ಕಲ್ಕತ್ತಾ ಟ್ರಾಂ ಕೆಲಸಗಾರರ ಮುಷ್ಕರ ಮುಕ್ತಾಯ

ಕಲ್ಕತ್ತದ ಟ್ರಾಂ ಗಳ ನೌಕರರು ಕಳೆದ ೧೫ ದಿವಸಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ನೆನ್ನೆಯಿಂದ ನಿಲ್ಲಿಸಿರುತ್ತಾರೆ ಟ್ರಾಂ ದರಗಳನ್ನು ಹೆಚ್ಚಿಸಿದುದಕ್ಕೆ ಅಲ್ಲಿ ಜನರು ನಡೆಸಿದ ಪ್ರದರ್ಶನಗಳಿಂದ ಕೆಲಸಗಾರರಿಗೆ ಪ್ರಾಣಾಪಾಯವಾಗುವುದೆಂದು ಮುಷ್ಕರವನ್ನು ನಡೆಸಲಾಗಿದ್ದಿತು ಟ್ರಾಂ ಗಳು ನಿಂತಿರುವುದರಿಂದ ಸಾರ್ವಜನಿಕರಿಗೆ ಆದ ತೊಂದರೆಯನ್ನು ಪರಿಗಣಿಸಿ ಮುಷ್ಕರವನ್ನು ಈಗ ನಿಲ್ಲಿಸಲಾಗಿದೆ

## ದ್ರಾವಿಡರ ಚಳುವಳಿ ವಿರುದ್ಧ ಕಾಂಗ್ರೆಸ್ಸಿನವರ ಕ್ರಮ

ಮದ್ರಾಸು ಪ್ರಾಂತದ ರೈಲ್ವೆ ನಿಲ್ದಾಣಗಳ ಬೋರ್ಡುಗಳಲ್ಲಿರುವ ಹಿಂದಿ ಹೆಸರುಗಳನ್ನು ದ್ರಾವಿಡ ಸಂಘದವರು ಟಾರುಬಳಿದು ಅಳಿಸುತ್ತಿರುವ ಚಳುವಳಿಗೆ ಪ್ರತಿಯಾಗಿ ಕಾಂಗ್ರೆಸ್ ಕಾರ್ಯಕರ್ತರು ಬೇರೊಂದು ಚಳುವಳಿಯನ್ನು ಹೂಡಿ ಟಾರು ಬಳಿದ ಸ್ಥಳಗಳಲ್ಲೆಲ್ಲಾ ಸೀಮೆಯೆಣ್ಣೆಯನ್ನು ಬಳಿದು ಅಳಿಸುವ ಕೆಲಸವನ್ನು ನಡೆಸಲು ನಿರ್ಧರಿಸಿರುತ್ತಾರೆ.

### ಶ್ರೀ ಸಿ. ಎಂ. ಪೂಣಚಾ

ಕೊಡಗು ಸಂಸ್ಥಾನದ ಹೊಸ ಮುಖ್ಯ ಮಂತ್ರಿಗಳು

## ಷಡಂಭೂತ ಶಿಶು

ಬೊಂಬಾಯಿಯ ಆಸ್ಪತ್ರೆಯೊಂದರಲ್ಲಿ ಒಬ್ಬ ಮಹಿಳೆಗೆ ತಲೆ ಬುರುಡೆಯು ಚಪ್ಪಟ್ಟಿದ, ಮುದಳು ಪೂರ್ತಿಯಾಗಿ ಕಾಣಿಸುವ ಮತ್ತು ಶರೀರದ ಮೇಲೆಲ್ಲಾ ಕೂದಲು ಬೆಳದಿರುವ ೩॥ ಪೌಂಡು ತೂಕದ ಷಡಂಭೂತ ಶಿಶುವು ಜನಿಸಿದ್ದಿತು ಹುಟ್ಟಿದಾಗಲೇ ಅದು ಸತ್ತಿದ್ದಿತು ಅದು ೬॥ ತಿಂಗಳಿಗೇ ಹುಟ್ಟಿದ ಶಿಶುವೆಂದು ಹೇಳಲಾಗಿದೆ

**ಭರತ ಮುನಿ ಜಯಂತ್ಯುತ್ಸವ**

ರಾಜಧಾನಿಯ ಶ್ರೀ ನಟರಾಜ ನಾಟ್ಯಕಲಾ ಮಂಡಲಿಯ ಹನ್ನೊಂದನೆಯ ವಾರ್ಷಿಕೋತ್ಸವವು ಮತ್ತು ಭರತಮುನಿ ಜಯಂತ್ಯುತ್ಸವವು ಮೊನ್ನೆ ಟೌನ್‌ಹಾಲಿನಲ್ಲಿ ನೆರವೇರಿದುವು. ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥರವರು ಅಧ್ಯಕ್ಷತೆ ವಹಿಸಿದ್ದರು. ಭರತಮುನಿ ಅಪ್ಸರೆಯರು, ಭರತ ನಾಟ್ಯ, ಮೋಹಿನಿ ಆಟ, ಗಜಾಸುರ ವಧೆ, ಬೇಟೆಗಾರ, ಮುಂತಾದ ಅನೇಕ ಕಾರ್ಯಕ್ರಮಗಳು ನಡೆದುವು.

## ಘನವಾದ ಸಂಗೀತ ಕಛೇರಿ

ಮೈಸೂರು ೧

ನಾಳೆ ರಾತ್ರಿ ೮ ಗಂಟೆಗೆ ಮೈಸೂರು ಶ್ರೀ ಸುಬ್ರಹ್ಮಣ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ಈ ಕೆಳಗೆ ಕಂಡ ವಿದ್ವಾಂಸರುಗಳ ಸಂಗೀತ ಕಛೇರಿಯು ನಡೆಯುತ್ತದೆ.

ಸರ್ವರೂ ದಯಮಾಡಿಸಬೇಕಾಗಿ ವಿನಂತಿ.

ತಿರುಪತಿ ವಿದ್ವಾನ್ ನರಸಿಂಹುಲು ನಾಯುಡುರವರ ಶಿಷ್ಯರಾದ ಬೆಂಗಳೂರು ದಂಪತಿ
ವಿದ್ವಾನ್ ಎಸ್ ಚಂದ್ರಪ್ಪ ಮತ್ತು
ವಿದ್ವಾನ್ ಆರ್. ಚಂದ್ರಸಿಂಗ್ – ಗಾನ,
ಆಸ್ಥಾನ ವಿದ್ವಾನ್ ಹೆಚ್.ವಿ. ಕಾಮರಾಜ್ - ಪಿಟೀಲು,
ಆಸ್ಥಾನ ವಿದ್ವಾನ್ ಟಿ. ಎಂ. ವೆಂಕಟೇಶದೇವರು–ಮೃದಂಗ,
ಆಸ್ಥಾನ ವಿದ್ವಾನ್ ವಿ. ನಾಗಭೂಷಣಾಚಾರ್. ಡೋಲಕ್,
ವಿದ್ವಾನ್ ಬಾಬು ಕೃ- ಘಟಂ,
ವಿದ್ವಾನ್ ಹೋಸಳೆ [illegible]-ಖಂಜರಿ

## ದಕ್ಷಿಣ ಆಫ್ರಿಕಾ ಬಗ್ಗೆ ಭಾರತದ ಆಕ್ರೋಶ

ಪ್ರಧಾನಿ ನೆಹರೂರವರು ಮೊನ್ನೆ ಪತ್ರಿಕಾ ಸಮ್ಮೇಳನವೊಂದರಲ್ಲಿ ವಸಾಹತು, ವರ್ಣಭೇದ ಮತ್ತು ವೃತ್ಯಾಸಗಳನ್ನು ಪ್ರತಿಬಿಂಬಿಸುವ ಧ್ಯೇಯವನ್ನು ಭಾರತವು [illegible] ಎದುರಿಸುವುದೆಂದು ತಿಳಿಸಿರುತ್ತಾರೆ. ಯುದ್ಧವೊಂದನ್ನು ಬಿಟ್ಟು, ಮಿಕ್ಕೆಲ್ಲಾ ಕ್ರಮಗಳನ್ನು ಭಾರತವು ಕೈಗೊಂಡು ಧ್ಯೇಯದ ವಿರುದ್ಧ ಹೋರಾಡುವುದೆಂದು ಅವರು ಸ್ಪಷ್ಟ ಪಡಿಸಿದರು. ದಕ್ಷಿಣ ಆಫ್ರಿಕಾ ಜನರ ಬಗ್ಗೆ ಬಿಳಿಯರ ನೀತಿಯು ಹೇಯವಾದುದೆಂದು ಅವರು ತಿಳಿಸಿ, ನಾವು ಕ್ರಮಗಳಿಂದ ಅವರನ್ನು [illegible] ಎಂದು ಹೇಳಿದರು

## ಮದ್ರಾಸಿನಲ್ಲಿ ಪುನಃ ಟ್ರಾಂ ಓಡಾಟಕ್ಕೆ ಏರ್ಪಾಡು

ಮದ್ರಾಸಿನ ವಿದ್ಯುಚ್ಛಕ್ತಿ ಟ್ರಾಂ ನೌಕರರ ಸಂಘದವರು ನಗರದಲ್ಲಿ ಟ್ರಾಂಗಾಡಿಗಳ ಸಂಚಾರವನ್ನು ಮತ್ತೆ ಏರ್ಪಡಿಸುವುದಕ್ಕೂ, ನೌಕರರ ಪೈಕಿ ಸುಮಾರು ೪೫೦ ಜನರನ್ನು ತೆಗೆದು ಹಾಕಲೂ ಒಪ್ಪಿರುವರೆಂದು ವರದಿಯಾಗಿದೆ ೧೬೦೦ ಕೆಲಸಗಾರರ ಪೈಕಿ ೧,೧೫೦ ಮಂದಿ ಇನ್ನು ಮುಂದೆ ಕೆಲಸ ಮಾಡುವರು.

## ಅಮೆರಿಕದ ಮುಖಂಡ ಟಾಫ್ಟ್‌ರ ನಿಧನ

ಅಮೆರಿಕದ ರಿಪಬ್ಲಿಕನ್ ಪಕ್ಷದ ಮುಖಂಡ ೬೩ ವರ್ಷ ವಯಸ್ಸಿನ ರಾಬರ್ಟ್ ಟಾಫ್ಟ್‌ರವರು ವ್ರಣರೋಗದ ಪರಿಣಾಮವಾಗಿ ನೆನ್ನೆ ನ್ಯೂಯಾರ್ಕಿನಲ್ಲಿ ಮೃತಿಹೊಂದಿದರು. ಅನೇಕ ವರ್ಷಗಳಿಂದಲೂ ಅವರು ಅಮೆರಿಕದ ರಾಜಕೀಯದಲ್ಲಿ ಪ್ರಖ್ಯಾತರಾಗಿದ್ದರು. ಕಳೆದ ಅಧ್ಯಕ್ಷ ಚುನಾವಣೆಯಲ್ಲಿ ಅವರು ಐಸನ್‌ಹೋವರರೊಡನೆ ತಮ್ಮ ಪಕ್ಷದಲ್ಲಿಯೇ ಸ್ಪರ್ಧಿಸಿದ್ದರು.

**ಅಹೋಬಿಲ ಮಠದ ಶ್ರೀಗಳವರ ಪಟ್ಟಾಭಿಷೇಕ ಶ್ರೀಮಹೋತ್ಸವ**

ಶ್ರೀ ಅಹೋಬಿಲ ಮಠದ ೪೪ ನೇ ಪಟ್ಟದ ಶ್ರೀ ಸ್ವಾಮಿಗಳವರ ಪಟ್ಟಾಭಿಷೇಕ ಶ್ರೀ ಮಹೋತ್ಸವವು ಶ್ರೀ ಮಠದ ಶ್ರೀ ಲಕ್ಷ್ಮೀನೃಸಿಂಹ ಸ್ವಾಮಿ ರಂಗನಾಥ ಸ್ವಾಮಿಯವರಿಂದ ನಾಳೆ [illegible] ೧೦-ಗಂಟೆಗೆ [illegible] ಅಗ್ರಹಾರದಲ್ಲಿರುವ ಶ್ರೀ ಅಹೋಬಿಲ ಮಠದಲ್ಲಿ ನಡೆಯುತ್ತದೆ. ಶ್ರೀಮನ್ ಮಹಾರಾಜರವರ ಎ. ಡಿ. ಸಿ. ಗಳೂ, ದರ್ಬಾರ್ ಭಕ್ಷಿಯವರೂ ಆದ ಶ್ರೀ ಹೆಚ್. ಎಲ್. ದೇವರಾಜ ಅರಸಿನವರು ಅಧ್ಯಕ್ಷತೆ ವಹಿಸುವರು. ಆಸ್ತಿಕ ಮಹನೀಯರು ದಯಮಾಡಿಸಿ ಶ್ರೀ ಶ್ರೀಗಳವರ ಅನುಗ್ರಹವನ್ನು ಪಡೆಯಬೇಕೆಂದು ಕೋರಲಾಗಿದೆ.

**ಹಿಂದೂಸ್ಥಾನಿ ಸಂಗೀತ**

ನಾಸಿರ್ ಮೊಯಿದ್ದೀನ್ ದಾಗರ್ ಮತ್ತು ನಾಸಿರ್ ಅಮೀನುದ್ದೀನ್ ದಾಗರ್ ಎಂಬ ಸಹೋದರರು ಹಿಂದೂಸ್ಥಾನಿಯಲ್ಲಿ ಧ್ರುಪದ್, ಧಮ್ಮಾರ್ ಮತ್ತು ಹೋರಿ ಗೀತೆಗಳನ್ನು ಈ ದಿನ ರಾತ್ರಿ ೯॥ ಗಂಟೆಗೆ ರೇಡಿಯೋ ದಿಲ್ಲಿಯಲ್ಲಿ ಪ್ರಸಾರ ಮಾಡುವರು. ಅದನ್ನು ಎಲ್ಲಾ ರೇಡಿಯೋಗಳಲ್ಲೂ ಪ್ರಸಾರ ಮಾಡಲಾಗುವುದು.

★ ವಿಪರೀತ ಮಳೆಯ ದೆಸೆಯಿಂದ ಲಕ್ನೋ ನಗರದಲ್ಲಿ ೩೦೦ ಮನೆಗಳು ಮತ್ತು ಶಿಥಿಲವಾದ ಮನೆಗಳು ಬಿದ್ದು, ೨೦ ಜನರು ಮಡಿದಿರುತ್ತಾರೆ. ೩೦ ಜನರಿಗೆ ಗಾಯವಾಗಿದೆ. ೧೦೦೦ ಮಂದಿ ನಿರಾಶ್ರಿತರಾಗಿರುವರು.

|| ವಂದೇ ಮಾತರಂ ||

# ★ ಸಾಧ್ವಿ ★

ತಾ|| ೧-೮-೧೯೫೩ : ಶನಿವಾರ

## ನಮ್ಮ ವಿನಂತಿ

— ೦ —

ಸಾಧ್ವಿ ದಿನಪತ್ರಿಕೆಯು ಹನ್ನೊಂದು ವರ್ಷಗಳನ್ನು ಕಳೆದು ಇಂದಿನಿಂದ ಹನ್ನೆರಡನೇ ವರ್ಷದಲ್ಲಿ ಪ್ರವೇಶಿಸುತ್ತಿದೆ [illegible] ಸಹಕರಿಸುವವರೆಲ್ಲರಿಗೂ [illegible] ಸಮಯದಲ್ಲಿ ನಾವು ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ

ಮೈಸೂರಿನ ವೃದ್ಧ [illegible] ಶ್ರೀ ಎಂ. ವೆಂಕಟಕೃಷ್ಣಯ್ಯನವರ [illegible] ಸ್ಥಾಪಿಸಲ್ಪಟ್ಟ ಸಾಧ್ವಿಯು [illegible] ಪವಿತ್ರ [illegible] ಮತ್ತು ಅವರಲ್ಲಿ ನಮ್ಮ ಶಿಷ್ಯ [illegible] ಕೃತಜ್ಞತಾರೂಪವಾಗಿ [illegible] ಸಲ್ಪಟ್ಟಿತು ಅವರ ವಿಶ್ವಾಸಪೂರ್ವಕ [illegible] ವಾದದಿಂದಲೂ ಮತ್ತು [illegible] ಅಭಿಮಾನಪೂರಿತ ಪ್ರೋತ್ಸಾಹದಿಂದಲೂ [illegible] ಯು ಜನತಾ ಸೇವೆಯನ್ನು ಇಂದಿನವರೆಗೂ [illegible] ನಡೆಸಿಕೊಂಡು ಬರುತ್ತಿದೆ

ಸಾಧ್ವಿಯು ಬೆಳೆದಂತೆಯೇ ನಮ್ಮ ದೇಶದ [illegible] ಬಂದಿದೆ

ಪ್ರಜಾ ಪ್ರಭುತ್ವದಲ್ಲಿ ಪತ್ರಿಕೆಗಳ ಮಹತ್ವ [illegible] ನಾಯಕರುಗಳು ಪತ್ರಿಕೆಗಳನ್ನು [illegible] ಪ್ರಭುತ್ವದ ಚತುರ್ಥಾಂಗವೆಂದು ಕರೆದಿದ್ದಾರೆ ಪತ್ರಿಕೆಗಳು ಜನತೆಯ [illegible] ಪ್ರತಿಬಿಂಬಿಸುತ್ತವೆ ಆಧುನಿಕ ಪ್ರಪಂಚದಲ್ಲಿ ಪತ್ರಿಕೆಗಳು ಜನಗಳ ನಿತ್ಯಾವಶ್ಯಕತೆಗಳಲ್ಲೊಂದಾಗಿರುತ್ತವೆ

ಇತ್ತೀಚೆಗೆ ಸ್ವಾತಂತ್ರ್ಯ [illegible] ದೇಶದಲ್ಲಿ ಪತ್ರಿಕೆಗಳ [illegible] ಸ್ವಾತಂತ್ರ್ಯ ಸಾಧನೆಯ [illegible] ಪತ್ರಿಕೋದ್ಯಮ [illegible] ಕಾರಣ ಈ ವಿಷಯ [illegible] ದುತ್ತಿರುವ ನಮ್ಮ ಸಹೋ [illegible] ಹೃತ್ಪೂರ್ವಕ [illegible] ಮರ್ಪಿಸುತ್ತೇವೆ

ಸಾಧ್ವಿ [illegible] ನಮ್ಮ ದೇಶ [illegible] [illegible] ನಿರಂತರವಾಗಿ ಶ್ರಮಿಸುತ್ತದೆ [illegible] ಬಿಂದ [illegible] ಇಂದಿನಿಂದ ಪತ್ರಿಕೆಯ ಆಕಾರವೂ ಸ್ವಲ್ಪ [illegible] ಕೊಡಗಿನ ಬೆಲೆಗೇ ಕೊಡ [illegible] ವಾಚಕರಿಗೆ [illegible] ಆನಂದಿಸುತ್ತೇವೆ [illegible] ವಾಚಕರೂ, ಜಾಹಿ [illegible]

ಕೊಡಗಿನ ಮುಖ್ಯ ಮಂತ್ರಿಗಳಾದ

# ಶ್ರೀ ಸಿ. ಎಂ. ಪೂಣಚ್ಚರವರು

## ಜೀವನ ಪರಿಚಯ

ಇಂದು ಕೊಡಗಿನ ಮುಖ್ಯ ಮಂತ್ರಿಗಳಾಗಿರುವ ಶ್ರೀ ಸಿ ಎಂ ಪೂಣಚ್ಚರವರು ಕೊಡಗಿನಲ್ಲೇ ಅತ್ಯಂತ ಪುರಾತನವಾದ ಮತ್ತು ಪ್ರಸಿದ್ಧವಾದ ಚೆಪ್ಪುದಿರ ಮನೆತನಕ್ಕೆ ಸೇರಿದವರು ಇವರ [illegible] ಕೊಡಗಿನ ರಾಜರ ಕಾಲದಲ್ಲೂ ಮತ್ತು ಬ್ರಿಟಿಷರ ಆಡಳಿತದಲ್ಲೂ ಉನ್ನತ ದರ್ಜೆಯ ಅಧಿಕಾರಗಳನ್ನು ಹೊಂದಿದರು ಶ್ರೀ ಪೂಣಚ್ಚರವರ [illegible] ನೇ ಇಸವಿಯಲ್ಲಿ ಅತ್ತೂರು ಎಂಬ [illegible] ಕೊಡಗಿನ ಗ್ರಾಮದಲ್ಲಿ ಜನಿಸಿದರು ಇವರ ಪ್ರಾರಂಭಿಕ ವಿದ್ಯಾಭ್ಯಾಸವು ಕೊಡಗಿನಲ್ಲೇ ಜರುಗಿತು ಆನಂತರ ಉನ್ನತ ವ್ಯಾಸಂಗಕ್ಕಾಗಿ ಮಂಗಳೂರಿಗೆ ತೆರಳಿದರು ಆದರೆ ಇವರ [illegible] ವಿದ್ಯಾರ್ಥಿಗಳ [illegible] ಭಾಗವಹಿಸಿ [illegible] ಕೊನೆಯ [illegible] ಬಿಟ್ಟು [illegible] ಮಾಡಿದ [illegible] ಸ್ವಸ್ಥಳಕ್ಕೆ ಹಿಂತಿರುಗಿದರು [illegible] ಇವರ ಮನಸ್ಸಾಕ್ಷಿತ್ವಗಳಿಗೆ [illegible] ಇಸವಿಯಲ್ಲಿ [illegible] ಉಪ್ಪಿನ ಸತ್ಯಾಗ್ರಹಕ್ಕೆ [illegible] ಇವರೂ ಸಹ ಅವರಲ್ಲಿ [illegible] ಹಿಸಿದರು ತಕ್ಷಣವೇ [illegible] ತಿಂಗಳ [illegible] ಅನುಭವಿಸಿದರು [illegible] ಭಾಗವಹಿಸಿ [illegible] ಕಾಂಗ್ರೆಸ್ [illegible] ಶಿಕ್ಷೆಗೊಳ [illegible] ಗಾದ [illegible] ಜನಿಕರೂ ಸಹ [illegible] ಸಲ್ಲಿಸುತ್ತೇವೆ [illegible] ವಿನಂತಿ ಮಾಡಿಕೊಳ್ಳುತ್ತೇವೆ

ಇಂದಿನ [illegible] ರಾಜಕೀಯದಲ್ಲೂ ಬಹಳ ಸಂತೋಷಕರವಾದ ಘಟನೆಗಳು ಜರುಗಿವೆ ಕೊರಿಯದಲ್ಲಿ ಕದನ ವಿರಾಮ ಒಪ್ಪಂದಕ್ಕೆ [illegible] ಬಿದ್ದಿರುತ್ತದೆ ಅಲ್ಲದೆ ಭಾರತೀಯರಾದ ನಮಗೆ [illegible] ಹರ್ಷವನ್ನುಂಟು ಮಾಡಿರುವ ಸಂಗತಿಯೆಂದರೆ ಭಾರತ-ಪಾಕಿಸ್ತಾನಗಳ ವೈಮನಸ್ಯವು [illegible] ಸೂಚನೆಗಳು [illegible] ವಿಷಯಗಳ [illegible] ಈ ದಿನ ವರ್ಷಕ್ಕೆ ಶುಭಸೂಚಕವಾಗಿ [illegible] ತೋರಿಬರುತ್ತಿವೆ

ಇಂದಿನ ಜಗತ್ತಿನಲ್ಲಿ ಜನತೆಯು ಸಕಲ ಕಷ್ಟವನ್ನೂ ಪರಿಹರಿಸಿ ಸಕಲ ಜಗತ್ತಿಗೂ, ನಮ್ಮ [illegible] ಭಗವಂತನು [illegible] ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ

ಲೆ ೧೯೩೭ರ ವರೆಗೆ ಕೊಡಗು ವಾರ ಪತ್ರಿಕೆಯ ಉಪ ಸಂಪಾದಕರಾಗಿದ್ದರು

೧೯೩೭ನೇ ಇಸವಿಯಲ್ಲಿ ಕೊಡಗಿನ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಆಗ ಪ್ರಥಮ ಪ್ರಯತ್ನದಲ್ಲಿ ಜಯ ಗಳಿಸಲಾಗಲಿಲ್ಲ ಆದರೆ ಮಾರನೆಯ ವರ್ಷ ತಾವು ಸೋತಿದ್ದ ಕ್ಷೇತ್ರದಿಂದಲೇ ಸ್ಪರ್ಧಿಸಿ ಜಿಲ್ಲಾ ಬೋರ್ಡಿಗೆ ಚುನಾಯಿತರಾದರು ಜಿಲ್ಲಾ ಬೋರ್ಡಿನ ಕಾರ್ಯಗಳಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿ ಆಡಳಿತದಲ್ಲಿನ ಅನ್ಯಾಯ, ಅಕ್ರಮಗಳನ್ನು ತೊಡೆದುಹಾಕಲು ಶ್ರಮಿಸಿದರು

ಜಿಲ್ಲಾ ಬೋರ್ಡಿನಲ್ಲಿ ಇರುವಾಗಲೇ ೧೯೪೦ರಲ್ಲಿ ಕೊಡಗಿನಲ್ಲಿ ವೈಯಕ್ತಿಕವಾಗಿ ಕಾನೂನು ಭಂಗ ಚಳವಳಿಯನ್ನು ನಡೆಸಲು ಗಾಂಧೀಜಿಯವರಿಂದ [illegible] ನಾಯಿಸಲ್ಪಟ್ಟರು ತಕ್ಷಣವೇ ಅವರ ಮಹಾತ್ಮರ ಆಜ್ಞಾನುಸಾರವಾಗಿ ಚಳುವಳಿಯನ್ನು ನಡೆಸಿದಾಗ ಮಾರನೇ ದಿನ [illegible] ಬಂಧನಕ್ಕೊಳಗಾದರು

೧೯೪೨ರಲ್ಲಿ ಪುನಃ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸಿ, ಅವಿರೋಧವಾಗಿ ಆರಿಸಿಬಂದರು ಬಹುಮತದಲ್ಲಿದ್ದ ಕಾಂಗ್ರೆಸ್ ಪಕ್ಷವು ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿತು [illegible] ವರ್ಷವೇ ಇವರ ವಿವಾಹವೂ ಜರುಗಿತು

ಚಿಕ್ಕ ವಯಸ್ಸಿನಿಂದಲೇ ಇವರ ಕೊಡಗಿನ [illegible] ಕಾಂಗ್ರೆಸ್ ಸಮಿತಿ ಸದಸ್ಯರಾಗಿದ್ದರು ೧೯೪೨ರಲ್ಲಿ ಇವರು ಐತಿಹಾಸಿಕವಾದ [illegible] ಚಳವಳಿಯಲ್ಲಿ ಭಾಗವಹಿಸಿ [illegible] ಬೆಂಬಲವಿತ್ತರು ಆಗಸ್ಟ್ ತಿಂಗಳ ಅಂತ್ಯ ಭಾಗದಲ್ಲಿ ಬೊಂಬಾಯಿನಿಂದ ಹಿಂತಿರುಗಿದ ಮೇಲೆ ಕೊಡಗಿನಲ್ಲಿ ಬಂಧಿಸಲ್ಪಟ್ಟು, ೩೦ ತಿಂಗಳ ಕಾಲ ಕಾರಾಗೃಹದಲ್ಲಿದ್ದರು

೧೯೪೫ ರಲ್ಲಿ ಕೊಡಗಿನ ವಿಧಾನ ಸಭೆಗೆ ಚುನಾಯಿತರಾದರು ಮತ್ತು ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದರು ೧೯೪೬ ರಲ್ಲಿ ದೆಹಲಿಯ ರಾಜ್ಯಾಂಗ ರಚನಾ ಸಭೆಗೆ ಕೊಡಗಿನ ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟರು ನಮ್ಮ ದೇಶವು ಗಣತಂತ್ರ ರಾಜ್ಯವಾದಾಗ ಇವರು ಪಾರ್ಲಿಮೆಂಟ್ ಸದಸ್ಯರಾದರು

೧೯೫೨ರಲ್ಲಿ ನಡೆದ ಇತ್ತೀಚಿನ ಚುನಾವಣೆಗಳಲ್ಲಿ ತಮ್ಮ ಸ್ವಕ್ಷೇತ್ರದಿಂದ ಆರಿಸಿಬಂದರು ಅನಂತರ ಕಾಂಗ್ರೆಸ್ ಪಕ್ಷದ ನಾಯಕರಾಗಿಯೂ ಮತ್ತು ಕೊಡಗಿನ ಮುಖ್ಯ ಮಂತ್ರಿಗಳಾಗಿಯೂ ಚುನಾಯಿಸಲ್ಪಟ್ಟರು


**WANTED**

Persons who have passed S S L C & U G I Apply with testimonials stating age experience and minimum pay required on or before 5 8 1953

(Sd) P GOPALAKRISHNA SETTY,
Hon Secretary
Sarada Vilas New Type Middle School,
MYSORE


Edited Printed and Published by A R Nagarajan at Sadhvi Press, D. Subbiah Road, Mysore


**SRI GAYATHRI**

From 31-7-53 Daily 3 Shows

**ANDROCLES & THE LION**

**D. BANUMIAH'S COLLEGE OF COMMERCE, MYSORE**

**Admission to B. Com. & I. Com. Classes**

The University of Mysore has granted permission for starting the B Com class in this college Applications for admission to the Junior B Com class will be received from students who have passed the I Com Examination Graduates with Economics as one of the subjects are also eligible for admission Full particulars can be had from the office of the college during working hours

Further admissions to the Junior Intermediate in Commerce class will be made.

ಶುಚಿ ! ರುಚಿ !! ವಿಶ್ರಾಂತಿ !!!

ಸುಸ್ವಾಗತ

**ಶ್ರೀ ಚಾಮುಂಡೇಶ್ವರಿ ಭವನ**

ಇಲವಾಲ ರಸ್ತೆ, ಮೈಸೂರು

ಇಂದಿನಿಂದ ಸ್ಪೆಷಲ್ ತಯಾರಿಕೆಗಳು ! ಇಳಿಸಿದ ದರ !!

ಶ್ರೇಷ್ಠವಾದ 'ಎ' ಕ್ವಾಲಿಟಿ ಕಾಫಿ ಅರ್ಧ ಕಪ್ 0—1—6

ನೆಟ್ ದೋಸೆಗಳು, (ಪ್ಲೇನ್, ಹಳ್ಳಿ ಮತ್ತು ಸ್ಪೆಷಲ್ ಚಟ್ನಿ ಸಹ)
ಮಸಾಲ್ ದೋಸೆ,
ಈರುಳ್ಳಿ ಮಸಾಲೆ ದೋಸೆ,
ಬೋಂಡಾ ಸಾಂಬಾರ್,

ಮಸಾಲೆ ಇಡ್ಲಿ,
ಮಸಾಲೆ ಖಾರಾ ಭಾತ್,
ಸ್ಪೆಷಲ್ ಕೇಸರಿ ಭಾತ್,
ಆಂಬೊಡೆ,
ಪೈರ್ ವಡೆ

ಮೇಲ್ಕಂಡ ರುಚಿಕರವಾದ ಪದಾರ್ಥಗಳನ್ನು ಶ್ರೇಷ್ಠ ರೀತಿಯಲ್ಲಿ ಎಕ್ಸ್‌ಪರ್ಟ್ ನೆಟ್ ದೋಸೆ ಸ್ಪೆಷಲಿಸ್ಟರಿಂದ ತಯಾರಿಸಿ, ರುಚಿ [illegible] ಎಲೆ ಮತ್ತು ಕಮಲದೆಲೆಗಳ ಮೇಲೆ ಒದಗಿಸಲಾಗುತ್ತದೆ ಜಗನ್ಮಾತೆ ಶ್ರೀ ಚಾಮುಂಡೇಶ್ವರಿಯು ನಮ್ಮ ಅಭಿಮಾನಿ ವೃಂದಕ್ಕೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ಟೆಲಿಫೋನ್ ನಂ 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 6 ಕಾಸು

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾ ಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ೬ ೩೦

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE · SUNDAY 2-8-1953 : ಮೈಸೂರು : ಭಾನುವಾರ ೨-೮-೧೯೫೩ [ ಸಂಚಿಕೆ ೨

# ವಿದ್ಯಾವಂತರ ನಿರುದ್ಯೋಗ ನಿವಾರಣೆಗೆ ಯೋಜನೆ

## ಪ್ರೊ|| ಗೋಕಾಕರ ಭಾಷಣ

ಮೈಸೂರು ೨

ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ ಕೃ ಗೋಕಾಕ್ ಅವರು ಉಪನ್ಯಾಸ ಮಾಡುತ್ತಾರೆ ಪ್ರೊ|| ರಂಗಣ್ಣನವರು ಅಧ್ಯಕ್ಷತೆ ವಹಿಸುತ್ತಾರೆ ಸರ್ವರಿಗೂ ಆಹ್ವಾನವುಂಟು

### ವರ್ಧಂತಿ ಶುಭಾಶಯ

ನಂಜನಗೂಡು ತಾಲ್ಲೂಕು ಮಲ್ಕುಂಡಿ ಗ್ರಾಮ ಪಂಚಾಯಿತಿಯವರು ಶ್ರೀ ಹೆಚ್ ವಿ. ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಸಭೆ ನಡೆಸಿ, ಶ್ರೀಮನ್ ಮಹಾರಾಜರವರ ವರ್ಧಂತಿ ಸಂಬಂಧವಾಗಿ ಅವರಿಗೆ ಶುಭಾಶಯಗಳನ್ನು ಕೋರಿರುತ್ತಾರೆ

### ಜೈನ ಸಾಹಿತ್ಯ ಪ್ರಚಾರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಜೈನ ಸಾಹಿತ್ಯ ಪ್ರಚಾರ ಸಂಘ ಮತ್ತು ಜೈನರ ಪ್ರಾಚ್ಯ ಸಂಶೋಧನಾ ಶಾಲೆಯ ತೃತೀಯ. ವಾರ್ಷಿಕೋತ್ಸವವು ಈ ಸಂಜೆ ೬ ಗಂಟೆಗೆ, ಸಯ್ಯಾಜಿರಾವ್ ರಸ್ತೆಯಲ್ಲಿರುವ ಶಾಂತೀಶ್ವರ ಚೈತ್ಯಾಲಯದಲ್ಲಿ ನಡೆಯುವುದು ಮಹಾರಾಜಾ ಕಾಲೇಜಿನ ಕನ್ನಡ ಅ|| ಪ್ರೊ|| ಶ್ರೀ ತಿ ಎಲ್ ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು ಸಂಘದ ವಾರ್ಷಿಕ ವರದಿಯೊಂದು ನಮ್ಮ ಕೈ ಸೇರಿದೆ

### ರೈಲ್ವೆ ಚೀಫ್ ಮೆಕ್ಯಾನಿಕಲ್ ಇಂಜನಿಯರರೊಡನೆ ನೌಕರರ ಭೇಟಿ

ದಕ್ಷಿಣ ರೈಲ್ವೆಯ ಚೀಫ್ ಮೆಕ್ಯಾನಿಕಲ್ ಇಂಜನಿಯರ್ ಶ್ರೀ ಬಾಟ್ಲಿವಾಲಾರವರು ಕಳೆದ ೨೯ನೇ ತಾ|| ಮೈಸೂರು ರೈಲ್ವೆ ವರ್ಕ್‌ಷಾಪಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿದರು ಅವರನ್ನು ರೈಲ್ವೆ ನೌಕರರ ಸಂಘದ ಪ್ರತಿನಿಧಿಗಳು ಭೇಟಿ ಮಾಡಿ ನೌಕರರ ಹದಿನಾಲ್ಕು ಅಂಶಗಳ ಕುಂದುಕೊರತೆಗಳನ್ನು ನಿವೇದಿಸಿಕೊಂಡರು ಮೇಸ್ತ್ರಿಗಳಿಗೆ ಹೆಚ್ಚಿನ ದರ್ಜೆ ಒದಗಿಸುವುದು, ಸಿ ಪಿ ಸಿ ದರ್ಜೆಯಲ್ಲಿ ವ್ಯತ್ಯಾಸವಿರುವುದು, ವರ್ಕ್‌ಷಾಪ್ ಕ್ಯಾಂಟೀನನ್ನು ಇಲಾಖೆಯವರೇ ನಡೆಸುವುದು, ಪ್ರಾವಿಡೆಂಟ್ ನಿಧಿಯ ಮೇಲೆ ಶೇ|| ೪ರಂತೆ ಬಡ್ಡಿ ಕೊಡುವುದು ಇವೇ ಮುಂತಾದ ವಿಷಯಗಳನ್ನು ಇಂಜನಿಯರರ ಗಮನಕ್ಕೆ ತರಲಾಯಿತು

### ಭಾರಿ ಕೇಡಿಗಳ ದಸ್ತಗಿರಿ ಮತ್ತು ಶಿಕ್ಷೆ

ರಾಜಧಾನಿಯ ಕ್ರೈಂ ಬ್ರಾಂಚ್ ಪೋಲೀಸರು ನಂಜನಗೂಡಿನ ಭಾರಿ ಕೇಡಿ ಗಂಗಾಧರ ಎಂಬುವನನ್ನು ಗಡಿಯಾರ ಮುಂತಾದುವನ್ನು ಕಳುವು ಮಾಡುತ್ತಿದ್ದ ಸಂಬಂಧದಲ್ಲಿ ದಸ್ತಗಿರಿ ಮಾಡಿ ಹೂಡಿದ್ದ ಮೊಕದ್ದಮೆಯಲ್ಲಿ ಸದರಿಯವನಿಗೆ ೩ ತಿಂಗಳು ಸಜಾವನ್ನು ವಿಧಿಸಲಾಗಿದೆ ಅವನಿಗೆ ಹಿಂದೆ ನಾಲ್ಕು ಬಾರಿ ಶಿಕ್ಷೆಯಾಗಿದ್ದಿತು ಮಂಡ್ಯದ ಕೇಡಿ ಚನ್ನಪ್ಪ ಎಂಬುವನನ್ನು ಬಂಧಿಸಿ ಅವನಿಂದ ೫೦೦ ರೂ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಅವನಿಗೆ ೫ ತಿಂಗಳು ಶಿಕ್ಷೆಯನ್ನು ವಿಧಿಸಲಾಗಿದೆ ಅವನಿಗೂ ಹಿಂದೆ ೮ ಬಾರಿ ಶಿಕ್ಷೆಯಾಗಿದ್ದಿತು

## ಸಾಧ್ವಿ ಪತ್ರಿಕೆಯ ಹನ್ನೊಂದನೇ ವಾರ್ಷಿಕೋತ್ಸವ

### ಕೊಡಗು ಮುಖ್ಯ ಮಂತ್ರಿ ಶ್ರೀ ಪೂಣಚ್ಚರವರ ಅಧ್ಯಕ್ಷ ಭಾಷಣ

ಮೈಸೂರು ೨

"ಸಾಧ್ವಿ ಪತ್ರಿಕೆಯ ಹನ್ನೊಂದನೇ ವಾರ್ಷಿಕೋತ್ಸವವು ನೆನ್ನೆ ಸಂಜೆ ಪತ್ರಿಕಾಲಯದಲ್ಲಿ ವಿಶೇಷ ವೈಭವದಿಂದ ನಡೆಯಿತು ಕೊಡಗಿನ ಮುಖ್ಯ ಮಂತ್ರಿಯವರಾದ ಶ್ರೀ ಸಿ ಎಂ ಪೂಣಚ್ಚರವರು ಅಧ್ಯಕ್ಷತೆ ವಹಿಸಿದ್ದರು

ಸಮಾರಂಭಕ್ಕೆ ನೂರಾರು ಮಂದಿ ಆಹ್ವಾನಿತರಾಗಿದ್ದರು ಕೊಡಗಿನ ಮಂತ್ರಿ ಶ್ರೀ ಕೆ ಮಲ್ಲಪ್ಪ, ಶಾಸನ ಸಭಾ ಉಪಾಧ್ಯಕ್ಷ ಶ್ರೀ ಸೀನಯ್ಯ, ವೀರರಾಜಪೇಟೆ ಪೌರ ಸಭೆಯ ಅಧ್ಯಕ್ಷ ಶ್ರೀ ರಾಮಪ್ಪ ಊರ್ಫ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಹಳ್ಳಿಕೇರಿ ಗುದ್ಲೆಪ್ಪ ಹುಬ್ಬಳ್ಳಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಶ್ರೀ ಶಂಕರಗೌಡ ಪಾಟೀಲ್ ಹುಬ್ಬಳ್ಳಿಯ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷ ಶ್ರೀ ವಿರೂಪಾಕ್ಷಯ್ಯ ಮೈಸೂರಿನ ಮಾಜಿ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎನ್. ಚನ್ನಯ್ಯ, ಪೌರ ಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯ, ಬರಿಯ ಶಾಸನ ಸಭಾ ಉಪಾಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟಿ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥನ್, ವಿದ್ಯುಚ್ಛಕ್ತಿ ಸೂಪರಿಂಟೆಂಡೆಂಟರಾದ ಶ್ರೀ ಶಿವ ಪ್ರಕಾಶಂ, ಪೌರ ಸಭಾ ಸದಸ್ಯರುಗಳು, ನಗರದ ಗಣ್ಯ ಮಹನೀಯರು ಮತ್ತು ಮಹಿಳೆಯರು ಆಗಮಿಸಿದ್ದರು

ಕುಮಾರಿಯರಾದ ಟಿ ವಸಂತ ಮತ್ತು ಮಾಲತಿಯವರುಗಳಿಂದ ಮಂಗಳಾಚರಣೆಯಾದ ನಂತರ ನಗರದ ವಕೀಲರಾದ ಶ್ರೀ ಬಂಗಲೆ ಶ್ಯಾಮರಾಯರು ಸುಶ್ರಾವ್ಯವಾಗಿ ಭಾರತ ವಾಚನ ಮಾಡಿದರು.

ಪತ್ರಿಕೆಯ ಸಂಚಾಲಕರಾದ ಶ್ರೀ ಅಗರಂ ರಂಗಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು. ಸಾಧ್ವಿ ಪತ್ರಿಕೆಯ ಸ್ಥಾಪಕರಾದ ದಿವಂಗತ ತಾತಯ್ಯನವರನ್ನು ಅವರು ಸ್ಮರಿಸಿಕೊಂಡು ಅದರ ಪ್ರಗತಿಗೆ ಸಹಾಯಕರಾದವರೆಲ್ಲರಿಗೂ ಕೃತಜ್ಞತೆಯನ್ನು ಸೂಚಿಸಿದರು ನೆನ್ನೆಯಿಂದ ಪತ್ರಿಕೆಯ ಆಕಾರವು ಸ್ವಲ್ಪ ಮಟ್ಟಿಗೆ ದೊಡ್ಡದಿರುವ ಅಂಶವನ್ನು ಅವರು ಸಭಿಕರ ಗಮನಕ್ಕೆ ತಂದು, ತಮ್ಮ ಉದ್ಯಮದಲ್ಲಿ ಸಕಲರ ಸಹಕಾರವನ್ನು ಕೋರಿದರು

ಶ್ರೀ ಹೆಚ್ ಸಿ ದಾಸಪ್ಪನವರು ಮಾತನಾಡಿ ಕೊಡಗಿನ ಮುಖ್ಯ ಮಂತ್ರಿ ಮತ್ತು ಇತರ ಅತಿಥಿಗಳ ಪರಿಚಯ ಮಾಡಿಕೊಟ್ಟರು ಅಧ್ಯಕ್ಷರು ಮಾತನಾಡಿ, ಸಮಾರಂಭದಲ್ಲಿ ತಾವು ಭಾಗವಹಿಸುವ ಬಗ್ಗೆ ತಮಗುಂಟಾಗಿರುವ ಸಂತೋಷವನ್ನು ವ್ಯಕ್ತಪಡಿಸಿದರು ಕೊಡಗು ಪ್ರಾಂತ ಮತ್ತು ಮೈಸೂರು ಸಂಸ್ಥಾನಗಳ ಬಾಂಧವ್ಯವನ್ನು ಪ್ರಸ್ತಾಪಿಸಿ, ಕಾವೇರಿನದಿಯು ಎರಡು ಪ್ರದೇಶಗಳನ್ನು ಒಂದುಗೂಡಿಸುವುದೆಂದು ಹೇಳಿದರು

ಪತ್ರಿಕೋದ್ಯಮದ ಮಹತ್ವವನ್ನು ಅವರು ವಿವರಿಸುತ್ತಾ, ಇಂದು ರಾಷ್ಟ್ರಕ್ಕೆ ರಚನಾತ್ಮಕ

## ಮುಸ್ಲಿಂ ಲೀಗಿಗೆ ಫಜ್ಲುಲ್ ಹಕ್ಕರ ತಿಲಾಂಜಲಿ

ಮುಸ್ಲಿಂ ಲೀಗ್ ಸಂಸ್ಥೆಯ ಸ್ಥಾಪಕರಲ್ಲೊಬ್ಬರಾದ ಎ ಕೆ ಫಜ್ಲುಲ್ ಹಕ್‌ರವರು ಅದನ್ನು ತ್ಯಜಿಸಿರುತ್ತಾರೆ ಅವರು ಈಗ ಪೂರ್ವ ಬಂಗಾಳದಲ್ಲಿ ಹೊಸ ರೈತ ಕಾರ್ಮಿಕರ ಪಕ್ಷವನ್ನು ಕಟ್ಟಿರುತ್ತಾರೆ ರೈತ, ಕಾರ್ಮಿಕರ ಹಿತವನ್ನು ರಕ್ಷಿಸುವುದೇ ಅದರ ಉದ್ದೇಶ

---

ಟೀಕೆಗಳಿಂದ ಕೂಡಿದ ಪತ್ರಿಕೆಗಳ ಅವಶ್ಯಕತೆಯು ಹೆಚ್ಚಾಗಿರುವುದೆಂದು ಸೂಚಿಸಿದರು ಸ್ವಾತಂತ್ರ್ಯ ನಂತರ ಸರ್ಕಾರಕ್ಕೆ ಪರೀಕ್ಷಾ ಕಾಲವು ಪ್ರಾಪ್ತವಾಗಿದೆಯೆಂದೂ, ಅಂತಹ ಸಂದರ್ಭದಲ್ಲಿ ಖಂಡನಾತ್ಮಕ ಮತ್ತು ಅವಹೇಳನದ ಬರವಣಿಗೆಗಳಿಗಿಂತಲೂ ರಚನಾತ್ಮಕ ಟೀಕೆಗಳಿಗೆ ಹೆಚ್ಚು ಗಮನವೀಯಬೇಕೆಂದೂ ಅವರು ತಿಳಿಸಿದರು

ಪಾಂಡವರು ವನವಾಸದಲ್ಲಿದ್ದಾಗ ದೂರ್ವಾಸರು ಅತಿಥ್ಯ ಬೇಡಿದ ಸಮಯದಲ್ಲಿ ದ್ರೌಪದಿಗೆ ಉಂಟಾದ ಸ್ಥಿತಿಯು ಈಗ ಸರ್ಕಾರಗಳಿಗೆ ಉಂಟಾಗಿದೆಯೆಂದೂ ದೂರ್ವಾಸರು ದ್ರೌಪದಿಗೆ ಸ್ವಲ್ಪ ಅವಕಾಶವನ್ನಾದರೂ ಕೊಟ್ಟು ಸ್ನಾನಕ್ಕೆಂದು ಹೋದರೂ, ಈಗ ಸರ್ಕಾರಗಳ ವಿರೋಧಿಗಳು ಅಷ್ಟೂ ಸಹ ತಾಳ್ಮೆಯನ್ನು ಹೊಂದದೆ ತಕ್ಷಣವೇ ತಮ್ಮ ಇಷ್ಟಾರ್ಥಗಳು ಈಡೇರಬೇಕೆಂದು ಒತ್ತಾಯ ಮಾಡುತ್ತಿರುವರೆಂದೂ ಅವರು ಹೇಳಿ, ದೇಶದಲ್ಲಿ ಆಹಾರದ ಅಭಾವವನ್ನು ತಪ್ಪಿಸಲು ಸರ್ಕಾರವು ಸಮಾಪಿಸುತ್ತಿದೆಯೆಂದು ಹೇಳಿದರು.

ಪತ್ರಿಕೆಗಳು ಜನಾಭಿಪ್ರಾಯವನ್ನು ಪ್ರತಿಬಿಂಬಿಸುವುದಲ್ಲದೆ ಅದನ್ನು ರೂಪಿಸುವ ಶಕ್ತಿಯನ್ನು ಹೊಂದಿರುವುವೆಂದೂ, ದೇಶೋನ್ನತಿಗೆ ಪತ್ರಿಕೆಗಳು ಅಪಾರವಾದ ಸಹಾಯ ಮಾಡುವವೆಂದೂ ಅವರು ಹೇಳಿ, ಉತ್ತಮ ದರ್ಜೆಯ ಮತ್ತು ಸತ್ಯ ಪ್ರತಿಪಾದಕ ಪತ್ರಿಕೆಗಳು ಹೆಚ್ಚಾಗಿ ಬೆಳೆಯಬೇಕೆಂದು ಹೇಳಿದರು ಪ್ರಜಾ ಪ್ರಭುತ್ವ ರಾಜ್ಯವು ಜಯಪ್ರದವಾಗಬೇಕಾದರೆ ಟೀಕೆಗಳು ಅವಶ್ಯಕವೆಂದೂ, ಆದರೆ ಅದನ್ನು ನಾಶಪಡಿಸುವ ಉದ್ದೇಶವುಳ್ಳ ಪತ್ರಿಕೆಗಳಿಂದ ಸರಿಯಾದ ಸೇವೆ ಸಲ್ಲುವುದಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು ದೇಶವು ಸಂಪದ್ಯುಕ್ತವಾಗಲು ಮತ್ತು ಸುಭಿಕ್ಷವಾಗಿರಲು ಪತ್ರಿಕೆಗಳು ಮಾರ್ಗದರ್ಶಕಗಳಾಗಬೇಕೆಂದರು

ಮೈಸೂರಿನ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಅವರು ಪ್ರಶಂಸಿಸಿ, ಅವರು ಸ್ಥಾಪಿಸಿದ ಸಾಧ್ವಿ ಪತ್ರಿಕೆಯು ಯಶಸ್ವಿಯಾಗಿ ಬಾಳಲೆಂದು ಹಾರೈಸಿದರು ನಂತರ ಬೆಂಗಳೂರು ವಿದ್ವಾನ್ ಎ ಸುಬ್ಬರಾಯರ ಅಮೋಘವಾದ ಗಾಯನವು, ವಿದ್ವಾನ್ ಟಿ ಎಸ್ ತಾತಾಚಾರ್‌ರವರ ಪಿಟೀಲು, ಆ|| ವಿದ್ವಾನ್ ಟಿ ಎಂ ವೆಂಕಟೇಶದೇವರು ರವರ ಮೃದಂಗ, ವಿದ್ವಾನ್ ಎ ನಾಗಭೂಷಣಾಚಾರ್‌ರವರ ಡೋಲಕ್, ವಿದ್ವಾನ್ ಬಾಬು ರೈರವರ ಖಂಜರಿಗಳ ಸಮ್ಮೇಳನ ನಡೆಯಿತು

ವಂದನಾರ್ಪಣೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು

## ಹಿಂದಿ ಬೋರ್ಡುಗಳನ್ನು ಅಳಿಸುತ್ತಿದ್ದವರ ದಸ್ತಗಿರಿ

ಬೆಂಗಳೂರು ೨

ಬೆಂಗಳೂರು ನಗರ, ಸಿವಿಲ್ ಪ್ರದೇಶ ಮತ್ತು ಕೃಷ್ಣರಾಜಪುರಂ ರೈಲ್ವೆ ನಿಲ್ದಾಣಗಳಲ್ಲಿರುವ ಬೋರ್ಡುಗಳಲ್ಲಿ ಹಿಂದಿ ಅಕ್ಷರಗಳನ್ನು ಅಳಿಸಲು ಟಾರು ಬಳಿಯುತ್ತಿದ್ದರೆಂದು ೬ ಜನರನ್ನು ದಸ್ತಗಿರಿ ಮಾಡಲಾಗಿದೆ

### ಬೆಂಗಳೂರಿಗೆ ವಿಶ್ವಸಂಸ್ಥೆ ಕಛೇರಿ ವರ್ಗಾವಣೆ ಬಗ್ಗೆ ಸಂಭಾಷಣೆ

ವಿಶ್ವ ಸಂಸ್ಥೆಯ ದೂರ ಪೂರ್ವ ಮತ್ತು ಏಷ್ಯಾ ಆರ್ಥಿಕ ಸಮಿತಿ ಕೇಂದ್ರ ಕಛೇರಿಯನ್ನು ಬೆಂಗಳೂರಿಗೆ ವರ್ಗಾವಣೆ ಮಾಡುವ ಸಂಬಂಧವಾಗಿ ಮುಖ್ಯ ಮಂತ್ರಿ, ಶ್ರೀ ಕೆ ಹನುಮಂತಯ್ಯನವರೊಡನೆ ಸಮಿತಿಯ ಕಾರ್ಯದರ್ಶಿ ಡಾ|| ಲೋಕನಾಥನ್‌ರವರು ಸಂಭಾಷಣೆ ನಡೆಸಿದರು ಸಮಿತಿಯ ಅಧಿಕಾರಿಗಳು ಇಲ್ಲಿದ್ದುಕೊಂಡು ಭವನಗಳ ಅನ್ವೇಷಣೆಯನ್ನು ನಡೆಯುತ್ತಿರುವುದಾಗಿ ಗೊತ್ತಾಗಿದೆ ಬೆಂಗಳೂರಿನಲ್ಲಿ ಕೇಂದ್ರದ ಕಛೇರಿಯನ್ನು ತೆರೆಯಲು ಭಾರತ ಸರ್ಕಾರದವರು ಸಮ್ಮತಿಸಲಿರುವರೆಂದೂ ಹೇಳಲಾಗಿದೆ

### ವಿವಾಹ ವಿಸರ್ಜನೆ : ಇಕದ್ದಮೆಯಲ್ಲಿ ದ್ರಾವಕದ ಪ್ರಯೋಗ

ಕಡಲೂರಿನ ಜಿಲ್ಲಾ ನ್ಯಾಯಾಧೀಶರ ಸಮ್ಮುಖದಲ್ಲಿ ಶಕುಂತಲಾಬಾಯಿ ಎಂಬಾಕೆಯು ತನ್ನ ಗಂಡ ಗೋಪಾಲ ಚೆಟ್ಟಿಯಾರರಿಂದ ದಾಂಪತ್ಯ ವಿಸರ್ಜನೆಹೊಂದುವ ಬಗ್ಗೆ ಸಲ್ಲಿಸಿದ್ದ ಅರ್ಜಿಯು ಪರಿಶೀಲಿಸಲ್ಪಡುತ್ತಿದ್ದಾಗ ಪ್ರತಿವಾದಿಯು ತನ್ನ ಪತ್ನಿಯ ಮುಖದಮೇಲೆ ದ್ರಾವಕವನ್ನು ಚೆಲ್ಲಿದನೆಂದು ಹೇಳಲಾಗಿದೆ ತನ್ನ ಹೆಂಡತಿಯು ಕೋರ್ಟಿನ ಮುಂದೆ ಬರುವುದಕ್ಕೆ ಆತನ ಸಹಾಯಕನಾದನೆಂಬುದೇ ಕೃತ್ಯಕ್ಕೆ ಕಾರಣ

## ನಿರುದ್ಯೋಗ ನಿವಾರಣೆಗೆ ೧೧ ಅಂಶಗಳ ಯೋಜನೆ

ಕೇಂದ್ರ ಯೋಜನಾ ಸಮಿತಿಯವರು ಸಂಸ್ಥಾನಗಳ ಸರ್ಕಾರಗಳಿಗೆ, ವಿದ್ಯಾವಂತರಲ್ಲಿ ನಿರುದ್ಯೋಗ ನಿವಾರಣೆ ಬಗ್ಗೆ ೧೧ ಅಂಶಗಳ ಸಲಹೆಗಳುಳ್ಳ ಯೋಜನೆಯನ್ನು ಕಳುಹಿಸಿರುವರೆಂದು ವರದಿಯಾಗಿದೆ ಪಟ್ಟಣಗಳಲ್ಲಿ ನಿರುದ್ಯೋಗವು ಕಡಿಮೆಯಾಗಿರುವುದೆಂಬುದಕ್ಕೆ ನಿಖರವಾದ ಅಂಕಿಅಂಶಗಳಿಲ್ಲವೆಂದೂ, ಖಾಸಗಿಯವರಲ್ಲಿ ಉದ್ಯೋಗ ದೊರೆಯುವ ಅವಕಾಶಗಳು ಕಡಿಮೆಯಾಗಿದ್ದು ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಿರುವುದೆಂದೂ ಸಮಿತಿಯವರು ಭಾವಿಸಿರುತ್ತಾರೆ

### ಮೈಸೂರು ಜಿಲ್ಲೆಯಲ್ಲಿ ? ಸರ್ಕಾರೀ ಸಾಲಕ್ಕೆ ಹಣ

ಮೈಸೂರು ಸರ್ಕಾರದ ೩ ಕೋಟಿ ರೂ ಸಾಲಕ್ಕೆ ಮೈಸೂರು ಜಿಲ್ಲೆಯ ಒಟ್ಟು ೩,೯೮,೦೦೦ ರೂ ಗಳು ಸಂಗ್ರಹವಾಗಿರುವುದೆಂದು ತಿಳಿದುಬಂದಿದೆ

# ವಾರ ಭವಿಷ್ಯ

ತಾ|| ೩-೮ ೫೩ ರಿಂದ ೯-೮-೫೩ ರ ವರೆಗೆ

— ೦ —

ಮೇಷ — ವಿಚಿತ್ರ ವಾತಾವರಣ ಮಾನಸಿಕ ಸ್ಥಿತಿ ಚಿಂತಾಜನಕ, ಅವಿಚಾರ ದೃಷ್ಟಿ ಪಿತ್ರಾರ್ಜಿತ ಆಸ್ತಿಯಲ್ಲಿ ಗಲಾಟೆ ಸಂಭವ ಮಾನ ಹಾನಿ ಆರೋಗ್ಯ ಸಾಧಾರಣ ವ್ಯಾಪಾರ ಉದ್ಯೋಗದಲ್ಲಿ ಪ್ರತಿಸ್ಪರ್ಧಿಗಳ ಕೈ ಮೇಲು ಪ್ರವಾಸ, ಸಟ್ಟಾ ಲಾಟರಿಗಳಿಗೆ ಹೋಗಬೇಡಿ ತಾ|| ೪ ೫ ಮಿತ್ರ ಸಹಾಯ ಶುಭ ವಾರ್ತೆ

ವೃಷಭ — ನಿಮ್ಮ ಮಾತಿಗೆ ಈ ವಾರ ಬೆಲೆಯಿಲ್ಲ, ಎದುರಿನಲ್ಲೇ ಅತ್ಯಾಚಾರಗಳು ನಡೆಯುವುವು ಮೌನವೇ ಲೇಸು ಮಾನಸಿಕ ಕ್ಲೇಶ ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಸಾಮಾನ್ಯ ವ್ಯಾಪಾರ ಉದ್ಯೋಗಗಳಲ್ಲಿ ತೊಂದರೆ ದೂರ, ಪ್ರವಾಸ ಕಾರ್ಯ ತಾ|| ೬ ೭ ಮಹತ್ಕಾರ್ಯಗಳಿಗೂ, ಮೇಲ್ಪಟ್ಟವರ ಭೇಟಿಗೂ ಉತ್ತಮ

ಮಿಥುನ — ಆರೋಗ್ಯ ಉತ್ತಮ ಹಣದ ಅಭಾವ ಗೃಹ ಕಲಹ ಮಾನಸಿಕ ಸ್ಥಿತಿ ಹಿತಕರವಿಲ್ಲ ಉದ್ಯೋಗದಲ್ಲಿ ಉತ್ತಮ. ಮಕ್ಕಳ ಪ್ರೇಮ ತಾ|| ೩ ೪ ಸತ್ಕಾರ ಪ್ರೀತಿಯ ವಸ್ತು ಲಾಭ

ಕರ್ಕ — ಮಾನಸಿಕ ಆರೋಗ್ಯ ಸ್ಥಿತಿ ನೆಟ್ಟಗಿರದ, ಯೋಚಿಸಿದ ಕಾರ್ಯ ಅರ್ಧಕ್ಕೆ ಸಾಂಪತ್ತಿಕ ಸ್ಥಿತಿ ಚಿಂತಾಕುಲ ವ್ಯಾಪಾರ ಉದ್ಯೋಗಗಳಲ್ಲಿ ಮೇಲ್ಪಟ್ಟವರಿಂದಲೂ ಪ್ರತಿಸ್ಪರ್ಧಿಗಳಿಂದಲೂ ತೊಂದರೆ ಪ್ರವಾಸದಲ್ಲಿ ಕಷ್ಟ ತಾ|| ೫, ೬ ಶತ್ರುಪೀಡೆ, ಕಲಹ

ಸಿಂಹ — ಆರೋಗ್ಯದ ಕಡೆ ಗಮನವಿರಲಿ ಬಂಧುಗಳ ಅಪಪ್ರಚಾರ ಮನಸ್ಸಿಗೆ ಬೇಸರ ಸಾಂಪತ್ತಿಕ ಸ್ಥಿತಿ ಸಮಾಧಾನಕರವಿಲ್ಲ ವ್ಯಾಪಾರ ಉದ್ಯೋಗ ಪ್ರವಾಸಾದಿಗಳಲ್ಲಿ ಕಷ್ಟ ತಾ|| ೫ ೬ ಮಾನ ರಕ್ಷಣೆ ದ್ರವ್ಯ ಸಹಾಯ

ಕನ್ಯಾ — ಮಾನಸಿಕ ಆರೋಗ್ಯ ಸ್ಥಿತಿ ನೆಟ್ಟಗೆ ವ್ಯಾಪಾರ ಉದ್ಯೋಗ ಪ್ರವಾಸಾದಿಗಳಲ್ಲಿ ಎಚ್ಚರಿಕೆ ಸದ್ಗ್ರಂಥ ವಾಚನಾಯೋಗ ತಾ|| ೬ ೮ ಮೃಷ್ಟಾನ್ನ ಭೋಜನ ನೂತನ ಪರಿಚಯ

ತುಲಾ — ಕರ್ತವ್ಯ ದಕ್ಷರಾಗಿರಿ ವ್ಯಾಪಾರ, ಉದ್ಯೋಗ ಪ್ರವಾಸಗಳಲ್ಲಿ ಮಿತ್ರ ಸಹಾಯ, ಲಾಭ, ಆರೋಗ್ಯ ಆರ್ಥಿಕ ಮಾನಸಿಕ ಸ್ಥಿತಿ ತೃಪ್ತಿಕರ ತಾ|| ೩, ೬ ಶುಭಕಾರ್ಯಕ್ಕಾಗಿ ವೆಚ್ಚ ಬಂಧುಗಳ ಆಗಮನ

ವೃಶ್ಚಿಕ — ಕೆಲಸ ಪೂರ್ಣವಾಗದಿದ್ದರೂ ಧೈರ್ಯ ಬರುವುದು, ವ್ಯಾಪಾರ ಉದ್ಯೋಗ ಪ್ರವಾಸಗಳಲ್ಲಿ ಸಂಕಟ ದೂರ ಆರೋಗ್ಯ ಆರ್ಥಿಕ ಮಾನಸಿಕ ಸ್ಥಿತಿಯಲ್ಲಿ ಸುಧಾರಣೆ ತಾ|| ೫ ೬ ದಾನ ಧರ್ಮಾದಿಗಳಿಗೆ ವೆಚ್ಚ ಗಲಾಟೆ

ಧನು — ಕಲಹ, ಗಲಾಟೆ ಯಿಂದ ಮನಸ್ಸಿಗೆ ತಾಪ, ಸಂಸಾರದಲ್ಲಿ ಸ್ಥಿತಿ ನೆಟ್ಟಗಿರದು, ಆರೋಗ್ಯ ತೃಪ್ತಿಕರವಿಲ್ಲ ಸಾಂಪತ್ತಿಕ ಸ್ಥಿತಿ ತೃಪ್ತಿಕರವಿಲ್ಲ ವ್ಯಾಪಾರ, ಉದ್ಯೋಗಗಳಲ್ಲಿ ಪತ್ರ ಬಂಧೆ ತಾ|| ೩, ೪ ಧನ ಚಿಂತೆ ಅಶುಭ ವಾರ್ತೆ

ಮಕರ — ಕಾರ್ಯತತ್ಪರರಾಗಿ ದ್ವಿಮುಖ ಮಾತನಾಡಬೇಡಿ, ಆರ್ಥಿಕ ಮಾನಸಿಕ ಸ್ಥಿತಿಗಳ ನೆಟ್ಟಗಿರುವುವು, ಸಂಸಾರ ತಾಪತ್ರಯ, ಪತ್ನಿ ಪುತ್ರರಿಗೆ ಕ್ಲೇಶ, ವ್ಯಾಪಾರಾದಿಗಳಲ್ಲಿ ಹಾನಿ ತಾ|| ೩ ೬ ಗುಪ್ತ ಚಿಂತೆ, ವಿಯೋಗ ವಾರ್ತೆ

ಕುಂಭ — ದಾನ ಧರ್ಮಾದಿಗಳೂ ಸಮಾಜ ಸೇವೆಯೂ ನಡೆಯುವುವು ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ, ವ್ಯಾಪಾರ ಉದ್ಯೋಗ ಪ್ರವಾಸಗಳಲ್ಲಿ ಯಶ, ವೈವಾಹಿಕ ಸುಖ ತಾ|| ೬ ೮ ಖರ್ಚು, ನಿದ್ರಾ ನಾಶ

ಮೀನ — ಆರೋಗ್ಯ ನೆಟ್ಟಗೆ, ಮನಸ್ಸಿನ ಸ್ಥಿತಿ ಚಾಂಚಲ್ಯಕರ, ವ್ಯಾಪಾರ ಉದ್ಯೋಗದಲ್ಲಿ ಮಿತ್ರ ಸಹಾಯ ಮಾನ ಸಂರಕ್ಷಣೆ, ಪ್ರವಾಸ ದೃಷ್ಟಿಯಿಂದ ಸಾಧಾರಣ, ಸ್ವಕೃತಕಾರ್ಯ ಆರ್ಥಿಕ್ಕೆ ತಾ|| ೪ ೬ ಸ್ತ್ರೀಯರ ಪ್ರಾಪ್ತಿಗಾಗಿ ಮಿತ್ರ ಸಹಾಯ

## ಶಾಸನ ಸಭೆಯಲ್ಲಿ ಟೆಲಿಫೋನ್ ಉಪಯೋಗ ಕೂಡದು

### ಕಿರಿಯ ಸಭಾಧ್ಯಕ್ಷರ ರೂಲಿಂಗು

ಬೆಂಗಳೂರು ೧

ಕಿರಿಯ ಶಾಸನ ಸಭೆಯಲ್ಲಿ ಭಂಗವಹಿಸುತ್ತಿದ್ದು ಹಾಗೆಯೇ ತಾವು ಕುಳಿತ ಸ್ಥಳದಲ್ಲಿಂದ ಇಂಟರ್ನಲ್ ಟೆಲಿಫೋನ್ ವ್ಯವಸ್ಥೆ ಮೂಲಕ ಮುಖ್ಯ ಮಂತ್ರಿಯವರು ಅಧಿಕಾರಿಗಳೊಡನೆ ಸಂಭಾಷಿಸುತ್ತಿದ್ದನ್ನು ಇನ್ನು ಮುಂದೆ ನಿಲ್ಲಿಸಬೇಕಾಗುವುದು ಶ್ರೀ ಬಿ ವಿ ನಾರಾಯಣ ರೆಡ್ಡಿಯವರು ಈ ರೀತಿಯ ಉಪಯೋಗದಿಂದ ಸಭಾ ಕಾರ್ಯಕ್ಕೆ ಅಡಚಣೆಯಾಗುವುದೆಂದು ಅಧ್ಯಕ್ಷರಿಗೆ ತಿಳಿಸಲಾಗಿ ಅವರ ಮೊನ್ನೆ ಈ ಬಗ್ಗೆ ರೂಲಿಂಗ್ ಕೊಟ್ಟು ಇಂಟರ್ನಲ್ ಟೆಲಿಫೋನ್ ಉಪಯೋಗವು ಸರಿಯಲ್ಲವೆಂದು ತಿಳಿಸಿದರು ಅದು ಪಾರ್ಲಿಮೆಂಟರಿ ಪದ್ಧತಿಗೆ ವಿರೋಧವೆಂದು ಅವರು ಅಭಿಪ್ರಾಯಪಟ್ಟರು ಸಭೆಯು ನಡೆಯುತ್ತಿರುವಾಗ ಅಧಿಕಾರಿಗಳಾಗಲಿ ಜವಾನರುಗಳಾಗಲಿ ಒಳಗೆ ಪ್ರವೇಶಿಸದಿರಲೆಂದು ಅವರು ಆಶಿಸಿದರು ಪುಸ್ತಕಗಳು ಸದಸ್ಯರಿಗೆ ಬೇಕಾದರೂ ಸಹ ಹೊರಗೆ ಹೋಗಿ ಪಡೆಯಬೇಕೆಂದು ಅವರು ಅಭಿಪ್ರಾಯಪಟ್ಟರು

### ಸರ್ಕಾರದ ಮೇಲೆ ದಾವಾ

ಕೊಡಗಿನ ಶ್ರೀ ಪಿ ಪಾಪಯ್ಯ ನಾಯ್ಡುರವರು ಮೋಟಾರು ವಾಹನಗಳಿಗೆ ಉಪಯೋಗಿಸುವ ಪೆಟ್ರೋಲಿನ ಮೇಲೆ ತೆರಿಗೆ ವಸೂಲಿಯ ಕ್ರಮವು ರಾಜ್ಯಾಂಗಕ್ಕೆ ವಿರೋಧವಾಗಿರುವುದೆಂದು ಇಲ್ಲಿನ ೧ನೇ ಮುನ್ಸೀಫ್ ಕೋರ್ಟಿನಲ್ಲಿ ಹೂಡಿರುವ ಮೊಕದ್ದಮೆಯನ್ನು ಮುಂದಿನ ತಿಂಗಳು ೧೯ ನೇ ತಾ|| ಗೆ ವಿಚಾರಣೆಗಾಗಿ ಹಾಕಲಾಗಿದೆ ಅಂದು ಸರ್ಕಾರದವರು ಈ ಬಗ್ಗೆ ತಮ್ಮ ಹೇಳಿಕೆಯನ್ನೀಯುವಂತೆ ಸೂಚಿಸಲಾಗಿದೆ ಈ ಬಡೆ ಈ ದಾವೆಯನ್ನು ಹೈಕೋರ್ಟಿಗೆ ವರ್ಗಾಯಿಸಬಹುದೇ ಎಂಬ ವಿಷಯವೂ ಅಂದು ಕೋರ್ಟಿನ ಪರಿಶೀಲನೆಗೆ ಬರುವುದಾಗಿದೆ ಮೈಸೂರಿನಲ್ಲಿ ಕೊಂಡು ಕೊಡಗಿನಲ್ಲಿ ಉಪಯೋಗಿಸುವ ಪೆಟ್ರೋಲಿನ ಮೇಲೆ ಮೈಸೂರು ಸರ್ಕಾರದವರು ಮಾರಾಟ ತೆರಿಗೆಯನ್ನು ವಿಧಿಸಲು ಅವಕಾಶವಿಲ್ಲವೆಂಬ ದೇ ಫಿರ್ಯಾದಿಯವರ ವಾದ


# ರಾಜಕಮಲ್ ಟಾಕೀಸ್

ಮೈ ಸೂ ರು

**1-8 53 ರಿಂದ :: 2 ನೇ ವಾರ**

ಪಕ್ಷಿರಾಜಾ ರವರ ತಮಿಳು ಚಿತ್ರ ★ ಪ್ರೊ ನ್ನಿ ★

ಶಾಸ್ತ್ರಿ —ಲಲಿತ ಪದ್ಮಿನಿ ಶ್ರೀರಾಮ್, ಬಾಲಸುಬ್ರಹ್ಮಣ್ಯಂ ದೊರೆರಾಜ್, ಕಾಂತಕುಮಾರಿ


Edited Printed and Published by A R Nagarajan at Sadhvi Press, D Subbiah Road, Mysore

## ಮದ್ರಾಸು ಮಂತ್ರಿಮಂಡಲದ ರಾಜೀನಾಮೆ ಇಲ್ಲ

### ರಾಜಾಜಿಯವರ ಹೇಳಿಕೆ

ಮದ್ರಾಸು ಪ್ರಾಂತದಲ್ಲಿ ಹೊಸದಾಗಿ ಜಾರಿಗೆ ತಂದಿರುವ ಪ್ರಾಥಮಿಕ ವಿದ್ಯಾಭ್ಯಾಸ ಸುಧಾರಣೆಯನ್ನು ತಡೆಹಿಡಿದ, ಅದನ್ನು ಪರಿಶೀಲಿಸಲು ಪ್ರವೀಣರ ಸಮಿತಿಯೊಂದನ್ನು ರಚಿಸುವಂತೆ ಅಲ್ಲಿನ ಶಾಸನ ಸಭೆಯಲ್ಲಿ ವಿರೋಧ ಪಕ್ಷವು ತಂದ ತಿದ್ದುಪಡಿಯು ಅಂಗೀಕೃತವಾಗಿ ಆ ಪಕ್ಷದ ಸದಸ್ಯರು ಮಂತ್ರಿಮಂಡಲವು ರಾಜೀನಾಮೆ ಕೊಡುವ ಸಂಬಂಧವಾಗಿ ಕ್ರಿಯಾಲೋಚನವನ್ನು ತಂದು ಅದನ್ನು ಅಧ್ಯಕ್ಷರು ತಳ್ಳಿಹಾಕಿದರು

ಮೊನ್ನೆ ಅಲ್ಲಿನ ಹಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳು ಹೇಳಿಕೆಯೊಂದನ್ನಿತ್ತು, ಅಸೆಂಬ್ಲಿಯ ನಿರ್ಣಯವು ಸಲಹಾ ರೂಪದಲ್ಲಿರುವುದೆಂದು ತಿಳಿಸಿ, ವಿದ್ಯಾ ಸುಧಾರಣೆ ಬಗ್ಗೆ ಅವಿಶ್ವಾಸವನ್ನು ಸೂಚಿಸುವ ರೀತಿಯಲ್ಲಿರಲಿಲ್ಲವೆಂದೂ, ಅವಶ್ಯವಿದ್ದರೆ ವಿರೋಧ ಪಕ್ಷದವರ ಅವಿಶ್ವಾಸ ನಿರ್ಣಯವನ್ನು ತರಬಹುದೆಂದೂ ಹೇಳಿದರು ಸುಧಾರಿತವಾದ ವಿದ್ಯಾಭ್ಯಾಸ ಪದ್ಧತಿಯನ್ನು ಒದಲಾಯಿಸುವುದು, ಶಕ್ತವಲ್ಲವೆಂದೂ ಸ್ವಲ್ಪ ಕಾಲಾನಂತರ ನಿಪುಣರ ಸಮಿತಿಯೊಂದನ್ನು ನೇಮಿಸಲಾಗುವುದೆಂದೂ ಅವರು ಭರವಸೆ ಇತ್ತರು

ಈ ಕಾರಣಗಳಿಂದ ಮಂತ್ರಿಮಂಡಲವು ರಾಜೀನಾಮೆ ಕೊಡುವುದಾಗಲಿ, ಶಾಸನ ಸಭೆಯನ್ನು ರದ್ದು ಮಾಡುವುದಾಗಲಿ ಸಂಪ್ರದಾಯ ವಿರೋಧವೆಂದ ಅವರು ತಿಳಿಸಿದರು

### ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | ೧೦ ೮ ೦ | ೩೨ ೪ ೦ |
| ಎಳ್ಳು | ೬೭ ೧೨ ೦ | ೭೬ ೪ ೦ |
| ಹರಳುಬೀಜ | ೪೦ ೮ ೦ | |
| ಹುರುಳಿ | ೪೯ ೦ ೦ | ೫೧ ೦ ೦ |
| ಹೆಸರು | ೩೦ ೦ ೦ | ೭೩ ೨ ೦ |
| ಉದ್ದು | ೬೯ ೨ ೦ | ೭೧ ೦ ೦ |
| ಹಲಸಂದೆ | ೩೦ ೦ ೦ | ೭೧ ೮ ೦ |
| ಹುಣಸೇಹಣ್ಣು ಮಣಕ್ಕೆ | ೬ ೮ ೦ | ೭ ೧೧ ೦ |
| ಬೆಲ್ಲ | ೭ ೦ ೦ | |
| ತೆಂಗಿನಕಾಯಿ ೧೧೦೦ಕ್ಕೆ | ೪೦ ೦ ೦ | ೫೪ ೦ ೦ |


### ಇದು ನಿಮಗೆ ಗೊತ್ತೇ?

ಜನಗಳ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಸುಗಂಧಯುಕ್ತ ನಾನಾ ತರಹದ

**ಬಿ ಸ್ಕ ತ್ತು ಗ ಳೂ, ಬ ನ್ನು ಮ ತ್ತು ಬ್ರೆ ಡ್ಡು ಗ ಳೂ**

ದೊರೆಯುವ ಪತ್ತೆದ ಸ್ಥಳವೆಂದರೆ

**ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,**

(ಚಂದ್ರಮೌಳೀಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ ಮೈಸೂರು


## ಇಂಡೊನೇಷ್ಯಾ ಬಿಕ್ಕಟ್ಟಿನ ಪರಿಹಾರ

ಕಳೆದ ೫೮ ದಿನಗಳಿಂದ ಇಂಡೊನೇಷ್ಯದಲ್ಲಿ ಮಂತ್ರಿಮಂಡಲವು ಇಲ್ಲದೆ, ಅಲ್ಲಿನ ಸರ್ಕಾರವು ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದುದು ಈಗ ನಿವಾರಣೆಯಾಗಿದೆ ಅಮೆರಿಕದಲ್ಲಿ ರಾಯಭಾರಿಯಾಗಿದ್ದ ಅಲಿಸ್ಟ್ರೊ ಎಮ್ಹೋಜೋರವರು ಈಗ ಅಲ್ಲಿ ಹೊಸ ಮಂತ್ರಿಮಂಡಲವನ್ನು ರಚಿಸಿರುತ್ತಾರೆ

### ಗುಂಡ್ಲುಪೇಟೆ ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಗುಂಡ್ಲುಪೇಟೆ ತಾಲ್ಲೂಕಿನ ಕಾಂ|| ಸಮಿತಿಯ ಉಳಿದ ನಾಲ್ಕು ಸ್ಥಾನಗಳಿಗೆ ಚುನಾವಣೆಗಳು ನಡೆಯುವುವು ಈ ದಿನ ಸುತ್ತು ನಾಳೆ ಬೆಳಿಗ್ಗೆ ೧೧ ರಿಂದ ಮಧ್ಯಾಹ್ನ ೧೫ ವರೆಗೆ ಉಮೇದುವಾರಿಕೆ ಅರ್ಜಿಗಳನ್ನು ಸ್ವೀಕರಿಸಲಾಗುವುದು ೩ನೇ ತಾ|| ಮಧ್ಯಾಹ್ನಕ್ಕೆ ಪ್ರಕಟಣೆ ೪ನೇ ತಾ|| ಬೆಳಿಗ್ಗೆ ೧೧ ಗಂಟೆಗೆ ವಿಮರ್ಶೆ ಮಧ್ಯಾಹ್ನಕ್ಕೆ ಪ್ರಕಟಣೆ ೫ನೇ ತಾ|| ಸಂಜೆ ೫ ಗಂಟೆಗೆ ವಾಪಸು ಪಡೆಯಲು ಅವಕಾಶ ಅದೇ ದಿನ ೬ ಗಂಟೆಗೆ ಅಷ್ಟರು ಪಟ್ಟಿ ಪ್ರಕಟಣೆ ೯ನೇ ತಾ|| ಬೆಳಿಗ್ಗೆ ೯ ರಿಂದ ೧೨ ಮತ್ತು ಮಧ್ಯಾಹ್ನ ೨ ರಿಂದ ೫ ರ ವರೆಗೆ ಚುನಾವಣೆ ಮತ್ತು ಸಂಜೆ ೫ ೧೫ ಕ್ಕೆ ಓಟುಗಳ ಎಣಿಕೆ- ಈ ರೀತಿ ವೇಳಾಪಟ್ಟಿಯು ಗೊತ್ತುಮಾಡಲ್ಪಟ್ಟಿದೆ ಚುನಾವಣೆಗೆ ನಿಲ್ಲಬಯಸುವವರು ತಮ್ಮ ಅರ್ಜಿಗಳೊಡನೆ ೧೦ ರೂ ಗಳನ್ನು ಕಳುಹಿಸಬೇಕೆಂದೂ ಸೂಚಿಸಲಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಎಂ ಹೆಚ್ ನಾಗರಾಜಪ್ಪ ನಾಗಸ್ವರ ಪ ಧ್ಯಾಹ್ನ ೧ ೩೦ ವಿದ್ಯಾ ನಾಟಕೀಯ ಧ್ವನಿ ೨ ಎಂ ಶಾರದಾ ಸಂಗೀತ ಸಂಜೆ ೫ ೩೦ ಎಂ ಹೆಚ್ ನಾಗರಾಜಪ್ಪ ನಾಗಸ್ವರ ೩ ಗಾನವಿಹಾರ ೬-೧೫ ಹಿಂದೀಗೀತ ೭-೫ ಎಂ ಶಾರದಾ ಸಂಗೀತ ೭ ೩೦ ಡಾ|| ಎಲ್ ಸೀಬಯ್ಯ ೮ ೩ ಚಲನಚಿತ್ರಗಳು ೮ ಆರ್ ಕೆ ಶ್ರೀಕಂಠನ್ ದೇವರ ನಾಮಗಳು ೮-೧೫ ಎಂ ಶಂಕರನಾರಾಯಣ ವೀಣೆ ೯ ೧೫ ಇಂಗ್ಲಿಷ್ ಭಾಷಣ ೯ ೩೦ ಶಂಕರ ನಾರಾಯಣಶಾಸ್ತ್ರಿ ವೀಣೆ


# ಬಂಗಲೆ ಖರೀದಿಗೆ ದೊರೆಯುತ್ತದೆ

ಮೈಸೂರು ವಾಣೀವಿಲಾಸ ಮೊಹಲ್ಲಾ (ಒಂಟಿಕೊಪ್ಪಲು) IIನೇ ಮೇನ್ ರೋಡಿನಲ್ಲಿರುವ 2718-1ನೇ ನಂಬರು ಬಂಗಲೆ ಖರೀದಿಗೆ ಸಿಕ್ಕುತ್ತೆ

ಬಂಗಲೆ ಸೈಟು 114'x135' ಇರುತ್ತದೆ ಬಂಗಲೆಯಲ್ಲಿ ಮೋಟಾರು ಗ್ಯಾರೇಜು ಇದೆ

**ಬೆಲೆ 25,000 ರೂ.**

ಸಿ ಎಸ್ ವೆಂಕಟರಮಣಶೆಟ್ಟಿ,
1506 ಕೆ ಆರ್ ರಾಮಪೇಟೆ, ಮೈಸೂರು
ಇವರಲ್ಲಿ ವಿಚಾರಿಸಿರಿ



ಶುಚಿ ! ರುಚಿ !! ವಿಶ್ರಾಂತಿ !!!

ಸುಸ್ವಾಗತ

# ಶ್ರೀ ಚಾಮುಂಡೇಶ್ವರಿ ಭವನ

ಇರ್ವಿನ್ ರಸ್ತೆ, ಮೈಸೂರು

ಇಂದಿನಿಂದ ಸ್ಪೆಷಲ್ ತಯಾರಿಕೆಗಳು ! ಇಳಿಸಿದ ದರ !!

ಶ್ರೇಷ್ಠವಾದ 'ಎ' ಕ್ವಾಲಿಟಿ ಕಾಫಿ ಅರ್ಧ ಕಪ್ 0—1—6

ಸೆಟ್ ದೋಸೆಗಳು,
(ಚಟ್ನಿ, ಪಲ್ಯ ಮತ್ತು ಸ್ಪೆಷಲ್ ಚಟ್ನಿ ಸಹ)
ಮಸಾಲ್ ದೋಸೆ,
ಈರುಳ್ಳಿ ಮಸಾಲೆ ದೋಸೆ,
ಬೋಂಡಾ ಸಾಂಬಾರ್,

ಮಸಾಲೆ ಇಡ್ಲಿ,
ಮಸಾಲೆ ಖಾರಾ ಭಾತ್,
ಸ್ಪೆಷಲ್ ಕೇಸರಿ ಭಾತ್,
ಆಂಬೊಡೆ,
ತೈರ್ ವಡೆ

ಮೇಲ್ಕಂಡ ರುಚಿಕರವಾದ ಪದಾರ್ಥಗಳನ್ನು ಶ್ರೇಷ್ಠ ರೀತಿಯಲ್ಲಿ ಎಕ್ಸ್‌ಪರ್ಟ್ ಸೆಟ್ ದೋಸೆ ಸ್ಪೆಷಲಿಸ್ಟರಿಂದ ತಯಾರಿಸಿ, ಶುಚಿಯಾದ ಬಾಳೆ ಎಲೆ ಮತ್ತು ತಮಲದೆಲೆಗಳ ಮೇಲೆ ಒದಗಿಸಲಾಗುತ್ತದೆ ಆಗತ್ಯ ಶ್ರೀ ಚಾಮುಂಡೇಶ್ವರಿಯು ತಮ್ಮ ಅಭಿಮಾನಿ ಪ್ರಜೆಗಳಿಗೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ಟೆಲಿಫೋನ್ ನಂ 792

|| ವಂದೇ ಮಾತರಂ ||

ಇಂದಿನ ಈ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE MONDAY 3-8 1953 · ಮೈಸೂರು : ಸೋಮವಾರ ೩-೮-೧೯೫೩ [ ? ಸಂಚಿಕೆ ೩

# ಯುದ್ಧ ಖೈದಿ ವಿನಿಮಯ ಸಮಿತಿಗೆ ಭಾರತದ ಅಧ್ಯಕ್ಷ

## ವ್ಯಾಪಾರಿಗಳು ಪ್ರಾಮಾಣಿಕತೆಯಿಂದ ನಡೆಯಬೇಕು

### ತೆಂಗಿನಕಾಯಿ ವರ್ತಕರ ಸಂಘದ ವಾರ್ಷಿಕೋತ್ಸವದಲ್ಲಿ ಚನ್ನಯ್ಯನವರ ಭಾಷಣ

ಮೈಸೂರು ೩

ನಗರದ ತೆಂಗಿನಕಾಯಿ ವರ್ತಕರ ಸಂಘದ ಪ್ರಥಮ ವಾರ್ಷಿಕೋತ್ಸವವು ನೆನ್ನೆ ಶ್ರೀರಂಗಪಟ್ಟಣದ ದಿವಾನ್ ಕೃಷ್ಣಮೂರ್ತಿಯವರ ಭವನದಲ್ಲಿ ನಡೆಯಿತು. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು. ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಉತ್ಸವವನ್ನು ಪ್ರಾರಂಭಗೊಳಿಸಿದರು.

ಶ್ರೀ ಶ್ರೀನಿವಾಸಮೂರ್ತಿಯವರ ಸಂಗೀತವಾದನಂತರ ಸಂಘದ ಉಪಾಧ್ಯಕ್ಷರಾದ ಶ್ರೀ ಎ ಶಿವನಂಜಪ್ಪನವರು ಸ್ವಾಗತ ಭಾಷಣ ಮಾಡಿ ವರದಿಯನ್ನೊಪ್ಪಿಸಿ ತೆಂಗಿನಕಾಯಿ ವರ್ತಕರ ಕುಂದುಕೊರತೆಗಳನ್ನು ನಿವೇದಿಸಿಕೊಂಡರು. ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ತೆಂಗಿನಕಾಯಿಗಳನ್ನು ಜೋಡಿಸುವ ಹೆಣ್ಣಾಳುಗಳಿಗೆ ಸಂಘದ ವತಿಯಿಂದ ಸೀರೆಗಳನ್ನು ಅಧ್ಯಕ್ಷರು ಹಂಚಿದರು.

ಶ್ರೀ ಎಸ್ ಚನ್ನಯ್ಯನವರು ನಂತರ ಮಾತನಾಡಿ, ವರ್ತಕರಲ್ಲಿ ದೊಡ್ಡವರು ಚಿಕ್ಕವರೆಂಬ ಭೇದ ಹೋಗಬೇಕೆಂದೂ ಎಲ್ಲರೂ ಸತ್ಯ ಧರ್ಮ ಮತ್ತು ಪ್ರಾಮಾಣಿಕತೆಯಿಂದ ವ್ಯಾಪಾರವನ್ನು ನಡೆಸಬೇಕೆಂದೂ ತಿಳಿಸಿದರು. ವರ್ತಕರು ರಾಜ್ಯದಲ್ಲಿ ಒಂದು ಮುಖ್ಯ ಅಂಗವೆಂದು ಹೇಳಿದರು. ಮೈಸೂರಿನಲ್ಲಿ ಪೌರಸಭಾ ಚುನಾವಣೆಯು ಶೀಘ್ರದಲ್ಲೇ ಬರಲಿರುವುದೆಂದೂ, ವರ್ತಕರು ಅದರಲ್ಲಿ ಕಾಂಗ್ರೆಸ್ಸಿಗೆ ಬೆಂಬಲ ನೀಡಬೇಕೆಂದೂ ಕೋರಿದರು. ಈಗಿನ ಸರ್ಕಾರದಿಂದ ಜನತೆಗೆ ನಿರೀಕ್ಷಿಸಿದಷ್ಟು ಸಹಾಯವು ದೊರೆತಿಲ್ಲವಾದರೂ, ವರ್ತಕರು ಅದನ್ನು ಮಹತ್ವವಾಗಿ ಮಾಡಕೂಡದೆಂದು ಕೋರಿದರು.

ಅನಂತರ ಅಧ್ಯಕ್ಷರು ಮಾತನಾಡಿ ತಾವೂ ಒಬ್ಬ ವರ್ತಕರೆಂದೂ, ವರ್ತಕರು ಕೊಳ್ಳುವಾಗಲೂ ಮಾರುವಾಗಲೂ ಪ್ರಾಮಾಣಿಕತನದಿಂದ ವರ್ತಿಸುವುದು ಅವರ ಶ್ರೇಯಸ್ಸಿಗೆ ಸಾಧನವೆಂದೂ ತಿಳಿಸಿ, ತೆಂಗಿನಕಾಯಿಯ ಮೇಲೆ ಮಾರಾಟ ತೆರಿಗೆ ವಿಧಿಸುವುದಕ್ಕೆ ತಾವು ವಿರೋಧವಾಗಿರುವುದಾಗಿ ಹೇಳಿದರು. ಅದು ಜಾಗ್ರತೆ ಕೆಡುವ ಪದಾರ್ಥ ವಾದುದರಿಂದ ತೆರಿಗೆಯನ್ನು ವಿಧಿಸಕೂಡದೆಂದು ತಿಳಿಸಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

## ಗುಡ್ಡವು ಕುಸಿದು ೮ ಜನರ ಸಮಾಧಿ

ಮಂಗಳೂರಿಗೆ ೨೦ ಮೈಲಿ ದೂರದಲ್ಲಿ ಅತಿ ವಿಪರೀತ ಮಳೆಯ ಪರಿಣಾಮವಾಗಿ ಒಂದು ಗುಡ್ಡದ ಭಾಗವು ಕುಸಿದು ಬಿದ್ದು ೮ ಜನರು ಮಣ್ಣು ರಾಶಿಯಲ್ಲಿ ಸಿಕ್ಕಿಕೊಂಡಿರುತ್ತಾರೆ. ಪೋಲೀಸರು ಸ್ಥಳಕ್ಕೆ ಹೋಗಿ ಅವರನ್ನು ಉಳಿಸುವ ಕಾರ್ಯದಲ್ಲಿ ನಿರತರಾಗಿ, ಒಂದು ದೇಹದ ಪತ್ತೆ ಹಚ್ಚಿರುವರು. ೪ ಮಂದಿ ಹೆಂಗಸರು ಮತ್ತು ೪ ಮಕ್ಕಳು ಸಿಕ್ಕಿಕೊಂಡಿರುವರು.

## ಸ್ವಾತಂತ್ರ್ಯ ದಿನೋತ್ಸವ

### ನಡೆಸಲು ಕಾಂಗ್ರೆಸ್ ಸಮಿತಿಗಳಿಗೆ ಸೂಚನೆ

ಬೆಂಗಳೂರು ೩

ಸಂಸ್ಥಾನದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಯವರೂ ಇದೇ ೧೫ನೇ ತಾ|| ಸ್ವಾತಂತ್ರ್ಯ ದಿನೋತ್ಸವವನ್ನು ಯೋಗ್ಯ ರೀತಿಯಲ್ಲಿ ಆಚರಿಸುವಂತೆಯೂ ಆ ಸಂದರ್ಭದಲ್ಲಿ ಪಂಚ ವಾರ್ಷಿಕ ಯೋಜನೆ ಮತ್ತು ಆಚಾರ್ಯ ವಿನೋಬಾರವರ ಭೂದಾನ ಯಜ್ಞಗಳ ಮಹತ್ವವನ್ನು ಪ್ರಚುರಪಡಿಸಿ ಸಾರ್ವಜನಿಕರು ಆ ಕಾರ್ಯಗಳಿಗೆ ಬೆಂಬಲ ಕೊಡುವಂತೆ ಮಾಡಬೇಕೆಂದೂ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಸೂಚಿಸುತ್ತದೆ. ಅಂದು ಬೆಳಗ್ಗೆ ಧ್ವಜಾರೋಹಣ ಮತ್ತು ಸಂಜೆ ಸಾರ್ವಜನಿಕ ಸಭೆಗಳನ್ನು ನಡೆಸುವಂತೆಯೂ ತಿಳಿಸಲಾಗಿದೆ.

### ಸ್ಥಳೀಯ ಸೆಸ್ ಹಾಕುವುದಕ್ಕೆ ಸರ್ಕಾರದ ಒಪ್ಪಿಗೆ

ಮೈಸೂರು ಜಿಲ್ಲಾ ಬೋರ್ಡಿನವರು ಭೂಕಂದಾಯ ಮತ್ತು ಆರಣ್ಯ ಬಾಬುಗಳ ಮೇಲೆ ರೂಪಾಯಿಗೆ ೧|| ಆಣೆಯಂತೆ ಸೆಸ್ ಹಾಕಲು ಕೈಗೊಂಡಿರುವ ನಿರ್ಧಾರವನ್ನು ಸರ್ಕಾರದವರು ಒಪ್ಪಿರುತ್ತಾರೆ.

## ಮದ್ರಾಸು ಮಂತ್ರಿ ಮಂಡಲದ ಮೇಲೆ ಕ್ರಮ

ವಿದ್ಯಾಭ್ಯಾಸ ಸುಧಾರಣೆ ಸಂಬಂಧವಾಗಿ ಮದ್ರಾಸು ಮಂತ್ರಿಮಂಡಲಕ್ಕೆ ೨ ಓಟುಗಳಿಂದ ಸೋಲಾದ ಬಗ್ಗೆ ರಾಜಾಜಿಯವರು ರಾಜೀನಾಮೆ ಕೊಡದಿರುವ ಪರಿಸ್ಥಿತಿಯನ್ನು ಪರಿಶೀಲಿಸಲು ಮದ್ರಾಸು ಶಾಸನ ಸಭೆಯ ವಿಶೇಷ ಅಧಿವೇಶನವನ್ನು ಕರೆಯುವಂತೆ ಸೂಚಿಸಲು ಹಲವು ಸದಸ್ಯರು ಆಲೋಚಿಸುತ್ತಿರುವರೆಂದು ವಿರೋಧ ಪಕ್ಷದ ಮುಖಂಡರಾದ ಶ್ರೀ ಟಿ ವಿಶ್ವನಾಥರವರು ಹೇಳಿರುತ್ತಾರೆ.

## ಹೊಟ್ಟೆಯೊಳಗೆ ಕಳುವಿನ ನೋಟುಗಳು

ಬರೋಡದ ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕನೊಬ್ಬನ ಜೇಬಿನಿಂದ ೭ ರೂ ನೋಟುಗಳನ್ನು ಒಬ್ಬನು ಕಳುವು ಮಾಡಿ ನುಂಗಿದನೆಂದೂ ಅವನನ್ನು ಆಸ್ಪತ್ರೆಗೆ ಕರೆದೊಯ್ದು ಭೇದಿ ಔಷಧಿ ಕೊಡಿಸಿ ನೋಟುಗಳನ್ನು ಆಚೆಗೆ ಬರುವಂತೆ ಮಾಡಲಾಯಿತೆಂದೂ ವರದಿಯಾಗಿದೆ.

## ಮೈಸೂರು ಸಂಸ್ಥಾನದಲ್ಲಿ ಏಳು ರಾಷ್ಟ್ರೀಯ ಸೇವಾ ಕೇಂದ್ರಗಳು

೧೯೫೩-೫೪ನೇ ಸಾಲಿನಲ್ಲಿ ಭಾರತದ ನಾನಾ ಭಾಗಗಳಲ್ಲಿ ೩೦೦ ರಾಷ್ಟ್ರೀಯ ಸೇವಾ ಕೇಂದ್ರಗಳನ್ನು ತೆರೆಯಲು ಭಾರತದ ಯೋಜನಾ ಮಂಡಲಿಯವರು ನಿರ್ಧರಿಸಿರುತ್ತಾರೆ. ಈ ಕೇಂದ್ರಗಳು ೨೦ ಸಾವಿರ ಹಳ್ಳಿಗಳ ಮೇಲೆ ವ್ಯಾಪ್ತಿಯನ್ನು ಹೊಂದಿರುತ್ತವೆ. ಅಕ್ಟೋಬರ್ ೨ನೇ ತಾ|| ನಿಂದ ಕೆಲಸವು ಆರಂಭವಾಗುವುದು. ಮೈಸೂರು ಸಂಸ್ಥಾನದಲ್ಲಿ ಏಳು ಕೇಂದ್ರಗಳಾಗುವುವು.

## ಭಾರತೀಯರಿಗೆ ಯುದ್ಧ ಖೈದಿ ವಿನಿಮಯ ಸಮಿತಿ ಅಧ್ಯಕ್ಷತೆ

ಕೊರಿಯಾ ಯುದ್ಧ ಖೈದಿಗಳ ವಿನಿಮಯ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಭಾರತದ ಪ್ರತಿನಿಧಿಯನ್ನು ಕಳಿಸುವಂತೆ ಗೊತ್ತುಮಾಡಲ್ಪಟ್ಟಿರವುದೆಂದು ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತಿಳಿಸಿ, ಈ ಸಂಬಂಧದಲ್ಲಿ ಭಾರತದ ಜವಾಬ್ದಾರಿಯು ಹೆಚ್ಚಾಗಿರುವುದೆಂದು ಹೇಳಿದ ದಾಗಿ ವರದಿಯಾಗಿದೆ. ಆ ಜವಾಬ್ದಾರಿಯನ್ನು ನಿರ್ವಹಿಸಲು ಭಾರತವು ಶಕ್ತಿಮೀರಿ ದುಡಿಯಲು ಸಿದ್ಧವಾಗಿರುವುದೆಂದೂ ಅವರು ಸ್ಪಷ್ಟಪಡಿಸಿದರಾಗಿ ತಿಳಿದುಬಂದಿದೆ.

## ತೆರಿಗೆ ವಸೂಲಿಗಾಗಿ ದೇವರ ರಥಗಳ ಜಪ್ತಿ

ಪೂರಿ ಜಗನ್ನಾಥನವರ ರಥೋತ್ಸವ ಮುಗಿಯುವ ದಿನಾಂತರದ ದೇವಾಲಯದ ಬಾಬ್ತು ಬರಬೇಕಾದ ೯,೭೫೦-೧ ರೂ ಗಳ ರಸ್ತೆ ಸೆಸ್ಸಿನ ಬಾಕಿಯ ವಸೂಲಿಗಾಗಿ ಅಲ್ಲಿನ ರೆವಿನ್ಯೂ ಅಧಿಕಾರಿಗಳು ಜಗನ್ನಾಥ, ಬಲಭದ್ರ ಮತ್ತು ಸುಭದ್ರಾ ದೇವರುಗಳ ರಥಗಳನ್ನು ಜಪ್ತಿ ಮಾಡಿರುವರೆಂದು ವರದಿಯಾಗಿದೆ.

## ಖೈದಿಗಳಿಗೆ ಗಾಂಧಿ ಟೋಪಿ

ಉತ್ತರ ಪ್ರದೇಶ ಪ್ರಾಂತದ ಜೈಲುಗಳಲ್ಲಿರುವ ಖೈದಿಗಳು ಕೆಂಪು ಮತ್ತು ಕಪ್ಪು ಟೋಪಿಗಳ ಬದಲು ಇಚ್ಛೆಪಟ್ಟರೆ ಗಾಂಧಿ ಟೋಪಿಗಳನ್ನು ಹಾಕಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಖೈದಿಗಳು ಸೊಳ್ಳೆ ಪರದೆಗಳನ್ನು ಇಟ್ಟುಕೊಳ್ಳಲೂ ಅವಕಾಶ ಕೊಡಲಾಗಿದೆ. ಈ ಸೌಲಭ್ಯವು ರೋಗಿಗಳು ಮತ್ತು ಬಾಣಂತಿಯರಿಗೆ ಮಾತ್ರ ಇದ್ದಿತು.

## ಬಿಹಾರಿನ ಸಾವಿರ ಹಳ್ಳಿಗಳಲ್ಲಿ ಪ್ರವಾಹದ ನೀರು

ಬಿಹಾರಿನ ನಾರಾಯಣಿ ಬಾಗಮತಿ, ಅಲ್ಪಕಿಯಾ ಧನೌತಿ, ಸಿಕ್ರಾಣ್ ಹಾಗೂ ನದಿಗಳಲ್ಲಿ ಪ್ರವಾಹವುಂಟಾಗಿ ಚಂಪಾರಣ್ಯ ಜಿಲ್ಲೆಯ ಸಾವಿರ ಹಳ್ಳಿಗಳಿಗೆ ನೀರು ನುಗ್ಗಿ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತಿದೆ. ಮೋತಿಹಾರಿ ನಗರದ ಹಲವು ಭಾಗಗಳು ನೀರಿನಲ್ಲಿ ಮುಳುಗಿವೆ. ಜನರು ತಮ್ಮ ಮನೆಗಳನ್ನು ಬಿಟ್ಟು ಹೋಗಿರುತ್ತಾರೆ. ಅನೇಕ ಕಡೆ ಜನರು ಹಲವಾರು ದಿನಗಳಿಂದ ಆಹಾರವಿಲ್ಲದೆ ಇರುವರೆಂದೂ, ಅವರಿಗೆಲ್ಲಾ ಕೂಡಲೇ ಪರಿಹಾರವು ದೊರೆಯಬೇಕಾಗಿದೆಯೆಂದೂ ಹೇಳಲಾಗಿದೆ.

### ಚಾಮುಂಡೇಶ್ವರಿ ಅಮ್ಮನವರ ಉತ್ಸವ

ರಾಜಧಾನಿಯ ಮಂಡಿ ಮೊಹಲ್ಲಾ ಸವಾಯಿ ರಸ್ತೆ, ಮಹಾರಾಷ್ಟ್ರ ಶ್ರೀ ರಾಮ ಮಂದಿರದ ಬಳಿ ಇರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ನಾಳೆ ಗ್ರಾಮ ದೇವತೆಗೆ ಪೂಜಾದಿಗಳು ನಡೆದು, ಸಂಜೆ ೬ ಗಂಟೆಗೆ ಉತ್ಸವವು ರಾಗಿ ಮಂಡಿ, ಅಶೋಕಾ, ಕುಂಬಾರಗೇರಿ, ಕಾಳಮ್ಮನ ಗುಡಿ ಬೀದಿಗಳಲ್ಲಿ ಬೆಳೆಯುತ್ತದೆ.

○ ಕುಡಿತದ ಅಮಲಿನಲ್ಲಿದ್ದರೆಂದು, ಬರೋಡಾ ಪೋಲೀಸರು ಪಾನ ನಿರೋಧದ ಶಾಸನದ ರೀತ್ಯಾ ಬರೋಡಲ್ ಸಂಸ್ಥಾನದ ರಾಜಕುಮಾರರನ್ನು ಗಿರಫ್ತಾರಿ ಮಾಡಿರುತ್ತಾರೆ.

## ಬ್ಲಿಟ್ಸ್ ಪತ್ರಿಕೆಗೆ ಜಾಹಿರಾತು ಕೊಟ್ಟಿದಕ್ಕೆ ಆಕ್ಷೇಪಣೆ

### ಶಾಸನ ಸಭೆಯಲ್ಲಿ ಪ್ರಶ್ನೆಗಳಿಗೆ ಸಚಿವರ ಉತ್ತರ

ಸ್ವಂತ ಫೋನ್] ಬೆಂಗಳೂರು ೩

ಈ ದಿನ ಕೆಳಯ ಶಾಸನ ಸಭೆಯಲ್ಲಿ ಬ್ಲಿಟ್ಸ್ ಪತ್ರಿಕೆಗೆ ಸಂಬಂಧಿಸಿದಂತೆ ಪ್ರಶ್ನೋತ್ತರಗಳು ನಡೆದುವು. ಕೆಲವು ದಿನಗಳ ಹಿಂದೆ ಈ ಬಗ್ಗೆ ಪ್ರಶ್ನೆ ಹಾಕಲ್ಪಟ್ಟು ಸಂಬಂಧಪಟ್ಟ ಸಚಿವರು ಅಂದು ಇರಲಿಲ್ಲವಾಗಿ ಇಂದು ಆ ಪ್ರಶ್ನೆಯನ್ನು ಕೇಳುವಂತೆ ಗೊತ್ತಾಗಿದ್ದಿತು.

ಶ್ರೀ ಕೆ ಪುಟ್ಟಸ್ವಾಮಿಯವರ ಪ್ರಶ್ನೆಗೆ ಉತ್ತರವಾಗಿ ಜೂನ್ ತಿಂಗಳು ಆಖೈರುವರೆಗೆ ಸದರಿ ಪತ್ರಿಕೆಗೆ ೩,೫೨೫ ರೂಪಾಯಿಗಳನ್ನು ಜಾಹಿರಾತಿಗಾಗಿ ಕೊಡಲಾಯಿತೆಂದು ಸಚಿವರು ಹೇಳಿದರು.

ಪ್ರ ೯ ಸಾವಿರ ರೂ ಗಳ ಜಾಹಿರಾತನ್ನು ಪತ್ರಿಕೆಯ ಕೈಗಾರಿಕಾ ವಿಶೇಷ ಸಂಚಿಕೆಗೆ ಕೊಡಲು ಒಪ್ಪಂದವಾಗಿಲ್ಲವೇ ?

ಉ ಕೈಗಾರಿಕೆ ಸಂಚಿಕೆಯಲ್ಲ ಮೈಸೂರು ಸಂಚಿಕೆಗಾಗಿ ೨,೭೨೫ ರೂ ಕೊಡಲು ಒಪ್ಪಂದವಾಗಿದೆ.

ಪ್ರ ಮೈಸೂರಿನಲ್ಲಿ ಹೊರಡುವ ಪತ್ರಿಕೆಗಳಿಗೆ ಜಾಹಿರಾತುಗಳನ್ನು ಏಕೆ ಕೊಡುತ್ತಿಲ್ಲ

ಉ ಅವುಗಳ ಸರ್ಕ್ಯುಲೇಷನ್ ಹೆಚ್ಚಾಗಿ ಇರುವುದಿಲ್ಲವೆಂದು

ಪ್ರ ಅರುಣ ಪತ್ರಿಕೆಗೆ ಜಾಹಿರಾತನ್ನು ನಿಲ್ಲಿಸಲಾಗಿದೆಯೇ ?

ಉ ಹೌದು, ನೆಲ್ಸಂಡ್ ಕಾರಣಕ್ಕಾಗಿಯೇ

ನಾಗಯ್ಯರೆಡ್ಡಿ ಬ್ಲಿಟ್ಸ್ ಸಂಪಾದಕರಿಗೆ ೯,೦೦೦ ಮತ್ತು ೬,೦೦೦ ರೂ ಗಳ ಎರಡು ಚೆಕ್ಕು ಕೊಡಲಿಲ್ಲವೇ ?

ಉ ನೋಡಬೇಕು

## ಬಳ್ಳಾರಿ ತಾಲ್ಲೂಕು ಭವಿಷ್ಯದಲ್ಲಿ ಮೈಸೂರಿಗೆ ಸೇರುವುದೇ ?

ಬಳ್ಳಾರಿ ತಾಲ್ಲೂಕು ಭವಿಷ್ಯದ ಬಗ್ಗೆ ಪ್ರಧಾನಿ ನೆಹರೂರವರು ಸಧ್ಯದಲ್ಲೇ ಮತ್ತೊಂದು ಘೋಷಣೆ ಹೊರಡಿಸಲಿರುವರೆಂದು ವರದಿಯಾಗಿದೆ. ಆ ತಾಲ್ಲೂಕು ಮೈಸೂರಿಗೆ ಸೇರಿದ ಬಗ್ಗೆ ಆಂಧ್ರರನ್ನು ಸಂತೈಸಲು ಈ ಹೇಳಿಕೆ ಕೊಡಲಾಗುವುದೆಂದೂ ಗೊತ್ತಾಗಿದೆ.

## ಸಕ್ಕರೆ ಪೊಟ್ಟಣ ಕಟ್ಟಲು ಷೇರು ಸರ್ಟಿಫಿಕೇಟುಗಳು

ಹೈದರಾಬಾದಿನ ಜಹಗೀರುದಾರರೊಬ್ಬರು ಕಳೆದುಕೊಂಡಿದ್ದ ೨|| ಸಾವಿರ ರೂ ಗಳ ಬೆಲೆಯ ೨೫೦ ಷೇರು ಸರ್ಟಿಫಿಕೇಟುಗಳು ವಿಚಿತ್ರ ರೀತಿಯಲ್ಲಿ ದೊರೆತಿವೆ. ಜಹಗೀರುದಾರರ ಸೇವಕನು ಸಕ್ಕರೆ ತರಲು ಅಂಗಡಿಗೆ ಹೋದಾಗ, ಹೆಂಗಸೊಬ್ಬಳು ಸಾಮಾನನ್ನು ಕಾಗದದಲ್ಲಿ ಕಟ್ಟಿಕೊಟ್ಟಳು. ಅದನ್ನು ಬಿಚ್ಚಿ ನೋಡಲಾಗಿ ಅದು ಷೇರು ಸರ್ಟಿಫಿಕೇಟುಗಳ ಒಂದಾಗಿದ್ದಿತು. ಈ ವಿಷಯವನ್ನು ಪೋಲೀಸರಿಗೆ ತಿಳಿಸಲಾಗಿ ಅವರು, ಅಂಗಡಿಯನ್ನು ಶೋಧಿಸಿ ಉಳಿದ ಸರ್ಟಿಫಿಕೇಟುಗಳೆಲ್ಲವನ್ನೂ ಪತ್ತೆ ಮಾಡಿದರು. ಹಳೆಯ ಕಾಗದಗಳೆಂದು ಅವನ್ನು ಯಾರೋ ವರ್ತಕರಿಗೆ ಮಾರಿರಬೇಕೆಂದು ಊಹಿಸಲಾಗಿದೆ.

## ಸಾಧ್ವಿ ಪತ್ರಿಕೆಗೆ ಶುಭ ಸಂದೇಶಗಳು

ಮೈಸೂರು ೩

ಸಾಧ್ವಿ ಪತ್ರಿಕೆಯ ಗಗನೇ [illegible] ಕೋತ್ಸವ ಸಮಾರಂಭಕ್ಕೆ ಯಶಸ್ಸನ್ನು ಕೋರಿ ಹಿರಿಯ ಶಾಸನ ಸಭಾಧ್ಯಕ್ಷ ಶ್ರೀ ಕೆ ಟಿ ಭಾಷ್ಯಂ, ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣ ಗೌಡ [illegible] ಯ ನಾಡ ಮಾಲೀಕರಾದ ಶ್ರೀ ಪಿ ಆರ್ [illegible] ಕೀತ ನ ಕೇಸರಿ ಶ್ರೀ ಬಿ ಶಿವ [illegible] ಶಾಸ್ತ್ರಿ ಮೈಸೂರು ಪೌರ ಸಭಾ [illegible] ಶ್ರೀ ಎಸ್ ಲಕ್ಷ್ಮಣರಾವ್ ಶ್ರೀ [illegible] ಎಂ [illegible] ಮುಸ್ವಾಮಿ ನಿವೃತ್ತ ರೈಲ್ವೆ ಜನರಲ್ ಮ್ಯಾನೇಜರ್ ಮೈ ಕೆ ರಾಮಚಂದ್ರರಾವ್ [illegible] ರು ಕಲಾಮಂದಿರದ ಶ್ರೀ ಎ ಎಸ್ ಸುಬ್ಬರಾವ್ ವಿದ್ವಾನ್ ಒ ಕೆ ಪದ್ಮನಾಭರಾವ್ ಎಂ ಆರ್ ಸಿ ಒಸಪ್ಪ ಮುಂತಾದವರು [illegible] ದೇಶಗಳನ್ನು ಕಳುಹಿಸಿರುತ್ತಾರೆ

### ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ಸತ್ಕಾರ ಕೂಟ

ಸಾಧ್ವಿ ಪತ್ರಿಕೆಯ ಗಗನೇ [illegible] ಕೋತ್ಸವದ ಅಂಗವಾಗಿ ನೆನ್ನೆ ಪತ್ರಿಕಾಲಯದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿದ್ದಿತು ನಗರದ ಅನೇಕ ಗಣ್ಯ [illegible] ವರು ನಾಡಿಸಿದ್ದರು ಉಪಾಹಾರಾನಂತರ ಶ್ರೀ [illegible] ರಂ ರಂಗಯ್ಯನವರು ಅತಿಥಿಗಳನ್ನು ವಂದಿಸಿ ಪತ್ರಿಕಾ ಸ್ಥಾಪಕರಾದ ಎಂ ವೆಂಕಟಕೃಷ್ಣ [illegible] ನವರನ್ನು ಸ್ಮರಿಸಿ [illegible] ನೆರವನ್ನು ಕೋರಿದರು [illegible] ವೆಂಕಟರಮಣಯ್ಯ ಮತ್ತು ಹೆಚ್ ಸುಬ್ಬರಾಯ [illegible] ಮಾಡಿ [illegible] ಧ್ವಿ ಪತ್ರಿಕೆಗೆ ಯಶಸ್ಸನ್ನು ಕೋರಿದ [illegible] ಪತ್ರಿಕೆ ಇನ್ನೂ ಸ್ಫೂರ್ತಿಯುತವಾಗಿ ಜನಸೇವೆ [illegible] ಮಾಡಲಿ ಎಂದು ಹಾರೈಸಿದರು ಪುಷ್ಪ [illegible] ವಾದ ನಂತರ ಸಮಾರಂಭವು [illegible]

### ಅರ್ಥ ಶಾಸ್ತ್ರ ಸಂಘದ ಆರಂಭ ಭಾಷಣ

ರಾಜಧಾನಿಯ ಮಹಾರಾಜಾ [illegible] ಲೆ ಜನ [illegible] ಶಾಸ್ತ್ರ ಸಂಘದ [illegible] ವನ್ನು ಕಳೆದ ೩೦ ನೇ ತಾ [illegible] ರಿಸರ್ವ್ ಬ್ಯಾಂಕ್ ಡೈರೆಕ್ಟರಾದ ಶ್ರೀ ಎಚ್ ಎಲ್ ಎಸ್ ಸಿನ್ಹಾರವರು ಮಾಡಿದ [illegible] ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಿ [illegible] ರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಚಂದ್ರಶೇಖರಯ್ಯನವರು ಅತಿಥಿಗಳಿಗೆ [illegible] ಬಯಸಿದರು ಶ್ರೀ ಸಿನ್ಹಾರವರು ಪ್ರಜಾ ಪ್ರಭುತ್ವದಲ್ಲಿ ಅರ್ಥ ಶಾಸ್ತ್ರಜ್ಞರ ಕರ್ತವ್ಯ ಎಂಬ ವಿಷಯವನ್ನು ಮನಮುಟ್ಟುವಂತೆ ಹೇಳಿದರು [illegible] ದರ್ಶಿ ಶ್ರೀ ನಾರಾಯಣ [illegible] ರವರ ವಂದನಾರ್ಪಣೆ ಮಾಡಿದರು

### ಸಾರ್ವಜನಿಕ ವಿದ್ಯಾರ್ಥಿ-ನಿಲಯ ಸಂಘದ [illegible]

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಚುನಾವಣೆ [illegible] ಕಳೆದ [illegible] ನೇ ತಾ [illegible] ಶ್ರೀ [illegible] ನ ಆರಿಸಲ್ಪಟ್ಟರು ಶ್ರೀ ದ [illegible] ರು ಉಪಾಧ್ಯಕ್ಷರಾಗಿ [illegible] ಅನ ತಯ್ಯನವರು [illegible] ಯಾ ಬಿ ನಾರಾಯಣರಾವ [illegible] ಶ್ರೀಗಳು [illegible] ಎಂ ವೀರಭದ್ರಾಚಾರಿ, ಎಸ್ [illegible] ಗಣೇಶ [illegible] ಮತ್ತು ಎಂ [illegible] ದಸ್ಯರಾಗಿರುವರು ಶ್ರೀ ಎಂ [illegible] ಕಾರ್ಯ ವಿಜಯ ಪತ್ರಿಕೆ ಸಂಪಾದಕ, ಶ್ರೀ ಎ [illegible] ಪಣ್ಣನವರು ಸಂದರ್ಭೋಚಿತ ರೂಪವಾದ ಭಾಷಣ ಮಾಡಿದರು

### ಪಂಚ ವಾರ್ಷಿಕ ಯೋಜನೆಗೆ ಖೈದಿಗಳ ಹಣ

[illegible] ಸೆಂಟ್ರಲ್ ಜೈಲಿನಲ್ಲಿರುವ ಹಲ [illegible] ಪಂಚ ವಾರ್ಷಿಕ ಯೋಜನೆಗೆ [illegible] ಗಳನ್ನು ಚಂದಾ ಕೊಟ್ಟಿರು

## ಶಾಸನ ಸಭೆಯಲ್ಲಿ ಟೆಲಿಫೋನ್ ಉಪಯೋಗ ಕೂಡದು

ಭಾರತದಲ್ಲಿ [illegible] ಕ್ಷರ ರೂಲಿಂಗು ಯನ್ನು ಮೊನ್ನೆಯಿಂದ ರಾತ್ರಿ ಬೆಂಗಳೂರು ಗ ಲಾಯಿತು ದೆಹಲಿಯಲ್ಲಿ ವರ್ಷ [illegible] ಹೊಂದು ನಡೆದು ಪ್ರಧಾನಿ ನೆಹರೂರವರು ಈ ವ್ಯವಸ್ಥೆಯನ್ನು ಆರಂಭಗೊಳಿಸಿದರು [illegible] ಸು, ಬೊಂಬಾಯಿ [illegible] ಪುರ, ಹೈದರಾಬಾದ ಮತ್ತು ಬೆಂಗಳೂರುಗಳಲ್ಲಿಯೂ ಸಮಾರಂಭಗಳು ಜರುಗಿ ಆಯಾ ಪ್ರದೇಶಗಳ ಮುಖ್ಯ ಮಂತ್ರಿಗಳು ಪ್ರಾರಂಭಗೊಳಿಸಿದರು ಬೆಂಗಳೂರಿನಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ, [illegible] ತೃಪ್ತಿಯ [illegible] ವಿಮಾನ ಸರ್ವಿಸ್ಸಿನ ನೌಕರರು ಹೆಚ್ಚು ಸ್ಫೂರ್ತಿಯಿಂದ ಕೆಲಸ ಮಾಡಬೇಕೆಂದು [illegible]

### ಪ್ರವಾಹ ಪೀಡಿತರಿಗೆ ೫,೦೦೦ ರೂ ಪರಿಹಾರ

ಮೈಸೂರು ಜಿಲ್ಲೆಯ ಟಿ ನರಸೀಪುರ ಮತ್ತು ನಂಜನಗೂಡ ತಾಲ್ಲೂಕುಗಳಲ್ಲಿ ಪ್ರವಾಹ ಪೀಡಿತರಾದವರಿಗೆ ಇದುವರೆಗೆ ೫,೦೦೦ ರೂ [illegible] ಗಳನ್ನು ಹಂಚಲಾಗಿದೆ ಇನ್ನೂ [illegible] ರೂ [illegible] ಮನೆ ಕಟ್ಟಲು ಕೊಡಲಾಗವು ದೆಂದು [illegible]

### ಗಾಂಧಿ ಸ್ಮಾರಕ ನಿಧಿ [illegible] ದರ್ಶಿಯವರ ಪ್ರವಾಸ

ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಯವರಾದ ಶ್ರೀ [illegible] ಎಸ್ ಘೋತ್ರೆಯವರ ಇದೇ ತಿಂಗಳ [illegible] ರಾಜ್ಯದ [illegible] ಪ್ರವಾಸಕ್ಕಾಗಿ ಬೆಂಗಳೂರಿಗೆ [illegible] ಜನ ಸೇವಕ ಸಂಘ [illegible] ಕೃಷಿ ಗೋ [illegible] ಕಸ್ತೂರಿ ಬಾ [illegible] ವಸ್ತು ಇತರ ಸಂಸ್ಥೆಗಳಿಗೂ ಭೇಟಿ ಕೊಟ್ಟು [illegible] ಪರಿಶೀಲಿಸುವ [illegible] ಗಂಟೆಗೆ ಬೆಂಗಳೂರಿನ [illegible] ಲಯದಲ್ಲಿ ರಚನಾತ್ಮಕ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುವರು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಮದ್ರಾಸು ಮಂತ್ರಿಮಂಡಲದ ರಾಜೀನಾಮೆ ಇಲ್ಲ

### ರಾಜಾಜಿಯವರ ಹೇಳಿಕೆ

ಮದ್ರಾಸು ಪ್ರಾಂತದಲ್ಲಿ ಹೊಸದಾಗಿ ಜಾರಿ [illegible] ಶಿಕ್ಷಣ ವಿದ್ಯಾಭ್ಯಾಸ ಸು ವರಿಗೂ ಹಿಂದಿ ಪ್ರೇಮಿಗಳ [illegible] ಗಳಾದ ಒಗ್ಗ ಪೋಲೀಸರು [illegible] ಜನರನ್ನು ದಸ್ತಗಿರಿ ಮಾಡಿರುತ್ತಾರೆ [illegible] ಮಂದಿಯನ್ನು ಎಚ್ಚರಿಕೆಯಿತ್ತು ಬಿಡುಗಡೆ ಮಾಡಲಾಗಿದೆ

### ಘನವಾದ ಸಂಗೀತ ಕಛೇರಿ

ನೆನ್ನೆ ರಾತ್ರಿ ಸಾಧ್ವಿ ಪತ್ರಿಕಾಲಯದಲ್ಲಿ [illegible] ವಿದ್ಯಾಲ ನರಸಿಂಹಲು [illegible] ರವರ ಶಿಷ್ಯಂದಿರೂ ಬೆಂಗಳೂರು ದಂಡಿನ ವಿದ್ವಾಂಸರುಗಳೂ ಆದ ಶ್ರೀ ಎಸ್ ಚಂದ್ರಪ್ಪ ಮತ್ತು ಆರ್ ಚಂದ್ರಸಿ [illegible] ರವರ ಅಮೋಘವಾದ ಗಾಯನವು [illegible] ಹೆಚ್ ಪಿ ರಾಮರಾಯರ ಪಿಟೀಲು [illegible] ವೆಂಕಟೇಶದೇವರುರವರ ಮೃದಂಗ ವಿದ್ವಾನ್ ಪಿ ನಾಗಭೂಷಣಾಚಾರ್ರವರ ಡೋಲಕ್ ವಿದ್ವಾನ್ [illegible] ರವರ ಘಟಂ [illegible] ರವರ ಖಂಜರಿಗಳ [illegible] ನಡೆಯಿತು ನೂರಾರು ಜನ ಸಂಗೀತ ಪ್ರೇಮಿಗಳೂ, ವಿದ್ವಾಂಸರ ಗಳೂ [illegible] ಗಾನವನ್ನು ಕೇಳಿ ಆನಂದಪಟ್ಟರು

### ಮಹಾರಾಜರ ಭಾವಚಿತ್ರದ ಮೆರವಣಿಗೆ

[illegible] ರಾಜಧಾನಿಯ ಪ್ರಜಾ ಮಂಡಲದವರು [illegible] ವಾರ [illegible] ಶ್ರೀಮನ್ ಮಹಾರಾಜರ [illegible] ಚಿತ್ರವನ್ನು ಗಂಡಭೇರುಂಡ [illegible] ನೊಡನೆ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಿದರು ವಿದ್ವಾನ್ [illegible] ಕೃಷ್ಣ [illegible] ರವರ ನಾಗಸ್ವರವು ನಡೆಯಿತು ದೊಡ್ಡಕೆರೆ [illegible] ಶ್ರೀ ಶ್ರೀ [illegible] ವಿದ್ಯಾ [illegible] ಭಾರತೀ ಸ್ವಾಮಿಗಳಿಂದ ಅವರಗಳು ಆಶೀರ್ವಾದವನ್ನು ಪಡೆದರು


### ಶ್ರೀ ವೆಂಕಟೇಶ ಪ್ರೌಢ ಸಂಗೀತ ಪಾಠ ಶಾಲಾ,

1377 ಕೃಷ್ಣಮೂರ್ತಿಪುರಂ, ಮೈಸೂರು

ಮೇಲ್ಕಂಡ ಶಾಲೆಯ ಸಾರ್ವಜನಿಕರ ಉಪಯೋಗಕ್ಕಾಗಿ ಆಗಸ್ಟ್ ಒಂದನೇ ತಾರೀಖಿನಿಂದ ತೆರೆಯಲ್ಪಟ್ಟಿದೆ ಈ ಶಾಲೆಯ ಪ್ರಾರಂಭೋತ್ಸವವನ್ನು ಇದೇ 15 ನೇ ತಾರೀಖು ಏರ್ಪಡಿಸಲಾಗಿದೆ ವಿದ್ಯಾರ್ಥಿ [illegible] ಶುಲ್ಕವನ್ನು 2 ರೂಗಳೆಂದು ಗೊತ್ತುಪಡಿಸಲಾಗಿದೆ ಮಹಾಜನರು ಪ್ರೋತ್ಸಾಹಿಸಬೇಕೆಂದು [illegible] ಕೋರಲಾಗಿದೆ

ಸಿ ರಂಗಯ್ಯ, ವ್ಯವಸ್ಥಾಪಕ


Edited Printed and Published by A R Nagarajan at Sadhvi Press D Subbiah Road Mysore

## ಇಂಡೋನೇಷ್ಯಾ ಬಿಕ್ಕಟ್ಟಿನ ಪರಿಹಾರ

ಕಳೆದ ಹಲ ದಿನಗಳಿಂದ ಇಂಡೋನೇಷ್ಯದಲ್ಲಿ ಮಂತ್ರಿಮಂಡಲವು ಇಲ್ಲದೆ ಇಲ್ಲಿನ ಸರ್ಕಾರವು ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದುದು ಈಗ ನಿವಾರಣೆಯಾಗಿದೆ ಅಮೇರಿಕದಲ್ಲಿ ರಾಯಭಾರಿಯಾ [illegible] ವಿಶ್ಲೋಜೊರವರು ಈಗ ಇಲ್ಲವಾಗುತ್ತಾ ಬಂದ ಮಂಡಲವನ್ನು ರಚಿಸಿರುತ್ತಾರೆ [illegible] ನಾಯಕರ ಪ್ರಾಣಗಳು ಸೇರಲು [illegible] ಗಿದೆ ಹಾವುಗಳು ಎಷ್ಟೋ [illegible] ಗೆ ಗೋಚರವಾಗುತ್ತಿವೆ ಕತ್ತಲಲ್ಲಿ [illegible] ಓಡಾಡುವ ಪ್ರದೇಶಗಳು ಒದಗುತ್ತಿರುತ್ತವೆ [illegible] ಗಳ ಹಾಳು ಬಾವಿಗಳಲ್ಲಿ ಸೊಪ್ಪು ಮತ್ತು ಇತರ ವಸ್ತುಗಳು ಕೊಳೆತು, [illegible] ದಲ್ಲಿ ಸೊಳ್ಳೆಗಳು ವಿಶೇಷವಾಗಿ ಉತ್ಪತ್ತಿಯಾಗಿ ಪಕ್ಕದ ನಿವಾಸಿಗಳಿಗೆ ಉಪದ್ರವವುಂಟಾಗುತ್ತಿದೆ ಮಲೇರಿಯಾ ಜ್ವರಕ್ಕೂ ಆಶ್ರಯವಾಗಿಯಾಗಿರುತ್ತಾರೆ ಈ ವಿಷಯವನ್ನು ಆರೋಗ್ಯ ಶಾಖೆಯವರು ಪರಿಶೀಲಿಸಿ ತಕ್ಕ ಕ್ರಮಗಳನ್ನು ಕೈಗೊಳ್ಳುವರೆಂದು ಆಶಿಸಲಾಗಿದೆ

○ ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟವು [illegible] ಅಡಿಯಿದೆ


### D BANUMIAH'S COLLEGE OF COMMERCE, MYSORE

### Admission to B. Com. & I. Com. Classes

The University of Mysore has granted permission for starting the B Com class in this college Applications for admission to the Junior B Com class will be received from students who have passed the I Com Examination Graduates with Economics as one of the subjects are also eligible for admission Full particulars can be had from the office of the college during working hours

Further admissions to the Junior Intermediate in Commerce class will be made.



ಶುಚಿ ! ರುಚಿ !! ವಿಶ್ರಾಂತಿ !!!

ಸುಸ್ವಾಗತ

## ಶ್ರೀ ಚಾಮುಂಡೇಶ್ವರಿ ಭವನ

ಇಲವಾಲ ರಸ್ತೆ, ಮೈಸೂರು

ಇಂದಿನಿಂದ ಸ್ಪೆಷಲ್ ತಯಾರಿಕೆಗಳು ! ಇಳಿಸಿದ ದರ !!

ಶ್ರೇಷ್ಠವಾದ 'ಎ' ಕ್ವಾಲಿಟಿ ಕಾಫಿ ಅರ್ಧ ಕಪ್ 0—1—6

| | |
|---|---|
| ಸೆಟ್ ದೋಸೆಗಳು, (ಬೆಣ್ಣೆ, ಪಲ್ಯ ಮತ್ತು ಸ್ಪೆಷಲ್ ಚಟ್ನಿ ಸಹ) | ಮಸಾಲೆ ಇಡ್ಲಿ, |
| ಮಸಾಲ್ ದೋಸೆ, | ಮಸಾಲೆ ಖಾರಾ ಭಾತ್, |
| ಈರುಳ್ಳಿ ಮಸಾಲೆ ದೋಸೆ, | ಸ್ಪೆಷಲ್ ಕೇಸರಿ ಭಾತ್, |
| ಬೋಂಡಾ ಸಾಂಬಾರ್, | ಆಂಬೊಡೆ, ತೈರ್ ವಡೆ |

ಮೇಲ್ಕಂಡ ರುಚಿಕರವಾದ ಪದಾರ್ಥಗಳನ್ನು ಶ್ರೇಷ್ಠ ರೀತಿಯಲ್ಲಿ ಎಕ್ಸ್‌ಪರ್ಟ್ ಸೆಟ್ ದೋಸೆ ಸ್ಪೆಷಲಿಸ್ಟರಿಂದ ತಯಾರಿಸಿ, ಶುಚಿಯಾದ ಬಾಳೆ ಎಲೆ ಮತ್ತು ಕಮಲದೆಲೆಗಳ ಮೇಲೆ ಒದಗಿಸಲಾಗುತ್ತದೆ ಜಗನ್ಮಾತೆ ಶ್ರೀ ಚಾಮುಂಡೇಶ್ವರಿಯು ತಮ್ಮ ಅಭಿಮಾನಿ ವೃಂದಕ್ಕೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ಟೆಲಿಫೋನ್ ನಂ 792

॥ವಂದೇ ಮಾತರಂ॥

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

SADHVI LEADING NATIONALIST DAILY OF MYSORE

ಸಂಪುಟ ೧೨] MYSORE . TUESDAY 4-8 1953 : ಮೈಸೂರು : ಮಂಗಳವಾರ ೪-೮-೧೯೫೩ [ಸಂಚಿಕೆ ೪

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಕಾಶ್ಮೀರದಲ್ಲಿ ಸ್ವಾತಂತ್ರ್ಯ ಭಾವನೆಯ ಅಂಕುರವೇ ?

## ಪ್ರೆಸ್ಸಿನ ಹೆಸರು ಹಾಕದಿದ್ದುದಕ್ಕೆ ಜುಲ್ಮಾನೆ

ಮೈಸೂರು ೪

ಕಳೆದ ವರ್ಷ ಮಹಾರಾಜಾ ಕಾಲೇಜಿಗೆ ಶ್ರೀ ಹನುಮಂತಯ್ಯನವರ ಭೇಟಿಯನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಕಪ್ಪು ಬಾವುಟ ಪ್ರದರ್ಶನ ನಡೆಸಬೇಕೆಂದಿದ್ದ ಸಂಬಂಧವಾಗಿ, ಪ್ರೆಸ್ಸಿನ ಹೆಸರನ್ನು ಹಾಕದೆ ಹಸ್ತ ಪತ್ರಿಕೆಗಳನ್ನು ಮುದ್ರಿಸಿದರೆಂದು ನೂರಡಿ ರಸ್ತೆಯಲ್ಲಿರುವ ಕುಮಾರ ಪ್ರೆಸ್ಸಿನ ಮಾಲೀಕರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿ ಮತ್ತು ವ್ಯವಸ್ಥಾಪಕ ಶ್ರೀ ಕೆ ಸುಬ್ಬಣ್ಣನವರ ಮೇಲೆ ಪೋಲೀಸರ ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಈ ದಿನ ತೀರ್ಪಿತ್ತು ಅಪಾದಿತರಿಬ್ಬರಿಗೂ ತಲಾ ೨೫೦ ರೂ ಜುಲ್ಮಾನೆಯನ್ನೂ ಜುಲ್ಮಾನೆ ಕೊಡಲು ತಪ್ಪಿದರೆ ೧ ತಿಂಗಳು ಸಾದಾ ಶಿಕ್ಷೆಯನ್ನೂ ವಿಧಿಸಿರುತ್ತಾರೆ

ಅಪಾದಿತರ ಪರವಾಗಿ ಶ್ರೀ ಸಂಪಿಗೆ ವೆಂಕಟಪತಯ್ಯನವರೂ ಮತ್ತು ಶ್ರೀ ಕೆ ಎಸ್ ಸೂರ್ಯನಾರಾಯಣರಾಯರೂ ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಜಿ ಶಂಕರಶೆಟ್ಟರೂ ವಕಾಲತ್ತು ವಹಿಸಿದ್ದರು ಅಪಾದಿತರು ಮೇಲಿನ ಕೋರ್ಟಿನಲ್ಲಿ ಅಪೀಲು ಹೂಡಲಿರುವರು

## ಹಸು ಹೆಂಗಸಾದ ಪ್ರಸಂಗ

ಟಿಬೆಟ್ ಗಡಿ ಬಳಿ ಇರುವ ಭಾರತಕ್ಕೆ ಸೇರಿದ ಕಾಲಿಂಪಾಂಗ್ ಎಂಬ ನಗರದಲ್ಲಿ ಒಂದು ಹಸುವು ಹೆಂಗಸಿನ ರೂಪ ತಾಳಿದ ಪ್ರಸಂಗವು ವರದಿಯಾಗಿದೆ ಅಲ್ಲಿನ ರಾಣಾ ಬಹದ್ದೂರ್‌ರವರು ಕಳೆದ ೨೭ ನೇ ತಾರೀಕು ತಮ್ಮ ಭವನದಲ್ಲಿ ನಿದ್ರಿಸುತ್ತಿದ್ದಾಗ, ಮಾರನೇ ಮುಂಜಾನೆ ಅವರ ಮನೆ ಬಾಗಿಲನ್ನು ಅನೇಕ ಬಾರಿ ತಟ್ಟಿದಂತಾಗಿ ಅವರು ತೆರೆದು ನೋಡಲು ಎದುರಿನಲ್ಲಿ ಒಂದು ಹಸುವು ನಿಂತಿದ್ದಿತು ಸ್ವಲ್ಪ ಹೊತ್ತಿನಲ್ಲೇ ಅದು ಸುಂದರ ಸ್ತ್ರೀಯಾಗಿ ಪರಿವರ್ತನೆ ಹೊಂದಿ ಮಾತನಾಡಲುಪಕ್ರಮಿಸಿತು ರಾಣಾರವರು ತನ್ನನ್ನು ಹಿಂಬಾಲಿಸುವಂತೆ ಅದು ಅವರನ್ನು ಕೋರಿ, ತನ್ನನ್ನು ಅಲ್ಲಿನ ಪೌರ ಸಭಾ ಕಸಾಯಿ ಖಾನೆಯವರು ಕೊಲ್ಲುವುದನ್ನು ತಪ್ಪಿಸಿ ಪ್ರಾಣ ದಾನ ಮಾಡುವಂತೆ ಯಾಚಿಸಿತೆಂದೂ, ಅದರಂತೆಯೇ ರಾಣಾರವರು ಅಲ್ಲಿಗೆ ತೆರಳಿದರೆಂದೂ ವರದಿಯಾಗಿದೆ ಕಸಾಯಿ ಖಾನೆಗೆ ಹೋದ ತಕ್ಷಣವೇ ಹೆಂಗಸು ಪುನಃ ಆಕಳಂತಾಯಿತೆಂದೂ, ಆಗ ಕಟುಕರು ಅದನ್ನು ಕೊಲ್ಲಲು ಆಯುಧಗಳನ್ನು ಸಿದ್ಧಪಡಿಸಿಕೊಂಡರೆಂದೂ, ಕೂಡಲೇ ರಾಣಾರವರು ಅವರಿಗೆ ಆಕಳಿನ ಬೆಲೆಯನ್ನು ಕೊಟ್ಟು ಬಿಡಿಸಿಕೊಂಡು ಬಂದರೆಂದೂ ಹೇಳಲಾಗಿದೆ ಈ ವಿಷಯವು ನಗರದಲ್ಲೆಲ್ಲಾ ತಿಳಿದು ನೂರಾರು ಜನರು ಆಕಳನ್ನು ಸಂದರ್ಶಿಸಿ, ಮೆರವಣಿಗೆ ಮಾಡಿದರು ಅದನ್ನು ಜನರು ಆರಾಧಿಸಲು ಈಗೊಂದು ಮಂಟಪವನ್ನು ಕಟ್ಟಲು ನಿರ್ಧರಿಸಲಾಗಿದೆ

○ ಶಿವಮೊಗ್ಗಾ ತಾಲ್ಲೂಕು ಕಛೇರಿ ಖಜಾನೆಯಲ್ಲಿಡಲಾಗಿದ್ದ ಸುಮಾರು ಸಾವಿರ ರೂ ಬೆಲೆಯ ಅಂಚೆ ಸ್ಟಾಂಪುಗಳನ್ನು ಗೆದ್ದಲು ತಿಂದು ಹಾಕಿರುವುದಾಗಿ ವರದಿಯಾಗಿದೆ

## ಮೋಟಾರು ಮಾಲೀಕರ ಮೇಲೆ ಮೊಕದ್ದಮೆ

ಮೈಸೂರು ೪

ರಾಜಧಾನಿಯ ಶ್ರೀ ಹರ್ಷ ಎಂಬುವರು ತಮ್ಮ ಖಾಸಗಿ ಮೋಟರು ವಾಹನದಲ್ಲಿ ಪ್ರಯಾಣಿಕರನ್ನು ಕೂರಿಸಿಕೊಂಡು ಪರವಾನಿಗೆ ಇಲ್ಲದೆ ನಂಜನಗೂಡಿಗೆ ಬಾಡಿಗೆಗೆ ಹೊಡೆಯುತ್ತಿದ್ದುದನ್ನು ನಗರದ ಎ ಡಿವಿಜನ್ ಟ್ರಾಫಿಕ್ ಪೋಲೀಸರು ಪತ್ತೆ ಹಚ್ಚಿ ಸದರಿಯವರ ಮೇಲೆ ನಗರದ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ

### ಮೋಟಾರು ಕಳ್ಳನ ದಸ್ತಗಿರಿ

ಕಳೆದ ೨೪ ನೇ ತಾರೀಖು ಬೆಂಗಳೂರು ಕಂಟೋನ್ಮೆಂಟಿನಲ್ಲಿ ಕಾರನ್ನು ಅಪಹರಿಸಿಕೊಂಡು ಹೋಗಿ ಪತ್ತೆಯಿಲ್ಲವಾಗಿದ್ದ ... ಎಂಬುವನನ್ನು ರಾಜಧಾನಿಯ ನಜರ್‌ಬಾದ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎ ಸಿ ನಂಜಪ್ಪನವರು, ಬೆಂಗಳೂರಿನ ಸಿಟಿ ಹೆಡ್ ಕಾನ್ಸ್‌ಟೇಬಲ್ ಶ್ರೀ ಜಾರ್ಜ್‌ರವರ ಸಹಾಯದಿಂದ ನೆನ್ನೆ ರಾತ್ರಿ ನಗರದಲ್ಲಿ ದಸ್ತಗಿರಿ ಮಾಡಿದ್ದಾರೆ

## ಕೊಯಮತ್ತೂರು ಕನ್ನಡ ಪ್ರದೇಶಗಳು ಮೈಸೂರಿಗೆ ಸೇರಬೇಕು

### ಜಿಲ್ಲಾ ಕನ್ನಡಿಗರ ಸಮ್ಮೇಳನದಲ್ಲಿ ನಿರ್ಣಯ

ಕೊಯಮತ್ತೂರು ಜಿಲ್ಲಾ ಕನ್ನಡಿಗರ ಸಮ್ಮೇಳನವು ಗೋಪಿಚೆಟ್ಟಿಪಾಳ್ಯ ತಾಲ್ಲೂಕು ತಾಳವಾಡಿಯಲ್ಲಿ ನೆನ್ನೆ ನಡೆಯಿತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿಯವರಾದ ಶ್ರೀ ಗುಡ್ಲೆಪ್ಪ ಹಳ್ಳಿಕೇರಿಯವರು ಅಧ್ಯಕ್ಷತೆ ವಹಿಸಿದ್ದರು ರಾಷ್ಟ್ರ ಧ್ವಜಾರೋಹಣವಾದ ನಂತರ ಮೈಸೂರು ಶಾಸನ ಸಭಾ ಸದಸ್ಯರಾದ ಶ್ರೀ ಯು ಎಂ ಮಾದಪ್ಪನವರು ಆರಂಭೋತ್ಸವವನ್ನು ನೆರವೇರಿಸಿದರು ಭಾಷಾವಾರು ಪ್ರಾಂತ ರಚನೆಗೆ ಅನೇಕ ಆತಂಕಗಳು ಅಲೆಯೋಪಾದಿಯಲ್ಲಿ ಬರುತ್ತಿರುವುದಾಗಿಯೂ, ಕನ್ನಡಿಗರು ಧೈರ್ಯದಿಂದ ಕಾರ್ಯ ಸಾಧಿಸಬೇಕೆಂದೂ ಅವರು ಹೇಳಿದರು ಅಧ್ಯಕ್ಷರು ಮಾತನಾಡಿ, ಕರ್ನಾಟಕ ಏಕೀಕರಣವನ್ನು ತಡೆಗಟ್ಟಲು ಯಾರಿಗೂ ಸಾಧ್ಯವಿಲ್ಲವೆಂದೂ, ಪ್ರಜಾ ಸರ್ಕಾರದವರು ಆ ಗುರಿಯನ್ನು ಸಾಧಿಸಲು ಸಹಾಯಕರಾಗಬೇಕೆಂದೂ ಕೋರಿದರು

ಬಳ್ಳಾರಿಯ ಏಳು ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸುವಾಗಲೇ ಕೊಯಮತ್ತೂರು ಜಿಲ್ಲೆಯ ತಾಳವಾಡಿ ಫಿರ್ಕಾ ಕನ್ನಡ ಪ್ರದೇಶ ಭವಾನಿ ತಾ॥ ಬರಗೂರು ಅರಣ್ಯ ಪ್ರದೇಶ ಕೊಳ್ಳೆಗಾಲ ತಾಲ್ಲೂಕು ಇವುಗಳನ್ನು ಮೈಸೂರಿಗೆ ಸೇರಿಸುವಂತೆ ಒತ್ತಾಯಪಡಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

## ಪ್ರವಾಹದಿಂದ ೨೫ ಲಕ್ಷ ಜನರಿಗೆ ತೊಂದರೆ

ಬಿಹಾರಿನ ಉತ್ತರ ಪ್ರದೇಶದ ಏಳು ನದಿಗಳಲ್ಲಿ ಪ್ರವಾಹ ಬಂದಿರುವ ಪರಿಣಾಮವಾಗಿ ೨೫ ಲಕ್ಷ ಜನರು ಮನೆಮಠಗಳನ್ನು ಕಳೆದುಕೊಂಡಿರುತ್ತಾರೆ

## ಖಜಾನೆ ಹಣದ ದುರುಪಯೋಗ

### ಹೈಕೋರ್ಟಿನಲ್ಲಿ ಶಿಕ್ಷೆ ಖಾಯಂ

ಮೈಸೂರು ೪

ಮೈಸೂರು ಪೈಲ್ವೆ ಆಡಿಟ್ ಆಫೀಸಿನ ಸ್ಟಾಫ್ ಮಹಲಿಂಗಪ್ಪ ಎಂಬುವರು ೧೯೪೯ ನೇ ಇಸವಿಯಲ್ಲಿ ಜಿಲ್ಲಾ ಖಜಾನೆಗೆ ಕಟ್ಟಲು ತೆಗೆದುಕೊಂಡು ಹೋದ ಸುಮಾರು ೧೨ ಸಾವಿರ ರೂಗಳನ್ನು ದುರುಪಯೋಗಪಡಿಸಿಕೊಂಡರೆಂಬ ಅಪಾದನೆಯಲ್ಲಿ ಇಲ್ಲಿನ ಸೆಷನ್ಸ್ ನ್ಯಾಯಾಧೀಶರು ಸದರಿ ಮಹಲಿಂಗಪ್ಪನವರಿಗೆ ವಿಧಿಸಿದ್ದ ೩ ವರ್ಷ ಕಠಿಣ ಸಜಾ ಮತ್ತು ೪,೦೦೦ ರೂ. ಜುಲ್ಮಾನೆಯ ವಿರುದ್ಧವಾಗಿ ಸದರಿಯವರು ಹೈಕೋರ್ಟಿಗೆ ಅಪೀಲು ಮಾಡಿದ್ದರು ಅವರ ಅಪೀಲನ್ನು ವಜಾ ಮಾಡಿ, ಸೆಷನ್ ನ್ಯಾಯಾಧೀಶರು ವಿಧಿಸಿದ್ದ ಶಿಕ್ಷೆಯನ್ನು ಖಾಯಂ ಮಾಡಲಾಗಿದೆ

### ಪ್ರೊ॥ ಗೋಕಾಕರ ಗೌರವಾರ್ಥವಾಗಿ ಸತ್ಕಾರ ಕೂಟ

ಧಾರವಾಡದ ಸುಪ್ರಸಿದ್ಧ ಸಾಹಿತಿಗಳಾದ ಪ್ರೊಫೆಸರ್ ಗೋಕಾಕ್‌ರವರ ಗೌರವಾರ್ಥವಾಗಿ ಈ ದಿನ ಬೆಳಗ್ಗೆ ಉಷಾ ಪ್ರೆಸ್ಸಿನಲ್ಲಿ ಶ್ರೀಗಳಾದ ಕೆ ವೆಂ ರಾಘವಾಚಾರ್ ಮತ್ತು ದಾನಾ ಹಟ್ಟಿಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ನಗರದ ಅನೇಕ ಸಾಹಿತ್ಯ ಪ್ರೇಮಿಗಳು ಭಾಗವಹಿಸಿದರು

### ಉತ್ತರ ಕರ್ನಾಟಕ ವಿದ್ಯಾರ್ಥಿಗಳ ಸಂಘ

ಆಯುರ್ವೇದ ಕಾಲೇಜಿನ ಉತ್ತರ ಕರ್ನಾಟಕ ಸಂಘದ ಆರಂಭೋತ್ಸವವನ್ನು ಈ ದಿನ ಧಾರವಾಡದ ಪ್ರೊಫೆಸರ್ ಗೋಕಾಕ್‌ರವರು ನೆರವೇರಿಸಿದರು ಶ್ರೀ ಬೆಟ್ಟದೂರ್‌ರವರು ಸ್ವಾಗತ ಭಾಷಣ ಮಾಡಿ, ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ಪರಿಹರಿಸುವುದೇ ಸಂಘದ ಉದ್ದೇಶವೆಂದು ಹೇಳಿದರು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮೈಸೂರ ಕರ್ನಾಟಕ ಎಂಬಿವೇ ಮುಂತಾದ ಭೇದಗಳನ್ನು ತೊರೆದು ಅಖಂಡ ಕರ್ನಾಟಕ ಭಾವನೆಯನ್ನೂ ಭಾರತೀಯರೆಂಬ ಅಭಿಮಾನವನ್ನೂ ಬೆಳೆಸುವುದು ಹೆಚ್ಚು ಅಗತ್ಯವೆಂದು ಅಧ್ಯಕ್ಷತೆ ವಹಿಸಿದ್ದ ಕಾಲೇಜು ಅಧ್ಯಕ್ಷರಾದ ಶ್ರೀ ದ್ವಾರಕಾನಾಥ್‌ರವರು ಹೇಳಿದರು ಅನೇಕ ಕಡೆಗಳಲ್ಲಿ ಮೈಸೂರು ಸಂಘಗಳು ಇರುವಂತೆ ಮೈಸೂರಿನಲ್ಲಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಸಂಘವಿರುವುದರಿಂದ ಬಾಧಕವೇನೂ ಇಲ್ಲವೆಂದೂ, ವೈವಿಧ್ಯತೆಯಿಂದ ಏಕ್ಯತೆಯನ್ನು ಪಡೆಯುವುದೇ ನಮ್ಮ ಗುರಿಯಾಗಿರಬೇಕೆಂದೂ ಪ್ರೊ॥ ಗೋಕಾಕರು ನುಡಿದರು ಆಯುರ್ವೇದ ಶಿಕ್ಷಣದ ಅಭಿವೃದ್ಧಿಗಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೂ ಪ್ರಯತ್ನಿಸುವುದಾಗಿ ಅವರು ಹೇಳಿದರು

## ಬಳ್ಳಾರಿ ಪೌರ ಸಭಾಧ್ಯಕ್ಷರು ಮತ್ತು ಇತರರ ದಸ್ತಗಿರಿ

ಬಳ್ಳಾರಿ ನಗರದಲ್ಲಿರುವ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಸಂಬಂಧವಾಗಿ ಅಲ್ಲಿನ ಪೌರ ಸಭಾಧ್ಯಕ್ಷ ಮುಲ್ಲಂಗಿ ದೊಡ್ಡ ಬಸಪ್ಪ, ಎಂ ವೀರಪ್ಪ ಮತ್ತು ಇಪ್ಪತ್ತು ಮಂದಿ ಮಹಾ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಲಾಗಿದೆ ದೊಡ್ಡ ಬಸಪ್ಪನವರಿಗೆ ೨ ವಾರಗಳ ಸಾದಾ ಸಜಾ ವಿಧಿಸಲಾಗಿದೆ

## ಕಾಶ್ಮೀರವನ್ನು ಸ್ವತಂತ್ರವಾಗಿ ಇಡಲು ಪ್ರಯತ್ನ

ಭಾರತದೊಡನಾಗಲೀ, ಪಾಕೀಸ್ತಾನದೊಡನಾಗಲೀ ಐಕ್ಯಗೊಳ್ಳದೆ ಕಾಶ್ಮೀರವು ಸ್ವತಂತ್ರವಾಗಿರಬೇಕೆಂಬ ಅಭಿಪ್ರಾಯವನ್ನು ಅಲ್ಲಿನ ನಾಯಕರು ಈಗ ಪ್ರತಿಪಾದಿಸುತ್ತಿರುವರೆಂದು ಅಲ್ಲಿನ ರಾಷ್ಟ್ರೀಯ ಸಮ್ಮೇಳನದ ಕಾರ್ಯದರ್ಶಿಗಳೂ, ಪಾರ್ಲಿಮೆಂಟ್ ಸದಸ್ಯರೂ ಆದ ಮಹಮುದ್ ಸಯೀದ್ ಮಸೂದಿರವರು ತಿಳಿಸಿರುತ್ತಾರೆ ಈ ಬಗೆಯ ಅಭಿಪ್ರಾಯವು ಹೊರಬಿದ್ದಿರುವುದು ಇದೇ ಮೊದಲು ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರ ಕೃತಿಯನ್ನೇ ಇದು ಘೋಷಿಸುತ್ತದೆ

## ಭಾವಿಯಲ್ಲಿ ವಿಷದ ಗಾಳಿಯಿಂದ ೯ ಜನರ ಮರಣ

ಸೇಲಮ್ಮಿನಲ್ಲಿ ಒಂದು ಭಾವಿ ... ಹಳ್ಳ ಮುಳುಗಿಸಿದ್ದ ಕತ್ತಾಳೆ ನಾರನ್ನು ತೆಗೆಯುವ ಸಲುವಾಗಿ ಅದರೊಳಗೆ ಇಳಿದ ಒಂಭತ್ತು ಜನರು ಒಬ್ಬೊಬ್ಬರಾಗಿ ಮೃತಪಟ್ಟಿರುತ್ತಾರೆ ಭಾವಿಯೊಳಗೆ ಪ್ರಾಣಿಯೊಂದು ಸತ್ತು, ಅದರಿಂದ ವಿಷ ವಾಯುವು ವ್ಯಾಪಿಸಿ, ಅವರು ಅದನ್ನು ಸೇವಿಸಿದ್ದರಿಂದ ಸಾವಿಗೀಡಾದರೆಂದು ಊಹಿಸಲಾಗಿದೆ

## ರಾಜಕೀಯದಲ್ಲಿ ನೊಂದವರಿಗೆ ಜಮೀನು ಗುತ್ತು

### ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂತ ಫೋನ್] ಬೆಂಗಳೂರು ೪

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಎಂ ವಿ ರಾಮರಾಯರ ಪ್ರಶ್ನೆಗೆ ಶ್ರೀ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು ಶಾಸನ ಸಭಾ ಸದಸ್ಯರುಗಳು ಶ್ರೀಗಳಾದ ಎಂ ಹನುಮಂತಯ್ಯ, ಸಿ ಎಂ ಅಣ್ಣಯ್ಯಪ್ಪ ಬಿ ಹುಚ್ಚೇಗೌಡ ಮತ್ತು ದೇವಯ್ಯನವರಿಗೆ ಜಮೀನು ಕೊಡಲಾಗಿದೆಯೆಂದೂ, ರಾಜಕೀಯದಲ್ಲಿ ನೊಂದ ಕಾರಣಕ್ಕಾಗಿಯೂ ಜಮೀನಿಲ್ಲದ್ದರಿಂದ ಈ ರೀತಿ ಕೊಡಲಾಗಿದೆಯೆಂದೂ ತಿಳಿಸಿದರು

ಮೈಸೂರು ಸಂಸ್ಥಾನದ ಅಪೆಕ್ಸ್ ಬ್ಯಾಂಕಿನ ವಹಿವಾಟುಗಳು ಸರಿಯಾಗಿಲ್ಲವೆಂದೂ ಅದನ್ನು ಸಂಘಟಿಸುವುದಕ್ಕಾಗಿ ಅಗತ್ಯ ಬಿದ್ದರೆ ಶಾಸನವನ್ನು ಮಾಡುವುದಾಗಿಯೂ ಶ್ರೀ ಹೆಚ್ ಸಿದ್ದವೀರಪ್ಪನವರು ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್ಯರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ವಿವಿಧೋದ್ದೇಶ ಸಹಕಾರ ಸಂಘಗಳಿಗೆ ಕೊಡುತ್ತಿದ್ದ ಸಹಾಯವನ್ನು ನಿಲ್ಲಿಸಲಾಗಿದೆಯೆಂದೂ ಸಹಾ ಅವರು ನುಡಿದರು

ಸಭೆಯು ಇನ್ನೂ ೩ ದಿನಗಳು ನಡೆಯುವುದು

## ೧೧ ಜನ ಗ್ರೀಕರಿಗೆ ಫಾಸಿ

ಅಕ್ರಮ ಸಂಸ್ಥೆಯೆಂದು ಸಾರಲ್ಪಟ್ಟ ಕಮ್ಯೂನಿಸ್ಟ್ ಪಕ್ಷದ ಮುಖಂಡರಾಗಿದ್ದರೆಂದು ೧೧ ಮಂದಿ ಗ್ರೀಕರನ್ನು ಮರಣದಂಡನೆಗೆ ಗುರಿಪಡಿಸಲಾಗಿದೆ ೧೦ ಜನರಿಗೆ ಸೆರೆ ಮನೆಯಲ್ಲಿ ಶಿಕ್ಷೆ ಕೊಡಲಾಗಿದೆ ಕೋರ್ಟಿನಲ್ಲಿ ಒಬ್ಬ ಅಪಾದಿತನು ಮಾತ್ರ ಹಾಜರಿದ್ದನು

## ಮೈಸೂರು ಹಣ್ಣು ಸಂಶೋಧನ ಪ್ರಶಸ್ತಿಗೆ ಮನ್ನಣೆ

ಮೈಸೂರು ೩

ಇಲ್ಲಿನ ಕೇಂದ್ರ ಆಹಾರ ಸಂಶೋಧನ [illegible] ಹಣ್ಣು ಸಂಶೋಧನೆ ಸಂಬಂಧವಾದ [illegible] ಡಿಪ್ಲೊಮಾ ವಿಗೆ ಕೇಂದ್ರ ಸರ್ಕಾರ ಮನ್ನಣೆಯನ್ನಿತ್ತಿರುವರು ಹಣ್ಣು ಸಂಶೋಧನೆಯಲ್ಲಿ ವಿಶೇಷ ಶಿಕ್ಷಣ ಪಡೆದವರಿಗಾಗಿರುವ ಹುದ್ದೆಗಳಿಗೆ ನೌಕರರನ್ನು ತೆಗೆದುಕೊಳ್ಳುವಾಗ ಮೇಲ್ಕಂಡ ಡಿಪ್ಲೊಮಾ ಪ್ರಶಸ್ತಿಯನ್ನು ಹೊಂದಿದವರಿಗೂ ಅವಕಾಶವಿರುವುದು

### ಸೇವಾದಳ ಪ್ರಾಥಮಿಕ ಶಿಕ್ಷಣ

ಭಾರತ ಸೇವಾದಳದ ಪ್ರಾಥಮಿಕ ಶಿಕ್ಷಣವನ್ನು ಈ ತಿಂಗಳು ೩ನೇ ವಾರದಿಂದ ಕೊಡಲು ನಗರ ಸೇವಾದಳದವರು ನಿರ್ಧರಿಸಿರುತ್ತಾರೆ ಶಿಕ್ಷಣ ಪಡೆಯಲಿಚ್ಛಿಸುವವರು ಹಳೇ ಅಗ್ರಹಾರದ ೧೭೦ನೇ ನಂಬರು ಮನೆಯಲ್ಲಿರುವ ಶ್ರೀ ಹೆಚ್ ಶಿವಾನಂದರವರೊಡನೆ ಪತ್ರ ವ್ಯವಹಾರವನ್ನು ಬೆಳೆಸಬಹುದು

### ಮಾಧ್ವ ಮಹಾ ಮಂಡಲ ಶಾಖೆ ಸಭೆ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಮೈಸೂರು ಶಾಖೆಯ ಸಭೆ [illegible] ಭಾನುವಾರ ಸಂಜೆ ೬ ಘಂಟೆಗೆ [illegible] ಶ್ರೀ [illegible] ನಡೆಯುವುದು [illegible]

## ಮೈಸೂರಿಗೆ ಬರ್ಮಾ ಮಂತ್ರಿಗಳ ನಿಯೋಗ

[illegible]

## ೧೧ ವರ್ಷದ ಹೆಣ್ಣು ಮಗುವಿನ ಲಿಂಗ ಭೇದ

ತ್ರಿಚೂರು ಜಿಲ್ಲೆಯ ಕಂಜಾಣಿ ಎಂಬ ಹಳ್ಳಿಯಲ್ಲಿ ವಾಸಂತಿ ಎಂಬ ೧೧ ವರ್ಷದ ಹೆಣ್ಣು ಕೂಸು ಈಗ ಗಂಡು ಮಗುವಾಗಿ ಪರಿವರ್ತಿತವಾಗಿದೆ ಅದರ ಹೆಸರನ್ನು ವಾಸುದೇವನ್ ಎಂದು ಬದಲಾಯಿಸಲಾಗಿದೆ ೫ ತಿಂಗಳ ಹಿಂದೆ ಮಗುವಿನ ಸ್ಥಿತಿಯಲ್ಲಿ ವ್ಯತ್ಯಾಸವುಂಟಾಗಲು ಪ್ರಾರಂಭವಾಯಿತು

## ಇಂಡೋಚೀಣಕ್ಕೆ ಪೂರ್ಣ ಸ್ವಾತಂತ್ರ್ಯ

ಇಂಡೋ-ಚೀಣಾದ ಮೂರು ಪ್ರಾಂತ್ಯಗಳಿಗೂ ಪೂರ್ಣ ಸ್ವಾತಂತ್ರ್ಯವೀಯಲು ಫ್ರೆಂಚ್ ಸರ್ಕಾರದವರು ನಿರ್ಧರಿಸಿರುತ್ತಾರೆ [illegible]

## ವಿಮಾನಗಳ ಘರ್ಷಣೆ ಬಗ್ಗೆ ಅಮೆರಿಕಾ ಮತ್ತು ರಷ್ಯಾ ತಿಕ್ಕಾಟ

[illegible] ಈ ಹಿಂದೆ ರಷ್ಯ [illegible] ಘಟನೆ [illegible] ಮಾಡಿದ್ದ ಪ್ರತಿ [illegible]

Edited, Printed and Published by ... Nagaraj... at Sadhvi ... Road, Mysore

## ಆರ್ ಎಂ ಎಸ್ ನವರಿಗೆ ವಿಶೇಷ ಸಂಬಳ ಬೇಕು

### ನೌಕರರ ವಾರ್ಷಿಕ ಸಭೆಯಲ್ಲಿ ನಿರ್ಣಯ

ಮೈಸೂರು ೩

ಅಂಚೆ ಮತ್ತು ತಂತಿ ಇಲಾಖೆ ಸಂಘದ ಆರ್ ಎಂ ಎಸ್ ಶಾಖೆಯ ವಾರ್ಷಿಕ ಸಭೆಯು ಮೊನ್ನೆ ಶ್ರೀ ಕೆ ಎಸ್ [illegible] ಅವರ ಅಧ್ಯಕ್ಷತೆಯಲ್ಲಿ ನಡೆಯಿತು ಸಭೆಯನ್ನುದ್ದೇಶಿಸಿ ಶ್ರೀ ಟಿ ಎಸ್ ರಾಜಗೋಪಾಲ ಅಯ್ಯಂಗಾರ್ಯರು ಭಾಷಣಮಾಡಿದರು [illegible]

ವಾರ್ಷಿಕ ವರದಿಯನ್ನು ಅಂಗೀಕರಿಸಿದ ನಂತರ ಆರ್ ಎಂ ಎಸ್ ನೌಕರರಿಗೆ ವಿಶೇಷ ಸಂಬಳ [illegible] ವಿಭಜನೆ [illegible] ನಿರ್ಣಯಗಳನ್ನು [illegible] ಸಂಘದ ಅಧಿಕಾರ ವರ್ಗದ [illegible] ಶ್ರೀ ಟಿ ಎಸ್ ರಾ[illegible] ಶ್ರೀ ಎಸ್ ಗುಂಡಪ್ಪನವ [illegible] ಶ್ರೀ ಎಸ್ ಕುಬೇರಸಿಂಗ್ [illegible] ಯಿರುವ [illegible] ಸದಸ್ಯರುಗಳ [illegible]

## ಗಂಡನಿಗೆ ನಾಯಕತ್ವ ವಹಿಸಲು ಹೆಂಡತಿ ರಾಜೀನಾಮೆ

ಪಾರ್ಲಿಮೆಂಟಿನ ಪ್ರಜಾ ಸಮಾಜವಾದಿ ಪಕ್ಷದ ನಾಯಕ ಸ್ಥಾನದಲ್ಲಿದ್ದ ಶ್ರೀಮತಿ ಸುಚೇತಾ ಕೃಪಲಾನಿಯವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ ಪಾರ್ಲಿಮೆಂಟಿಗೆ ಇತ್ತೀಚೆಗೆ ಚುನಾಯಿತರಾಗಿಬಂದಿರುವ ತಮ್ಮ ಪತಿ ಆಚಾರ್ಯ ಕೃಪಲಾನಿಯವರು ಪಕ್ಷದ ನಾಯಕತ್ವ ವಹಿಸಿಕೊಳ್ಳಲು ಈಗ ಆಕೆಯು ಅವಕಾಶ ಕಲ್ಪಿಸಿರುವರು

## ಬಾಡಿಗೆದಾರನನ್ನು ಬಿಡಿಸುವ ಪ್ರಸಂಗದಲ್ಲಿ ಗುಂಡಿನ ಹೊಡೆತ

ಬಿಹಾರಿನ ಒಂದು ಊರಿನಲ್ಲಿ ಬಾಡಿಗೆದಾರನಾದ ಅಂಗಡಿಯವನೊಬ್ಬನನ್ನು ಹೊರಡಿಸಲು ಮಾಲೀಕನ ಪಟ್ಟಿ ಪ್ರಯತ್ನವು ವಿಫಲವಾಗಿ ಎರಡು ಪಕ್ಷದವರಿಗೂ ಜಗಳವಾಯಿತೆಂದೂ ಜನರ ಗುಂಪು ಪೊಲೀಸರೂ ಸೇರಿದರೆಂದೂ ಉದ್ರಿಕ್ತರಾದ ಜನರು ಪೊಲೀಸರ ಮೇಲೆ ಬೀಳಲು ಅವರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದರೆಂದು ವರದಿಯಾಗಿದೆ ಒಬ್ಬ ಪೊಲೀಸನಿಗೆ ಪೆಟ್ಟು ಬಿದ್ದಿದೆ

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | ೩೦ ೦ ೦ | [illegible] |
| ಹರಳು ಬೀಜ | [illegible] | |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಉದ್ದು | [illegible] | [illegible] |
| ಕಡಲೆ | [illegible] | [illegible] |
| ಸೀಗೇಕಾಯಿ | [illegible] | |
| ತೆಂಗಿನಕಾಯಿ ೧೧ ಲಕ್ಷ | [illegible] | [illegible] |

## ಹಳ್ಳಿಗಳಲ್ಲಿ ವಯಸ್ಕರ ಶಿಕ್ಷಣ ಸಮಿತಿ ಪುಸ್ತಕ ಭಂಡಾರಗಳಿಗೆ ಭೇಟಿ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧಿಕಾರಿಗಳು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ತಾ|| ಕಂಪಲಾಪುರ, ಬಸವಾಪುರ, [illegible] ಗ್ರಾಮಗಳಲ್ಲಿರುವ ಪುಸ್ತಕ ಭಂಡಾರಗಳಿಗೆ ಕಳೆದ ೨೮ ನೇ ತಾರೀಕು ಅನಿರೀಕ್ಷಿತ ಭೇಟಿಯನ್ನಿತ್ತು ಲೆಕ್ಕಗಳನ್ನು ಪರಿಶೀಲಿಸಿ, ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳ ಏಳ್ಗೆ ಬಗ್ಗೆ ಸಲಹೆಗಳನ್ನು ಸೂಚಿಸಿರುತ್ತಾರೆ

## ೧೯ ವರ್ಷ ಕಾರಾಗೃಹವಾಸ ಅನುಭವಿಸಿದ ನಿರಪರಾಧಿ

ಇಟಲಿಯ ಅಪೀಲು ನ್ಯಾಯಾಲಯವೊಂದು ಈಗತಾನೆ ೧೯ ವರ್ಷದ ಒಬ್ಬ ಖೈದಿಯನ್ನು ದೋಷ ಮುಕ್ತನನ್ನಾಗಿ ಮಾಡಿ ಖುಲಾಸೆ ಮಾಡಿದೆ ಒಂದು ಕೊಲೆ ವಿಷಯವಾಗಿ [illegible] ಖೈದಿಯ ಮೇಲೆ ಕೊಲೆ ಆಪಾದನೆ ಹೊರಿಸಿ ಅವನನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿತ್ತೆಂದೂ, ಅವನು ೧೯ ವರ್ಷಗಳ ಕಾಲ ಕಾರಾಗೃಹವಾಸ ಮಾಡಿದನೆಂದೂ ಹೇಳಲಾಗಿದೆ ಅವನು ಕೊಲೆ ಮಾಡಿರಲಾರನೆಂದು ನಂಬಿದ್ದ ಅವನ ಹಳ್ಳಿಯ ಜನರ್‍ಯಾರೂ ಹಿಂದೆ ನಿಜಸ್ಥಿತಿಯನ್ನು ಹೇಳದೆ ಖೈದಿಯ ಪರಮ ಶತ್ರುವಾದ ಒಬ್ಬ ಪೋಲೀಸು ಅಧಿಕಾರಿಗೆ ಹೆದರಿದ್ದರೆಂದೂ ಅಧಿಕಾರಿಯು ಸತ್ತನಂತರ ಈಚೆಗೆ ನಿಜಸ್ಥಿತಿಯನ್ನು ಅವರು [illegible] ಆತನ ಬಿಡುಗಡೆಗೆ ಅಜ್ಞೆಯಾಯಿತೆಂದೂ ಗೊತ್ತಾಗಿದೆ

## ದಕ್ಷಿಣ ಕೊರಿಯಕ್ಕೆ ಡೆಲ್ಲೆಸ್ ಯಾತ್ರೆ

ಅಮೇರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲ್ಲೆಸ್‌ರವರು ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರನ್ನು ಭೇಟಿ ಮಾಡಲು ಆ ದೇಶಕ್ಕೆ ಪ್ರಯಾಣ ಮಾಡಿರುತ್ತಾರೆ

## ಪ್ರೊ|| ಮಹಲಾನೋಬಿಸ್‌ರವರ ನಿಧನ

ಭಾರತದ ಸುಪ್ರಸಿದ್ಧ ಆರೋಗ್ಯ ಶಾಸ್ತ್ರದ ಪ್ರೊಫೆಸರು ಪ್ರೊ ಸುಬೋಧ ಚಂದ್ರ ಮಹಲಾನೋಬಿಸ್‌ರವರು ತಮ್ಮ ೭೮ನೇ ವಯಸ್ಸಿನಲ್ಲಿ ಕಳೆದ ೩ನೇ ತಾ|| ಕಲ್ಕತ್ತಾದಲ್ಲಿ ನಿಧನ ಹೊಂದಿದರು ಅವರ ತಂದೆ ಗುರುಚರಣ ಮಹಲಾನೋಬಿಸ್‌ರವರು ಬ್ರಹ್ಮೋ ಸಮಾಜದ [illegible] ಮುಖಂಡರಾಗಿದ್ದರು

## ಮುಸ್ಲಿಂ ತರುಣಿಯೊಡನೆ ಹಿಂದೂ ಯುವಕನ ವಿವಾಹ

ನಾಗಪುರದ ಬಳಿ ಕುಮ್ಟಿ ಎಂಬಲ್ಲಿನ ಒಬ್ಬ ಮುಸ್ಲಿಂ ತರುಣಿಯು ತನ್ನ ಇಚ್ಛೆಯಂತೆ ಹಿಂದೂ ಮತವನ್ನು ಅವಲಂಬಿಸಿ ಪುಲ್‌ಗಾವಿನ ನಿವಾಸಿಯಾದ ಹಿಂದೂ ಯುವಕನೊಬ್ಬನನ್ನು ವಿವಾಹವಾಗಿರುವಳೆಂದು ವರದಿಯಾಗಿದೆ ಸ್ಥಳೀಯ ಕಾಂಗ್ರೆಸ್ ಮುಖಂಡರೊಬ್ಬರ ನೇತೃತ್ವದಲ್ಲಿ ಈ ಕಾರ್ಯವು ನಡೆಯಿತು

## ಬಹಿರಂಗ ಮಾರುಕಟ್ಟೆಗೆ ೧ ಲಕ್ಷ ಟನ್ ಸಕ್ಕರೆ

ಭಾರತ ಸರ್ಕಾರದವರು ಸಕ್ಕರೆ ಬೆಲೆಯನ್ನು ಇಳಿಸುವುದಕ್ಕೆ ಸಹಾಯ ಮಾಡಲು ೧ ಲಕ್ಷ ಟನ್ ಸಕ್ಕರೆಯನ್ನು ಬಹಿರಂಗ ಮಾರುಕಟ್ಟೆಗೆ ಒದಗಿಸಿರುವರೆಂದು ವರದಿಯಾಗಿದೆ

## ಶ್ಯಾಮಪ್ರಸಾದ ಮುಖರ್ಜಿಗೆ ಪಾರ್ಲಿಮೆಂಟಿನ ಶ್ರದ್ಧಾಂಜಲಿ

ನೆನ್ನೆ ಪಾರ್ಲಿಮೆಂಟಿನ ಸಭೆಯಲ್ಲಿ ಶ್ಯಾಮಪ್ರಸಾದ ಮುಖರ್ಜಿಯವರ ಗೌರವಾರ್ಥವಾಗಿ ಅಧಿವೇಶನವನ್ನು ಮುಂದೆ ಹಾಕಲಾಯಿತು ಪ್ರಧಾನಿ ನೆಹರೂ ಮತ್ತು ಸಭೆಯ ಉಪಾಧ್ಯಕ್ಷ ಅನಂತಶಯನಂ ಅಯ್ಯಂಗಾರ್‌ರವರು ಮುಖರ್ಜಿಯವರ ಗುಣಗಾನ ಮಾಡಿದರು ಪಂಡಿತ [illegible] ಪಡಿಸಲಾಯಿತು ನೆಹರೂರವರು ಮಾತನಾಡಿ ಮುಖರ್ಜಿಯವರು ವಿಶೇಷ ಸಂದರ್ಭದಲ್ಲಿ ಮೃತಿ ಹೊಂದಿರುವುದರಿಂದ ತಮ್ಮ ದುಃಖವು ಇನ್ನೂ ಹೆಚ್ಚಿನದಾಗಿ [illegible], ತಮ್ಮಿಬ್ಬರಿಗೂ ಪರಸ್ಪರ ಗೌರವವು ಇದ್ದುದಾಗಿ ಹೇಳಿದರು

## ಕುಣಿಗಲಿನಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ

ಕಳೆದ ೧ ನೇ ತಾ|| ತುಮಕೂರು ಜಿಲ್ಲಾಧಿಕಾರಿಗಳಾದ ಶ್ರೀ ಬಿ ಟಿ ಕೆಂಪಣ್ಣನವರ ಅಧ್ಯಕ್ಷತೆಯಲ್ಲಿ ಡಾ|| ಎಂ ಸಿ ಮೋದಿಯವರು ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆರಂಭಗೊಳಿಸಿದರು ಶಾಸನ ಸಭಾ ಸದಸ್ಯರಾದ ಶ್ರೀ ಮೂಡಲಗಿರಿಗೌಡರು ಸ್ವಾಗತ ಭಾಷಣ ಮಾಡಿದರು

## ಡಿಪೋವಿನ ೧,೧೫೦ ರೂ. ಪತ್ತೆಯಿಲ್ಲ

ಶಿವಮೊಗ್ಗಾ ಪೌರಸಭೆಯ ಆಹಾರ ಡಿಪೋವಿನ ಬಾಬತು [illegible] ರೂ ಗಳನ್ನು ಅಲ್ಲಿರುವ ಮೈಸೂರು ಬ್ಯಾಂಕಿಗೆ ಜಮಾ ಮಾಡಲು ಡಿಪೋವಿನ ಲೆಕ್ಕ ಮಾಡುವ ಅಣ್ಣಪ್ಪನೆಂಬುವನು ತೆಗೆದುಕೊಂಡುಹೋದಾಗ [illegible] ೧,೧೫೦ ರೂ ಪತ್ತೆಯಿಲ್ಲವಾಗಿರುವುದೆಂದೂ, ಈ ಸಂದರ್ಭದಲ್ಲಿ ಸದರಿ ಅಣ್ಣಪ್ಪನನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿರುವರೆಂದೂ ವರದಿಯಾಗಿದೆ

## ಮಳೆ ಅಳೆಯಲು ವಿದ್ಯುತ್ ಸಾಧನ

ಮಳೆಯನ್ನು ಅಳೆಯಲು ವಿದ್ಯುಚ್ಛಕ್ತಿಯ ಸಾಧನವೊಂದನ್ನು ಪೂನಾ ನಗರದ ಹವಾಮಾನ ಪರಿಶೀಲನಾ ಶಾಖೆಯ ವರ್ಕ್‌ಶಾಪಿನಲ್ಲಿ ಕಂಡುಹಿಡಿಯಲಾಗಿದೆ ಅದನ್ನು ಬೊಂಬಾಯಿ ವಿಮಾನ ನಿಲ್ದಾಣದಲ್ಲಿಡಲಾಗಿದೆ

## ಪಿ ಟಿ ಐ ಸುದ್ದಿ ಸಂಸ್ಥೆ ನೌಕರರ ಬೇಡಿಕೆಗಳ ದಿನ

ಭಾರತದಲ್ಲಿರುವ ಸುಪ್ರಸಿದ್ಧ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ವಾರ್ತಾ ಸಂಸ್ಥೆಯ ನೌಕರರು ನೆನ್ನೆಯಿಂದ ಎಲ್ಲಾ ಕಡೆಗಳಲ್ಲೂ ಬೇಡಿಕೆಗಳ ದಿನವನ್ನು ಆಚರಿಸುವ ಸೂಚನಾರ್ಥ ಬ್ಯಾಡ್ಜುಗಳನ್ನು ಧರಿಸಿದ್ದರು ಸಂಸ್ಥೆಗೆ ಸೇರಿಸಿಕೊಳ್ಳುವ ನಿಯಮಗಳಾಗಿಲ್ಲವೆಂದೂ, ಗ್ರೇಡು, ಬಡ್ತಿ ಇವುಗಳ ವ್ಯವಸ್ಥೆ ಆಗಿಲ್ಲವೆಂದೂ, [illegible] ನೌಕರರು ತಿಳಿಸಿರುತ್ತಾರೆ

### ಪರಕಾಲ ಸ್ವಾಮಿಗಳವರ ತಿರುನಕ್ಷತ್ರ

ರಾಜಧಾನಿಯಲ್ಲಿರುವ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದ ಶ್ರೀ ಸ್ವಾಮಿಗಳವರ ತಿರುನಕ್ಷತ್ರ (ವರ್ಧಂತಿ) ವು ಇದೇ ತಿಂಗಳು ೭ ನೇ ತಾ|| ನಡೆಯುವುದು ಅಂದು ಮಧ್ಯಾಹ್ನ ೩|| ಗಂಟೆಗೆ ಶ್ರೀ ಗುರುಗಳವರು ಶ್ರೀಮದ್ರಾಮಾಯಣದಲ್ಲಿ ಉಪನಿಷತ್ಸಾರಾರ್ಥ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಎಲ್ಲರೂ ದಯಮಾಡಿಸಿ ಶ್ರೀ ಶ್ರೀಗಳವರ ಮಂಗಳಾಶಾಸನಕ್ಕೆ ಪಾತ್ರರಾಗುವಂತೆ ಕೋರಲಾಗಿದೆ [illegible] ದಿನ ಮಧ್ಯಾಹ್ನ ೪|| ಗಂಟೆಗೆ ಶ್ರೀ ಮಠದಲ್ಲಿ ವರ್ಧಂತ್ಯುತ್ಸವ ನಡೆಯುವ ವಿದ್ವತ್ಸಭೆಯ ೭ನೇ ಅಧಿವೇಶನವು [illegible] ಸಭೆಗೆ ಮಾಮೂಲಿನಂತೆ ಬರುತ್ತಿರುವ ವಿದ್ವಾಂಸರು ದಯಮಾಡಬೇಕೆಂದು ಪ್ರಾರ್ಥಿಸಲಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

SRIGAYATHRI
TALKIES
The Picture of
ANDROCLES
& THE LION
Is Extended For
TWO DAYS MORE
From To-Day
MORNING SHOWS On 5th & 9th
CAESAR AND CLEOPATRA
— AWAIT RELEASE —
M G M s Most Wonder Picture
Three Dimension s
METROSCOPIX

ಟೆಲಿಫೋನ್ ನಂ 792

|| ವಂದೇ ಮಾತರಂ ||

ಒಂದಾಣೆ ಪ್ರತಿಗೆ ೩ ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ವಿಷಯಗಳನ್ನು ಪ್ರಕಾಶಪಡಿಸುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೦೨ ] MYSORE WEDNESDAY 5-8-1953 : ಮೈಸೂರು : ಬುಧವಾರ ೫-೮-೧೯೫೩ [ ಸಂಚಿಕೆ ೫

# ಬಳ್ಳಾರಿಯಲ್ಲಿ ಮೈಸೂರಿನ ವಿರುದ್ಧವಾಗಿ ಆಂಧ್ರರ ಕೂಗು

## ನಿಮ್ನ ವರ್ಗದವರಿಗೆ ಸೌಲಭ್ಯ

### ಸದಸ್ಯರ ಆಕ್ಷೇಪಣೆಗೆ ಆರೋಗ್ಯ ಸಚಿವರ ಸಮಾಧಾನ

ಬೆಂಗಳೂರು ೫

ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ಆರೋಗ್ಯ ಮಂತ್ರಿಗಳಾದ ಶ್ರೀ ಟಿ ಚನ್ನಯ್ಯನವರು ಮಾಡಿದ ನಿಮ್ನ ವರ್ಗದವರಿಗೆ ಸರ್ಕಾರಿ ನೌಕರಿಗಳಲ್ಲಿ ಶೇ|| ೧೩ ೧/೩ರಷ್ಟು ಸ್ಥಾನ ಕಲ್ಪಿಸುವ ಬಗ್ಗೆ ಸರ್ಕಾರದವರ ನಿರ್ಧಾರವನ್ನು ವ್ಯಕ್ತಪಡಿಸಿದರು ಸಭಾ ಸದಸ್ಯ ಶ್ರೀ ದುಗ್ಗಪ್ಪನವರು ವಿಶೇಷ ಚರ್ಚೆಯನ್ನು ಆರಂಭಿಸಿ ಸರ್ಕಾರದವರು ರದ್ದು ಮಾಡಿದ ನಿಮ್ನ ವರ್ಗದವರ ೧೧ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಕುರಿತು ಪ್ರಸ್ತಾಪಿಸಿದರು. ಮುಖ್ಯ ಮಂತ್ರಿಯವರು ಹಿಂದೆ ಸಭೆಯಲ್ಲಿ ಮಾತನಾಡುತ್ತಾ, ಸದರಿ ಹುದ್ದೆಗಳನ್ನು ರದ್ದು ಮಾಡಲು ಆ ನೌಕರರುಗಳಿಗೆ ಸಾಕಾದಷ್ಟು ಕೆಲಸವಿರಲಿಲ್ಲವೆಂಬುದೂ ಅವರುಗಳ ಮೇಲೆ ಲಂಚದ ಆಪಾದನೆಗಳು ಬಂದವೆಂಬುದೂ ಕಾರಣವೆಂದು ತಿಳಿಸಿದ್ದರ ಮೇಲೆ ಚರ್ಚೆಯು ನೆನ್ನೆ ನಡೆಯಿತು

ಆರೋಗ್ಯ ಮಂತ್ರಿಗಳು ಉತ್ತರವಿತ್ತು ೧೯೪೮ರಲ್ಲಿ ಆ ಹುದ್ದೆಗಳನ್ನು ಏರ್ಪಡಿಸಲಾಯಿತೆಂದೂ, ಅದಕ್ಕಾಗಿ ೧,೩೦,೦೦೦ ರೂ ಸಿಬ್ಬಂದಿಯ ವೆಚ್ಚವು ತಗಲುತ್ತಿತ್ತೆಂದೂ ತಿಳಿಸಿ ಸದರಿ ನೌಕರರಿಗೆ ಕೆಲಸವು ಸಾಕಷ್ಟು ಇಲ್ಲವೆಂದು ಜಿಲ್ಲಾಧಿಕಾರಿಗಳು ವ್ಯಕ್ತಪಡಿಸಿದ ದರಿಂದ ಅವರನ್ನು ತೆಗೆಯಲಾಯಿತೆಂದರು ಈ ಆಜ್ಞೆಯನ್ನು ಪುನರ್ವಿಮರ್ಶೆ ಮಾಡುವುದಾಗಿ ಮುಖ್ಯ ಮಂತ್ರಿಗಳು ತಿಳಿಸಿರುವುದಾಗಿಯೂ ಸರ್ಕಾರದವರು ಹರಿಜನರ ಹಿತವನ್ನು ನಿರ್ಲಕ್ಷಿಸಿಲ್ಲವೆಂದೂ ಮಂತ್ರಿಗಳು ಭರವಸೆಯಿತ್ತರು

### ಆಕಾಶವಾಣಿಯಲ್ಲಿ ಎಂ ಎ ನರಸಿಂಹಾಚಾರ್ಯರ ಭಾಷಣ

ಸಂಗೀತ ಭೂಷಣ ಎಂ ಎ ನರಸಿಂಹಾಚಾರ್‌ರವರು ಈ ದಿನ ಸಂಜೆ ೭ ೩೦ ಘಂಟೆಗೆ ಮೈಸೂರು ಆಕಾಶವಾಣಿಯಲ್ಲಿ ಶ್ರೀ ತ್ಯಾಗರಾಜರ ಕೃತಿಗಳು ಎಂಬ ವಿಷಯವಾಗಿ ಕನ್ನಡದಲ್ಲಿ ಪ್ರಸಾರ ಭಾಷಣ ಮಾಡುವರು

### ಹಿಂದಿ ಬೋರ್ಡ್ ಅಳಿಸಿದವರ ಮೇಲೆ ಮೊಕದ್ದಮೆ

ಬೆಂಗಳೂರು ಸಿವಿಲ್ ಪ್ರದೇಶದ ಎ ಎಂ ಪರಾಂಬರಂ ಮತ್ತು ಶಂಗರಾಜ್ ಎಂಬುವರು ಕಳೆದ ೧ನೇ ತಾ|| ನಗರದ ರೈಲ್ವೆ ಪ್ಲಾಟ್‌ಫಾರಂನಲ್ಲಿ ಹಚಿನ ಬೋರ್ಡಿನಲ್ಲಿದ್ದ ಹಿಂದಿ ಅಕ್ಷರಗಳನ್ನು ಉದ್ದೇಶಪೂರ್ವಕವಾಗಿ ಅಳಿಸಿ ಹಾನಿಯುಂಟುಮಾಡಿದರೆಂದು ಅವರ ಮೇಲೆ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ ಆಪಾದಿತರು ತಾವು ತಪ್ಪು ಮಾಡಿಲ್ಲವೆಂದು ತಿಳಿಸಿರುತ್ತಾರೆ

○ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಈ ದಿನ ೧೨೪ ಅಡಿ ಇದೆ.

○ ಅವರಿಗೆ ಜಮೀನು ಕೊಟ್ಟ ವಿಷಯವನ್ನು ಲಂಚ ನಿರೋಧ ಸಮಿತಿಯವರು ತನಿಖೆ ನಡೆಸಿಲ್ಲವೇ ಎಂದು ಕೇಳದ ಪ್ರಶ್ನೆಗೆ ಹಿರಿಯ ಶಾಸನ ಸಭೆಯ ಧ್ಯಕ್ಷರು ಅವಕಾಶವೀಯಲಿಲ್ಲ

## ಸಿಂಹಳದಿಂದ ಭಾರತೀಯರನ್ನು ಹೊರಗಟ್ಟದಂತೆ ಒತ್ತಾಯ

ಸಿಂಹಳದಿಂದ ಅನೇಕ ಭಾರತೀಯರನ್ನು ಹೊರದೂಡಿದರೆ, ಹಾಗೆ ದೂಡಲ್ಪಡುವ ಜನರಿಗಲ್ಲದೆ ಭಾರತ ಮತ್ತು ಸಿಂಹಳಗಳಿಗೂ ತೀವ್ರ ಕಷ್ಟವಾಗುವುದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಸಿಂಹಳದಲ್ಲಿ ೯|| ಲಕ್ಷ ಜನ ಭಾರತೀಯರಿರುವರೆಂದೂ, ಆ ಪೈಕಿ ೪ ಲಕ್ಷ ಮಂದಿಯನ್ನು ಸಿಂಹಳದ ಪ್ರಜೆಗಳೆಂದು ಪರಿಗಣಿಸುವ ಸಂಭವವಿದೆಯೆಂದೂ ಇನ್ನು ೨|| ಲಕ್ಷ ಪ್ರಜೆಗಳಿಗೆ ಖಾಯಂ ನಿವಾಸದ ರಹದಾರಿ ಕೊಟ್ಟು ಅಲ್ಲಿಯೇ ನೆಲೆಸುವಂತೆ ಮಾಡಬೇಕೆಂದು ಸಿಂಹಳ ಸರ್ಕಾರಕ್ಕೆ ಸಲಹೆ ಮಾಡಲಾಗಿದ್ದಿತೆಂದೂ, ಉಳಿದ ೩ ಲಕ್ಷ ಮಂದಿಯಲ್ಲಿ ೧|| ಲಕ್ಷ ಜನರು ಮಾತ್ರ ಭಾರತೀಯರೆಂದೂ, ಉಳಿದವರ ವಿಚಾರವೇ ಭಾರತಕ್ಕೆ ಆತಂಕವನ್ನುಂಟು ಮಾಡುವುದೆಂದೂ ತಿಳಿಸಿ ಈ ಬಗ್ಗೆ ಸಿಂಹಳದ ಪ್ರಧಾನಿಗಳೊಡನೆ ನಡೆಸಿದ ಮಾತುಕತೆಗಳನ್ನು ಅವರು ವಿವರಿಸಿದರು

### ನವಾಬ್ ಸಾಹೇಬರ ಪತ್ನಿಯಿಂದ ದಂಡ ವಸೂಲಿ ರೀತಿ

ಈಚೆಗಷ್ಟೇ ಪಾಕಿಸ್ತಾನ್ ಪಕ್ಷದವರ ಸರ್ಕಾರದ ವಿದ್ವಾಂಗ, ಆಗಿನ ಪ್ರಧಾನಿ ನವಾಬ್ ಸಾಹೇಬರ ಪತ್ನಿಯವರು ತಮ್ಮ ಪ್ರಭಾವವನ್ನು ಬಳಸಿ ೧|| ಲಕ್ಷ ರೂಗಳ ವೆಚ್ಚದಲ್ಲಿ ಕೈರೋವಿನಿಂದ ೧೫ ಮೈಲಿ ದೂರವಿರುವ ತಮ್ಮ ಹಳ್ಳಿಯ ಮನೆಗೆ ಒಂದು ರಸ್ತೆ ಮಾಡಿಸಿಕೊಂಡ ಬಗ್ಗೆ ಆಕೆಯು ಅಪರಾಧಿಯೆಂದು ಕೈರೋವಿನ ಲಂಚ ನಿರೋಧ ನ್ಯಾಯಾಲಯವು ತೀರ್ಪಿತ್ತು ಆ ವೆಚ್ಚವನ್ನು ಆಕೆಯು ದಂಡವಾಗಿ ಕೊಡುವಂತೆ ಅಜ್ಞಾಪಿಸಿರುತ್ತದೆ ಆಕೆಯ ಮೇಲೆ ಮೂರು ಲಂಚದ ಮೊಕದ್ದಮೆಗಳು ಇವೆ ಜನರಲ್ ನಗೀಬ್ ಸರ್ಕಾರದವರು ಜಾರಿಗೆ ತಂದಿರುವ ಲಂಚ ನಿರೋಧ ಶಾಸನದ ಪ್ರಕಾರ ಮೊಕದ್ದಮೆಗಳನ್ನು ಹೂಡಲಾಗಿದೆ

### ಭಾರಿ ಶಿಕ್ಷೆ

ಕಳೆದ ತಿಂಗಳು ೧೩ ನೇ ತಾರೀಖು ರಾಜಧಾನಿಯ ರಾಜರಾಜೇಶ್ವರಿ ಹಂಲಿನಲ್ಲಿ ಸುಮಾರು ೩೪ ರೂ ಬೆಲೆಬಾಳುವ ಶಾಲೊಂದನ್ನು ಅಪಹರಿಸಿಕೊಂಡು ಓಡಿಹೋಗುತ್ತಿದ್ದ ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಕೇರಿ ದೊಡ್ಡ ಉರುಫ್ ಕುಳ್ಳ ಉರುಫ್ ಮಾದಯ್ಯ ಎಂಬುವನನ್ನು ದೇವರಾಜಾ ಪೊಲೀಸರು ದಸ್ತಗಿರಿ ಮಾಡಿ ಅವನು ಕೊಟ್ಟ ವರ್ತಮಾನದ ಮೇಲೆ ತನಿಖೆ ನಡೆಸಿ, ಇತರ ಕಳುವು ದೂರುಗಳ ಸಾಮಾನುಗಳನ್ನು ವಶಪಡಿಸಿಕೊಂಡು ಅವನ ಮೇಲೆ ದಾಖಲು ಮಾಡಿದ್ದ ಮೂರು ಮೊಕದ್ದಮೆಗಳಲ್ಲಿ ನಗರ ನ್ಯಾಯಾಧೀಶರು ಆಪಾದಿತನಿಗೆ ಪ್ರತಿಯೊಂದು ಮೊಕದ್ದಮೆಯಲ್ಲೂ ೨ ವರ್ಷ ಕಠಿಣ ಸಜಾವನ್ನು ವಿಧಿಸಿ ಶಿಕ್ಷೆಗಳನ್ನು ಏಕ ಕಾಲದಲ್ಲಿ ಅನುಭವಿಸುವಂತೆಯೂ, ಶಿಕ್ಷೆಯು ಮುಗಿದ ಮೇಲೆ ೨ ವರ್ಷ ತನ್ನ ಚಲನವಲನಗಳನ್ನು ಪೊಲೀಸರಿಗೆ ತಿಳಿಸುತ್ತಿರಬೇಕೆಂದೂ ಆಜ್ಞೆ ಮಾಡಿರುತ್ತಾರೆ ದೇವರಾಜಾ ಪೊಲೀಸ್ ಜಮೇದಾರ್ ಶ್ರೀ ಕೆ ಅಹಮದ್ ಖಾನ್ ರವರು ತನಿಖೆಗಳನ್ನು ನಡೆಸಿದರು ಆಪಾದಿತನಿಗೆ ಹಿಂದೆ ಬಾರಿ ಶಿಕ್ಷೆಯಾಗಿದಿತು

## ಕೊರಿಯಕ್ಕೆ ಇಂದು ಭಾರತೀಯ ನಿಯೋಗದ ಪ್ರಯಾಣ

ಭಾರತ ಸರ್ಕಾರದ ವಿದೇಶಾಂಗ ಇಲಾಖಾ ಶಾಖೆಯ "ದರ್ಶಿ ಆರ್ ಕೆ ನೆಹರೂರವರ ನಾಯಕತ್ವದಲ್ಲಿ ಇಂದ ಕೊರಿಯಾಕ್ಕೆ ಭಾರತೀಯ ನಿಯೋಗವೊಂದು ಪರಿಶೀಲನಾ ಕಾರ್ಯಕ್ಕಾಗಿ ತೆರಳಲಿದೆ ನಿಯೋಗದಲ್ಲಿ ಭಾರತ ಸೈನ್ಯದಳದ ಮೇಜರ್ ಎಸ್ ಪಿ ಪಿ ತೋರಟ್ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಬಲವಂತ್ ಸಿಂಗ್ ಪುರಿಯವರು ಇರುವರು ನಿಯೋಗದವರು ಕೆಲವು ದಿನ ಟೋಕಿಯೋವಿನಲ್ಲಿದ್ದು ಅಲ್ಲಿ ವಿಶ್ವ ಸಂಸ್ಥೆ ಕಛೇರಿಯೊಡನೆ ಯುದ್ಧ ಕೈದಿಗಳ ವಿನಿಮಯದ ವಿಷಯವಾಗಿ ಮಾತುಕತೆ ನಡೆಸಿ ಅಲ್ಲಿಂದ ಉತ್ತರ ಕೊರಿಯಾ ರಾಜಧಾನಿ ಪ್ಯೋಂಗ್‌ಯಾಂಗಿಗೆ ತೆರಳಿ ಕಮ್ಯೂನಿಸ್ಟ್ ಪ್ರತಿನಿಧಿಗಳೊಡನೆ ಸಂಭಾಷಿಸುವರು ತಟಸ್ಥ ರಾಷ್ಟ್ರಗಳ ಸ್ಥಾನದಲ್ಲಿರುವುದರಿಂದ ಭಾರತವು ಕೆಲವು ವಿಶೇಷ ಜವಾಬ್ದಾರಿಗಳನ್ನು ಹೊಂದಿರುವುದಾಗಿ ಹೇಳಲಾಗಿದೆ

### ಬೊಂಬಾಯಿಯಲ್ಲಿ ಮೈಸೂರು ಮಹಾರಾಜರ ವರ್ಧಂತಿ

ಮೈಸೂರಿನ ಶ್ರೀಮನ್ಮಹಾರಾಜರ ೩೫ ನೇ ವರ್ಷ ವರ್ಧಂತಿ ಸಮಾರಂಭವನ್ನು ಬೊಂಬಾಯಿಯಲ್ಲಿರುವ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯವರು ಮೊನ್ನೆ ಏರ್ಪಡಿಸಿದ್ದರು ಭಾರತೀಯ ವಾಣಿಜ್ಯ ಸಂಘದ ಅಧ್ಯಕ್ಷ ಶ್ರೀ ಚಿಮನ್‌ಲಾಲ್ ಪಾರೇಖ್‌ರವರು ಅಧ್ಯಕ್ಷತೆ ವಹಿಸಿದ್ದರು ಅವರು ಭಾಷಣ ಮಾಡಿ ಮೈಸೂರು ಸಂಸ್ಥಾನದ ಜನ ಮನೆತನದವರಲ್ಲಿ ಸಂಸ್ಥಾನದ ಪ್ರಜೆಗಳು ಗೌರವ ಮತ್ತು ಭಕ್ತಿಗಳನ್ನು ಇಟ್ಟುಕೊಂಡಿರುವುದಕ್ಕೆ ಆ ಸಂಸ್ಥಾನದ ಅರಸರುಗಳು ಭಾರತೀಯ ಬಾಂಧವ್ಯದ ಧ್ಯೇಯವನ್ನು ಚೆನ್ನಾಗಿ ಅರಿತು, ಅದರಂತೆ ನಡೆಯುತ್ತಿರುವುದೇ ಕಾರಣವೆಂದು ತಿಳಿಸಿದರು ಅರಸರುಗಳು ಕೈಗೊಂಡ ಕಾರ್ಯಗಳಿಂದ ಮೈಸೂರು ಪ್ರಗತಿ ಹೊಂದಲು ಸಾಧ್ಯವಾಗಿರುವುದೆಂದು ಅವರು ಹೇಳಿದರು. ಈಗಿನ ರಾಜಪ್ರಮುಖರಿಗೆ ಶುಭಾಶಯವನ್ನು ಕೋರುವ ನಿರ್ಣಯವನ್ನೂ ಅಂಗೀಕರಿಸಲಾಯಿತು

### ನೆಲಮಂಗಲದ ಡಿಪೋವಿನ ಮಾಜಿ ಗುಮಾಸ್ತೆಗೆ ೧ ವರ್ಷ ಸಜಾ

೧೯೫೦ನೇ ಇಸವಿಯಲ್ಲಿ ನೆಲಮಂಗಲದಲ್ಲಿದ್ದ ತಾಲ್ಲೂಕ ಆಹಾರದ ಡಿಪೋವಿನ ಗುಮಾಸ್ತೆ ಎ ವಿ ಆರ್ ಅಹಮದ್ ಖಾನರವರು ೧೩೩೭ ೧೪ ೦ ರೂ ಬೆಲೆಯ ೮೫ ಪಲ್ಲಾ ವಿಶಾಡಿಯಂ ಅಕ್ಕಿ ಬಗ್ಗೆ ನಂಬಿಕೆ ದ್ರೋಹ ಮಾಡಿದರೆಂದು, ಬೆಂಗಳೂರಿನ ಅಡಿಷನಲ್ ನ್ಯಾಯಾಧೀಶರು ಆತನಿಗೆ ೧ ವರ್ಷ ಕಠಿಣ ಸಜಾ ಮತ್ತು ೨೦೦ ರೂ ದಂಡ ತಪ್ಪಿದರೆ ಮತ್ತೆ ೩ ತಿಂಗಳು ಸಜಾವನ್ನು ವಿಧಿಸಿರುತ್ತಾರೆ. ಲೆಕ್ಕದಲ್ಲಿ ಸುಳ್ಳು ಅಂಕಗಳನ್ನು ಬರೆದು ಅಂಕಗಳನ್ನು ಬದಲಾವಣೆ ಮಾಡಿದರೆಂಬ ಮತ್ತೊಂದು ಆಪಾದನೆಯಲ್ಲಿ ಗುಮಾಸ್ತೆಯನ್ನು ಖುಲಾಸೆ ಮಾಡಲಾಗಿದೆ.

## ಬಳ್ಳಾರಿಯಲ್ಲಿ ಮೈಸೂರು ವಿರುದ್ಧವಾದ ಕೂಗು

### ಆಂಧ್ರರಿಗೂ ಪೊಲೀಸರಿಗೂ ಘರ್ಷಣೆಯಲ್ಲಿ ಭಾರಿ ಪ್ರಹಾರ

ಮೈಸೂರು ಸಂಸ್ಥಾನದಲ್ಲಿ ಬಳ್ಳಾರಿ ತಾಲ್ಲೂಕು ವಿಲೀನವಾಗುವುದನ್ನು ವಿರೋಧಿಸುತ್ತಿರುವ ಆಂಧ್ರರ ಭಾರಿ ಗುಂಪೊಂದಕ್ಕೂ, ಪೊಲೀಸರಿಗೂ ಬಳ್ಳಾರಿಯಲ್ಲಿ ನೆನ್ನೆ ಘರ್ಷಣೆಯುಂಟಾಯಿತು ಜನರು ಅಲ್ಲಿನ ಕಲೆಕ್ಟರರ ಕಛೇರಿ ಮುಂದೆ ಸೇರಿ, ಕಲ್ಲುಗಳನ್ನು ತೂರಿದ ಪರಿಣಾಮವಾಗಿ ಇಬ್ಬರು ಪೊಲೀಸು ಅಧಿಕಾರಿಗಳು ಮತ್ತು ೧೧ ಜನ ಕಾನ್‌ಸ್ಟೇಬಲ್ಲುಗಳಿಗೆ ಪೆಟ್ಟು ಬಿದ್ದಿತು "ಬಳ್ಳಾರಿಯು ಆಂಧ್ರಕ್ಕೆ ಸೇರಿದ್ದು ಹನುಮಂತಯ್ಯನವರ ಸರ್ಕಾರ ಉರುಳಲಿ, ಪ್ರತಿಬಂಧಕಾಜ್ಞೆ ನಿಬಂಧನೆ ರದ್ದಾಗಲಿ" ಎಂದು ಆಗ ಗುಂಪು ಕೂಗುತ್ತಿದ್ದಿತು

೩೦ ಮಂದಿ ಗುಂಪು ಕಟ್ಟಿ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋಗಿ ಪ್ರತಿಬಂಧಕಾಜ್ಞೆಯನ್ನು ಮುರಿದರೆಂದೂ, ಪೊಲೀಸರು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೆಂದೂ ಹೇಳಲಾಗಿದೆ ಎರಡನೆಯ ಸಲ ಭಾರಿ ಗುಂಪು ಕಛೇರಿ ಮುಂದೆ ಸೇರಿ ಕೆಲಸವು ಸ್ಥಗಿತವಾಯಿತೆಂದೂ, ಆಗ ಪೊಲೀಸರನ್ನು ಕರೆಸಲಾಗಿ, ಜನರು ಪೊಲೀಸರ ಮೇಲೆ ಕಲ್ಲುಗಳನ್ನು ತೂರಲು, ಅವರು ಲಾಠಿ ಪ್ರಹಾರ ಮಾಡಿ, ಪರಿಸ್ಥಿತಿಯನ್ನು ಹತೋಟಿಗೆ ತಂದರೆಂದೂ ವರದಿಯಾಗಿದೆ

### ಮಂತ್ರಿಗಳ ಸಂಬಳದ ಮಸೂದೆಯ ಅಂಗೀಕಾರ

#### ಮಟ್ಟದೊಡ್ಡಿಯಲ್ಲಿ ಜಮೀನು ಕೊಟ್ಟ ಬಗ್ಗೆ ಪ್ರಶ್ನೋತ್ತರ

ಸ್ವಂ ಸು ಪ್ರೋ] ಬೆಂಗಳೂರು ೫

ಈ ದಿನ ಶಾಸನ ಸಭೆಯಲ್ಲಿ ಮಂತ್ರಿಗಳ ಸಂಬಳ, ಭತ್ಯ ಮುಂತಾದುವುಗಳ ಬಗ್ಗೆ ಮಂಡಿತವಾದ ಮಸೂದೆಯು ಅಂಗೀಕಾರವಾಯಿತು. ಅದರ ಪ್ರಕಾರ ಮಂತ್ರಿಗಳಿಗೆ ಕೊಡಲಾಗುವ ಪ್ರಯಾಣಭತ್ಯದ ದರವನ್ನು ಸ್ವಲ್ಪ ಹೆಚ್ಚಿಸಲಾಗುವುದು

ಶಾಸನ ಸಭಾ ಸದಸ್ಯರುಗಳ ಸಂಬಳ, ವೇತನ ಮುಂತಾದುವುಗಳಿಗೆ ಸಂಬಂಧಿಸಿದ ಮಸೂದೆಯೂ ಅಂಗೀಕೃತವಾಯಿತು.

ಕೋಲಾರದ ಚಿನ್ನದ ಗಣಿಯ ಸ್ಯಾನಿಟರಿ ಬೋರ್ಡನ್ನು ಪೌರಸಭೆಯಾಗಿ ಪರಿವರ್ತಿಸುವ ಬಗ್ಗೆ ಮಸೂದೆಯು ಚರ್ಚೆಯಾಗಿ ಅದಕ್ಕೆ ಸಭೆಯು ಒಪ್ಪಿಗೆ ಇತ್ತಿತು

ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಎ ಸಿ ನಾಗಯ್ಯ ರೆಡ್ಡಿಯವರು ಶ್ರೀ ವಿ. ನಂಜಪ್ಪನವರಿಗೆ ರಾಮನಗರ ತಾಲ್ಲೂಕು ಮಟ್ಟದೊಡ್ಡಿಯಲ್ಲಿ ೫೦ ಎಕರೆ ಜಮೀನು ಕೊಟ್ಟ ವಿಷಯವನ್ನು ಕೇಳಿದರು ಮಂತ್ರಿಗಳು ಉತ್ತರವಿತ್ತು ಶ್ರೀ ನಂಜಪ್ಪನವರಿಗೆ ಐವತ್ತು ಎಕರೆಗಳ ಪೈಕಿ ೧೪ ಎಕರೆಯಷ್ಟು ಜಮೀನನ್ನು ಗೇಣಿ ಶಾಸನದ ಪ್ರಕಾರ ಕೊಡಲಾಗಿದ್ದಿತೆಂದು ತಿಳಿಸಿದರು ಸರ್ಕಾರಿ ನೌಕರರೊಬ್ಬರಿಗೆ ಜಮೀನು ಕೊಡುವುದು ನ್ಯಾಯವೇ ಎಂದು ಪ್ರಶ್ನಿಸಲಾಗಿ, ಶ್ರೀ ನಂಜಪ್ಪನವರು ತಮ್ಮ ನೌಕರಿಗೆ ರಾಜೀನಾಮೆ ಕೊಟ್ಟರಬೇಕೆಂದು ಸಚಿವರು ತಿಳಿಸಿದರು

## [illegible] ಅವಶ್ಯವಿದ್ದರೆ ದೆಹಲಿಗೆ ಮೈಸೂರಿನ ನಿಯೋಗ

### ಶಾಸನ ಸಭೆಯಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

[illegible] ಶಾಸನ ಸಭೆಯಲ್ಲಿ ನೆನ್ನೆ ಶ್ರೀ [illegible] ಪ್ರಶ್ನೆ [illegible] ಭವಿಷ್ಯವನ್ನು [illegible] ಸಮಿತಿಯನ್ನು ಕುರಿತು [illegible] ಹನುಮಂತಯ್ಯನವರು ಉತ್ತರವಿತ್ತು [illegible] ಹೊಸ ಪ್ರಯತ್ನದ [illegible] ಮೈಸೂರಿನವರ ಅಭಿಪ್ರಾಯವನ್ನು [illegible] ಅವಶ್ಯಬಿದ್ದರೆ ದೆಹಲಿಗೆ ಮೈಸೂರಿನ [illegible] ಕಳುಹಿಸಲಾಗುವುದೆಂದ [illegible] ಪ್ರಕಟಿಸಿರುವುದಾಗಿ ವರದಿ

## ಚರ್ಚಿಲ್ಲರು ಪ್ರಧಾನಿ ಸ್ಥಾನ ಬಿಡುವರೇ ?

[illegible] ಪ್ರಧಾನಿ ಸ್ಥಾನವನ್ನು [illegible] ವಿಶ್ರಾಂತಿ [illegible] ಹೇಳಲಾಗಿದೆ

### ಅಹೋಬಲ ಸ್ವಾಮಿಗಳ ಪಟ್ಟಾಭಿಷೇಕ ಶ್ರೀಮುಖ ಸೇವೆ

[illegible] ಶ್ರೀ [illegible] ಶ್ರೀಮುಖ [illegible] ಅನೇಕ ಶಿಷ್ಯರು [illegible] ಶ್ರೀಪುರದ [illegible] ಮತ್ತು [illegible] ಆಶೀರ್ವಾದ ಭಾಷಣ ಮಾಡಿದರು [illegible] ಶ್ರೀ ಸ್ವಾಮಿಗಳವರು [illegible] ವಿವರಿಸಿದರು ನಂತರ ಶ್ರೀ [illegible] ಶಿಷ್ಯರೂ, ಭಕ್ತರೂ [illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

### [illegible] ಪತ್ರಿಕೋದ್ಯಮ [illegible]

[illegible] ಕಾಲೇಜಿನಲ್ಲಿರು [illegible] ಪ್ರಿನ್ಸಿಪಾಲರಾದ [illegible] ಅಧ್ಯಕ್ಷತೆ ವಹಿಸುವ [illegible] ಪತ್ರಿಕಾ ಮಾಲೀಕರಾದ [illegible] ಮಯ್ಯನವರು ವೃದ್ಧ ಪಿತಾ [illegible] ಕೃಷ್ಣಯ್ಯನವರ [illegible] ಮಾಡುವರು ಶ್ರೀ [illegible] ಸಭೆಯನ್ನು [illegible] ಎಂಬ ವಿಷ [illegible]

## ಕಾಲು ಜಾರಿ ನದಿಗೆ ಬಿದ್ದು ಮಹಿಳೆಯ ಮರಣ

ಟಿ. ನರಸೀಪುರ ೪

ಕಪಿಲ ಹೊಳೆಯಲ್ಲಿ ಮತ್ತೆ ಪ್ರವಾಹವು ವಿಪರೀತವಾಗಿ ಬಂದು ನೆನ್ನೆ ಹೊಳೆಯ ನೀರಿಗೆ ಹೋದ ಒಬ್ಬ ಹೆಂಗಸೊಬ್ಬಳು ಕಾಲು ಜಾರಿ ನದಿಗೆ ಬಿದ್ದು ಮೃತಪಟ್ಟಿರುತ್ತಾಳೆ ಪ್ರವಾಹವು ಈಗ ಕಡಿಮೆಯಾಗಿದೆ

## ಸಾಗರದಲ್ಲಿ ೧೦ ಮೈಲಿ ಉದ್ದದ ಮೀನುಗಳ ಸಮೂಹ

ಬೊಂಬಾಯಿಗೆ ೨೦ ಮೈಲಿ ದೂರದಲ್ಲಿ ಅರಬ್ಬೀ ಸಮುದ್ರದಲ್ಲಿ ಕಳೆದ ೩೧ನೇ ತಾ|| ೧೦ ಮೈಲಿಯಷ್ಟು ಉದ್ದದ ಕ್ಷೇತ್ರದಲ್ಲಿ ಭಾರಿಭಾರಿ ಮೀನುಗಳ ದೊಡ್ಡ ಸಮೂಹವು ಹಠಾತ್ತನೆ ಕಾಣಿಸಿತೆಂದು ಜಪಾನಿನ ಹಡಗೊಂದರ ಮುಖ್ಯಾಧಿಕಾರಿಯು ತಿಳಿಸಿ ಹಿಂದೂ ಸಾಗರದಲ್ಲಿ ಇಂತಹ ಭಾರಿ ಸಮೂಹವನ್ನು ತಾವು ನೋಡಿದ್ದು ಇದೇ ಮೊದಲೆಂದು ಹೇಳಿರುತ್ತಾರೆ

## ನೇಪಾಳದ ದಂಗೆಕೋರನ ಕೊಲೆ

ನೇಪಾಳದಲ್ಲಿ ಇತ್ತೀಚೆಗೆ ನಡೆದ ಗಲಭೆಗಳ [illegible] ಭೀಮದತ್ತ [illegible] ದಂಗೆಕೋರರ ನಾಯಕನನ್ನು ಗುಂಡಿನಿಂದ ಹೊಡೆದು ಕೊಲ್ಲಲಾಗಿದೆ ಪಶ್ಚಿಮ ನೇಪಾಳದ [illegible] ದಂಗೆಕೋರರೊಡನೆ [illegible] ಅವನ [illegible] ಅನೇಕ ಆಯುಧಗಳನ್ನು ವಶಪಡಿಸಿಕೊಳ್ಳಲಾಗಿದೆ

### ಮೈಸೂರು ದಕ್ಷಿಣ ಕಾಂಗ್ರೆಸ್ ಸಮಿತಿ ಅಧಿಕಾರ ವರ್ಗದ ಚುನಾವಣೆ

ನಗರದ ದಕ್ಷಿಣ ಭಾಗದ ಕಾಂಗ್ರೆಸ್ ಸಮಿತಿಯ ಅಧಿಕಾರ ವರ್ಗದ ಚುನಾವಣೆಯು ಇದೇ ತಿಂಗಳು [illegible] ನೇ ತಾ|| ಬೆಳಿಗ್ಗೆ ೧೧ ೩೦ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ನಡೆಯುವುದು ಹೊಸದಾಗಿ ಆರಿಸಿ ಬಂದಿರುವ ದಕ್ಷಿಣ ಭಾಗದ ಸಮಿತಿ ಸದಸ್ಯರ ಭಾಗವಹಿಸುವಂತೆ ಚುನಾವಣಾಧಿಕಾರಿಗಳಾದ ಶ್ರೀ ಎಂ ಪಿ ರಾಮಣ್ಣನವರು ಕೋರಿರುತ್ತಾರೆ

ಮೈಸೂರು [illegible] ಕಾಂಗ್ರೆಸ್ ಸಮಿತಿಯ ಅಧಿಕಾರ ವರ್ಗದ ಚುನಾವಣೆಯು ೯ನೇ ತಾ|| ಬೆಳಗ್ಗೆ ೧೧|| ಗಂಟೆಗೆ ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ನಡೆಯಲೇರ್ಪಾಡಾಗಿದೆ ಸಮಿತಿಗೆ ಹೊಸದಾಗಿ ಆರಿಸಿ ಬಂದಿರುವ ಸದಸ್ಯರು ಅದರಲ್ಲಿ ಭಾಗವಹಿಸುವಂತೆ ಚುನಾವಣಾಧಿಕಾರಿಗಳಾದ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರವರು ಕೋರಿರುತ್ತಾರೆ

### ಉಪಾಕರ್ಮಕ್ಕಾಗಿ ಬ್ಯಾಂಕುಗಳಿಗೆ ರಜಾ ಕೊಡಬೇಕು

ಉಪಾಕರ್ಮದ ದಿನ ಸರ್ಕಾರದವರು ಸಾರ್ವತ್ರಿಕ ರಜಾ ದಿನವೆಂದು ಘೋಷಿಸಿದರೂ [illegible] ಈ ಸೌಲಭ್ಯವನ್ನು ಬ್ಯಾಂಕುಗಳಿಗೆ ಕಲ್ಪಿಸಿಲ್ಲ ಪ್ರತಿ ವರ್ಷವೂ ನೆಗೋಷಿಯಬಲ್ ಇನ್ಸ್ಟ್ರುಮೆಂಟ್ಸ್ ಶಾಸನದ ಪ್ರಕಾರ ಬ್ಯಾಂಕುಗಳಿಗೆ ರಜಾ ಕೊಡುವುದು ವಾಡಿಕೆ ಆದರೆ ಮೈಸೂರು ಸರ್ಕಾರದವರು ಇದುವರೆಗೂ ಈ ವರ್ಷ ಆ ರೀತಿ ಘೋಷಿಸಿಲ್ಲ ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಶೀಘ್ರದಲ್ಲೇ ರಜಾ ಕೊಡುವರೆಂದು ನಂಬಲಾಗಿದೆ

### ಒಂಟಿಕೊಪ್ಪಲು ದೇವಾಲಯಕ್ಕೆ ಸಹಾಯಕ್ಕಾಗಿ ಪ್ರಾರ್ಥನೆ

ರಾಜಧಾನಿಯ ಒಂಟಿಕೊಪ್ಪಲಿನ ಮೊಹಲ್ಲಾದಲ್ಲಿರುವ ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಾಲಯದಲ್ಲಿ ನಡೆ [illegible] ಸೇವೆಗಳಿಗಾಗಿ ಬರುವ ಅನೇಕ ಭಕ್ತಾದಿಗಳು ಮಳೆ,ಗಾಳಿ, ಬಿಸಿಲು ಮುಂತಾದುವುಗಳಿಗೆ ಸಿಕ್ಕಿ ತೊಂದರೆ ಪಡುವುದನ್ನು ತಪ್ಪಿಸುವುದಕ್ಕಾಗಿ ದೇವಾಲಯದ ಮುಂದೆ ಕಟ್ಟಡವನ್ನು ಕಟ್ಟಿಸಲು ಏರ್ಪಾಡಾಗಿದೆ ಈ ಕಾರ್ಯಕ್ಕೆ ಒಬ್ಬ ಮಹನೀಯರು ೨೦೦ ರೂ ಗಳನ್ನು ಕೊಡಲು ಒಪ್ಪಿರುತ್ತಾರೆ ಕಟ್ಟಡಕ್ಕೆ ಬೇಕಾಗುವ ಉಳಿದ ಹಣವನ್ನು ಮಹಾಜನಗಳು ಕೊಟ್ಟು, ಕೆಲಸವು ಪೂರ್ತಿಯಾಗಲು ಸಹಾಯ ಮಾಡಬೇಕೆಂದು ಕೋರಲಾಗಿದೆ

## ನಿಮ್ನ ವರ್ಗದವರಿಗೆ ಶೇ|| ೧೭ರಷ್ಟು ಸ್ಥಾನ

ಬೆಂಗಳೂರು ೫

ಸರ್ಕಾರದ ಎಲ್ಲಾ ನೌಕರಿಗಳಲ್ಲಿ ನಿಮ್ನವರ್ಗದವರಿಗೆ ಶೇ|| ೧೭ ೨/೩ ರಷ್ಟು ಸ್ಥಾನಗಳನ್ನು ಮೀಸಲು ಮಾಡುವಂತೆ ಸರ್ಕಾರದವರು ನಿರ್ಧರಿಸಿರುತ್ತಾರೆ

## ಬಹು ಪತ್ನೀತ್ವದ ಪದ್ಧತಿಗಾಗಿ ಇಡೀ ಕೋಮಿನ ಬಂಧನ

ಅಮೆರಿಕದ ಅರಿಜೋನಾ ಪ್ರಾಂತದ ಒಂದು ಕಡೆಯಲ್ಲಿ ಬಹು ಪತ್ನೀತ್ವವನ್ನು ಅತಿಯಾಗಿ ಆಚರಣೆಗೆ ತಂದಿರುವ ಒಂದು ಅಲ್ಪ ಸಂಖ್ಯಾತ ಕೋಮಿನವರನ್ನೆಲ್ಲಾ ಇತ್ತೀಚೆಗೆ ಬಂಧಿಸಲಾಗಿದೆ ೬೫ ವರ್ಷದ ಒಬ್ಬನಿಗೆ ೬ ಮಂದಿ ಪತ್ನಿಯರಿರುವರು. ೧೫ ವರ್ಷದ ಕನ್ಯೆಯನ್ನು ಬಲಾತ್ಕಾರವಾಗಿ ಆತನು ವಿವಾಹವಾಗಿರುತ್ತಾನೆ ೪೦ ವರ್ಷದ ಒಬ್ಬ ಮುದುಕನ ಶಿಶುವು ೩ ವರ್ಷದ ಮತ್ತೊಂದು ಶಿಶುವಿನ [illegible] ಚಿಕ್ಕಪ್ಪನಾಗಬೇಕೆಂದು ಲೆಕ್ಕ ಹಾಕಲಾಗಿದೆ ಈ ಕೋಮಿನ ಅನೇಕರು ತಮ್ಮ ಹೆಂಡಿರ ಹೊಟ್ಟೆಯಲ್ಲಿ ಜನಿಸಿದ ಪುತ್ರಿಯರನ್ನೇ ವಿವಾಹವಾಗಿರುತ್ತಾರೆ

## ಫಲಪುಷ್ಪಗಳ ಪ್ರದರ್ಶನ

ನಗರದ ಫಲಪುಷ್ಪ ಸಂಘದ ಶಾಖೆಯವರು ಈ ತಿಂಗಳು ೮ ಮತ್ತು ೯ನೇ ತಾ|| ರಾಜಧಾನಿಯ ಜೂ ಗಾರ್ಡನ್ನಿನಲ್ಲಿ ಪುಷ್ಪಗಳ ಪ್ರದರ್ಶನವನ್ನು ಏರ್ಪಡಿಸಿರುತ್ತಾರೆ

## ವಿಮಾನ ಮುರಿದು ನಾಲ್ವರ ಮರಣ

೪೧ ಜನ ಪ್ರಯಾಣಿಕರಿದ್ದ ಏರ್ ಫ್ರಾನ್ಸ್ [illegible] ಕಂಪೆನಿಯ ವಿಮಾನವೊಂದು ನೆನ್ನೆ ದಕ್ಷಿಣ ತುರ್ಕಿಯಲ್ಲಿ ಮುರಿದುಬಿದ್ದ ಪರಿಣಾಮವಾಗಿ ೪ ಜನರು ಮಡಿದಿರುತ್ತಾರೆ ಒಬ್ಬನು ಪತ್ತೆಯಿಲ್ಲವಾಗಿರುತ್ತಾನೆ ೨೭ ಜನಕ್ಕೆ ಗಾಯವಾಗಿರುತ್ತದೆ

### ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾವಣೆಗೆ ಒತ್ತಾಯ

ಸಂಸ್ಥಾನದ ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾವಣೆಯು ಅಗತ್ಯವೆಂದೂ, ಅಪ್ರತ್ಯಕ್ಷ ಚುನಾವಣೆಯು ಕೂಡದೆಂದೂ ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ಒತ್ತಾಯ ಮಾಡಲಾಗಿರುವುದೆಂದೂ, ಜಾಗ್ರತೆ ಚುನಾವಣೆ ನಡೆಸುವಂತೆ ಕೋರಲಾಗಿರುವುದೆಂದೂ ತಿಳಿದುಬಂದಿದೆ

### ವಿ. ಕೆ. ಕೃಷ್ಣಮೆನನ್ನರ ಪ್ರಸಾರ ಭಾಷಣ

ಲಂಡನ್ನಿನಲ್ಲಿ ಹಿಂದೆ ಭಾರತದ ಹೈಕಮಿಷನರಾಗಿದ್ದು, ಈಗ ವಿಶ್ವ ಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿರುವ ವಿ ಕೆ ಕೃಷ್ಣಮೆನನ್‌ರವರು ಈ ರಾತ್ರಿ ೮|| ಗಂಟೆಗೆ ದೆಹಲಿಯ ರೇಡಿಯೋವಿನಲ್ಲಿ 'ಪ್ರಜಾ ಸತ್ತೆಗೆ ಸವಾಲ್' ಎಂಬ ವಿಷಯವಾಗಿ ಮಾಡುವ ಭಾಷಣವನ್ನು ಮೈಸೂರು ರೇಡಿಯೋವಿನವರು ಪುನಃ ಪ್ರಸಾರ ಮಾಡುವರು

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂಗೆ |
|---|---|---|
| ಕಡಲೆಕಾಯಿ | ೧೦ ೦ ೦ | ೩೦ ೧೦ ೦ |
| ಎಳ್ಳು | ೫೫ ೦ ೦ | ೯೫ ೨ ೦ |
| ಹರಳುಬೀಜ | ೪೦ ೧೪ ೦ | ೪೧ ೨ ೦ |
| ಹೊಂಗೆಬೀಜ | ೮೯ ೦ ೦ | |
| ಹುರುಳಿ | ೪೬ ೪ ೦ | ೫೦ ೧೨ ೦ |
| ಹೆಸರು | ೩೯ ೧೦ ೦ | ೬೫ ೧೪ ೦ |
| ಉದ್ದು | ೬೬ ೦ ೦ | ೭೦ ೧೪ ೦ |
| ಹಲಸಂದೆ | ೯೫ ೦ ೦ | ೨೫ ೦ ೦ |
| ಹುಣಸೇಹಣ್ಣು | ೬ ೨ ೦ | ೬ ೬ ೦ |
| ಸೀಗೇಕಾಯಿ | ೬ ೦ ೦ | ೭ ೩ ೦ |
| ತೆಂಗಿನಕಾಯಿ ೧೧೦೦ಕ್ಕೆ | ೧೯೦ ೦ ೦ | ೨೩೩ ೦ ೦ |

## ತುರ್ಕಿಗೆ ಅಮೆರಿಕದ ಸಬ್‌ಮೆರೀನುಗಳ ಎರವಲು

ಅಮೆರಿಕದ ಎರಡು ಸಬ್‌ಮೆರೀನುಗಳನ್ನು ತುರ್ಕಿಗೆ ೫ ವರ್ಷದ ಅವಧಿಗೆ ಕೊಡುವಂತೆ ಎರವಲು ಕೊಡುವ ಬಗ್ಗೆ ಅಮೆರಿಕದ ಕಾಂಗ್ರೆಸ್ಸು ಸಮ್ಮತಿಸಿರುತ್ತದೆ ಇಟಲಿಗೆ ಎರಡು ಸಬ್‌ಮೆರೀನುಗಳನ್ನೂ, ಫ್ರಾನ್ಸಿಗೆ ೧ ವಿಮಾನವಾಹಕ ನೌಕೆಯನ್ನೂ ಈ ಹಿಂದೆ ಇದೇ ರೀತಿ ಕೊಡಲಾಗಿದ್ದಿತು

## ಹೆಂಡ ಕುಡಿದ ಪೋಲೀಸರಿಂದ ಬೀದಿ ಜಗಳ

ಮದ್ಯಪಾನ ನಿರೋಧ ಶಾಸನವು ಜಾರಿಯಲ್ಲಿರುವ ತಿರುವನಂತಪುರದಲ್ಲಿ ಮೊನ್ನೆ ರಾತ್ರಿ ಸರ್ಕಾರಿ ಕಛೇರಿ ಎದುರು ಹೆಂಡ ಕುಡಿದ ಇಬ್ಬರು ಪೋಲೀಸರು ಬೀದಿ ಜಗಳವಾಡಿದರೆಂದೂ, ಆ ಪೈಕಿ ಒಬ್ಬನ ದಸ್ತಗಿರಿಯಾಯಿತೆಂದೂ ಮತ್ತೊಬ್ಬನು ಪರಾರಿಯಾದನೆಂದೂ ವರದಿಯಾಗಿದೆ

### ನೀರಿನ ಕಂದಾಯ ವಾಪಸು ಕೊಡುವಂತೆ ಪೌರಸಭಾಧ್ಯಕ್ಷರಿಗೆ ನೋಟೀಸು

ಶ್ರೀ ಕಗಡೂರು ರಾಮಚಂದ್ರರಾಯರು ನಗರದ ಪೌರ ಸಭಾಧ್ಯಕ್ಷರಿಗೆ ಬಹಿರಂಗ ನೋಟೀಸೊಂದನ್ನು ಕೊಟ್ಟು ೨೬-೭-೫೦ರಿಂದ ಈಚೆಗೆ ಜಾರಿ ಕೊಟ್ಟಿರುವ ನಲ್ಲಿ ನೀರಿನ ಕಂದಾಯವನ್ನು ವಾಪಸು ಮಾಡಬೇಕೆಂದು ಕೋರಿರುತ್ತಾರೆ

ನಗರದಲ್ಲಿ ನಲ್ಲಿ ಹಾಕಿರುವ ೧೦,೨೬೪ ಮನೆಗಳ ಪೈಕಿ ೧,೧೨೩ ಮನೆಗಳಿಗೆ ಮೀಟರು ಹಾಕಿ, ೮,೪೬೧ ಗೃಹಗಳಿಗೆ ಫ್ಲಾಟ್ ರೇಟನ್ನು ವಸೂಲು ಮಾಡಲಾಗುತ್ತಿರುವುದೆಂದೂ, ಮೀಟರು ಹಾಕಿರುವ ಮನೆಗಳಿಗೆ ವಾರ್ಷಿಕ ಬಾಡಿಗೆ ಅಂದಾಜಿನಲ್ಲಿ ರೂಪಾಯಿ ಒಂದಕ್ಕೆ ೨೦೦ ಗ್ಯಾಲನ್ನಿನಷ್ಟು ನೀರಿನ ಮೇಲೆ ತಿಂಗಳಿಗೆ ವಜಾ ಕೊಟ್ಟು ಸದರಿ ಸೌಕರ್ಯವನ್ನು ಕಲ್ಪಿಸಿ, ಇತರರ ಬಗ್ಗೆ ಪಕ್ಷಪಾತ ಮಾಡಲಾಗಿರುವುದೆಂದೂ ಅವರು ತಿಳಿಸಿರುತ್ತಾರೆ

ಮನೆ ಬಾಡಿಗೆ ಅಂದಾಜು ಮಾಡುವಾಗಲಾಗಲಿ,ಕ ದಾಯವನ್ನು ನಿಶ್ಚಯಿಸುವುದರಲ್ಲಾಗಲಿ,ಬಾಡಿಗೆ ಬರುವ ಅಥವಾ ವಾಸವಾಗಿರುವ ಅಂಶಗಳ ಮೇಲಾಗಲಿ ಅಥವಾ ನೀರಿನ ಕಂದಾಯ ವಿಧಿಸುವಾಗಲಾಗಲಿ ಪಕ್ಷಪಾತವನ್ನು ಏತಕ್ಕಾಗಿ ತೋರಿಸಬೇಕೆಂದು ಅವರು ಪ್ರಶ್ನಿಸಿರುತ್ತಾರೆ ಮೇಲ್ಕಂಡ ಕಾರಣಗಳಿಗಾಗಿ ಅವರು ನೀರಿನ ಕಂದಾಯವನ್ನು ವಾಪಸು ಕೇಳುತ್ತಾರೆ ಮೂಲಭೂತ ಹಕ್ಕಿನ ಸಂರಕ್ಷಣೆಗಾಗಿ ಹೈಕೋರ್ಟಿಗೆ ರಿಟ್ ಪೇಯರುಗಳು ಹೋಗಿ ಪರಿಹಾರ ಹೊಂದಬೇಕಾಗುವುದೆಂದೂ ಅವರು ತಿಳಿಸಿರುತ್ತಾರೆ

SRI GANESHA
TALKIES
From 6 8 53 For Two Days
Columbia's
SIROCCO
Featuring -Humphry Bogart & Marta Toren

TO-DAY LAST DAY
LORNA DOONE

Edited,Printed and Published by A R Nagarajan at Sadhvi Press,D.Subbiah Road, Mysore

ಪ್ರಭಾ ✱ 7—8—53 ರಿಂದ ಅಮೋಘ ಪ್ರಾರಂಭ ದಿನ 3 ಆಟಗಳು
ನಿಮ್ಮ ಮೆಚ್ಚಿನ ಬೀನಾರಾಯ್ ಮತ್ತು ಪ್ರೇಮನಾಥ್ ನಟಿಸಿರುವ
ಟಿ ಎಸ್. ಫಿಲ್ಮ್ಸ್ ರವರ
★ ಶಗೂಫಾ ★
ಸಹಾಯಕರು — ಪೂರ್ಣಿಮಾ, ಸುಂದರ್, ಯಶೋಧರ ಕಟ್ಟು
ಸಂಗೀತ :— ಸಿ ರಾಮಚಂದ್ರ (ಅನಾರ್ಕಲಿ ಫೇಮ್)
ಬೆಳಗಿನ ಪ್ರದರ್ಶನ 7—8—53 ರಿಂದ 3 ದಿನಗಳು
ಸೊಹ್ರಾಬ್ ಮೋದಿ ನಾಯಕ ನಟಿಸಿರುವ ಶೀಷ್ ಮಹಲ್

ಟೆಲಿಫೋನ್ ನಂ 794

ಸ್ಪೆಷಲ್ ಚಟ್ನಿ, ಪಲ್ಯ ಮತ್ತು ಬೆಣ್ಣೆಯೊಡನೆ ಸ್ಪೆಷಲಿಸ್ಟರಿಂದ ತಯಾರಿಸಲ್ಪಡುವ
ಸೆಟ್ ದೋಸೆಗಳಿಗೆ
ಶ್ರೀ ಚಾಮುಂಡೇಶ್ವರಿ ಭವನ
ನ್ಯೂ ರಸ್ತೆ ಮೈಸೂರು
'ಎ' ಕ್ವಾಲಿಟಿ ಕಾಫಿ
ಅರ್ಧ ಕಪ್ 0-1-6

|| ವಂದೇ ಮಾತರಂ ||

# ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

Please Visit
SREE CHAMUNDESWARI BHAVAN
New Road, Mysore
SET DOSAI with special Palya, Chutney and Butter
Prepared by Set Dosai Specialist

SADHVI LEADING NATIONALIST DAILY OF MYSORE

ಸಂಪುಟ ೧೬ ] MYSORE FRIDAY 7-8-1953 ಮೈಸೂರು : ಶುಕ್ರವಾರ ೭-೮-೧೯೫೩ [ ಸಂ. ೯೭

# ಯುದ್ಧ ಖೈದಿಗಳ ವರ್ತನೆ ಬಗ್ಗೆ ಕಮ್ಯೂನಿಸ್ಟರ ಕ್ಷಮಾಪಣೆ

## ಸಮಾಚಾರ ಪತ್ರಿಕೆಗೆ ಜಿಲ್ಲಾಧಿಕಾರಿಗಳ ನೋಟೀಸು

ಮೈಸೂರು ೭

ನಗರದ ಸಮಾಚಾರ ಪತ್ರಿಕೆಯ ಸಂಚಿಕೆಯೊಂದರಲ್ಲಿ ಶ್ರೀ ಗಣೇಶ ಬೆಂಕಿ ಕಡ್ಡಿ ಕಾರ್ಖಾನೆಯ ಅನಾಹುತದ ಸಂಬಂಧವಾಗಿ ಪ್ರಕಟವಾದ ವರದಿಯೊಂದರಲ್ಲಿ ಮಾಲೀಕರಾದ ಶ್ರೀ ಟಿ. ಸಿ. ಪೊನ್ನಪ್ಪನವರ ಮಕ್ಕಳು ಶ್ರೀ ಶಿವಪ್ರಸಾದರವರೂ ಮೃತಪಟ್ಟವರಾಗಿ ನಮೂದು ಮಾಡಲ್ಪಟ್ಟಿರುವ ಅಂಶವು ಸುಳ್ಳೆಂದು ತಿಳಿದುಬಂದಿರುವುದರಿಂದ ಪತ್ರಿಕೆಯ ಸಂಪಾದಕರು ಮತ್ತು ಪ್ರಕಟಣಕಾರರ ಮೇಲೆ ಏಕೆ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ಸಮಜಾಯಿಷಿಯನ್ನು ಕೊಡಬೇಕೆಂದು ಕೇಳಿ, ಇಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಅವರಿಗೆ ನೋಟೀಸೊಂದನ್ನು ಕೊಟ್ಟಿದ್ದಾರೆ.

ಯಾವ ಶಾಸನದ ಕಲಮಿನ ಪ್ರಕಾರ ಈ ನೋಟೀಸನ್ನು ಕೊಡಲಾಗಿದೆಯೆಂದು ಕೇಳಿ ಪತ್ರಿಕೆಯವರು ಉತ್ತರ ಬರೆದಿರುವುದಾಗಿ ಗೊತ್ತಾಗಿದೆ. ಅಲ್ಲದೆ ಮೇಲ್ಕಂಡ ವರದಿಯ ಸಂಬಂಧ... ತಪ್ಪನ್ನು ಮಾರನೇ ದಿನದ ಪತ್ರಿಕೆಯಲ್ಲಿ ಪ್ರಕಟಿಸಿರುವುದಾಗಿ ಅವರು ತಿಳಿಸಿರುವರೆಂದೂ ಗೊತ್ತಾಗಿದೆ.

### ಬೀಡಿ ಕಾರ್ಮಿಕರ ಸಭೆ

ಮೈಸೂರು ಬೀಡಿ ಕಾರ್ಮಿಕರ ಸಂಘದ ಆಶ್ರಯದಲ್ಲಿ ಕಳೆದ ಮಂಗಳವಾರ ಬೀಡಿ ಕೆಲಸಗಾರರ ಸಭೆಯು ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಅಜೀಜ್ ಸತ್ತಾರ್ ಸೇಠ್‌ರವರು ಅಗ್ರಾಸನವಹಿಸಿದ್ದರು. ಶ್ರೀ ಎನ್ ನಾಗನಾಯಕರು ಭಾಷಣ ಮಾಡಿ ಕಾರ್ಮಿಕರಲ್ಲಿ ಹಿಂದೂ ಮುಸಲ್ಮಾನ ಎಂಬ ಭೇದಭಾವನೆಯನ್ನು ತಂದು ಅವರುಗಳಲ್ಲಿ ಒಡಕುಹುಟ್ಟಿಸುವ ಪ್ರಯತ್ನವನ್ನು ಕಾರ್ಖಾನೆಯ ಆಡಳಿತ ವರ್ಗದವರು ಮಾಡುತ್ತಿರುವುದನ್ನು ಖಂಡಿಸಿದರು. ಅಧ್ಯಕ್ಷರು ಮಾತನಾಡಿ ಕೈಗಾರಿಕಾ ವ್ಯಾಜ್ಯಗಳ ಕಾನೂನಿನ ಹಲವು ಅಂಶಗಳನ್ನು ವಿವರಿಸಿದರು.

### ಫೇಲಾದ ವಿದ್ಯಾರ್ಥಿಗಳ ಸಭೆ

ಮಹಾರಾಜಾ ಕಾಲೇಜಿನ ಸುಮಾರು ೪೦ ಮಂದಿ ಜೂನಿಯರ್ ವಿದ್ಯಾರ್ಥಿಗಳಿಗೆ ಸೇರ್ಗಡೆಯ ಸೌಲಭ್ಯವನ್ನು ಕಾಲೇಜಿನ ಅಧಿಕಾರಿಗಳು ಕೊಡದಿರುವ ಸಂಬಂಧವಾಗಿ ನಾಳೆ ಬೆಳಿಗ್ಗೆ ೧೧ ಗಂಟೆಗೆ ಕಾಲೇಜು ಎದುರಿನಲ್ಲಿ, ಉತ್ತೀರ್ಣರಾಗದೇ ಉಳಿದಿರುವ ವಿದ್ಯಾರ್ಥಿಗಳ ಸಭೆ ನಡೆಯುವುದು. ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರು ಕಾಲೇಜುಗಳ ಮುಖ್ಯಾಧಿಕಾರಿಗಳಿಗೆ ಫೇಲಾದ ಜೂನಿಯರ್ ವಿದ್ಯಾರ್ಥಿಗಳ ವಿಷಯವನ್ನು ಪುನಃ ಪರಿಶೀಲನೆ ಮಾಡುವಂತೆ ತಿಳಿಸಿದ್ದರಿಂದ, ಬೇರೆಬೇರೆ ಕಾಲೇಜುಗಳವರು ತಮ್ಮ ವಿದ್ಯಾರ್ಥಿಗಳನ್ನು ಪಾಸು ಮಾಡಿಸಿದರೂ, ಮಹಾರಾಜಾ ಕಾಲೇಜಿನವರು ಆ ರೀತಿ ಮಾಡದಿರುವುದು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುವುದೆಂದೂ ಹೇಳಲಾಗಿದೆ. ಆದ್ದರಿಂದ ಈ ವಿಷಯವನ್ನು ಪುನಃ ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರಲ್ಲೂ ಮತ್ತು ವಿದ್ಯಾ ಸಚಿವರಲ್ಲೂ ಅರಿಕೆ ಮಾಡಿಕೊಳ್ಳುವ ಬಗ್ಗೆ ಸಭೆಯನ್ನು ಕರೆಯಲಾಗಿದೆ.

○ ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟ ... ಅಡಿಗಳಷ್ಟಿದೆ

## ರಾಮಾಯಣ ದರ್ಶನದ ವಾಚನ

ಮೈಸೂರು ೭

ರಾಜಧಾನಿಯ ನವಕಲಾ ಸಂಘದ ಆಶ್ರಯದಲ್ಲಿ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾ ಕಛೇರಿಯ ಮಹಡಿಯ ಮೇಲೆ ಈ ಸಂಜೆ ೬ ಗಂಟೆಗೆ ಶ್ರೀ ಕು ವೆಂ ಪು ರವರಿಂದ ರಚಿತವಾಗಿರುವ ರಾಮಾಯಣ ದರ್ಶನದ ವಾಚನವು ಬೆಂಗಳೂರಿನ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಂದ ನಡೆಯುವುದು. ಶ್ರೀ ಯತೀಶ ಪಾಂಡುರಂಗರಾಯರು ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವಿದೆ.

### ಸಾರಾಯಿ ಜಾಡಿಗಳ ಕಳುವಿಗಾಗಿ ದಸ್ತಗಿರಿ

ರಾಜಧಾನಿಯ ಲಷ್ಕರ್ ಮೊಹಲ್ಲಾ ಕಂಬಾರಗೇರಿಯಲ್ಲಿರುವ ಒಂದು ಸಾರಾಯಿ ಅಂಗಡಿಯಲ್ಲಿ ಕಳೆದ ಮಂಗಳವಾರ ಮಾರಾಟಗಾರರಿಗೂ ಗಿರಾಕಿಗಳಿಗೂ ಗಲಾಟೆ ನಡೆದು ಹಲವು ಸಾರಾಯಿ ಜಾಡಿಗಳು ಕಳವಾದವೆಂದೂ ಈ ಸಂದರ್ಭದಲ್ಲಿ ಪೆಟ್ರೋಲ್ ಮ್ಯಾಕ್ಸ್ ದೀಪದ ... ಪೊಲೀಸರು ದಸ್ತಗಿರಿ ಮಾಡಿ ಕಳುವಾದ ಜಾಡಿಗಳನ್ನು ಪತ್ತೆ ಮಾಡಿರುವರೆಂದೂ ತಿಳಿದು ಬಂದಿದೆ.

### ಕನ್ಯಾಪಹಾರಕ್ಕಾಗಿ ಡ್ರೈವರನ ದಸ್ತಗಿರಿ

ರಾಜಧಾನಿಯ ಮಂಡಿ ಮೊಹಲ್ಲೆಯ ಶ್ರೀಮತಿ ಕಮಲಾಬಾಯಿ ಎಂಬ ೧೫ ವರ್ಷದ ಕುಮಾರಿ ಕನ್ಯೆಯನ್ನು ಅಪಹರಿಸಿದನೆಂದು ಅದೇ ಮೊಹಲ್ಲೆಯ ಡ್ರೈವರ್ ಪುರುಷೋತ್ತಮ್ ಎಂಬುವನನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ.

## ಬಿ. ಎನ್. ಗೋಪಾಲರಾಯರ ಶಿಕ್ಷೆ ಖಾಯಂ

ಬೆಂಗಳೂರು ೭

ಹಿಂದೂಸ್ತಾನ್ ಇನ್ಸೂರೆನ್ಸ್ ಕಂಪೆನಿಯ ಶ್ರೀ ಕೆ ಎಸ್ ರಾಮಯ್ಯ ಮಂಡ್ಯದ ಶ್ರೀ ಶೀನಪ್ಪ ಮತ್ತು ಡಾ|| ಫರ್ನಾಂಡಿಸ್‌ರವರಿಗೆ ಮೋಸ ಮಾಡಿದರೆಂದು ಮೂರು ಅಪಾದನೆಗಳಲ್ಲೂ ತಲಾ ೨ ವರ್ಷ ಶಿಕ್ಷೆಗೆ ಗುರಿಯಾಗಿ ಅವುಗಳನ್ನು ಏಕ ಕಾಲದಲ್ಲಿ ಅನುಭವಿಸುವಂತೆ ಕೆಳಕೋರ್ಟಿನಲ್ಲಿ ಕೊಟ್ಟ ತೀರ್ಪಿನ ವಿರುದ್ಧವಾಗಿ ಅಪಾದಿತ ಶ್ರೀ ಬಿ ಎನ್ ಗೋಪಾಲರಾಯರು ಹೂಡಿದ್ದ ಅಪೀಲನ್ನು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಪದ್ಮನಾಭಯ್ಯನವರು ವಜಾ ಮಾಡಿ, ಶಿಕ್ಷೆಯನ್ನು ಖಾಯಂ ಮಾಡಿರುವರು.

## ಕರ್ನಾಟಕ ಪ್ರಾಂತ ಸತ್ಯಾಗ್ರಹಕ್ಕೆ ಬೆಂಬಲ

ಯಳಂದೂರು ೭

ಪ್ರಜಾ ಸಮಾಜವಾದಿ ಪಕ್ಷದ ಯಳಂದೂರು ಶಾಖೆಯ ಆಶ್ರಯದಲ್ಲಿ ನೆನ್ನೆ ... ತಾಲ್ಲೂಕು ಪ್ರಜಾ ... ಸಭೆಯು ನಡೆದು, ಸದರಿ ಪಕ್ಷದವರು ಕರ್ನಾಟಕ ಪ್ರಾಂತಕ್ಕಾಗಿ ನಡೆಸಬೇಕೆಂದಿರುವ ಸತ್ಯಾಗ್ರಹಕ್ಕೆ ಬೆಂಬಲ ಕೊಡುವ ಬಗ್ಗೆ ಶ್ರೀ ಶಾಂತಮೂರ್ತಿಯವರು ಭಾಷಣ ಮಾಡಿದರು. ಸಭೆಗೆ ೫೦ ಮಂದಿ ...

## ಜಿಲ್ಲಾ ಬೋರ್ಡುಗಳ ಪುನರ್ರಚನೆಗೆ ಒತ್ತಾಯ

### ಶಾಸನ ಸಭಾ ಕಾಂಗ್ರೆಸ್ ಸದಸ್ಯರಿಂದ ಮುಖ್ಯ ಮಂತ್ರಿಗಳಿಗೆ ಪತ್ರ

ಬೆಂಗಳೂರು ೭

ಸಂಸ್ಥಾನದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ೪೮ ಮಂದಿ ಸದಸ್ಯರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ಪತ್ರವೊಂದನ್ನು ಬರೆದು ಸಂಸ್ಥಾನದ ೯ ಜಿಲ್ಲಾ ಬೋರ್ಡುಗಳನ್ನೂ ಏಪ್ರಿಲ್ ತಿಂಗಳಿಗೆ ಪುನರ್ರಚಿಸಬೇಕೆಂತಲೂ, ಈಗಿನ ಬೋರ್ಡುಗಳನ್ನು ರದ್ದು ಮಾಡುವಂತೆಯೂ ಒತ್ತಾಯಪಡಿಸಿರುವರೆಂದು ವರದಿಯಾಗಿದೆ. ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾವಣೆ ನಡೆಯಬೇಕೆಂದು ಅವರು ಸೂಚಿಸಿರುವರೆಂದು ಗೊತ್ತಾಗಿದೆ.

### ಬಾಲರತ್ನಂ ರವರ ಮೇಲಿನ ಮೊಕದ್ದಮೆ ವಾಪಸು

ಬೆಂಗಳೂರು ಅಡ್ವೊಕೇಟರಾದ ಶ್ರೀ ವಿ ಬಾಲರತ್ನಂ ಹನುಮಂತ ಮತ್ತು ಚೌರಿಯಪ್ಪರ ಮೇಲೆ ಪೊಲೀಸರ ಕಳೆದ ಮೇ ತಿಂಗಳು ... ಶ್ರೀ ... ರವರ ಕೊಲೆ ಪ್ರಯತ್ನ ನಡೆಸಿದರೆಂದು ಹೂಡಿದ್ದ ಮೊಕದ್ದಮೆಯನ್ನು ಪ್ರಾಸಿಕ್ಯೂಷನ್ನಿನವರು ವಾಪಸು ತೆಗೆದುಕೊಂಡಿರುತ್ತಾರೆ. ಅಪಾದಿತರನ್ನು ಡಿಸ್ಚಾರ್ಜ್ ಮಾಡಲಾಗಿದೆ.

### ಗುಂಡ್ಲುಪೇಟೆ ಅಮಲ್ದಾರರ ವರ್ಗ

ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರರಾದ ಶ್ರೀ ರಾಜಗೋಪಾಲಯ್ಯಂಗಾರ್ಯರನ್ನು ಹೊಳೆನರಸೀಪುರಕ್ಕೂ, ಅಲ್ಲಿದ್ದ ಶ್ರೀ ಓ ಎಸ್ ಎಂ ಚಿ ಹರೀಘರನ್ನು ಮಾಲೂರಿಗೂ ವರ್ಗಾಯಿಸಲಾಗಿದೆ.

### ಪ್ರವಾಹ ಪೀಡಿತರಿಗೆ ಸಹಾಯ ಒದಗಿಸಲು ಸರ್ಕಾರದ ಯೋಜನೆ

ನದಿ ತೀರಗಳಲ್ಲಿರುವ ಊರುಗಳಲ್ಲಿ ಪ್ರವಾಹದಿಂದ ಜನರಿಗೆ ಉಂಟಾಗಬಹುದಾದ ತೊಂದರೆ ತಪ್ಪಿಸಲು ಅವರುಗಳ ಮನೆಗಳನ್ನು ಎತ್ತರವಾದ ಪ್ರದೇಶಗಳಲ್ಲಿ ... ಸಲು ಸರ್ಕಾರದವರು ಪೌರಸಭೆಗಳಿಗೆ ದ್ರವ್ಯ ಸಹಾಯ ಮಾಡುವ ಆಲೋಚನೆಯಿರುವುದಾಗಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿರುತ್ತಾರೆ.

## ಅಮೆರಿಕಾ ಸೈನ್ಯಾಧಿಕಾರಿ ಮುಖಕ್ಕೆ ಬೂಟ್ಸ್ ಏಟು

ನೆನ್ನೆ ಬಂಧನದಿಂದ ಮುಕ್ತರಾದ ಕೊರಿಯಾ ಕಮ್ಯೂನಿಸ್ಟರ ಪೈಕಿ ಒಬ್ಬ ಯುದ್ಧ ಖೈದಿಯು ಅಮೆರಿಕದ ಮಿಲಿಟರಿ ಅಧಿಕಾರಿಯ ಬಾಯಮೇಲೆ ಬೂಟ್ಸಿನಿಂದ ಹೊಡೆದನೆಂದು ವರದಿಯಾಗಿದೆ. ಅದೇ ಅಧಿಕಾರಿಗೆ ಮೊನ್ನೆ ಕಣ್ಣಿನ ಬಳಿ ಪೆಟ್ಟುಬಿದ್ದಿತ್ತು. ಕಮ್ಯೂನಿಸ್ಟ್ ಯೋಧರು ಮಿತ್ರ ಪಕ್ಷಗಳವರನ್ನು ಮನ ಬಂದಂತೆ ದೂಷಿಸಿ ಹೀಯಾಳಿಸಿದರೆಂದೂ, ಈ ಅತ್ಯಾಚಾರಗಳ ಬಗ್ಗೆ ಕಮ್ಯೂನಿಸ್ಟ್ ಸಂಧಾನ ಪ್ರತಿನಿಧಿಗಳು ನಿನ್ನೆ ... ಕ್ಷಮಾಪಣೆ ಕೇಳಿದರೆಂದೂ ಗೊತ್ತಾಗಿದೆ.

○ ಅಮೆರಿಕದ ಬಾರಿ ಆಕಾರದ ಬಾಂಬರ್ ವಿಮಾನವೊಂದು ಮೊನ್ನೆ ಮುಂಜಾನೆ ಉರಿದು ಸಮುದ್ರಕ್ಕೆ ಬಿದ್ದಿತು. ಅದರಲ್ಲಿದ್ದ ೨೩ ಜನರ ಪೈಕಿ ನಾಲ್ವರನ್ನು ರಕ್ಷಿಸಲಾಗಿದೆ. ಮೂವರ ...

## ಪಿ. ಹೆಚ್. ಕೃಷ್ಣರಾಯರಿಗೆ ೧,೦೦೦ ರೂ. ಸಂಭಾವನೆ

ಸ್ವಂ. ಸು. ಫೋ.] ಬೆಂಗಳೂರು ೭

ಈ ದಿನ ಶಾಸನ ಸಭೆಯಲ್ಲಿ ಶ್ರೀ ಎಂ ರಾಜಶೇಖರ ಮೂರ್ತಿಯವರೆತ್ತಿದ ಅಲ್ಪ ಕಾಲಾವಧಿ ಪ್ರಶ್ನೆಗೆ ಉತ್ತರವಾಗಿ ವಿದ್ಯಾ ಮಂತ್ರಿ ಶ್ರೀ ಎ. ಜಿ ರಾಮಚಂದ್ರರಾಯರು, ವೃತ್ತಿ ಶಿಕ್ಷಣಾಲಯದ ಹೊಸ ಸೂಪರಿಂಟೆಂಡೆಂಟರಾದ ಶ್ರೀ ಪಿ ಹೆಚ್ ಕೃಷ್ಣರಾಯರಿಗೆ ನಿವೃತ್ತಿ ವೇತನದ ಜೊತೆಗೆ ತಿಂಗಳಿಗೆ ೧೦೦೦ ರೂ ಸಂಭಾವನೆಯನ್ನು ಕೊಡಲಾಗುತ್ತಿದೆಯೆಂದು ತಿಳಿಸಿದರು. ಈ ಬಗ್ಗೆ ಅನೇಕ ಸದಸ್ಯರು ಉಪ ಪ್ರಶ್ನೆಗಳನ್ನು ಹಾಕಲಾಗಿ, ಅವರ ಸೇವೆ ಸರ್ಕಾರಕ್ಕೆ ಅತ್ಯಾವಶ್ಯಕವೂ ಆಗಿದೆಯೆಂದು ಸರ್ಕಾರಕ್ಕೆ ಕಂಡುಬಂದುದರಿಂದ ಅವರನ್ನು ನೇಮಿಸಲಾಯಿತೆಂದು ಹೇಳಿದರು. ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮೇಲೂ ಸರ್ಕಾರಕ್ಕೆ ಅಧಿಕಾರವಿರುವುದೆಂದು ಅವರು ತಿಳಿಸಿದರು.

### ನದಿಗೆ ಬಿದ್ದು ಗಿರಣಿ ಮಾಲೀಕರ ಮರಣ?

ಮೈಸೂರು ೭

ರಾಜಧಾನಿಯ ಸರಸ್ವತಿ ... ಮತ್ತು ಎ... ಗಿರಣಿಗಳ ಮಾಲೀಕರಲ್ಲೊಬ್ಬರಾದ ನಜರ್‌ಬಾದಿನ ಚಿಕ್ಕಯ್ಯನವರು ಕಳೆದ ಮಂಗಳವಾರ ಕಪಿಲ ನದಿಯಲ್ಲಿ ಬಿದ್ದು ಸಾವನ್ನು ಹೊಂದಿರುತ್ತಾರೆ. ನೆನ್ನೆ ಮುಂಜಾನೆ ಅವರ ದೇಹವು ಸಿಲಕಾಡಿನ ಬಳಿ ದೊರೆಯಿತೆಂದು ಹೇಳಲಾಗಿದೆ. ನೆನ್ನೆ ಸಂಜೆಯ ಮೇಲೆ ಶವವನ್ನು ಅಲ್ಲಿನ ಪೊಲೀಸರು ಅವರ ಮಕ್ಕಳ ಸುಪರ್ದಿಗೆ ಕೊಟ್ಟರು. ಮೃತರಿಗೆ ಅನಾರೋಗ್ಯ ಹೊಟ್ಟೆ ನೋವು ಬರುತ್ತಿದ್ದಿತೆಂದೂ, ಅದರ ಬಾಧೆಯನ್ನು ತಾಳಲಾರದೆ ಈ ರೀತಿ ಮಾಡಿಕೊಂಡಿರಬಹುದೆಂದೂ ಹೇಳಲಾಗಿದೆ.

## ಹಿಂದುಳಿದ ಪಂಗಡ ಮತ್ತು ನಿಮ್ನ ವರ್ಗದವರಿಗೆ ಪ್ರಾತಿನಿಧ್ಯ

### ಶಾಸನ ಸಭೆಯಲ್ಲಿ ನಿರ್ಣಯದ ಅಂಗೀಕಾರ

ಸ್ವಂ. ಸು. ಫೋ.] ಬೆಂಗಳೂರು ೭

ಈ ದಿನ ಶಾಸನ ಸಭೆಯು ಬೆಳಿಗ್ಗೆ ೮ ಗಂಟೆಯಿಂದ ಮಧ್ಯಾಹ್ನ ೨ರ ವರೆಗೆ ನಡೆದು ಮುಕ್ತಾಯವಾಯಿತು. ಕಾಂಗ್ರೆಸ್ ಪಕ್ಷದ ಪರವಾಗಿ ಶ್ರೀ ನೇರಳೆ ಮಾದಯ್ಯನವರಿಂದ ನಿರ್ಣಯವೊಂದು ಮಂಡಿಸಲ್ಪಟ್ಟು, ನಿಮ್ನ ವರ್ಗ ಮತ್ತು ಹಿಂದುಳಿದ ಪಂಗಡಗಳಲ್ಲಿ ಸೂಕ್ತವಾದ ಪ್ರಾತಿನಿಧ್ಯ ದೊರಕಿಸಲು ಪಬ್ಲಿಕ್ ಸರ್ವಿಸ್ ಕಮಿಷನ್ ನಿಬಂಧನೆಯನ್ನು ಬದಲಾಯಿಸಬೇಕೆಂದು ಕೋರಲಾಯಿತು. ನಿರ್ಣಯವು ಅಂಗೀಕಾರವಾಯಿತು.

ದೇವರಾಜ ಅರಸಿನವರು ಮಾತನಾಡಿ ಕೋಮುವಾರು ಪ್ರಾತಿನಿಧ್ಯದ ಬೇಡಿಕೆ ಮಿತಿ ಬೇಕೆಂದು ತಿಳಿಸಿದರು.

### ಬ್ಲಿಟ್ಸ್ ಪತ್ರಿಕೆಗೆ ... ಹಣ

ಶ್ರೀ ಎ ವಿ ನರಸಿಂಹರೆಡ್ಡಿಯವರು ಪ್ರಶ್ನೆ ಮಾಡಿ ಬ್ಲಿಟ್ಸ್ ಪತ್ರಿಕೆಗೆ ... ಕೊಡುವ ವಿಷಯವನ್ನು ಪುನಃ ಪ್ರಸ್ತಾಪಿಸಿದರು. ವಿದ್ಯಾ ಮಂತ್ರಿಗಳು ಉತ್ತರವಿತ್ತು ಪತ್ರಿಕೆಗೆ ೯೦೦೦-೬೦೦೦ ರೂ ಗಳ ಚೆಕ್ಕು ಕಳಿಸಿರುವುದು ನಿಜವಲ್ಲವೆಂದರು. ಸದಸ್ಯರು ಮೈಸೂರಿನ ಪತ್ರಿಕೆಗಳನ್ನೇ ... ನಿರ್ಧರಿಸುವುದಕ್ಕೆ ಆ ...

## ಒಬ್ರಾಲ್ಟರನ್ನು ಸ್ಪೇನಿಗೆ ವಾಪಸು ಕೊಡಲು ಒತ್ತಾಯ

ಜಿಬ್ರಾಲ್ಟರಿನ ಮೇಲೆ ಯಾವ ಹಕ್ಕೂ ಇಲ್ಲದಿದ್ದರೂ ಬ್ರಿಟನ್ನು ಅದನ್ನು ಇಟ್ಟುಕೊಂಡಿರುವುದರಿಂದ, ಬ್ರಿಟನ್ನು ಸ್ಪೇನಿಗೆ ... ಜನರಲ್ ಫ್ರ್ಯಾಂಕೋ ...

## ದೊಣ್ಣೆಯಿಂದ ಹೊಡೆದು ತಾಯಿಯ ಕೊಲೆ

ಕರೂರು ತಾಲ್ಲೂಕು ... ಎಂಬುವನು ... ತನ್ನ ತಾಯಿಯನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುವುದಕ್ಕಾಗಿ ... ದಸ್ತಗಿರಿ ಮಾಡಲ್ಪಟ್ಟಿರುತ್ತಾನೆ.

## ತಂದೆಗೆ ವಿಷ ಹಾಕಿ ಕೊಂದವನ ಬಂಧನ

...

ನೆಹರೂರವರಿಗಿಂತ ... ಕಾಂಗ್ರೆಸ್ ಅಧ್ಯಕ್ಷರು ...

### ಹೊಂಬಾಳೆ ರಂಗರಾಜನವರ ವಿದ್ಯಾರ್ಥಿ ನಿಲಯ

...

### ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ

ರಾಜಧಾನಿಯ ಮಹಾರಾಜಾ ಕಾಲೇಜಿನ ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ ಬಯಸುವ ಸಮಾರಂಭವು ನೆನ್ನೆ ಕಾಲೇಜಿನಲ್ಲಿ ನಡೆಯಿತು. ... ಪ್ರಿನ್ಸಿಪಾಲ್ ... ಅಧ್ಯಕ್ಷತೆ ವಹಿಸಿದ್ದರು ...

### ಹರಿಕಥೆ

...

### ಆಕಾಶವಾಣಿ ನಾಳೆ ಕಾರ್ಯಕ್ರಮ

...

## ಪ್ಯಾರಿಸ್ಸಿನಲ್ಲಿ ಮುಷ್ಕರ

ಪ್ಯಾರಿಸ್ ನಗರದ ನೂರಾರು ಕಾರ್ಮಿಕರು ನೆನ್ನೆ ಸ್ವಲ್ಪಹೊತ್ತು ಮುಷ್ಕರ ನಡೆಸಿದರು ... ಸರ್ಕಾರದ ... ವಿರೋಧಿಸಲು ... ಸಂಸ್ಕಾರ ಮಾಡುವವರು ... ಕೆಲಸಕ್ಕೆ ಹೋಗಲಿಲ್ಲ.

## ಚೀನ ಗೂಡೆಂದು ಟ್ರಾನ್ಸ್ ಫಾರ್ಮರ್ ಮುಟ್ಟಿದವನಿಗೆ ಷಾಕ್

ಕೊಟ್ಟಾಯಂ ಬಳಿ ... ಟ್ರಾನ್ಸ್‌ಫಾರ್ಮರನ್ನು ಜೇನು ಗೂಡೆಂದು ಭಾವಿಸಿ ... ಆಸ್ಪತ್ರೆಗೆ ಸೇರಿಸಲಾಗಿದೆ.

### ಮಹಾರಾಜರ ವರ್ಧಂತಿ

ರಾಜಧಾನಿಯ ಶ್ರೀ ಜಯಚಾಮರಾಜೇಂದ್ರ ... ಮಹಾರಾಜರ ... ವರ್ಧಂತಿ ...

## ಆಂಧ್ರ ಪ್ರಾಂತ ನಿರ್ಮಾಣದಲ್ಲಿ ವಿಳಂಬವಿಲ್ಲ

ಆಂಧ್ರ ಪ್ರಾಂತದ ನಿರ್ಮಾಣದಲ್ಲಿ ಕಾಲ ವಿಳಂಬವಾಗ ... ಕರ್ನೂಲಿನಲ್ಲಿ ... ಆಂಧ್ರದ ರಾಜಧಾನಿಯು ... ಎಂದು ಹೇಳಲಾಗಿದೆ.

## ಗಂಡಂದಿರ ಅಪರಾಧಕ್ಕಾಗಿ ಹೆಂಡತಿಯರ ಸಜಾ

ಅಸ್ಸಾಮಿನ ... ಕಾರ್ಮಿಕರ ಗಂಡಂದಿರ ಅಪರಾಧಕ್ಕಾಗಿ ಪತ್ನಿಯರನ್ನು ... ಸಜಾ ...

### ಉಚಿತ ಸಂಗೀತ ಪಾಠ

... ರಾಮಲಿಂಗೇಶ್ವರ ದೇವಾಲಯದ ಬೀದಿಯಲ್ಲಿರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ... ಹೆಣ್ಣು ಮಕ್ಕಳಿಗೆ ಉಚಿತ ಸಂಗೀತ ... ಪಾಠವನ್ನು ಹೇಳಲಾಗುವುದು.


## ಲೆದರ್ ಬ್ಯಾಗ್ ಕಳೆದುಹೋಗಿದೆ

... ಶ್ರೀ ಲಕ್ಷ್ಮೀವೆಂಕಟೇಶ್ವರ ಬಸ್ಸಿನಲ್ಲಿ ... ಬ್ಯಾಗ್ ಕಳೆದುಹೋಗಿದೆ ... ಬಹುಮಾನ ಕೊಡಲಾಗುವುದು.

ಸಿ. ಎಸ್. ಎಸ್. ...


## ಬಳ್ಳಾರಿ ಶಾಲೆಗಳಿಗೆ ಆಂಧ್ರ ವಿದ್ಯಾರ್ಥಿಗಳ ಬಹಿಷ್ಕಾರ

ಬಳ್ಳಾರಿ ತಾಲ್ಲೂಕು ಬಗ್ಗೆ ಮಿಶ್ರಾರವರ ತೀರ್ಪನ್ನು ವಿರೋಧಿಸುವ ಸಂಬಂಧವಾಗಿ ಶಾಸನಸಭಾ ರೆಡ್ಡಿಯವರ ಉಪವಾಸ ಮುಷ್ಕರದಲ್ಲಿ ಸಹಾನುಭೂತಿ ತೋರಿಸಲು ನೆನ್ನೆ ಅಲ್ಲಿನ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗಲಿಲ್ಲ. ... ರೆಡ್ಡಿಯವರು ನೆನ್ನೆ ಪ್ರಜ್ಞೆ ತಪ್ಪಿದ್ದರು.

## ಅಪಮಾನದಿಂದ ಮಗುವಿನ ಕೊಲೆ ಮತ್ತು ಆತ್ಮಹತ್ಯೆ

ಕೊಳ್ಳೇಗಾಲ ಬಳಿ ... ಎಂಬ ತೋಟದ ಕೂಲಿ ಚಿನ್ನಮ್ಮಾಳ್ ಎಂಬ ವಿಧವೆಯು ತನ್ನ ೫ ವರ್ಷದ ಮಗು ... ಎಂಬವನನ್ನು ಕೊಂದು ತಾನೂ ಸಮೀಪದ ತೋಟದ ಬಾವಿಯೊಂದಕ್ಕೆ ನೇಣುಹಾಕಿಕೊಂಡು ಸತ್ತುಹೋದಳೆಂದು ವರದಿಯಾಗಿದೆ. ಅವಳು ಇನ್ನೊಬ್ಬ ಕೂಲಿಯನ್ನು ಪ್ರೀತಿಸುತ್ತಿದ್ದುದಕ್ಕಾಗಿ ಇತರರು ಛೀಮಾರಿ ಮಾಡುತ್ತಿದುದರಿಂದ ಈ ರೀತಿ ಮಾಡಿಕೊಂಡಿರಬಹುದೆಂದು ಹೇಳಲಾಗಿದೆ.

## ಅಂಚೆ ಚೀಲದಲ್ಲಿದ್ದ ೧,೪೦೦೦ ರೂ. ಪತ್ತೆಯಿಲ್ಲ

ಕಲ್ಲಿಕೋಟೆ ಅಂಚೆ ಕಛೇರಿಯಿಂದ ... ಅಂಚೆ ಕಛೇರಿಗೆ ಕಳುಹಿಸಿದ ಚೀಲದಲ್ಲಿ ... ರೂ. ... ಅದನ್ನು ... ತೆರೆದು ನೋಡಿದಾಗ ... ರೂ. ಪತ್ತೆಯಾಗಲಿಲ್ಲವೆಂದೂ ವರದಿಯಾಗಿದೆ.

## ವಿಜ್ಞಾನ ಜ್ಯೋತಿಷ

ನೆಲ್ಲೂರು ... ಕನ್ನಡ ಮಾಸಪತ್ರಿಕೆಯನ್ನು ಸಂಪಾದಕರೂ, ... ಶ್ರೀ ಬಿ. ವಿ. ಮಹದೇವರಾಯರು ಹೊರಡಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ... ಮಾಸಪತ್ರಿಕೆಯೆಂದು ತಿಳಿಸಲಾಗಿದೆ. ಈ ಶಾಸ್ತ್ರದಲ್ಲಿ ಅಭಿರುಚಿಯುಳ್ಳವರೂ, ಆಸಕ್ತಿ ಇರುವವರೂ ಅವಶ್ಯಕವಾಗಿ ನೋಡಬೇಕಾದದು. ವಾರ್ಷಿಕ ಚಂದಾ ಆರು ರೂಪಾಯಿ ಮಾತ್ರ.

### ಸಂಘದ ಚುನಾವಣೆ

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಘದ ಚುನಾವಣೆಯು ೪ ನೇ ತಾರೀಖು ನಡೆದು, ಶ್ರೀಯುತರುಗಳಾದ ಬಿ. ಎಸ್. ರಾಮಣ್ಣನವರು ಅಧ್ಯಕ್ಷರಾಗಿಯೂ, ಕೆ. ವಸಂತರಾಜಯ್ಯಂಗಾರ್ ಉಪಾಧ್ಯಕ್ಷರಾಗಿಯೂ, ಹೆಚ್. ಎಸ್. ರಾಮಯ್ಯಂಗಾರ್ ಮತ್ತು ಎಸ್. ವಿ. ... ಕಾರ್ಯದರ್ಶಿಗಳಾಗಿಯೂ ಬಹುಮತದಿಂದ ಚುನಾಯಿತರಾಗಿರುವರು.


ಒಲಂಪಿಯಾ ಟಾಕೀಸ್

... ಪ್ರತಿದಿನ ೩ ಪ್ರದರ್ಶನಗಳು

ಫಿಲಂ ... ರವರ

ಬುಜ್ ದಿಲ್

ಚಿತ್ರ ... ನೂತನ್ ... ಮತ್ತು ...

ಬೆಳಗಿನ ಪ್ರದರ್ಶನ — ದಾ ದಾ

# ಮನೆ ಕ್ರಯಕ್ಕಿದೆ

## ಡೋರ್ ನಂ. 456/1 ಮತ್ತು 456/2

ಕೆಂಪನಂಜಾಂಬಾ ಅಗ್ರಹಾರ, ಮೈಸೂರು ಪೇಟೆಗೆ ಸಮೀಪದಲ್ಲಿ, ಒಳ್ಳೆಯ ಬಾಡಿಗೆ ಬರುತ್ತಿರುವ ಸ್ವತ್ತು. ವಿವರಗಳಿಗೆ —

**ಜಯ ಅಂಡ್ ಕಂಪೆನಿ,**

ಮನೆ, ಜಮೀನು ಮಾರಾಟ ಮತ್ತು ಸಾಲ ಕೊಡಿಸುವ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ

ಮೈಸೂರು . ಫೋನ್ 520



Edited, Printed and Published by A R Nagarajan at Sadhvi Press D Subbiah Road, Mysore


## ಕಾರ್ಮಿಕರ ಗೃಹ ವಸತಿಗಾಗಿ ಮಾಲೀಕರಿಂದ ಹಣ

ಬೆಂಗಳೂರು ೬

ಮೈಸೂರು ಕಾರ್ಮಿಕರ ಗೃಹವಸತಿ ಶಾಸನದ ಅಂಗವಾಗಿ ಸಂಸ್ಥಾನದಲ್ಲಿರುವ ಪ್ರತಿಯೊಂದು ಬಟ್ಟೆ ಗಿರಣಿ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಬೀಡಿ ಮತ್ತು ... ಕಾರ್ಖಾನೆ ಮತ್ತು ೫೦ ಜನ ನೌಕರರಿಗಿಂತಲೂ ಹೆಚ್ಚು ಕಾರ್ಮಿಕರನ್ನು ಸೇರಿಸಿಕೊಂಡಿರುವ ಕಾರ್ಖಾನೆಗಳವರು, ೧೫೦ ರೂ. ಗಳಿಗಿಂತ ಕಡಿಮೆ ಸಂಬಳ ಬರುವ ಪ್ರತಿಯೊಬ್ಬ ಕಾರ್ಮಿಕನ ಗೃಹವಸತಿ ಸೌಕರ್ಯದ ಬಗ್ಗೆ ಆವರ ಮಾಹೆಯಾನ ಸಂಬಳದ ಶೇ|| ೩ ರಷ್ಟು ಹಣವನ್ನು ಅದಕ್ಕಾಗಿ ಸ್ಥಾಪಿತವಾಗಿರುವ ಕಾರ್ಪೊರೇಷನ್ ಸಂಸ್ಥೆಗೆ ಈ ತಿಂಗಳು ೧೦ ರಿಂದ ಕೊಡಬೇಕಾಗುವುದೆಂದು ಕಾರ್ಪೊರೇಷನ್ನಿನ ಅಧ್ಯಕ್ಷರಾದ ಶ್ರೀ ಎ. ಎಸ್. ಹಿರಣ್ಣಯ್ಯನವರು ತಿಳಿಸಿದ್ದಾರೆ.

ಮನೆಗಳನ್ನು ಕಟ್ಟಲು ಸಂಸ್ಥಾನ ಗೃಹವಸತಿಯನ್ನು ರಚಿಸುವ ಸಂಬಂಧವಾಗಿ ಕಾರ್ಪೊರೇಷನ್ ಒಂದು ಯೋಜನೆಯನ್ನು ಸಿದ್ಧಗೊಳಿಸುತ್ತಿರುವುದಾಗಿಯೂ, ಸಮಿತಿಯು ಸಾಲವನ್ನು ಎತ್ತುವುದೆಂದೂ ಅವರು ತಿಳಿಸಿ, ಮಧ್ಯಮ ವರ್ಗ ಮತ್ತು ಬಡವರಿಗೆ ಮನೆಗಳನ್ನು ಕಟ್ಟಿಸಲು ಯೋಜನೆಯನ್ನು ಏರ್ಪಡಿಸ ಮಾಡಲಾಗುವುದೆಂದೂ, ಇದು ಸಾಧ್ಯವಾದರೆ, ಈಗ ತಂದಿರುವ ಕಾರ್ಮಿಕರ ಗೃಹವಸತಿಯ ಶಾಸನವನ್ನು ತೆಗೆದುಹಾಕಿ, ... ಗೃಹವಸತಿಯ ಏರ್ಪಾಡು ಮಾಡಬಹುದೆಂದೂ ಹೇಳಿದ್ದಾರೆ.


# SRI GANESHA

TALKIES

From 8-8-53 : For Two Days

# OUTCAST OF — THE ISLANDS

Starring:— Ralph Richardson Robert Morley, Trevor Howard and Wendy Hiller

A Carol Reed Production

## ಟೆಂಡರ್ ನೋಟಿಫಿಕೇಷನ್

ತಾ|| 29-7-1953

ಚಾಮರಾಜನಗರದ ಶ್ರೀ ನಾರಾಯಣ ಅನ್ಯೋನ್ಯ ಸಹಾಯ ಸಂಘ (ಲಿಮಿಟೆಡ್) ದ ಗೌರವ ಕಾರ್ಯದರ್ಶಿಯವರ ಆಫೀಸಿನಿಂದ -

ಈ ಮೂಲಕ ತಿಳಿಯಪಡಿಸುವುದೇನೆಂದರೆ: ರೈಲ್ವೆ ಸ್ಟೇಷನ್ ಸಮೀಪ ರೋಡಿನಲ್ಲಿ ಬೇಸ್‌ಮೆಂಟ್ ಪೂರ್ತಿಯಾಗಿ, ಉಳಿದಿರುವ ಸಂಘದ ಕಟ್ಟಡವನ್ನು ಪೂರ್ತಿ ಮಾಡತಕ್ಕ ಬಗ್ಗೆ ಟೆಂಡರನ್ನು ತಾರೀಖು 17-8-1953 ನೇ ಸೋಮವಾರ ಸಾಯಂಕಾಲ 5 ಘಂಟೆಯವರೆವಿಗೂ ಸ್ವೀಕರಿಸಲಾಗುತ್ತದೆ.

ಈ ಬಗ್ಗೆ ಕಂಟ್ರಾಕ್ಟ್ ಪಡೆಯಬಿಚ್ಛಿಸುವವರು ತಮ್ಮ ಟೆಂಡರಿನಲ್ಲಿ ಕಾಪು ಈ ಕೆಲಸ ಮಾಡಿದ ... ಮೊಬಲಗನ್ನು ಬರೆಯತಕ್ಕದ್ದು. ಟೆಂಡರು ಸ್ವೀಕೃತವಾದವರು ತಮಗೆ ವರ್ತಮಾನ ತಲುಪಿದ ಒಂದು ವಾರದೊಳಗಾಗಿ ಹಣವನ್ನು ... ಭಾವಾ ಕಾಗದದಲ್ಲಿ ಕಂಟ್ರಾಕ್ಟನ್ನು ಸರಿಯಾಗಿ ನಡೆಯಿಸಿಕೊಂಡುಹೋಗುವುದಕ್ಕೆ ಒಂದು ಕರಾರನ್ನು ಬರೆದುಕೊಡತಕ್ಕದ್ದು.

ಈ ಕಂಟ್ರಾಕ್ಟಿಗೆ ಸಂಬಂಧಪಟ್ಟ ವಿಷಯಗಳಲ್ಲೆಲ್ಲಾ ನೆಲ್ಲೂರು ಸಂಘದ ಕಮಿಟಿ ಮೆಂಬರುಗಳ ತೀರ್ಮಾನವೇ ಕೊನೆಯದು. ಈ ಕಂಟ್ರಾಕ್ಟು ಬಗ್ಗೆ ಬೇಕಾದ ಹೆಚ್ಚಿಗೆ ವಿವರಗಳನ್ನು ಗೌರವ ಕಾರ್ಯದರ್ಶಿಯವರ ಆಫೀಸಿನಿಂದ ಆಫೀಸು ಕೆಲಸ ಮಾಡುವ ಕಾಲದಲ್ಲಿ ತಿಳಿದುಕೊಳ್ಳಬಹುದು.

ಕೆ. ಜಿ. ತಿಮ್ಮಣ್ಣಯ್ಯ,

ಗೌರವ ಕಾರ್ಯದರ್ಶಿ,

ಶ್ರೀ ನಾರಾಯಣ ಅನ್ಯೋನ್ಯ ಸಹಾಯ ಸಂಘ (ಲಿಮಿಟೆಡ್),

ಚಾಮರಾಜನಗರ

ರಿಜಿಸ್ಟರ್ ನಂ. 792

|| ವಂದೇ ಮಾತರಂ ||

ಬಿಡಿ ಪ್ರತಿಗೆ ೩ ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ ಮೂರು ಕಾಸು

# ಸಾಧ್ವಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE : SUNDAY 9-8-1953 : ಮೈಸೂರು : ಭಾನುವಾರ ೯-೮-೧೯೫೩ [ ಸಂ ೧೯

ಸಂಖ್ಯಾಸಹ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಕಾಶ್ಮೀರದ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾರವರ ವಜಾ

## ಫಲಪುಷ್ಪ ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ

ಮೈಸೂರು ೯

ನೆನ್ನೆ ಇಲ್ಲಿನ ಜಗನ್ಮೋಹನ ಅರಮನೆಯಲ್ಲಿ ಫಲಪುಷ್ಪಗಳ ಪ್ರದರ್ಶನದ ಅಂಗವಾಗಿ ಬಹುಮಾನ ವಿನಿಯೋಗ ಸಮಾರಂಭವು ನಡೆಯಿತು. ರಾಜಸೇವಾ ಭೂಷಣ ಶ್ರೀ ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದನಂತರ ಫಲಪುಷ್ಪ ಸಮಿತಿ ಅಧ್ಯಕ್ಷರಾದ ಡಾ|| ವರಿಗೌಡರು ಸ್ವಾಗತ ಭಾಷಣ ಮಾಡಿ, ಪ್ರದರ್ಶನದ ಅವಶ್ಯಕತೆಯನ್ನು ತಿಳಿಸಿದರು. ಅಧ್ಯಕ್ಷರು ಮಾತನಾಡಿ, ಇಂಥ ಫಲಪುಷ್ಪ ಪ್ರದರ್ಶನಗಳು ನಡೆಯುತ್ತಿದ್ದು ಕಾರಣಾಂತರ ನಿಂತುಹೋಗಿದ್ದುವೆಂದೂ, ಪ್ರದರ್ಶನಗಳನ್ನು ನಡೆಸಲು ದಿವಂಗತ ಹೆಚ್ ಸಿ ಜವರಯ್ಯನವರು ತುಂಬಾ ಶ್ರದ್ಧೆ ವಹಿಸುತ್ತಿದ್ದರೆಂದೂ, ಇಂತಹ ಪ್ರದರ್ಶನಗಳಿಂದ ತುಂಬಾ ಪ್ರಯೋಜನವುಂಟೆಂದೂ ತಿಳಿಸಿದರು. ನಂತರ ಬಹುಮಾನ ವಿನಿಯೋಗಗಳಾದುವು. ಶ್ರೀ ಎಂ ಭದ್ರಯ್ಯನವರಿಗೆ ಶ್ರೀಮನ್ ಮಹಾರಾಜರ ಪಾರಿತೋಷಕವಾದ ಬೆಳ್ಳಿ ಬಟ್ಟಲನ್ನು ಕೊಡಲಾಯಿತು. ಶ್ರೀ ಭದ್ರಯ್ಯ, ಶ್ರೀ ಟಿ ಶಾಂತರಾಜಪ್ಪ, ಶ್ರೀಮತಿ ಇಂದಿರಾ [illegible] ಮುಂತಾದ ಅನೇಕರಿಗೆ ಬಹುಮಾನಗಳು ದೊರಕಿತು. ಫಲಪುಷ್ಪಗಳ ಪ್ರದರ್ಶನಕಾರರು, ತರಕಾರಿಯ ಪ್ರದರ್ಶನಗಾರರಿಗೂ ಬಹುಮಾನಗಳನ್ನು ಹಂಚಲಾಯಿತು. ಪ್ರದರ್ಶನವು ಈ ದಿನವೂ ರಾತ್ರಿ ೮ ಗಂಟೆ ವರೆಗೆ ಇರುವುದು. ವಂದನಾರ್ಪಣೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಆರು ಏಳು ಅಡಿ ಉದ್ದದ ಪಡವಲಕಾಯಿ, ಭಾರಿ ಕುಂಬಳಕಾಯಿ, ಬಾಳೆ ಬದನೇಕಾಯಿ, ಚಿಕ್ಕ ಹಲಸಿನಕಾಯಿ, ಬೆಣ್ಣೆ ಹಣ್ಣು ಮುಂತಾದುವು ಪ್ರದರ್ಶನದ ವಿಶೇಷ ವಸ್ತುಗಳಾಗಿದ್ದುವು.

ದನವನ್ನು ಕತ್ತರಿಸಿದುದಕ್ಕಾಗಿ ದಸ್ತಗಿರಿ

ಈ ದಿನ ಬೆಳಗ್ಗೆ ಬಾತಮೀದಾರರ ಬಂಗ ಮತ್ತು ಇತರ ಒಂಭತ್ತು ಜನರು ಒಂದು ಹಸುವನ್ನು ಕತ್ತರಿಸಿದುದಕ್ಕಾಗಿ ಲಕ್ಷ್ಮೀಪುರಂ ಪೋಲೀಸರು ಅವರನ್ನು ದಸ್ತಗಿರಿ ಮಾಡಿರುತ್ತಾರೆ. ನಾಳೆ ಅವರಮೇಲೆ ಮೊಕದ್ದಮೆ ಹೂಡಲಾಗುವುದು.

## ಫ್ರಾನ್ಸಿನಲ್ಲಿ ಒಂದು ದಿನದ ಸಾರ್ವತ್ರಿಕ ಮುಷ್ಕರ

ಫ್ರಾನ್ಸಿನಲ್ಲಿ ಮೊನ್ನೆ ೨೪ ಗಂಟೆಗಳ ಕಾಲ ಸಾರ್ವತ್ರಿಕ ಮುಷ್ಕರವು ನಡೆಯಿತು. ನಾನಾ ಕೈಗಾರಿಕೆ, ಸಂಚಾರ, ಮಾರ್ಗ ಸಾಗಣೆ, ರೈಲು ಮುಂತಾದ ಕಾರ್ಮಿಕರು ಅದರಲ್ಲಿ ಭಾಗವಹಿಸಿದ್ದರು. ೨೦೦ ಸಾವಿರ ಅಂಚೆ ಕೆಲಸಗಾರರು ಕೆಲಸಕ್ಕೆ ಹಿಂತಿರುಗಿಲ್ಲ. ಆ ದೇಶದಲ್ಲಿ ಮೊನ್ನೆ ಅಂಚೆ ಬಟವಾಡೆಯೇ ಆಗಲಿಲ್ಲ. ರೈಲುಗಳು ನಿಂತು, ಪ್ರಯಾಣಿಕರನ್ನು ಸಾಗಿಸಲು ವಿಶೇಷ ರೈಲುಗಳನ್ನು ಏರ್ಪಡಿಸಲಾಗಿದ್ದಿತು. ಫ್ರಾನ್ಸಿನ ಸರ್ಕಾರದವರ ಮಿತವ್ಯಯದ ನೀತಿಯನ್ನು ಕಾರ್ಮಿಕರು ವಿರೋಧಿಸಿ ಮುಷ್ಕರ ಹೂಡಿದ್ದರು. ಅಂಚೆ ನೌಕರರು ತಮ್ಮ ಸಂಬಳವು ಹೆಚ್ಚಬೇಕೆಂದು ಕೋರಿರುತ್ತಾರೆ. ಮುಷ್ಕರವು ಅಲ್ಲಿನ ಸಮಾಜವಾದಿ ಪಕ್ಷದವರಿಂದ ನಡೆಸಲ್ಪಟ್ಟಿತು.

## ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ಆರಂಭೋತ್ಸವ

### ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರ ಭಾವಚಿತ್ರದ ಅನಾವರಣ

ಮೈಸೂರು ೯

ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರ ರಾಯರು ನೆನ್ನೆ ಮಹಾರಾಜಾ ಕಾಲೇಜಿನಲ್ಲಿ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ಆರಂಭೋತ್ಸವವನ್ನು ನೆರವೇರಿಸಿ, ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕೋದ್ಯಮಿಗಳ ಪಾತ್ರವು ಬಹಳ ಮುಖ್ಯವಾಗಿರುವುದೆಂದು ಹೇಳಿ, ವಿದ್ಯಾರ್ಥಿಗಳು ಈ ವೃತ್ತಿಯಲ್ಲಿ ಉತ್ತಮ ಶಿಕ್ಷಣವನ್ನು ಪಡೆಯಬೇಕೆಂದು ಸೂಚಿಸಿದರು. ಭಾರತ ಮತ್ತು ಇತರ ರಾಷ್ಟ್ರಗಳ ರಾಜ್ಯಾಂಗ ಸಭೆಗಳ ಕಾರ್ಯಕಲಾಪಗಳನ್ನು ಅವರು ತಿಳಿಯಬೇಕೆಂದ ಕೋರಿದರು.

ತಾಯಿನಾಡು ಪತ್ರಿಕೆಯ ಮಾಲೀಕರಾದ ಶ್ರೀ ಪಿ ಆರ್ ರಾಮಯ್ಯನವರು ವೃದ್ಧ ಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿ, ಅವರು ಮೈಸೂರು ಸಂಸ್ಥಾನಕ್ಕೆ ಸರ್ವತೋಮುಖವಾದ ಅಭಿವೃದ್ಧಿಗಾಗಿ ಮಾಡಿರುವ ಮಹೋಪಕಾರಗಳನ್ನು ವಿವರಿಸಿದರು. ಈ ಭಾವಚಿತ್ರವನ್ನು ಶ್ರೀ ಆಗರಂ ರಂಗಯ್ಯನವರು ಸಂಘಕ್ಕೆ ಕೊಟ್ಟಿದ್ದರು.

ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಲೋಕಮಾನ್ಯ ತಿಲಕ್ ಮತ್ತು ಮಹಾತ್ಮಾ ಗಾಂಧಿಯವರ ಪತ್ರಿಕೋದ್ಯಮದ ವೈಶಿಷ್ಟ್ಯವನ್ನು ವಿವರಿಸಿ ಭಾಷಣ ಮಾಡಿದರು. ಕೇವಲ ವೃತ್ತಿಗಾಗಿ ಅವರು ಪತ್ರಿಕೋದ್ಯಮದಲ್ಲಿ ತೊಡಗಲಿಲ್ಲವೆಂದೂ, ಪತ್ರಿಕೆಗಳ ಮೂಲಕ ಜನಜಾಗೃತಿಯನ್ನುಂಟುಮಾಡಿ, ದೇಶದಲ್ಲಿ ಕ್ರಾಂತಿಯನ್ನು ಎಬ್ಬಿಸಿ, ತನ್ಮೂಲಕ ಹೊಸ ಸಮಾಜದ ರಚನೆಗೆ ಕಾರಣಕರ್ತರಾದರೆಂದು ಹೇಳಿ, ಅವರ ಆದರ್ಶವನ್ನು ವಿದ್ಯಾರ್ಥಿಗಳು ಸದಾ ಕಾಲದಲ್ಲಿಯೂ ತಮ್ಮ ಮುಂದೆ ಇಟ್ಟುಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಿನ್ಸಿಪಾಲರಾದ ಶ್ರೀ ವಿ ಎಲ್ ಡಿಸೋಜಾರವರು ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ವಿವರಿಸಿ, ಇದರಲ್ಲಿ ಆಸಕ್ತರಾಗಿರುವ ವಿದ್ಯಾರ್ಥಿಗಳಿಗೆ ಯಶಸ್ಸುಂಟಾಗಲೆಂದು ಹಾರೈಸಿದರು.

ಮೊದಲು ಶ್ರೀ ಟಿ ಎಸ್ ಗೋಪಾಲರವರಿಂದ ಪ್ರಾರ್ಥನೆಯೂ, ಶ್ರೀ ನಾಯುಗೌಡರಿಂದ ಭಾರತ ವಾಚನವೂ ನಡೆದನಂತರ, ಪತ್ರಿಕೋದ್ಯಮದ ಅಧ್ಯಾಪಕರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅತಿಥಿಗಳಿಗೆ ಸ್ವಾಗತವನ್ನು ಬಯಸಿದರು. ಕಾರ್ಯದರ್ಶಿಗಳಾದ ಶ್ರೀ ಹೆಚ್ ಆರ್ ಮಲ್ಲಾರಾಧ್ಯರು ವರದಿಯನ್ನೊಪ್ಪಿಸಿದರು.

ಉಪಾಧ್ಯಕ್ಷರಾದ ಶ್ರೀ ಜಿ ರಾಮಕೃಷ್ಣರವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಕೊನೆಗೊಂಡಿತು.

○ ಬಗರಿ ಯಾತ್ರೆಗಾಗಿ ಹೋಗುತ್ತಿದ್ದ ೨೬ ಮಂದಿಯಿಂದ ಕೂಡಿದ ಬಸ್ಸೊಂದು ಮೊನ್ನೆ ಬಿನ ಮಾರ್ಗದಲ್ಲಿ ೫೦೦ ಅಡಿ ಆಳದ ಕಣಿವೆಗೆ ಬಿದ್ದು ೨೫ ಜನರು ಮೃತಪಟ್ಟರೆಂದೂ, ಒಬ್ಬನು ಮಾತ್ರ ಬದುಕಿರುವುದಾಗಿಯೂ ಗೊತ್ತಾಗಿದೆ.

## ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರ ವಜಾ

### ಮಂತ್ರಿ ಮಂಡಲ ರದ್ದು

ಸ್ಟೇಟ್ಸ್ ಫೋನ್] ಬೆಂಗಳೂರು ೯

ಕಾಶ್ಮೀರದ ಅಧಿಪತಿಯಾದ ಸಾದರ್ ಇ ರಿಯಾಸತ್ ಕರಣಸಿಂಗ್‌ರವರು ಒಂದು ಘೋಷಣೆಯನ್ನು ಹೊರಡಿಸಿ, ಅಲ್ಲಿನ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರನ್ನು ವಜಾ ಮಾಡಿ ಅವರ ಮಂತ್ರಿಮಂಡಲವನ್ನು ವಿಸರ್ಜಿಸಿರುವುದಾಗಿ ಇಲ್ಲಿಗೆ ವಾರ್ತೆ ಬಂದಿದೆ. ಅಲ್ಲಿನ ಉಪಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರ ನೇತೃತ್ವದಲ್ಲಿ ಹೊಸ ಮಂತ್ರಿಮಂಡಲವು ಒಡನೆಯೇ ಪ್ರಮಾಣ ವಚನ ಸ್ವೀಕರಿಸಿದ ದಾಗಿ ಗೊತ್ತಾಗಿದೆ. ಅಬ್ದುಲ್ಲಾರವರ ಮಂತ್ರಿಮಂಡಲದ ಸದಸ್ಯರಲ್ಲಿ ಭಿನ್ನಾಭಿಪ್ರಾಯವುಂಟಾಗಿ ಸಂಸ್ಥಾನದ ಹಿತಕ್ಕೆ ಧಕ್ಕೆ ಬರುವ ಸಂಭವವು ಕಂಡುಬಂದುದರಿಂದ ಅವರನ್ನು ವಜಾ ಮಾಡುವುದು ಅನಿವಾರ್ಯವಾಯಿತೆಂದು ರಾಜ್ಯಾಧಿಪತಿಗಳು ಅಭಿಪ್ರಾಯಪಟ್ಟಿರುತ್ತಾರೆಂದು ಗೊತ್ತಾಗಿದೆ. ಅಬ್ದುಲ್ಲಾರವರು ಇತ್ತೀಚೆಗೆ ಕಾಶ್ಮೀರವನ್ನು ಸ್ವತಂತ್ರವಾಗಿಡಲೂ ಮತ್ತು ಕಾಶ್ಮೀರ ಕಣಿವೆಯಲ್ಲಿರುವ ಕೋಮುವಾರು ವಾಸ್ಲಿಮರನ್ನು ಸಚೇತನಗೊಳಿಸಿ ಆ ಮೂಲಕ ತಮ್ಮ ನಾಯಕತ್ವವನ್ನು ಉಳಿಸಿಕೊಳ್ಳಲೂ ಪ್ರಯತ್ನ ಪಟ್ಟ ಬಗ್ಗೆ ಅವರಿಗೂ ಅವರ ಸಹೋದ್ಯೋಗಿಗಳಿಗೂ ತೀವ್ರ ಭಿನ್ನಾಭಿಪ್ರಾಯ ಒಂದಿದ್ದಿತೆಂದೂ ಹೇಳಲಾಗಿದೆ. ಮಂತ್ರಿ ಮಂಡಲದಲ್ಲಿ ಷೇಕ್ ಅಬ್ದುಲ್ಲಾರವರು ಅಲ್ಪ ಸಂಖ್ಯಾತರಾಗಿದ್ದರು.

## ಸಮಾಚಾರ ಪತ್ರಿಕೆಗೆ ಕೊಟ್ಟಿದ್ದ ನೋಟೀಸು ವಾಪಸು

ಮೈಸೂರು ೯

ಶ್ರೀ ಟಿ ಸಿ. ಹೊನ್ನಪ್ಪನವರ ಮಕ್ಕಳು ತಿಮ್ಮಯ್ಯರವರ ವಿಷಯವಾಗಿ ತಪ್ಪು ವರದಿಯನ್ನು ಪ್ರಕಟಿಸಿದ್ದರಿಂದ ಬಗ್ಗೆ ಕಾರ್ಯಕ್ರಮವನ್ನೇಕೆ ತೆಗೆದುಕೊಳ್ಳಬಾರದೆಂದು ನಗರದ ಸಮಾಚಾರ ಪತ್ರಿಕೆಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಕೊಡಲಾಗಿದ್ದ ನೋಟೀಸನ್ನು ವಾಪಸು ತೆಗೆದುಕೊಳ್ಳಲಾಗಿದೆಯೆಂದು ತಿಳಿದುಬಂದಿದೆ. ಕಛೇರಿಯ ಗುಮಾಸ್ತರ ಪತ್ರವ್ಯವಹಾರದ ಅಚಾತುರ್ಯದಿಂದ ಈ ಪ್ರಕರಣವು ನಡೆಯಿತೆಂದು ಗೊತ್ತಾಗಿದೆ. ಪತ್ರಿಕಾ ಪ್ರಪಂಚದಲ್ಲಿ ವಿಶೇಷ ಕಳವಳಕ್ಕೆ ಕಾರಣವಾಗಿದ್ದ ಈ ಪ್ರಸಂಗವು ಈ ರೀತಿಯಲ್ಲಿ ಪರ್ಯವಸಾನವಾಗಿರುತ್ತದೆ.

## ರಷ್ಯದ ಬಳಿ ಜಲಜನಕ ಬಾಂಬ್

ರಷ್ಯದ ಪ್ರಧಾನಿ ಮಾಲೆಂಕಾವ್‌ರವರು ನೆನ್ನೆ ಮಾಸ್ಕೊವಿನಲ್ಲಿ ಸೇರಿದ್ದ ಸುಪ್ರೀಂ ಸೋವಿಯೆಟ್ ಸಭೆಯಲ್ಲಿ ಮಾತನಾಡಿ, ರಷ್ಯವು ಜಲಜನಕ ಬಾಂಬನ್ನು ಹೊಂದಿರುವುದಾಗಿ ತಿಳಿಸಿದ ಕ್ಕಾರೆ. ಅಮೆರಿಕವು ಮಾತ್ರವೇ ಅದನ್ನು ಹೊಂದಿಲ್ಲವೆಂದೂ, ರಷ್ಯವೂ ಜಲಜನಕ ಬಾಂಬಿನ ತಯಾರಿಕೆಯಲ್ಲಿ ಯಶಸ್ವಿಯಾಗಿರುವುದೆಂದೂ ಅವರು ಹೇಳಿರುವರು. ಅಮೆರಿಕದವರು ಅಣು ಬಾಂಬು ಪ್ರದರ್ಶನ ಮಾಡಿ ಬೆದರಿಸುತ್ತಿರುವುದನ್ನು ಅವರು ಖಂಡಿಸಿರುವರು.

## ಫೇಲಾದ ವಿದ್ಯಾರ್ಥಿಗಳಿಗೆ ಪ್ರವೇಶ

ಮೈಸೂರು ೯

ತರಗತಿಗಳಲ್ಲಿ ಹಾಜರಾತಿ ಕೊಟ್ಟು ಪರೀಕ್ಷೆಗಳಲ್ಲಿ ಫೇಲಾಗಿರುವ ಜೂನಿಯರ್ ಬಿ ಎ., ಬಿ ಎಸ್‌ಸಿ ಆನರ್ಸ್ ಮುಂತಾದ ಎಲ್ಲಾ ವಿದ್ಯಾರ್ಥಿಗಳನ್ನೂ ಮುಂದಿನ ತರಗತಿಗಳಿಗೆ ತೀಗದೆ ಮಾಡಿಸಲಾಗಿದೆಯೆಂದು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರು ಒಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನೆನ್ನೆ ಫೇಲಾದ ವಿದ್ಯಾರ್ಥಿಗಳು ಸಭೆ ಸೇರಿ ಈ ಬಗ್ಗೆ ಕೂಡಲೇ ಪರಿಶೀಲಿಸಿ ಕ್ರಮಕೈಗೊಳ್ಳದಿದ್ದರೆ ತಾವು ವಿದ್ಯಾ ಸಚಿವರ ಮನೆ ಮುಂದೆ ಉಪವಾಸ ಹೂಡಬೇಕಾಗುವುದೆಂದು ನಿರ್ಧಾರ ಮಾಡಿದ್ದರು.

## ಉತ್ತರ ಕೊರಿಯಾ ಅಧಿಕಾರಿಗಳಿಗೆ ಮರಣ ದಂಡನೆ

ರಾಜದ್ರೋಹಕ್ಕಾಗಿ ಉತ್ತರ ಕೊರಿಯಾದ ೧೦ ಜನ ದೊಡ್ಡ ಅಧಿಕಾರಿಗಳಿಗೆ ಮರಣ ದಂಡನೆ ವಿಧಿಸಲಾಗಿದೆ. ಅವರೆಲ್ಲರೂ ಇಬ್ಬರು ಅಧಿಕಾರಿಗಳನ್ನು ಅವೆ[illegible] ದಕ್ಷಿಣ ಕೊರಿಯಾ ಪರವಾಗಿ ಗ[illegible] ಬಕ್ಷಿ ಕೊಡುತ್ತಿದ್ದರೆಂದು ದಸ್ತಗಿರಿ ಮಾ[illegible] ದಕ್ಷಿಣ ಉತ್ತರಕೊರಿಯಾ ಸರ್ಕಾರವನ್ನು [illegible] ಅವರು ಪಿತೂರಿ ನಡೆಸಿ, [illegible] ಕ್ರಾಂತಿಕಾರಿ ಕೃತ್ಯಗಳನ್ನು ಮಾಡಿದ್ದುದಾಗಿ[illegible], ದಂಗೆಯ ಮೂಲಕ ಅಧಿಕಾರವನ್ನು ವ[illegible]ಸಲು ತಾವು ಆಲೋಚಿಸಿದ್ದುದಾಗಿಯೂ ಅಪರಾಧಿಗಳು ಒಪ್ಪಿಕೊಂಡಿರುವರೆಂದು ಹೇಳಲಾಗಿದೆ.

## ಅಂತರಪ್ರಾಂತ ಮಾರಾಟ ತೆರಿಗೆ ರದ್ದು

ಅಂತರ ಪ್ರಾಂತ ಮಾರಾಟ ತೆರಿಗೆಯನ್ನು ವಿಧಿಸದಂತೆ ಕೇಂದ್ರ ಸರ್ಕಾರದವರು ಸಂಸ್ಥಾನ ಸರ್ಕಾರಗಳಿಗೆ ತಿಳಿಸಿರುತ್ತಾರೆ. ಇತ್ತೀಚೆಗೆ ಮಾಡಿದ ಒಪ್ಪಂದದ ಪ್ರಕಾರ, ಅಂತರ ಪ್ರಾಂತೀಯ ವ್ಯಾಪಾರದಲ್ಲಿ ಯಾವ ಸಂಸ್ಥಾನದಲ್ಲಿ ಸಾಮಾನು ಬಿಕರಿಯಾಗುತ್ತದೋ ಆ ಸಂಸ್ಥಾನದಲ್ಲಿ ತೆರಿಗೆ ಹಾಕಬಹುದಾಗಿದೆ. ಅದರಂತೆ ೧೯೫೦ ನೇ ಜನವರಿ ೨೬ ರಿಂದ ಮಾರಾಟ ತೆರಿಗೆ ಅಧಿಕಾರಿಗಳು ವ್ಯಾಪಾರಿಗಳಿಂದ ಕೇಳುವ ಲೆಕ್ಕಪತ್ರಗಳ ತನಿಖೆಯನ್ನು ಮುಂದುವರಿಸದೆ, ತೆರಿಗೆಯನ್ನು ವಜಾ ಮಾಡುವಂತೆ ಕೇಂದ್ರ ಸರ್ಕಾರದವರು ಸೂಚಿಸಿರುತ್ತಾರೆ.

## ಮುಖ್ಯ ಮಂತ್ರಿಯವರ ಕಾರಿಗೆ ಕ್ರಿಕೆಟ್ ಚೆಂಡಿನ ಪೆಟ್ಟು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿ ತೆರಳುತ್ತಿದ್ದಾಗ ಅವರ ಮೋಟಾರಿಗೆ ಪಕ್ಕದಲ್ಲೇ ರಸ್ತೆ ಪಕ್ಕದಲ್ಲಿ ಕ್ರಿಕೆಟ್ ಆಡುತ್ತಿದ್ದ ಬಾಲಕರು ಹೊಡೆದ ಚೆಂಡು ತಗುಲಿ ಕಾರಿನ ಗಾಜು ಒಡೆಯಿತು. ಮುಖ್ಯ ಮಂತ್ರಿಗಳು ಹುಡುಗರಿಗೆ ಬುದ್ಧಿವಾದ ಹೇಳಲು ಅವರು ಲಕ್ಷಿಸದಿದ್ದುದರಿಂದ ಹತ್ತಿರ ಪೋಲೀಸು ಠಾಣೆಗೆ ಕಾರನ್ನು ತೆಗೆದುಕೊಂಡು ಹೋಗಿ ಕ್ರಿಕೆಟರನು ದೂರು ಕೊಡಲು, ಬಾಲಕರನ್ನು ಪೋಲೀಸರು ಕರೆತಂದು ರಾತ್ರಿವರೆಗೂ ಇಟ್ಟುಕೊಂಡು ನಂತರ ಬಿಟ್ಟುಬಿಟ್ಟರೆಂದು ವರದಿಯಾಗಿದೆ.

## ವಾರ ಭವಿಷ್ಯ

[illegible] ರಿಂದ ೧೬ ರ ವರೆಗೆ

ಮೇಷ — ಕೈಗೊಂಡ ಕಾರ್ಯದಲ್ಲಿ ಪ್ರತಿಷ್ಠೆ ಹೆಚ್ಚುವುದು. ಪ್ರಭಾವಶಾಲಿಗಳ ಸಹಾಯ [illegible] ಆಗಮನ. ನೌಕರರಿಗೆ ಸ್ವಲ್ಪ [illegible] ವ್ಯಾಪಾರಿಗಳಿಗೆ ಪ್ರೋತ್ಸಾಹ [illegible] ಕೊನೆಯಲ್ಲಿ ತೊಂದರೆ [illegible]

ವೃಷಭ — [illegible] ವ್ಯಾಪಾರಿಗಳಿಗೆ [illegible] ನೆರವೇರುವುದು [illegible] ತೊಂದರೆ, ವಂಚನೆ

ಮಿಥುನ — ಪ್ರಯಾಸದ [illegible] ವ್ಯವಹಾರದಲ್ಲಿ ಲಾಭವಿ[illegible] ಕೆಲಸ ವ್ಯಾಪಾರಿಗಳಿಗೆ ಲಾಭ [illegible] ಮರೆತುಹೋದ ಹಣ ಲಾಭ

ಕರ್ಕ — ಮನೆ ಕಟ್ಟಲು [illegible] ದಿನಗಳು ನೌಕರರಿಗೆ ಶುಭ [illegible] ಕೂಲ

ಸಿಂಹ — ವಾರದ [illegible] ದರ್ಶನ [illegible] ಗಳಿಗೆ [illegible] ಗೃಹಕೃತ್ಯದಲ್ಲಿ [illegible] ಯೋಗ [illegible]

ಕನ್ಯಾ — [illegible] ನೌಕರರಿಗೆ [illegible]

ತುಲಾ — ಕೈಗೊಂಡ [illegible] [illegible] ನೌಕರರು [illegible] ವ್ಯಾಪಾರಿಗಳಿಗೆ [illegible]

ವೃಶ್ಚಿಕ — ಕೈಗೊಂಡ ಕಾರ್ಯ [illegible] ಗೃಹಕೃತ್ಯದಲ್ಲಿ [illegible] ನೌಕರರಿಗೆ [illegible]

ಧನು — ನೌಕರರಿಗೆ [illegible] ವ್ಯಾಪಾರಿಗಳಿಗೆ [illegible] ಮತ್ತು ಬಂಧುಗಳೊಡನೆ [illegible]

ಮಕರ — [illegible] ಬಂಧು ವಿಯೋಗ, ಪ್ರಯಾಣ [illegible] ಮಕ್ಕಳಿಗೆ [illegible] ತೊಂದರೆ [illegible]

ಮೀನ — ಸ್ನೇಹಿತರ ಸಹಾಯ [illegible] ವ್ಯಾಪಾರಿಗಳಿಗೆ ಉತ್ತಮ


**SRI GANESHA**

From 10 8 53 [illegible] Days

**THE THIRD MAN**

Starring — Joseph Cotten [illegible]

Releasing Very Short

**Real Three D Pictures In Technicolor**

ಬಂಪೆಂಪಾರದಲ್ಲಿ ವಿನಂತಿ

[illegible]

ಪ್ರಿಂಟ[illegible] ಹೌಸ್,

[illegible] ಮೈಸೂರು


## ಮೈಸೂರು ಸಂಸ್ಥಾನಕ್ಕೆ ದನದ ಮಾಂಸ

ಮೈಸೂರು ಸಂಸ್ಥಾನಕ್ಕೆ ರವಾನೆ [illegible] ಹಿಂದೂಪುರದ ಪೌರಸಭೆ [illegible] ದನಗಳನ್ನು ವಧಿಸಲು [illegible] ಕೊಟ್ಟಿರುತ್ತದೆ [illegible] ವೆಂಕಟರಾಯರ [illegible] ಪೌರಸಭೆಯ [illegible] ಪ್ರತಿಭಟಿಸ [illegible]

## ಧಾರವಾಡ ಜಿಲ್ಲೆಯ ಮುಖ್ಯ ನಗರಗಳಲ್ಲಿ ಪ್ರತಿಬಂಧಕಾಜ್ಞೆ

ಧಾರವಾಡದ ಜಿಲ್ಲಾ ಮ್ಯಾಜಿಸ್ಟ್ರೇಟರ [illegible] ದಿನಗಳ ಅವಧಿಯ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ [illegible] ರೈಲ್ವೆ [illegible] ಪ್ರದೇಶಗಳಿಗೂ [illegible]

## ಭಾರತಕ್ಕೆ ನೂರು ವರ್ಷ ರಕ್ಷಣೆ ಗೋಧಿ ಆಮದು

[illegible]

### ಮೆಡಿಕಲ್ ಕಾಲೇಜಿನಲ್ಲಿ ಸ್ಥಾನಗಳ ಹಂಚಿಕೆ

[illegible] ಮೈಸೂರು [illegible] ಕಾಲೇಜಿಗೆ [illegible] ವಿದ್ಯಾರ್ಥಿ [illegible]

### ನಿರಾಶ್ರಿತ ವಿದ್ಯಾರ್ಥಿಗಳಿಗೆ [illegible] ರೂ

ಮೈಸೂರ [illegible] ನಿರಾಶ್ರಿತ ವಿದ್ಯಾರ್ಥಿಗಳಿಗೆ [illegible] ಮೈಸೂರು ಸರ್ಕಾರ [illegible] ಸಾವಿರ ರೂ [illegible] ಕೊಡಲಿರುವರು


## ರಾಜಕಮಲ್ ಟಾಕೀಸ್

ಮೈಸೂರು

8 8-53 ರಿಂ[illegible] . 3ನೇ ವಾರ

[illegible] ಚಿತ್ರ ★ ಪ್ರೇಮ[illegible]

[illegible]


## ದಕ್ಷಿಣ ಕೊರಿಯಾ ಮತ್ತು ಅಮೆರಿಕಗಳಿಗೆ ರಕ್ಷಣಾ ಒಪ್ಪಂದ

ದಕ್ಷಿಣ ಕೊರಿಯಾಕ್ಕೂ ಅಮೆರಿಕಾಕ್ಕೂ ಪರಸ್ಪರ ರಕ್ಷಣಾ ಒಪ್ಪಂದವಾಗಿ ನೆನ್ನೆ ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರೂ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರೂ ಒಪ್ಪಂದದ ಪತ್ರಕ್ಕೆ [illegible] ಮಾಡಿದರು

## ಪರ್ಷಿಯಾ ಸಹಾರ ಅಧಿಕಾರದಕ್ಕೆ ಮತ್ತೂ ಸಂಚಕಾರ

ಪರ್ಷಿಯ [illegible] ರವರು [illegible] ಹೊಂದಿರುವ [illegible] ಸಂಚಕಾರ ತರುವ ಅಜ್ಞೆಯೊಂದನ್ನು [illegible] ಪ್ರಧಾನಿ ಮುಸಾದಿಕ್‌ರವರು ಹೊರಡಿಸಲಿರುವರೆಂದು ಅಭಿಪ್ರಾಯ ಪಡಲಾಗಿದೆ

## ಸೈಕಲ್ ಮೇಲೆ ೧೬ ಸಾವಿರ ಮೈಲಿ ಪ್ರವಾಸ

ಪೂನದ [illegible] ವರ್ಷ ವಯಸ್ಸಿನ [illegible] ರವರು ಸೈಕಲ್ ಮೇಲೆ ೧೬ ೮೦೦ ಮೈಲಿ ಪ್ರವಾಸ ಮಾಡಿ ಈಗ [illegible] ನಗರಕ್ಕೆ ಹೋಗಿ [illegible] ತ್ತಾರೆ [illegible] ದಿಂದ [illegible] ವರೆಗೂ ಅವರ ಪ್ರವಾಸ [illegible] ದೊಡ್ಡ ಮತ್ತು ಸಣ್ಣ ಪಟ್ಟಣಗಳನ್ನು [illegible] ಸಂದರ್ಶಿಸಿರುವರು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible]

### ಶ್ರೀ ಶಾರದಾ ಯೂನಿಯನ್ನಿನ ಚುನಾವಣೆಗಳು

ಇದೇ ಮಾಹೆ ೧೧ ನೇ [illegible] ಘಂಟೆಗೆ [illegible] ಸಂಘದ ಸದಸ್ಯರ ಸಭೆ [illegible] ವಿದ್ಯಾರ್ಥಿ [illegible] ಸಂಘದ ಸದಸ್ಯರಲ್ಲಿ [illegible]

### ಇದು ನಿಮಗೆ ಗೊತ್ತೇ?

[illegible]


**ಬಿಸ್ಕತ್ತುಗಳು, ಬನ್ನು ಮತ್ತು ಬ್ರೆಡ್ಡುಗಳು**

[illegible]

**ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,**

( [illegible] )

[illegible] ಮೈಸೂರು


Edited Printed and Published by A R Nagarajan at Sadhvi Press D Subbiah Road Mysore

## ಟಿಕೆಟ್ಟಿಲ್ಲದ ಪ್ರಯಾಣಕ್ಕಾಗಿ ೩,೦೦೦ ರೂ ವಸೂಲಿ

ತುಂಗಭದ್ರಾ ಜಲಾಶಯದಲ್ಲಿ ಕಾಮಗಾರಿ ಕೆಲಸ ನಡೆಸುತ್ತಿರುವ ಬೆಂಗಳೂರಿನ ಕಂಟ್ರಾಕ್ಟರರೊಬ್ಬರು ಕಳೆದ ಶುಕ್ರವಾರ ೨೪೩ ಮಂದಿ ಕೂಲಿಯಾಳುಗಳನ್ನು ಬೆಂಗಳೂರಿನಿಂದ ಹೊಸಪೇಟೆಗೆ ರೈಲಿನಲ್ಲಿ ಟಿಕೆಟ್ಟಿಲ್ಲದೆ ಕರೆದುಕೊಂಡು ಹೋಗ[illegible] ಅಪರಾಧಕ್ಕಾಗಿ ಗುಂತಕಲ್ಲಿನ [illegible] ರೈಲ್ವೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಅವರಿಂದ ೩ ೦೦೦ ರೂ ದಂಡ ವಸೂಲು ಮಾಡಿದರೆಂದು ವರದಿಯಾಗಿದೆ. ರೈಲ್ವೆ ಟಿಕೆಟ್ ಪರಿಶೀಲಿಸುವ ಅಧಿಕಾರಿಗಳು ಗುಂತಕಲ್ಲಿನಲ್ಲಿ ಮೇಲ್ಕಂಡ ಕಂಟ್ರಾಕ್ಟರರೂ ಮತ್ತು ಕೂಲಿಯವರೂ ಟಿಕೆಟ್ಟಿಲ್ಲದೆ ಪ್ರಯಾಣ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿದಾಗ, ಕಂಟ್ರಾಕ್ಟರರು ೧೬೦ ಮಂದಿ ಕೂಲಿಗಳಿಗೆ ಗುಂತಕಲ್ಲಿನವರೆಗೆ ಮಾಮೂಲಿನ ಮತ್ತು ಹೆಚ್ಚಿನ ಚಾರ್ಜ ಕೊಟ್ಟು, ಅಲ್ಲಿಂದ ಮುಂದಕ್ಕೆ ಹೊಸಪೇಟೆಯವರೆಗೆ ೨೪೩ ಕೂಲಿಗಳಿಗೂ ಟಿಕೆಟ್ಟು ಕೊಳ್ಳಲು ಒಪ್ಪಿ [illegible] ಕೂಲಿಗಳಿಗೆ ಬೆಂಗಳೂರಿನಿಂದ ಗುಂತಕಲ್ಲಿಗೆ ಚಾರ್ಜು ಮತ್ತು ಹೆಚ್ಚಿನ ದರವನ್ನು ಕೊಡಲು ನಿರಾಕರಿಸಿದುದಕ್ಕಾಗಿ ಅವರ ಮೇಲೆ ಮೊಕದ್ದಮೆ ಹೂಡಲಾಗಿದ್ದಿತು

## ಸೌದೆ ಹಿಂದೆ ಬಿದ್ದು ಮರಣ

[illegible] ಬಳಿ ಮನ್ನಾನೂರು [illegible] ಸೌದೆ ಹಿಂದೆ [illegible] ಸೌದೆ ತುಂಬಿದ [illegible] ಮೃತಪಟ್ಟರೆಂದು ವರದಿಯಾಗಿದೆ ಈ ಸುದ್ದಿಯನ್ನು ತಿಳಿದ ಆತನ ಪಕ್ಕದ ಮನೆಯ [illegible] ನೋಡಲು ಹೋದಾಗ, ಅಲ್ಲಿ ಒಂದು ಹಾವು [illegible] ಕಚ್ಚಿದ್ದರಿಂದ [illegible] ಕಚ್ಚಿದ್ದರಿಂದ ಮೃತಪಟ್ಟರೆಂದು ಗೊತ್ತಾಗಿದೆ

## ಕಳ್ಳ ನಾಲೆಯಲ್ಲಿ ಸಿಕ್ಕಿ ಮೂವರು ತರುಣರ ಮರಣ

ಚನ್ನಪಟ್ಟಣದ ನಾಲ್ಕು ಮಂದಿ ತರುಣರು ಕಳೆದ [illegible] ನದಿಯಲ್ಲಿ ಈಜಲು ಹೋಗಿ [illegible] ಮೂವರು ಕಳ್ಳ ಸುಳಿಯಲ್ಲಿ ಸಿಕ್ಕಿ ಮೃತಪಟ್ಟರೆಂದೂ ಒಬ್ಬನನ್ನು ರಕ್ಷಿಸಲಾಯಿತೆಂದೂ ವರದಿಯಾಗಿದೆ

## ಕೆರಾಚಿಯಲ್ಲಿ ೨೦ ವರ್ಷಗಳಿಂದಲೂ ಇಲ್ಲದ ಮಳೆ

ಕಳೆದ ೨೦ ವರ್ಷಗಳಿಂದಲೂ ಇಲ್ಲದಿದ್ದಂತಹ ಭಾರಿ ಮಳೆಯು ಕರಾಚಿಯಲ್ಲಿ ಆಗಿ, ಅನೇಕ ಮನೆಗಳ ಕುಸಿದುವೆಂದು ಹೇಳಲಾಗಿದೆ. ರೈಲು ವಿಮಾನಗಳ ಸಂಚಾರಕ್ಕೆ ಅಡ್ಡಿಯಾಗಿದೆ

## ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದ ನೀರಿನ ಮಟ್ಟವು [illegible] ದಿನ [illegible] ಅಡಿಗಳಷ್ಟಿದೆ

## ಮಂಡಿ ಮಾರ್ಕೆಟ್ಟಿನಲ್ಲಿ ಅನೈರ್ಮಲ್ಯ

ಮೈಸೂರ ಮಂಡಿ ಮಾರ್ಕೆಟ್ಟಿನ ಒಳಭಾಗದಲ್ಲಿ [illegible] ಘಂಟೆಯ ಮೇಲೆ ಎಲ್ಲೆಲ್ಲಿಯೂ [illegible] ಮಾರ್ಕೆಟ್ಟು [illegible] ನೈರ್ಮಲ್ಯ, ಅತ್ಯಂತ ಶೋಚನೀಯ ಮಂಡಿ ಮೊಹಲ್ಲೆಯ ಮುನಿಸಿಪಲ್ ಕೌನ್ಸಿಲರ್ ಮಹಾಶಯರು [illegible] ಭೇಟಿಕೊಟ್ಟು [illegible] ಮಾರ್ಕೆಟ್ಟಿನ ಸ್ವಚ್ಛತೆಯ ವಿಷಯವಾಗಿ [illegible] ನಡೆಯುತ್ತಿರಬೇಕಾದ ಅವಶ್ಯಕ ಈ ಮಾರ್ಕೆಟ್ಟಿಗೆ ಮುನಿಸಿಪಲ್ ಅಧಿಕಾರಿಗಳು ದಯವಿಟ್ಟು [illegible] ಮಧ್ಯಾಹ್ನಾನಂತರ ಭೇಟಿ ದಯಪಾಲಿಸಿ [illegible] ಸುತ್ತಮುತ್ತಲಿನ [illegible] ಅಂಗಡಿಗಳೂ ಹೋಟೇಲುಗಳೂ ಹೆಚ್ಚು ಸ್ವಚ್ಛತೆಯಿಂದ ಆರೋಗ್ಯಪ್ರದವಾಗಿರುತ್ತವೆ. ಸರಿಯಾಗಿ ಕೆಲಸ ಮಾಡದ ಇಲ್ಲಿನ [illegible] ಬದಲಾಯಿಸಿದರೂ [illegible] ಸ್ವಚ್ಛತೆ ಸಂಯೋಗಬಹುದು

ಮೊಹಲ್ಲಾ ನಿವಾಸಿ


ಶುಚಿ! ರುಚಿ!! ವಿಶಾಂತಿ!!!

## ಶ್ರೀ ಚಾಮುಂಡೇಶ್ವರಿ ಭವನ

ಇರ್ವಿನ್ ರಸ್ತೆ ಮೈಸೂರು

1 8 53 ರಿಂದ ಸ್ಪೆಷಲ್ ತಯಾರಿಕೆಗಳು ಮತ್ತು ಇಳಿಸಿದ ದರ

ಶ್ರೇಷ್ಠವಾದ 'ಎ' ಕ್ವಾಲಿಟಿ ಕಾಫಿ ಅರ್ಧ ಕಪ್ 0-1-6

ಬೆಣ್ಣೆ ಪಲ್ಯ ಮತ್ತು ಸ್ಪೆಷಲ್ ಚಟ್ನಿಯೊಡಗೂಡಿದ ಸಾದ ದೋಸೆಗಳು, ಮಸಾಲೆ ದೋಸೆ ಈರುಳ್ಳಿ ಮಸಾಲೆ ದೋಸೆ ಬೋಂಡಾ ಸಾಂಬಾರ್ ಮಸಾಲೆ ವಡೆ, ಮಸಾಲೆ [illegible] ಸ್ಪೆಷಲ್ ಕೇಸರಿ ಬಾತ್ [illegible]

ಮೇಲ್ಕಂಡ ರುಚಿಕರವಾದ ಪದಾರ್ಥಗಳನ್ನು ಶ್ರೇಷ್ಠ ರೀತಿಯಲ್ಲಿ ಎಕ್ಸ್‌ಪರ್ಟ್ ಸಹ ಬೇಕರಿ ಸ್ಪೆಷಲಿಸ್ಟರಿಂದ ತಯಾರಿಸಿ ಶುಚಿಯಾದ ಟಾಳೆ ಎಲೆ ಮತ್ತು ಕಪಾಟುಗಳ ಮೇಲೆ ಒದಗಿಸಲಾಗುತ್ತದೆ

ರಿಜಿಸ್ಟ್ರೇಷನ್ ನಂ 792

ಶ್ರೀ ಶಂಕರ ಸಾರಂಗ

ಸಂಚಿಕೆ ಪತ್ರಿಕೆ 3 ಕಾಸು

ಚಂದಾ ದರ
ವಿಜಾಂಟರ ಗಳ ವ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿ[illegible] ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨] MYSORE MONDAY 10-8-1953 ಮೈಸೂರು ಸೋಮವಾರ ೧೦-೮-೧೯೫೩ [ಸಂ ೯೧೦

# – ಷೇಕ್ ಅಬ್ದುಲ್ಲಾ ಮತ್ತು ೩೧ ಜನರ ದಸ್ತಗಿರಿ –

## ದೆಹಲಿಗೆ ಮೈಸೂರು ಮುಖಂಡರ ಪ್ರಯಾಣ

ಸ್ವಂ ವ ವರದಿ] ಬೆಂಗಳೂರು ೧೦

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್ ಚನ್ನಯ್ಯ ಮತ್ತು ಟಿ ಸುಬ್ರಹ್ಮಣ್ಯರವರು ನೆನ್ನೆ ದೆಹಲಿಯ ಅಭಿಮುಖವಾಗಿ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು ಅವರು ದೆಹಲಿಯಲ್ಲಿ ನೆಹರೂರವರೊಡನೆ ಸಂಸ್ಥಾನದ ಕಾಂಗ್ರೆಸ್ ಪರಿಸ್ಥಿತಿ ಮತ್ತು ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ಇತ್ತೀಚೆಗೆ ನಡೆದಿರುವ ಘಟನೆಗಳ ಬಗ್ಗೆ ಮಾತುಕತೆ ನಡೆಸಲಿರುವರು. ಅವರುಗಳು ನೆಹರೂರವರಿಗೆ ಒಂದು ಮನವಿಯನ್ನು ತೆಗೆದುಕೊಂಡು ಹೋಗಿರುವರೆಂದು ಗೊತ್ತಾಗಿದೆ

## ಕಾಡುಜನರ ಮತಾಂತರಕ್ಕಾಗಿ ಪ್ರತಿಭಟನೆ

ನಮ್ಮ ದೇಶದ ಗುಡ್ಡಗಾಡುಗಳಲ್ಲಿರುವ ಕಾಡುಜನರಿಗೆ ದುರಾಸೆಗಳನ್ನು ತೋರಿಸಿ ಅವರನ್ನು ಕ್ರೈಸ್ತ ಮತಕ್ಕೆ ಸೇರಿಸಿಕೊಳ್ಳಲು ಪರಕೀಯ ಪಾದ್ರಿಗಳು ನಡೆಸುತ್ತಿರುವ ಪ್ರಯತ್ನಗಳನ್ನು ಭಾರತ ಸರ್ಕಾರದ ಗಮನಕ್ಕೆ ತಂದು ಅದನ್ನು ತಡೆಗಟ್ಟುವಂತೆ ಕೋರಬೇಕೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಗುಡ್ಡಗಾಡಿನ ಜನರ ಹಿತ ರಕ್ಷಣಾ ಸಮಿತಿಯವರು ನಿರ್ಣಯ ಮಾಡಿರುತ್ತಾರೆ ಗೃಹ ಮಂತ್ರಿಗಳಾದ ಡಾ|| ಕೆ ಎನ್ ಕಟ್ಜೂರವರಲ್ಲಿ ನಿಯೋಗ ಹೋಗಿ ವಿವರಗಳನ್ನು ಅರಿಕೆ ಮಾಡಬೇಕೆಂದೂ ಸಹ ತೀರ್ಮಾನ ಮಾಡಿರುತ್ತಾರೆ

## ಅರ್ಜಿಯನ್ನು ನುಂಗಿದ ಗೂಳಿ

ಸೂರತ್ತಿನ ಬಳಿ ವೈಯಕ್ತಾರ ಗ್ರಾಮದಲ್ಲಿ ಒಂದು ಗೂಳಿಯು ಅರ್ಜಿಯೊಂದರ ಪ್ರತಿಯನ್ನು ನುಂಗಿ ಅಲ್ಲಿನ ನಿವಾಸಿಗಳಿಗೆ ಬಹಳ ವಿಸ್ಮಯವನ್ನುಂಟುಮಾಡಿತೆಂದು ವರದಿಯಾಗಿದೆ ಗ್ರಾಮಾಸ್ತ್ರೀಯರ ಶಾಸನಕ್ಕೆ ವಿರುದ್ಧವಾಗಿ ಅಲ್ಲಿನ ನಿವಾಸಿಗಳು ಆ ಅರ್ಜಿಯಲ್ಲಿ ಅಹವಾಲುಗಳನ್ನು ಬರೆದು ಒಂದು ಪೆಟ್ಟಿಗೆಯಲ್ಲಿಟ್ಟಿದ್ದರು ದಾರಿಯಲ್ಲಿ ಅಲೆಯುತ್ತಿದ್ದ ಗೂಳಿಯು ಪೆಟ್ಟಿಗೆ ಬಾಗಿಲನ್ನು ತೆಗೆದು ಅರ್ಜಿಯ ಕಾಗದವನ್ನು ತಿಂದುಹಾಕಿತೆಂದು ಹೇಳಲಾಗಿದೆ

## ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಭೇಟಿ

ವಿದ್ಯಾ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ನೆನ್ನೆ ಇಲ್ಲಿನ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಭೇಟಿ ಇತ್ತು, ಪರಿಶೀಲನೆ ನಡೆಸಿದರು ಅವರನ್ನು ಪುಸ್ತಕ ಭಂಡಾರದ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್ ಸುಬ್ಬರಾಯರೂ, ಕಾರ್ಯದರ್ಶಿಯವರಾದ ಶ್ರೀ ಎಚ್ ಶ್ರೀನಿವಾಸಮೂರ್ತಿಯವರೂ ಸಮಿತಿ ಸದಸ್ಯರೂ ಸ್ವಾಗತಿಸಿದರು ಭಂಡಾರದ ಅಭಿವೃದ್ಧಿ ಬಗ್ಗೆ ಅವರು ಸಮಿತಿಯವರೊಡನೆ ಸಮಾಲೋಚನೆ ನಡೆಸಿ ಸೂಕ್ತ ಸಲಹೆಗಳನ್ನು ಕೊಟ್ಟರು ಭಂಡಾರಕ್ಕೆ ಧನ ಸಹಾಯ ಕೊಡುವ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಸಚಿವರು ಭರವಸೆಯಿತ್ತರು.

## ಕರ್ನಾಟಕ ಪ್ರಾಂತಕ್ಕಾಗಿ ಸತ್ಯಾಗ್ರಹವಿಲ್ಲ

ಕರ್ನಾಟಕ ಪ್ರಾಂತಕ್ಕಾಗಿ ಪ್ರತಿಬಂಧಕಾಜ್ಞೆಗಳನ್ನು ಮುರಿದು ಸತ್ಯಾಗ್ರಹ ನಡೆಸಲೂ ಮತ್ತು ಸ್ವಾತಂತ್ರ್ಯ ದಿನೋತ್ಸವದಂದು ಕಪ್ಪು ಬಾವುಟಗಳ ಪ್ರದರ್ಶನವನ್ನು ನಡೆಸಬೇಕೆಂದೂ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯವರು ಹಿಂದೆ ಮಾಡಿದ್ದ ನಿರ್ಣಯವನ್ನು ಈಗ ಬದಲಾಯಿಸಲಾಗಿದೆ ನೆನ್ನೆಯಿಂದ ಒಂದು ವಾರ ಶಾಂತಿಯುತವಾಗಿ ಕರ್ನಾಟಕ ವಾರವನ್ನು ಆಚರಿಸುವಂತೆ ಸಮಿತಿಯವರು ತೀರ್ಮಾನಿಸಿರುತ್ತಾರೆ ಸಮಿತಿಯ ಸಭೆಯು ನೆನ್ನೆ ಕೆ ಆರ್ ಕಾರಂತರ ಅಧ್ಯಕ್ಷತೆಯಲ್ಲಿ ನಡೆಯಿತು

## ಬಿಜಾಪುರದಲ್ಲಿ ೭೦ ಜನರ ಬಂಧನ

ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನವರ ಕರೆ ಪ್ರಕಾರ ನೆನ್ನೆ ಬಿಜಾಪುರದಲ್ಲಿ ಕರ್ನಾಟಕ ವಾರಾಚರಣೆ ಸಂಬಂಧವಾಗಿ ಪ್ರದರ್ಶನ ನಡೆಸಿದ ಜನರು ಹಿಂಸಾ ಕೃತ್ಯಗಳಲ್ಲಿ ತೊಡಗಿದುದಕ್ಕಾಗಿ ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರು ೭೦ ಜನರ ಬಂಧನವಾಗಿದೆ ಹುಬ್ಬಳ್ಳಿಯ ಮಾಜಿ ಪಾರ್ಲಿಮೆಂಟಿನ ಸದಸ್ಯ ಬಿ ಎನ್ ಮುನವಳ್ಳಿ ಮತ್ತು ವಕೀಲ ಚನ್ನಪ್ಪ ಎಂಬ ಇಬ್ಬರು ಮುಖಂಡರನ್ನು ಬಂಧಿಸಲಾಗಿದೆ.

## ಮುಂಗುಸಿಗೆ ವೈಭವದ ಶವ ಸಂಸ್ಕಾರ

ಕಲ್ಕತ್ತೆಯ ಆಲೂಗೆಡ್ಡೆ ವ್ಯಾಪಾರಿಯೊಬ್ಬನು ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಸಾಕುತ್ತಿದ್ದ ಮುಂಗುಸಿಯೊಂದು ಸತ್ತುಹೋಗಲಾಗಿ ಅದಕ್ಕೆ ವಿಶೇಷವಾದ ಅಲಂಕಾರಗಳನ್ನು ಮಾಡಿ ಮೆರವಣಿಗೆ ಮೂಲಕ ಸ್ಮಶಾನಕ್ಕೆ ಕೊಂಡೊಯ್ದು ಶಾಸ್ತ್ರೋಕ್ತ ವಿಧಿಗಳ ಪ್ರಕಾರ ದಹನ ಸಂಸ್ಕಾರಗಳನ್ನು ನಡೆಸಲಾಯಿತೆಂದು ತಿಳಿದುಬಂದಿದೆ

## ದಕ್ಷಿಣ ಕೊರಿಯದಲ್ಲಿ ರೈಲು ಅಪಘಾತ

ದಕ್ಷಿಣ ಕೊರಿಯದ ಒಂದು ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದ ಪ್ರಯಾಣಿಕರ ಗಾಡಿಗೆ ನೆನ್ನೆ ಗೂಡ್ಸ್ ರೈಲು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮವಾಗಿ ೧೩ ಜನರು ಸತ್ತು ೧೮ ಜನರು ಗಾಯಗೊಂಡಿರುವರು.

## ವೈಗಳಿಗಾಗಿ ಜುಲ್ಮಾನೆ

ಗುಂಡ್ಲುಪೇಟೆ ನಾಗಯ್ಯ ಎಂಬುವನು ಕಳೆದ ತಿಂಗಳು ೧೩ನೇ ತಾ|| ರಾತ್ರಿ ರಾಜಧಾನಿಯ ಬಸ್ ಟರ್ಮಿನಸ್ ಬಳಿ ಪತ್ರಿಕೆಗಳನ್ನು ಮಾರುತ್ತಿದ್ದ ಒಬ್ಬ ಹುಡುಗನನ್ನು ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದನೆಂದೂ, ಆ ರೀತಿ ಮಾಡಬಾರದೆಂದು ಹೇಳಿದ ಪೋಲೀಸಿನವರನ್ನು ಸಹಾ ಬಯ್ದನೆಂದೂ ದೇವರಾಜ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಎರಡನೇ ನಗರ ನ್ಯಾಯಾಧೀಶರಾದ ಶ್ರೀ ಟಿ ಬಿ ನಂಜರಾಜೆ ಅರಸಿನವರು ಈ ದಿನ ತೀರ್ಪಿತ್ತು, ಅಪರಾಧಿಗೆ ೧೫ ರೂ ಜುಲ್ಮಾನೆ, ತಪ್ಪಿದರೆ ೭ ದಿನ ಸಾದಾ ಸಜಾವನ್ನು ವಿಧಿಸಿರುತ್ತಾರೆ

## ಷೇಕ್ ಅಬ್ದುಲ್ಲಾ ಮತ್ತು ಇತರ ೩೧ ಜನರ ಬಂಧನ

### ಕಾಶ್ಮೀರದಲ್ಲಿ ಕೋಲಾಹಲ ಘಟನೆಗಳು

ಮುಖ್ಯ ಮಂತ್ರಿ ಸ್ಥಾನದಿಂದ ವಜಾ ಮಾಡಲ್ಪಟ್ಟ ಷೇಕ್ ಅಬ್ದುಲ್ಲಾರವರು ನೆನ್ನೆ ಶ್ರೀನಗರಕ್ಕೆ ೫೦ ಮೈಲಿ ದೂರವಿರುವ ಗುಲ್ಮಾರ್ಗ್ ನಗರದಲ್ಲಿ ದಸ್ತಗಿರಿಯಾದರು ಅವರನ್ನು ಉದ್ಧಾಮಪುರದ ಅರಮನೆಯೊಂದರಲ್ಲಿ ಇಡಲಾಗಿದೆ ಮಾಜಿ ರೆವಿನ್ಯೂ ಮಂತ್ರಿ ಮಿರ್ಜಾ ಅಫ್ಜಲ್ ಬೇಗ್, ವಾರ್ತಾ ಮತ್ತು ಪ್ರಸಾರ ಇಲಾಖೆಯ ಡೈರೆಕ್ಟರ್ ಜನ್ನಿ, ಷೇಕ್ ಅಬ್ದುಲ್ಲಾರವರ ಖಾಸಗಿ ಕಾರ್ಯದರ್ಶಿ ರಾಯಿನಾ, ಮುಖ್ಯ ಪ್ರಕಟಣಾಧಿಕಾರಿ ಬಿ ಪಿ ಶರ್ಮ, ಪ್ರಸ್ತುತ ಬ್ಯೂರೋವಿನ ಡೈರೆಕ್ಟರ್ ಹಮೀದುಲ್ಲಾ ಕೌಲ್ ಮುಂತಾದ ೩೧ ಜನ ಇತರರನ್ನು ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿ ಮಾಡಲಾಗಿದೆ

ಅವರುಗಳ ಮೇಲೆ ಹೊರಿಸಿರುವ ಆಪಾದನೆಗಳು ಲಂಚ ಪಕ್ಷಪಾತ ಮತ್ತು ಸಂಸ್ಥಾನದ ಏಳಿಗೆಗೂ ಶಾಂತಿಗೂ ಭಂಗ ತರುವ ವಿದೇಶೀ ಸಂಪರ್ಕ ಈ ಆಪಾದನೆಗಳನ್ನು ಮಾಡಲಾಗಿದೆ

ಷೇಕ್ ಅಬ್ದುಲ್ಲಾರವರು ಹತ್ತು ವಾರಗಳಿಂದ ಇತ್ತೀಚೆಗೆ ತೋರಿದ ವಿರುದ್ಧ ವರ್ತನೆ ಮತ್ತು ಅವರ ಭಾಷಣಗಳಿಂದ ಅವರ ಮಂತ್ರಿಮಂಡಲದಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಬೆಳೆದು ಕಳೆದ ೭ನೇ ತಾ|| ಅದು ಒಂದು ಪ್ರಮಾದದ ಘಟ್ಟಕ್ಕೆ ಬಂದಿತೆಂದೂ, ಆರೋಗ್ಯ ಮಂತ್ರಿ ಶಾಮಲಾಲ್ ಸರಾಫ್‌ರನ್ನು ರಾಜೀನಾಮೆ ಕೊಡುವಂತೆ ಅವರು ಕೋರಿ, ಅವರು ಹಾಗೆ ಮಾಡಲು ನಿರಾಕರಿಸಿದ ಮೇಲೆ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯ ಬಂದು ಜಂಟಿ ಜವಾಬ್ದಾರಿಯ ತತ್ವದ ಮೇಲೆ ಕೆಲಸ ನಡೆಯುವುದೇ ದುಸ್ತರವಾಗಿ ಷೇಕ್ ಅಬ್ದುಲ್ಲಾರವರು ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದರೆಂದೂ ಗೊತ್ತಾಗಿದೆ

ಈ ವಿಷಯವು ಅಲ್ಲಿನ ರಾಜ್ಯಾಧಿಪತಿ ಕರಣಸಿಂಗರಿಗೆ ತಿಳಿದು ಅವರು ಷೇಕ್ ಅಬ್ದುಲ್ಲಾರವರನ್ನು ಮೊನ್ನೆ ಸಂಜೆ ಕರೆಸಿಕೊಂಡು ಮಂತ್ರಿಮಂಡಲದಲ್ಲಿ ಸೌಹಾರ್ದವುಂಟಾಗುವ ಹಾಗೆ ವರ್ತಿಸಲು ಸಲಹೆ ಮಾಡಿದರೆಂದೂ, ತಮ್ಮ ಅನುಮತಿಯಲ್ಲಿ ಮಂತ್ರಿಮಂಡಲದ ಸಭೆಯು ನಡೆದು ಅಲ್ಲಿ ಪರಸ್ಪರ ನಿರ್ಭೀತ ಮತ್ತು ಸ್ವತಂತ್ರವಾದ ವಾತಾವರಣದಲ್ಲಿ ಚರ್ಚಿಸಬಹುದೆಂದು ಕೋರಿದರೆಂದೂ ಈ ಸಲಹೆಗೆ ಷೇಕ್ ಅಬ್ದುಲ್ಲಾರವರು ಒಪ್ಪದೆ ಹೊರಟುಹೋದರೆಂದೂ ಗೊತ್ತಾಗಿದೆ

ಷೇಕ್ ಅಬ್ದುಲ್ಲಾರವರಿಗೆ ದಸ್ತಗಿರಿ ವಾರಂಟನ್ನು ಅಧಿಕಾರಿಗಳು ತೋರಿಸಿದಾಗ, ಅವರು ರೋಷಗೊಂಡು ಗರ್ಜಿಸಿದರೆಂದು ಹೇಳಲಾಗಿದೆ.

## ಶ್ರೀನಗರದಲ್ಲಿ ಪುಂಡರ ಮೇಲೆ ಗುಂಡು

ಶ್ರೀ ನಗರದಲ್ಲಿ ಹಲವು ಪುಂಡರು ನೆನ್ನೆ ಮಧ್ಯಾಹ್ನ ಚಿಕ್ಕಚಿಕ್ಕ ಮೆರವಣಿಗೆಗಳಲ್ಲಿ ಬಂದು ಕಲ್ಲುಗಳನ್ನೆಸೆದು, ಘೋಷಣೆಗಳನ್ನು ಕೂಗುತ್ತಿದ್ದರೆಂದೂ ಅವರ ಮೇಲೆ ಪೋಲೀಸರು ಗುಂಡು ಹಾರಿಸಲಾಗಿ ಇಬ್ಬರು ಪ್ರದರ್ಶನಕಾರರು ಮಡಿದರೆಂದೂ ವರದಿಯಾಗಿದೆ

## ನಿಟ್ಟೂರು ಶ್ರೀನಿವಾಸರಾಯರು ಹೊಸ ಅಡ್ವೊಕೇಟ್ ಜನರಲ್

### ಅಸಿಸ್ಟೆಂಟ್ ಅಡ್ವೊಕೇಟ್ ಜನರಲ್ಲಾಗಿ ಬಿ ಚನ್ನಪ್ಪನವರ ನೇಮಕ

ಸ್ವಂ ವ ವರದಿ] ಬೆಂಗಳೂರು ೧೦

ಇಲ್ಲಿನ ಸುಪ್ರಸಿದ್ಧ ಅಡ್ವೊಕೇಟರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರನ್ನು ಸರ್ಕಾರದವರು ೩ ವರ್ಷಗಳ ಕಾಲ ಅಡ್ವೊಕೇಟ್ ಜನರಲ್ಲಾಗಿ ೭೦೦ ರೂ ಸಂಬಳದ ಮೇಲೆ ನೇಮಿಸಿರುತ್ತಾರೆ ಅವರು ಇಂದ ಶ್ರೀ ಸೋಮನಾಥ ಅಯ್ಯರ್‌ರವರಿಂದ ಚಾರ್ಜು ವಹಿಸಿಕೊಂಡರು

ಸರ್ಕಾರದವರ ಅಸಿಸ್ಟೆಂಟ್ ಅಡ್ವೊಕೇಟ್ ಜನರಲ್ ಎಂಬ ಹುದ್ದೆಯನ್ನು ನಿರ್ಮಿಸಿ, ಅದಕ್ಕೆ ಚಿತ್ರದುರ್ಗದ ಸರ್ಕಾರಿ ಪ್ಲೀಡರ್ ಶ್ರೀ ಜಿ ಚನ್ನಪ್ಪನವರನ್ನು ನೇಮಿಸಿರುತ್ತಾರೆ ಅವರಿಗೆ ತಿಂಗಳಿಗೆ ೫೦೦ ರೂ ವೇತನವನ್ನು ಕೊಡಲಾಗುವುದು

## ಕಾಶ್ಮೀರಕ್ಕೂ, ಪ್ರಜಾ ಸತ್ತಾತ್ಮಕ ಹೋರಾಟಕ್ಕೂ ದ್ರೋಹ

### ಹೊಸ ಮುಖ್ಯ ಮಂತ್ರಿ ಗುಲಾಂ ಮಹಮದ್‌ರವರ ಹೇಳಿಕೆ

ಕಾಶ್ಮೀರದ ಹೊಸ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ಹೇಳಿಕೆಯೊಂದನ್ನಿತ್ತು ರಾಷ್ಟ್ರೀಯ ನಾಶವನ್ನು ತಪ್ಪಿಸುವ ಸಲುವಾಗಿ ತಾವು ಮುಖ್ಯ ಮಂತ್ರಿ ಅಧಿಕಾರವನ್ನು ವಹಿಸಿಕೊಳ್ಳಬೇಕಾಯಿತೆಂದು ತಿಳಿಸಿ, ಇತ್ತೀಚಿನ ವಿದ್ಯಮಾನಗಳಿಂದ ದೇಶದ ಹಿತಗಳಿಗೂ ಮತ್ತು ಪ್ರಜಾ ಸತ್ತಾತ್ಮಕ ಹೋರಾಟಕ್ಕೂ ದ್ರೋಹವೆಸಗುವ ಘಟನೆಗಳು ನಡೆಯುತ್ತಿದ್ದುವೆಂದೂ ಈ ಪ್ರಯತ್ನಗಳಿಗೆ ವಿದೇಶೀ ಸರ್ಕಾರಗಳ ಅಂತರಂಗ ಒಪ್ಪಿಗೆ ಮತ್ತು ಬೆಂಬಲಗಳಿದ್ದುವೆಂದೂ ಹೇಳಿರುತ್ತಾರೆ

### ಮುನಿಸಿಪಲ್ ನೌಕರನ ಮೇಲೆ ಕೈ ಮಾಡಿದುದಕ್ಕೆ ಜುಲ್ಮಾನೆ

ರಾಜಧಾನಿಯ ಕೆ ಆರ್ ಮೊಹಲ್ಲೆಯ ಹುಲ್ಲಿನ ಬೀದಿಯ ದೇವಮ್ಮ ಎಂಬುವಳು ಕಳೆದ ಮೇ ತಿಂಗಳು ೧೯ನೇ ತಾ|| ವಾಣಿವಿಲಾಸ ಮಾರ್ಕೆಟ್ಟಿನ ಫುಟ್‌ಪಾತಿನ ಮೇಲೆ ಮುಸುರೆ ಚೆಲ್ಲುತ್ತಿದ್ದಾಗ ಆ ರೀತಿ ಗಲೀಜು ಮಾಡಬಾರದೆಂದು ಬುದ್ಧಿವಾದ ಹೇಳಿದ ಮುನಿಸಿಪಲ್ ನೌಕರ ಲಕ್ಕಯ್ಯನವನ್ನು ಬಯ್ದುದಲ್ಲದೆ ತನ್ನ ಮೊಹಲ್ಲೆಯ ಬೈರಪ್ಪನೆಂಬುವನಿಗೆ ಚಾಡಿ ಹೇಳಿದಳೆಂದೂ ಅವನು ಲಕ್ಕಯ್ಯನನ್ನು ಹೊಡೆದನೆಂದೂ ಕೆ ಆರ್ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಎರಡನೇ ನಗರ ನ್ಯಾಯಾಧೀಶರು ಈ ದಿನ ತೀರ್ಪಿತ್ತು, ಬೈರಪ್ಪನಿಗೆ ೪೦ ರೂ. ಜುಲ್ಮಾನೆ ತಪ್ಪಿದರೆ ೫೧ ದಿನ ಸಾದಾ ಸಜಾ ಶಿಕ್ಷೆಯನ್ನೂ ದೇವಮ್ಮನಿಗೆ ೨೦ ರೂ ಜುಲ್ಮಾನೆ ತಪ್ಪಿದರೆ ೧೦ ದಿನ [illegible] ದಾ ಸಜಾ ಶಿಕ್ಷೆಯನ್ನೂ ವಿಧಿಸಿರುತ್ತಾರೆ

## ನಿದ್ರಿಸುತ್ತಿದ್ದಾಗ ಬಾಯಿಗೆ ಹಾವು ನುಗ್ಗಿ ಮರಣ

ಅಲಹಾಬಾದಿನ ಬಳಿ ಬಿಜನ [illegible]ನಲ್ಲಿ ಒಬ್ಬಾತನು ಮಲಗಿ ನಿದ್ರಿಸುತ್ತಾ ಬಾಯನ್ನು ದೊಡ್ಡದಾಗಿ ತೆಗೆದು ಗೊರಕೆ ಹೊಡೆಯುತ್ತಿದ್ದಾಗ, ಹಾವೊಂದು ಅವನ ಹೊಟ್ಟೆಯೊಳಗೆ ಪ್ರವೇಶಿಸಿ ಅವನು ಮರಣಹೊಂದನೆಂದು ಹೇಳಲಾಗಿದೆ

## ಕಾವಿರೆಡ್ಡಿಯವರ ಉಪವಾಸ ವು ಕ್ತಾ ಯ

ಬಳ್ಳಾರಿಯು ಬಗ್ಗೆ ಮಿಶ್ರಾರವರ ವರದಿಯ ನ್ನು ವಿರೋಧಿಸಿ ಆ ತ ಸ್ಥಳಗಳು ಮೈಸೂರಿಗೆ ಸೇರುವ ಬಗ್ಗೆ ಜನಮತಗಣನೆಯಾಗಬೇಕೆಂದು ಸೂಚಿಸಿ ಆಂಧ್ರದ ಕಾವಿ ರೆಡ್ಡಿಯವರು ೫೦ ದಿನಗಳಿಂದಲೂ ನಡೆಸುತ್ತಿದ್ದ ಉಪವಾಸವನ್ನು ನೆನ್ನೆ ಮುಕ್ತಾಯ ಮಾಡಿದರು. ನೆಹರೂರವರ ಸೂಚನೆಗೆ ಗೌರವ ತೋರಿಸಲು ಅವರು ಉಪವಾಸ ನಿಲ್ಲಿಸಿದರು.

## ಕೊಡಗಿನ ಸಿನಿಮಾಗಳಲ್ಲಿ ಧೂಮಪಾನ ನಿಷೇಧ

ಸಾರ್ವಜನಿಕ ಮಂದಿರ ಮತ್ತು ಪ್ರದರ್ಶನಾಲಯದಲ್ಲಿ ಧೂಮಪಾನವನ್ನು ಈ ತಿಂಗಳ ೧ನೇ ತಾರೀಖಿನಿಂದ ಕೊಡಗಿನಲ್ಲಿ ನಿಷೇಧಿಸಲಾಗಿದೆ ಈ ಶಾಸನವನ್ನು ಉಲ್ಲಂಘಿಸಿದವರಿಗೆ ೫೦ ರೂ ವರೆಗೆ ದಂಡ ವಿಧಿಸಲಾಗುವುದು

## ಹೊಸ ಮಾದರಿಯ ೩ನೇ ತರಗತಿ ರೈಲು ಗಾಡಿ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯವರು ... ಬ್ರಾಡ್‌ಗೇಜ್ ರೈಲು ... ತಯಾರಿಸಿ ... ಬೆಂಗಳೂರಿನ ... ಓಡಿಸಲಾಗುವುದು ... ಭಾಗದಲ್ಲಿ ... ಅಳವಡಿಸಲಾಗಿದೆ ...

## ಐದು ವರ್ಷಗಳಲ್ಲಿ ಬಸ್ಸುಗಳ ರಾಷ್ಟ್ರೀಕರಣ

... ಐದು ವರ್ಷ ... ಬಸ್ಸುಗಳನ್ನು ರಾಷ್ಟ್ರೀಕರಿಸಲಾಗುವುದು ... ಸಾರಿಗೆ ಮಂತ್ರಿ ... ಜಗಜೀವನರಾಂರವರು ತಿಳಿಸಿದ್ದಾರೆ

## ಗಂಗೆಯಲ್ಲಿ ದೋಣಿ ಮುಳುಗಿ ೧೫ ಜನರ ಮರಣ

ಕಾನ್ಪುರದ ... ಘಟ್ಟದ ಬಳಿ ಗಂಗೆಯಲ್ಲಿ ದೋಣಿಯೊಂದು ... ೧೫ ಜನರು ನೀರಿನ ಪಾಲಾದರೆಂದು ವರದಿಯಾಗಿದೆ ... ದೋಣಿಯು ತಲೆಕೆಳಗಾಯಿತು

## ಭಾರತದಲ್ಲಿ ಏಳು ಕೋಟಿ ನಿರುದ್ಯೋಗಿಗಳು

... ಏಳು ಕೋಟಿ ... ನಿರುದ್ಯೋಗಿಗಳಿರುವರೆಂದು ... ಲೆಕ್ಕ ... ತಿಳಿದಿದೆ

### ಬೆಳಗೊಳದಲ್ಲಿ ಕಳ್ಳತನಗಳು

... ಕಳ್ಳತನ ... ಹೋದರೆಂದು ... ಈ ಬಗ್ಗೆ ... ಪೊಲೀಸರು ...

... ಶ್ರೀ ಎಂ ಗಂಗಾಧರವರು ಅಧ್ಯಕ್ಷ ... ವ್ಯವಸ್ಥಾಪಕ ... ಮುಖ್ಯ ... ಸಭೆಯು ... ಮುಕ್ತಾಯವಾಯಿತು

## ಕೊಡಗಿನ ಧನಲಕ್ಷ್ಮಿ ಬಗ್ಗೆ ಹೆಚ್ಚಿನ ವೈದ್ಯ ಪರೀಕ್ಷೆ

ಕೆಲವು ದಿನ ತಿಂಗಳಿಂದಲೂ ಅನ್ನ ನೀರನ್ನು ತೊರೆದು ಜೀವಿಸುತ್ತಿರುವ ಕೊಡಗಿನ ಧನಲಕ್ಷ್ಮಿಯ ಬಗ್ಗೆ ವಿವರವಾದ ವೈದ್ಯಕೀಯ ಪರೀಕ್ಷೆ ನಡೆಸಲು ಕೊಡಗಿನ ಸರ್ಕಾರದವರು ... ಒಂದಿದೆ ... ಸೃಷ್ಟಿ ವೈಚಿತ್ರ್ಯದ ರಹಸ್ಯವನ್ನು ವಿಜ್ಞಾನದ ಮೂಲಕ ಕಂಡ ಹಿಡಿಯಲು ಬೆಂಗಳೂರಿನ ಆಸ್ಪತ್ರೆಯಲ್ಲಿ ವಿವರವಾದ ಪರೀಕ್ಷೆ ನಡೆಸಲಾಗುವುದೆಂದೂ ಹೇಳಲಾಗಿದೆ ಈ ಬಗ್ಗೆ ... ಗಲವ ವೆಚ್ಚಕ್ಕಾಗಿ ... ೧೫೦೦ ರೂ ಗಳನ್ನು ಮಂಜೂರು ಮಾಡಿರುವರೆಂದು ಕೊಡಗಿನ ಸಚಿವ ಶ್ರೀ ಮಲ್ಲಪ್ಪನವರು ತಿಳಿಸಿರುವರು

## ಶಾಸನ ಸಭೆಯ ಸದಸ್ಯರಿಗೆ ಗೌರವ ಕೊಡದ ಪೊಲೀಸಿನವನ ವಜಾ

... ಶಾಸನ ಸಭೆಯ ಕಾಂಗ್ರೆಸ್ ... ನ ರವರಿಗೆ ... ಸಲ್ಲಿಸಲು ... ಪೊಲೀಸಿನವನನ್ನು ವಜಾ ಮಾಡಲಾಗಿದೆ ... ಅವಮಾನ ... ಸದಸ್ಯರಿಗೆ ಅಧಿಕಾರಿಗಳು ಗೌರವ ಸಲ್ಲಿಸುವಂತೆ ವಿಧಿ ...

## ಹುಚ್ಚು ಹಿಡಿದ ನರಿಯಿಂದ ಅನೇಕರಿಗೆ ಗಾಯ

... ಹುಚ್ಚು ಹಿಡಿದ ನರಿಯೊಂದ ... ತೀವ್ರ ಗಾಯ ... ಅವರ ತಲೆಯನ್ನು ಪರೀಕ್ಷೆಗೆ ... ಕಳುಹಲಾಗಿದೆ

### ವರ್ಧಂತಿ ಉತ್ಸವ ಮತ್ತು ಸಂಸ್ಕೃತ ಶ್ಲೋಕ ತರಗತಿಗಳ ಆರಂಭೋತ್ಸವ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ... ರಾಜಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರ ವರ್ಧಂತಿ ಉತ್ಸವವೂ ... "ಸಂಸ್ಕೃತ ಶ್ಲೋಕಗಳ ತರಗತಿಗಳ ಆರಂಭೋತ್ಸವ ಸಮಾರಂಭವೂ ... ಅಧ್ಯಕ್ಷತೆಯಲ್ಲಿ ... ಪ್ರಾರ್ಥನೆ ... ಸ್ವಾಗತ ಭಾಷಣ ... ಸಂಸ್ಕೃತ ಶ್ಲೋಕಗಳ ... ಮಹಾರಾಜರ ... ಅಭಿನಂದಿಸಿ ... ಶ್ಲೋಕ ಪಾಠದ ತರಗತಿಗಳ ... ಹೆಚ್ಚು ಫಲ ಕೊಡುವಂತಾಗಿ ... ಸಂಸ್ಕೃತಿಯ ಬೆಳೆಯುವಂತೆ ... ಜಯ ಘೋಷ ... ಕೊನೆ ಸಮಾರಂಭವು ...

### ಆಕಾಶವಾಣಿ ನಾಳೆ ಕಾರ್ಯಕ್ರಮ

... ಕನ್ನಡ ... (ಪ್ರಿನ್ಸ್ ... ಹಾಡುಗಳು ... ಸಂಗೀತ ... ಕನ್ನಡ ... ಕಾರ್ಯಕ್ರಮ

## ಗೋವಾದಲ್ಲಿ ಘೋರವಾದ ದಬ್ಬಾಳಿಕೆ

ಲಿಸ್ಬನ್ನಿನಲ್ಲಿ ಭಾರತೀಯ ರಾಯಭಾರಿ ಕಛೇರಿಯನ್ನು ಮುಚ್ಚಿದಾಗಿನಿಂದಲೂ ಗೋವಾದ ರಾಷ್ಟ್ರೀಯ ಕಾರ್ಯಕರ್ತರ ಮೇಲೆ ಹಿಂಸೆಯು ಹೆಚ್ಚುತ್ತಿರುವುದೆಂದು ವರದಿಯಾಗಿದೆ. ಕಛೇರಿ ಮುಚ್ಚಿರುವ ವಿಷಯವನ್ನಾಗಲಿ, ಅಥವಾ ಗೋವಾ ಜೈಲಿನಿಂದ ತಪ್ಪಿಸಿಕೊಂಡು ಹೋದ ರಾಜಕೀಯ ಮುಖಂಡರೊಬ್ಬರ ವಿಷಯವನ್ನಾಗಲಿ ಪ್ರಸ್ತಾಪಿಸಿದವರಿಗೆ ಬಲವಾದ ಹೊಡೆತಗಳ ಬೀಳುತ್ತವೆ ಅನೇಕ ವಿದ್ಯಾರ್ಥಿಗಳನು ಪೋಲೀಸರು ಬಂಧಿಸಿ ಸಿಕ್ಕಿದಂತೆ ಹೊಡೆದಿರುತ್ತಾರೆ

## ಸೇತುವೆ ದಾಟುತ್ತಿದ್ದಾಗ ನದಿಗೆ ಬಿದ್ದು ಮರಣ

ಹೊಸಪೇಟೆ ಬಳಿ ತುಂಗಭದ್ರಾನದಿಯ ಸೇತುವೆ ಮೇಲೆ ಸೈಕಲ್ ಏರಿದ ಕೊಂಡು ಹೋಗುತ್ತಿದ್ದ ಧನರಾಜ್ ಎಂಬ ಅಂಗಡಿ ಕೆಲಸಗಾರನೊಬ್ಬನು ನದಿಗೆ ಬಿದ್ದು ಮೃತನಾದನೆಂದು ವರದಿಯಾಗಿದೆ ... ಬಾಕಿಯನ್ನು ವಸೂಲು ಮಾಡಿಕೊಂಡು ಅತನು ಹಿಂತಿರುಗುತ್ತಿದ್ದನೆಂದು ಹೇಳಲಾಗಿದೆ ಅವನಾಗಲಿ ಸೈಕಲ್ಲಾಗಲಿ ಪತ್ತೆಯಾಗಿಲ್ಲ

## ಮಂತ್ರಿಯ ಮೂವರು ಮಕ್ಕಳಿಗೆ ಹಲವು ವರ್ಷ ಸಜಾ

ತಮ್ಮ ಇಬ್ಬರು ಚಿಕ್ಕಪ್ಪಂದಿರನ್ನು ಕೊಲೆ ಮಾಡಿದ ಅಪರಾಧಕ್ಕಾಗಿ ಪಾಕಿಸ್ತಾನದ ವಿದ್ಯಾಮಂತ್ರಿ ... ಮೂವರು ಮಕ್ಕಳಿಗೆ ... ವರ್ಷ ಕಠಿಣ ಸಜಾ ವಿಧಿಸಲಾಗಿದೆ

## ಗಿಲೀಟು ಸಾಮಾನನ್ನು ಗಿರವಿ ಇಟ್ಟ ಮಹಿಳೆಗೆ ದಂಡ

ಕಾಕಿನಾಡದ ವಿವಿಧ ಹೆಸರುಗಳನ್ನಿಟ್ಟು ಮಹಿಳೆಯೊಬ್ಬಳಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ೧೦೦೦ ರೂ ದಂಡವನ್ನು ವಿಧಿಸಲಾಗಿದೆ ... ಬ್ಯಾಂಕಿನಲ್ಲಿ ಗಿರವಿ ಇಟ್ಟು ೧೨೦೦ ರೂ ಗಳನ್ನು ಪಡೆದು ಮೋಸ ... ಎಂದು ಹೇಳಲಾಗಿದೆ

### ಸೀತಾ ಸದನದಲ್ಲಿ ಮಹಾರಾಜರ ವರ್ಧಂತಿ

ರಾಜಧಾನಿಯ ... ಸೀತಾ ಸದನದಲ್ಲಿ ಕಳೆದ ... ಶ್ರೀಮನ್ ಮಹಾರಾಜರವರ ... ನೇ ವರ್ಷದ ವರ್ಧಂತಿಯು ನಡೆಯಿತು ... ಅಧ್ಯಕ್ಷತೆ ... ಪ್ರಾರ್ಥನೆ ... ಮಹಾರಾಜರ ... ರಾಜ ... ಮಂಗಳ ...

### ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧಿಕಾರ ವರ್ಗದ ಆಯ್ಕೆ

ಮೈಸೂರು ತಾಲ್ಲೂಕು ಕಾಂಗ್ರೆಸ್ ಸಮಿತಿ ಸದಸ್ಯರ ಸಭೆಯು ನೆನ್ನೆ ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ನಡೆದು ಅಧಿಕಾರ ವರ್ಗದ ಚುನಾವಣೆಗಳಾದುವು ಶ್ರೀ ಎಂ ಭದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಕೆ ಪುಟ್ಟಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಕೆಂಪೇಗೌಡರು ಉಪಾಧ್ಯಕ್ಷರಾಗಿಯೂ ಶ್ರೀ ವಿ ಚನ್ನಸ್ವಾಮಿಯವರು ಕಾರ್ಯದರ್ಶಿಯವರಾಗಿಯೂ ಶ್ರೀ ಆರ್ ಭದ್ರಯ್ಯನವರು ಖಜಾಂಚಿಯಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು

## ೫೦೦ ರೂ ಗೆ ಸೋದರಿಯನ್ನೇ ಅಡವಿಟ್ಟ ಪ್ರಸಂಗ

ಅಹಮದಾಬಾದ ಬಳಿ ಒಂದು ಗ್ರಾಮದಲ್ಲಿ ಒಬ್ಬಾತನು ತನ್ನ ಸೋದರಿಯೊಡನೆ ಜಗಳವಾಡಿ ... ೫೦೦ ರೂ ಗಳನ್ನು ಪಡೆದು ಆಕೆಯನ್ನು ಗಿರವಿಯಿಟ್ಟನೆಂದು ವರದಿಯಾಗಿದೆ. ಆಕೆಗೆ ೨೧ ರೂಪಾಯಿ ಸಂಬಳವನ್ನೂ ಸಹ ಗೊತ್ತುಮಾಡಲಾಗಿತ್ತು ಇಷ್ಟವಿಲ್ಲದಿದ್ದರೂ ಬಡತನದ ಕಾರಣದಿಂದ ಆಕೆಯು ಇದಕ್ಕೆ ಒಪ್ಪಿದಳೆಂದು ಹೇಳಲಾಗಿದೆ. ಅಲ್ಲಿನ ಮಹಿಳಾ ಸಂಸ್ಥೆಯವರು ಈ ವಿಷಯವನ್ನು ತಿಳಿದು ಆಕೆಯನ್ನು ರಕ್ಷಿಸಿರುವರು ಕರಣನ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆ

## ನದಿ ಪಾತ್ರದಲ್ಲಿ ತಲೆಯಿಲ್ಲದ ಮುಂಡ

ತಿರುನಲ್ವೇಲಿ ಬಳಿ ಚಂಕುಪೂಂತರೆ ಎಂಬಲ್ಲಿಯ ತಾಮ್ರಪರ್ಣಿ ನದಿ ಪಾತ್ರದಲ್ಲಿ ಸುಮಾರು ೨೫ ವರ್ಷದ ಯುವಕನೊಬ್ಬನ ತಲೆಯಿಲ್ಲದ ಮುಂಡವು ದೊರೆತಿದೆ

## ಕನ್ನಂಬಾಡಿಯ ನೀರಿನ ಮಟ್ಟ

ಕೃಷ್ಣರಾಜಸಾಗರದ ನೀರಿನ ಮಟ್ಟವು ಈ ದಿನ ೧೨೪ ಅಡಿಗಳಷ್ಟಿದೆ

### ರಾಘವೇಂದ್ರಪುರಕ್ಕೆ ವಿದ್ಯಾ ಸಚಿವರ ಭೇಟಿ

ವಿದ್ಯಾ ಸಚಿವರಾದ ಶ್ರೀ ಎ ಜಿ ರಾಮಚಂದ್ರರಾಯರ, ಜಿಲ್ಲಾಧಿಕಾರಿಗಳು ಮತ್ತು ಇತರ ಪ್ರಮುಖರೊಡಗೂಡಿ ಮೈಸೂರು ತಾಲ್ಲೂಕು ರಾಘವೇಂದ್ರಪುರಕ್ಕೆ ನೆನ್ನೆ ಭೇಟಿಯಿತ್ತು ಅಲ್ಲಿನ ಕಾರಖಾನೆಯಲ್ಲಿ ನಡೆಯುತ್ತಿರುವ ವ್ಯವಸಾಯ ಮತ್ತು ಗೃಹಕೈಗಾರಿಕೆಗಳನ್ನು ಪರಿಶೀಲಿಸಿ ಮೆಚ್ಚಿಗೆಯನ್ನು ಸೂಚಿಸಿದರು ಈ ಉದ್ಯಮವು ಅಭಿವೃದ್ಧಿ ಹೊಂದಲೆಂದು ಹಾರೈಸಿದರು ... ವನಮಹೋತ್ಸವದ ಅಂಗವಾಗಿ ಅರಳಿ ಮತ್ತು ಬೇವಿನ ಸಸಿಗಳನ್ನು ... ನೆಟ್ಟು ... ಮಾಡಿದರು

### ಫುಟ್ ಬಾಲ್ ಆಟಗಾರರ ಉಪಯುಕ್ತ

ರಾಜಧಾನಿಯ ಫುಟ್‌ಬಾಲ್ ಸಂಘದವರು ಪಂದ್ಯಗಳನ್ನಾಡಲು ಚೆಂಡುಗಳನ್ನು ಒದಗಿಸುತ್ತಿಲವೆಂದೂ ಅನುಭವಿಗಳಾದ ರೆಫರಿಗಳನ್ನು ಕಳುಹಿಸುತ್ತಿಲವೆಂದೂ ಮೈಸೂರಿನ ಫುಟ್‌ಬಾಲ್ ಪ್ರೇಮಿ ಶ್ರೀ ಎಂ ಎಸ್ ಕೃಷ್ಣಪ್ಪ ಎಂಬುವರು ತಿಳಿಸಿ ಈ ಬಗ್ಗೆ ಸಮರ್ಪಕ ವ್ಯವಸ್ಥೆಯಾಗಬೇಕೆಂದು ಕೋರಿದ್ದಾರೆ


**SRI GAYATHRI**
TALKIES
To-day Last Day
**HOUSE BY THE RIVER**
From 11 8 53 For Two Days
**EVERYTHING I HAVE IS YOURS**
(Color by Technicolor)
With – Denis O' Keefe
NEXT CHANGE
**This Woman Is Dangerous**


### ಚಂದಾದಾರರಲ್ಲಿ ವಿನಂತಿ

ನಮ್ಮ ಪತ್ರಿಕೆ ಚಂದಾದಾರರಲ್ಲಿ ಬಹುಮಂದಿ ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಮೊಬಲಗನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ

**ನ್ಯೂಸ್ ಪೇಪರ್ ಹೌಸ್,**
ಸಾಧ್ವಿ ಏಜೆಂಟರು, ಮೈಸೂರು

Edited Printed and Published by A R Nagarajan at Sadhvi Press D Subbiah Road Mysore

ಟೆಲಿಫೋನ್ ನಂ 792

|| ವಂದೇ ಮಾತರಂ ||

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಪಾದಕ ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE TUESDAY 11-8-1953 • ಮೈಸೂರು ಮಂಗಳವಾರ ೧೧-೮-೧೯೫೩ [ ಸಂ: ೧೮೦

# ನೆಹರೂ ಭೇಟಿಗಾಗಿ ಪಾಕಿಸ್ತಾನ್ ಪ್ರಧಾನಿ ಜರೂರು ತಂತಿ

## ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೧

ಭಾರತದ ಆದ್ಯಂತವೂ ಇದೇ ೧೫ನೇ ತಾ|| ಶನಿವಾರ ನಡೆಯಲಿರುವ ಸ್ವಾತಂತ್ರ್ಯ ದಿನ ಆಚರಣೆಯ ಅಂಗವಾಗಿ ನಗರದ ಪೌರ ಸಭೆಯವರು ಆ ದಿನ ಬೆಳಿಗ್ಗೆ ೯ ಗಂಟೆಗೆ ಟೌನ್ ಹಾಲ್ ಆವರಣದಲ್ಲಿ ಧ್ವಜಾರೋಹಣವನ್ನು ಏರ್ಪಡಿಸಿರುತ್ತಾರೆ ಪುರಜನರು ಸಮಾರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಸಹಕರಿಸುವಂತೆ ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರು ಕೋರಿದ್ದಾರೆ

ಶಾರದಾ ವಿಲಾಸ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ಶಾರದಾವಿಲಾಸ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಕಳೆದ ಸಾಲಿನ ಮುಕ್ತಾಯ ಸಮಾರಂಭವು ಇದೇ ೧೨ನೇ ತಾ|| ಬುಧವಾರ ಸಂಜೆ ೫|| ಗಂಟೆಗೆ ಕಾಲೇಜಿನಲ್ಲಿ ನಡೆಯುವುದು ಸದಸ್ಯರೂ ಮಹಾಜನರೂ ಪ್ರೋತ್ಸಾಹಿಸುವಂತೆ ಕೋರಲಾಗಿದೆ ಅಲ್ಲದೆ ಸಂಘದ ಚುನಾವಣೆಯು ೨ ನೇ ದಿನ ತಿಂಗಳು ೬ ನೇ ತಾ|| ನಡೆಯುವುದು

## ಪೆಪ್ಸುವಿನಲ್ಲಿ ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆ

ಪಾಟಿಯಾಲ ಮತ್ತು ಪೂರ್ವ ಪಂಜಾಬು ಸಂಸ್ಥಾನದಲ್ಲಿ ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆಗಳು ನಡೆಯುವುವೆಂದು ಕೇಂದ್ರ ಗೃಹ ಮಂತ್ರಿ ಡಾ|| ಕಟ್ಜುರವರು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ

## ಪರ್ಷಿಯಾ ಪ್ರಧಾನಿ ಮೇಲೆ ವಿಶ್ವಸಂಸ್ಥೆಗೆ ದೂರು

ಪರ್ಷಿಯಾದ ಮಜ್ಲಿಸ್ ಸಭೆಯ ವಿರೋಧ ಪಂಗಡದ ಸದಸ್ಯರು ವಿಶ್ವಸಂಸ್ಥೆಗೆ ದೂರು ಕೊಟ್ಟು ಅಲ್ಲಿನ ಪ್ರಧಾನಿ ಡಾ|| ಮಹಮದ್ ಮುಸಾದಿಕ್ ರವರು ಮಾನವ ಹಕ್ಕುಬಾಧ್ಯತೆಗಳಿಗೆ ವ್ಯತಿರಿಕ್ತವಾಗಿ ಪರ್ಷಿಯಾದಲ್ಲಿ ಭಂಗಿಕೋರ ಸರ್ಕಾರವನ್ನು ಸ್ಥಾಪಿಸಿರುವರೆಂದು ತಿಳಿಸಿದ್ದಾರೆ ಮುಸಾದಿಕ್ ರವರು ಬಲ ಪ್ರಯೋಗದಿಂದ ಪಾರ್ಲಿಮೆಂಟಿಗೂ ರಾಜ್ಯಾಂಗ ಶಾಸನಕ್ಕೂ ವಿರೋಧವಾಗಿ ನಡೆದುಕೊಳ್ಳುತ್ತಿರುವರೆಂದೂ ಅಲ್ಲಿನ ಪಾರ್ಲಿಮೆಂಟಿನ ಸದಸ್ಯರ ಪ್ರಾಣಕ್ಕೆ ರಕ್ಷಣೆಯೇ ಇಲ್ಲದಂತಾಗಿರುವುದೆಂದೂ ಅವರುಗಳು ತಿಳಿಸಿರುತ್ತಾರೆ ವಿರೋಧ ಪಂಗಡದ ೩೩ ಮಂದಿ ಸದಸ್ಯರು ಪಾರ್ಲಿಮೆಂಟ್ ಭವನದಲ್ಲಿಯೇ ಆಶ್ರಯ ಹೊಂದಿರುವರೆಂದೂ ಹೇಳಲಾಗಿದೆ

## ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರುಗಳು

ಬೆಂಗಳೂರು ೧೧

ಸಂಸ್ಥಾನದ ಎಲ್ಲಾ ಪ್ರಥಮ ದರ್ಜೆಯ ಕೋರ್ಟುಗಳಲ್ಲೂ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ೨ ವರ್ಷಗಳ ಕಾಲ ನೇಮಿಸಲು ಸರ್ಕಾರದವರು ನಿರ್ಧರಿಸಿರುವರೆಂದು ತಿಳಿದುಬಂದಿದೆ ವಕೀಲ ವೃಂದದಿಂದ ಆ ಸ್ಥಾನಗಳಿಗೆ ಆರಿಸಲಾಗುವುದು ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಕಾರ್ಯದಲ್ಲಿ ಇದೊಂದು ಹೆಜ್ಜೆಯೆಂದು ಹೇಳಲಾಗಿದೆ

## ಕಾಶ್ಮೀರದ ಘಟನೆಗಳು ಒಳಾಡಳಿತ ವಿಷಯ

### ಅದರಲ್ಲಿ ಭಾರತ ಸರ್ಕಾರದ ಪ್ರವೇಶವಿಲ್ಲ

ಪಾರ್ಲಿಮೆಂಟ್ ಸಭೆಯಲ್ಲಿ ನೆನ್ನೆ ಪ್ರಧಾನಿ ನೆಹರೂರವರ ಹೇಳಿಕೆಯೊಂದನ್ನಿತ್ತು, ಕಾಶ್ಮೀರದ ಈಚಿನ ಘಟನೆಗಳು ಆಂತರಿಕ ವಿಷಯಗಳಿಗೆ ಸಂಬಂಧಿಸಿದುದಾಗಿಯೂ ಸಾಧ್ಯವಾದಷ್ಟುಗೂ ಅದರಲ್ಲಿ ಭಾರತೀಯ ಸರ್ಕಾರ ಹಸ್ತಕ್ಷೇಪ ಮಾಡದಿರುವುದು ಒಳ್ಳೆಯದೆಂದೂ ತಿಳಿಸಿದರು ಕಾಶ್ಮೀರಕ್ಕೆ ಭಾರತವು ಕೊಟ್ಟಿರುವ ಭರವಸೆಗಳನ್ನು ಪಾಲಿಸಿಕೊಂಡು ನಡೆಯುತ್ತದೆ ಎಂದೂ ಅವರು ಹೇಳಿದರು ಅಲ್ಲಿನ ಬಿಕ್ಕಟ್ಟನ್ನು ಎದುರಿಸಿ ಶ್ರೀನಗರದ ಚಿಕ್ಕದಾದ ಸ್ಟಾಫ್ ಸದರ್ ಇ ರಿಯಾಸತ್ ಕರಣಸಿಂಗರವರಿಗೂ ಕಾಶ್ಮೀರದ ಸರ್ಕಾರದ ತ್ತು ಜನತೆಗೂ ಪೂರ್ಣ ಸಹಾನುಭೂತಿಯನ್ನು ತೋರಿಸಿ ಅಲ್ಲಿ ದಿನಂತೆ ಸಮಾನ್ಯವಾದ ಪರಿಸ್ಥಿತಿಯುಂಟಾಗಲು ಭಾರತವು ಸಹಾಯ ಮಾಡಬೇಕೆಂದು ನೆಹರೂರವರು ತಿಳಿಸಿದರು

ಸಂಸ್ಥಾನದಲ್ಲಿ ಪ್ರಜಾಸತ್ತೆಗೆ ವಿರುದ್ಧವಾಗಿದ್ದ ವಿನಾಶಕಾರಕ ಶಕ್ತಿಗಳ ಪರಿಸ್ಥಿತಿಯನ್ನು ಸ್ವಂತ ಲಾಭಕ್ಕಾಗಿ ಉಪಯೋಗಿಸಿಕೊಂಡು ಸಂಸ್ಥಾನವನ್ನು ಒಡೆಯಲೆಳಸಿದರೆಂದು ಅವರ ಹೇಳಿ ಅಲ್ಲಿ ತೀವ್ರವಾದ ಆರ್ಥಿಕ ಸಮಸ್ಯೆಗಳ ಪರಿಹಾರವು ಆಗಬೇಕಾದ ಸಮಯದಲ್ಲಿ ಮಂತ್ರಿ ಮಂಡಲದಲ್ಲಿ ಒಡಕು ಹುಟ್ಟಿ ದಕ್ಷತೆಯಿಂದ ಕೆಲಸ ಮಾಡುವುದು ಅಸಾಧ್ಯವಾಯಿತೆಂದು ತಿಳಿಸಿದರು

ಭಾರತಕ್ಕೆ ಈ ಘಟನೆಗಳಿಂದ ತೀವ್ರ ಆತಂಕಗಳಾದರೂ ಅದು ಸಲಹೆ ಕೊಡುವುದನ್ನು ಬಿಟ್ಟು ಬೇರಾವ ರೀತಿಯಲ್ಲೂ ಕೈಹಾಕಲು ಇಷ್ಟಪಡಲಿಲ್ಲವೆಂದು ಹೇಳಿದರು

## ತಾಲ್ಲೂಕು ಅಧಿಕಾರಿಯ ಅತಿಕ್ರಮ ವರ್ತನೆ

ಭದ್ರಾವತಿಯ ನಿವಾಸಿ ಎಸ್ ವಿ ಎಸ್ ಸುಲ್ತಾನ್ ಮಹಮದ್ ಎಂಬ ವರ್ತಕರೊಬ್ಬರ ಅಂಗಡಿಗೆ ತಾಲ್ಲೂಕು ಅಧಿಕಾರಿಯೊಬ್ಬರು ಕಳೆದ ನಾಲ್ಕನೇ ತಾ|| ರಾತ್ರಿ ಯಜಮಾನರು ಊರಿನಲ್ಲಿಲ್ಲದೆ ಇದ್ದಾಗ ಬಂದು ಅಲ್ಲಿದ್ದ ಬಾಲಕನೊಬ್ಬನನ್ನು ಏನನ್ನೋ ಕೇಳಿ ವಾಪಸು ಹೋಗಿ ಮೂರು ದಿನಗಳಾದ ನಂತರ ಮತ್ತೆ ಬಂದು ಅವನನ್ನು ಛತ್ರಿಯಿಂದ ಹೊಡೆದು, ಮನೆಯಲ್ಲಿ ಪೋಲೀಸರು ಹೆಂಗಸಿರುವರೆಂದು ಹೇಳಿದರೂ ಲೆಕ್ಕಿಸದೆ ಒಳಕ್ಕೆ ನುಗ್ಗಿ ಅಲ್ಮೇರಾಗಳಲ್ಲಿದ್ದ ಪುಸ್ತಕಗಳನ್ನು ಸಿಕ್ಕಾಪಟ್ಟೆ ಎಸೆದು, ಎಲ್ಲರನ್ನು ಬೈದು ಹೊರಟುಹೋದರೆಂದು ಪೋಲೀಸರಿಗೆ ದೂರು ಕೊಡಲಾಗಿದೆ

## ಬಳ್ಳಾರಿ ಚಳುವಳಿ ಮುಕ್ತಾಯ

ಮಿಶ್ರಾ ತೀರ್ಪಿನ ವಿರುದ್ಧವಾಗಿ ಆಂಧ್ರದವರು ಬಳ್ಳಾರಿಯಲ್ಲಿ ನಡೆಸುತ್ತಿದ್ದ ಚಳುವಳಿಯನ್ನು ಕಾಮಿಟಿಯವರ ಪ್ರಾರ್ಥನೆ ಪ್ರಕಾರ ನಿಲ್ಲಿಸಲಾಗಿದೆ ಚಳುವಳಿಯು ನಿಂತಿರುವುದರಿಂದಲೂ ಮತ್ತು ಕಾಮಿರೆಡ್ಡಿಯವರ ಉಪವಾಸವು ಮುಕ್ತಾಯವಾದುದರಿಂದಲೂ ಅಲ್ಲಿ ಬಂಧಿಸಲ್ಪಟ್ಟ ೭೦ ಜನರನ್ನು ಖುಲಾಸೆ ಮಾಡುವಂತೆ ಅಲ್ಲಿನ ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿರುತಾರೆ

## ನೆಹರೂರವರೊಡನೆ ಜರೂರು ಭೇಟಿಗೆ ಪಾಕ್ ಪ್ರಧಾನಿ ತಂತಿ

ಪಾಕಿಸ್ತಾನ್ ಪ್ರಧಾನ ಮಂತ್ರಿ ಮಹಮದ್ ಆಲಿಯವರು ನೆಹರೂರವರಿಗೆ ನೆನ್ನೆ ತಂತಿಯೊಂದನ್ನು ಕಳುಹಿಸಿ ಶ್ರೀನಗರದಲ್ಲಿ ನಡೆದ ಘಟನೆಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ತಮ್ಮನ್ನು ಒಂದು ವಾರದೊಳಗೇ ತಮ್ಮೊಬ್ಬರ ಭೇಟಿಗಾಗಿ ಒಪ್ಪುವಂತೆ ಕೇಳಿರುತ್ತಾರೆ ನೆಹರೂರವರ ಉತ್ತರ ಬಂದ ಕೂಡಲೇ ತಾವು ದೆಹಲಿಗೆ ವಿಮಾನದಲ್ಲಿ ಬರ ಸಿದ್ಧರಾಗಿಯೂ ಅವರು ತಿಳಿಸಿರುವರೆಂದು ಹೇಳಲಾಗಿದೆ

## ಷೇಕ್ ಅಬ್ದುಲ್ಲಾರವರ ವಜಾಕ್ಕೆ ಕಾಶ್ಮೀರ ಕನ್ಫರೆನ್ಸಿನ ಸಮ್ಮತಿ

ಕಾಶ್ಮೀರದ ರಾಷ್ಟ್ರೀಯ ಕನ್ಫರೆನ್ಸಿನ ಜಮ್ಮು ಪ್ರಾಂತದ ಕಾರ್ಯಕಾರಿ ಸಮಿತಿಯವರು ನೆನ್ನೆ ಜರೂರಾಗಿ ಸೇರಿ ಷೇಕ್ ಅಬ್ದುಲ್ಲಾರವರನ್ನು ವಜಾ ಮಾಡಿ ಕ್ರಮ ಕೈಗೊಂಡ ಬಗ್ಗೆ ಅಲ್ಲಿನ ಸದರ್ ಇ ರಿಯಾಸತ್ ಕರಣಸಿಂಗರವರ ಆಜ್ಞೆಯು ಸಕಾಲಿಕವೆಂದೂ ಸೂಕ್ತವೆಂದೂ ತಿಳಿಸಿ ನಿರ್ಣಯ ಮಾಡಿರುತ್ತದೆ ಇತ್ತೀಚೆಗೆ ಷೇಕ್ ಅಬ್ದುಲ್ಲಾರವರು ಮಾಡುತ್ತಿದ್ದ ಭಾಷಣಗಳ ಬಗ್ಗೆ ಕಾಶ್ಮೀರದ ಜನತೆಯು ಕಳವಳಕ್ಕೆ ಒಳಗೊಂಡಿದ್ದುದಾಗಿ ಸಮ್ಮೇಳನವು ತಿಳಿಸುತ್ತದೆ ಕಳೆದ ೨೦ ವರ್ಷಗಳಿಂದ ಸಂಸ್ಥಾನದ ಜನರು ನಡೆಸಿದ ಹೋರಾಟದ ತತ್ವಕ್ಕೆ ಷೇಕ್ ಅಬ್ದುಲ್ಲಾರವರ ಮಾಡುತ್ತಿದ್ದ ಭಾಷಣಗಳು ವಿರೋಧವಾಗಿದ್ದುವೆಂದೂ ಸಮ್ಮೇಳನವು ಅಭಿಪ್ರಾಯಪಟ್ಟಿರುತ್ತದೆ

## ಶ್ರೀನಗರದಲ್ಲಿ ದಸ್ತಗಿರಿ ವಿವರಗಳು

ಕಾಶ್ಮೀರದ ಮುಖ್ಯ ಪಟ್ಟಣ ಶ್ರೀನಗರದಲ್ಲಿ ಗ್ರಾಮ ಇಲಾಖೆ ಡೈರೆಕ್ಟರ್ ಜನರಲ್ ಕೇಶವಾನಂದ ಕಾಶ್ಮೀರ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಗುಲಾಂ ಮಹಮದ್ ನಿರಾಶ್ರಿತರ ಆಸ್ತಿಗಳ ಅಧಿಕಾರಿ ಗುಲಾಂ ಮಹಮದ್ ಚಿಸ್ಟಿನ್ ಸಿವಿಲ್ ಸರಬರಾಜು ಕಂಟ್ರೋಲ್ ಅಧಿಕಾರಿ ಮಹಮದ್ ಷಾ ಮತ್ತು ರೆಡ್ ಕ್ರಾಸ್ ಸಂಸ್ಥೆ ಕಾರ್ಯದರ್ಶಿ ಮಹಮದ್ ರೆಡ್ಡಾ ಇವರುಗಳನ್ನು ದಸ್ತಗಿರಿ ಮಾಡಲಾಗಿದೆ ಷೇಕ್ ಅಬ್ದುಲ್ಲಾರವರನ್ನು ಉದ್ಧಾಮಪುರದಲ್ಲಿ ಕಾಂಗ್ರೆಸ್ ಆರವ ನೆಯಲ್ಲಿಡಲಾಗಿದೆ ಅಫ್ಜಲ್ ಬೇಗರವರನ್ನು ಜಮ್ಮುವಿನಲ್ಲಿ ಎಲ್ಲೋ ಒಂದು ಕಡೆ ಬಂಧಿಸಲಾಗಿದೆ ಇತರ ಕೈದಿಗಳನ್ನು ವಿಶೇಷ ರೀತಿಯಲ್ಲಿಡಲಾಗಿದೆ

## ಶ್ರೀನಗರದಲ್ಲಿ ಸಣ್ಣಪುಟ್ಟ ಪ್ರದರ್ಶನಗಳು

ಕಾಶ್ಮೀರದ ಕಣಿವೆಯಲ್ಲಿ ಶಾಂತ ಪರಿಸ್ಥಿತಿಯಿದೆ ಕೆಲವು ಕಡೆಗಳಲ್ಲಿ ಕಲ್ಲು ಬೀರಿದ ವರದಿಗಳು ಬಂದಿವೆ ಒಂದೆರಡು ಕಡೆ ಅಬ್ದುಲ್ಲಾರವರ ಪಂಗಡಕ್ಕೂ ಅವರ ವಿರೋಧಿಗಳಿಗೂ ಘರ್ಷಣೆಗಳಾದುವು ಪೋಲೀಸರಿಗೂ ಪ್ರಜೆಗಳಿಗೂ ಯಾವ ಘರ್ಷಣೆಯೂ ಆಗಿಲ್ಲ

ದೆಹಲಿಗೆ ವಿದ್ಯಾ ಮಂತ್ರಿ

ಮೈಸೂರು ಸಂಸ್ಥಾನದ ವಿದ್ಯಾ ಮತ್ತು ನ್ಯಾಯಾಂಗ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ನಾಳೆ ದೆಹಲಿಗೆ ಪ್ರಯಾಣ ಮಾಡುವರು

## ಅಜಾದ್ ಕಾಶ್ಮೀರ ಮುಖಂಡರಿಗೆ ಪಾಕಿಸ್ತಾನ್ ಸರ್ಕಾರದ ಕರೆ

ಪಾಕಿಸ್ತಾನದ ವಶದಲ್ಲಿರುವ "ಅಜಾದ್ (ಸ್ವತಂತ್ರ) ಕಾಶ್ಮೀರದ ಮುಖಂಡರನ್ನು ಪಾಕಿಸ್ತಾನ್ ಸರ್ಕಾರದವರು ಚರ್ಚೆಗಾಗಿ ಕರೆಸಿಕೊಂಡಿರುತ್ತಾರೆ ಪಾಕಿಸ್ತಾನ್ ಪ್ರಧಾನಿಯವರು ನೆನ್ನೆ ಭಾರತದ ಹೈಕಮಿಷನರ್ ಮುಖಾಂತರ ಸಂದೇಶವನ್ನು ಬರಮಾಡಿಕೊಂಡು ಮಾತುಕತೆ ನಡೆಸಿದುದಾಗಿ ಹೇಳಲಾಗಿದೆ

## ಪಾರ್ಲಿಮೆಂಟಿನಲ್ಲಿ ಆಂಧ್ರದ ಮಸೂದೆ

ಆಂಧ್ರ ಪ್ರಾಂತದ ಸ್ಥಾಪನಾ ಮಸೂದೆಯನ್ನು ನೆನ್ನೆ ಕೇಂದ್ರ ಗೃಹ ಮಂತ್ರಿ ಕಟ್ಜುರವರು ಪಾರ್ಲಿಮೆಂಟಿನಲ್ಲಿ ಮಂಡಿಸಿದರು ಆಸ್ತಿ ಮತ್ತು ಜವಾಬ್ದಾರಿಗಳ ಹಂಚಿಕೆ ಬಗ್ಗೆ ಏನಾದರೂ ವ್ಯತ್ಯಾಸವಾದರೆ ಅದನ್ನು ಸರಿಪಡಿಸಲು ರಾಷ್ಟ್ರಾಧ್ಯಕ್ಷರಿಗೆ ಅಧಿಕಾರ ಕೊಡುವ ತಿದ್ದುಪಡಿಯನ್ನು ಮಸೂದೆಯಲ್ಲಿ ಹೊಸದಾಗಿ ಸೇರಿಸಲಾಗಿದೆ

## ಅಬ್ದುಲ್ಲಾರವರಿಂದ ರಹಸ್ಯ ಸರ್ಕಾರಿ ಪತ್ರಗಳ ನಾಶ

ಕಾಶ್ಮೀರದ ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ತಮ್ಮ ಸ್ಥಾನದಿಂದ ವಜಾ ಆಗುವುದಕ್ಕೆ ಮೊದಲು ಕೆಲವು ಮುಖ್ಯವಾದ ರಹಸ್ಯ ಪತ್ರಗಳನ್ನು ನಾಶಗೊಳಿಸಿದರು ವರದಿಯೊಂದು ತಿಳಿಸುತ್ತದೆ ಅದರ ವಿವರಕ್ಕೆ ಅಧಿಕೃತ ಸಮರ್ಥನೆಯು ದೊರೆತಿಲ್ಲ ಯುದ್ಧ ಸ್ತಂಭನದ ರೇಖೆಯಿಂದ ಆಚೆಯಿರುವ ಅಧಿಕಾರಿಗಳೊಡನೆ ಸಂಪರ್ಕ ಬೆಳೆಸಲೂ ಸಹ ಅವರು ಪ್ರಯತ್ನಿಸುತ್ತಿದ್ದರೆಂದು ಮತ್ತೊಂದು ಸುದ್ದಿಯು ಹರಡಿರುತ್ತದೆ ಈ ಬಗ್ಗೆಯೂ ಸಮರ್ಥನೆ ದೊರೆತಿಲ್ಲವಾದರೂ ಅದು ಎಲ್ಲರಿಗೂ ಗೊತ್ತಾಗಿರುವ ವಿಷಯವೆಂದು ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ಒಬ್ಬ ನಾಯಕರು ತಿಳಿಸಿರುತ್ತಾರೆ

## ತಿರುಚೂರಿನಲ್ಲಿ ೬೬ ಜನರ ಬಂಧನ

ತಿರುವಾಂಕೂರು ಸಂಸ್ಥಾನದ ತಿರುಚೂರಿಗೆ ಭಾರತದ ಯೋಜನಾ ಮಂತ್ರಿ ಗುಲ್ಜಾರಿಲಾಲ್ ನಂದಾರವರು ನೆನ್ನೆ ಭೇಟಿ ಇತ್ತಾಗ, ಅವರನ್ನು ಸಂದರ್ಶಿಸಲು ೧೦ ಸಾವಿರಕ್ಕಿಂತ ಹೆಚ್ಚು ಜನರು ಸೇರಿ ಅವರ ಬಿಡಾರದ ಸುತ್ತಲೂ ಹಾಕಲಾಗಿದ್ದ ನಿಷೇಧಾಜ್ಞೆಯನ್ನು ಮುರಿಯಲೆತ್ನಿಸಿದಾಗ ೬೬ ಜನ ಸಮಾಜವಾದಿ ನಾಯಕರನ್ನು ದಸ್ತಗಿರಿ ಮಾಡಬೇಕಾಯಿತಲ್ಲದೆ, ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿ, ಗುಂಪನ್ನು ಚದುರಿಸಿದರು ನಂದಾರವರು ಅಲ್ಲಿ ಆಯುರ್ವೇದ ಚಿಕಿತ್ಸೆಯನ್ನು ಹೊಂದುತ್ತಿರುವರು ಸಮಾಜವಾದಿಗಳ ಒಬ್ಬ ಪ್ರತಿನಿಧಿಯನ್ನು ಭೇಟಿ ಮಾಡಲು ಅವರು ಅನುಮತಿಯಿತ್ತಿದ್ದರು ಆಜ್ಞೋಲ್ಲಂಘನೆಗಾಗಿ ಒಟ್ಟು ೬೬ ಜನರ ದಸ್ತಗಿರಿಯಾಗಿದೆ

## ಮೆಡಿಕಲ್ ಕಾಲೇಜಿನ ಸ್ಥಾನಗಳ ಹಂಚಿಕೆ

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ೬೧ ಮಂದಿ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಕಲ್ಪಿಸುತ್ತಾರೆ ಅವರ ಪೈಕಿ ಒಂಭತ್ತು ಮಂದಿ ವಿದ್ಯಾರ್ಥಿನಿಯರಿರುವರು ಉಳಿದ ಸ್ಥಾನಗಳಲ್ಲಿ ಮೂರು ಸ್ಥಾನಗಳನ್ನು ಸರ್ಕಾರದವರು ಭರ್ತಿ ಮಾಡುವರು ಒಂದು ಸ್ಥಾನವನ್ನು ಆಯುರ್ವೇದ ಕಾಲೇಜಿಗೆ ಬಿಡಲಾಗಿದೆ

## ಶ್ರೀ ರಾಘವೇಂದ್ರ ಗುರುಗಳವರ ಆರಾಧನೆ

ಮೈಸೂರು ೧೧

ಮೈಸೂರು ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವವು ಶ್ರೀ ಶ್ರೀಗಳವರ ಅಪ್ಪಣೆಯಂತೆ ಇದೇ ೨೫ ೨೬ ೨೭ನೇ ತಾರೀಖುಗಳಲ್ಲಿ ನಡೆಯುತ್ತದೆ ಈ ಉತ್ಸವಕ್ಕೆ ಶ್ರೀ ಗುರುರಾಜರ ಭಕ್ತ ಮಹಾಶಯರನ್ನೆಲ್ಲಾ ಈ ಮೂಲಕ ಆಹ್ವಾನ ಮಾಡಲಾಗಿದೆ ಈ ದಿವಸಗಳಲ್ಲಿ ವಿಶೇಷ ಉತ್ಸವಗಳು ನಡೆಯುತ್ತವೆ ಎಲ್ಲರೂ ಸಕಾಲಕ್ಕೆ ದಯಮಾಡಿಸಿ, ಶ್ರೀ ಗುರುರಾಜರವರ ಸಂದರ್ಶನ ಮಾಡಿ, ಫಲಮಂತ್ರಾಕ್ಷತಾದಿಗಳನ್ನು ಸ್ವೀಕರಿಸಿ ಶ್ರೀ ಗುರುಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕು ಈ ಮಹೋತ್ಸವಕ್ಕೆ ಧನ ಧಾನ್ಯಾದಿ ರೂಪದಲ್ಲಿ ಸೇವೆ ಸಲ್ಲಿಸಲು ಪೇಕ್ಷೆಯುಳ್ಳ ಭಕ್ತರುಗಳು ಶ್ರೀ ಮಠದ ಮೊಹರಿರುವ ಆರಾಧನಾ ರಶೀತಿಯನ್ನು ದಯವಿಟ್ಟು ಪಡೆದು ಸಲ್ಲಿಸಬಹುದು

### ಹುತಾತ್ಮರ ದಿನಾಚರಣೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿಯ ಸಂಘದ ಆಶ್ರಯದಲ್ಲಿ ನೆನ್ನೆ ಹುತಾತ್ಮರ ದಿನಾಚರಣೆಯನ್ನು ನೆರವೇರಿಸಲಾಯಿತು ಶ್ರೀ ಕೆ ಎಂ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು ಹಲವಾರು ವಿದ್ಯಾರ್ಥಿಗಳ ಭಾಷಣ ಮಾಡಿ ಆ ದಿನದ ಮಹತ್ವವನ್ನು ವಿವರಿಸಿದರು

### ಭಾರತದ ವಿರಾಟಪರ್ವ ಪಠಣ

ವೇ|| ಪುರಾಣಭಾಸ್ಕರ ಎಂ ಎಸ್ ... ಗಿರಿಯವರು ಇದೇ ಶ್ರಾವಣ ... ಸೋಮವಾರ(೧೦ ಆಗಸ್ಟ)ದ ... ಕೃಷ್ಣಮೂರ್ತಿ ಪುರದಲ್ಲಿರುವ ಶ್ರೀ ವ್ಯಾಸರಾಯ ಮಠದಲ್ಲಿ, ಶ್ರೀ ವ್ಯಾಸ ಪ್ರಣೀತ ... ಮಹಾಭಾರತದ ವಿರಾಟಪರ್ವದ ಪುರಾಣ ... ವಾಗಿ ಪ್ರತಿದಿನವೂ ಸಾಯಂಕಾಲ ... ೭ರ ವರೆಗೆ ಅನುವಾದ ಮಾಡಿ ... ಸರ್ವರಿಗೂ ಆಹ್ವಾನವೆಂದು ಮಠದ ವ್ಯವಸ್ಥಾಪಕ ಮಂಡಲಿಯವರು ತಿಳಿಸಿರುತ್ತಾರೆ

### ೩ ಬಾರಿ ಸತ್ತ ಮನುಷ್ಯ

ಕಳೆದ ಮೇ ತಿಂಗಳಲ್ಲಿ ... ಉಲಸಿ ಎಂಬಾತನು ಇಟಲಿಯ ಆಸ್ಪತ್ರೆಯೊಂದರಲ್ಲಿ ಹೃದಯ ರೋಗದಿಂದ ... ವೈದ್ಯರು ಅವನ ಹೃದಯಕ್ಕೆ ಮಾಲೀಸು ಮಾಡುವ ಚಿಕಿತ್ಸೆ ನಡೆಸಿ, ಅವನಿಗೆ ... ಬರುವಂತೆ ಮಾಡಿದರು ... ಮನೆಗೆ ಹಿಂದಿರುಗಿದ ಒಂದು ... ಪುನಃ ಮೃತನಾದನು ... ಪ್ರಾಣವನ್ನು ಉಳಿಸಿದಾಗ ನಡೆದ ಚಿಕಿತ್ಸೆಯಿಂದ ಉಂಟಾದ ತೊಂದರೆಗಳೇ ಅವನ ... ಮರಣಕ್ಕೆ ಕಾರಣವೆಂದು ವೈದ್ಯರು ಅಭಿಪ್ರಾಯಪಟ್ಟರು

### ... ಜಗಳದಲ್ಲಿ ಇಬ್ಬರ ಮರಣ

... ಗುಂಪುಗಳಲ್ಲಿ ... ಘರ್ಷಣೆ ನಡೆದು ಇಬ್ಬರು ಮೃತಪಟ್ಟ ... ಚಿನ್ನತ್ತಂಬಿ ... ಎಂಬುವನನ್ನು ... ಕೊಲೆಮಾಡಿದರೆಂದು ... ಗಾಯವಾದ ... ಆಸ್ಪತ್ರೆಗೆ ... ಜನರ ದಸ್ತಗಿರಿಯಾಗಿದೆ

### ಆಕಾಶವಾಣಿ ನಾಳೆ ... ಕ್ರಮ

ಬೆಳಗ್ಗೆ ... ಹರೀಂದ್ರು, ಹಿಂದೂಸ್ತಾನಿ ಸಂಗೀತ ಮಧ್ಯಾಹ್ನ ೧-೩೦ ರಿಕಾರ್ಡ್ ಸಂಗೀತ ... ಸಂಜೆ ... ಸಂಗೀತ ... ಕನ್ನಡ ಕಾವ್ಯ ನೀತಿ ... ಸಂಗೀತ ... ಮೋಹಿನ್ಯಾಟ್ಟಂ ... ಇಂಗ್ಲೀಷ್ ಭಾಷಣ ... ವಾರ್ತೆಗಳು

## ಮೈಸೂರು ವೈದ್ಯ ವಿದ್ಯಾರ್ಥಿಗಳ ಉತ್ತರದ ವೈಖರಿ

ಮೈಸೂರು ಮೆಡಿಕಲ್ ಕಾಲೇಜಿನ ಸವಿ ... ಯ ವರ್ಷ ಕಾಲೇಜಿನಲ್ಲಿ ಪ್ರವೇಶಕ್ಕಾಗಿ ಅರ್ಜಿ ಹಾಕಿದ್ದ ವಿದ್ಯಾರ್ಥಿಗಳ ಪೈಕಿ ಹಲವರನ್ನು ಕರೆಸಿಕೊಂಡು ಪ್ರಚಲಿತ ವಿಷಯಗಳ ಬಗ್ಗೆ ಪ್ರಶ್ನಿಸಿದಾಗ ಕೆಲವರು ವಿಚಿತ್ರವಾದ ಉತ್ತರಗಳನ್ನು ಕೊಟ್ಟಿರುತ್ತಾರೆ ಪಂಡಿತ ನೆಹರೂರವರು ಭಾರತದ ಅಧ್ಯಕ್ಷರು ರಾಜೇಂದ್ರ ಪ್ರಸಾದರು ಭಾರತದ ಪ್ರಧಾನ ಸೇನಾನಿ, ಜನರಲ್ ನಗೀಬ್ ಪಾಕಿಸ್ತಾನದ ಗೌರ್ನರ್ ಜನರಲ್ ಎಂಬ ... ಅವರುಗಳ ಉತ್ತರವಿತ್ತು ತಮ್ಮ ಜ್ಞಾನವನ್ನು ವ್ಯಕ್ತಪಡಿಸಿರುತ್ತಾರೆ

### ಚಾಲಕನಿಲ್ಲದ ವಿಮಾನ

ಇದೇ ಮೊಟ್ಟಮೊದಲನೆಯದಾಗಿ ಚಾಲಕನಿಲ್ಲದೆ ವಿಮಾನವೊಂದು ನ್ಯೂಯಾರ್ಕಿನಿಂದ ಲಂಡನ್ನಿಗೆ ಪ್ರಯಾಣ ಮಾಡಿರುತ್ತದೆ ಪ್ರಯಾಣಿಕರನ್ನೂ ಸಾಮಾನುಗಳನ್ನೂ ಅದು ಕೊಂಡೊಯ್ದಿರುತ್ತದೆ ಭೂಮಿಯ ಮೇಲಿಂದಲೇ ವೈರ್‌ಲೆಸ್ ಯಂತ್ರ ಸಾಧನಗಳ ಮೂಲಕ ಅದನ್ನು ನಡೆಸಲಾಗಿರುತ್ತದೆ ಕಳೆದ ತಿಂಗಳಲ್ಲಿ ವಿಮಾನ ಸಂಚಾಲಕರುಗಳು ಮುಷ್ಕರ ಹೂಡಿದ್ದಾಗ ... ಐರ್ಲೆಂಡ ಮಾರ್ಗದಲ್ಲಿ ಪರೀಕ್ಷಾರ್ಥವಾಗಿ ಈ ವಿಮಾನವನ್ನು ಎರಡು ಬಾರಿ ಚಾಲಕನಿಲ್ಲದೆ ಮೇಲ್ಕಂಡ ರೀತಿಯಲ್ಲಿ ನಡೆಸಲಾಗಿದ್ದಿತು

### ಭದ್ರಾಚಲ ನಗರದೊಳಕ್ಕೆ ಪ್ರವಾಹದ ನೀರು

ಗೋದಾವರಿ ನದಿಯಲ್ಲಿ ಪ್ರವಾಹವು ಉಕ್ಕಿ ಭದ್ರಾಚಲಕ್ಕೆ ನೀರು ನುಗ್ಗಿ ಅಲ್ಲಿನ ಶ್ರೀ ರಾಮ ದೇವಸ್ಥಾನವು ಪವಿತ್ರದಿಂದ ... ಗುರಿಯಾಗಿದೆ

### ಗೋಮತಿ ನದಿಯಲ್ಲಿ ದೋಣಿ ಮುಳುಗಿ ಏಳು ಜನರ ಮರಣ

... ಬಳಿ ಮೋಹನಾಘಾಟಿನಲ್ಲಿ ಗೋಮತಿ ನದಿಯಲ್ಲಿ ಕಳೆದ ಶನಿವಾರ ೨೫ ಜನರಿದ್ದ ಒಂದು ದೋಣಿಯು ಪ್ರವಾಹದಲ್ಲಿ ಮಗುಚಿಕೊಂಡಿತೆ ಮೂ ೭ ಜನ ಪ್ರಯಾಣಿಕರು ಮೃತಪಟ್ಟರೆಂದೂ ವರದಿಯಾಗಿದೆ

### ವಿ ನಂಜಪ್ಪನವರಿಗೆ ೫೦ ಎಕರೆ ಜಮೀನು ಕೊಡಲು ವಿರೋಧ

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಸಹೋದರ ಶ್ರೀ ವಿ ನಂಜಪ್ಪನವರು ರಾಮನಗರ ತಾಲ್ಲೂಕು ಮಟ್ಟಿದೊಡ್ಡಿಯಲ್ಲಿ ತಮಗೆ ಕೊಟ್ಟಿದ್ದ ಜಮೀನುಗಳನ್ನು ರೈತರಿಗೆ ಬಿಟ್ಟುಕೊಡುವುದರ ಬದಲಾಗಿ ಅವರಿಗೆ ಸರ್ಕಾರದವರು ಬೇರೆ ಕಡೆ ೫೦ ಎಕರೆ ಜಮೀನನ್ನು ಕೊಡುವುದಕ್ಕೆ ... ಕಾಂಗ್ರೆಸ್ ಸಮಿತಿ ಕಛೇರಿಯು ಆಕ್ಷೇಪಿಸಿರುವುದಾಗಿ ವರದಿಯಾಗಿದೆ ... ಕಾಂಗ್ರೆಸ್ ... ಗಮನಕ್ಕೆ ತರಲಾಗಿ, ... ಉತ್ತರ ಬಂದಿರುವುದಾಗಿ ... ಗೊತ್ತಾಗಿದೆ ... ಕಾಂಗ್ರೆಸ್ ... ಪ್ರಕರಣವಲ್ಲ ಶ್ರೀ ... ನಂಜಪ್ಪನವರಿಗೆ ಬೇರೆ ಕಡೆ ೫೦ ಎಕರೆ ಜಮೀನು ಕೊಡುವಂತೆ ಶಿಫಾರಸು ಮಾಡಿದ್ದರು

### ಅಂಗಡಿ ಕಾನೂನು ಉಲ್ಲಂಘನೆಗಾಗಿ ದಂಡ

ಮೈಸೂರಿನ ಅಂಗಡಿ ಸಿಬ್ಬಂದಿ ಇನ್ಸ್‌ಪೆಕ್ಟರ ... ಕಾನೂನಿನ ಉಲ್ಲಂಘನೆ ಸಂಬಂಧವಾಗಿ ಹೂಡಿದ್ದ ಹಲವು ಮೊಕದ್ದಮೆಗಳಲ್ಲಿ ಕೆಳಗೆ ಕಂಡ ಅಂಗಡಿ ಮಾಲೀಕರಿಗೆ ದಂಡವನ್ನು ವಿಧಿಸಲಾಗಿದೆ ದಿವಾನ್ ಬೀದಿಯ ಜಿದ್ದಾ ಟ್ರಂಕ್ ಷಾಪಿನ ಶ್ರೀ ಎಂ ಎಸ್. ಜಿದ್ದಾ, ದೇವರಾಜ ಮಾರ್ಕೆಟ್ಟಿನ ಧನಲಕ್ಷ್ಮಿ ಕಾಂಡಿಮೆಂಟ್ ಸ್ಟೋರಿನ ಶ್ರೀ ಎ ಎ ... ಮಾನಂದವಾಡಿ ರಸ್ತೆ ಫ್ಲೋರ್ ಮಿಲ್ ಶ್ರೀ ಮುನಿಯಪ್ಪ ಎಂಬುವರಿಗೆ ತಲಾ ೧೦ ರೂ, ಸುಣ್ಣದಕೇರಿ ರಸ್ತೆಯ ಲಕ್ಷ್ಮೀ ಫ್ಲೋರ್ ಮಿಲ್ಲಿನ ಶ್ರೀ ಸಿದ್ದೇಗೌಡರಿಗೆ ೫ ರೂ

## ಪುರೋಹಿತನ ಕತ್ತು ಕುಯ್ದು ಕೊಲೆ

ಕಡಪಾ ಬಳಿ ಪೇಟೆಯ ಕಡಪಾ ಎಂಬಲ್ಲಿ ವೆಂಕಟಕೃಷ್ಣಯ್ಯ ಎಂಬ ೬೦ ವರ್ಷದ ಪುರೋಹಿತರೊಬ್ಬರ ಕುತ್ತಿಗೆಯನ್ನು ಕುಯ್ದು ಅವರು ಮರಣ ಹೊಂದಿದ ಸಮಾಚಾರವು ವರದಿಯಾಗಿದೆ ಅವರ ಮನೆ ಬಾಗಿಲಿನ ಅಗುಳಿಯು ಒಳಗಡೆ ಹಾಕಲ್ಪಟ್ಟಿದ್ದರಿಂದ, ಸಬ್ ಇನ್ಸ್‌ಪೆಕ್ಟರರು ಗೋಡೆ ಹಾರಿ ಒಳಗಡೆ ಪ್ರವೇಶಿಸಿ ನೋಡಲಾಗಿ ಅವರ ಕಬ್ಬಿಣದ ಪೆಟ್ಟಿಗೆ ತೆಗೆಯುವ ಪ್ರಯತ್ನ ನಡೆದುದೂ ರಕ್ತದ ಕಾಲಿನ ಗುರುತುಗಳೂ ಕಾಣಬಂದುವೆಂದು ಹೇಳಲಾಗಿದೆ ನಗನಾಣ್ಯಗಳೂ ಅಪಹಾರವಾಗಿರಲಿಲ್ಲ ಪುರೋಹಿತರ ಮನೆಯಲ್ಲಿ ಒಬ್ಬರೇ ಇದ್ದರು ಅವರ ಚಿಕ್ಕ ವಯಸ್ಸಿನ ಪತ್ನಿ ೪ನೇ ತಾ|| ಮನೆಯನ್ನು ಬಿಟ್ಟು ಹೋಗಿದ್ದಳೆಂದು ಹೇಳಲಾಗಿದೆ

### ಅತ್ತುಂಗಲ್ ಪೌರಸಭೆಯಿಂದ ಸ್ವಾತಂತ್ರ್ಯ ದಿನಾಚರಣೆಯಿಲ್ಲ

ತಿರುವಾಂಕೂರಿನ ಅತ್ತುಂಗಲ್ ಪೌರ ಸಭೆಯ ಅಧಿವೇಶನವು ಮೊನ್ನೆ ನಡೆದು ೧೫ನೇ ತಾ|| ಸ್ವಾತಂತ್ರ್ಯ ದಿನವನ್ನು ಆಚರಿಸಕೂಡದೆಂದು ಬಹುಮತದಿಂದ ನಿರ್ಧರಿಸಲಾಯಿತು ಪೌರಸಭೆಯಲ್ಲಿ ಕಮ್ಯೂನಿಸ್ಟರು ಅಧಿಕ ಸಂಖ್ಯಾತರಾಗಿರುತ್ತಾರೆ ಈ ನಿರ್ಣಯವನ್ನು ಪ್ರತಿಭಟಿಸಿ, ಇತರ ಸದಸ್ಯರು ಸಭಾತ್ಯಾಗ ಮಾಡಿದರು ಕಮ್ಯೂನಿಸ್ಟ್ ಪಕ್ಷದವರು ೧೫ನೇ ತಾ|| ಸ್ವಾತಂತ್ರ್ಯ ದಿನದ ಬದಲು ನಿರುದ್ಯೋಗದ ದಿನವನ್ನು ಆಚರಿಸುವರು

### ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | ೫ ೧೪ ೦ | ೫೮ ೦ ೦ |
| ಎಳ್ಳು | ೫೧ ೦ ೦ | ೬೩ ೦ ೦ |
| ಹುಚ್ಚೆಳ್ಳು | ೩೧ ೦ ೦ | ೬೩ ೨ ೦ |
| ಹುರುಳಿ | ೪೫ ೪ ೦ | ೪೦ ೬ ೦ |
| ಹೆಸರು | ೩೬ ೨ ೦ | ೬೩ ೧೦ ೦ |
| ಅವರೆ | ೪೫ ೦ ೦ | |
| ಹುರುಕಂಡೆ | ೩೯ ೦ ೦ | ೬೧ ೦ ೦ |
| ಉದ್ದು | ೩೬ ೧೨ ೦ | ೩೭ ೧೪ ೦ |
| ತೆಂಗಿನಕಾಯಿ ೧೧೦೦ಕ್ಕೆ | ೧೫೭ ೦ ೦ | ೨೫೭ ೦ ೦ |

### ಕರ್ನಾಟಕ ಪ್ರಾಂತ ದಿನಾಚರಣೆ

ಮಂಗಳೂರು ೯

ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯವರ ಸೂಚನೆ ಪ್ರಕಾರ, ಕರ್ನಾಟಕ ವಾರವನ್ನು ಇಲ್ಲಿ ಈ ದಿನ ಆಚರಿಸಲಾಯಿತು ಮೆರವಣಿಗೆಯೂ, ಸಭೆಯೂ ನಡೆದವು ಮೆರವಣಿಗೆಯಲ್ಲಿ "ಕರ್ನಾಟಕ ಪ್ರಾಂತ ರಚನೆಯಾಗಲಿ, ನೆಹರೂ ಸರ್ಕಾರಕ್ಕೆ ಧಿಕ್ಕಾರ" ಮುಂತಾಗಿ ಘೋಷಣೆಗಳಾದುವು ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಕೆ ಪಿ ಶಾಂತಮೂರ್ತಿಯವರು ಭಾಷಣ ಮಾಡಿ, ಪ್ರಾಂತ ರಚನೆ ಬಗ್ಗೆ ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿದರು


**SRI GANESHA**

TALKIES

From 12-8-53 For 3 Days

**THE MAN WITH MY FACE**

With -Barry Nelson and Joseph Harvey

The Most Unusual Story Ever Filmed


### ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಮೊಬಲಗನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,
ಶಾಸ್ತ್ರಿ ಬಿಲ್ಡಿಂಗ್ಸ್, ಮೈಸೂರು

## ಫಲಪುಷ್ಪ ಪ್ರದರ್ಶನದ ಮುಕ್ತಾಯ

ಮೈಸೂರು ೧೧

ಕಳೆದ ಮೂರು ದಿನಗಳಿಂದಲೂ ನಗರದ ಪ್ರಾಣಿ ಸಂಗ್ರಹಾಲಯದಲ್ಲಿ ನಡೆಯುತ್ತಿದ್ದ ಫಲಪುಷ್ಪ ಪ್ರದರ್ಶನವು ನೆನ್ನೆ ಮುಕ್ತಾಯವಾಯಿತು ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ನೆನ್ನೆ ಪ್ರದರ್ಶನದ ಕಾರ್ಯಕರ್ತರುಗಳನ್ನೂ, ಸಹಾಯ ಮಾಡಿದವರನ್ನೂ ಮತ್ತು ಪತ್ರಿಕೋದ್ಯೋಗಿಗಳನ್ನೂ ಬರಮಾಡಿಕೊಂಡು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು

೨೬ ವರ್ಷಗಳಿಂದ ನಿಂತುಹೋಗಿದ್ದ ಈ ಪ್ರದರ್ಶನವು ಇಷ್ಟು ಮಟ್ಟಿಗೆ ಯಶಸ್ವಿಯಾಗಿ ನಡೆದುದಕ್ಕಾಗಿ ಸಮಿತಿಯವರನ್ನು ಅನೇಕರು ಅಭಿನಂದಿಸಿದರು ಪ್ರೇಕ್ಷಕರ ಟಿಕೆಟ್ಟುಗಳ ಮೂಲಕ ೧,೧೦೦ ರೂ ವಸೂಲಾಗಿತ್ತು. ಪ್ರದರ್ಶನದಲ್ಲಿ ಶ್ರೀಮನ್ಮಹಾರಾಜರು ಒಂದು ಶೀಲ್ಡ್ ಬಹುಮಾನವನ್ನು ಕೊಟ್ಟಿರುತ್ತಾರೆ. ಇತರ ಇಲಾಖೆಗಳಿಂದ ಒಟ್ಟು ೬೦೦ ರೂ ಬಹುಮಾನಗಳು ಬಂದಿರುತ್ತವೆ ಪ್ರದರ್ಶನದಲ್ಲಿ ಐವತ್ತು ಜನರೂ, ಸಂಸ್ಥೆಗಳೂ ಭಾಗವಹಿಸಿದ್ದರು

ಈ ಪ್ರದರ್ಶನವು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಸಕಲರಿಗೂ ಉಪಾಧ್ಯಕ್ಷರು ವಂದನೆಯನ್ನರ್ಪಿಸಿರುವರು.

### ಸಂತರ್ಪಣೆ ನೂಕುನುಗ್ಗಲಿನಲ್ಲಿ ೩ ಬಾಲಕರ ಮರಣ

ಸೇಲಮ್ಮಿನ ಕಿಷ್ಣಾಪೇಟೆಯ ಕನ್ನಿಕಾಪರಮೇಶ್ವರಿ ಮಂಟಪದಲ್ಲಿ ಮಾರಿಯಮ್ಮನ ಹಬ್ಬದ ಸಂಬಂಧವಾಗಿ ಕಳೆದ ಶನಿವಾರ ಬಡಬಗ್ಗರಿಗೆ ಅನ್ನದಾನವನ್ನು ಏರ್ಪಡಿಸಿದ್ದಾಗ ಆದ ನೂಕು ನುಗ್ಗಲಿಗೆ ಸಿಕ್ಕಿ ಮೂವರು ಬಾಲಕರು ಮೃತಪಟ್ಟು, ೯ ಜನರಿಗೆ ಗಾಯಗಳಾಗಿವೆ ಪ್ರತಿ ವರ್ಷವೂ ಈ ವಿಚಾರ ಮಾಡುತ್ತಿದ್ದಂತೆಯೇ ಅನ್ನದಾನದ ವ್ಯವಸ್ಥೆಯಾಗಿ ಮೊದಲನೆಯ ಪಂಕ್ತಿ ಊಟವಾದಮೇಲೆ ಹೆಚ್ಚು ಜನರು ಏಕಾಏಕಿ ನುಗ್ಗಿ, ಇದರಿಂದ ಅನಾಹುತವು ಸಂಭವಿಸಿತೆಂದು ಹೇಳಲಾಗಿದೆ


## ಮಾರಾಟಕ್ಕಿವೆ

ಷಬ್ಬರ್ ಡಿಕ್ಷನರಿ, ಬ್ರೀಫ್ ಲೇಖಿಂಗ್ ಆರ್ಥರ್ಸ್ ಇಂಗ್ಲಿಷ್ ಪೋಯೆಮ್ಸ್ ಒಂದು ಮತ್ತು ರೈನನೂ, ಕ್ಯಾರಿಯರ್, ಸ್ಟ್ಯಾಂಡ್, ಬೀಗ ಇವುಗಳನ್ನೂ ಇಂಗ್ಲಿಷ್ ಮೇಕ್ ಹೊಸಾಹೊಸ ಹರ್ಕ್ಯುಲಿಸ್ ಸೈಕಲ್ ಸಹಾ ಬಿಕರಿಗೆ ಇವೆ ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ

ಶ್ರೀ ಕೆ. ಬಿ. ಕೃಷ್ಣಯ್ಯ,
2662 6ನೇ ಕ್ರಾಸ್ ರೋಡ್,
ವಿ ವಿ ಮೊಹಲ್ಲಾ ಮೈಸೂರು.

**D. BANUMIAH'S COLLEGE OF COMMERCE, MYSORE**

The Junior B Com class will start working from 15th August 1953 The College will be shifted from the present building to a more spacious and centrally situated building Admissions will be closed shortly If sufficient number of graduates join the course, the question of opening a separate section with due facilities will be considered Further particulars can be had at the office of the college during working hours


Edited, Printed and Published by A R Nagarajan at Sadhvi Press, D. Subbiah Road, Mysore

ಟೆಲಿಫೋನ್ ನಂ 792

|| ವಂದೇ ಮಾತರಂ ||

ಇಂಡಿಯನ್ ಎಕ್ಸ್‌ಪ್ರೆಸ್ ... ಸರ್ವಿಸ್

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಹೆಚ್ಚು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE WEDNESDAY 12-8-1953 ಮೈಸೂರು : ಬುಧವಾರ ೧೨-೮-೧೯೫೩ [ ಸಂಚಿಕೆ ೧೩

# ಭಾರತದಮೇಲೆ ಧರ್ಮಯುದ್ಧಕ್ಕಾಗಿ ಕರಾಚಿಸಭೆ ಒತ್ತಾಯ

## ಪೈಲ್ವಾನ್ ಸಣ್ಣಬೋರಯ್ಯನ ದಸ್ತಗಿರಿ

ಮೈಸೂರು ೧೧

ರಾಜಧಾನಿಯ ಮಂಡಿ ಪೋಲೀಸ್ ನಗರದ ಪೈಲ್ವಾನ್ ಶ್ರೀ ಸಣ್ಣಬೋರಯ್ಯ ಎಂಬುವನನ್ನು ದಸ್ತಗಿರಿ ಮಾಡಿರುತ್ತಾರೆ. ಅವನು ಪೋಲೀಸು ಶಿಕ್ಷಣ ಶಾಲೆಯ ಕಾನ್ಸ್‌ಟೇಬಲ್ಲೊಬ್ಬನ ಮೇಲೆ ಬಿದ್ದು ಹಣವನ್ನು ಕಿತ್ತುಕೊಳ್ಳಲೆತ್ನಿಸಿದನೆಂಬುದೇ ದಸ್ತಗಿರಿಗೆ ಕಾರಣ.

**ಹೆಂಗಸನ್ನು ಕೆಣಕಿದುದಕ್ಕಾಗಿ ದಂಡ**

ನಂಜನಗೂಡಿನ ಬಸ್ ಸ್ಟಾಂಡಿನಲ್ಲಿ ಮೊನ್ನೆ ನಂಜಯ್ಯ ಎಂಬ ಒಬ್ಬ ಪ್ರಯಾಣಿಕನು ಒಬ್ಬ ಮಹಿಳೆಯನ್ನು ಕೆಣಕಿದನೆಂದು ಆತನ ಮೇಲೆ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅವನಿಗೆ ೧೦ ರೂ. ದಂಡವನ್ನು ವಿಧಿಸಲಾಗಿದೆ.

**ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ರಜಾ**

ಭಾರತದ ಆರನೇ ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ಸಂಸ್ಥಾನ ಸರ್ಕಾರದ ಎಲ್ಲಾ ನೌಕರರಿಗೂ ಸಂಬಳ ಸಹಿತದ ರಜವನ್ನು ಕೊಡಲಾಗಿದೆ. ಖಾಸಗಿ ಕೈಗಾರಿಕೆ ಮತ್ತು ಕಾರ್ಖಾನೆಯವರೂ ಸಹ ತಮ್ಮ ಕೆಲಸಗಾರರೂ ಉತ್ಸವದಲ್ಲಿ ಭಾಗವಹಿಸಲು ಆ ದಿನ ಸಂಬಳ ಸಹಿತ ರಜಾ ಕೊಡಬೇಕೆಂತ ಸರ್ಕಾರದವರು ಸಾಧಿಸಿರುತ್ತಾರೆ.

**ಹಿಂದೀ ಪರೀಕ್ಷೆಗಳ ಅವೇದನ ಪತ್ರ**

ಬರುವ ಡಿಸೆಂಬರ್ ತಿಂಗಳ ಪ್ರಥಮಾಗ ವಿಶ್ವವಿದ್ಯಾಲಯದ ಹಿಂದೀ ಪ್ರಥಮ ಮಧ್ಯಮ ಮತ್ತು ಉತ್ತಮ ಪರೀಕ್ಷೆಗಳಿಗೆ ಅವೇದನ ಪತ್ರಗಳನ್ನು ಕಳುಹಿಸಲು ಈ ತಿಂಗಳು ೨೦ನೇ ತಾ|| ಕಡೆಯ ದಿನವಾಗಿರುವುದರಿಂದ ಅವುಗಳನ್ನೂ ಮತ್ತು ಹೆಚ್ಚಿನ ವಿವರಗಳನ್ನೂ ಪಡೆಯಲು ಮೈಸೂರು ಹಿಂದಿ ಪ್ರಚಾರ ಸಭಾ ಕಛೇರಿಯಲ್ಲಿ ವಿಚಾರಿಸಬಹುದೆಂದು ತಿಳಿಸಲಾಗಿದೆ.

**ಹರಿಕಥೆ**

ರಾಜಧಾನಿಯ ನಜರ್‌ಬಾದಿನ ಶ್ರೀ ಮಧುಗನ್ನಡಿವರ ದೇವಾಲಯದಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ ಪಿ. ರಾಮಸ್ವಾಮಿ ನಾಯ್ಡು ಮತ್ತು ಶ್ರೀ ಸಿ. ಕೆ. ಪಾರ್ಥಸಾರಥಿಯವರಿಂದ ಬೋಧಿಸಿ ಮತ್ತು ಕಬೀರ್ ಎಂಬ ಹರಿಕಥೆಯು ಸಂವಾದ ರೂಪದಲ್ಲಿ ನಡೆಯುವುದು.

## ಕಾಶ್ಮೀರದ ಘಟನೆ ಬಗ್ಗೆ ಕರಾಚಿಯಲ್ಲಿ ಹರತಾಳ

ಭಾರತ ಸರ್ಕಾರದ ಪರೋಕ್ಷ ಬೆಂಬಲದಿಂದ ಕಾಶ್ಮೀರದ ಅಧಿಕಾರವು ತೆಗೆದುಕೊಂಡಿರುವ ಕ್ರಮವನ್ನು ಪ್ರತಿಭಟಿಸಲು ಕರಾಚಿಯ ವ್ಯಾಪಾರಿ ಸಂಸ್ಥೆಗಳು ಕೊಟ್ಟ ಕರೆಯಂತೆ ನೆನ್ನೆ ಆ ಊರಿನಲ್ಲಿ ಹತ್ತಿ, ಬಟ್ಟೆಗಳು, ಎಣ್ಣೆ ಬೀಜ ಮತ್ತು ಇತರ ಕೆಲವು ಮಾರ್ಕೆಟ್ಟುಗಳು ಬಂದಾಗಿದ್ದುವು. ಕೆಲವು ಶಾಲಾ ಕಾಲೇಜುಗಳೂ ಮುಚ್ಚಲ್ಪಟ್ಟಿದ್ದುವು. ಕಾಶ್ಮೀರದ ಪರಿಸ್ಥಿತಿಯನ್ನು ಕುರಿತು ಪಾಕಿಸ್ತಾನದ ರೇಡಿಯೋವು ಅಪಪ್ರಚಾರ ಮಾಡುತ್ತಿದ್ದು, ಅನೇಕ ಸುಳ್ಳು ಸುದ್ದಿಗಳನ್ನೂ, ಕೋಮುವಾರು ದ್ವೇಷ ಬೆಳೆಸುವ ವಿಷಯಗಳನ್ನೂ ಪ್ರಸಾರ ಮಾಡುತ್ತಿರುವುದೆಂದು ಹೇಳಲಾಗಿದೆ.

★ ಹರ್ಷಿಯದ ದಕ್ಷಿಣ ತೀರ ಪ್ರದೇಶದಲ್ಲಿ ಬಿಸ್ಗಾಳಿಯ ವಿನಃ ಕಾರಣ ೧೧ ಮಂದಿ ಮೃತಪಟ್ಟಿರುತ್ತಾರೆ. ಅಲ್ಲಿ ೧೨೦ ಅಂಗಡಿಗಳೆಲ್ಲಾ ಉಕ್ಕಿವೆ.

## ಉತ್ತರ ಕೊರಿಯಾ ಉಪ ಪ್ರಧಾನಿಯ ಆತ್ಮಹತ್ಯೆ

ಉತ್ತರ ಕೊರಿಯದ ಉಪ ಪ್ರಧಾನಿ ಹೋಕೈರವರು ಆತ್ಮಹತ್ಯ ಮಾಡಿಕೊಂಡಿರುವುದಾಗಿ ಅಲ್ಲಿನ ರೇಡಿಯೋವು ತಿಳಿಸಿರುತ್ತದೆ. ಅಮೆರಿಕಕ್ಕೆ ರಹಸ್ಯಗಳನ್ನು ಒದಗಿಸಿದರೆಂದು ಇತ್ತೀಚೆಗೆ ವಿಚಾರಣೆಗೆ ಗುರಿಯಾದ ಹಲವು ಉತ್ತರ ಕೊರಿಯಾ ಅಧಿಕಾರಿಗಳೊಡನೆ ಹೋಕೈರವರು ಸಂಪರ್ಕ ಹೊಂದಿದ್ದರೆಂದು ಹೇಳಲಾಗಿದೆ.

## ಸಂಸ್ಕೃತದಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವ

ಪೂನಾ ವಿಶ್ವವಿದ್ಯಾಲಯದ ... ಘಟಿಕೋತ್ಸವದಲ್ಲಿ ಕಾರ್ಯಕ್ರಮವನ್ನು ... ದ ... ಕಾರ್ಯ ಮತ್ತು ... ರಕ್ಷಿತಿಯನ್ನು ... ನನ್ನು ಪರಿ ... ದ ಸ್ವಾಮಿ ... ವರು.

## ಇರಾನ್ ಪಾರ್ಲಿಮೆಂಟಿನ ವಿಸರ್ಜನೆಗೆ ಜನಮತಗಣನೆ

ಇರಾನಿನ ಪಾರ್ಲಿಮೆಂಟ್ ಮಜ್ಲಿಸ್ ಸಭೆಯನ್ನು ವಿಸರ್ಜಿಸಬೇಕೆ, ಬೇಡವೆ ಎಂದು ಸರ್ಕಾರದವರು ತೆಗೆದುಕೊಂಡ ಜನಾಭಿಪ್ರಾಯದಲ್ಲಿ ೨೦ ಲಕ್ಷಕ್ಕೂ ಹೆಚ್ಚು ಮಂದಿ ಸಭೆಯ ವಿಸರ್ಜನೆಗೆ ಒಪ್ಪಿ ಮತವಿತ್ತಿರುವರೆಂದೂ, ೭೦೦ ಮಂದಿ ಮಾತ್ರ ವಿರೋಧವಾಗಿ ಓಟು ಮಾಡಿರುವರೆಂದೂ ಹೇಳಲಾಗಿದೆ.

## ಕಾಶ್ಮೀರದಲ್ಲಿ ಅಕ್ಕಿ ಬೆಲೆಯು ಇಳಿತಾಯ

ಕಾಶ್ಮೀರ ಸರ್ಕಾರದವರು ಅಕ್ಕಿಯ ಬೆಲೆಯನ್ನು ಅಲ್ಲಿನ ಜನತೆಗೆ ೩ ರೂ. ನಷ್ಟು ಇಳಿಸಿರುತ್ತಾರೆ. ೩ ಮಣಕ್ಕೆಂತಲೂ ಹೆಚ್ಚಿನ ಅಕ್ಕಿಯ ಪ್ರಮಾಣಕ್ಕೆ ೧೧ ೭-೦ ರೂ. ಆಗಿದ್ದ ಬೆಲೆಯಿದ್ದುದ ಈಗ ೮ ೦ ರೂ. ಆಗಿದೆ. ಹೊಸ ಸರ್ಕಾರವು ಬಂದನಂತರ ಇದು ಮೊದಲನೇ ಸುಧಾರಣೆ ಇದು.

## ಗ್ರೀಸ್ ದ್ವೀಪದಲ್ಲಿ ಭೂಕಂಪ, ೧೦೦ ಜನರ ಮರಣ

ಗ್ರೀಸ್ ದೇಶಕ್ಕೆ ಸೇರಿದ ಸಿಫಲೋನಿಯಾ ದ್ವೀಪದಲ್ಲಿ ನೆನ್ನೆ ಭೂಕಂಪವಾಗಿ ೧೦೦ ಮಂದಿ ಮಡಿದು, ೨೫೦ ಜನರು ಗಾಯಗೊಂಡಿರುವರೆಂದೂ ಅಪರಿಮಿತವಾಗಿ ಆಸ್ತಿ ನಷ್ಟವಾಗಿರುವುದಲ್ಲದೆ, ೩ ಹಳ್ಳಿಗಳು ಪೂರ್ಣವಾಗಿ ನಾಶ ಹೊಂದಿರುವುವೆಂದೂ ವರದಿಯಾಗಿದೆ.

## ಷೇಕ್ ಅಬ್ದುಲ್ಲಾರವರ ಪತ್ನಿಗೆ ೧೦೦೦ ರೂ. ಮಾಸಾಶನ

ಕಾಶ್ಮೀರದ ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರ ಪತ್ನಿ ಮತ್ತು ಮಾಜಿ ರೆವಿನ್ಯೂ ಮಂತ್ರಿ ಮಿರ್ಜಾ ಅಫ್ಜಲ್ ಬೇಗ್‌ರವರ ಪತ್ನಿ ಇವರುಗಳಿಗೆ ಕಾಶ್ಮೀರ ಸರ್ಕಾರದವರು ತಿಂಗಳಿಗೆ ತಲಾ ೧ ಸಾವಿರ ರೂ. ಭತ್ಯವನ್ನು ಮಂಜೂರು ಮಾಡಿರುತ್ತಾರೆ.

## ವಿಶ್ವಸಂಸ್ಥೆ ವೀಕ್ಷಕರ ವರ್ತನೆ ಬಗ್ಗೆ ಕಾಶ್ಮೀರದ ಎಚ್ಚರಿಕೆ

**ಪಾಕಿಸ್ತಾನದ ಪರವಾಗಿ ಪ್ರೇರೇಪಿಸುವ ಆಪಾದನೆ**

ಕಾಶ್ಮೀರ ಪಾಕಿಸ್ತಾನದ ಬಿಕ್ಕಟ್ಟಿನ ವಿಷಯದಲ್ಲಿ ವಿಶ್ವಸಂಸ್ಥೆಯ ವೀಕ್ಷಕರು ಅನವಶ್ಯಕವಾದ ಆಸಕ್ತಿ ವಹಿಸುತ್ತಿರುವುದನ್ನು ಮುಂದುವರಿಸಿದರೆ ಅವರಿಗೆ ಕೊಡಲಾಗಿರುವ ಎಲ್ಲಾ ರಾಜತಾಂತ್ರಿಕ ಸೌಲಭ್ಯಗಳನ್ನೂ ಹಿಂದಕ್ಕೆ ತೆಗೆದುಕೊಳ್ಳಬೇಕಾಗುವುದೆಂದು ಕಾಶ್ಮೀರ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ. ಯುದ್ಧ ಸ್ತಂಭನ ರೇಖೆಯ ಬಳಿ ಗಸ್ತು ತಿರುಗುವುದನ್ನು ಬಿಟ್ಟು ವೀಕ್ಷಕರು ಶ್ರೀನಗರಕ್ಕೆ ಬಂದಿರುವರೆಂದೂ ಅವರು ಕಛೇರಿಯ ಸಂಚಿನ ಕೇಂದ್ರವಾಗಿ ... ಸೇರಿದ ಜೀಪುಗಳ ... ನಗರದಲ್ಲಿ ತಿರುಗುತ್ತಾ, ಸಂಸ್ಥಾನ ಸರ್ಕಾರದ ವಿರುದ್ಧವಾಗಿಯೂ ಪಾಕಿಸ್ತಾನದ ಪರವಾಗಿಯೂ ಚಟುವಟಿಕೆಗಳನ್ನು ಪ್ರೇರಿಸುವುದಲ್ಲದೆ ಕೊಡುಗಿರುವರೆಂದೂ ಆ ಅಧಿಕಾರಿಯು ತಿಳಿಸಿರುತ್ತಾರೆ. ಒಬ್ಬ ವಿಶ್ವಸಂಸ್ಥೆ ಅಧಿಕಾರಿಗಳು ಹಲವು ದುಷ್ಟ ಜನರಿಗೆ ದುಡ್ಡನ್ನು ಕೊಟ್ಟು ಸರ್ಕಾರದ ವಿರುದ್ಧವಾಗಿ ಕಾರ್ಯಾಚರಣೆ ನಡೆಸುವಂತೆ ಪ್ರೇರೇಪಿಸುತ್ತಿರುವರೆಂದೂ ಆರೋಪಿಸಿರುತ್ತಾರೆ.

ಗೊತ್ತಾದ ಸ್ಥಳಗಳಲ್ಲದೆ ಬೇರೆ ಕಡೆಗಳಲ್ಲಿ ಜೀಪುಗಳು ಕಂಡುಬಂದರೆ ಅವನ್ನು ವಶಪಡಿಸಿಕೊಂಡು ಅವುಗಳಲ್ಲಿರುವ ಜನರನ್ನು ದಸ್ತಗಿರಿ ಮಾಡಲು ಕಾಶ್ಮೀರ ಸರ್ಕಾರದವರು ಆಜ್ಞೆ ಮಾಡಿದರೆ ಮೂರು ಜನ ವೀಕ್ಷಕರು ಮೊನ್ನೆ ಸಭೆ ನಡೆಸಿ, ನಗರದಲ್ಲಿ ಸುತ್ತಾಡಿದರೆಂದು ಸರ್ಕಾರಕ್ಕೆ ತಿಳಿದು ಬಂದುದಾಗಿಯೂ ಅಧಿಕಾರಿಯು ತಿಳಿಸಿರುತ್ತಾರೆ.

## ಷೇಕ್ ಅಬ್ದುಲ್ಲಾರವರ ಕಾರ್ಯದರ್ಶಿಯ ಬಿಡುಗಡೆ

ಷೇಕ್ ಅಬ್ದುಲ್ಲಾರವರ ಆಪ್ತ ಕಾರ್ಯದರ್ಶಿ ಶ್ರೀ ... ರವರನ್ನು ಬಿಡುಗಡೆ ಮಾಡಲಾಗಿರುವುದೆಂದೂ, ಪರಿಸ್ಥಿತಿಯು ಶಾಂತವಾದರೆ ಇತರರ ಬಿಡುಗಡೆಯೂ ಆಗಬಹುದೆಂದೂ ಹೇಳಲಾಗಿದೆ.

## ಅನಂತಪುರದಲ್ಲಿ ಆಂಧ್ರದ ಗೌರ್ನರರ ನಿವಾಸ

ಆಂಧ್ರ ಪ್ರಾಂತದ ಗೌರ್ನರ್ ಆಗುವವರು ಅನಂತಪುರದಲ್ಲಿ ವಾಸಿಸುವರೆಂದು ಗೊತ್ತಾಗಿದೆ. ಕರ್ನೂಲ ಆಂಧ್ರದ ರಾಜಧಾನಿಯಾಗುವುದೆಂಬ ಕಾರಣಕ್ಕಾಗಿ ಅಲ್ಲಿ ನಿವೇಶನಗಳ ಬೆಲೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಮದ್ರಾಸ್ ಸರ್ಕಾರದವರು ಕ್ರಮ ಕೈಗೊಂಡಿರುತ್ತಾರೆ.

**ವಿವಾಹ ಮಹೋತ್ಸವ**

ಮಾಜಿ ದಿವಾನರಾದ ಶ್ರೀ ಎನ್. ಮಾಧವರಾಯರು ತಮ್ಮ ಮೊಮ್ಮಗಳು (ಡೆಪ್ಯುಟಿ ಆರೋಗ್ಯ ಇಲಾಖಾಧಿಕಾರಿಗಳಾದ ಡಾ|| ಎಸ್. ಶೇಷಗಿರಿರಾಯರ ಮಗಳು) ಸೌ|| ಕಮಲಾ ಅವರನ್ನು ಮದ್ರಾಸಿನ ನಿವೃತ್ತ ಸಿವಿಲ್ ಸರ್ಜನ್ನರಾದ ಡಾ|| ವೆಂಕಟಸುಬ್ಬರಾಯರ ಮಕ್ಕಳು ಶ್ರೀ ವಿ. ಶ್ರೀನಿವಾಸರಾಯರಿಗೆ ಕೊಟ್ಟು ನಾಳೆ ಬೆಂಗಳೂರಿನಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸುವರು.

## ಭಾರತದ ಮೇಲೆ ಧರ್ಮ ಯುದ್ಧದ ಘೋಷಣೆಗೆ ಕರೆ

**ಕರಾಚಿಯ ಭಾರಿ ಸಭೆಯಲ್ಲಿ ಒತ್ತಾಯ**

ಕರಾಚಿಯಲ್ಲಿ ನೆನ್ನೆ ಸಂಜೆ ಜನ್ನಾರವರ ತಂಗಿ, ಫಾತಿಮಾರವರ ಅಧ್ಯಕ್ಷತೆಯಲ್ಲಿ ಭಾರಿ ಬಹಿರಂಗ ಸಭೆಯೊಂದು ನಡೆದು, ಭಾರತದ ಮೇಲೆ "ಪೋಲೀಸು ಕಾರ್ಯಾಚರಣೆ" ನಡೆಸುವಂತೆ ಪಾಕಿಸ್ತಾನ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು.

ಪಾಕಿಸ್ತಾನ ಪಂಜಾಬಿನ ಮಾಜಿ ಗೌರ್ನರ್ ಇಸ್ಮಾಯಿಲ್ ಚುಂದ್ರಿಗರ್ ಮತ್ತು ಪಾಕಿಸ್ತಾನದ ಮಾಜಿ ಮಂತ್ರಿ ಖಲಿಲುರ್ ರೆಹಮಾನರವರೂ ಭಾಷಣಗಳನ್ನು ಮಾಡಿದರು. ಕಾಶ್ಮೀರದ ವಿಮೋಚನೆಗೆ ಸಿದ್ಧವಾಗಲು ಎಲ್ಲರೂ ಟೊಂಕಕಟ್ಟಿ ನಿಲ್ಲುವಂತೆ ಫಾತಿಮಾ ಜಿನ್ನಾರವರು ಉತ್ತೇಜನವಿತ್ತರು. ಕಾಶ್ಮೀರದಲ್ಲಿ ಈಚಿನ ಘಟನೆಗಳಾದನಂತರ ಪಾಕಿಸ್ತಾನಿಗಳು ಸುಮ್ಮನೆ ಕೈಕಟ್ಟಿಕುಳಿತುಕೊಂಡು ನೋಡಲು ಸಾಧ್ಯವಿಲ್ಲವೆಂದು ಚುಂದ್ರಿಗರ್‌ರವರು ತಿಳಿಸಿದರು.

ಸಭೆಯು ಮುಗಿದನಂತರ ಜನರು ಒಟ್ಟಾಗಿ ಅಲ್ಲಿನ ಪ್ರಧಾನಿಯವರ ನಿವಾಸಕ್ಕೆ ತೆರಳಿದಾಗ, ಅವರನ್ನು ಪ್ರಧಾನಿ ಮಹಮದ್ ಅಲಿಯವರು ಪಾಕಿಸ್ತಾನದ ಧ್ವಜವನ್ನು ಕೈಲಿ ಹಿಡಿದು ಎದುರುಗೊಂಡು ಕಾಶ್ಮೀರದ ಜನರ ವಿಮೋಚನೆಗೆ ತಮ್ಮ ಕೈಲಾದುದೆಲ್ಲವನ್ನೂ ಮಾಡಿ, ಅವರುಗಳಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಡಿಸಲು ಮಾಡಿಯುವುದಾಗಿ ಭರವಸೆ ಇತ್ತರು.

ಸಭೆಗೆ ಮುಂಚೆ ಮೆರವಣಿಗೆಯೊಂದು ನಡೆದು "ನೆಹರೂ ಸರ್ಕಾರ ಹಾಯಲಿ", "ಷೇಕ್ ಅಬ್ದುಲ್ಲಾರವರನ್ನು ಬಿಡುಗಡೆ ಮಾಡಿ" ಎಂದು ಕೂಗಲಾಯಿತು.

## ಕಾಶ್ಮೀರದ ಬಗ್ಗೆ ಭಾರತಕ್ಕೆ ಪಾಕಿಸ್ತಾನದ ಪತ್ರ

ಕಾಶ್ಮೀರದಲ್ಲಿ ಇತ್ತೀಚೆಗೆ ಸಂಭವಿಸಿರುವ ಘಟನೆಗಳ ಬಗ್ಗೆ ಪಾಕಿಸ್ತಾನದಲ್ಲಿ ಆಗಿರುವ ಪ್ರತಿಕ್ರಿಯೆಯನ್ನು ಕುರಿತು ದೆಹಲಿಗೆ ಪಾಕಿಸ್ತಾನ ಸರ್ಕಾರದವರು ಪತ್ರದ ಮೂಲಕ ತಿಳಿಸಿರುವರೆಂದು ಹೇಳಲಾಗಿದೆ. ನೆನ್ನೆ ಪಾಕಿಸ್ತಾನದ ರಾಯಭಾರಿ, ಘಜನ್ಫರ್ ಅಲಿಯವರು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿದ್ದರು.

## ಶ್ರೀನಗರದಲ್ಲಿ ಅರ್ಧ ಮುಷ್ಕರ ಹರತಾಳ

ಶ್ರೀನಗರದಲ್ಲಿ ನೆನ್ನೆಯೂ ಅರ್ಧ ಮುಷ್ಕರದ ಹರತಾಳವು ನಡೆಯಿತು. ಹೊಸ ಮಂತ್ರಿ ಮಂಡಲದ ಬಗ್ಗೆ ಪ್ರತಿಭಟನೆಯನ್ನು ಸೂಚಿಸುವ ಕೂಗುಗಳು ಕೇಳಬರುತ್ತಿದ್ದುವು. ಟಾಂಗಾಗಳ ಸಂಚಾರವಿರಲಿಲ್ಲ. ಬೇರೆ ವಾಹನಗಳ ಓಡಾಟವು ಮಾತ್ರ ಇದ್ದಿತು.

## ತುಮಕೂರಿಗೆ ಬೊಂಬಾಯಿ ಮುಖ್ಯ ಮಂತ್ರಿಯವರ ಭೇಟಿ

ಬೊಂಬಾಯಿಯ ಮುಖ್ಯ ಮಂತ್ರಿ ಮೊರಾರ್ಜಿ ದೇಸಾಯಿಯವರು ಈ ತಿಂಗಳು ೨೩ ನೇ ತಾ|| ತುಮಕೂರಿಗೆ ಭೇಟಿಯಿತ್ತು, ಅಲ್ಲಿನ ಹಿಂದೂಸ್ತಾನಿ ಪ್ರಚಾರ ಸಮಿತಿಯ ಘಟಿಕೋತ್ಸವದಲ್ಲಿ ಭಾಷಣ ಮಾಡುವರು.

## ಪೌರ ಸಭಾಧಿವೇಶನಕ್ಕೆ ಮಾಜಿ ಜಾಡಮಾಲಿಗಳ ಪ್ರವೇಶ

ಬೆಂಗಳೂರು ೧೧

[illegible] ಪೌರಸಭಾಧಿವೇಶನವು ನೆನ್ನೆ ಸೇರಿದ್ದಾಗ ೫೦೦ ಜನ ಮಾಜಿ ಜಾಡಮಾಲಿಗಳು ಸಭಾಭವನಕ್ಕೆ ಪ್ರವೇಶಿಸಿ [illegible] ಸಕ್ಕೆ ಭಂಗವುಂಟಾಗಿ [illegible] ಶ್ರೀ ರಾಮುಲು [illegible] ಜಾಡಮಾಲಿಗಳ [illegible] ಜಾಡಮಾಲಿಗಳ [illegible] ಸುವುದಂ [illegible] ಸಭೆ [illegible] ಪ್ರಭಾವ ಬೀರಲು ಪ್ರದರ್ಶನ [illegible] ರೆಂದು ಹೇಳಲಾಗಿದೆ [illegible] ೧೧೦ ಮಂದಿ ಜಾಡ [illegible] ಅರ್ಧ ಗಂಟೆ ನಂತರ [illegible] ಅವರಿಗೆ ಪುನಃ ಕೆಲಸ ಕೊಡುವುದಕ್ಕೆ [illegible]

## ಪಾಕಿಸ್ತಾನದಲ್ಲಿ ಪ್ರವಾಹ

[illegible] ಕಿಸ್ತಾನದ ಪಂಜಾಬ್ [illegible] ಹಳ್ಳಿಗಳ [illegible] ನಷ್ಟವಾಗಿದೆ

## ಕರಾಚಿಯಲ್ಲಿ ಮಿಜ್ರ್ ಇಸ್ಕಂದರ್

[illegible] ರಿನ ಮಾಜಿ [illegible] ದವರು [illegible]

## ಕಾಶ್ಮೀರ ವ್ಯವಹಾರದಲ್ಲಿ ಅಮೆರಿಕದ ಪ್ರವೇಶವಿಲ್ಲ

[illegible] ಶ್ಮೀರದ ವ್ಯವಹಾರದ [illegible] ವೇಶ ಮಾಡುವುದಾಗಿ ಮಾಡಿದ [illegible] ದನೆಗಳನ್ನು ದೆಹಲಿಯಲ್ಲಿರುವ ಅಮೆರಿಕದ [illegible] ಚಾರ್ಜ್ ಅಫೇರಿಸ್ [illegible] ಅಪಾದನೆಗಳ ಬಗ್ಗೆ ತಪ್ಪನ್ನು ಹಲವಾರು ಜನರು ಕೇಳಿರುವರೆಂದೂ [illegible] ಪೂರ್ಣವಾಗಿ [illegible] ಅವರು ಸ್ಪಷ್ಟಪಡಿಸಿದ್ದಾರೆ

## ಜೆ ಆರ್ ಡಿ ಟಾಟಾ ಅತ್ಯಂತ ಉತ್ತಮ ವ್ಯವಸ್ಥಾಪಕರು

ಪ್ರಪಂಚದಲ್ಲಿಯೇ ಈ ವರ್ಷದ [illegible] ಉತ್ತಮ ವ್ಯವಸ್ಥಾಪಕರ [illegible] ಜೆ ಆರ್ ಡಿ ಟಾಟಾರವರೆಂದು [illegible] ವರಿಗೆ ಇದಕ್ಕಾಗಿ [illegible] ಸಂಸ್ಥೆಯವರು [illegible]

## ಪತಿಯ ಕೊಲೆಗಾಗಿ ಜೀವಾವಧಿ ಶಿಕ್ಷೆ

ಚಿಕ್ಕಮಗಳೂರಿನ ಖುರ್ಷಿದ್ ಬೇಗಂ ಎಂಬ [illegible] ಎರಡು ವರ್ಷಗಳ ಹಿಂದೆ ಅಬ್ದುಲ್ ರಹಮಾನ್ [illegible] ಎಂಬ ವನೊಡನೆ [illegible] ತನ್ನ ಗಂಡ ಅಬ್ದುಲ್ ಗಫೂರ್ [illegible] ಎಂಬುವನನ್ನು ಕೊಲೆ ಮಾಡಿದಳೆಂದು [illegible] ಜೀವಾವಧಿ ಶಿಕ್ಷೆ ವಿಧಿಸಲಾಗಿದೆ ಆ ಘೋರವಾದ ಕೃತ್ಯಕ್ಕೆ ಮರಣ ದಂಡನೆಯನ್ನು ವಿಧಿಸಬೇಕಾಗಿದ್ದಿತೆಂದೂ ಆದರೆ [illegible] ಜೀವಾವಧಿ [illegible] ವಿಧಿಸಲಾಗಿದೆಯೆಂದೂ ನ್ಯಾಯಾಧೀಶರು ತಿಳಿಸಿರುತ್ತಾರೆ

## ಮದ್ರಾಸಿನ ಶಾಲೆಗಳಲ್ಲಿ ಭಕ್ತಿ ಬೋಧಕ ಸಭೆಗಳಿಗೆ ಅವಕಾಶ

ಹಲವು ವರುಷಗಳ [illegible] ಭಕ್ತಿ ಬೋಧಕ ಮತ್ತು ಆಧ್ಯಾತ್ಮಿಕ [illegible] ಸಭೆಗಳಿಗೆ ಅನುಮತಿ ಕೊಡುವು [illegible] ಮದ್ರಾಸು ಸರಕಾರದವರು ಪ್ರಕಟಿಸಿರುತ್ತಾರೆ [illegible] ಸಭೆಗಳನ್ನು ನಡೆಸಲು [illegible]

## ಗುಡ್ಡದಿಂದ ಲಾರಿ ಉರುಳಿ ಹೆಂಗಸಿನ ಮರಣ

[illegible] ದ ಘಟ್ಟಪ್ರದೇಶದಲ್ಲಿ [illegible] ಗೋಧಿ ಮೂಟೆಗಳನ್ನು ತುಂಬಿ [illegible] ಲಾರಿಯೊಂದು ಒಂದು ಕಣಿವೆಯ [illegible] ಉರುಳಿ [illegible] ಒಬ್ಬ ಹೆಂಗಸು ಮೃತಪಟ್ಟಳೆ ಮೂವರಿಗೆ ಗಾಯವಾಗಿದೆ

## ನಗೀಬ್ ಸರ್ಕಾರಕ್ಕೆ ಪರೂಕರ ಪತ್ನಿಯ ಅರಿಕೆ

ಈಜಿಪ್ಟಿನ ಮಾಜಿ ದೊರೆ ಫರೂಕರಿಂದ [illegible] ರವರ ಪತ್ನಿ [illegible] ಸರ್ಕಾರ [illegible] ತಮ್ಮ ಪರಿಸ್ಥಿತಿಯು [illegible] ತಮ್ಮ ಒಡವೆಗಳನ್ನು ಕೊಡುವಂತೆಯೂ [illegible] ಅವರು ಕೇಳಿಕೊಂಡಿರುತ್ತಾರೆ [illegible] ಅವರ ವಿವಾಹಕಾಲದಲ್ಲಿ ಕೊಡಲಾಗಿದ್ದಿತೆಂದು ಹೇಳಲಾಗಿದೆ

## ಭಾರತದ ವಿಮಾನ ಬಲಕ್ಕೆ ಫ್ರೆಂಚ್ ಜೆಟ್ ವಿಮಾನಗಳು

[illegible] ಭಾರತದ ವಿಮಾನ ಬಲಕ್ಕೆ [illegible] ಜೆಟ್ ವಿಮಾನಗಳನ್ನು [illegible] ಅವನ್ನು ಫ್ರೆಂಚರಿಂದ [illegible] ಬಗ್ಗೆ ಒಪ್ಪಂದವಾಗಿ [illegible]

## ಬಾಲಕನಿಂದ ಗೀತಾ ವ್ಯಾಖ್ಯಾನ

ಬೊಂಬಾಯಿಯ ಚಂದ್ರಶೇಖರ [illegible] ವರ್ಷದ ಬಾಲಕನು ಗೀತಾ ವ್ಯಾಖ್ಯಾನವನ್ನು ಮಾಡುತ್ತಿರುವನು ಹಿಂದಿ ಮತ್ತು ಸಂಸ್ಕೃತದಲ್ಲಿ ಅವನಿಗಿರುವ ಅಸಾಧಾರಣ [illegible] ಗಾಗಿ [illegible] ಮತ್ತು ಪ್ರಧಾನಿ ನೆಹರೂರವರು ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವರು ಗೀತಾ ಪ್ರವಚನಕ್ಕಾಗಿ ಅವನಿಗೆ [illegible] ಪತ್ರಗಳು ದೊರೆತಿವೆ

## ಏಷ್ಯಾ ಸಮಾಜವಾದಿಗಳ ಸಮ್ಮೇಳನ

ಹೈದರಾಬಾದಿನಲ್ಲಿ ಮೊನ್ನೆ ಏಷ್ಯಾ ಸಮಾಜವಾದಿಗಳ ಸಮ್ಮೇಳನವು [illegible] ಪ್ರಧಾನ ಮಂತ್ರಿ [illegible] ಅಧ್ಯಕ್ಷತೆಯಲ್ಲಿ ನಡೆಯಿತು [illegible] ಕೊರಿಯಾ [illegible] ವಿಶ್ವಸಂಸ್ಥೆಯಲ್ಲಿ [illegible] ಇಂಡೋಚೀನಾದ ಪರಿಸ್ಥಿತಿ [illegible] ಗಳನ್ನು ಚರ್ಚಿಸಲಾಯಿತು ಭಾರತದ ಪ್ರತಿನಿಧಿಗಳ [illegible] ರಾಮ ಮನೋಹರ ಲೋಹಿಯಾರವರೂ ಇರುವರು

### ಚಾಮುಂಡಿ ಬೆಟ್ಟದಲ್ಲಿ ಮಹಾರಾಜರ ವರ್ಧಂತಿ

ಚಾಮುಂಡಿ ಬೆಟ್ಟದಲ್ಲಿರುವ [illegible] ಶಾಲೆಯಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿಯನ್ನು ಆಚರಿಸಲಾಯಿತು ಶ್ರೀಮನ್ಮಹಾರಾಜರ ಜೀವನ ಚರಿತ್ರೆಯನ್ನು ವಿವರಿಸಿದ ನಂತರ [illegible] ಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು [illegible] ಮಕ್ಕಳಿಗೆ [illegible] ವಿವಿಧ ವಿನೋದಾವಳಿ ಮತ್ತು [illegible] ಎಂಬ ಸಣ್ಣ ನಾಟಕವೂ ಆಯಿತು

### ಚಾಮರಾಜನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಚಾಮರಾಜನಗರದಲ್ಲಿ ಇದೇ ೧೫ ನೇ ತಾ|| ಶನಿವಾರ ಸ್ವಾತಂತ್ರ್ಯ ದಿನಾಚರಣೆಯನ್ನು ಅಲ್ಲಿನ [illegible] ಟಾಕೀಸಿನ ಮುಂಭಾಗದ ಮೈದಾನದಲ್ಲಿ ಆಚರಿಸಲಾಗುವುದು ಬೆಳಿಗ್ಗೆ [illegible] ಗಂಟೆಗೆ ರಾಷ್ಟ್ರಧ್ವಜಾರೋಹಣಗಳಾಗ [illegible] ಕಾಂಗ್ರೆಸ್ ಸಮಿತಿಯವರು ಈ ಉತ್ಸವವನ್ನು ನೆರವೇರಿಸಲಿರುವರು

## ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ

ಇದೇ ೧೫ ನೇ ತಾ|| ಶನಿವಾರ ದೆಹಲಿಯಲ್ಲಿ [illegible] ನೇ ಸ್ವಾತಂತ್ರ್ಯೋತ್ಸವ ದಿನದ ಕಾರ್ಯಕ್ರಮದ ಅಂಗವಾಗಿ ಪ್ರಧಾನಿ ನೆಹರೂರವರು ಅಂದು ಬೆಳಿಗ್ಗೆ ಕೆಂಪು ಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವರು ಪ್ರಧಾನಿಯವರಿಗೆ ಗೌರವ ರಕ್ಷೆಯನ್ನು ಕೊಡಲಾಗುವುದು

## ಬಿ.ಎಸ್ ಗೋಪಾಲರಾಯರ ಜಾಮೀನು ಅರ್ಜಿ ವಜಾ

ಬೆಂಗಳೂರಿನ ಮುಖ್ಯ ಸೆಷನ್ಸ್ ನ್ಯಾಯಾಧೀಶರಾದ ಶ್ರೀ [illegible] ಪದ್ಮನಾಭಯ್ಯನವರ ಮುಂದೆ ಅರ್ಜಿಯೊಂದನ್ನು ಶ್ರೀ ಬಿ ಎಸ್ ಗೋಪಾಲರಾಯರು ಸಲ್ಲಿಸಿ [illegible] ಕೊಟ್ಟಿರುವ ಶಿಕ್ಷೆಯನ್ನೇ [illegible] ತಮ್ಮನ್ನು ಜಾಮೀನು ಮೇಲೆ ಬಿಡಬೇಕೆಂದು ಕೋರಿದ್ದುದನ್ನು ನ್ಯಾಯಾಧೀಶರು ಪರಿಶೀಲಿಸಿ ಅವರ ಅರ್ಜಿಯನ್ನು ವಜಾ ಮಾಡಿರುತ್ತಾರೆ ಸೆಷನ್ಸ್ ನ್ಯಾಯಾಧೀಶರು [illegible] ಅವರ ಶಿಕ್ಷೆಯನ್ನು ಕಾಯಂ ಮಾಡಿದ ಬಗ್ಗೆ ಗೋಪಾಲರಾಯರು ಹೈಕೋರ್ಟಿಗೆ ರಿವಿಜನ್ ಅರ್ಜಿಯನ್ನು ಹಾಕಿರುವರು

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಕಡಲೆ [illegible] | [illegible] | [illegible] |
| ಉದ್ದು | [illegible] | [illegible] |
| [illegible] | [illegible] | |
| [illegible] | [illegible] | |
| [illegible] | [illegible] | [illegible] |

## ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಶ್ರೀ [illegible] ಗಾಯನ [illegible] ಸಂಗೀತ [illegible] ಶ್ರೀ [illegible] ಸಂಗೀತ [illegible] ಕಾರ್ಯಕ್ರಮ [illegible] ಗಳು


ಚಾಮುಂಡೇಶ್ವರಿ ಟಾಕೀಸ್

ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ

14-8 53 ರಿಂದ ಅಮೋಘ ಪ್ರದರ್ಶನಾರಂಭ ದಿನವೂ ಮೂರು ಆಟಗಳು

ಪ್ರದರ್ಶಿತವಾದೆಡೆಗಳಲ್ಲೆಲ್ಲಾ ಅತ್ಯಂತ ಖ್ಯಾತಿಯನ್ನು ಪಡೆದ ತೆಲುಗು ಚಿತ್ರ

ನ್ಯಾಷನಲ್ ಆರ್ಟ್ಸ್ ರವರ

★ ಪಿಚ್ಚಿ ಪುಲ್ಲಯ್ಯ ★

ತಾರಾಗಣ — ಎನ್ ಟಿ ರಾಮರಾವ್ ಕೃಷ್ಣಕುಮಾರಿ, ಜಾನಕಿ ಮುಂತಾದವರು

ಒಲಂಪಿಯಾ ಟಾಕೀಸ್ ✻ 14-8-53 ರಿಂದ ಪ್ರತಿದಿನ 3 ಆಟಗಳು

ಮಾರ್ಸ್ ಮತ್ತು ಮೂವೀಸ್ ರವರ ★ ಪತಿತಾ ★

ಮಾನವ ದುಷ್ಟ ನಾಟಕ ದೇವತೆಗೆ ಸಿಲುಕಿದ ಓರ್ವ ತರುಣಿಯ ಬಾಳಿನ ವಿವರವೇ ಈ ಕಥಾ ಕುಸುಮದ ಸಾರಾಂಶ

ಪಾತ್ರ — ಉಷಾಕಿರಣ್, ದೇವಾನಂದ್ ಆಗ, ಲಲಿತಾ ಪವಾರ್

ಸಂಗೀತ ಶಂಕರ್ ಜೈಕಿಷನ್ | ನಿರ್ದೇಶನ ಅಮಿಯಾ ಚಕ್ರವರ್ತಿ

ಬೆಳಗಿನ ಪ್ರದರ್ಶನ 13 8-53 ರಿಂದ 4 ದಿನಗಳು ಮಾತ್ರ ಹೆವ್ ಲೋಗ್

SRI GAYATHRI TALKIES

From 13-8 53 For Two Days

Warners

THIS WOMAN IS DANGEROUS

With John Crawford, Dennis Morgan

FROM 15 8 53

METROSCOPIX

ಪ್ರಭುದೇವಾ ಥಿಯೇಟರ್ : ಪದ್ಮಾ ಟಾಕೀಸ್

ಕೆ ಬಿ. ಸುಂದರಾಂಬಾಳ್ ಪಾತ್ರ ವಹಿಸಿರುವ, ಜೆಮಿನಿಯವರ ತಮಿಳು ಚಿತ್ರ

ಅವ್ವೈಯ್ಯಾರ್

15—8—53 ನೇ ಶನಿವಾರದಿಂದ

Advance Booking From 15 8 53 Balcony booking will be opened 3 hours earlier for each show


## D BANUMIAH'S COLLEGE OF COMMERCE, MYSORE

The Junior B Com class will start working from 17th August 1953. The College will be shifted from the present building [illegible] more space [illegible] and [illegible] really suited [illegible] Admissions will be closed shortly. If sufficient number of graduates join the [illegible] the question of opening a separate section with due facilities will [illegible] considered. Further particulars can be had at the office of [illegible] during working [illegible]

Edited, Printed and Published by [illegible] R Nagarajan at Sadhvi [illegible] Road Mysore

ರಿಜಿಸ್ಟರ್ ನಂ 792

|| ವಂದೇ ಮಾತರಂ ||

ಇಂದಿನ ಪತ್ರಿಕೆ ೩ ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE THURSDAY 13-8-1953 ಮೈಸೂರು ಗುರುವಾರ ೧೩-೮-೧೯೫೩ [ ಸಂ ೧೩

# ಸಿಂಹಳ ದ್ವೀಪದಲ್ಲಿ ಜರೂರು ಪರಿಸ್ಥಿತಿ – ಗುಂಡಿನೇಟು

## ಸ್ವಾತಂತ್ರ್ಯ ದಿನಾಚರಣೆ
### ಮುಖ್ಯ ಮಂತ್ರಿ ಹನುಮಂತಯ್ಯನವರ ಭಾಷಣ

ಮೈಸೂರು ೧೨

ನಗರದ ಪೌರ ಸಭೆಯವರು ನಾಳಿದ್ದು ಬೆಳಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಏರ್ಪಡಿಸಿರುವ ಧ್ವಜ ವಂದನೆ ಕಾರ್ಯಕ್ರಮದಲ್ಲೂ ಮತ್ತು ಸಂಜೆ ೭ ಗಂಟೆಗೆ ಟೌನ್‌ಹಾಲ್ ಆವರಣದಲ್ಲಿ ನೃತ್ಯ ಸಂಗೀತ ಕಾವ್ಯವಾಚನ ಇತ್ಯಾದಿ ಕಾರ್ಯಕ್ರಮಗಳಿಂದ ಕೂಡಿರುವ ಒಂದು ರಂಗ ಸಭೆಯಲ್ಲೂ ನಗರದ ಕಾಂಗ್ರೆಸ್ಸಿನವರೂ ಮತ್ತು ಮಹಾಜನರೂ ಭಾಗವಹಿಸಿ ಆ ಮಹಾ ಋಷಿ ಸ್ವಾತಂತ್ರ್ಯ ದಿನೋತ್ಸವವನ್ನು ನೆರವೇರಿಸುವಂತೆ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯವರು ಪ್ರಾರ್ಥಿಸಿರುತ್ತಾರೆ.

ಸಂಜೆಯ ಸಮಾರಂಭದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡುವರು.

**ಏಕಾಂಕ ನಾಟಕೋತ್ಸವ**

ಮೈಸೂರು ರಿಯಾಸತ್ ಹಿಂದಿ ಪ್ರಚಾರ ಸಮಿತಿಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಂಗಳೂರು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಇದೇ ತಾ|| ೧೪ ೧೫ ೧೬ರಲ್ಲಿ ಕನ್ನಡ ಹಿಂದಿ ಇಂಗ್ಲಿಷ್ ತೆಲುಗು ತಮಿಳು ಮರಾಠಿ ಗುಜರಾಥಿ ಭಾಷೆಗಳ ಏಕಾಂಕ ನಾಟಕಗಳನ್ನೂ ಭರತ ನಾಟ್ಯ ಕಥಕ್ಕಳಿ ನೃತ್ಯ ಮುಂತಾದ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗಿದೆ. ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಅದರ ಆರಂಭೋತ್ಸವವನ್ನು ನೆರವೇರಿಸುವರು.

**ಹೋಟೇಲು ಕೆಲಸಗಾರರ ಹೊಸ ಸಂಸ್ಥೆ**

ರಾಜಧಾನಿಯ ಹೋಟೇಲು ಕೆಲಸಗಾರರ ಸಂಘದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಬಂದು, ಒಂದು ಗುಂಪಿನವರು ಈಗ ಹೊಸ ಸಂಸ್ಥೆಯನ್ನು ಸ್ಥಾಪಿಸಿಕೊಂಡಿರುತ್ತಾರೆ. ನ್ಯೂ ಮೈಸೂರು ಹೋಟೆಲು ವರ್ಕರ್ಸ್ ಅಸೋಸಿಯೇಷನ್ ಎಂದು ಅದನ್ನು ಕರೆಯಲಾಗಿದೆ. ಸಂಸ್ಥೆಯ ಸಂಚಾಲಕರಾಗಿ ಶ್ರೀ ಡಿ ವಿ ದತ್ತಾತ್ರೇಯ ಅಯ್ಯರ್‌ರವರನ್ನು ನೇಮಿಸಲಾಗಿದೆ. ಹಳೆಯ ಸಂಘದ ಸಾಮಾನ್ಯ ಸಭೆಯು ಕಳೆದ ಮಂಗಳವಾರ ನಡೆದಾಗ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಪೋಲೀಸರ ಸಹಾಯ ಪಡೆದು ಸಭೆಯನ್ನು ನಡೆಸಿದುದಾಗಿಯೂ ಸಂಘದ ಸದಸ್ಯರಲ್ಲಿ ಹಲವರು ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಪೋಲೀಸರು ಅವರನ್ನು ಹೆದರಿಸಿದರೆಂದೂ ಹೇಳಲಾಗಿದೆ. ಅಸಿಸ್ಟೆಂಟ್ ಲೇಬರ್ ಕಮೀಷನರಿಗೆ ಪತ್ರ ಬರೆದು ಸಂಘದಲ್ಲಿ ವ್ಯವಸ್ಥೆಯು ಸರಿಯಾಗಿ ಆಗಬೇಕೆಂದು ಪ್ರಾರ್ಥಿಸಿದುದು ವ್ಯರ್ಥವಾಗಿ, ೭೦ ಜನ ಸದಸ್ಯರು ಆ ಸಂಘವನ್ನು ಬಿಟ್ಟು ಹೊಸ ಸಂಘವನ್ನು ರಚಿಸಿಕೊಂಡರೆಂದು ಗೊತ್ತಾಗಿದೆ.

ರಾಯಲ್ ವಿಮಾನ ಸೈನ್ಯಕ್ಕೆ ಸೇರಿದ ಜೆಟ್ ಯುದ್ಧ ವಿಮಾನವೊಂದು ಮೊನ್ನೆ ರಾತ್ರಿ ಎರಡು ಮನೆಗಳ ಮೇಲೆ ಬಿದ್ದ ಪರಿಣಾಮವಾಗಿ ೯ ಜನರು ಮಡಿದಿರುತ್ತಾರೆ. ವಿಮಾನ ಬಿದ್ದೊಡನೆಯೇ ಎರಡು ಮನೆಗಳಿಗೂ ಬೆಂಕಿ ಹತ್ತಿಕೊಂಡಿತೆಂದು ಹೇಳಲಾಗಿದೆ.

## ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ದೇವರಿಗೆ ವಿಶೇಷ ಅಲಂಕಾರ

ಮೈಸೂರು ೧೨

ಇದೇ ೧೪ನೇ ತಾ|| ಶುಕ್ರವಾರ ಕೋಟೆ ಶ್ರೀ ಕೋಡಿ ಸೋಮೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಸ್ವಾತಂತ್ರ್ಯ ದಿನ ಆಚರಣೆಯ ಸಂಬಂಧವಾಗಿ ಅಮ್ಮನವರಿಗೆ ಭಾರತ ಮಾತಾ ಅಲಂಕಾರವನ್ನೂ ಶ್ರಾವಣ ಶನಿವಾರದ ಪ್ರಯುಕ್ತ ನಾರಾಯಣ ಸ್ವಾಮಿ [illegible] ವಾಮನಾವತಾರದ ಅಲಂಕಾರವನ್ನೂ ಶ್ರೀ [illegible] ನಯನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ತ್ರಿಪುರಸುಂದರಿ ಅಮ್ಮನವರಿಗೆ ಶುಕ್ರವಾರ ಅರ್ಧನಾರೀಶ್ವರ ಮತ್ತು ಶನಿವಾರ ಭಾರತ ಮಾತೆಯ ಅಲಂಕಾರವನ್ನೂ ಹಾಕಲಾಗುವುದು.

ಕೋಟೆ ವಿಷ್ಣು [illegible] ಮತ್ತು [illegible] ಅಲಂಕಾರವನ್ನು [illegible] ಗುವುದು.

**ಸೀರೆ ಕಳುವಿಗಾಗಿ ೧ ವರ್ಷ ಕಠಿಣ ಸಜಾ**

ರಾಜಧಾನಿಯ ವ [illegible] ಕದ ಬಳಿ ಶ್ರೀ ಕೆಂಪೇಗೌಡರ ಮನೆಗೆ ನೆನ್ನೆ ರಾಮಕೃಷ್ಣಾಚಾರಿ ಎಂಬ ಕೇಡಿಯು ನುಗ್ಗಿ ಒಳಗೆ ಒಣ ಹಾಕಿದ್ದ ಸೀರೆಯೊಂದನ್ನು ಕದ್ದುಕೊಂಡು ಹೋಗುತ್ತಿದ್ದಾಗ ಸಿಕ್ಕಿಬಿದ್ದ. ಅವನ ಮೇಲೆ ದೇವರಾಜ ಪೋಲೀಸರು ಮೊಕದ್ದಮೆ ಹೂಡಲಾಗಿ ನಗರದ ೧ನೇ ನ್ಯಾಯಾಧೀಶರು ಅವನಿಗೆ ೧ ವರ್ಷ ಕಠಿಣ ಸಜಾವನ್ನು ವಿಧಿಸಿದರು. ಅವನಿಗೆ ಹಿಂದೆ ೧೩ ಬಾರಿ ಶಿಕ್ಷೆಯಾಗಿತ್ತೆಂದು ಹೇಳಲಾಗಿದೆ.

**ಶ್ರೀ ಹುಚ್ಚಪ್ಪನವರಿಗೆ ಸತ್ಕಾರ**

ವಿಶ್ವವಿದ್ಯಾಲಯದ ಅರ್ಥ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಜಿ ಟಿ ಹುಚ್ಚಪ್ಪನವರು ಉಚ್ಚ ವ್ಯಾಸಂಗಕ್ಕಾಗಿ ಅಮೆರಿಕಾ ದೇಶಕ್ಕೆ ತೆರಳಲಿರುವ ಪ್ರಯುಕ್ತ, ನಿನ್ನೆ ಸಂಜೆ ಅವರ ಗೌರವಾರ್ಥವಾಗಿ ಗೆಳೆಯರು ಇಂದ್ರಭವನದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಹೋದ್ಯೋಗಿಗಳಾದ ಶ್ರೀ ಎಂ ಶ್ರೀನಿವಾಸಮೂರ್ತಿಯವರು ಅವರಿಗೆ ಸುಖ ಪ್ರಯಾಣವನ್ನು ಕೋರಿ ಭಾಷಣ ಮಾಡಿದರು. ಶ್ರೀ ಹುಚ್ಚಪ್ಪನವರು ಧನ್ಯವಾದವನ್ನು ಸಲ್ಲಿಸಿ ತಾವು ಶಿಕ್ಷಣವನ್ನು ಪಡೆದು ಬಂದನಂತರ ನಾಡಿಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಲು ಪ್ರಯತ್ನಿಸುವುದಾಗಿ ಹೇಳಿದರು.

**ಪಾಕಿಸ್ತಾನದಲ್ಲಿ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮ ರದ್ದು**

ಕಾಶ್ಮೀರದ ಘಟನೆಗಳ ಪರಿಣಾಮವಾಗಿ ನಾಳೆ ದಿನ ಪಾಕಿಸ್ತಾನದಲ್ಲಿ ನಡೆಯಬೇಕಾಗಿದ್ದ ಸ್ವಾತಂತ್ರ್ಯ ದಿನೋತ್ಸವದಲ್ಲಿ ಸಂಭ್ರಮಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳೆಲ್ಲವನ್ನೂ ರದ್ದು ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ. ದೀಪೋತ್ಸವ ಅಲಂಕಾರ ನಡೆಯುವುದಿಲ್ಲ. ಗೌರ್ನರ್ ಜನರಲ್ಲರು ಏರ್ಪಡಿಸಿರುವ ಸತ್ಕಾರ ಸಮಾರಂಭವು ರದ್ದಾಗಿದೆ. ಆದರೆ ರಕ್ಷಣಾ ದಳಗಳ ಪೆರೇಡು ಇರುವುದು. ಕಾಶ್ಮೀರ ದಿನಾಚರಣೆಯನ್ನು ಇದೇ ೧೫ನೇ ತಾ|| ನಡೆಸಲು ಮಹಿಳೆಯರ ಸಮಿತಿಯೊಂದು ರಚಿತವಾಗಿದೆ.

## ದೆಹಲಿಗೆ ಇಂದು ಪಾಕಿಸ್ತಾನ ಪ್ರಧಾನಿಯ ಆಗಮನ

ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ಇಂದು ದೆಹಲಿಗೆ ವಿಮಾನದಲ್ಲಿ ಆಗಮಿಸಲಿರುವರು. ಕಾಶ್ಮೀರದ ಘಟನೆಗಳಿಗೆ ಅವರ ಭೇಟಿಯು ಸಂಬಂಧಿಸಿಲ್ಲವಾದರೂ ಆ ಘಟನೆಗಳಿಂದ ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳ ಸಂಭಾಷಣೆಗೆ ಅಡ್ಡಿಯಾಗುವುದಿಲ್ಲವೆಂಬುದನ್ನು ಖುದ್ದಾಗಿ ತಿಳಿಸಿ ಸಮಾಧಾನ ಮಾಡಿಕೊಳ್ಳಲು ಅವರು ಉದ್ದೇಶಪಟ್ಟಿರುವರೆಂದು ತಿಳಿದು ಬಂದಿದೆ.

**ಶ್ರೀನಗರ ಮತ್ತು ಅನಂತನಾಗ್ ನಗರಗಳಲ್ಲಿ ಗುಂಡು**

ಶ್ರೀನಗರದಲ್ಲಿ ಮೊನ್ನೆ ಸಂಜೆ ಉದ್ರಿಕ್ತ ಗುಂಪೊಂದರ ಮೇಲೆ ಪೋಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ೩ ಜನರು ಮಡಿದಿರುವರು. ಮಾಜಿ ಮಂತ್ರಿ ಅಫ್ಜಲ್ ಬೇಗ್‌ರವರ ಪ್ರದೇಶದ ಅನಂತನಾಗ್‌ನಲ್ಲಿಯೂ ಗುಂಡು ಹಾರಿಸಲ್ಪಟ್ಟು ವರು ಸಾವನ್ನಪ್ಪಿದರೆಂಬುದಾಗಿ ಸಮಾಚಾರ ದೊರೆತಿಲ್ಲ.

**೧೫ನೇ ತಾ|| ಆಕಾಶವಾಣಿಯಲ್ಲಿ ವಿಶೇಷ ಕಾರ್ಯಕ್ರಮ**

ಸ್ವಾತಂತ್ರ್ಯೋತ್ಸವದ ಪ್ರಯುಕ್ತ ನಾಳಿದ್ದು ಆಕಾಶವಾಣಿಯಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ —

ಬೆಳಿಗ್ಗೆ ೭ಕ್ಕೆ ಶ್ರೀ ಎ ವಿ ನಾರಾಯಣಪ್ಪನವರಿಂದ ನಾಗಸ್ವರ ೭ ೧೫ ದೆಹಲಿಯ ಕೆಂಪುಕೋಟೆಯಲ್ಲಿ ಪಂಡಿತ ಜವಹರಲಾಲ್ ನೆಹ್ರೂರವರು ರಾಷ್ಟ್ರಧ್ವಜಾರೋಹಣ ಮಾಡುವುದರ ಪುನಃಪ್ರಸಾರ. ಮಧ್ಯಾಹ್ನ ೧೨ ೩೦ ರಾಷ್ಟ್ರೀಯ ಗೀತೆಗಳ ರೆಕಾರ್ಡು ೧ ೫೦ ಮಹಿಳೆಯರ ಕಾರ್ಯಕ್ರಮ ಆಧುನಿಕ ಭಾರತದಲ್ಲಿ ಮಹಿಳೆಯರ ಪಾತ್ರ ಶ್ರೀಮತಿ [illegible] ರಾಜಮ್ಮನವರಿಂದ ಭಾಷಣ. ೩ ವಕ್ಕೆ ಕಾರ್ಯಕ್ರಮ "ಸ್ವಾತಂತ್ರ್ಯ ಶಿಲ್ಪಿಗಳು" ದೇವೀರಪ್ಪನವರಿಂದ ವಿಶೇಷ ಕಾರ್ಯಕ್ರಮ. ಬೆಳಿಗ್ಗೆ ೮ ೩೦ ಮತ್ತು ಸಂಜೆ ೫ ೩೦ ನೀಲಮ್ಮ ಕಡಾಂಬಿಯವರಿಂದ ಗಾನ ಮತ್ತು ವೀಣಾವಾದನ. ೭ ೧೫ ಪಿ ಕಾಳಿಂಗರಾವ್ ಮತ್ತು ವೃಂದದವರಿಂದ ರಾಷ್ಟ್ರೀಯ ಗೀತೆಗಳು ೭ ೩೦ ಹಳ್ಳಿಗರ ಕಾರ್ಯಕ್ರಮ ಪಂಚ ವಾರ್ಷಿಕ ಯೋಜನೆಯಲ್ಲಿ ಬೇಸಾಯಗಾರರ ಪಾತ್ರ" ಎ ಕೃಷ್ಣಮೂರ್ತಿರಾಯರ ಭಾಷಣ ಮತ್ತು ವಿಠಲರಾಯರಿಂದ ಲಾವಣಿ ೭ ೫೦ ಸ್ವಾತಂತ್ರ್ಯದಿನ ಸಂದೇಶ" ಶ್ರೀ ಕೆ ಹನುಮಂತಯ್ಯನವರ ಭಾಷಣ. ೮ ಗಂಟೆ ಕೋಲಾರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ವರದಿಗಳ ಪ್ರಸಾರ ೮ ೩೦ ಎಚ್ಚಮನಾಯಕ" [illegible] ಸದಾಶಿವರಾಯರ ನಾಟಕ. ಎಂ ಎಸ್ ಚಲುವಯ್ಯಂಗಾರ್ ಕೆ ಎಸ್ ಅಶ್ವತ್ಥ [illegible] ಮತ್ತು ಸುಶೀಲ ನಾರಾಯಣರಾವ್ ಮುಂತಾದವರು ಭಾಗವಹಿಸುವರು. ೯ ೧೫ ಬಿಸ್ಮಿಲ್ಲಾಖಾನ್‌ರ ಶಹನಾಯ್ ವಾದನ, ರಾತ್ರಿ ೯ ೩೦ ರಿಂದ ೧೧ ರಾಷ್ಟ್ರೀಯ ಕಾರ್ಯಕ್ರಮ–ಗಜಾನನ ರಾವ್ ಜೋಷಿ ಪಿಟೀಲು, ಕೃಷ್ಣ ಉದಯವರ್ಕಾರ್ ಮತ್ತು ಬಸವರಾಜ ರಾಜಗುರು ಗಾಯನ.

## ಸಿಂಹಳದಲ್ಲಿ ಜರೂರು ಪರಿಸ್ಥಿತಿಯ ಘೋಷಣೆ
### ಕಾರ್ಮಿಕರ ಹರತಾಳ, ಕರ್ಫ್ಯೂ ಜಾರಿ ಮತ್ತು ಗುಂಡಿನೇಟಿನಿಂದ ೧೫ ಜನರ ಸಾವು

ಸಿಂಹಳ ದ್ವೀಪದಲ್ಲಿ ಅಕ್ಕಿ ಬೆಲೆ ಮತ್ತು ರೈಲ್ವೆ ವಿದ್ಯುಚ್ಛಕ್ತಿ ಮತ್ತು ಅಂಚೆ ದರಗಳನ್ನು ಹೆಚ್ಚಿಸಿರುವ ಬಗ್ಗೆ ನೆನ್ನೆ ನಡೆದ ಹಿಂಸಾತ್ಮಕ ಪ್ರದರ್ಶನಗಳ ಪರಿಣಾಮವಾಗಿ ದ್ವೀಪದ ದಕ್ಷಿಣ ಮತ್ತು ಪಶ್ಚಿಮ ಪ್ರಾಂತಗಳಲ್ಲಿ ೧ ತಿಂಗಳ ಅವಧಿಯ ಜರೂರು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ರಾಜಧಾನಿ ಕೊಲಂಬೊವಿನಲ್ಲಿ ಸಂಜೆಯಿಂದ ಮುಂಜಾನೆಯವರೆಗೆ ಕರ್ಫ್ಯೂ ಆಜ್ಞೆಯನ್ನು ಜಾರಿಮಾಡಲಾಗಿದೆ. ನಗರದಲ್ಲಿ ಪೋಲೀಸರು ಮತ್ತು ಮಿಲಿಟರಿಯವರು ಸಾರ್ವಜನಿಕರ ಮೇಲೆ ಗುಂಡು ಹಾರಿಸಿದುದರ ಪರಿಣಾಮವಾಗಿ ೧೦ ರಿಂದ ೧೫ ಜನರು ಮಡಿದಿರುವರೆಂದು ಹೇಳಲಾಗಿದೆ. ನಗರದ ಮೇಲೆ ನೆನ್ನೆ ಬೆಳಿಗ್ಗೆ ಸೈನ್ಯದ ವಿಮಾನಗಳು ಪರಿಶೀಲನಾ ಹಾರಾಟವನ್ನು ನಡೆಸಿದುವು. ನಗರದಲ್ಲಿ ಜನ ಸಂಚಾರಗಳು ಪೂರ್ಣವಾಗಿ ನಿಂತುಹೋಗಿರುವುದರಿಂದ, ನೌಕರಿಯನ್ನು ಕಳೆದುಕೊಳ್ಳಲು ಹೆದರಿದ ಸಹಸ್ರಾರು ಗುಮಾಸ್ತರು ಕಛೇರಿಗಳಿಗೆ ಬಹು ದೂರಗಳಿಂದ ನಡೆದು ಬಂದರು. ಎಲ್ಲ ಕಡೆ ದನಗಳು ಬೆಂಕಿ ಹತ್ತಿಸುವ ಸಾಧನಗಳೂ, ಭಾರತೀಯ ರಕ್ಷಣೆ ವ್ಯಾಪಾರಿಗಳ ಅಂಗಡಿ ಲೂಟಿಗಳೂ ಜರುಗಿವೆಂದು ಹೇಳಲಾಗಿದೆ. ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿರುವುದಲ್ಲದೆ ರೈಲು ಕಂಬಿಗಳನ್ನು ಕಿತ್ತು ಹಾಕಲಾಗಿದೆ. ಕೊಲಂಬೊ ಪೌರಸಭೆ ಮೇಲೆ ವಿರೋಧ ಪಕ್ಷದವರ ಕಪ್ಪು ಬಾವುಟ ಹಾರಿಸಲಾಗಿ ಅಲ್ಲಿನ ನೌಕರರು ರಾಜೀನಾಮೆ ಕೊಟ್ಟಿರುತ್ತಾರೆ. ಒಂದು ಕಡೆ ತೆಂಗಿನಕಾಯಿ ತುಂಬಿದ ಗೋದಾಮಿಗೆ ಬೆಂಕಿಬಿದ್ದು ೨|| ಲಕ್ಷ ರೂ ನಷ್ಟವಾಗಿದೆ.

**ಬೇಗಂ ಅಬ್ದುಲ್ಲಾರವರಿಂದ ಭತ್ಯದ ನಿರಾಕರಣೆ ?**

ಕಾಶ್ಮೀರ ಸರ್ಕಾರದವರು ಷೇಕ್ ಅಬ್ದುಲ್ಲಾರವರ ಪತ್ನಿಗೆ ಕೊಡಲು ನಿರ್ಧರಿಸಿರುವ ಮಾಸಾಶನವನ್ನು ಅವರು ನಿರಾಕರಿಸಲಿರುವರೆಂದು ತಿಳಿದುಬಂದಿದೆ. ಬೇಗಂ ಅಬ್ದುಲ್ಲಾ ಮತ್ತು ಬೇಗಂ ಅಫ್ಜಲ್ ಬೇಗ್‌ರವರು ಅಧಿಕೃತ ನಿವಾಸಗಳಿಂದ ತಮ್ಮ ಸ್ವಂತ ಭವನಗಳಿಗೆ ತೆರಳಿರುತ್ತಾರೆ.

**ಗೋಧಿ ಹಿಟ್ಟು, ರವೆ ಮುಂತಾದುವುಗಳ ಸಾಗಾಣಿಕೆ ನಿರ್ಬಂಧ ರದ್ದು**

ಮೈಸೂರು ಸಂಸ್ಥಾನದಿಂದ ಒಳಕ್ಕೂ ಮತ್ತು ಹೊರಕ್ಕೂ ಗೋಧಿ ಹಿಟ್ಟು ರವೆ ಮುಂತಾದ ಗೋಧಿ ಪದಾರ್ಥಗಳ ಸಾಗಾಣಿಕೆಯನ್ನು ಪ್ರತಿಬಂಧಿಸಿದ್ದುದನ್ನು ಈಗ ರದ್ದು ಮಾಡಲಾಗಿದೆ. ಹೊರಗಿನಿಂದ ಆಮದು ಮಾಡಲ್ಪಟ್ಟ ಗೋಧಿಯಿಂದ ಮೈದಾ ರವೆ ಮುಂತಾದುವನ್ನು ತಯಾರಿಸಲು ಭಾರತ ಸರ್ಕಾರದವರು ದೇಶದಲ್ಲಿರುವ ಹಿಟ್ಟಿನ ಗಿರಣಿಗಳಿಗೆ ಅವಕಾಶವಿತ್ತಿರುವರು. ಬೆಲೆ ಅಥವಾ ಪ್ರಮಾಣಗಳ ನಿಗದಿಯಿಲ್ಲದೆ ಎಷ್ಟನ್ನು ಬೇಕಾದರೂ ಮಾರಲು ಅವಕಾಶ ಕೊಡಲಾಗಿದೆ.

## ನಿರಾಶ್ರಿತರ ಆಸ್ತಿ ಬಗ್ಗೆ ಭಾರತ ಪಾಕಿಸ್ತಾನ ಸಂಧಾನ ಭಂಗ

ನಿರಾಶ್ರಿತರ ಆಸ್ತಿಗಳ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳ ಅಧಿಕಾರಿಗಳಿಗೆ ಕರಾಚಿಯಲ್ಲಿ ನಡೆಯುತ್ತಿದ್ದ ಸಂಧಾನ ಮಾತುಕತೆಗಳು ಯಾವ ಒಪ್ಪಂದವೂ ಆಗದೆ ಮುರಿದು ಬಿದ್ದಿತೆಂದು ವರದಿಯಾಗಿದೆ

## ಭಾರತದಲ್ಲಿ ಭಾರಿ ಉಕ್ಕಿನ ಕಾರ್ಖಾನೆ

ಭಾರತದಲ್ಲಿ ಭಾರಿ ಉಕ್ಕಿನ ಕಾರ್ಖಾನೆಯೊಂದನ್ನು ಸ್ಥಾಪಿಸಲು ಗವರ್ನಮೆಂಟು ಅದಕ್ಕೆ ಜರ್ಮನಿಯ ವಾಣಿಜ್ಯ ಸಂಸ್ಥೆಯ ಧನ ಬಂಡವಾಳ ಮತ್ತು ಸಹಾಯವನ್ನು ಪಡೆಯಲು ಯತ್ನಿಸಲಾಗಿದೆಯೆಂದೂ ಕೇಂದ್ರ ಉತ್ಪಾದನಾ ಮಂತ್ರಿ ಕೆ ಸಿ ರೆಡ್ಡಿಯವರು ತಿಳಿಸಿದ್ದಾರೆ

## ಲ್ಹಾಸಾ ನಗರಕ್ಕೆ ರೈಲು ಮಾರ್ಗ

ಚೀಣದ ಕಾಂಡ್ಜಿ ಎಂಬ ಸ್ಥಳದಿಂದ ... ಮೈಲಿ ದೂರವಿರುವ ಟಿಬೆಟ್ಟಿನ ರಾಜಧಾನಿ ಲ್ಹಾಸಾ ನಗರಕ್ಕೆ ರೈಲು ಹಾಕಲು ಆಲೋಚಿಸಲಾಗಿದೆ ಪ್ರಪಂಚದ ಅತ್ಯಂತ ಎತ್ತರವಾದ ಪ್ರಸ್ಥಭೂಮಿಯಲ್ಲಿರುವ ಈ ಪ್ರದೇಶದಲ್ಲಿ ರೈಲು ರಸ್ತೆ ಏರ್ಪಡಿಸಲು, ಸದಾ ಹಿಮವಿರುವ ಪರ್ವತ ಶ್ರೇಣಿಗಳನ್ನು ಕಡಿದು ... ಮತ್ತು ... ಸೇತುವೆಗಳನ್ನು ನಿರ್ಮಾಣವಾಗಬೇಕಾಗಿದೆ ಈಗಲೇ ಕೆಲಸವು ಆರಂಭವಾಗಿದೆ

## ನಿತ್ಯವೂ ಸಾಯುತ್ತಿದ್ದ ಪತ್ನಿಯ ಅಂತ್ಯಕ್ರಿಯೆಗೆ ಹಣದ ವಸೂಲಿ!

ಚಿತ್ರದುರ್ಗ ಜಿಲ್ಲೆಯ ... ಗ್ರಾಮದ ... ಎಂಬ ... ಉಪಾಧ್ಯಾಯನೆಂದು ಹೇಳಿಕೊಂಡು ಆ ಊರಿನ ಕೆಲವರನ್ನು ತನ್ನ ಹೆಂಡತಿಯು ಆ ದಿನ ... ದಲ್ಲಿ ... ಮಡಿದಿರುವಳೆಂದೂ ಆಕೆಯ ಅಂತ್ಯಕ್ರಿಯೆಗೆ ಹಣ ಸಹಾಯ ಮಾಡಬೇಕೆಂದೂ ... ಹೇಳುತ್ತಿದ್ದ ... ಪೊಲೀಸರ ವಶಕ್ಕೆ ಒಪ್ಪಿಸಲಾಯಿತೆಂದು ... ವರ್ಷದ ಹಿಂದೆಯೇ ಅವನ ಪತ್ನಿ ... ಕಲ್ಪಟ್ಟಳೆಂದು ಗೊತ್ತಾಗಿದೆ

## ಇಂಡೋಚೀಣದ ಮುಖ್ಯ ನೆಲೆಯಿಂದ ಫ್ರೆಂಚರ ವಾಪಸು

ಹಾನಾಯ್‌ ದ್ವೀಪಕ್ಕೆ ... ಮೈಲಿ ದೂರವಿರುವ ಇಂಡೋಚೀಣದ ಮುಖ್ಯ ಸೈನ್ಯ ನೆಲೆಯಾದ ನಾಸಾನ್ ನಗರವನ್ನು ಫ್ರೆಂಚರು ಖಾಲಿ ಮಾಡಿದ್ದಾರೆಂದು ವರದಿಯಾಗಿದೆ

## ನೆಹರೂರವರೊಡನೆ ಭೇಟಿಗೆ ಸಿಂಹಳದ ಪ್ರಧಾನಿಯು ಕಾತುರ

ಸಿಂಹಳ ಮತ್ತು ಭಾರತಗಳ ನಡುವೆ ಮಾತುಕತೆಗಳನ್ನು ಮುಂದುವರಿಸಲು ಸಿಂಹಳದ ಪ್ರಧಾನಿ ಸೇನಾನಾಯಕೆಯವರು ಅವೆಯನ್ನು ವ್ಯಕ್ತಪಡಿಸುತ್ತಾರೆ ತಮ್ಮ ಕೆಲಸಗಳೆಲ್ಲವೂ ಮುಗಿದ ನಂತರ ದೆಹಲಿಗೆ ಹೋಗಿ, ನೆಹರೂರವರನ್ನು ಭೇಟಿ ಮಾಡುವುದಾಗಿಯೂ ಅವರು ತಿಳಿಸಿದ್ದಾರೆ

## ಭಾವಿ ನೀರಿನಲ್ಲಿ ವಿದ್ಯುಚ್ಛಕ್ತಿ ಸಂಪರ್ಕದಿಂದ ಇಬ್ಬರ ಮರಣ

ಅಂಬೂರಿನ ಹೊಲವೊಂದರ ಭಾವಿಯಲ್ಲಿದ್ದ ಡೈನಮೊ ಸೆಟ್ಟನ್ನು ತೆಗೆಯಲು ಹೋಗಿ ಕಳೆದ ಶನಿವಾರ ಕೃಷ್ಣಸ್ವಾಮಿ ನಾಯುಡು ಎಂಬುವರೂ, ಅವರ ಸಹಾಯಕನಾದ ಅಭಿಮನ್ಯು ಎಂಬ ಹರಿಜನನೂ ಭಾವಿಯೊಳಗೆ ಮೃತಪಟ್ಟರೆಂದು ವರದಿಯಾಗಿದೆ ಇತ್ತೀಚಿಗೆ ಆದ ಮಳೆಯ ಪರಿಣಾಮವಾಗಿ ಭಾವಿಯೊಳಗೆ ನೀರು ಹೆಚ್ಚುತ್ತಿದ್ದುದರಿಂದ ಡೈನಮೊ ಸೆಟ್ಟನ್ನು ತೆಗೆಯಲು ಪ್ರಯತ್ನಿಸಿದಾಗ ಸ್ವಿಚ್ಚನ್ನು ತೆಗೆಯದೆ ಇದ್ದುದರಿಂದ ವಿದ್ಯುಚ್ಛಕ್ತಿಯು ನೀರಿನಲ್ಲಿ ಹರಿದು ಅವರುಗಳ ಪ್ರಾಣಹಾನಿಯಾಯಿತು

○ ಜುಲೈ ತಿಂಗಳು ಆಗುಂಬೆಯಲ್ಲಿ ... ಅಂಗುಲದಷ್ಟು ಮಳೆಯಾಗಿದೆ ಜುಲೈ ... ಅಂಗುಲದಷ್ಟಾಗಿದ್ದಿತು

## SRI GANESHA

TALKIES

On 14 8-53 One day Only

Universal s

## ONE WAY STREET

Edited Printed and Published by A R Nagarajan at Sadhvi Press D Subbiah Road Mysore

## ಪ್ರತಿವರ್ಷವೂ ೩೦ ಸಾವಿರ ಹೆಚ್ಚು ಜನ ವಯಸ್ಕರಿಗೆ ಶಿಕ್ಷಣ

ಸಂಸ್ಥಾನದಲ್ಲಿರುವ ... ಸಾವಿರ ವಯಸ್ಕರ ಶಿಕ್ಷಣ ತರಗತಿಗಳಲ್ಲಿ ಪ್ರತಿವರ್ಷವೂ ೩೦ ಸಾವಿರ ಜನರು ಶಿಕ್ಷಣ ಪಡೆಯುತ್ತಿರುವರೆಂದು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಅಧಿಕಾರಿ ಶ್ರೀ ತಿಮ್ಮೇಗೌಡರು ತಿಳಿಸಿರುತ್ತಾರೆ

### ರೇಷನ್ ಅಂಗಡಿಗಳಿಗೆ ರಜಾ

ಸ್ವಾತಂತ್ರ್ಯ ದಿನೋತ್ಸವದ ಸಲುವಾಗಿ ನಾಳಿದ್ದು ನಗರದಲ್ಲಿರುವ ಎಲ್ಲಾ ಸರ್ಕಾರಿ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಸಬ್ ಗೋಡೌನುಗಳಿಗೆ ರಜಾ ಕೊಡಲಾಗಿದೆ ೧೬ನೇ ತಾ॥ ಭಾನುವಾರ ಸಬ್ ಗೋಡೌನು ಮತ್ತು ಅರಮನೆ ನೋಟೀಸಾನೆ ಡಿಪೋಗಳನ್ನು ಆಹಾರ ಧಾನ್ಯ ಕೊಳ್ಳಲು ತೆರೆದಿರಲಾಗುವುದು ಬಕ್ರೀದ್ ದಿನ ಮುಸ್ಲಿಮರಿಂದ ನಡೆಸಲ್ಪಡುತ್ತಿರುವ ಡಿಪೋಗಳು ಮುಚ್ಚಲ್ಪಡುವುವು

### ಶಾರದಾ ಸಂಘದ ಚುನಾವಣೆ

ರಾಜಧಾನಿಯ ಎಸ್ ಎಸ್ ವಿದ್ಯಾರ್ಥಿ ನಿಲಯದಲ್ಲಿರುವ ಶ್ರೀ ಶಾರದಾ ಸಂಘದ ಚುನಾವಣೆಯು ಮೊನ್ನೆ ನಡೆದು ಪ್ರಸಕ್ತ ಸಾಲಿಗೆ ಶ್ರೀ ಕೆ ಎಸ್ ಸೋಮಸುಂದರಂ ಅಧ್ಯಕ್ಷರು ಶ್ರೀ ಎ ಕೆ ರಾಮಣ್ಣ ಉಪಾಧ್ಯಕ್ಷರು ಮತ್ತು ಶ್ರೀ ಕೆ ಎ ದೊರಸ್ವಾಮಿಯವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು ಶ್ರೀಗಳಾದ ಹೆಚ್ ಎಸ್ ಸುಬ್ರಹ್ಮಣ್ಯಂ ಎ ಎಸ್ ವೆಂಕಟರಾಮ್ ಕೆ ಎಸ್ ಕೃಷ್ಣಮೂರ್ತಿ ಮತ್ತು ಬಿ ಎ ವೆಂಕಟರಾಮಯ್ಯನವರು ಸಮಿತಿಯ ಸದಸ್ಯರಾಗಿರುವರು

### ಉಪಾಕರ್ಮಕ್ಕಾಗಿ ರಜಾ

ಇದೇ ತಿಂಗಳು ೨೪ನೇ ತಾ॥ ಯಜುರ್ವೇದ ಉಪಾಕರ್ಮದ ಪ್ರಯುಕ್ತ ಸರ್ಕಾರದವರ ಬ್ಯಾಂಕುಗಳಿಗೆ ರಜೆಯನ್ನು ಘೋಷಿಸಿರುತ್ತಾರೆ

## ಸ್ಟೇಡಿಯಮ್ಮಿನಲ್ಲಿ ಭೀಕರ ಕೊಲೆ

ಬೆಂಗಳೂರು ೧೨,

ಇಲ್ಲಿನ ಸಂಪಂಗಿ ಕೆರೆಯ ಒಲಂಪಿಕ್ ಸ್ಟೇಡಿಯಮ್ಮಿನಲ್ಲಿ ನೆನ್ನೆ ಬೆಳಗ್ಗೆ ಘೋರ ಕೊಲೆಯ ಪ್ರಕರಣವೊಂದು ನಡೆದು, ಮಲಬಾರಿನ ಮುಸ್ಲಿಮನೊಬ್ಬನು ಹಲವು ಇರಿತದ ಗಾಯಗಳ ಪರಿಣಾಮವಾಗಿ ಸತ್ತು ಬಿದ್ದದ್ದು ಪತ್ತೆಯಾಗಿದೆ ಕಳೇಬರದ ಸಮೀಪದಲ್ಲೇ ಚಿಕ್ಕ ಕೊಂಬಿನ ಹಿಡಿಯುಳ್ಳ ಮಲಬಾರು ಮಾದರಿಯ ಮಡಿಸುವ ಚಾಕುವು ಬಿದ್ದಿದ್ದುದು ಸಿಕ್ಕಿರುತ್ತದೆ ಹಿಂದಿನ ರಾತ್ರಿ ಕೊಲೆ ನಡೆದಿರಬಹುದೆಂದು ಊಹಿಸಲಾಗಿದೆ ಹೆಂಗಸಿಗೆ ಸಂಬಂಧಿಸಿದ ವಿದ್ಯಮಾನವಿದೆಂದು ನಂಬಲಾಗಿದೆ

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಹಲಸಂದೆ | [illegible] | [illegible] |
| ಉದ್ದು | [illegible] | [illegible] |
| ತೆಂಗಿನಕಾಯಿ ೧೧೦೦ಕ್ಕೆ | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಎಂ ವಿ ವರಾಹಸ್ವಾಮಿ ಗೋಟುವಾದ್ಯ ... ವಿವಿಧ ವಾಣಿ ... ಪಿಟೀಲು ... ಸಹೋದರಿಯರು ... ಸಂಜೆ ... ಮತ್ತು ... ಕೊಳಲು ... ಹಿಂದಿ ಶಿಕ್ಷಣ ... ಗೀತೆಗಳು ... ಸಂಗೀತ ... ಭಾರತದ ಜನಪದ ಗೀತೆ ... ರಂಗತರಂಗ ಕನ್ನಡದಲ್ಲಿ ವಿವಿಧ ಕಾರ್ಯಕ್ರಮ

○ ಗಡಿನಾಡಿನ ಮಾಜಿ ಮುಖ್ಯ ಮಂತ್ರಿ ಡಾ॥ ಖಾನ್ ಸಾಹೆಬರ ಮೇಲೆ ಹಾಕಲಾಗಿದ್ದ ಪ್ರತಿಬಂಧಕವನ್ನು ಪಾಕಿಸ್ತಾನ ಸರ್ಕಾರದವರು ಬಿಗಿಗೊಳಿಸಿ ಅವರ ಮೇಲಿನ ನಿರ್ಬಂಧದ ಅವಧಿಯನ್ನು ಒಂದು ವರ್ಷಕಾಲ ಹೆಚ್ಚಿಸಿದ್ದಾರೆ


HERE IS ANOTHER

## ABIDS GRAND AUCTION SALE

**On SUNDAY the 16th AUG 1953 at 10 A M at Show-Rooms**

A BOON & BOUNTY TO BUILDING CONTRACTORS, HOUSE BUILDERS DEALERS IN BUILDING MATERIALS & GENTLEMAN in need of GOOD & DECENT FURNITURE & HOUSE HOLD GOODS

The sale consists of A HUGE LOT OF TEAK-WOOD NEW DOOR FRAMES, WINDOWS, VENTILATORS in various sizes which will suit all requirements Also, 1 AN SAD PERAMBULATOR, ODEON & other makes of GRAMA PHONES RECORDS Camp TENT in good order AGFA 620 CAMERA, Immersion water Heater, Table lamps, Stoves, Upholstered Spring sofas and sofa suites, Round Tables, STANDARD PORTABLE UNDERWOOD TYPEWRITER, Almirahs with & without mirror, Car Battery & several other useful articles, which can be seen on SATURDAY

## ಚಾಮುಂಡೇಶ್ವರಿ ಟಾಕೀಸ್

ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ

14 8 53 ರಿಂದ ಆಮೋಘ ಪ್ರದರ್ಶನಾರಂಭ    ದಿನವೂ ಮೂರು ಆಟಗಳು

ಪ್ರದರ್ಶಿತವಾದೆಡೆಗಳಲ್ಲೆಲ್ಲಾ ಅತ್ಯಂತ ಪ್ರಶಂಸೆಯನ್ನು ಪಡೆದ ತೆಲುಗು ಚಿತ್ರ

ನ್ಯಾಷನಲ್ ಆರ್ಟ್ಸ್ ರವರ

★ ಪಿಚ್ಚಿ ಪುಲ್ಲಯ್ಯ ★

... ಎನ್ ಟಿ ರಾಮರಾವ್ ಕೃಷ್ಣಕುಮಾರಿ ಜಾನಕಿ ಮುಂತಾದವರು

## ಒಲಂಪಿಯಾ ಟಾಕೀಸ್

14 8-53 ರಿಂದ ಪ್ರತಿದಿನ 3 ಆಟಗಳು

ಮಾರ್ಕ್ ಮತ್ತು ... ರವರ

★ ಪ್ರತಿಜ್ಞಾ ★

... ಪಿ ... ಶಕುಂತಲಾ ...

ಪಾತ್ರ ... ದೇವಾನಂದ್ ... ಲಲಿತಾ ಪವಾರ್

ಸಂಗೀತ ... ಶಂಕರ್ ಜೈಕಿಶನ್ ... ನಿರ್ದೇಶನ ... ಚಕ್ರವರ್ತಿ

... ರಿಂದ ... ಹವಾಲೋಗ್

ಆಗಸ್ಟ್ 15— ಸ್ವಾತಂತ್ರ್ಯ ದಿನದಂದು

ನಿಮ್ಮ ಮುದ್ದು ಮಕ್ಕಳ

## ಫೋಟೋ ಉಚಿತವಾಗಿ ತಗೆಸಿರಿ

ಆ ದಿನ ಸಂಜೆ 4 ಘಂಟೆಯಿಂದ 5 ಘಂಟೆಯ ಒಳಗೆ ನಮ್ಮಲ್ಲಿ ಬರುವ ... ವಯಸ್ಸಿನ ಮಕ್ಕಳಿಗೆ ಉಚಿತವಾಗಿ ಫೋಟೋ ತೆಗೆಯಲಾಗುತ್ತೆ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕು

## ಮುರುಗನ್ ಸ್ಟುಡಿಯೋ,

ಶ್ರೀರಾಂಪೇಟೆ    ಮೈಸೂರು

## ಜೀವವಿಮೆ

**ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ,**

**ಮಗುವಿನ ಅವಶ್ಯಕತೆಯೂ ಆಗಿದೆ . . .**

## ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರುಷಗಳ ನಂಬಿಕೆ ಸೇವೆ ಸಹಕಾರ ಪಡೆದಿದೆ

ಪೂರ್ಣ ಭದ್ರತೆ—ಕಡಿಮೆ ಕಂತಿನ ರೇಟು ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು! ಅಲ್ಲದೆ ಅನುಕೂಲವಾದ ಪ್ರೀಮಿಯಂ ದರ ಸುಲಭ ಸಾಲ ಸೌಕರ್ಯ, ಕಡವಿಲ್ಲದ ವಿಮಾ ಮೊಬಲಗಿನ ಪಾವತಿ ಪ್ರಜೆಗಳ ಪಾಲಿಸಿಯಲ್ಲಿ ವಿಮೆ ಮಾಡಲು ಇಂದೇ ನಿರ್ಧರಿಸಿರಿ

★

## ಮೈಸೂರು ಸರ್ಕಾರದ ವಿಮಾ ಇಲಾಖೆ,

## ಬೆಂಗಳೂರು

ರಿಜಿಸ್ಟರ್ ನಂ 792

|| ವಂದೇ ಮಾತರಂ ||

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಎಜೆಂಟರ ಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಮ್ಯಾನೇಜರಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE FRIDAY 14-8-1953 : ಮೈಸೂರು . ಶುಕ್ರವಾರ ೧೪-೮-೧೯೫೩ [ ಸಂಚಿಕೆ ೧೪

# ಅಮೆರಿಕಾ ಮೋಟಾರು ಕಾರ್ಖಾನೆಯಲ್ಲಿ ಭಾರಿ ಸಿಡಿತ

## ನಗರದಲ್ಲಿ ಸ್ವಾತಂತ್ರ್ಯೋತ್ಸವ

### ನಾಳಿನ ಕಾರ್ಯಕ್ರಮಗಳು

ಮೈಸೂರು ೧೪

ಸಾರ್ವಜನಿಕ ವಿದ್ಯಾರ್ಥಿ ನಿಲಯದ ನೂತನ ಕಟ್ಟಡದ ಬಳಿ ಬೆಳಿಗ್ಗೆ ೭ ಗಂಟೆಗೆ ಮಹಾರಾಜಾ ಕಾಲೇಜು ಪ್ರಾಧ್ಯಾಪಕರಾದ ಶ್ರೀ ಬಿ ಎಲ್ ಹಿರಣ್ಣಯ್ಯನವರಿಂದ ಧ್ವಜಾರೋಹಣ ಮತ್ತು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ

ಕೋಳಮ್ಮನ ಗುಡಿ ಬೀದಿಯಲ್ಲಿರುವ ಇಂಡಿಯನ್ಸ್ ಕ್ಲಬ್ಬಿನಲ್ಲಿ ಬೆಳಿಗ್ಗೆ ೮ ಘಂಟೆಗೆ ಧ್ವಜಾರೋಹಣ ಸ್ಪರ್ಧೆಗಳು ಮತ್ತು ಸಂಜೆ ೬ ಗಂಟೆಗೆ ಪೌರ ಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಬಹುಮಾನ ವಿನಿಯೋಗ ಮತ್ತು ಟೀ ಪಾರ್ಟಿ

ಇಲವಾಲ ರಸ್ತೆಯಲ್ಲಿರುವ ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ಬೆಳಿಗ್ಗೆ ೧೦ ಘಂಟೆಗೆ ಶ್ರೀ ಎಂ ಪುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಎಲ್. ನರಸಪ್ಪನವರಿಂದ ಧ್ವಜಾರೋಹಣ ಮತ್ತು ಶ್ರೀ ಬಿ ವಿ ಬನುಮಯ್ಯನವರಿಂದ ಭಾಷಣ

ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಶಾಖೆಯಲ್ಲಿ ಶ್ರೀ ಎಂ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಂಜೆ ೫ ಗಂಟೆಗೆ ಸ್ವಾತಂತ್ರ್ಯ ದಿನಾಚರಣೆ

### ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಸಂಜೆ ೫ ರಿಂದ ೭-೩೦ ವರೆಗೆ ಶ್ರೀ ಗೋಪಾಲಕೃಷ್ಣ ಮತ್ತು ವೆಂಕಟಸುಬ್ಬಯ್ಯನವರಿಂದ ವಿದುರ ನೀತಿ ಎಂಬ ಪುರಾಣವೂ ೭ ಘಂಟೆಗೆ ಶ್ರೀ ಬಿ ರಾಮಸ್ವಾಮಿ ನಾಯ್ಡುರವರಿಂದ ಜಯದೇವ ಎಂಬ ಹರಿಕಥೆಯೂ ನಡೆಯುವುವು

### ನಿರುದ್ಯೋಗ ದಿನಾಚರಣೆ

ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲ್ ಆವರಣದಲ್ಲಿ ನಿರುದ್ಯೋಗ ದಿನಾಚರಣೆಯ ಸಂಬಂಧವಾಗಿ ಬಹಿರಂಗ ಸಭೆಯೊಂದು ಏರ್ಪಡಿಸಲ್ಪಟ್ಟಿದೆ ಮಹಾಜನರು ಭಾಗವಹಿಸುವಂತೆ ಕೋರಲಾಗಿದೆ

## ಗ್ರೀಸ್ ದ್ವೀಪದ ಭೂಕಂಪದಲ್ಲಿ ೪೮೦ ಮರಣ

ಗ್ರೀಸಿಗೆ ಸೇರಿದ ಅಯೋನಿಯನ್ ದ್ವೀಪಸ್ತೋಮದಲ್ಲಿ ಇತ್ತೀಚೆಗೆ ಆದ ಭೂಕಂಪದಿಂದ ೪೮೦ ಜನರು ಮಡಿದು, ೩೦೦೦೦ ಜನರು ಮನೆಮಠಗಳನ್ನು ಕಳೆದುಕೊಂಡಿರುವರು

## ಮೈಸೂರು ಮತ್ತು ತಲಚೇರಿ ನಡುವೆ ರೈಲುಮಾರ್ಗಕ್ಕೆ ಒತ್ತಾಯ

ತಲಚೇರಿ ಮತ್ತು ಮೈಸೂರುಗಳ ನಡುವೆ ರೈಲು ಮಾರ್ಗವನ್ನು ಏರ್ಪಡಿಸಬೇಕೆಂದು ಮಲಬಾರಿನ ಮಹನೀಯರು, ಪಾರ್ಲಿಮೆಂಟ್ ಸದಸ್ಯರು ಕೇಂದ್ರ ರೈಲ್ವೆ ಮಂತ್ರಿಗಳನ್ನು ಪ್ರಾರ್ಥಿಸುವ ಮನವಿಯೊಂದನ್ನು ಒಪ್ಪಿಸಿದ್ದಾರೆ ೫೦ ವರ್ಷಗಳ ಹಿಂದೆ ಆದ ಸರ್ವೆಯ ಪರಿಣಾಮವಾಗಿ ಮುಂದಿನ ಕ್ರಮ ಕೈಗೊಳ್ಳುವಂತೆ ಅವರು ಕೋರಿದ್ದಾರೆ ಪಂಚ ವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುವ ಸಾಧ್ಯತೆಯನ್ನು ಪರಿಶೀಲಿಸುವುದಾಗಿ ಮಂತ್ರಿಗಳು ತಿಳಿಸಿದ್ದಾರೆ

## ನಾಳಿದ್ದು ದೆಹಲಿಗೆ ಪಾಕಿಸ್ತಾನದ ಪ್ರಧಾನಿಯ ಆಗಮನ

ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ದೆಹಲಿಗೆ ನನ್ನೆ ಭೇಟಿ ಕೊಡಲಿರುವರು ೧೬ನೇ ತಾರೀಖು ರಾತ್ರಿಯವರೆಗೆ ಇತ್ತೀಚಿನ ವಿದ್ಯಮಾನಗಳನ್ನು ಕುರಿತು ಅವರು ಸಮಾಲೋಚನೆ ನಡೆಸಲಿರುವರೆಂದು ಗೊತ್ತಾಗಿದೆ

## ತಾಲ್ಲೂಕು ಕಛೇರಿಯಲ್ಲಿ ಹೊಡೆದಾಟ

ಪಿರಿಯಾಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಕಳೆದ ಸೋಮವಾರ ಮುದ್ದಹಳ್ಳಿ ಪಟೇಲ್ ಕೆಂಚವೀರಯ್ಯ ಅವರ ಮಗ ಶಿವಲಿಂಗೇಗೌಡ ಕರೀಗೌಡ ಮತ್ತು "ಪೋಲೀಸು ರಾಜು" ರವರ ಗಳಿಗೆ ಜಗಳವಾಯಿತೆಂದೂ ತಾಲ್ಲೂಕ ಖಜಾನೆ ಅಧಿಕಾರಿಗಳು ಪೋಲೀಸರನ್ನು ಕರೆಸಿ ಪರಿಸ್ಥಿತಿಯನ್ನು ಹತಬಂದಿಗೆ ತಂದರೆಂದೂ ಹೇಳಲಾಗಿದೆ

### ಎಂ ಎ ಮತ್ತು ಎಂ ಎಸ್‌ಸಿ ಪರೀಕ್ಷಾ ಫಲಿತಾಂಶ

ಮೈಸೂರು ವಿಶ್ವವಿದ್ಯಾಲಯದ ಎಂ ಎ ಎಂ ಎಸ್‌ಸಿ ಮತ್ತು ಇಂಡಸ್ಟ್ರಿಯಲ್ ಕೆಮಿಸ್ಟ್ರಿ ಪದವೀಧರೋತ್ತರ ಡಿಪ್ಲೊಮಾ ಪರೀಕ್ಷೆಗಳ ಫಲಿತಾಂಶವನ್ನು ೧೯ನೇ ತಾ|| ಬುಧವಾರ ಬೆಳಿಗ್ಗೆ ೧೧ ಗಂಟೆಗೆ ಪ್ರಕಟಿಸಲಾಗುವುದು

### ಜೈಹಿಂದ್ ಕ್ರಿಕೆಟ್ ಸಂಘ

ನಾಳೆ ಸಂಜೆ ೫ ಗಂಟೆಗೆ ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯಲ್ಲಿ ಇಲ್ಲಿನ ಜೈಹಿಂದ್ ಕ್ರಿಕೆಟ್ ಸಂಘದವರು ಸ್ವಾತಂತ್ರ್ಯ ದಿನಾಚರಣೆಯನ್ನೂ ಮತ್ತು ಸಂಘದ ವಾರ್ಷಿಕೋತ್ಸವವನ್ನೂ ನೆರವೇರಿಸುವರು ಬನುಮಯ್ಯ ಕಾಲೇಜಿನ ಉಪನ್ಯಾಸಕರಾದ ಶ್ರೀ ಎಸ್ ಎ ಸಂಪತ್ಕುಮಾರಾಚಾರ್ಯರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ

## ಮೋಟಾರು ಕಾರ್ಖಾನೆ ಆಸ್ಫೋಟಿಸಿ ೩|| ಕೋಟಿ ಡಾಲರು ನಷ್ಟ

ಅಮೆರಿಕದ ಡಿಟ್ರಾಯಿಟ್ ನಗರದಲ್ಲಿ ನಂಬ್ಯುವರ ಗಳಿಕೆಗೆ ಕಟ್ಟಲಾಗಿದ್ದ ಜನರಲ್ ಮೋಟರ್ಸ್ ಕಾರ್ಪೊರೇಷನ್ನಿನ ಕಾರ್ಖಾನೆಯ ಹೈಡ್ರಾಮ್ಯಾಟಿಕ್ ಶಾಖೆಯಲ್ಲಿ ನೆನ್ನೆ ಪ್ರಚಂಡ ಆಸ್ಫೋಟನೆ ಸಂಭವಿಸಿ ಅದರಿಂದ ಬೆಂಕಿ ಜ್ವಾಲೆಯು ಇಡೀ ಕಟ್ಟಡಕ್ಕೆ ಹರಡಿ ಕಾರ್ಖಾನೆಯು ಪೂರ್ಣವಾಗಿ ನಾಶವಾಯಿತೆಂದು ವರದಿಯಾಗಿದೆ ಈ ಕಾರ್ಖಾನೆಯಲ್ಲಿ ಇದ್ದವರು ಮತ್ತು ಐದು ಜನರು ತೀವ್ರವಾಗಿ ಗಾಯಗೊಂಡರು ಕಾರ್ಖಾನೆಯೊಳಗೆ ಅನೇಕರು ಸಿಕ್ಕಿಬಿದ್ದಿರಬಹುದು ಕೆಲವು ಕಾರ್ಮಿಕರು ಬೆಂಕಿಯ ಜ್ವಾಲೆಗಳನ್ನು ಒಡೆದು ಹೊರಕ್ಕೆ ಓಡಿಹೋದರೆಂದು ಹೇಳಲಾಗಿದೆ ಕಾರ್ಖಾನೆಯನ್ನು ನಿರ್ಮಿಸಲು ೩|| ಮಿಲಿಯ ಡಾಲರುಗಳಷ್ಟು ವೆಚ್ಚವಾಗಿದ್ದಿತು

## ಮಂಡ್ಯದ ಸಕ್ಕರೆ ಕಾರ್ಖಾನೆ ಕೆಲಸಗಾರರ ದಸ್ತಗಿರಿ

ಮಂಡ್ಯದ ಮೈಸೂರು ಷುಗರ್ ಕಂಪನಿಗೆ ಸೇರಿದ ಗೋಪಾಲಪುರ ಫಾರಂನಲ್ಲಿ ಕೆಲಸಗಾರರಾದವರು ಜಾರಿಗೆ ತಂದಿರುವ ಹೊಸ ನೀತಿಯನ್ನು ಪ್ರತಿಭಟಿಸುವ ಸಲುವಾಗಿ ೪ ಮಂದಿ ಹಳೆಯ ಕೆಲಸಗಾರರು ಕೆಲಸಕ್ಕೆ ಹೋಗುವವರನ್ನು ತಡೆಯುತ್ತಿದ್ದುದಕ್ಕಾಗಿ ಬಂಧಿಸಲಾಗಿ ಮದ್ದೂರಿಗೆ ಕರೆದೊಯ್ಯಲ್ಪಟ್ಟಿದ್ದಾರೆ

### ಸೂಚನೆ

ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ ನಾಳೆ ದಿನ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

## ಸಂಪಾದಕರ ಮೇಲಿನ ಮೊಕದ್ದಮೆಯಲ್ಲಿ ರಾಜಿ

ಬೆಂಗಳೂರಿನ ವಿಶ್ವಕರ್ನಾಟಕ ಮತ್ತು ಜನವಾಣಿ ಪತ್ರಿಕೆಗಳ ಸಂಪಾದಕರ ಮೇಲೆ ಆಬ್ಕಾರಿ ಕಂಟ್ರಾಕ್ಟರ್ ಆದ ಶ್ರೀ ಕೆ ಎಸ್ ಗುರುಸ್ವಾಮಿ ಮತ್ತು ಶ್ರೀ ಮಲ್ಲಾರಂಗಪ್ಪನವರು ಜಿಲ್ಲಾ ನ್ಯಾಯಸ್ಥಾನದಲ್ಲಿ ಹೂಡಿದ್ದ ಮೊಕದ್ದಮೆಗಳಲ್ಲಿ ಎರಡು ಪಕ್ಷಗಳವರಿಗೂ ರಾಜಿಯಾಗಿರುವುದೆಂದು ತಿಳಿಸಲಾಗಿ, ನ್ಯಾಯಾಧೀಶರ ಸಂಪಾದಕರುಗಳನ್ನು ನೆನ್ನೆ ಖುಲಾಸೆ ಮಾಡಿದರು ತಾಯಿನಾಡು ಪತ್ರಿಕೆಯ ಸಂಪಾದಕ ಶ್ರೀ ಪಿ ಬಿ ಶ್ರೀನಿವಾಸರವರ ವಿಚಾರಣೆಯು ಈ ದಿನ ನಡೆಯುತ್ತದೆ

### ಇಂಜನಿಯರಿಂಗ್ ಕಾಲೇಜಿನಲ್ಲಿ ಸ್ಥಾನಕ್ಕಾಗಿ ಹೈಕೋರ್ಟಿಗೆ ಅರ್ಜಿ

ಬೆಂಗಳೂರಿನ ಶ್ರೀ ಎಸ್ ಜಿ ಶ್ರೀವತ್ಸ ಎಂಬ ಬಿ ಎಸ್‌ಸಿ ಪದವೀಧರ ವಿದ್ಯಾರ್ಥಿಯು ಪರವಾಗಿ ನೆನ್ನೆ ಹೈಕೋರ್ಟಿನಲ್ಲಿ ಅರ್ಜಿಯೊಂದನ್ನು ಸಲ್ಲಿಸಲಾಗಿದೆ ಮೈಸೂರು ಇಂಜನಿಯರಿಂಗ್ ಕಾಲೇಜು ಪ್ರಿನ್ಸಿಪಾಲರು ಮತ್ತು ಆಯ್ಕೆ ಸಮಿತಿಯವರು ಅರ್ಜಿದಾರರನ್ನು ಬಿ ಇ ತರಗತಿಗೆ ಸೇರಿಸಲು ರಿಟ್ ಆಜ್ಞೆಯನ್ನು ಕೊಡುವಂತೆ ಕೋರಲಾಗಿದೆ ತಮಗಿಂತ ಕಡಿಮೆ ಸಂಖ್ಯೆಯನ್ನು ಪಡೆದವರಿಗೆ ಸ್ಥಾನ ಕಲ್ಪಿಸಿ, ತಮಗೆ ಕೊಡದಿರುವುದು ರಾಜ್ಯಾಂಗದ ಮೂಲಭೂತ ಹಕ್ಕಿಗೆ ಚ್ಯುತಿ ತರುವುದೆಂದು ಅರ್ಜಿದಾರರು ತಿಳಿಸುತ್ತಾರೆ

## ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಅಧ್ಯಕ್ಷತೆಗೆ ವಿಜಯಲಕ್ಷ್ಮಿ

ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯ ಎಂಟನೇ ಅಧಿವೇಶನದ ಅಧ್ಯಕ್ಷತೆಗೆ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರ ಉಮೇದುವಾರಿಕೆಯನ್ನು ಅಮೆರಿಕದ ಸಂಯುಕ್ತ ಸಂಸ್ಥಾನದವರು ಪುರಸ್ಕರಿಸಿ ಬೆಂಬಲ ನೀಡುವರೆಂದು ಹೇಳಲಾಗುತ್ತಿದೆ

## ಭಾರತದಲ್ಲಿ ಸಾಕಾದಷ್ಟು ಭತ್ತದ ಬೆಳೆ

ಭಾರತದಲ್ಲಿ ಸಾಕಾದಷ್ಟು ಭತ್ತದ ಬೆಳೆಯಾಗಿರುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಎಂ ವಿ ಕೃಷ್ಣಪ್ಪನವರು ತಿಳಿಸಿರುತ್ತಾರೆ ಇದುವರೆಗೆ ಬರ್ಮಾದಿಂದ ೧|| ಲಕ್ಷ ಟನ್ ಅಕ್ಕಿಯನ್ನು ಆಮದು ಮಾಡಿಕೊಳ್ಳಲಾಗಿದೆಯೆಂದೂ, ಮುಂದೆ ಈ ವರ್ಷಕ್ಕಾಗಿ ಹೆಚ್ಚು ಆಮದು ಮಾಡುವ ಆಲೋಚನೆಯಿಲ್ಲವೆಂದೂ ಅವರು ಹೇಳಿರುವರು ಎಲ್ಲಾ ಪ್ರಾಂತಗಳಲ್ಲೂ ಅಕ್ಕಿಯ ಪಡಿತರದ ಪ್ರಮಾಣವನ್ನು ಹೆಚ್ಚಿಸಲಾಗಿರುವುದೆಂದು ಆಹಾರ ಮಂತ್ರಿಗಳು ತಿಳಿಸಿರುವರು

### ಅಖಂಡ ಭಾರತ ದಿನಾಚರಣೆ

ರಾಜಧಾನಿಯ ಭಾರತೀಯ ಜನಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಅಖಂಡ ಭಾರತ ದಿನಾಚರಣೆಯನ್ನು ನೆರವೇರಿಸಲಾಗುವುದು

## ಬುಡಮೇಲು ಚಳುವಳಿಗಾಗಿ ಈಜಿಪ್ಟಿನಲ್ಲಿ ೬೯ ಜನರ ದಸ್ತಗಿರಿ

ದೇಶವನ್ನು ಬುಡಮೇಲು ಮಾಡುವ ಪ್ರಚಾರದಲ್ಲಿ ತೊಡಗಿದ್ದರೆಂದು ಈಜಿಪ್ಟಿನ ೬೯ ಜನರನ್ನು ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ

## ನಾಯಿಯಿಂದ ನಗಗಳ ಕಳುವು

ಕಳ್ಳತನ ಮಾಡಲು ಶಿಕ್ಷಣ ಪಡೆದ ನಾಯಿಯೊಂದು ನಾಗಪಟ್ಟಣದ ಬಳಿ ವೇಲಂಗಣ್ಣಿ ಪ್ರವಾಸಿ ಮಂದಿರದಲ್ಲಿ ಡಾ|| ಜೋಸೆಫ್ ಚಂದ್ರ ಎಂಬುವರ ೫೦೦೦ ರೂ ಬೆಲೆಯ ನಗಗಳ ಚೀಲವನ್ನು ಮೊನ್ನೆ ರಾತ್ರಿ ಕಚ್ಚಿಕೊಂಡು ಪರಾರಿಯಾಯಿತೆಂದು ವರದಿಯಾಗಿದೆ ಚಂದ್ರರವರ ಇಳಿದುಕೊಂಡಿದ್ದ ಕೊಠಡಿ ಬಾಗಿಲಲ್ಲಿ ಮಂಚ ಹಾಕಿಕೊಂಡು ಅವರು ಮಲಗಿದ್ದಾಗ ನಾಯಿಯು ಕೆಳಗಡೆಯಿಂದ ನುಸಿದು ಕೊಂಡು ಹೋಗಿ ಚೀಲವನ್ನು ಕಚ್ಚಿಕೊಂಡು ಓಡುತ್ತಿದ್ದುದನ್ನು ಕಂಡವರು ಅಟ್ಟಿಸಿಕೊಂಡು ಹೋದರೂ ಅದು ಸಿಗದೆ ಅನೇಕ ಬೀದಿಗಳನ್ನು ದಾಟಿ ಕಣ್ಮರೆಯಾಯಿತೆಂದು ಹೇಳಲಾಗಿದೆ.

### ೧೫ ರ ಶನಿವಾರದಲ್ಲಿ ಆಕಾಶವಾಣಿ ಕಾರ್ಯಕ್ರಮ

ಬೆಳಿಗ್ಗೆ ೭ ೫ ಎ ವಿ ಕೃಷ್ಣಮಾಚಾರ್ ಪಿಟೀಲು ೭ ೩೦ ರ ಕೆ ಪಟ್ಟಮ್ಮಾಳ್ ಕರ್ನಾಟಕ ಸಂಗೀತ ೧-೪೦ ಮತ್ತು ೧ ೫೦ ಗ್ರಾಮಫೋನ್ ಅವರನ್ನು ನೊಳ್ಳಿನ ಗೀತಗಳು ಸಂಜೆ ೫ ೪೦ ಮತ್ತು ಆರ್ ವಾಸುದೇವಮೂರ್ತಿ ಸಂಗೀತ ೬ ಗಾನರಿ ಹಾರ ೬ ೧೫ ನಾಟ್ಯ ಮತ್ತು ನವ್ಯವರು ೭ ೫ ಮತ್ತು ೮ ೩೦ ಎಂ ಡಿ ಸುಶೀಲಾ ಪಿಟೀಲು ೭ ೪೦ ಪಕ್ಷಿನೋಟ ೯-೧೫ ಗೀತಗಳು ೯-೪೦ ಎ ಐ ಆರ್.

ಸ್ವಾತಂತ್ರ್ಯ ದಿನಾಚರಣೆಯ ಸಂತೋಷದ ಸುದ್ದಿ !!
ರಾಜಧಾನಿಯ ಸುಪ್ರಸಿದ್ಧವಾದ
ಬೊಂಬಾಯಿ ಆನಂದ ಭವನ್
ಹೊಟೇಲಿನಲ್ಲಿ
ಕಾಫಿ ಬೆಲೆಯನ್ನು ಇದೇ ತಿಂಗಳು 15 ನೇ ತಾರೀಖಿನಿಂದ
0-1-6 ಆಣೆಗೆ ಇಳಿಸಲಾಗಿದೆಯೆಂದು ಈ ಮೂಲಕ
ಮಹಾಜನರಿಗೆ ತಿಳಿಯಪಡಿಸಲಾಗಿದೆ
ಮಹಾಜನರು ಎಂದಿನಂತೆ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ —
ಮ್ಯಾನೇಜ್‌ಮೆಂಟ್

## ಫ್ರಾನ್ಸಿನಲ್ಲಿ ೪೦ ಲಕ್ಷ ಕಾರ್ಮಿಕರ ಭಾರಿ ಮುಷ್ಕರ

ಫ್ರಾನ್ಸಿನಲ್ಲಿ [illegible]

## ಹುಬ್ಬಳ್ಳಿ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ

ಕರ್ನಾಟಕ ರಾಜ್ಯ ನಿರ್ಮಾಣ [illegible]

## ಬ್ರಿಟಿಷ್ ಸೈನ್ಯ ಮತ್ತು ಈಜಿಪ್ಟ್ ಜನರ ಘರ್ಷಣೆ

[illegible]

## ಕಾಶ್ಮೀರದಿಂದ ವಿದೇಶೀ ಕಲೆಗಾರರ ಉಚ್ಚಾಟನ

ಕಾಶ್ಮೀರ ಸಂಸ್ಥಾನದ [illegible]

## ಕೋಲಾರ ಜಿಲ್ಲೆಯಲ್ಲಿ ಅಂಟು ಜಾಡ್ಯಗಳಿಂದ ೧೦೦ ಮರಣ

[illegible]

## ಮೈಸೂರು ಪೇಟೆ ಧಾರಣೆ

[illegible]


# ಚಾಮುಂಡೇಶ್ವರಿ ಟಾಕೀಸ್

14-8-53 ರಿಂದ [illegible]

ನ್ಯಾಷನಲ್ ಆರ್ಟ್ಸ್ ರವರ ★ ಪಿಚ್ಚಿ ಪುಲ್ಲಯ್ಯ ★

ತಾರಾಗಣ:— ಎನ್. ಟಿ. ರಾಮರಾವ್, ಕೃಷ್ಣಕುಮಾರಿ, ಜಾನಕಿ ಮುಂತಾದವರು

DON'T MISS THIS SUNDAY'S AUCTION
AT MESSRS **ABID & Co.,** STATUE SQUARE,
Mysore — — At 10 A. M.
FURNITURE, GRAMAPHONES CYCLES, PRAMS, TYPE-WRITER, CAMERA & A HUGE LOT OF T. W. DOORS, WINDOWS & VENTILATORS Etc

In connection with the Celebration of the
INDEPENDENCE DAY
**SRI GAYATHRI TALKIES**
Present M G M's New Type Picture
# METROSCOPIX
(3 DIMENSIONS)
From 15 8-53 . Daily 3 Shows
To enable you to see this Picture Special Polloroid Glasses are Available At The Theatre For Hire which may kindly be Returned to the Management after use

# ಪ್ರಭುದೇವಾ ಥಿಯೇಟರ್
ಸದ್ಮಾ ಟಾಕೀಸ್

ಕೆ. ಬಿ. ಸುಂದರಾಂಬಾಳ್ ಪಾತ್ರ ವಹಿಸಿರುವ ಜೆಮಿನಿಯವರ [illegible] ಚಿತ್ರ

15-8 53 ನೇ :: ಶನಿವಾರದಿಂದ

ADVANCE BOOKING FROM 15 8 53 Balcony booking will be opened 3 hours earlier for each show

ಮೋತಿಲಾಲ್ ಟಾಕೀಸ್
14-8-53 ರಿಂದ ದಿನವೂ 3 [illegible]
ಡಾರ್ಕ್ ಪಿಲ್ಲರ್ ... ದಿ ಕೋರ್ಸ್ ಗಾರ್ಡ್
SRI GANESHA TALKIES
On 14-8-53 One ... Universal's
ONE WAY STREET
[illegible]
INDEPENDENCE DAY
Special Attraction
GALA OPENING
From 15-8-53 ... 4 days Only
Universal International's Latest
[illegible] Production
SCARLET ANGEL

ಪ್ರಭಾ ★ ... 2 ನೇ ವಾರ ದಿನವೂ 3 ಆಟಗಳು
[illegible]
★ ಶಗೂಫ ★
[illegible] 14-8-53 ರಿಂದ
ಒಲಂಪಿಯಾ ಟಾಕೀಸ್
[illegible]
★ ಪ್ರತಿಜ್ಞಾ ★
[illegible]

ಆಗಸ್ಟ್ 15— ಸ್ವಾತಂತ್ರ್ಯ ದಿನದಂದು
ನಿಮ್ಮ ಮುದ್ದು ಮಕ್ಕಳ
ಫೋಟೋ ಉಚಿತವಾಗಿ ತೆಗೆಸಿರಿ
ಆ ದಿನ ಸಂಜೆ 4 ಘಂಟೆಯಿಂದ 5 ಘಂಟೆಯ ಒಳಗೆ ನಮ್ಮಲ್ಲಿ ಬರುವ ಮೂರು ವರ್ಷದ ಒಳಗಿನ ಮಕ್ಕಳಿಗೆ ಉಚಿತವಾಗಿ ಫೋಟೋ ತೆಗೆಯಲಾಗುತ್ತೆ
ಈ ಸುಸಮಯವನ್ನು ಉಪಯೋಗಿಸಿಕೊಳ್ಳಬೇಕು !!
ಮುರುಗನ್ ಸ್ಟುಡಿಯೋ,
ಶ್ರೀರಾಂಪೇಟೆ :: ಮೈಸೂರು

Edited Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ ನಂ. 792 || ವಂದೇ ಮಾತರಂ || [illegible]

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

SADHVI . LEADING NATIONALIST DAILY OF MYSORE

ಸಂಪುಟ ೧೨ ] MYSORE : SUNDAY 16-8-1953 :: ಮೈಸೂರು : ಭಾನುವಾರ ೧೬-೮-೧೯೫೩ [ ಸಂಚಿಕೆ ೧೫

# - ಸಂಸ್ಥಾನದಲ್ಲಿ ಇಂದಿನಿಂದ ಧಾನ್ಯಗಳ ಬೆಲೆ ಕಡಿಮೆ -

## ಕಲ್ಕತ್ತಾದಿಂದ ವಿಮಾನದಲ್ಲಿ ಮೀನುಗಳ ರವಾನೆ

ಬೆಂಗಳೂರು ೧೬.

ಕಲ್ಕತ್ತದಿಂದ ಮೊನ್ನೆ ಇಲ್ಲಿಗೆ ೧೦ ಸಾವಿರ ಜೀವಂತ ಕಾಟ್ಲಾ ಎಂಬ ಒಂದು ಜಾತಿಯ ಹೊಸ ಮೀನುಗಳನ್ನು ವಿಮಾನದಲ್ಲಿ ತರಲಾಯಿತು. ಅವು ಗಂಗಾ ನದಿಯಲ್ಲಿದ್ದುವು. ಕೊರಬ ಮತ್ತು ಸಿರಾರಿಪುರದ ತಾಲ್ಲೂಕುಗಳಲ್ಲಿ ಸಾಮೂಹಿಕ ಯೋಜನೆ ಸಂಬಂಧವಾಗಿ ಅವುಗಳನ್ನು ತರಿಸಿಕೊಳ್ಳಲಾಗಿದೆ. ಅದನ್ನು ಭತ್ತದ ಗದ್ದೆಗಳಲ್ಲೂ, ಮತ್ತು ಕೆರೆಗಳಲ್ಲೂ ಬಿಡಲಾಗುವುದು. ಅವುಗಳನ್ನು ತರಲು ವಿಶೇಷ ರೀತಿಯ ಏರ್ಪಾಡು ಮಾಡಲಾಗಿದ್ದಿತು.

### ಮೈಸೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಸರ್ಕಾರಿ ಪ್ಲೀಡರುಗಳು

ಶ್ರೀ ಜಿ. ಶಂಕರಶೆಟ್ಟಿಯವರನ್ನು ಸರ್ಕಾರದವರು ಇನ್ನೂ ಮೂರು ವರ್ಷ ಕಾಲ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಿರುತ್ತಾರೆ. ಮೈಸೂರಿನ ವಕೀಲರಾದ ಶ್ರೀ ಎಸ್. ಚಿನ್ನಸ್ವಾಮಿ ಶೆಟ್ಟರನ್ನು ಸರ್ಕಾರಿ ಪ್ಲೀಡರಾಗಿ ನೇಮಿಸಲಾಗಿದೆ. ಇತರ ಜಿಲ್ಲೆಗಳ ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ಮಾಡಿರುವ ನೇಮಕಗಳಲ್ಲಿ ಶ್ರೀ ಸಿ. ಹೊನ್ನಯ್ಯ, ಬೆಂಗಳೂರು, ಶ್ರೀ ಸಿ. ಶಾ ವೀರಪ್ಪ, ಬೆಂಗಳೂರು ಸಿವಿಲ್ ಪ್ರದೇಶ, ಶ್ರೀ ಪಿ. ಮುರುಡಪ್ಪ, ಶಿವಮೊಗ್ಗ, ಶ್ರೀ ಹೆಚ್. ಎಸ್. ಮುರಿಗಪ್ಪ, ಹಾಸನ, ಶ್ರೀ ಕೆ. ಭೀಮಯ್ಯ, ತುಮಕೂರು, ಶ್ರೀ ಬಿ. ಕೆ. ರಾಮಚಂದ್ರರಾವ್, ಚಿತ್ರದುರ್ಗ ಮತ್ತು ಶ್ರೀ ಬಿ. ಕೆ. ನರಸಿಂಹಮೂರ್ತಿ—ಚಿಕ್ಕಮಗಳೂರು ಇವರುಗಳು ಇರುವರು. ಬೆಂಗಳೂರು ಜಿಲ್ಲೆಯಲ್ಲಿ ಸರ್ಕಾರಿ ಪ್ಲೀಡರ್ ಆಗಿ ಶ್ರೀ ವಿ. ಕೆ. ಗೋವಿಂದರಾಜುಲುರವರನ್ನು ನೇಮಿಸಲಾಗಿದೆ. ಅವರು ಬೆಂಗಳೂರು ನಗರದ ಪೌರಸಭಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ.

### ತಿರುಪತಿ ಕ್ಷೇತ್ರದ ವಿಷಯಗಳ ಬಗ್ಗೆ ಸುದ್ದಿ ಕೇಂದ್ರಗಳು

ತಿರುಪತಿ ಕ್ಷೇತ್ರದ ವಿಷಯಗಳನ್ನು ಪ್ರವಾಸಿಗರಿಗೆ ತಿಳಿಸುವ ಸಲುವಾಗಿ ಬೆಂಗಳೂರು, ಬೊಂಬಾಯಿ ಮತ್ತು ದೆಹಲಿಗಳಲ್ಲಿ ಸುದ್ದಿ ಕೇಂದ್ರಗಳನ್ನು ತೆರೆಯುವ ಆಲೋಚನೆ ಇರುತ್ತದೆ. ಅಲ್ಲಿನ ದೇವಸ್ಥಾನಗಳಲ್ಲಿ ಈಗ ತಿಂಗಳಿಗೆ ೧,೧೫ ಸಾವಿರ ರೂ. ಅಷ್ಟು ವರಮಾನವು ಬರುತ್ತದೆ.

## ಕಾಶ್ಮೀರದಲ್ಲಿ ಕ್ಷಮಾಪಣೆ ಕೊಟ್ಟ ೪೦ ಜನರ ಬಿಡುಗಡೆ

ಕಾಶ್ಮೀರ ಸರ್ಕಾರದವರು ದಸ್ತಗಿರಿ ಮಾಡಿದ್ದ ೧೦೨ ಜನರ ಪೈಕಿ ೪೦ ಜನರು ಸಂಸ್ಥಾನದ ವಿರುದ್ಧವಾದ ಕಾರ್ಯ ಚಟುವಟಿಕೆಗಳಲ್ಲಿ ನಿರತರಾಗುವುದಿಲ್ಲವೆಂದು ತಿಳಿಸಿ, ಕ್ಷಮಾಪಣೆ ಕೇಳಿದುದರಿಂದ ಅವರನ್ನು ಬಿಡುಗಡೆ ಮಾಡಲಾಗಿದೆ.

### ಪೈಲ್ವಾನ್ ಸಣ್ಣಬೋರಯ್ಯನವರಿಗೆ ಜಾಮೀನು

ಪೋಲೀಸರೊಬ್ಬನನ್ನು ಹೊಡೆದರೆಂದು ದಸ್ತಗಿರಿಯಾಗಿದ್ದ ನಗರದ ಪೈಲ್ವಾನ್ ಸಣ್ಣಬೋರಯ್ಯನವರನ್ನು ಮೊನ್ನೆ ಜಾಮೀನು ಮೇಲೆ ಬಿಡಲಾಯಿತು.

## ವಿದ್ಯಾರ್ಥಿನಿಯ ಆತ್ಮಹತ್ಯ ಪ್ರಯತ್ನ

ಮೈಸೂರು ೧೬.

ಇಲ್ಲಿನ ಪಶು ವೈದ್ಯಶಾಲೆಯ ನಿವೃತ್ತ ಅಧಿಕಾರಿ ಡಾ|| ಕುಲಕರ್ಣಿಯವರ ಮಗಳು ನಾಗರತ್ನ ಎಂಬ ೧೮ ವರ್ಷದ ಯುವತಿಯು ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶಕ್ಕಾಗಿ ಅರ್ಜಿ ಹಾಕಿಕೊಂಡು, ಭೇಟಿಗಾಗಿ ಕರೆಸಲ್ಪಟ್ಟು, ಕೊನೆಗೆ ಸ್ಥಾನವು ದೊರೆಯದಿದ್ದುದರಿಂದಾಗಿ ಜಿಗುಪ್ಸೆಯಿಂದ ಮೊನ್ನೆ ವಿಷವನ್ನು ಸೇವಿಸಿ ಪ್ರಾಣ ತೆಗೆದುಕೊಳ್ಳಲು ಪ್ರಯತ್ನ ನಡೆಸಿದುದಾಗಿ ವರದಿಯಾಗಿದೆ. ಆಕೆಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಆಕೆಯು ಇನ್ನೂ ಪ್ರಜ್ಞಾವಿಹೀನಳಾಗಿರುವಳು.

### ನಾಗನಹಳ್ಳಿಯಲ್ಲಿ ಗುಡಿಸಿಲುಗಳು ಬೆಂಕಿಗೆ ಆಹುತಿ

ಮೈಸೂರು ತಾಲ್ಲೂಕು ನಾಗನಹಳ್ಳಿಯಲ್ಲಿ ಕಳೆದ ಬುಧವಾರ ಹರಿಜನ ಕೇರಿಯಲ್ಲಿ ಬೆಂಕಿಯುಂಟಾಗಿ ೧೦ ಗುಡಿಸಿಲುಗಳು ಸುಟ್ಟು ಹೋದುವೆಂದೂ, ಅಲ್ಲಿದ್ದ ಆಹಾರ ಧಾನ್ಯಗಳು ಪೂರ್ಣವಾಗಿ ನಾಶವಾದುವೆಂದೂ ವರದಿಯಾಗಿದೆ.

### ನಿರುದ್ಯೋಗ ದಿನಾಚರಣೆ

ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನೆನ್ನೆ ನಿರುದ್ಯೋಗ ದಿನಾಚರಣೆಯನ್ನು ಟೌನ್‌ಹಾಲ್ ಮೈದಾನದಲ್ಲಿ ನೆರವೇರಿಸಲಾಯಿತು. ಶ್ರೀ ಡಿ. ಆರ್. ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಶಿಗಡೂರು ರಾಮಚಂದ್ರರಾವ್, ಸುಬ್‌ಸಿಂಗ್, ಸಿಂಚಾಮೋರ್ಹ ಮತ್ತು ಮಹಮದ್‌ರವರು ಮಾತನಾಡಿ ನಿರುದ್ಯೋಗವು ದಿನೇದಿನೇ ಹೆಚ್ಚುತ್ತಿರುವ ಅಂಶವನ್ನೂ, ಸರ್ಕಾರದವರು ಈ ಬಗ್ಗೆ ಸರಿಯಾದ ಪರಿಹಾರ ಕ್ರಮ ತೆಗೆದುಕೊಳ್ಳದಿರುವುದನ್ನೂ ವಿವರಿಸಿದರು. ಕೇಂದ್ರ ಸರ್ಕಾರದವರು ನಿರುದ್ಯೋಗ ನಿವಾರಣೆಗಾಗಿ ೫೦ ಕೋಟಿ ರೂ. ಗಳನ್ನು ಮಂಜೂರು ಮಾಡಿ ನಿರುದ್ಯೋಗಿಗಳಿಗೆ ಪರಿಹಾರ ದೊರಕಿಸಿಕೊಡಬೇಕೆಂದು ಒತ್ತಾಯ ಮಾಡುವ ನಿರ್ಣಯ ಮಾಡಲಾಯಿತು.

## ಮಧ್ಯಪ್ರದೇಶದಲ್ಲಿ ಹಿಂದಿ ಮತ್ತು ಮರಾಠಿ ಸರ್ಕಾರಿ ಭಾಷೆ

ಮಧ್ಯಪ್ರದೇಶದಲ್ಲಿ ಸೆಪ್ಟೆಂಬರ್ ೧ ರಿಂದ ಹಿಂದಿ ಮತ್ತು ಮರಾಠಿ ಭಾಷೆಗಳು ಅಧಿಕೃತ ಭಾಷೆಯಾಗುವುವು. ಆದರೆ ಕೇಂದ್ರ ಸರ್ಕಾರ, ಅಥವಾ ಇತರ ಪ್ರಾಂತ ಸರ್ಕಾರಗಳೊಡನೆ ವ್ಯವಹಾರ, ಹೈಕೋರ್ಟಿನಲ್ಲಿ ವ್ಯವಹಾರ, ರೆವಿನ್ಯೂ ಬೋರ್ಡು, ಅಕೌಂಟೆಂಟ್ ಜನರಲ್ಲರಿಗೆ ಸಂಬಂಧಿಸಿದ ಪತ್ರವ್ಯವಹಾರ, ಖಜಾನೆಗಳು ಮುಂತಾದುವುಗಳಿಗೆ ಈ ನಿಯಮವು ಇರುವುದಿಲ್ಲ.

## ಮಾಸ್ಕೋವಿನಿಂದ ಪೀಕಿಂಗಿಗೆ ನೇರವಾದ ರೈಲು ಮಾರ್ಗ

ಚೀಣದ ರಾಜಧಾನಿ ಪೀಕಿಂಗಿನಿಂದ ರಷ್ಯದ ರಾಜಧಾನಿ ಮಾಸ್ಕೋವಿಗೆ ನೇರವಾದ ರೈಲು ಮಾರ್ಗವನ್ನು ನಿರ್ಮಿಸುವ ಬಗ್ಗೆ ಎರಡು ರಾಷ್ಟ್ರಗಳೂ ಒಂದು ಯೋಜನೆಯನ್ನು ಪರಿಶೀಲಿಸುತ್ತಿರುವುವೆಂದು ವರದಿಯಾಗಿದೆ. ಈ ಮಾರ್ಗವು ನಿರ್ಮಾಣವಾದರೆ, ಅದು ೯ ದಿನಗಳ ಪ್ರಯಾಣವಾಗುವುದೆಂದು ಹೇಳಲಾಗಿದೆ.

## ಇಂದಿನಿಂದ ಧಾನ್ಯಗಳ ಬೆಲೆ ಇಳಿಯುವುದು

### ಸ್ವಾತಂತ್ರ್ಯ ದಿನದಲ್ಲಿ ಮುಖ್ಯ ಮಂತ್ರಿಗಳ ಸಂದೇಶ

ಮೈಸೂರು ೧೬.

ಇಲ್ಲಿನ ಆಲ್ ಇಂಡಿಯಾ ರೇಡಿಯೋವಿನವರು ಸ್ವಾತಂತ್ರ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಸಾರ ಭಾಷಣ ಮಾಡಿ, ಸರ್ಕಾರದ ಆಯವ್ಯಯ ಸ್ಥಿತಿ ಮತ್ತು ಆಹಾರ ಬೆಳೆಯು ಉತ್ತಮವಾಗಿರುವುದಾಗಿಯೂ, ಆದಕಾರಣ ಸರ್ಕಾರಿ ಡಿಪೋಗಳಲ್ಲಿ ಧಾನ್ಯಗಳ ಮಾರಾಟದ ಬೆಲೆಗಳನ್ನು ತಗ್ಗಿಸಬೇಕೆಂದು ಸರ್ಕಾರದವರು ತೀರ್ಮಾನಿಸಿರುವರೆಂದೂ ಹೇಳಿದರು. ಸಣ್ಣ ಅಕ್ಕಿಯನ್ನು ಸೇರಿಗೆ ಹತ್ತು ಆಣೆ ಎಂಟು ಕಾಸಿನಿಂದ ಹತ್ತೂವರೆ ಆಣೆ, ದಪ್ಪಕ್ಕಿ ಒಂಬತ್ತು ಆಣೆಯಿಂದ ಎಂಟು ಆಣೆ. ಗೋಧಿ ಎಂಟು ಆಣೆ ಎಂಟು ಕಾಸಿನಿಂದ ಎಂಟಾಣೆ, ರಾಗಿ, ಜೋಳ ಮುಂತಾದುವನ್ನು ೫ ಆಣೆ ೪ ಕಾಸಿನಿಂದ ೪ ಆಣೆ ೧೧ ಕಾಸು (ರೂಪಾಯಿಗೆ ೩ ಸೇರು) ಈ ರೀತಿ ಇಂದಿನಿಂದ ಮಾರುವ ವ್ಯವಸ್ಥೆಯು ಆಚರಣೆಗೆ ಬರುವುದೆಂದು ಅವರು ಹೇಳಿದರು.

ಬರುವ ಅಕ್ಟೋಬರ್ ೧ ರಿಂದ ಬಳ್ಳಾರಿ ಜಿಲ್ಲೆಯು ಮೈಸೂರು ಸಂಸ್ಥಾನಕ್ಕೆ ಸೇರುವ ವಿಷಯವನ್ನು ಅವರು ಪ್ರಸ್ತಾಪಿಸಿ, ತಮ್ಮ ಸ್ವಂತ ಅಭಿಪ್ರಾಯವೆಲ್ಲ ಭಾಷಾವಾರು ಪ್ರಾಂತ ರಚನೆಯು ಕೆಟ್ಟದ್ದಲ್ಲವೆಂದೂ, ಆದರೆ ಪ್ರಾಂತಗಳ ಪುನರ್ರಚನೆಯಾಗುವಾಗ ಆಡಳಿತದ ಅನುಕೂಲಕ್ಕೆ ಮುಖ್ಯವಾಗಿ ಗಮನ ಕೊಡಬೇಕೆಂದೂ, ಅದರಲ್ಲಿ ಭಾಷೆಯೂ ಸಹ ಗಮನಾರ್ಹವಾದ ಒಂದಂಶವೆಂದೂ ಹೇಳಿದರು. ಅತಿ ದೊಡ್ಡ ಅಥವಾ ಚಿಕ್ಕ ಸಂಸ್ಥಾನಗಳನ್ನು, ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ, ಎರಡು ಮೂರು ಕೋಟಿ ಪ್ರಜೆಗಳುಳ್ಳ ಸಂಸ್ಥಾನವಾಗಿ ಮಾಡಿದರೆ ಅತ್ಯುತ್ತಮವೆಂದು ಅಭಿಪ್ರಾಯಪಟ್ಟರು.

ಮೈಸೂರು ಸಂಸ್ಥಾನದಲ್ಲಿ ಈಗ ಇರುವ ೯೦ ಲಕ್ಷ ಜನಗಳ ಜೊತೆಗೆ ಬೊಂಬಾಯಿ, ಮದರಾಸು ಮತ್ತು ಹೈದರಾಬಾದು ಸಂಸ್ಥಾನಗಳಲ್ಲಿ ಕನ್ನಡ ಮಾತನಾಡುವ ಜಿಲ್ಲೆಗಳವರು ಮೈಸೂರನ್ನು ಸೇರಲು ಬಯಸಿರುವರೆಂದೂ, ಮೈಸೂರಿನ ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ಅವರವರ ಭಾಷೆಗಳೇನೇ ಇರಲಿ, ಅಲ್ಲಿನ ಜನರು ಮೈಸೂರಿಗೆ ಸೇರಲು ಬಯಸಿದರೆ ಮೈಸೂರಿನವರು ಆದರದಿಂದ ಸ್ವಾಗತಿಸುವುದಾಗಿಯೂ ಅವರು ತಿಳಿಸಿದರು. ಮೈಸೂರಿನಲ್ಲಿ ಈಗ ವಿವಿಧ ಭಾಷೆಗಳನ್ನಾಡುವ ಜನರು ತಮ್ಮ ಪರಸ್ಪರ ಅನ್ಯೋನ್ಯವಾಗಿ ಬಾಳುತ್ತಿರುವರೆಂದೂ, ಅದೊಂದು ಸಂಸ್ಥಾನದ ವೈಶಿಷ್ಟ್ಯವೆಂದೂ, ಮೈಸೂರಿಗೆ ಇತರ ಕನ್ನಡಿಗರು ಸೇರಿದರೆ ಈ ವೈಶಿಷ್ಟ್ಯಕ್ಕೆ ಕುಂದುಂಟಾಗುವುದಿಲ್ಲವೆಂದೂ ಅವರು ಹೇಳಿದರು. ಚಾರಿತ್ರಿಕ ಘಟನೆಗಳ ಶಕ್ತಿಯನ್ನು ತಡೆಯಲು ಅಸಾಧ್ಯವಾಗಿ, ಅದರ ಪ್ರಭಾವದಿಂದ ಮೈಸೂರು ವಿಸ್ತಾರವಾಗುವುದೆಂದು ಅವರು ಹೇಳಿದರು.

ಭಾರತವು ಸ್ವರಾಜ್ಯವನ್ನು ಪಡೆದು ಆರು ವರ್ಷಗಳಾಗಿ, ಅದನು ರಾಮರಾಜ್ಯವಾಗಿ ಪರಿ

## ದೇಶದ ಆದ್ಯಂತ ಭಾರತದ ಸ್ವಾತಂತ್ರ್ಯ ದಿನಾಚರಣೆ

ಭಾರತ ಸ್ವಾತಂತ್ರ್ಯದ ಆರನೇ ವಾರ್ಷಿಕೋತ್ಸವವು ನೆನ್ನೆ ದೇಶದ ಆದ್ಯಂತ ಬಹು ವೈಭವದಿಂದ ನಡೆಯಿತು. ದೆಹಲಿಯ ಕೆಂಪುಕೋಟೆಯ ಮೇಲೆ ನೆನ್ನೆ ಬೆಳಿಗ್ಗೆ ಪ್ರಧಾನಿ ನೆಹರೂರವರು ರಾಷ್ಟ್ರಧ್ವಜಾರೋಹಣ ನಡೆಸಿದರು. ದೆಹಲಿಯಲ್ಲಿರುವ ವಿದೇಶಗಳ ರಾಯಭಾರಿಗಳೂ, ಉನ್ನತಾಧಿಕಾರಿಗಳೂ, ಲಕ್ಷಾಂತರ ಜನರೂ ಭಾಗವಹಿಸಿದ್ದರು. ಅಲ್ಲಿನ ರಾಜಘಾಟಿಗೆ ನೆನ್ನೆ ಬೆಳಿಗ್ಗೆ ಸಹಸ್ರಾರು ಜನರು ತೆರಳಿ, ಮಹಾತ್ಮ ಗಾಂಧಿಯವರ ಸಮಾಧಿಗೆ ಗೌರವ ಸಲ್ಲಿಸಿದರು. ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್‌ರವರು ರೇಡಿಯೋ ಪ್ರಸಾರ ಭಾಷಣ ಮಾಡುತ್ತಾ, ಕಳೆದ ಆರು ವರ್ಷಗಳಿಂದ ದೇಶವು ಸಾಧಿಸಿರುವ ಪ್ರಗತಿಯನ್ನು ವಿಮರ್ಶಿಸಿ, ಅದರ ಪುರೋಭಿವೃದ್ಧಿಗಾಗಿ ಎಲ್ಲರೂ ಪ್ರೇಮ ಮತ್ತು ಸೌಹಾರ್ದದಿಂದ ಶ್ರಮಿಸಬೇಕೆಂದು ಕೋರಿದರು.

### ಪಾಕಿಸ್ತಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಪಾಕಿಸ್ತಾನದಲ್ಲಿ ಮೊನ್ನೆ ದಿನ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ ಅಲ್ಲಿನ ಪ್ರಧಾನಿಯವರು ಭಾಷಣ ಮಾಡಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ವ್ಯಾಜ್ಯಗಳು ಸುಗಮವಾಗಿ ಪರಿಹಾರವಾಗುವುವೆಂದು ಆಶಿಸಿದರು. ಕಾಶ್ಮೀರದ ಘಟನೆಗಳು ತಮ್ಮನ್ನು ಕಂಗುಬಡಿಸಿದುದಾಗಿಯೂ, ಷೇಕ್ ಅಬ್ದುಲ್ಲಾ ಅಥವಾ ಬೇರೊಬ್ಬ ಮನುಷ್ಯನ ಬಗ್ಗೆ ತಮಗೆ ಆತಂಕವಾಗದಿದ್ದರೂ, ಕಾಶ್ಮೀರದ ಜನರಿಗೆ ನ್ಯಾಯವು ದೊರಕಬೇಕೆಂಬುದಾಗಿ ತಾವು ಆಶಿಸುವುದಾಗಿಯೂ ಹೇಳಿದರು. ಕಾಶ್ಮೀರದೊಡನೆ ಪಾಕಿಸ್ತಾನವು ಮತ, ಸಂಸ್ಕೃತಿ, ಆರ್ಥಿಕ ಮತ್ತು ಭೌಗೋಳಿಕವಾಗಿ ಸಂಬಂಧ ಹೊಂದಿರುವುದಾಗಿ ಅವರು ತಿಳಿಸಿದರು. ಅಲ್ಲಿನ ಗೌರ್ನರ್ ಜನರಲ್ಲರು ಪ್ರಸಾರಭಾಷಣ ಮಾಡಿ ಕಾಶ್ಮೀರವು ಪಾಕಿಸ್ತಾನದ ಮುಖ್ಯ ಸಮಸ್ಯೆಯಾಗಿರುವುದಾಗಿ ಹೇಳಿದರು.

### ಸ್ವಾತಂತ್ರ್ಯೋತ್ಸವದಲ್ಲಿ ಬಾಂಬುಗಳು

ನೆನ್ನೆ ಲಾಹೋರ್ ಮೈದಾನದಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಕಾಶಬುಟ್ಟಿ ಮುಂತಾದ ಬಾಣ ಬಿರುಸುಗಳನ್ನು ಏರ್ಪಡಿಸಲಾಗಿತ್ತು.

---

ವರ್ತಿಸುವಂತೆ ರೂಪಿಸುವ ಭಾಗ್ಯವು ಭಾರತೀಯರಿಗೆ ದೊರಕಿರುವುದೆಂದೂ, ಜನರೆಲ್ಲಾ ತಿನ್ನಲು ಮತ್ತು ಉಡಲು ಸಾಕಾದಷ್ಟಿದ್ದು ಅವರು ಸುಸಂಸ್ಕೃತರಾಗಿ, ದೈವಭಕ್ತರಾಗಿ, ಧರ್ಮದಿಂದ ಜೀವನ ನಡೆಸಿದರೆ ರಾಮರಾಜ್ಯವು ದೊರಕಿದಂತೆಯೇ ಎಂದು ಮುಖ್ಯ ಮಂತ್ರಿಗಳು ಸೂಚಿಸಿದರು.

ಹತೋಟಿಗಳಿಂದ ದೇಶದಲ್ಲಿ ಉಂಟಾಗಿದ್ದ ತೊಂದರೆಯನ್ನು ವಿವರಿಸಿ, ತಮ್ಮ ಮಂತ್ರಿಮಂಡಲವು ಅಧಿಕಾರ ವಹಿಸಿದಂದಿನಿಂದ ನಡೆಸಿದ ಕಾರ್ಯವನ್ನು ತಿಳಿಸಿದರು. ವಿದ್ಯಾ ಸುಧಾರಣೆ, ಪಂಚವಾರ್ಷಿಕ ಯೋಜನೆ ಕೆಲಸ ಇವುಗಳ ಮೇಲೆ ವಿ[illegible]

## ವಾರ ಭವಿಷ್ಯ

೧೯೫೩-೮-೧೬ ರಿಂದ ೨೨-೮ ರವರೆಗೆ

**ಮೇಷ**—ಆರೋಗ್ಯ ಉತ್ತಮವಿರಲಾರದು ವ್ಯಾಪಾರ, ವ್ಯವಹಾರಗಳಲ್ಲಿ ಸಾಧಾರಣ ಪ್ರಗತಿ, ಕೌಟುಂಬಿಕ ಸೌಖ್ಯ ಸಾಧಾರಣ ತಾ|| ೧೬, ೧೭ ವೃಥಾ ಕಲಹ, ಪ್ರವಾಸ ಸಂಭವ

**ವೃಷಭ** — ಆರೋಗ್ಯ ಉತ್ತಮ, ಆರ್ಥಿಕ ಪರಿಸ್ಥಿತಿ ಸಾಧಾರಣ, ಅತ್ತರಿಗೆ ಆಲಸ್ಯ, ವ್ಯವಹಾರಗಳಲ್ಲಿ ತೊಂದರೆ ತಾ|| ೧೭, ೧೮ ಧನ ಹಾನಿ, ಚಿಂತೆ

**ಮಿಥುನ** — ಆರೋಗ್ಯ ಉತ್ತಮ, ಬಂಧುಗಳಿಂದ ಅಪಮಾನ ಸಂಭವ ವ್ಯಾಪಾರಾದಿಗಳಲ್ಲಿ ನಷ್ಟ, ನೌಕರರ ಮೇಲೆ ಅಪನಿಂದೆ ತಾ|| ೧೬, ೧೭ ಧನಾಗಮನ, ಚಿಂತಾ ನಾಶ

**ಕರ್ಕ** — ಆರೋಗ್ಯ ಸಮರ್ಪಕವಾಗಿರುವುದು, ವ್ಯವಹಾರಗಳಲ್ಲಿ ಜಯ, ನೌಕರಿಯಲ್ಲಿ ಉನ್ನತಿ ತಾ|| ೧೮, ೧೯ ಆಪ್ತರ ವಿಯೋಗದಿಂದ ಅ...

**ಸಿಂಹ** — ಆರೋಗ್ಯ ಸಾಧಾರಣ, ಶುಭ ಕಾರ್ಯಗಳು ಜರುಗುವುವು ವ್ಯಾಪಾರಾದಿಗಳಲ್ಲಿ ಲಾಭ ತಾ|| ೧೭, ೧೮ ಧನಾಗಮನ, ಚಿಂತಾ ನಾಶ

**ಕನ್ಯಾ** — ಆರೋಗ್ಯ ಉತ್ತಮ ವ್ಯವಹಾರಗಳಲ್ಲಿ ಪ್ರಗತಿ, ಹೊಸ ವ್ಯಾಪಾರೋದ್ಯಮಗಳಿಗೆ ಉತ್ತಮ, ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದು ತಾ|| ೨೦, ೨೧ ಮನರಂಜನೆ, ಅಪ್ತರ ಆತಿಥ್ಯ

**ತುಲಾ** — ಆರೋಗ್ಯ ಚೆನ್ನಾಗಿರಲಾರದು, ಶತ್ರುಗಳ ಕಾಟ ಹೆಚ್ಚುವುದು, ಕುಟುಂಬದ ದೇಖಾಲಸ್ಯ, ನೌಕರಿಯಲ್ಲಿ ಎಚ್ಚರಿಕೆ ತಾ|| ೧೯ ೨೦ ವೃಥಾ ಕಲಹ ಸಂಭವ

**ವೃಶ್ಚಿಕ** — ಆರೋಗ್ಯ ಉತ್ತಮ. ಬಂಧುಗಳಲ್ಲಿ ಕಲಹ, ನಿವಾಸದ ಬದಲಾವಣೆ, ನಿಷ್ಫಲ ಯೋಜನೆ ಶ್ರಮ ತಾ|| ೨೧, ೨೨ ಚಿಂತಾ ನಾಶ ಮನರಂಜನೆ

**ಧನು** — ಆರೋಗ್ಯ ಉತ್ತಮ, ಕೈಗೊಂಡ ಕಾರ್ಯ ಸಿದ್ಧಿ, ಸ್ಥಿರ ಆಸ್ತಿಗಳ ವ್ಯಾಪಾರ, ನೌಕರಿಯಲ್ಲಿ ತೃಪ್ತಿಕರ ವಾತಾವರಣ ತಾ|| ೧೯, ೨೦ ಆಪ್ತರ ಆಗಮನ, ಖರ್ಚು

**ಮಕರ**—ಆರೋಗ್ಯ ಉತ್ತಮವಿರಲಾರದು, ಹಣ ಕಾಸಿನ ಬಗ್ಗೆ ವ್ಯಾಜ್ಯ, ನೌಕರಿಯಲ್ಲಿ ತೊಂದರೆ, ವ್ಯವಹಾರಗಳಲ್ಲಿ ನಷ್ಟ ತಾ|| ೧೭, ೧೮ ಧನಾಗಮನ, ಆಪ್ತರ ಭೇಟಿ

**ಕುಂಭ** — ಆರೋಗ್ಯ ಉತ್ತಮ, ಕೈಗೊಂಡ ಕಾರ್ಯಗಳಲ್ಲಿ ಜಯ, ಶತ್ರುಗಳ ಪರಾಜಯ, ಶುಭ ಕಾರ್ಯಗಳು ಜರುಗುವುವು ತಾ|| ೧೮, ೧೯ ಆಪ್ತರ ಆಗಮನ, ಖರ್ಚು

**ಮೀನ** — ಆರೋಗ್ಯ ಚೆನ್ನಾಗಿರಲಾರದು, ವ್ಯವಹಾರಗಳಲ್ಲಿ ನಷ್ಟ, ಕೈಗೊಂಡ ಕಾರ್ಯ ವಿಘ್ನ, ಪ್ರವಾಸ ಬೇಡ ತಾ|| ೨೦ ೨೧ ಆಪ್ತರ ಭೇಟಿ, ಚಿಂತಾ ನಾಶ

## ಭೂದಾನ ಯಜ್ಞಕ್ಕೆ ರಾಜರಿಂದ ೨|| ಲಕ್ಷ ಬಿಗಾಗಳಷ್ಟು ಜಮೀನು

ಬಿಕನೇರ್ ಸಂಸ್ಥಾನದ ಅರಸರ ಸಹೋದರರಾದ ಮಹಾರಾಜಾ ಅಮರಸಿಂಗ್‌ರವರು ಛತ್ತರ್‌ಗಢ ತಹಸೀಲಿನಲ್ಲಿ ತಮಗೆ ಸೇರಿದ್ದ ೨,೮೮ ೫೦೦ ಬಿಗಾಗಳಷ್ಟು ಜಮೀನನ್ನು ಭೂದಾನ ಯಜ್ಞಕ್ಕಾಗಿ ಕೊಟ್ಟಿರುವರೆಂದು ತಿಳಿದು ಬಂದಿದೆ

## ನಿರುದ್ಯೋಗ ನಿವಾರಣೆಗೆ ಕೇಂದ್ರದ ತೀವ್ರ ಗಮನ

ದೇಶದಲ್ಲಿ ನಿರುದ್ಯೋಗವನ್ನು ನಿವಾರಿಸುವ ಸಲುವಾಗಿ ಕೇಂದ್ರ ಸರ್ಕಾರದವರು ಹಲವಾರು ಯೋಜನೆಗಳನ್ನು ಕುರಿತು ತೀವ್ರ ಪರ್ಯಾಲೋಚನೆ ನಡೆಸುತ್ತಿರುವರೆಂದೂ ನಿರುದ್ಯೋಗಿಗಳಿಗೆ ತುರ್ತು ಪರಿಹಾರ ಕಲ್ಪಿಸುವ ಮತ್ತು ಪಂಚವಾರ್ಷಿಕ ಕ್ರಮದಲ್ಲಿ ಸುಧಾರಣೆಗಳನ್ನು ತರುವ ವಿಷಯವು ಪರಿಶೀಲನೆಯಲ್ಲಿರುವುದೆಂದೂ ಹಣ ಕಾಸಿನ ಸಚಿವ ಶ್ರೀ ಸಿ. ಡಿ. ದೇಶಮುಖ್‌ರವರು ದೆಹಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯಲ್ಲಿ ತಿಳಿಸಿದುದಾಗಿ ವರದಿಯಾಗಿದೆ

## ಸ್ವಾತಂತ್ರ್ಯ ದಿನೋತ್ಸವದ ಧ್ವಜಾರೋಹಣ ಸಮಾರಂಭ

ಮೈಸೂರು ೧೫

ಸ್ವಾತಂತ್ರ್ಯೋತ್ಸವದ ಅಂಗವಾಗಿ ನೆನ್ನೆ ಇಲ್ಲಿನ ಬ್ಲೂಮ್‌ಫೀಲ್ಡ್ ಮೈದಾನದಲ್ಲಿ ನಗರದ ಪೌರರ ಪರವಾಗಿ ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದ ಮುನಿಸಿಪಲ್ ಅಧ್ಯಕ್ಷರಾದ ಶ್ರೀ ಬಿ. ವೆಂಕಟಸುಬ್ಬಯ್ಯನವರು ಬಾವುಟವನ್ನು ಹಾರಿಸಿದರು. ಶ್ರೀಮತಿ ಸುನಂದಮ್ಮ ಮತ್ತು ಇತರ ದೇಶಸೇವಿಕೆಯರಿಂದ ವಂದೇ ಮಾತರಂ ಮತ್ತು ಜಂಡಾ ಊಂಚಾ ರಹೇ ಹಮಾರಾ ಗೀತೆಗಳಾದ ನಂತರ, ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರು ಮೈಸೂರು ಸಶಸ್ತ್ರ ಪೋಲೀಸು ಪಡೆ, ಆರ್ಮ್ಡ್ ಪಡೆ ಪೋಲೀಸರು, ಸ್ಕೌಟುಗಳು ಭಾರತ ಸೇವಾದಳದವರು, ಗರ್ಲ್ ಗೈಡುಗಳ ಮುಂತಾದವರಿಂದ ಸೆಲ್ಯೂಟ್ ಸ್ವೀಕರಿಸಿದರು ಶ್ರೀ ಬಿ ವೆಂಕಟರಮಣಯ್ಯನವರು ಧ್ವಜದ ಸಂಕೇತವನ್ನು ಕುರಿತು ಸಣ್ಣ ಭಾಷಣ ಮಾಡಿ ರಾಷ್ಟ್ರಧ್ವಜದ ಅಡಿಯಲ್ಲಿ ಸ್ವಾತಂತ್ರ್ಯ ಸಂಪಾದನೆ ಮಾಡಿದ ಭಾರತೀಯರು ಧ್ವಜದ ರಕ್ಷಣೆಯನ್ನು ಸದಾ ಮಾಡಬೇಕೆಂದು ತಿಳಿಸಿದರು

### ಕಾಶ್ಮೀರದ ಕರಣಸಿಂಗರಿಗೆ ಮೈಸೂರಿನವರ ತಂತಿ

ರಾಜಧಾನಿಯ ಪ್ರಜಾ ಮಂಡಲದ ಸಂಚಾಲಕರಾದ ಶ್ರೀ ಪಿ ಎಸ್ ಶರ್ಮರವರು ಕಳೆದ ಗುರುವಾರ ತಾ|| ಕಾಶ್ಮೀರದ ಸಾದರ್ ಇ ರಿಯಾಸತ್ ಕರಣಸಿಂಗರಿಗೆ ತಂತಿಯನ್ನು ಕಳುಹಿಸಿ, ಅವರು ಇತ್ತೀಚೆಗೆ ಕೈಗೊಂಡ ಧೀರೋದಾತ್ತ ಕಾರ್ಯಕ್ರಮಕ್ಕಾಗಿ ಅಭಿನಂದಿಸಿರುತ್ತಾರೆ ಅದರ ಪ್ರತಿಯನ್ನು ಪ್ರಧಾನಿ ನೆಹರೂ ಪಾಕಿಸ್ತಾನ ಗೌರ್ನರ್ ಜನರಲ್ ಮೈಸೂರಿನ ಮಹಾರಾಜರ ಮತ್ತು ಪಂಡಿತ ಪ್ರೇಮನಾಥ ಡೋಗ್ರಾರವರುಗಳಿಗೆ ಕಳುಹಿಸಲಾಗಿದೆ

**ಹೋಟೇಲು ಕೆಲಸಗಾರರಲ್ಲಿ ಭಿನ್ನತೆ**

ಮೈಸೂರು ನಗರದ ಹೋಟೇಲು ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಸ್ ಆರ್ ಶಾಸ್ತ್ರಿಯವರು ಪತ್ರವೊಂದನ್ನು ಬರೆದು, ಹೊಸ ಕೆಲಸಗಾರರ ಸಂಘದ ಸಂಚಾಲಕ ಶ್ರೀ ಡಿ ವಿ ದತ್ತಾತ್ರಯರವರು ಪತ್ರಿಕೆಗಳಲ್ಲಿ ಪ್ರಚುರ ಪಡಿಸಿರುವ ಸುದ್ದಿಯಲ್ಲಿ ಪೋಲೀಸರ ಸಹಾಯವನ್ನು ತಮ್ಮ ಸಂಘದ ಅಧ್ಯಕ್ಷರೂ, ಕಾವೂ ಪಡೆದು ಸಭೆ ನಡೆಸಿದುದಾಗಿ ತಿಳಿಸಿರುವುದು ಸುಳ್ಳು ಎಂದು ಹೇಳಿರುತ್ತಾರೆ ಕಳೆದ ೧೧ನೇ ತಾ|| ನಡೆದ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಹಲವು ಅಲ್ಪ ಸಂಖ್ಯಾತ ವಿರೋಧಿಗಳು ಸಭಾಭಂಗ ಮಾಡಿದರಷ್ಟೇ ಹೊರತು, ಪೋಲೀಸರು ಪ್ರವೇಶಿಸುವಂತಹ ಘಟನೆಗಳಾವುವೂ ಸಭೆಯಲ್ಲಿ ನಡೆಯಲಿಲ್ಲವೆಂದು ಶ್ರೀ ಶಾಸ್ತ್ರಿಯವರು ಸ್ಪಷ್ಟಪಡಿಸಿರುತ್ತಾರೆ ತಮ್ಮ ಸಂಘದ ಒಕ್ಕೂಟಯ ಕೀರ್ತಿಗೆ ಧಕ್ಕೆ ತರುವ ರೀತಿಯಲ್ಲಿ ಚಳುವಳಿ ಮತ್ತು ಅಪಪ್ರಚಾರ ಮಾಡುತ್ತಿರುವುದಕ್ಕಾಗಿ ಅವರು ವಿಷಾದವನ್ನು ಸೂಚಿಸಿರುವರು

**ರಾಘವೇಂದ್ರ ಸ್ವಾಮಿಗಳವರ ಆರಾಧನೆ**

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀಮದ್ರಾಘವೇಂದ್ರ ತೀರ್ಥ ಗುರುಗಳ ಬೃಂದಾವನದಲ್ಲಿ ಶ್ರೀ ಗುರುಗಳವರ ಆರಾಧನಾ ಮಹೋತ್ಸವವು ಇದೇ ೨೫,೨೬ ಮತ್ತು ೨೭ನೇ ತಾ|| ನಡೆಯುವುದು ಅಲ್ಲಿ ನಡೆಯುವ ಮಹಾ ಕಾರ್ಯದಲ್ಲಿ ಸ್ವಯಂಸೇವಕರುಗಳ ಭಕ್ತರು ಭಾಗವಹಿಸಿ ಗುರುಸಾರ್ವ ಸೇವೆಯನ್ನು ಕೈಗೊಳ್ಳುವಂತೆ ಕೋರಲಾಗಿದೆ ಈ ಉತ್ಸವಗಳಿಗಾಗಿ ಭಕ್ತ ಮಹಾಶಯರು ಸೂಕ್ತ ಸಹಾಯ ಮಾಡುವಂತೆ ಪ್ರಾರ್ಥಿಸಲಾಗಿದೆ.

## ಇಟಲಿಯಿಂದ ಸಿಸಿಲಿ ದ್ವೀಪಕ್ಕೆ ತೂಗು ಸೇತುವೆ

ಇಟಲಿಯ ದಕ್ಷಿಣ ಭಾಗದ ತುದಿಯಿಂದ ಸಿಸಿಲಿ ದ್ವೀಪಕ್ಕೆ ಸಮುದ್ರದ ಮೇಲೆ ೪,೫೦೦ ಅಡಿಯ ತೂಗು ಸೇತುವೆಯ ನಿರ್ಮಾಣದ ವಿಷಯವನ್ನು ಕುರಿತು ಚರ್ಚಿಸಲು ಅಮೆರಿಕದ ಒಬ್ಬ ಇಂಜನಿಯರು ನೇಪಲ್ಸ್ ನಗರಕ್ಕೆ ಆಗಮಿಸಿರುತ್ತಾರೆ ಈ ಸೇತುವೆಗೆ ೨ ಕೋಟಿ ಪೌಂಡು ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ

## ಸ್ವಾತಂತ್ರ್ಯದ ಪ್ರತಿಫಲ ಸಿಕ್ಕುವವರಗೆ ತಾಳ್ಮೆ ಇರಬೇಕು

### ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಭಾಷಣ

ಮೈಸೂರು ೧೬

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಟೌನ್‌ಹಾಲಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿ ಸ್ವತಂತ್ರ ಭಾರತದಲ್ಲಿ ಜನರ ತಮ್ಮ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕೆಂದು ತಿಳಿಸಿದರು ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಪ್ರಭುವಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣಗಳು ಪ್ರಜೆಗಳಲ್ಲಿ ಮೂಡಬೇಕೆಂದೂ, ಆಗ ಪ್ರಜಾಪ್ರಭುತ್ವವು ಯಶಸ್ವಿಯಾಗುವುದೆಂದೂ ತಿಳಿಸಿದರು ಹಲವು ಮಹಿಳೆಯರಿಗೆ ಸ್ವಾಭಾವಿಕವಾದಂತಹ ಚಾಡಿ ಹೇಳುವುದ, ಸದಾ ದೂರುತ್ತಿರುವುದು ಮುಂತಾದ ಕೆಲವು ಚಾಳಿಗಳನ್ನು ಅವರುಗಳೇ ತ್ಯಜಿಸುತ್ತಿರುವಾಗ, ಅವುಗಳು ಗಂಡಸರಿಗೆ ಭೂಷಣವಾಗಲಾರವೆಂದು ತಿಳಿಸಿದರು

ಸ್ವಾತಂತ್ರ್ಯವು ಬಂದನಂತರ ಉಂಟಾದ ಪರಿಸ್ಥಿತಿಯನ್ನು ಅವರು ಸ್ಥೂಲವಾಗಿ ವಿಮರ್ಶಿಸಿ ಪ್ರಪಂಚದ ಸುಮಾರು ಕಾಲು ಭಾಗಕ್ಕೂ ಹೆಚ್ಚಿನ ಏಷ್ಯಾ ರಾಜ್ಯಗಳಲ್ಲಿ ಹೊಸ ಚೈತನ್ಯ ವುಂಟಾಗಿರುವುದೆಂದು ಅವರು ಹೇಳಿ, ಇಂಡೋನೇಷ್ಯ ಬರ್ಮ, ಸಯಾಂ, ಮುಂತಾದ ಕಡೆ ಹಲವು ಪ್ರಮಾದ ಘಟನೆಗಳಾದುವೆಂದೂ, ಭಾರತವು ಮಾತ್ರ ಸುಭದ್ರವಾದ ತಳಹದಿಯ ಮೇಲೆ ರಾಜ್ಯಭಾರ ನಡೆಸುತ್ತಿರುವುದೆಂದೂ ತಿಳಿಸಿದರು ವಿಶ್ವದ ಎರಡು ಭಾರಿ ದೇಶಗಳಾದ ಚೀನಾ ಮತ್ತು ಭಾರತಗಳಲ್ಲಿ ಚೀಣವು ಕಮ್ಯೂನಿಸ್ಟ್ ತತ್ವದ ಪ್ರಕಾರ ಸರ್ವಾಧಿಕಾರ ರಾಜ್ಯವಾಗಿರುವುದೆಂದೂ ಭಾರತವಾದರೋ ಪ್ರಪಂಚದ ಅತ್ಯಂತ ಭಾರಿ ಪ್ರಜಾಪ್ರಭುತ್ವವಾಗಿರುವುದೆಂದೂ ಅವರು ತಿಳಿಸಿದರು ಪಾಕಿಸ್ತಾನದಲ್ಲಿ ಇನ್ನೂ ರಾಜ್ಯಾಂಗವೇ ಸಿದ್ಧವಾಗಿಲ್ಲವೆಂದೂ, ಭಾರತವು ಈ ಆರು ವರ್ಷಗಳಲ್ಲಿ ಅನೇಕ ಮಹತ್ಕಾರ್ಯ ಸಾಧನೆಗಳನ್ನು ಮಾಡಿರುವುದೆಂದೂ ಹೇಳಿದರು.

ಜನರ ಆಶೋತ್ತರಗಳು ನೆರವೇರಲಿಲ್ಲವೆಂದು ಹಲವರು ದೂರುತ್ತಿರುವುದನ್ನು ಅವರು ವಿಮರ್ಶಿಸಿ, ಅದು ಆತುರದ ಮನೋಭಾವವನ್ನು ವ್ಯಕ್ತಪಡಿಸುವುದೆಂದೂ, ಸಾಮಾನ್ಯವಾಗಿ ಕಾಲ ನಿಯಮದ ಪ್ರಕಾರ ಸಸ್ಯ, ವೃಕ್ಷಾದಿಗಳು ಕ್ಲುಪ್ತ ಕಾಲಾನಂತರ ಫಲ ಕೊಡುವಂತೆಯೇ, ೩೬ ಕೋಟಿ ಜನರಿರುವ ದೇಶದ ಆರ್ಥಿಕೋನ್ನತಿಗಾಗಿ ೨ ಸಾವಿರ ಕೋಟಿ ರೂ ವೆಚ್ಚದಲ್ಲಿ ಕೈಗೊಂಡಿರುವ ಮಹಾಯೋಜನೆಯು ಫಲ ಕೊಡುವುದಕ್ಕೆ ಸ್ವಲ್ಪ ಕಾಲವು ಬೇಕೆಂದೂ, ಅದುವರೆಗೆ ತಾಳ್ಮೆಯನ್ನು ವಹಿಸುವುದು ಧೀರ ಜನರ ಲಕ್ಷಣವೆಂದೂ ತಿಳಿಸಿದರು

ಮೊದಲು ಶ್ರೀ ಹೆಚ್ ಎಸ್ ನಂಜುಂಡಯ್ಯನವರಿಂದ ಪ್ರಾರ್ಥನೆ ಮತ್ತು ರಾಮಾಯಣದ ವಾಚನ, ಶ್ರೀಮತಿ ಸೀತಮ್ಮನವರಿಂದ ಗೀತೆಗಳು ಮತ್ತು ಕುಮಾರಿ ಶಕುಂತಲಾರವರಿಂದ ನೃತ್ಯಗಳಾದನಂತರ ಪೌರ ಸಭಾಧ್ಯಕ್ಷ ಶ್ರೀ ಬಿ ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿ, ನಾಡಿನಲ್ಲಿ ಬೇಗನೆ ಸರ್ವೋದಯ ಸಮಾಜವು ಸೃಷ್ಟಿಯಾಗಿ ದೇಶವು ಶಾಂತಿ ಸುಖದಿಂದ ಬಾಳಲು ಅವಕಾಶವಾಗಲೆಂದು ಹಾರೈಸಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

## ಮೈನರ್ ಹುಡುಗಿಯರ ಮಾರಾಟಕ್ಕಾಗಿ ೧೨ಮಂದಿಗೆ ಶಿಕ್ಷೆ

ವಯಸ್ಸು ಬಂದಿಲ್ಲದ ಹುಡುಗಿಯರನ್ನು ಅಪಹರಿಸಿ ಅವರನ್ನು ವೈಶ್ಯ ಜಾತಿಯ ಯುವತಿಯರೆಂದು ಹೇಳಿ ವಿವಾಹವಾಗಲಿಚ್ಛಿಸುವವರಿಗೆ ಮಾರುತ್ತಿದ್ದ ಆಪಾದನೆ ಮೇಲೆ ಹನ್ನೆರಡು ಸ್ತ್ರೀಯರೂ ಸೇರಿ, ಒಟ್ಟು ೧೨ ಮಂದಿಗೆ ೩ ತಿಂಗಳಿಂದ ೮ ವರ್ಷಗಳ ಕಠಿಣ ಸಜಾವನ್ನು ಗುಂಟೂರು ನ್ಯಾಯಾಧೀಶರು ವಿಧಿಸಿರುತ್ತಾರೆ ಹಲವು ಮುಸ್ಲಿಮರ ಹುಡುಗಿಯರನ್ನು ಹಿಂದುಗಳೆಂದು ತಿಳಿಸಿ ಮಾರಲಾಗಿದೆ. ಆಪಾದಿತರ ಕಾರ್ಯ ಚಟುವಟಿಕೆಗಳು ತಂಜಾವೂರಿನಿಂದ ಹೈದರಾಬಾದುವರೆಗೂ ಇದ್ದುದಾಗಿ ಹೇಳಲಾಗಿದೆ.

## ಕ್ರಮೇಣ ರಾಜಕೀಯ ವಿರಾಮ ವೇತನಗಳ ರದ್ದು

ಎಲ್ಲಾ ರಾಜಕೀಯ ವಿರಾಮ ವೇತನಗಳನ್ನೂ ಕ್ರಮೇಣ ನಿಲ್ಲಿಸಲಾಗುವುದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಕಳೆದ ಸಾಲಿನಲ್ಲಿ ಈ ವೇತನಗಳಿಗಾಗಿ ಒಟ್ಟು ೩೮-೬೦ ಲಕ್ಷ ರೂ ಗಳನ್ನು ಒದಗಿಸಲಾಗಿದ್ದಿತು.

### ಜೈಮಿನಿ ಭಾರತ ವಾಚನದ ಮಹಾ ಮಂಗಳಾರತಿ

ಸಂತೇಪೇಟೆಯಲ್ಲಿರುವ ಕುಂಚಿಟಿಗರ ಶ್ರೀ ರಾಮ ಮಂದಿರದಲ್ಲಿ ಮೈಸೂರಿನ ಗಮಕಿ ಸಹೋದರರಾದ ಶ್ರೀ ಜಿ ಎಸ್ ಎಸ್. ಶಾಸ್ತ್ರಿ ಮತ್ತು ಶ್ರೀ ಕೆ ವೆಂಕಟಸುಬ್ಬಯ್ಯನವರಿಂದ ನಡೆಯುತ್ತಿದ್ದ ಕನ್ನಡ ಜೈಮಿನಿ ಭಾರತ ವಾಚನವು ಮುಕ್ತಾಯಗೊಂಡು ಈ ಸಂಜೆ ೬|| ಗಂಟೆಗೆ ಮಹಾಮಂಗಳಾರತಿಯು ನೆರವೇರಿಸಲ್ಪಡುವುದು

**ಆಕಾಶವಾಣಿ ನಾಳೆ ಕಾರ್ಯಕ್ರಮ**

ಬೆಳಿಗ್ಗೆ ೭ ೫ ಎಸ್ ಪಿ ಕೇಶವಮೂರ್ತಿ ಸಂಗೀತ ೭-೩೦ ದ ... ನಾಗಸ್ವರ ... ೧ ೩೦ ... ಸಂಗೀತ ೧.೫೦ ... ಪ್ರಕಟನೆಗಳು. ... ಗಾಯನ ... ನಾಗಸ್ವರ ... ಗಾನವಿಹಾರ ... ಸಂಗೀತ. ... ವಿಚಾರ ... ಸಾಗರ ... ಮತ್ತು ... ಸಂಗೀತ ... ಇಂಗ್ಲಿಷ್ ಭಾಷಣ


### ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹ... ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ... ಸಾಮಾ ಗರಿಗರಿ

**ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ**

ದೊರೆಯುವ ಪವಿತ್ರದ ಸ್ಥಳವೊಂದೇ

**ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,**

( ... )

ಡಿ ಸುಬ್ಬಯ್ಯ ರಸ್ತೆ, ಮೈಸೂರು.

## ರಾಜಕಮಲ್ ಟಾಕೀಸ್

ಮೈಸೂರು

**15-8-53ರಿಂದ :: 4ನೇ ವಾರ**

ಶಕ್ತಿರಾಜಾ ರವರ ತಮಿಳು ಚಿತ್ರ ★ ಪ್ರೊನ್ನಿ ★


Edited, Printed and Published by A R Nagarajan at Sadhvi Press, D. Subbiah Road, Mysore


## ಪ್ರಭುದೇವಾ ಥಿಯೇಟರ್

### ಪದ್ಮಾ ಟಾಕೀಸ್

**15-8-53 ನೇ :: ಶನಿವಾರದಿಂದ**

# ★ ಆ ವೈಯಾರ್ ★

ಪಿ. ಬಿ. ಸುಂದರಾಂಬಾಳ್ ಪಾತ್ರ ವಹಿಸಿರುವ ಜೆಮಿನಿಯವರ ತಮಿಳು ಚಿತ್ರ,

ಟೆಲಿಫೋನ್ ನಂ 792

॥ ವಂದೇ ಮಾತರಂ ॥

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE MONDAY 17-8-1953 . ಮೈಸೂರು ಸೋಮವಾರ ೧೭-೮ ೧೯೫೩ [ ಸಂಚಿಕೆ ೧೭

# ಪರ್ಷಿಯಾ ಪ್ರಧಾನಿ ವಿರುದ್ಧ ದಂಗೆ, ಷಹಾರವರ ಪರಾರಿ

## ಕೃಷ್ಣರಾಜೇಂದ್ರ ಗಿರಣಿ ನೌಕರರ ಕಾಲೊನಿ ಆರಂಭ

ಮೈಸೂರು ೧೭

ಶ್ರೀ ಕೃಷ್ಣರಾಜೇಂದ್ರ ಗಿರಣಿ ಸಿಬ್ಬಂದಿಯವರ ಹೊಸ ಕಾಲೊನಿಯ ಆರಂಭೋತ್ಸವವು ನರಸಿಂಹರಾಜಮೊಹಲ್ಲದ ಕರ ಣಾಪುರದಲ್ಲಿ ನೆನ್ನೆ ಸಂಜೆ ನೆರವೇರಿತು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು

ಕಾಲೊನಿಯ ಹುಡುಗಿಯರ ಸಂತಪ್ರೊಂದರಿಂದ ಪ್ರಾರ್ಥನೆಯಾದನಂತರ ಸಿಬ್ಬಂದಿಯ ಪರವಾಗಿ ಕ್ಯಾಷಿಯರ್ ಶ್ರೀ ಎಂ ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡಿದರು ಶ್ರೀಮನ್ಮಹಾರಾಜರ ಹುಜೂರು ಸೆಕ್ರೆಟರಿ ಮತ್ತು ಗಿರಣಿಯ ಅಧ್ಯಕ್ಷರಾದ ಶ್ರೀ ಹೆಚ್ ಎಂ ಸಂಪೀ—ರರು ಆರಂಭೋತ್ಸವವನ್ನು ನೆರವೇರಿಸಿದರು ಅಧ್ಯಕ್ಷರು ಮಾತನಾಡಿ ಸಿಬ್ಬಂದಿಯ ಪರಿಗಾಗಿ ಹೊಸ ಕಾಲೋನಿಯನ್ನು ಏರ್ಪಟ್ಟ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ, ಇನ್ನೂ ಹಲವು ಗೃಹಗಳನ್ನು ಕಟ್ಟಿಸಿಕೊಳ್ಳಲು ಸಾಧ್ಯವಾದ ಸಹಾಯವನ್ನು ಮಾಡುವವರಾಗಿ ಭರವಸೆಯಿತ್ತರು ಕಾಲೊನಿಯನ್ನು ನಿರ್ಮಿಸಲು ತುಂಬಾ ಶ್ರದ್ಧೆ ವಹಿಸಿದ್ದ ಶ್ರೀ ಎಂ ಎಸ್ ರಾಮಚಂದ್ರರಾಯರ ಹೆಸರನ್ನು ಕಾಲೊನಿಗೆ ಇಡುವುದಕ್ಕೆ ಪೌರಸಭೆಯವರು ಅಂಗೀಕಾರವೀಯಬಹುದೆಂದು ಅವರು ತಿಳಿಸಿದರು ಪುಷ್ಪಗಳ ವಿನಿಯೋಗ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

### ಅಖಂಡ ಭಾರತ ದಿನಾಚರಣೆ

ರಾಜಧಾನಿಯ ಸುಬ್ಬರಾಯನ ಕೆರೆಯಲ್ಲಿ ನೆನ್ನೆ ಇಲ್ಲಿನ ಭಾರತೀಯ ಜನಸಂಘದ ಆಶ್ರಯದಲ್ಲಿ ಅಖಂಡ ಭಾರತ ದಿನಾಚರಣೆಯನ್ನು ನೆರವೇರಿಸಲಾಯಿತು ಶ್ರೀ ಚಂದ್ರಶೇಖರರವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಸಿ ಎಚ್ ರಾಜು ಮತ್ತು ಹ ಲ ಶ್ರೀಕಂಠಮೂರ್ತಿಯವರು ಭಾಷಣ ಮಾಡಿ ಆ ದಿನದ ಮಹತ್ವವನ್ನು ವಿವರಿಸಿದನಂತರ, ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ ನಿಧನದ ಸಂಬಂಧವಾಗಿ ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರುಳ್ಳ ನಿಷ್ಪಕ್ಷಪಾತವಾದ ತನಿಖಾ ಸಮಿತಿಯನ್ನು ಭಾರತ ಸರ್ಕಾರದವರು ನೇಮಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು ನಿರ್ಣಯವನ್ನು ಪ್ರಧಾನಿಯವರಿಗೆ ಕಳುಹಿಸಲಾಗಿದೆ

### ಸಂತೋಷ್ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರಿಗೆ ಪ್ರಾತಿನಿಧ್ಯ ಬೇಕು

ಕಲ್ಕತ್ತದಲ್ಲಿ ನಡೆಯಲಿರುವ ಸಂತೋಷ್ ಸ್ಮಾರಕ ರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಿಗೆ ಮೈಸೂರು ಸಂಸ್ಥಾನದ ಪರವಾಗಿ ಹೋಗಲಿರುವ ಟೀಮಿನಲ್ಲಿ ಬೆಂಗಳೂರಿನವರು ಮಾತ್ರವಿರುವರೆಂದೂ, ಮೈಸೂರು ನಗರದಲ್ಲಿ ಉತ್ತಮ ಆಟಗಾರರಿದ್ದರೂ ಅವರುಗಳನ್ನು ಉಪೇಕ್ಷಿಸಲಾಗಿರುವುದೆಂದೂ, ಇಲ್ಲಿನ ಫುಟ್‌ಬಾಲ್ ಸಂಘದವರು ಈ ಅನ್ಯಾಯವನ್ನು ಸುಮ್ಮನೆ ನೋಡುತ್ತಾ ಕುಳಿತಿರದೆ ಮುಂದಾದರೂ ಇಂತಹ ಸನ್ನಿವೇಶಗಳೊದಗದಂತೆ ನೋಡಿಕೊಳ್ಳಬೇಕೆಂದೂ ತಿಳಿಸಿ, ಹಲವು ಫುಟ್‌ಬಾಲ್ ಕ್ರೀಡಾಭಿಮಾನಿಗಳು ಪತ್ರ ಬರೆದಿರುತ್ತಾರೆ

## ದೆಹಲಿಗೆ ಪಾಕಿಸ್ತಾನದ ಪ್ರಧಾನಿಯ ಆಗಮನ

ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮ್ಮದ್ ಅಲಿಯವರು ಬೇಗಂ ಅಲಿ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫರ್ ಉಲ್ಲಾ ಮತ್ತು ಇತರ ಅಧಿಕಾರಿಗಳೊಡನೆ ವಿಮಾನದಲ್ಲಿ ನೆನ್ನೆ ಸಂಜೆ ದೆಹಲಿಗೆ ಆಗಮಿಸಿದರು ಅವರನ್ನು ಪ್ರಧಾನಿ ನೆಹರೂರವರು ಎದುರುಗೊಂಡರು ಅವರಿಗೆ ಸ್ವಾಗತ ಬಯಸಲು ವಿಶೇಷ ಏರ್ಪಾಡು ಮಾಡಲಾಗಿದ್ದಿತು ಪಾಕಿಸ್ತಾನದ ಪ್ರಧಾನಿಯವರೂ, ಬೇಗಂ ಅಲಿ ಮತ್ತು ಜಫರ್ ಉಲ್ಲಾರವರೂ ರಾಷ್ಟ್ರಾಧ್ಯಕ್ಷರ ಅತಿಥಿಗಳಾಗಿರುವರು ಅವರು ೪ ದಿನಗಳ ಕಾಲ ದೆಹಲಿಯಲ್ಲಿರುವರು ಕಾಶ್ಮೀರದ ವ್ಯಾಜ್ಯದ ಪರಿಹಾರವಾಗ ಪ್ರಯತ್ನ ಅವರು ಪೂರ್ಣ ... ವ್ಯಕ್ತಪಡಿಸಿದರು ಅವರಿಗೂ ಪ್ರಧಾನಿ ನೆಹರೂರವರಿಗೂ ಇಂದ ಮಾತುಕತೆಗಳು ನಡೆಯುವುವು

### ಜಾಲಹಳ್ಳಿ ವಿಮಾನಾಧಿಕಾರಿಗೆ ಮಹಾವೀರ ಚಕ್ರ

ಬರ್ಮದಲ್ಲಿ ಸಾಹಸ ಕಾರ್ಯವನ್ನು ನಡೆಸಿದ ಸಂಬಂಧವಾಗಿ ರಾಷ್ಟ್ರಾಧ್ಯಕ್ಷರು ಬೆಂಗಳೂರು ಬಳಿ ಜಾಲಹಳ್ಳಿಯಲ್ಲಿರುವ ವಿಮಾನ ಕೇಂದ್ರದ ಅಧಿಕಾರಿ ಎಂ ಎಂ ರಾಜಸಿಂಹರಿಗೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಹಾವೀರ ಚಕ್ರ ಪದಕವನ್ನು ಕೊಟ್ಟಿರುತ್ತಾರೆ ರಾಷ್ಟ್ರಾಧ್ಯಕ್ಷರು ಈ ಬಾರಿ ಏಳು ಮಹಾವೀರ ಚಕ್ರ ೧೩ ಅಶೋಕ ಚಕ್ರಗಳನ್ನು ಕೊಟ್ಟಿರುತ್ತಾರೆ

### ಮೈಸೂರಿಗೆ ಕೇಂದ್ರ ರಕ್ಷಣಾ ಮಂತ್ರಿ

ಭಾರತದ ರಕ್ಷಣಾ ಸಚಿವ ಮಹಾವೀರ ತ್ಯಾಗಿಯವರು ನಾಳೆ ರಾಜಧಾನಿಗೆ ಆಗಮಿಸುವರು ಅವರೊಡನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರೂ ಇರುವರು ಕೇಂದ್ರ ಮಂತ್ರಿಯವರು ಹಲಕೆಲವು ನಿವೇಶನ ಮತ್ತು ಕಟ್ಟಡಗಳ ಪರಿಶೀಲನೆ ನಡೆಸುವರೆಂದು ಹೇಳಲಾಗಿದೆ

### ಸ್ವಾತಂತ್ರ್ಯ ದಿನಾಚರಣೆ

ಚಾಮರಾಜನಗರ ೧೭

ಇಲ್ಲಿನ ಪೌರಸಭೆಯ ಮತ್ತು ತಾಲ್ಲೂಕ ಕಾಂಗ್ರೆಸ್ಸಿನವರೂ ಕೃಷ್ಣಾ ಟಾಕೀಸ್ ಮುಂಭಾಗದಲ್ಲಿರುವ ಮೈದಾನದಲ್ಲಿ ನೆನ್ನೆ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಿದರು ಪೌರಸಭಾಧ್ಯಕ್ಷರು ರಾಷ್ಟ್ರ ಧ್ವಜಾರೋಹಣ ಮಾಡಿದರು ತಾಲ್ಲೂಕು ಅಮಲ್ದಾರರು ಮತ್ತು ಇತರರ ಭಾಷಣಗಳೂ, ಸಿಹಿ ತಿಂಡಿ ವಿನಿಯೋಗವೂ ಆದುವು

ತಾಲ್ಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಎಂ ಪುಟ್ಟನಂಜಪ್ಪನವರು ಅಧ್ಯಕ್ಷತೆ ವಹಿಸಿ ಧ್ವಜಾರೋಹಣ ಮಾಡಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ಕುರಿತು ಭಾಷಣ ಮಾಡಿದರು ಎಂ ಪಿ ಸಿ ಸಿ ಸದಸ್ಯರೂ ಮತ್ತು ತಾಲ್ಲೂಕು ಕಾಂಗ್ರೆಸ್ಸಿನ ಕಾರ್ಯದರ್ಶಿಯೂ ಆದ ಶ್ರೀ ಕೆ ಎಸ್ ಕುಮಾರಸ್ವಾಮಿಯವರು ಪಂಚವಾರ್ಷಿಕ ಯೋಜನೆ ಮತ್ತು ಭೂದಾನ ಯಜ್ಞದ ವಿಷಯವಾಗಿ ಉಪನ್ಯಾಸ ಮಾಡಿದರು ಶ್ರೀ ಬಿ ಎಲ್ ನಂಜುಂಡಶೆಟ್ಟರು ಎಲ್ಲರಿಗೂ ಸಿಹಿ ತಿಂಡಿಯನ್ನು ಹಂಚಿದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

## ಇರಾಕಿಗೆ ಪರ್ಷಿಯದ ಷಹಾರವರ ಪರಾರಿ

### ಇರಾನಿನಲ್ಲಿ ಮಿಲಿಟರಿ ದಂಗೆ ಮುರಿಯಲು ಮುಸದ್ದಿಕ್ಕರ ಕ್ರಮ

ಪರ್ಷಿಯದ ಷಹಾರವರ ರಕ್ಷಕ ದಳದವರು ನೆನ್ನೆ ರಾತ್ರಿ ದಂಗೆ ನಡೆಸಿ ಅಧಿಕಾರವನ್ನು ವಹಿಸಿಕೊಳ್ಳಲೆತ್ನಿಸಿದಾಗ ಪ್ರಧಾನಿ ಡಾ॥ ಮುಸದ್ದಿಕ್‌ರವರು ತೀವ್ರ ಕ್ರಮವನ್ನು ಕೈಗೊಂಡು ಅದನ್ನು ದಮನ ಮಾಡಿದರು ವಿಫಲಾರ್ಥವಾಗಿ ಪತ್ನಿ ಸಮೇತ ಕ್ಯಾಸ್ಪಿಯನ್ ಸಮುದ್ರ ತೀರಕ್ಕೆ ಹೋಗಿದ್ದ ಷಹಾರವರು ದಂಗೆಯು ಅಡಗಿಸಲ್ಪಟ್ಟಿತೆಂದು ಕೇಳಿದನಂತರ ವಿಮಾನದಲ್ಲಿ ಇರಾಕಿನ ರಾಜಧಾನಿ ಬಾಗ್‌ದಾದಿಗೆ ತೆರಳಿದರು ಅವರ ... ಸಿಂಹಾಸನ ತ್ಯಾಗ ಮಾಡಿ... ವ ಹೇಳಲಾಗಿದೆ

ನೆನ್ನೆ ರಾತ್ರಿ ೧ ಗಂಟೆಗೆ ಈ ದಂಗೆಯು ಆರಂಭವಾಯಿತೆಂದೂ ಅದನ್ನು ರಕ್ತಪಾತವಿಲ್ಲದೆ ಅಡಗಿಸಲಾಯಿತೆಂದೂ ಟೆಹರಾನ್ ರೇಡಿಯೋ ತಿಳಿಸಿರುತ್ತದೆ ಮುಸದ್ದಿಕ್‌ರವರನ್ನು ಅಪಹರಿಸಿಕೊಂಡುಹೋಗಲು ಕರ್ನಲ್ ನಸೀರಿರವರ ನೇತೃತ್ವದಲ್ಲಿ ಅರಮನೆಯ ಸೈನ್ಯದಳದವರು ಲಾರಿಗಳಲ್ಲಿ ಬಂದು ನಡೆಸಿದ ಪ್ರಯತ್ನವನ್ನು ಮುಸದ್ದಿಕ್ಕರ ಕಾವಲುಗಾರರು ತಪ್ಪಿಸಿದರೆಂದೂ, ಸಿಪಾಯಿಗಳು ಮುಸದ್ದಿಕ್ಕರ ಬಂಗ್ಲೆಯಂತಿರುವ ಹುಸೇನ್ ಫಾತಿಮ ಮತ್ತು ಇನ್ನಿಬ್ಬರ ಸರ್ಕಾರಿ ಅಧಿಕಾರಿಗಳನ್ನು ೩॥ ಗಂಟೆಗಳ ಕಾಲ ಬಂಧಿಸಿದ್ದರೆಂದೂ ಹೇಳಲಾಗಿದೆ

ದಂಗೆಕೋರರು ಮಿಲಿಟರಿ ಉಪ ಮುಖ್ಯಾಧಿಕಾರಿ ಜನರಲ್ ಕಿಯಾನಿಯವರನ್ನು ಅಪಹರಿಸಿದ್ದರು ಆದರೆ ದಂಗೆಯು ಮುರಿದನಂತರ ಅವರು ತಪ್ಪಿಸಿಕೊಂಡು ಬಂದು ಇತರ ಮಂತ್ರಿಗಳನ್ನು ಸೆರೆಯಿಂದ ಬಿಡಿಸಲು ಶಕ್ತರಾದರು ಮುಸದ್ದಿಕ್ಕರ ಭವನದ ಸುತ್ತಲೂ ಟ್ಯಾಂಕುಗಳು ಕಾವಲು ನಿಂತಿವೆ ಮತ್ತೊಬ್ಬ ಮಂತ್ರಿಯ ಮನೆ ಮುಂದೆಯೂ ಬಲವಾದ ಟ್ಯಾಂಕು ಪಡೆಗಳ ಕಾವಲಿದೆ

ದಂಗೆಕೋರರ ಮುಖಂಡ ಕರ್ನಲ್ ನಸೀರಿಯವರನ್ನು ದಸ್ತಗಿರಿ ಮಾಡಿ ಜೈಲಿನಲ್ಲಿಡಲಾಗಿದೆ ಅರಮನೆ ಹಿರಿಯ ಅಧಿಕಾರಿ ಅಬ್ದುಲ್ ಹುಸೇನ್ ಅಮೀನಿ ಮತ್ತು ಇನ್ನೂ ಅನೇಕರನ್ನು ಬಂಧಿಸಲಾಗಿದೆ ಷಹಾರವರ ಅರಮನೆಯಲ್ಲಿದ್ದ ಕಾವಲುಗಾರರನ್ನು ತೆಗೆದು ಅಲ್ಲಿ ಸರ್ಕಾರಿ ಸೈನ್ಯಗಳನ್ನು ಕಾವಲು ಹಾಕಲಾಗುತ್ತಿದೆ ಮತ್ತು ಅರಮನೆ ಕಾವಲುಗಾರರನ್ನು ವಿಸರ್ಜಿಸಲು ಮುಸದ್ದಿಕ್‌ರವರು ಆಜ್ಞೆ ಮಾಡಿರುತ್ತಾರೆ

ಟೆಹರಾನಿನಲ್ಲಿ ಹಂಚಲಾದ ಹಸ್ತಪತ್ರಿಕೆಯಲ್ಲಿ ಷಹಾರವರ ಮುಸದ್ದಿಕ್‌ರವರನ್ನು ವಜಾ ಮಾಡಿ, ಜನರಲ್ ಜಹೇದಿಯವರನ್ನು ಹೊಸ ಪ್ರಧಾನಿಯಾಗಿ ನೇಮಿಸಲಿರುವರೆಂದು ತಿಳಿಸಲಾಗಿದ್ದಿತು

ಜನರಲ್ ಜಹೇದಿಯವರು ಷಹಾರವರ ಆಜ್ಞೆಯ ಫೋಟೋಗಳನ್ನು ತೆಗೆಸಿ ಹಂಚಿದ್ದರೆಂದೂ ಅದರಲ್ಲಿ ಅವರನ್ನು ಪ್ರಧಾನಿಯಾಗಿ ನೇಮಿಸಲಾಗಿತ್ತೆಂದು ತಿಳಿಸಿದ್ದುದಾಗಿಯೂ ಹೇಳಲಾಗಿದೆ ಮುಸದ್ದಿಕ್‌ರವರನ್ನು ಪದ ...

## ಮೊರಾಕೊವಿನಲ್ಲಿ ಫ್ರೆಂಚರಿಗೂ ರಾಷ್ಟ್ರೀಯರಿಗೂ ಘರ್ಷಣೆ

ಫ್ರೆಂಚರಿಗೆ ಸೇರಿದ ಮೊರಾಕೋ ಭಾಗದಲ್ಲಿ ಮರಾಕೇಶ್ ಪಾಷಾರವರ ವಿರುದ್ಧವಾಗಿರುವ ರಾಷ್ಟ್ರೀಯ ಮೊರಾಕೊ ಜನರು ನೆನ್ನೆ ರಾತ್ರಿ ಪಾಷಾರವರ ಅರಮನೆಗೆ ನುಗ್ಗಲೆತ್ನಿಸಿದಾಗ, ಫ್ರೆಂಚ್ ಪೋಲೀಸರಿಗೂ ಅವರಿಗೂ ಘರ್ಷಣೆಯಾಗಿ ೪ ಜನರು ಮಡಿದು ೧೫ ಮಂದಿಗೆ ಗಾಯವಾಯಿತು ೧,೫೦೦ ಮೊರಾಕನ್ನರು ಒಟ್ಟಿಗೆ ನುಗ್ಗಿ ತಮ್ಮನ್ನು ಎದುರಿಸಿದ ಫ್ರೆಂಚ್ ಪೋಲೀಸರ ಪೈಕಿ ಇಬ್ಬರನ್ನು ಕೊಲ್ಲಲು ಪೋಲೀಸರು ಗುಂಡು ಹಾರಿಸಿದರೆಂದು ಹೇಳಲಾಗಿದೆ ಮರಾಕೇಶ್ ಪಾಷಾರವರು ಫ್ರೆಂಚರ ಪರ ಇರುವರೆಂದೂ, ಮೊರಾಕೋವಿನ ಸುಲ್ತಾನರನ್ನು ಉಳಿಸಲು ಅವರು ಪ್ರಯತ್ನ ನಡೆಸಿದರೆಂದೂ ಹೇಳಲಾಗಿದೆ

### ಕಲ್ಲಿನ ಮೇಲ್ಛಾವಣಿ ಕುಸಿದು ೪ ಮಕ್ಕಳ ಮರಣ

ಕೋಲಾರದ ಬಳಿ ನರಸಾಪುರದ ಹರಿಜನ ಕೇರಿಯಲ್ಲಿ ನೆನ್ನೆ ಮಧ್ಯಾಹ್ನ ಒಂದು ಮನೆಯ ಮೇಲ್ಛಾವಣಿಯು ಕುಸಿದು ಮೂವರ ಹುಡುಗಿಯರು ಮತ್ತೊಬ್ಬ ಹುಡುಗನು ಮಡಿದರೆಂದು ವರದಿಯಾಗಿದೆ ಹುಸೇನಸಾಬ್ ಮತ್ತು ... ಎಂಟು ಇಬ್ಬರು ಮಕ್ಕಳೊಡನೆ ಕೆಲವು ... ಕೊಂಡು ... ಬಂಗಲೆಯಿಂದ ಅಲ್ಲಿಗೆ ಅವರ ತಂದೆ ಖಾಸಿಂ ಸಾಬ್ ಎಂಬುವರು ಬಂದಿದ್ದರು ಅಲ್ಲಿನ ಜನರ ಹೇಳಿಕೆ ಮೇಲೆ ಅವರು ಮಕ್ಕಳನ್ನು ಬಿಟ್ಟು ಆಹಾರ ಪದಾರ್ಥ ತರಲು ಹೋಗಿ ವಾಪಸು ಬರುವಾಗ ಈ ದುರ್ಘಟನೆಯು ಸಂಭವಿಸಿತು ಉಳಿದ ಇಬ್ಬರು ಹುಡುಗಿಯರ ಹರಿಜನರು

### ಸ್ವಾತಂತ್ರ್ಯ ದಿನದ ಶುಭಾಶಯ

ರಾಜಧಾನಿಯ ರಾಮಾನುಜಾ ರಸ್ತೆಯಲ್ಲಿ ಮೂಡರಿ ಮನೆ ೧೯೩೭ರಲ್ಲಿರುವ ಗೋಖಲೆ ಹಿಂದಿ ವಿದ್ಯಾಲಯದವರು ನಮಗೆ ಭಾರತ ಸ್ವಾತಂತ್ರ್ಯ ದಿನದ ಶುಭಾಶಯವನ್ನು ಕಳುಹಿಸಿ, ದೇಶದಲ್ಲಿ ಸುಖಶಾಂತಿಗಳು ನೆಲೆಸಿ‍ಎಂದೂ, ಭಾರತವು ಅದ್ವಿತೀಯ ರಾಷ್ಟ್ರವಾಗಲೆಂದೂ, ಸಾಧ್ವಿ ಪತ್ರಿಕೆಯು ಚಿರಕಾಲ ಬಾಳಿ ಬೆಳಗಲೆಂದೂ ಕೋರಿರುತ್ತಾರೆ ವಿದ್ಯಾಲಯದವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ

### ಮುಖ್ಯ ಮಂತ್ರಿಯವರಿಂದ ನಗರ ಪರಿಶೀಲನೆ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಾಮಯ್ಯ ಮತ್ತು ಇತರ ಅಧಿಕಾರಿಗಳೊಡನೆ ನಗರದ ನಾನಾ ಭಾಗಗಳಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿದರು ನಂತರ ಅವರು ಬೆಂಗಳೂರಿಗೆ ತೆರಳಿದರು

---

ರೇಡಿಯೋವಿನಲ್ಲಿ ಪ್ರಸಾರ ಭಾಷಣ ಮಾಡುವ ಏರ್ಪಾಡಾಗಿದ್ದಿತೆಂದೂ ಮುಸದ್ದಿಕ್ಕರು ಆ ಮಸ್ಯವಿಷ್ಟರೊಡನೆ ಸಖ್ಯ ... ಎಂದೂ ... ನನ್ನೆ ... ಎಂದೂ ಹೇಳಲಾಗಿದೆ ಟೆಹರಾನ್ ನಗರದಲ್ಲಿ ಈಗ ಟ್ಯಾಂಕು

## ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೭

ನಗರದಲ್ಲಿ ಮೊನ್ನೆ ಶನಿವಾರ ೬ ನೇ ಸ್ವಾತಂತ್ರ್ಯೋತ್ಸವವು ಸಂಭ್ರಮದಿಂದ ಆಚರಿಸಲ್ಪಟ್ಟಿತು

ಟೆಲಿಫೋನ್ ಎಕ್ಸ್‌ಚೇಂಜಿನಲ್ಲಿ ಬೆಳಗ್ಗೆ ಧ್ವಜಾರೋಹಣ ಸಮಾರಂಭವು ನಡೆಯಿತು

ಮಂಡಿ ಮೊಹಲ್ಲಾ ಶೇಂದಿ ಡಿಪೋದಲ್ಲಿ ಪೌರಸಭಾಧ್ಯಕ್ಷ ಶ್ರೀ ಟಿ ಎ ಕಟಿಂಮಣಯ್ಯನವರು ಧ್ವಜಾರೋಹಣ ಮಾಡಿದರು ಅವರೂ, ಪೌರಸಭೆಯ ಉಪಾಧ್ಯಕ್ಷ ಶ್ರೀ ಅಬ್ದುಲ್ ರಹಮಾನರವರೂ ಭಾಷಣ ಮಾಡಿ ರಾಷ್ಟ್ರಧ್ವಜದ ಮಹತ್ವವನ್ನು ವಿವರಿಸಿದರು ನಂತರ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಮಂಗಳಾರತಿ, ಪ್ರಸಾದ ವಿನಿಯೋಗ ಇವುಗಳನ್ನು ಪೌರಸಭಾ ಸದಸ್ಯರಾದ ಶ್ರೀ ರಂಗಸ್ವಾಮಯ್ಯನವರು ಏರ್ಪಡಿಸಿದ್ದರು

ಇದಿಗಾದಲ್ಲಿರುವ ಶ್ರೀ ಗಂಗಾಧರಮೂರ್ತಿ ಯುವಕ ಸಂಘದಲ್ಲಿ ಬೆಳಗ್ಗೆ ಧ್ವಜ ವಂದನೆ ಮತ್ತು ವಿವಿಧ ಸ್ಪರ್ಧೆಗಳು ನಡೆದುವು ಸಂಜೆ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಪ್ರಾರ್ಥನೆ ಸ್ವಾಗತ ಭಾಷಣ ಮತ್ತು ವಿವಿಧ ವೇಷ ಸ್ಪರ್ಧೆಗಳ ನಂತರ ಅಕ್ಷರ ಪ್ರಚಾರ ಸಮಿತಿಯ ಕಾರ್ಯದರ್ಶಿ ಶ್ರೀ ಎಂ ಭದ್ರಯ್ಯನವರ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು ಅಧ್ಯಕ್ಷರ ಭಾಷಣ ಮತ್ತು ವಂದನಾ ಸಮರ್ಪಣೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ವಿದ್ಯಾವರ್ಧಕ ಪ್ರೌಢಶಾಲೆಯಲ್ಲಿ ಬೆಳಗ್ಗೆ ಸ್ವಾತಂತ್ರ್ಯೋತ್ಸವವು ನೆರವೇರಿತು ಶ್ರೀ ಕೆ ಪುಟ್ಟಸ್ವಾಮಿಯವರು ಧ್ವಜಾರೋಹಣ ಮಾಡಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನರಸಿಂಗರಾಯರು ಸ್ವಾಗತ ಭಾಷಣ ಮಾಡಿದನಂತರ ಶ್ರೀ ಅಗರಂ ರಂಗಯ್ಯನವರು ಭಾಷಣ ಮಾಡಿ ಸ್ವಾತಂತ್ರ್ಯ ದಿನೋತ್ಸವದ ಹಿರಿಮೆಯನ್ನು ವಿವರಿಸಿ ವಿದ್ಯಾರ್ಥಿಗಳು ರಾಷ್ಟ್ರದ ನಾಯಕರ ಆದರ್ಶವನ್ನು ಅನುಸರಿಸಿ ದೇಶಾಭಿಮಾನದಿಂದ ಕೂಡಿರಬೇಕೆಂದು ತಿಳಿಸಿದರು

ಶಾರದಾ ಶ್ರೀ ವೈಷ್ಣವ ಯುವಕ ಸಂಘದಲ್ಲಿ ಬೆಳಗ್ಗೆ ಶ್ರೀ ಎಸ್ ಟಿ ನಾರಾಯಣಯ್ಯನವರಿಂದ ಧ್ವಜಾರೋಹಣವೂ ಸಂಜೆ ಶ್ರೀ ಎಂ ಆರ್ ಸಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯೂ ನಡೆದವು ಶ್ರೀಗಳಾದ ವೆಂಕಟರಾಮಯ್ಯ ಮತ್ತು ರೇವಣ್ಣನವರು ಭಾಷಣ ಮಾಡಿ ಸ್ವಾತಂತ್ರ್ಯ ದಿನದ ಮಹತ್ವವನ್ನು ವಿವರಿಸಿದರು

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಹೆಚ್ ಆರ್ ನಾಗರಾಜರಾವ್ ಅವರಿಂದ [illegible] ಕೀರ್ತನೆ [illegible] ಮಧ್ಯಾಹ್ನ [illegible] ಕನ್ನಡದಲ್ಲಿ ಸಂಭಾಷಣೆ [illegible] ವೀಣೆ ಮತ್ತು ಗಾಯನ [illegible] ಕಾರ್ಯಕ್ರಮ [illegible] ಎಂ ಬಿ ವಿದ್ವಾಂಸರ [illegible] ಕೊಡನೆ ಭೇಟಿ

## ವಿಶ್ವಸಂಸ್ಥೆ ಅಧಿಕಾರಿ ಬಗ್ಗೆ ಕಾಶ್ಮೀರ ಸರ್ಕಾರದ ಪ್ರತಿಭಟನೆ

ವಿಶ್ವ ಸಂಸ್ಥೆ ವೀಕ್ಷಕರಾಗಿರುವ ಅಮೆರಿಕದ ಮೇಜರ್ ಇ ಸಿ ಹೋರ್ ಎಂಬವರ ವರ್ತನೆ ಬಗ್ಗೆ ಕಾಶ್ಮೀರ ಸರ್ಕಾರದವರು ವಿಶ್ವಸಂಸ್ಥೆ ಕೇಂದ್ರಕ್ಕೆ ಪ್ರತಿಭಟನೆ ಮಾಡಿರುವರೆಂದು ಹೇಳಲಾಗಿದೆ ಕಳೆದ ಮಂಗಳವಾರ ಶ್ರೀನಗರದಲ್ಲಿ ಸರ್ಕಾರದ ವಿರುದ್ಧ ನಡೆದ ಪ್ರದರ್ಶನದಲ್ಲಿ ಅವರು ಸೇರಿದ್ದುದಾಗಿಯೂ ನಾಗಿನ್ ಬಾಗ್ ಎಂಬಲ್ಲಿ ಹಿಂಸಾತ್ಮಕ ಗುಂಪೊಂದನ್ನು ಚದುರಿಸಲು ಪೋಲೀಸರು ಹೋದಾಗ, ಅವರನ್ನು ಕಳುಹಿದ ಅಧಿಕಾರಿಯ ಹೆಸರನ್ನು ಹೋರ್ ರವರ ಕೇಳಲು ಸದರಿ ಅಧಿಕಾರಿಯು ಅವರ ಅತಿಕ್ರಮ ಪ್ರವೇಶವನ್ನು ಸಹಿಸದೆ ಅವರಿಗೆ ಯಾವ ಸುದ್ದಿಯನ್ನೂ ಕೊಡಲಿಲ್ಲವೆಂದೂ ಹೇಳಲಾಗಿದೆ

## ಫರೂಕರ ಪತ್ನಿಗೆ ಭತ್ಯವಿಲ್ಲ

ಮಾಹೆಯಾನಾ ಭತ್ಯವನ್ನು ಕೊಡಬೇಕೆಂದು ಈಜಿಪ್ಟಿನ ಮಾಜಿ ದೊರೆ ಫರೂಕರ ಪತ್ನಿ ನರಿಮಾನ್ನರು ಮಾಡಿದ್ದ ಪ್ರಾರ್ಥನೆಯನ್ನು ಈಜಿಪ್ಟ್ ಸರ್ಕಾರದವರು ನಿರಾಕರಿಸಿರತ್ತಾರೆ ನರಿಮನ್ನರ ವಿವಾಹ ಕಾಲದಲ್ಲಿ ಅವರಿಗೆ ಫರೂಕರು ೧೦ ೦೦೦ ಪೌಂಡನ್ನು ಕೊಟ್ಟಿರುವುದಾಗಿಯೂ, ಅದ್ದರಿಂದ ಆಕೆಗೆ ಹೊಸದಾಗಿ ಏನೂ ಕೊಡಬೇಕಾಗಿಲ್ಲವೆಂದೂ ತಿಳಿಸಲಾಗಿದೆ

### ವಿಶ್ವವಿದ್ಯಾಲಯದ ಐತಿಹಾಸಿಕ ಸಂಘ

ರಾಜಧಾನಿಯ ವಿಶ್ವವಿದ್ಯಾಲಯದ ಐತಿಹಾಸಿಕ ಸಂಘದ ಪ್ರಸಕ್ತ ಸಾಲಿನ ಅಧಿಕಾರ ವರ್ಗದ ಚುನಾವಣೆಯು ನಡೆದು ಶ್ರೀ ಗಾ ಪುಟ್ಟಸ್ವಾಮಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಹೆಚ್ ನಾರಾಯಣ್ ಶ್ರೀ ಚೆನ್ನಬಸವಯ್ಯ ಮತ್ತು ಶ್ರೀಮತಿ ಪಿ ಎ ಕಾವೇರಿಯಮ್ಮ ಇವರುಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು

### ನಂಜನಗೂಡು ಅಂಚೆ ಬಟವಾಡೆ ಅತೃಪ್ತಿಕರ

ನಂಜನಗೂಡಿನಲ್ಲಿ ಇತ್ತೀಚೆಗೆ ಅಂಚೆ ಬಟವಾಡೆಯು ಸರಿಯಾಗಿ ಆಗುತ್ತಿಲ್ಲ ಬೆಳಿಗ್ಗೆ ಕಾಗದವನ್ನು ಮತ್ತೊಬ್ಬರಿಗೆ ಕೊಡುತ್ತಿರುವುದು ಮಧ್ಯಾಹ್ನ ೩ ಗಂಟೆಗೆ ತಲುಪಿಸುವ ಕಾಗದವನ್ನು ಸಂಜೆ ೬ ಗಂಟೆ ವರೆಗೆ ತಡ ಮಾಡಿ ತಲುಪಿಸುವುದು ಇವೇ ಮುಂತಾದ ನಾನಾ ತೊಂದರೆಗಳು ಆರಂಭವಾಗಿವೆ ಇವುಗಳನ್ನು ಮೇಲ್ಪಟ್ಟವರು ಗಮನಿಸಿ ಕೂಡಲೇ ಸೂಕ್ತ ಕ್ರಮ ಕೈಗೊಂಡು ಜನರಿಗೆ ಸಕಾಲದಲ್ಲಿಯೂ ಸರಿಯಾಗಿಯೂ ಕಾಗದಗಳ ಬಟವಾಡೆಗೆ ಏರ್ಪಾಡು ಮಾಡುವರೆಂದು ನಂಬಲಾಗಿದೆ ಹೀಗೆಂದು ಅಲ್ಲಿನ ಗಣ್ಯ ಮಹನೀಯರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

### "ಕರಹಂಚು" ಪುಸ್ತಕ ಪ್ರಕಟನೆ

ರಾಜಧಾನಿಯ ಕಲಾಕ್ಷೇತ್ರದವರು ಪ್ರಕಟಿಸಿರುವ ಶ್ರೀಮತಿ ಪಿ ಜಿ ಪ್ರಮೀಳಾರವರ 'ಕರಹಂಚು' ಎಂಬ ಕಥಾ ಸಂಕಲನದ ಉದ್ಘಾಟನೋತ್ಸವವನ್ನು 'ಶಕ್ತಿ' ಪತ್ರಿಕೆಯ ಸಂಪಾದಕಿ ಶ್ರೀಮತಿ ಜಿ. ವೇದಮ್ಮನವರು ಮೊನ್ನೆ ನೆರವೇರಿಸಿದರು ಶ್ರೀ ಕೆ. ಬಿ. ಶಾಮರಾಯರ ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಶಿವಪ್ಪನವರು ಕನ್ನಡ ಸಾಹಿತ್ಯ ಪ್ರಕಾಶನದ ಬಗ್ಗೆ ಮಾತನಾಡಿದರು

## ೫೧ ವರ್ಷಗಳನಂತರ ಪ್ರಣಯ ಈಗ ಫಲಿಸಿತು

ಅಮೆರಿಕದ ಓಕ್ಲಹಾಮ ಸಂಸ್ಥಾನದ ಎ ಜೆ ಹಲ್ಸ್ ಎಂಬಾತನು ೫೧ ವರ್ಷಗಳ ಹಿಂದೆ ತಾನು ಪ್ರೀತಿಸಿದ್ದ ಸಾರಾ ಲಿಲ್ಲಿ ಎಂಬಾಕೆಯನ್ನು ಈಗ ವಿವಾಹವಾಗಿರುತ್ತಾನೆ ೧೯೦೨ ರಲ್ಲಿ ಅವರಲ್ಲಿ ಪರಸ್ಪರ ಪ್ರೇಮ ಹುಟ್ಟಿ ವಿವಾಹವಾಗಲು ಇಚ್ಛಿಸಿದಾಗ, ಆಕೆಯ ಮಾತಾಪಿತೃಗಳು ಒಪ್ಪಲಿಲ್ಲ. ಅವರು ಈ ವರ್ಷದ ಆದಿಯಲ್ಲಿ ಪುನಃ ಭೇಟಿಯಾದರು ಈಗ ಆಕೆಗೆ ೩೩ ಮೊಮ್ಮಕ್ಕಳು ಮತ್ತು ೮ ಮರಿ ಮಕ್ಕಳು ಇರುವರು

## ಜಪಾನಿನಲ್ಲಿ ಪ್ರವಾಹದಿಂದ ೫೦ ಮರಣ

ಜಪಾನಿನ ಕಿಯೊಟೊ ನಗರದ ಬಳಿ ಮೊನ್ನೆ ಪುನಃ ಪ್ರವಾಹವು ಬಂದು ೫೦ ಜನರು ಮಡಿದಿರುವರು ೭೦ ಮಂದಿ ಪತ್ತೆಯಿಲ್ಲವಾಗಿದ್ದಾರೆ ೧,೫೦೦ ಜನರಿಗೆ ಮನೆಮಠಗಳಿಲ್ಲವಾಗಿದೆ

## ಈಶ್ವರ ವಿಗ್ರಹ ಪ್ರತಿಷ್ಠೆ ಬಗ್ಗೆ ವ್ಯಾಜ್ಯ

ಚಿಕ್ಕಬಳ್ಳಾಪುರದಲ್ಲಿ ಕಳೆದ ಬುಧವಾರ ಈಶ್ವರ ವಿಗ್ರಹವೊಂದನ್ನು ಅಲ್ಲಿನ ಒಂದು ಉದ್ಯಾನವನದಲ್ಲಿ ಪ್ರತಿಷ್ಠೆ ಮಾಡಿದಾಗ, ವಿಗ್ರಹವು ದಕ್ಷಿಣಾಭಿಮುಖವಾಗಿದ್ದುದನ್ನು ಹಲವು ಪೌರಸಭಾ ಸದಸ್ಯರು ಪ್ರತಿಭಟಿಸಿದರೆಂದೂ, ಅವರಿಗೂ ಅಧಿಕಾರಿಗಳಿಗೂ ವ್ಯಾಜ್ಯವಾಯಿತೆಂದೂ ಆದರೆ ಪ್ರತ್ಯಾವ ಘಟನೆಗಳೂ ನಡೆಯಲಿಲ್ಲವೆಂದೂ ಹೇಳಲಾಗಿದೆ ವಿಗ್ರಹವು ಅದೇ ದಿಕ್ಕಿನಲ್ಲಿ ಇಡಲ್ಪಟ್ಟಿದೆ

## ಗ್ರೀಸ್ ಭೂಕಂಪದಲ್ಲಿ ೧೦೦೦ ಜನರ ಮರಣ

ಗ್ರೀಸಿಗೆ ಸೇರಿದ ಅಯೋನಿಯನ್ ದ್ವೀಪಗಳಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದಿಂದ ೧ ೦೦೦ ಜನರು ಮೃತಪಟ್ಟು ೩ ಸಾವಿರ ಮಂದಿಗೆ ಗಾಯವಾಗಿರುವುದಾಗಿ ವರದಿಯಾಗಿದೆ ಅಲ್ಲಿ ಒಂದಾಗ ಸ್ವಲ್ಪದರಂತೆ ೨ ಟ್ಟು ೨೨ ಭೂಕಂಪಗಳಾದುವು ಅಲ್ಲಿರುವ ೫೧ ಲಕ್ಷ ಜನರ ಸಹಾಯಕ್ಕಾಗಿ ಬ್ರಿಟಿಷ್ ನೌಕೆಯು ಬಂದಿರುತ್ತದೆ

## ಮುಳುಗುತ್ತಿದ್ದ ಐವರನ್ನು ರಕ್ಷಿಸಿದ ಬಾಲಕನಿಗೆ ಬಹುಮಾನ

ಹೈದರಾಬಾದಿನ ಆಲಂ ಕೊಳದಲ್ಲಿ ಮುಳುಗುತ್ತಿದ್ದ ೫ ಜನರನ್ನು ರಕ್ಷಿಸಿದ ೧೪ ವರ್ಷದ ಇಬ್ರಾಹಿಂ ಎಂಬ ಬಾಲಕನಿಗೆ ಅಲ್ಲಿನ ಸರ್ಕಾರದವರು ಚಿನ್ನದ ಪದಕವನ್ನು ಕೊಟ್ಟಿರುತ್ತಾರೆ ಅಲ್ಲದೆ ೩½ ಸಾವಿರ ರೂ ವೆಚ್ಚದಲ್ಲಿ ಅವನಿಗೆ ಮನೆಯೊಂದನ್ನು ಕಟ್ಟಿಸಿಕೊಡಲಾಗುವುದು ಅವನ ವಿದ್ಯಾಭ್ಯಾಸವು ಪೂರೈಸುವವರೆಗೆ ಅವನಿಗೆ ತಿಂಗಳಿಗೆ ೨೦ ರೂ ನಂತೆ ವೇತನ ಕೊಡಲಾಗುವುದು

## ರಾಜಮಹೇಂದ್ರಿ ನಗರಕ್ಕೆ ಗೋದಾವರಿ ಪ್ರವಾಹ

ಗೋದಾವರಿಯಲ್ಲಿ ಪ್ರವಾಹವು ಏರಿ, ರಾಜಮಹೇಂದ್ರಿಯ ಹಲವು ರಸ್ತೆಗಳಿಗೆ ನೀರು ನುಗ್ಗಿರುತ್ತದೆ ಇನ್ನೂ ಹೆಚ್ಚಾಗಿ ಪ್ರವಾಹವು ಬಂದರೆ ನಗರವು ನೀರಿನಲ್ಲಿ ಮುಳುಗುವ ಭೀತಿಯೂ ಇರುತ್ತದೆ ರಾಜಮಹೇಂದ್ರಿ ಮತ್ತು ಪೋಲಾವರಂಗಳ ನಡುವೆ ೨೦ ಹಳ್ಳಿಗಳು ಮುಳುಗಿವೆ

### ರಾಷ್ಟ್ರಾಧ್ಯಕ್ಷರ ಭಾವಚಿತ್ರದ ಅನಾವರಣ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಧೀವನ್ಸ್‌ರ ಕ್ಷತ್ರಿಯ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದಲ್ಲಿ ಕಳೆದ ೧೫ನೇ ತಾ|| ಸಂಘದ ಆರಂಭೋತ್ಸವವನ್ನು ಮಹಾರಾಜಾ ಕಾಲೇಜಿನ ಶ್ರೀ ಎಂ ವಿ ಕೃಷ್ಣರಾಯರು ನೆರವೇರಿಸಿದರು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು ಶ್ರೀ ಕೃಷ್ಣರಾಯರು ಮಾತನಾಡಿ, ರಾಷ್ಟ್ರಾಧ್ಯಕ್ಷರ ಗುಣವಿಶೇಷಗಳನ್ನು ವಿವರಿಸಿದರು ನಿಲಯದ ಅಧ್ಯಕ್ಷರಾದ ಶ್ರೀ ಯು ಎಲ್ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು ಸಂಘದಲ್ಲಿ ಮೊನ್ನೆ ದಿನ ಸ್ವಾತಂತ್ರ್ಯ ದಿನಾಚರಣೆಯೂ ನಡೆಯಿತು


## ಮನೆ ಕ್ರಯಕ್ಕಿದೆ

**1. ಡೋರ್ ನಂ. 332**

ಹಳೇ ಬಂಡೀಕೇರಿ ಕೃಷ್ಣರಾಜ ಮೊಹಲ್ಲಾ ವಿಶಾಲವಾದ ಮಹಡಿ ಮನೆ ನಲ್ಲಿ, ದೀಪವಿರುತ್ತೆ ಕೂಡಲೇ ಸ್ವಾಧೀನ ಕೊಡಲಾಗುತ್ತೆ

**2. ಡೋರ್ ನಂ 456/1 ಮತ್ತು 456/2**

ಕೇಶವ ಜಾಂಬಾ ಅಗ್ರಹಾರ, ಮೈಸೂರು ಪೇಟೆಗೆ ಸಮೀಪದಲ್ಲಿ ಒಳ್ಳೆಯ ಬಾಡಿಗೆ ಬರುತ್ತಿರುವ ಸ್ವತ್ತು ವಿವರಗಳಿಗೆ —

**ಜಯ ಅಂಡ್ ಕಂಪೆನಿ,**

ಮನೆ, ಜಮೀನು ಮಾರಾಟ ಮತ್ತು ಸಾಲ ಕೊಡಿಸುವ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು ಫೋನ್ 520


### ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಹಣಬಲಗನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ

**ನ್ಯೂಸ್ ಪೇಪರ್ ಹೌಸ್,**

ಸಾಧ್ವಿ ಏಜೆಂಟರು, ಮೈಸೂರು.


**HERE IS GOOD NEWS FOR YOU!**

**The Price of Coffee is Reduced to Re. 0-1-6 From 15th August 1953, at**

**BOMBAY ANANDA BHAVAN**

The Renowned Hotel of the Capital City

Public Patronage is Solicited

MANAGEMENT



ಕಾಸ್ಮಾಪಾಲಿಟನ್ ಕ್ಲಬ್, ಮೈಸೂರು

**ಅಮೋಘ ನೃತ್ಯ ಪ್ರದರ್ಶನ**

**ಕುಮಾರಿ ಕಮಲ ಮತ್ತು ಅವರ ಬಳಗ**

ಭಾನುವಾರ : 23-8-1953 : ಸಂಜೆ 6 ಗಂಟೆಗೆ

ಕ್ರಾಫರ್ಡ್ ಹಾಲಿನಲ್ಲಿ

ಪ್ರವೇಶ ದರ ರೂ 10, 5, 2, ಮತ್ತು 1

ಸ್ತ್ರೀಯರಿಗೆ ಎಲ್ಲಾ ತರಗತಿಯಲ್ಲೂ ಪ್ರತ್ಯೇಕ ಸ್ಥಳ



In connection with the Celebration of the INDEPENDENCE DAY

**SRI GAYATHRI TALKIES**

Present M. G. M.s New Type Picture

**METROSCOPIX**

(3 DIMENSIONS)

From 15-8-53 Daily 3 Shows

To enable you to see this Picture Special Polloroid Glasses are Available At The Theatre For Hire, which may kindly be Returned to the Management after use


Edited Printed and Published by A R Nagarajan at Sadhvi Press D Subbiah Road Mysore

ಟೆಲಿಫೋನ್ ನಂ 792

|| ವಂದೇ ಮಾತರಂ ||

ಈ ದಿನ ಪತ್ರಿಕೆ 3 ಕಾಸು

ಗೌರಿ ಹಬ್ಬಕ್ಕಾಗಿ

ಗೌರ್ನಮೆಂಟ್ ಸಿಲ್ಕ್, ಕ್ರೇಪ್ ಸೀರೆಗಳು, ಪ್ರಿಂಟ್ ಪೀಸ್‌ಗಳು, ಧರ್ಮಾವರಂ ಆರ್ಟ್ ಸಿಲ್ಕ್ ಸೀರೆಗಳು ಮುಂತಾದ ನಾನಾ ತರದ ಸೀರೆಗಳು ಕಾಶ್ಮೀರ್ ಶಾಲುಗಳಿಗೆ

M. V. ಭೋಜಯ್ಯ

ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE TUESDAY 18-8-1953 : ಮೈಸೂರು : ಮಂಗಳವಾರ ೧೮-೮-೧೯೫೩ [ ಸಂಚಿಕೆ ೧೭

# – ಟೆಹರಾನ್ ಜನರಿಂದ ಷಹಾ ಪ್ರತಿಮೆಗಳ ಛೇದನ –

## ಕೋರ್ಟಿಗೆ ಬರದಿದ್ದುದಕ್ಕಾಗಿ ಆಸಾಮಿಗೆ ದಂಡ

ಮೈಸೂರು ೧೮

ರಾಜಧಾನಿಯ ಅಶೋಕಾ ರಸ್ತೆಯ ಒಂದು ಕಬ್ಬಿಣದ ಅಂಗಡಿ ಮತ್ತು ರಾಜಕಮಲ್ ಚಿತ್ರಮಂದಿರ ಇವುಗಳ ಮಾಲೀಕರಾದ ಶ್ರೀ ಜಿ. ಕೆ. ಡಿ. ಭೈರಮಯ್ಯನವರನ್ನು ೧೫-೬ ರಂದು ಆಸಾಮಿಯಾಗಿ ನೇಮಿಸಲಾಗಿ ಶ್ರೀ ಭೈರಮಯ್ಯನವರು ಸರಿಯಾದ ಕಾರಣವನ್ನು ಕೊಡದ ಕೋರ್ಟಿಗೆ ಹಾಜರಾಗಲಿಲ್ಲವೆಂದು ಅಡಿಷನಲ್ ನ್ಯಾಯಾಧೀಶರಾದ ಶ್ರೀ ಕೆ. ವಿಶ್ವೇಶ್ವರಯ್ಯನವರು ಅವರಿಗೆ ೫೦ ರೂ ಜುಲ್ಮಾನೆಯನ್ನು ಕಳೆದ ೧೦ ನೇ ತಾ|| ವಿಧಿಸಿದರೆಂದ ಗೊತ್ತಾಗಿದೆ

ಇದೇ ರೀತಿ ಆಸಾಮಿಯಾಗಿ ನೇಮಿಸಲ್ಪಟ್ಟು ಕೋರ್ಟಿಗೆ ಹಾಜರಾಗದ ಇದ ಶ್ರೀ ಆರ್. ಎ. ಕೇಸರಿಯವರಿಗೆ ಕಳೆದ ತಿಂಗಳು ೧೦ ನೇ ತಾ|| ೫೦ ರೂ ಜುಲ್ಮಾನೆ ವಿಧಿಸಲಾಗಿದ್ದಿತ. ಶ್ರೀ ಕೇಸರಿಯವರು ಹೈಕೋರ್ಟಿಗೆ ಅಪೀಲು ಮಾಡಿರುವರೆಂದು ಗೊತ್ತಾಗಿದೆ

### ನೇತಾಜಿ ಬೋಸರ ಬಗ್ಗೆ ಉಪನ್ಯಾಸ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಮೊನ್ನೆ ರಾತ್ರಿ ಮಾಜಿ ಐ. ಎನ್. ಎ. ದಳದ ಶ್ರೀ ರಾಮರಾಯರು ನೇತಾಜಿ ಸುಭಾಷ್ ಚಂದ್ರಬೋಸರ ಜೀವನ ಚರಿತ್ರೆ ಮತ್ತು ಸ್ವಾತಂತ್ರ್ಯದ ಹೋರಾಟವನ್ನು ಕುರಿತು ಭಾಷಣ ಮಾಡಿದರು. ಶ್ರೀ ಎಂ. ಎಸ್. ನಂಜುಂಡಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಭಾರತದಿಂದ ಆಚೆಗೆ ಬೋಸರು ಹೊರಟುಹೋದ ಮೇಲೆ ಬ್ರಿಟಿಷರನ್ನು ಈ ದೇಶದಿಂದ ಓಡಿಸಲು ಅವರು ಭಾರತದ ರಾಷ್ಟ್ರೀಯ ಸೈನ್ಯವನ್ನು ನಿರ್ಮಿಸಿದ ಬಗೆಯನ್ನು ಹೃದಯಂಗಮವಾಗಿ ಶ್ರೀ ರಾಮರಾಯರು ವಿವರಿಸಿ, ಭಾರತ ಸೇವಾದಳದ ಸಂಘಟನೆ ಮತ್ತು ವಿದ್ಯಾರ್ಥಿಗಳ ಕರ್ತವ್ಯವನ್ನು ವಿವರಿಸಿದರು. ಶ್ರೀ ರಾಮರಾಯರು ನೆನ್ನೆ, ಮಹಾರಾಜಾ ಹೈಸ್ಕೂಲು ಮಾದರಿ ಶಾಲೆ ಮತ್ತು ಮಹಾರಾಣಿ ಹೈಸ್ಕೂಲುಗಳ ಭೇಟಿಯಿತ್ತು ಅಲ್ಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಭೆಗಳಲ್ಲಿ ಭಾಷಣ ಮಾಡಿ ನೇತಾಜಿ ಬೋಸರ ಜೀವನ ಚರಿತ್ರೆಯನ್ನು ವಿವರಿಸಿದರು. ಮುಂದೆ ಮೊಹಲ್ಲಾ ವಿದ್ಯಾಮಂದಿರಕ್ಕೂ ಅವರು ಹೋಗಿ ನಗರದ ಸೇವಾದಳದ ಶಿಕ್ಷಕರ ಸಭೆಯಲ್ಲಿ ಭಾಷಣ ಮಾಡಿದರು.

### ಹೊಸ ಹೋಟೇಲು ಕೆಲಸಗಾರರ ಸಂಘದ ಸಮಿತಿಯ ಚುನಾವಣೆ

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಹಿಯೆ ಹೋಟೇಲು ವರ್ಕರ್ಸ್ ಅಸೋಸಿಯೇಷನ್ನಿನ ಅಧಿಕಾರ ವರ್ಗ ಮತ್ತು ಕಾರ್ಯ ಸಮಿತಿ ಸದಸ್ಯರ ಚುನಾವಣೆಯು ನಡೆದು ಶ್ರೀ ರಂಗನಾಥ್ ಅಧ್ಯಕ್ಷರಾಗಿಯೂ, ಶ್ರೀ ಹೆಚ್. ಕೆ. ಸ್. ಮೂರ್ತಿಯವರು ಉಪಾಧ್ಯಕ್ಷರಾಗಿಯೂ ಡಿ. ವಿ. ದತ್ತಾತ್ರೇಯರವರು ಕಾರ್ಯದರ್ಶಿ, ಎಸ್. ಎ. ವೇಣುಗೋಪಾಲ್ ಸಹಾಯಕ ಕಾರ್ಯದರ್ಶಿಯಾಗಿಯೂ, ಶ್ರೀ ಕೆ. ವಿ. ಶಂಕರ ಅಯ್ಯರ್ ಸಂಚಾಲಕ ಮತ್ತು ಶ್ರೀ ಟಿ. ನಾರಾಯಣ್ ಖಜಾಂಚಿಯಾಗಿಯೂ ಆರಿಸಲ್ಪಟ್ಟರು. ಏಳು ಜನರನ್ನು ಸಮಿತಿ ಸದಸ್ಯರಾಗಿ ಆರಿಸಲಾಗಿದೆ

## ನಿರುದ್ಯೋಗ ದಿನಾಚರಣೆ ಸಂಬಂಧದಲ್ಲಿ ಗಲಭೆ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕರೆಯಂತೆ ಈ ಶಾಖೆಯವರು ಕಳೆದ ಶನಿವಾರ ಪುರಭವನದ ಆವರಣದಲ್ಲಿ ನಿರುದ್ಯೋಗ ದಿನಾಚರಣೆ ಸಭೆಯನ್ನು ನಡೆಸಲು ... ಪೊಲೀಸರು ... [illegible] ... ಜನರ ಗಲಭೆ ಮಾಡಿ ... ಗಾಯಗೊಂಡ ... ಇನ್ಸ್‌ಪೆಕ್ಟರರ ಮತ್ತು ... ಗಳಿಗೆ ಗಾಯಗಳಾಗಿವೆ

### ಬಾಲಕರಿಂದ ಸರಳುಗಳ ಕಳುವು

ರಾಜಧಾನಿಯ ... ಶ್ರೀ ಗೋವಿಂದಪ್ಪನವರ ಅಂಗಡಿಯ ... ಬಿಟ್ಟಿದ್ದ ... ಕಬ್ಬಿಣದ ಸರಳುಗಳನ್ನು ಕಳವು ಮಾಡಿದರೆಂದು ... ವರ್ಷ ವಯಸ್ಸಿಗೆ ಕಡಿಮೆ ... ಗುಜರಾತ್ ಮಕಬೂಲ್ ಪಾಷಾ, ಸಂಬ್‌ಜಾನ್ ಕೃಷ್ಣ ಮತ್ತು ಅನ್ವರ್ ಎಂಬ ಹುಡುಗರನ್ನು ಮಂಡಿ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ ೧೦೦ ರೂ ಗಳಷ್ಟು ಮಾಲನ್ನು ವಶಪಡಿಸಿಕೊಳ್ಳಲಾಗಿದೆ

### ಉಪಾಕರ್ಮ

ರಾಜಧಾನಿಯ ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಋಗ್ಯಜುರ ಉಪಾಕರ್ಮಗಳು ೨೩ ಮತ್ತು ೨೪ ನೇ ತಾ|| ನಡೆಯುವುವು ೨೩ ನೇ ತಾ|| ಬೆಳಗ್ಗೆ ೮ ಗಂಟೆಗೆ ಆಶ್ವಲಾಯನ ಸೂತ್ರದವರಿಗೂ ಮರುದಿನ ಬೆಳಗ್ಗೆ ೮ ಕ್ಕೆ ಆಪಸ್ತಂಭ ಸೂತ್ರದವರಿಗೂ ಉಪಾಕರ್ಮಗಳನ್ನು ಏರ್ಪಡಿಸಲಾಗಿದೆ. ಬಂದವರೆಲ್ಲರಿಗೆ ಈ ಮೂಲಕ ಆಹ್ವಾನವನ್ನು ಕೊಡಲಾಗಿದೆ

### ಕೈದಿಗೆ ಪುನಃ ಜೈಲು

ನೇರ್‌ಲಾಲ್ ಮೊಕದ್ದಮೆಯೊಂದರಲ್ಲಿ ಕನ್ನೇಗೌಡನ ಕೊಪ್ಪಲಿನ ಕೇಡಿ ಬೀರ ಎಂಬವನ ಮೇಲೆ ಕ್ರೈಮ್ ಬ್ರಾಂಚ್ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತನಿಗೆ ೬ ತಿಂಗಳು ಕಠಿಣ ಸಜಾ ವಿಧಿಸಲಾಗಿದೆ. ಪೊಲೀಸರಿಗೆ ಅವನು ತನ್ನ ಚಲನವಲನಗಳನ್ನು ತಿಳಿಸಲಿಲ್ಲವೆಂಬುದ ಮೊಕದ್ದಮೆಗೆ ಕಾರಣ

### ಸಂತೋಷ್ ಫುಟ್‌ಬಾಲ್ ಪಂದ್ಯದ ರೆಫರಿಯಾಗಿ ಮೈಸೂರಿನವರು

ಮೈಸೂರಿನ ಶ್ರೀ ಬಿ. ಶ್ರೀನಿವಾಸಯ್ಯಂಗಾರರನ್ನು ಸಂತೋಷ್ ಫುಟ್‌ಬಾಲ್ ಪಂದ್ಯಗಳಲ್ಲಿ ರೆಫರಿಯಾಗಿ ನೇಮಿಸಲಾಗಿದೆ. ಅಲ್ಲದೆ ಕಲ್ಕತ್ತದ ಪತ್ತರಾಯ್, ಬೊಂಬಾಯಿಯ ಜಮಾಲುದ್ದೀನ್ ಅವರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿಯು ಸಂತೋಷ್ ಪಂದ್ಯಗಳ ರೆಫರಿಗಳನ್ನು ನೇಮಿಸಲು ಅಧಿಕಾರ ಹೊಂದಿದೆ

## ಇರಾನ್ ಷಹಾರವರ ಪ್ರತಿಮೆಗಳ ಛೇದನ

ಟೆಹರಾನಿನಲ್ಲಿ ಜನರ ಗುಂಪುಗಳು ನೆನ್ನೆ ಪರ್ಷಿಯಾದ ಷಹಾ ಮತ್ತು ಅವರ ತಂದೆಯ ಪ್ರತಿಮೆಗಳನ್ನು ಕೆಳಗೆ ಕೆಡವಿ ಛೇದಿಸಿದರೆಂದು ವರದಿಯಾಗಿದೆ. ಹಿಂದಿನ ಮಜ್ಲಿಸ್ ಸಭೆಯ ಎದುರಿಗಿದ್ದ ಪ್ರತಿಮೆಯ ನ, ಕಬ್ಬಿಣದ ... ಕಟ್ಟಿ ಎಳೆದು ಕೆಡವಿ ಅದನ್ನ ಜನರು ಮೆಟ್ಟಿ ನಿಂತು ಎಲ್ಲಾ ಷಹಾಗಳಿಗೂ ಸಾವು "ಪ್ರಜೆಗಳ ಜಯ ಕಾಲಗಳಾಗಿದ್ದರೆ" ಎಂದು ಕೂಗಿಕೊಂಡರು ಪೊಲೀಸರು ಮತ್ತು ಮಿಲಿಟರಿ ... ಈ ... ಯನ್ನು ತಡೆಯಲು ಸಾಧ್ಯವಾಗಲಿಲ್ಲ

### ಪರ್ಷಿಯಾದಲ್ಲಿ ರಿಪಬ್ಲಿಕ್ ರಾಜ್ಯವಿಲ್ಲ

ಪರ್ಷಿಯಾದಲ್ಲಿ ರಿಪಬ್ಲಿಕ್ ರಾಜ್ಯವನ್ನು ಸ್ಥಾಪಿಸುವ ಇಚ್ಛೆ ಇಲ್ಲವೆಂದು ಇರಾನಿನ ವಿದೇಶಾಂಗ ಮಂತ್ರಿ ಡಾ|| ... ಫಾತೆಮಿಯವರು ... ರಾಜಪ್ರತಿನಿಧಿ ಮಂಡಲವನ್ನು ರಚಿಸುವುದೂ ಅವರಲ್ಲಿ ರಾಜಮನೆತನದವರೊಬ್ಬರನ್ನು ಸೇರಿಸುವುದಿಲ್ಲವೆಂದು ಅವರು ಸ್ಪಷ್ಟಪಡಿಸಿರುತ್ತಾರೆ

## ಪಾಕಿಸ್ತಾನದೊಡನೆ ಭಾರತದ ಸೌಹಾರ್ದ ಸಂಧಾನ

### ಪಾರ್ಲಿಮೆಂಟಿನಲ್ಲಿ ನೆಹರೂರವರ ಭಾಷಣ

ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ಮಾತನಾಡಿ, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇರುವ ಎಲ್ಲಾ ವ್ಯಾಜ್ಯಗಳನ್ನೂ ಭಾರತವು ಶಾಂತಿ ಮತ್ತು ಸೌಹಾರ್ದದಿಂದ ಬಗೆಹರಿಸಲು ನಿಶ್ಚಯಿಸಿರುವುದಾಗಿ ತಿಳಿಸಿದರು. ದೆಹಲಿಗೆ ಆಗಮಿಸಿರುವ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ಪತ್ನಿ ಮತ್ತು ವಿದೇಶಾಂಗ ಮಂತ್ರಿ ಜಫರುಲ್ಲಾಖಾನರೊಡನೆ ಸಭೆಗೆ ಆಗಮಿಸಿ, ರಾಷ್ಟ್ರಾಧ್ಯಕ್ಷರ ವೇದಿಕೆಯಲ್ಲಿ ಕುಳಿತು ನೆಹರೂರವರ ಭಾಷಣವನ್ನು ಕೇಳಿದರು. ಮಹಮದ್ ಅಲಿಯವರು ಸಭೆಗೆ ಬಂದಾಗ ಸದಸ್ಯರು ಸಂಪ್ರದಾಯವನ್ನು ಒತ್ತರಿಸಿ, ಎದ್ದುನಿಂತು ಅವರ ಆಗಮನಕ್ಕಾಗಿ ಹರ್ಷೋದ್ಗಾರಗಳನ್ನು ಮಾಡಿದರು. ಅಲಿಯವರು ಸಭೆಗೆ ತಲೆಬಾಗಿ ಕೃತಜ್ಞತೆಯನ್ನು ಸೂಚಿಸಿದರು. ನೆಹರೂರವರು ಮಾತನಾಡಿ ಎರಡು ರಾಷ್ಟ್ರಗಳ ಪರಸ್ಪರ ಏಕೀಭವಿಸುವಿಕೆಯ ಸಾಮರ್ಥ್ಯಕ್ಕೆ ಭಂಗ ತರಲು ಹಲವರು ಪ್ರಯತ್ನಿಸಿರುವುದಕ್ಕಾಗಿ ವಿಷಾದವನ್ನು ಸೂಚಿಸಿದರು

### ಸೆಂಟ್ರಲ್ ಜೈಲಿನಿಂದ ಖೈದಿಗಳ ಪರಾರಿ

ಕಳೆದ ೧೩ ನೇ ತಾ|| ರಾತ್ರಿ ಬೆಂಗಳೂರು ಸೆಂಟ್ರಲ್ ಜೈಲಿನಿಂದ ತಮ್ಮಯ್ಯ, ಮುನಿ ಕೆಂಪ ... ಲ್ಲ ... ಕೆಂಪ ಮತ್ತು ... ಎಂಬುವರು ತಮ್ಮ ಕೊಠಡಿಗಳ ಕಂಬಿಯನ್ನು ಮುರಿದು ಜೈಲುಗೋಡೆಯನ್ನು ಹಾರಿ ಪರಾರಿಯಾಗಿರುವರೆಂದು ವರದಿಯಾಗಿದೆ

○ ಹಸಿವಿನ ಬಾಧೆಯನ್ನು ತಾಳಲಾರದೆ ಕಳೆದ ಬುಧವಾರ ದಾವಣಗೆರೆಯಲ್ಲಿ ಒಬ್ಬನು ತನ್ನ ಐದು ವರ್ಷದ ಹೆಣ್ಣು ಮಗುವನ್ನು ೮ ರೂ ಗಳಿಗೆ ಮಾರಿದನೆಂದು ವರದಿಯಾಗಿದೆ. ತಾಲ್ಲೂಕಿನ ಸುತ್ತಮುತ್ತಲೂ ಇಂತಹ ಪ್ರಕರಣಗಳು ನಡೆಯುತ್ತಿರುತ್ತದಾಗಿ ಹೇಳಲಾಗಿದೆ

## ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ೬೦ ಲಕ್ಷ ರೂ. ಬಂಡವಾಳ

### ವಾಪಸು ತೆಗೆದುಕೊಳ್ಳಲು ಮೈಸೂರು ಸರ್ಕಾರದ ಪತ್ರವ್ಯವಹಾರ

ಸ್ವಂ. ವ. ಫೋ.] ಬೆಂಗಳೂರು ೧೮

ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಮೈಸೂರು ಸರ್ಕಾರದವರು ಹಾಕಿರುವ ೬೦ ಲಕ್ಷ ರೂ ಬಂಡವಾಳವನ್ನು ವಾಪಸು ತೆಗೆದುಕೊಳ್ಳಲು ಇಚ್ಛಿಸಿ, ಈ ಬಗ್ಗೆ ಭಾರತ ಸರ್ಕಾರದವರೊಡನೆ ಪತ್ರ ವ್ಯವಹಾರವನ್ನು ನಡೆಸುತ್ತಿರುವರೆಂದು ತಿಳಿದುಬಂದಿದೆ. ಮೈಸೂರು ಸಂಸ್ಥಾನದಲ್ಲಿ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಕೈಗೊಳ್ಳುವ ಕೆಲಸಕ್ಕಾಗಿ ಈ ಹಣವು ಬೇಕಾಗಿರುವುದೆಂದು ಹೇಳಲಾಗಿದೆ

### ಹೈಕೋರ್ಟಿನಲ್ಲಿ ಇಂಜನಿಯರಿಂಗ್ ವಿದ್ಯಾರ್ಥಿಯ ಅರ್ಜಿ ಪರಿಶೀಲನೆ

ಇಂಜನಿಯರಿಂಗ್ ಕಾಲೇಜಿನಲ್ಲಿ ಸ್ಥಾನವನ್ನು ಕೊಡುವಂತೆ ರಿಟ್ ಆಜ್ಞೆಯಾಗಬೇಕೆಂದು ಇಲ್ಲಿನ ವಿದ್ಯಾರ್ಥಿ ಶ್ರೀ ಶ್ರೀವರ್ಧನ್ ಎಂಬುವರು ಹೈಕೋರ್ಟಿನಲ್ಲಿ ಹಾಕಿದ್ದ ಅರ್ಜಿಯನ್ನು ಈ ದಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಓ. ವೇದಪ್ಪ ಮತ್ತು ಶ್ರೀ ವಾಸುದೇವಮೂರ್ತಿಯವರು ಪರಿಶೀಲನೆಗಾಗಿ ತೆಗೆದುಕೊಂಡರು

### ಕೃಷ್ಣರಾಜಪೇಟೆ ಹಳ್ಳಿಗಳಲ್ಲಿ ಸಾಮೂಹಿಕ ಯೋಜನೆ

ಬೆಂಗಳೂರು ೧೮

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ೨೫ ಹಳ್ಳಿಗಳಲ್ಲಿ ಸಾಮೂಹಿಕ ಯೋಜನೆ ಕಾರ್ಯಕ್ರಮವನ್ನು ಶೀಘ್ರದಲ್ಲಿ ಜಾರಿಗೆ ತರಲಾಗುವುದೆ ಮೂ ೬೬ ಸಾವಿರ ರೂ ವೆಚ್ಚದಲ್ಲಿ ಎರಡು ಫರಿಷ್ ಸೇತುವೆಗಳ ಸಮೇತ ೧೧ ಮೈಲಿ ರಸ್ತೆಯನ್ನು ನಿರ್ಮಿಸಲಾಗುವುದೆಂದೂ, ಈ ಕಾರ್ಯವು ಅಕ್ಟೋಬರ್ ೭ ನೇ ತಾ|| ಆರಂಭವಾಗಿ ೩ ವಾರಗಳಲ್ಲಿ ಮುಕ್ತಾಯವಾಗುವುದೆಂದೂ ವರದಿಯಾಗಿದೆ. ಇದರಲ್ಲಿ ರಾಷ್ಟ್ರೀಯ ಕ್ಯಾಡೆಟ್ ಕೋರ್ ವಿದ್ಯಾರ್ಥಿಗಳೂ, ೫೦೦ ಜನ ಸ್ವಯಂಸೇವಕರೂ ನಿರತರಾಗುವರೆಂದು ಹೇಳಲಾಗಿದೆ. ರಸ್ತೆ ನಿರ್ಮಾಣದ ಜೊತೆಗೆ ಹೆಚ್ಚು ಆಹಾರ ಬೆಳೆ ತೆಗೆಯುವುದನ್ನೂ ಏರ್ಪಡಿಸಲಾಗುವುದು.

ಈ ಯೋಜನೆಯು ಯಶಸ್ವಿಯಾದರೆ ಮೈಸೂರ್, ಕೊಡಗು ಮತ್ತು ತಿರುವಾಂಕೂರು ಕಾಲೇಜು ಮತ್ತು ಪ್ರೌಢಶಾಲೆಗಳ ದಳಗಳನ್ನು ಏರ್ಪಡಿಸಿ ಅವರಿಂದ ಭಾರಿ ಪ್ರಮಾಣದಲ್ಲಿ ಅಲ್ಲಿ ಕೆಲಸವನ್ನು ಕೈಗೊಳ್ಳಲಾಗುವುದೆಂದು ಹೇಳಲಾಗಿದೆ

## ಮುಸದ್ದಿಕ್ ಅಧಿಕಾರ ತ್ಯಜಿಸಿದರೆ ಷಹಾ ವಾಪಸು

ಪರ್ಷಿಯದ ಷಹಾರವರು ಜನರಲ್ ಜಹೇದಿಯವರನ್ನು ಪ್ರಧಾನಿಯಾಗಿ ನೇಮಿಸಿರುವ ಆಜ್ಞೆಗೆ ಮುಸದ್ದಿಕ್ಕರು ತಲೆಬಾಗಿ ನಡೆದುಕೊಂಡ ಮೇಲೆ ಷಹಾರವರು ಟೆಹರಾನಿಗೆ ಹಿಂತಿರುಗುವುದಿಲ್ಲವೆಂದು ತಿಳಿದುಬಂದಿದೆ. ಷಹಾರವರು ಸಿಂಹಾಸನವನ್ನು ತ್ಯಜಿಸಲು ಆಲೋಚಿಸಿಲ್ಲವೆಂದು ಹೇ... ಅವರು ಅವರ ಪತ್ನಿ ರಾಣಿ ಸುರಯ್ಯಾರವರೂ ಇರಾಕ್ ... [illegible]

## ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೮

ರಾಜಧಾನಿಯ ಹೋಟೆಲು ಕೆಲಸಗಾರರ ಸಂಘದವರು ಹಳ್ಳದಕೇರಿಯಲ್ಲಿರುವ ತಮ್ಮ ಸಂಘದ ಕಟ್ಟಡದಲ್ಲಿ ಕಳೆದ ೧೫ ನೇ ತಾ|| ಶ್ರೀ ಎ ವಿ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಿದರು ಶ್ರೀಗಳಾದ ಡಿ ಎಸ್ [illegible] ವ್, ಪದ್ಮನಾಭಭಟ್ಟ ಎಸ್ ಆರ್ [illegible] ಮತ್ತು ವೇಣುಗೋಪಾಲ್‌ರವರು [illegible] ಮಾಡಿ ಪ್ರಜೆಗಳ ಕರ್ತವ್ಯವನ್ನು ವಿವರಿಸಿದರು ಅಧ್ಯಕ್ಷರು ಭಾಷಣ ಮಾಡಿ [illegible] ಸಿಹಿ ಪದಾರ್ಥಗಳ ವಿನಿಯೋಗವಾಗಿ ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಹೊಸ ಹೋಟೆಲು ಕೆಲಸಗಾರರ ಸಂಘದಲ್ಲಿ ಅದೇ ದಿನ ದಿನಾಚರಣೆಯು [illegible] ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು ಅಧ್ಯಕ್ಷರು ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಿ [illegible] ಎಲ್ಲರೂ [illegible] ದಿಂದ [illegible] ದರು ಕಾರ್ಮಿಕರಿಗೆ ಸಂಘ್ಯವಾದ [illegible] ಮಾಡುವುದಾಗಿ ಅವರು ತಿಳಿಸಿದರು [illegible] ಶ್ರೀ [illegible] ಭಾಷಣ ಮಾಡಿ [illegible] ನಗರದ ವ್ಯಾಪಾರಿ ಸಂಸ್ಥೆ [illegible] ಎಂದು ಸಲಹೆ ಮಾಡಿದರು [illegible] ಹೋಟೆಲನ್ನು ತೆರೆಯಲು [illegible] ದರಿಂದ ಕಾರ್ಮಿಕರ ಸಮಸ್ಯೆಯು [illegible] ಗುವುದೆಂದು ಭಾವಿಸಲಾಯಿತು

ಶ್ರೀರಂಗಪಟ್ಟಣದ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ ಭಾರತ ಕಾಂಗ್ರೆಸ್ [illegible] ದವರು ಸ್ವಾತಂತ್ರ್ಯ ದಿನಾಚರಣೆ [illegible] ಶ್ರೀ [illegible] ರವರು ಧ್ವಜಾರೋಹಣ ಮಾಡಿದರು

[illegible] ತಂತ್ರ್ಯ ದಿನ [illegible] ವೀರಭದ್ರಪ್ಪನವರ ಅಧ್ಯಕ್ಷತೆ [illegible] ಧ್ವಜಗಳನ್ನು [illegible] ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಎಸ್ ಗೋವಿಂದಸ್ವಾಮಿಯವರೂ ಶ್ರೀ ಎ ವಿ [illegible] ಭಾಷಣಗಳನ್ನು ಮಾಡಿದರು

### ಶ್ಯಾನಭಾಗಹಳ್ಳಿ ಪ್ರಾಥಮಿಕ ಶಾಲಾ ವಿದ್ಯಾರ್ಥಿ ಸಂಘ

ರಾಜಧಾನಿಯ ಶ್ಯಾನಭಾಗಹಳ್ಳಿ [illegible] ಸಿದ್ದಲಿಂಗಯ್ಯ [illegible] [illegible]

### ಅಶೋಕಪುರಾ [illegible] ಕಾರ್ಯಕ್ರಮ

[illegible]

## ಮ್ಯಾಂಚೆಸ್ಟರಿನಲ್ಲಿ ರೈಲುಗಳಿಗೆ ಡಿಕ್ಕಿಯಾಗಿ ೧೦ ಜನರ ಮರಣ

ಇಂಗ್ಲೆಂಡಿನ ಮ್ಯಾಂಚೆಸ್ಟರಿನ [illegible] ಸಮೀಪ [illegible] ಎರಡು ರೈಲುಗಳಿಗೆ ಒಂದು ಸೇತುವೆ ಒಳ ಡಿಕ್ಕಿಯಾಗಿ ಹತ್ತು ಜನರು ಮೃತಪಟ್ಟರೆಂದೂ ೫೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ ಛಿದ್ರಯಾಗಿದ್ದ ಒಂದು [illegible] ಸೇತುವೆಯು [illegible] ಕಡೆ [illegible] ಗಾಡಿಗಳು [illegible] ಕೆಳಗಿನ ನದಿಗೆ ಬಿದ್ದಿತೆಂದು ಹೇಳಲಾಗಿದೆ

## ಮುಸ್ಸಾದಿಕ್ಕರಿಂದಲೇ ಮಜ್ಲಿಸ್ ಸಭೆಯ ವಿಸರ್ಜನೆ

ಪರ್ಷಿಯದ ಪ್ರಧಾನಿ ಮಹಮ್ಮದ್ ಮುಸ್ಸಾದಿಕ್‌ರವರೇ ಇರಾನಿನ ಪಾರ್ಲಿಮೆಂಟಾದ ಮಜ್ಲಿಸ್ ಸಭೆಯನ್ನು ವಿಸರ್ಜನೆ ಮಾಡಿರುತ್ತಾರೆ ಪರ್ಷಿಯದ ಷಹಾರವರು ಈ ಕೆಲಸ ಮಾಡಬೇಕಾಗಿದ್ದಿತು [illegible] ಅವರು [illegible] ಯೋಗಿರುವುದರಿಂದ [illegible] ಕೆಲಸವನ್ನು ಮುಸ್ಸಾದಿಕ್‌ರವರೇ ಮಾಡಿರುವರು

## ಪಾಕಿಸ್ಥಾನಕ್ಕೆ ಭಾರತದ ಡಕಾಯಿತರ ಪರಾರಿ

[illegible] ಜಿಲ್ಲೆಯಲ್ಲಿ [illegible] ಎಂಬ [illegible] ಪಾಕಿಸ್ಥಾನಕ್ಕೆ [illegible] ವರದಿಯಾಗಿದೆ [illegible] ಊರುಗಳನ್ನು [illegible] ಹೇಳಲಾಗಿದೆ

## ಭಾರತ ಪಾಕಿಸ್ಥಾನಗಳ ಸೌಹಾರ್ದಕ್ಕೆ ಬರ್ಮಾ ಸಹಾಯ

ಭಾರತ ಮತ್ತು ಪಾಕಿಸ್ಥಾನಗಳ ನಡುವೆ [illegible] ಬರ್ಮಾ ಪ್ರಧಾನಿ [illegible] ಸಹಾಯ ಮಾಡುವುದಾಗಿ [illegible] ಘಟನೆಯು [illegible] ದೊಡ್ಡದಾದ [illegible] ಭಾರತ ಮತ್ತು ಪಾಕಿಸ್ಥಾನಗಳಲ್ಲಿ [illegible] ಆಸಕ್ತಿ ಹೊಂದಿರುವುದೆಂದೂ ಅವರು ಹೇಳಿದರು

## ತಿರುಮಕೂಡಲಿನಲ್ಲಿ ಪ್ರವಾಹ

[illegible] ಟಿ ನರಸೀಪುರ ೧೬

ನೆನ್ನೆ ಮಧ್ಯಾಹ್ನದಿಂದ ಇಲ್ಲಿನ ಹೊಳೆಗಳಲ್ಲಿ ಹೆಚ್ಚಿನ ಪ್ರವಾಹ ಬರಲು ಆರಂಭವಾಗಿ ೧೦ ಗಂಟೆ ಹೊತ್ತಿಗೆ ಅತಿಯಾದುದರಿಂದ ತಿರುಮಕೂಡಲಿನಲ್ಲಿದ್ದ ಜನರನ್ನು ನೋಟಾರಿನ [illegible] ಜನರಿಗೆ ತಿಳಿಯಲಿಲ್ಲ ಈ ದಿನ ಪ್ರವಾಹದ ವೇಗವು ಕಡಿಮೆಯಾಗುತ್ತಿದೆ ಇಲ್ಲಿನ ಪೊಲೀಸು ಸಬ್ ಇನ್ಸ್‌ಪೆಕ್ಟರ್ ಮತ್ತು ಇತರರ ಜನರಿಗೆ ತುಂಬಾ ಸಹಾಯ ಮಾಡಿರುತ್ತಾರೆ ಹಿಂದೆ ಬಂದಿದ್ದ ಪ್ರವಾಹದಿಂದ ಪೀಡಿತರಾಗಿ ಮನೆಗಳನ್ನು ಕಳೆದುಕೊಂಡವರಿಗೆ ೫೦, ೩೦, ೨೦ ರೂ ಗಳಂತೆ ಹಂಚಲಾಗಿದೆ

## ಭಾರತದ ಮೇಲೆ ಯುದ್ಧಕ್ಕಾಗಿ ಕರಾಚಿಯಲ್ಲಿ ಪುನಃ ಕೂಗು

ಜಿನ್ನಾರವರ ತಂಗಿ ಫಾತಿಮಾರವರ ಅಧ್ಯಕ್ಷತೆಯಲ್ಲಿ ಮೊನ್ನೆಯೂ ಸಹ ಕರಾಚಿಯಲ್ಲಿ ಬಹಿರಂಗ ಸಭೆಯು ನಡೆಯಿತು ಪಾಕಿಸ್ಥಾನದ ಕೈಗಾರಿಕಾ ಮಂತ್ರಿ ಖಯೂಂ ಖಾನ್ ಆಜಾದ್ ಕಾಶ್ಮೀರದ ಮುಖಂಡ [illegible] ಗುಲಾಂ ಅಬ್ಬಾಸ ಮತ್ತು ಸರ್ದಾರ್ ಇಬ್ರಾಹಿಂ ಖಾನರವರು ಭಾಷಣ ಮಾಡಿದರು ಭಾರತದ ಮೇಲೆ ಧರ್ಮ ಯುದ್ಧ ನಡೆಯಬೇಕೆಂದು ಒತ್ತಾಯ ಪಡಿಸಲಾಯಿತು ಖಯೂಂ ಖಾನರವರು ಮಾತನಾಡಿ ಪಾಕಿಸ್ಥಾನದವರು ತಾಳ್ಮೆಯಿಂದಿದ್ದು ಸಾಕಾಗಿರುವುದೆಂದೂ ಈಗ ಎಲ್ಲಾ ಜನಾಂಗಗಳೂ ಅವರು ಸಿದ್ಧವಾಗಿರಬೇಕೆಂದೂ ತಿಳಿಸಿದರು ಸಭೆಗೆ ಮುಂಚೆ ಭಾರಿ ಮೆರವಣಿಗೆಯು ನಡೆಯಿತು

## ಚರ್ಚಿಲ್ಲರ ಸಿಂಹದಿಂದ ಸಾಕುವವನಿಗೆ ಗಾಯ

ಗಾಲ್ಡಕೋಸ್ಟ್ ಆಫ್ರಿಕಕ್ಕೆ ಚರ್ಚಿಲರು ಭೇಟಿ ಯಿತ್ತಾಗ ಅವರಿಗೆ ಬಹುಮಾನವಾಗಿ ಕೊಡಲಾದ ರೋಟಾ ಎಂಬ ಸಿಂಹವು ಲಂಡನ್ನಿನಲ್ಲಿ ತನ್ನನ್ನು ಸಾಕುವವನ ಮೇಲೆ ಪಂಜದಿಂದ ಹೊಡೆದು ಗಾಯಗೊಳಿಸಿರುವುದಾಗಿ ವರದಿಯಾಗಿದೆ

## ದುಂಬಿಗಳ ಸಮೂಹಕ್ಕೆ ಹೆದರಿ ಶಾಸನ ಸಭಾಧ್ಯಕ್ಷರ ಪರಾರಿ

ಗಡಿನಾಡಿನ ಶಾಸನ ಸಭಾಧ್ಯಕ್ಷ ನವಾಬ್ ಜಾದಾ ಅಲ್ಲಾ ನವಾಜ್ ಖಾನರವರು [illegible] ಕೃಷ್ಣ ದಿನದಲ್ಲಿ ಪ್ರಾರ್ಥನೆಗೆ [illegible] ಬಂದಿದ್ದಾಗ ಅವರನ್ನು ದುಂಬಿಗಳ ಸಮೂಹವು ಕಡಿಯ ಬೆನ್ನಟ್ಟಿದುದರಿಂದ ಅದಕ್ಕಾಗಿ ಅವರ ಓಡಿಹೋಗಿ ಶಾಸನ ಸಭಾ ಭವನದಲ್ಲಿ ಆಶ್ರಯ ಪಡೆದರೆಂದೂ ಹೇಳಲಾಗಿದೆ

### ಅಸ್ಸಾಂ ಹುದ್ದೆಗೆ ಮೈಸೂರಿನ ನಿವೃತ್ತ ಇಂಜನಿಯರ್

ಅಸ್ಸಾಮಿನ ಪಂಚ ವಾರ್ಷಿಕ ಯೋಜನೆ ಅಂಗವಾಗಿ ಅಲ್ಲಿ ಕೈಗೊಳ್ಳಲಾಗುವ ಉಷ್ಣ ವಿದ್ಯುಚ್ಛಕ್ತಿ ಕಾರ್ಯಾಗಾರದ ಯೋಜನೆಯ ಇಂಜನಿಯರಾಗಿ ಮೈಸೂರಿನ ನಿವೃತ್ತ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಎಂ ಪಿ [illegible] ಕೃಷ್ಣಯ್ಯಂಗಾರ್ರವರನ್ನು ನೇಮಿಸಲಾಗಿದೆ


## ಮನೆ ಕ್ರಯಕ್ಕಿದೆ

**1 ಡೋರ್ ನಂ 332**

ಹಳೇ ಬಂಡೀಕೇರಿ ಕೃಷ್ಣರಾಜ ಮೊಹಲ್ಲಾ ವಿಶಾಲವಾದ ಮಹಡಿ ಮನೆ ನಲ್ಲಿ ದೀಪ ಇರತಕ್ಕ ಕೂಡಲೇ ಸ್ವಾಧೀನ ಕೊಡಲಾಗುತ್ತೆ

**2 ಡೋರ್ ನಂ 456/1 ಮತ್ತು 456 2**

ಕೇಶವನಂದಾಂಬಾ ಅಗ್ರಹಾರ ಮೈಸೂರು ಪೇಟೆಗೆ ಸಮೀಪದಲ್ಲಿ ಒಳ್ಳೆಯ ಬಾಡಿಗೆ ಬರುತ್ತಿರುವ ಸ್ವತ್ತು ವಿವರಗಳಿಗೆ —

**ಜಯ ಅಂಡ್ ಕಂಪೆನಿ,**

ಮನೆ ಜಮೀನು ಮಾರಾಟ ಮತ್ತು ಸಾಲ ಕೊಡಿಸುವ ಏಜೆಂಟರು

ಹಳೇ ಮೈಸೂರು ಬ್ಯಾಂಕ್ ಕಟ್ಟಡ

ಮೈಸೂರು  ಫೋನ್ 520

## ಕಾಫಿ ಬೆಲೆ ಇಳಿದಿದೆ

ಕಾಫಿ ಬೀಜದ ದ [illegible] ರಿಂದಲೂ [illegible] ಸರ್ಕಾರ [illegible] ಕವಾಗಿರುವುದರಿಂದಲೂ

ಮಕ್ಕಾಜಿ ಚೌಕದಲ್ಲಿರುವ

## ಬೊಂಬಾಯಿ ಆನಂದ ಭವನದಲ್ಲಿ

ಇದೇ 15ನೆ ತಾ|| ಸ್ವಾತಂತ್ರ್ಯ ದಿನಾಚರಣೆಯ ದಿನದಿಂದ

**ಕಾಫಿ ಬೆಲೆಯನ್ನು 0 1 6 ಆಣೆಗೆ ಇಳಿಸಲಾಗಿದೆ**

ಸಾರ್ವಜನಿಕ [illegible] ಪ್ರೋತ್ಸಾಹಿಸಬೇಕಾಗಿ ವಿನಂತಿ

ಮ್ಯಾನೇಜ್‌ಮೆಂಟ್


## ಬಾಲಕಿಯ ಮೇಲೆ ಅತ್ಯಾಚಾರಕ್ಕಾಗಿ ಮೊಕದ್ದಮೆ

ಮೈಸೂರು ೧೮

ರಾಜಧಾನಿಯ ನಿವಾಸಿ ಶ್ಯಾಂಸಿಂಗ್ ಎಂಬ ತರುಣನು ಕೆ ಲೀಲಾಬಾಯಿ ಎಂಬ ೬ ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದನೆಂದು ನಜರ್‌ಬಾದ್ ಪೊಲೀಸರು ಅವನ ಮೇಲೆ ೧ನೇ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ.

## ಸ್ವಾತಂತ್ರ್ಯೋತ್ಸವ

ನಂಜನಗೂಡು ೧೬

ಇಲ್ಲಿನ ಪೌರಸಭೆಯವರು ನೆನ್ನೆ ಸಭಾಭವನದಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು ಇಲ್ಲಿನ ಮ್ಯಾಜಿಸ್ಟ್ರೇಟರಾದ ಶ್ರೀ ಅಬ್ದುಲ್ ಬಾಸಿತ್‌ರವರು ಅಧ್ಯಕ್ಷತೆ ವಹಿಸಿದ್ದರು ಈಶ ಪ್ರಾರ್ಥನೆ ಮತ್ತು ಕೀರ್ತನೆಗಳಾದನಂತರ ಮುನ್ಸಿಫರಾದ ಶ್ರೀ ಲಿಂಗೇಗೌಡರು, ಶ್ರೀ ಸಿ ಕೆ ನಾಗಪ್ಪನವರು ಭಾಷಣ ಮಾಡಿದರು ಬಾಲಕ ಬಾಲಕಿಯರಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು ಬೆಳಗ್ಗೆ ಶ್ರೀ ಎನ್ ಕೆ ಮರಿಕೆಂಪಯ್ಯನವರಿಂದ ಧ್ವಜಾರೋಹಣ, ಧ್ವಜವಂದನೆ ಮತ್ತು ಮೆರವಣಿಗೆಗಳು ನಡೆದುವು

## ಅಲಹಾಬಾದು ವಿಶ್ವವಿದ್ಯಾಲಯ ಬಂದ್

ಅಲಹಾಬಾದು ಕಾಲೇಜುಗಳ ವಿದ್ಯಾರ್ಥಿಗಳು ಮುಷ್ಕರ ನಡೆಸುತ್ತಿರುವುದರಿಂದ ಅಲ್ಲಿನ ವಿಶ್ವವಿದ್ಯಾಲಯವನ್ನು ೩ ವಾರಗಳ ಕಾಲ ಮುಚ್ಚಲು ನಿರ್ಧಾರ ಮಾಡಲಾಗಿರುತ್ತದೆ

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಆಂದ | ರೂ ಗೆ |
|---|---|---|
| ಕಡಲೆಕಾಯಿ | ೦ ೦ ೦ | ೩೩ ೦ ೦ |
| ಎಳ್ಳು | ೬೨ ೮ ೦ | ೭೭ ೦ ೦ |
| ಹುರುಳಿ | ೪೭ ೧೩ ೦ | ೪೦ ೬ ೦ |
| ಹೆಸರು | ೭೪ ೮ ೦ | ೭೪ ೧೪ ೦ |
| ಹಲಸಂದೆ | ೨೫ ೧೦ ೦ | ೬೭ ೮ ೦ |
| ಉಪ್ಪು | ೭೧ ೪ ೦ | |
| ಸೀಗೆಕಾಯಿ | ೫ ೦ ೦ | ೫ ೮ ೦ |
| ತೆಂಗಿನಕಾಯಿ ೧೦೦ಕ್ಕೆ | ೧೫೦ ೦ ೦ | ೩೫೫ ೦ ೦ |


# SRI GANESHA
TALKIES
From 19 8 53 For Three Days
Universals'
## CAVE OF OUTLAWS
(Techn color)
Featuring Macdonald Carey Alexis Smith Edgar Buchanan and Victor Jory

To Day  Last Day
SCARLET ANGEL

# SRI GAYATHRI
TALKIES
From 19 8 53 For Two Days
M G M's
## A WOMAN IN JEOPARDY
Starring Barbara Stanwick

— NOW RUNNING —
METROSCOPIX
(3 Dimensions)


## ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಹಣಗಳನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಹಣಕ್ಕೆ ನಾವು ಜವಾಬ್ದಾರರಲ್ಲ

**ನ್ಯೂಸ್ ಪೇಪರ್ ಹೌಸ್,**

ಏಜೆಂಟರು,  ಮೈಸೂರು

Edited Printed and Published by A R Nagarajan at Sadhvi Press, D Subbiah Road Mysore

ಟೆಲಿಫೋನ್ ನಂ 792

|| ವಂದೇ ಮಾತರಂ ||

ಇಂದಿನ ಪತ್ರಿಕೆ ೩ ಕಾಸು

ಗೌರಿ ಹಬ್ಬಕ್ಕೆ ಬೇಕಾದ
ಗೌರಿ ಶ್ರೀರ್ ಸೀರೆಗಳು ತೋಳಿ
ಪೀಸುಗಳು, ಧರ್ಮವರಂ ಪಟ್ಟೆ
ರೇಷ್ಮೆ ಸೀರೆಗಳು ಪೂಜಾ ಸೀರೆ
ಗಳು ಆ ಸ್ಪೆಷಲ್ ಶಾಲುಗಳು
M V ಭೋಜಯ್ಯ
ಬಿ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE THURSDAY 20-8-1953 . ಮೈಸೂರು : ಗುರುವಾರ ೨೦ ೮ ೧೯೫೩ [ ಸಂಚಿಕೆ ೧೯

# ಪರ್ಷಿಯದಲ್ಲಿ ಮುಸ್ಸಾದಿಕ್ಕರ ಪತನ; ೩೦೦ ಮರಣ

## ಹುಜೂರು ಖಜಾನೆ ಹಣದ ಮಾಯದ ಪ್ರಕರಣ

### ೨೯ ನೇ ತಾ|| ವರೆಗೆ ಕೃಷ್ಣಮೂರ್ತಿಯವರ ರಿಮ್ಯಾಂಡ್

ಬೆಂಗಳೂರು ೨೦

ಇಲ್ಲಿನ ಹುಜೂರು ಖಜಾನೆಯಲ್ಲಿ ೧ ಲಕ್ಷ ರೂ ಲೆಕ್ಕ ವ್ಯತ್ಯಾಸವ ಸಂಬಂಧವಾಗಿ ಪೊಲೀಸರ ವಶದಲ್ಲಿರುವ ಖಜಾನೆಯ ಟ್ರೆಜರರ್ ಶ್ರೀ ಸಿ ಎ ಕೃಷ್ಣಮೂರ್ತಿಯವರನ್ನು ೨೯ ನೇ ತಾ|| ವರೆಗೂ ರಿಮ್ಯಾಂಡಿನಲ್ಲಿಟ್ಟುಕೊಳ್ಳಲು ಅನುಮತಿ ದೊರೆತಿದೆ ಕೃಷ್ಣಮೂರ್ತಿಯವರು ಕಳೆದ ತಿಂಗಳು ಜೂನ್ ೩ | ಬೆಂಗಳೂರು ನಗರವನ್ನು ಬಿಟ್ಟು ಉತ್ತರ ಭಾರತದ ನಾನಾ ಕಡೆಗಳಲ್ಲಿ ತಿರುಗಿ, ಹಿಮಾಲಯಾ ಪರ್ವತವನ್ನು ೧೬೦೦ ಅಡಿಯಷ್ಟು ಹತ್ತಿದ್ದರೆಂದೂ ಕಳೆದ ೬ ನೇ ತಾ| ಅವರು ಬೆಂಗಳೂರಿಗೆ ಹಿಂತಿರುಗಿದರೆಂದೂ ಗೊತ್ತಾಗಿದೆ

ಮೈಸೂರು ಪೊಲೀಸರು ಪುಣೆ, ಜೋಧಪುರ, ಭೂಪಾಲ್, ಗ್ವಾಲಿಯರ್ ಉತ್ತರ ಪ್ರದೇಶ ಮುಂತಾದ ಕಡೆ ಕೃಷ್ಣಮೂರ್ತಿಯವರನ್ನು ಹುಡುಕುತ್ತಿದ್ದರೆಂದೂ ಅವರನ್ನು ಲಕ್ನೋ ಬಳಿ ಒಂದು ಹಳ್ಳಿಯಲ್ಲಿ ಪತ್ತೆ ಮಾಡಲಾಯಿತೆಂದೂ ಅವರನ್ನು ಬಂಧಿಸುವುದರೊಳಗೆ ಅವರೇ ಇಲ್ಲಿಗೆ ಹಿಂತಿರುಗಿದರೆಂದೂ ಹೇಳಲಾಗಿದೆ ಒಬ್ಬ ಸನ್ಯಾಸಿ ಬಳಿ ಇದ್ದ ಅವರ ಆಭರಣವನ್ನು ವಶಪಡಿಸಿಕೊಳ್ಳಲಾಗಿದೆ ಪತ್ತೆ ಕರಡುದಿಗೆ ೧೦ ಸಾವಿರ ರೂ ಪೆಚ್ಚವಾಗಿರಬಹುದೆಂದು ಹೇಳಲಾಗಿದೆ

### ಶಿಕ್ಷಣ ಕಾರ್ಯದರ್ಶಿಯಾಗಿ ಸಿ ನರಸಿಂಹಮೂರ್ತಿ

ಸರ್ಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿ ಶ್ರೀ ಎಲ್ ಮುನಿಸ್ವಾಮಿಯವರನ್ನು ತುಮಕೂರು ಜಿಲ್ಲಾಧಿಕಾರಿಗಳಾಗಿಯೂ ಕೊಡಗಿನ ಶ್ರೀಕ್ಷ ಕಾರ್ಯದರ್ಶಿಯಾಗಿದ್ದು ಹಿಂತಿರುಗಿರುವ ಶ್ರೀ ಸಿ ನರಸಿಂಹಮೂರ್ತಿಯವರನ್ನು ಶಿಕ್ಷಣ ಇಲಾಖಾ ಕಾರ್ಯದರ್ಶಿಯಾಗಿಯೂ ನೇಮಿಸಲಾಗಿದೆ

### ಹನುಮಂತ ರೆಡ್ಡಿಯವರ ಅಪೀಲು ತೀರ್ಪು

ಮಾಜಿ ಹಣಕಾಸಿನ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರ ಕೊಲೆ ಪ್ರಯತ್ನ ನಡೆಸಿದರೆಂದು ಸೆಷನ್ಸಿನಲ್ಲಿ ಆರೋಪಿಯಾಗಿ, ಜೂರಿಗಳು ಅಪ್ರಿತಕ್ಷರೆಂದು ತೀರ್ಮಾನಿಸಿದ್ದನ್ನು ಒಪ್ಪದೆ ನ್ಯಾಯಾಧೀಶರು ಹೈಕೋರ್ಟಿಗೆ ಒಪ್ಪಿಸಿದ ವ್ಯವಹಾರವೂ ಮತ್ತು ಈ ಸಂಬಂಧವಾಗಿ ಆಪಾದಿತರಾಗಿರುವ ಶ್ರೀ ಹನುಮಂತ ರೆಡ್ಡಿಯವರ ಅಪೀಲೂ ನೆನ್ನೆ ಶ್ರೀಮನ್ ನ್ಯಾಯಾಧೀಶ ಶ್ರೀ ಸಿ ಮೇದಪ್ಪ ಮತ್ತು ಶ್ರೀ ಬಿ ವಾಸುದೇವಮೂರ್ತಿಯವರ ಮುಂದೆ ಬಂದುದು ಅರ್ಜಿದಾರರ ಪರ ಶ್ರೀ ವಿ ಕೆ ಗೋವಿಂದರಾಜುಲು ಮತ್ತು ಸರ್ಕಾರದ ಪರ ಅಡ್ವೊಕೇಟ್ ಜನರಲ್ ಶ್ರೀ ನಿಟ್ಟೂರು ಶ್ರೀನಿವಾಸರಾಯರು ವಾದ ಮಾಡಿದರು ನ್ಯಾಯ ಮೂರ್ತಿಗಳು ತೀರ್ಪನ್ನು ಕಾದಿಟ್ಟಿರುವರು

### ಬಿ ಟಿ ಕೆಂಪಣ್ಣನವರಿಗೆ ನಿವೃತ್ತಿ ಪೂರ್ವದ ರಜಾ

ತುಮಕೂರು ಜಿಲ್ಲಾಧಿಕಾರಿಗಳಾದ ಶ್ರೀ ಬಿ ಟಿ ಕೆಂಪಣ್ಣನವರಿಗೆ ಇದೇ ೨೨ ರಿಂದ ೬ ಆಂಗಳು ನಿವೃತ್ತಿ ಪೂರ್ವದ ರಜಾ ದೊರೆತಿದೆ

## ಪರ್ಷಿಯದಲ್ಲಿ ಮುಸ್ಸಾದಿಕ್ ಸರ್ಕಾರದ ಪತನ

### ಮಾಜಿ ವಿದೇಶಾಂಗ ಮಂತ್ರಿಯ ಕೊಲೆ

ಪರ್ಷಿಯಾದಲ್ಲಿ ಡಾ|| ಮುಸ್ಸಾದಿಕ್‌ರವರ ನೇತೃತ್ವದಲ್ಲಿ ೨|| ವರ್ಷಗಳ ಹಿಂದೆ ಸ್ಥಾಪಿತವಾಗಿದ್ದ ಸರ್ಕಾರವು ನೆನ್ನೆ ಉರುಳಿತು ಅಲ್ಲಿನ ಷಾ ರವರ ಪರವಾದ ಸೈನ್ಯ ಮತ್ತು ಪೊಲೀಸರು ಮುಸ್ಸಾದಿಕ್ಕರಿಂದ ಅಧಿಕಾರವನ್ನು ಕಿತ್ತುಕೊಂಡರು ಮುಸ್ಸಾದಿಕ್ಕರ ರಾಜಧಾನಿಯನ್ನು ಬಿಟ್ಟು ಪಲಾಯನ ಮಾಡಿದರು ಅವರ ಮನೆಯನ್ನು ಕೊಳ್ಳೆ ಹೊಡೆಯಲಾಯಿತೆಂದು ಹೇಳಲಾಗಿದೆ

ಕಳೆದ ವಾರಾಂತ್ಯದಲ್ಲಿ ಷಾ ರವರು ಡಾ|| ಮುಸ್ಸಾದಿಕ್‌ರನ್ನು ವಜಾ ಮಾಡಲು ಹೋಗಿ ವಿಫಲರಾಗಿದ್ದರು ಸೈನ್ಯ ಸಹಾಯ ...

ನೆನ್ನೆ ದಿನ ಷಾ ಪರ ಪೊಲೀಸ ಸೈನ್ಯ ಪಡೆಯ ... ಜಧಾನಿ ಟೆಹರಾನಿನ ... ಕಟ್ಟಡಗಳು ಮತ್ತು ಕಛೇರಿಗಳನ್ನು ವಶಪಡಿಸಿಕೊಳ್ಳುವ ಕಾರ್ಯದಲ್ಲಿ ಯಶಸ್ವಿಯಾದರು ಮುಸ್ಸಾದಿಕ್ಕರ ಸೈನಿಕರನ್ನೆಲ್ಲಾ ಸೆರೆ ಹಿಡಿಯಲಾಯಿತು ಮುಸ್ಸಾದಿಕ್ಕರು ತಪ್ಪಿಸಿಕೊಂಡು ಹೋಗಿದ್ದು ಕಡೆಗೆ ಸೆರೆ ಸಿಕ್ಕಿರುತ್ತಾರೆ

ಷಾರವರಿಂದ ಪ್ರಧಾನಿಯಾಗಿ ನೇಮಿಸಲ್ಪಟ್ಟಿದ್ದ ಜನರಲ್ ಜಹೇದಿಯವರು ಪ್ರಧಾನಿ ಪಟ್ಟವನ್ನು ವಹಿಸಿಕೊಂಡರು ಮುಸ್ಸಾದಿಕ್ಕರ ಮತ್ತು ಷಾರವರ ಪಕ್ಷಗಳ ನೆನ್ನೆ ಘರ್ಷಣೆಯಾಗಿ ೩೦೦ ಜನರು ಸಾವಿಗೀಡಾದರು ಅಲ್ಲಿನ ರೇಡಿಯೋ ಕೇಂದ್ರವನ್ನು ವಶಪಡಿಸಿಕೊಳ್ಳಲಾಯಿತು ಮುಸ್ಸಾದಿಕ್ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿದ್ದ ಹುಸ್ಸೇನ್ ಫಾತೆಮಿಯವರನ್ನು ಕೊಲೆ ಮಾಡಿ ತುಂಡರಿಸಲಾಯಿತೆಂದು ಹೇಳಲಾಗಿದೆ ರೋಮಿನಲ್ಲಿರುವ ಷಾರವರು ಟೆಹರಾನಿಗೆ ಹಿಂತಿರುಗಬೇಕೆಂದು ಅವರಿಗೆ ಕೇಬಲ್ ಮುಖ್ಯ ಕಳುಹಿಸಲಾಗಿದೆ ಸದ್ಯದಲ್ಲೇ ಅವರು ಪರ್ಷಿಯಕ್ಕೆ ತೆರಳುವರೆಂದು ವರದಿಯಾಗಿದೆ

ಮುಸ್ಸಾದಿಕ್ ಸರ್ಕಾರವು ಉರುಳಿದ ಸುದ್ದಿಯನ್ನು ತಿಳಿದಕೂಡಲೇ ಷಾರವರು ರೋಮಿನಲ್ಲಿ ಪತ್ರಿಕಾ ಸಮ್ಮೇಳನ ನಡೆಸಿ ಟೆಹರಾನಿನಲ್ಲಿ ರಕ್ತ ಪಾತವನ್ನು ತಡೆಗಟ್ಟುವಸಲುವಾಗಿ ತಾವು ತಮ್ಮ ದೇಶಬಿಟ್ಟು ಬಂದುದಾಗಿ ತಿಳಿಸಿದರು ಬ್ರಿಟನ್ ಕೂಡನೆ ಪರ್ಷಿಯನ್ನರ ಭಿನ್ನಾಭಿಪ್ರಾಯವು ಇದ್ದೇ ಇರುವುದಾಗಿಯೂ ಅವರು ಹೇಳಿದರು ಕಳೆದ ಎರಡೂವರೆ ವರ್ಷಗಳಿಂದಲೂ ತಮ್ಮ ವಿರುದ್ಧವಾಗಿ ನಡೆದ ಪ್ರಚಾರಗಳಿಂದ ಪರ್ಷಿಯದ ಪ್ರಜೆಗಳ ಮನಸ್ಸನ್ನು ಕಲುಷಿತ ಮಾಡುವ ಪ್ರಯತ್ನವು ವಿಫಲವಾಯಿತೆಂದು ಅವರು ಹೇಳಿ, ಆ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದರು

ಟೆಹರಾನಿನಲ್ಲಿ ಮಾರ್ಷಲ್‌ಲಾವನ್ನು ಜಾರಿ ಮಾಡಿ, ರಾತ್ರಿ ೮ ರಿಂದ ಬೆಳಗಿನ ಜಾವದ ವರೆಗೆ ಕರ್ಫ್ಯೂವನ್ನು ವಿಧಿಸಲಾಗಿದೆ

ಹೊಸ ಪ್ರಧಾನಿ ಜಹೇದಿಯವರು ಪ್ರಸಾರ ಭಾಷಣ ಮಾಡಿ ಕಾರ್ಮಿಕರಿಗೆ ಹೆಚ್ಚಿನ ವೇತನ ಕೊಡುವುದಾಗಿಯೂ ಮತ್ತು ಬಡವರಿಗೆ ಉ...

## ಕೇಂದ್ರ ಅಧಿಕಾರಿಯ ದಸ್ತಗಿರಿ

ಭಾರತ ಸರ್ಕಾರದ ... ಮತ್ತು ರಫ್ತಿನ ಅಸಿಸ್ಟೆಂಟ್ ಕಂಟ್ರೋಲರ್ ಆದ ರಘುನಾಥ ಶಿವಪುರಿ ಎಂಬುವರು ೫೦೦ ರೂ ಲಂಚ ಪಡೆದ ಅಪಾದನೆಗಾಗಿ ಬೊಂಬಾಯಿಯಲ್ಲಿ ದಸ್ತಗಿರಿಯಾಗಿರುತ್ತಾರೆ ವ್ಯಾಪಾರ ಸಂಸ್ಥೆಗಳಿಗೆ ಅವರು ಸುಳ್ಳು ಸರ್ಟಿಫಿಕೇಟುಗಳನ್ನು ಕೊಟ್ಟು ಹಣ ಪಡೆಯುತ್ತಿದ್ದರೆಂದು ಹೇಳಲಾಗಿದೆ.

### ಸನ್ಯಾಸಿಗಳು ಅಪಾಯದಿಂದ ಪಾರು

ಶೃಂಗೇರಿ ಮಠದ ಛತ್ರದ ಮಹಡಿಯ ಗೋಡೆಯು ನೆನ್ನೆ ಮಧ್ಯ ರಾತ್ರಿ ಆಕಸ್ಮಾತ್ ಉರುಳಿ, ಒಂದು ಕೊಠಡಿಯಲ್ಲಿ ಮಲಗಿದ್ದ ಶ್ರೀ ರಂಗನಾಥನಂದ ಸ್ವಾಮಿಗಳು ಮತ್ತು ಶ್ರೀ ಭವಾನಿ ಸ್ವಾಮಿ ... ಪಕ್ಕದ ನರಸಿಂಹ ವನದಲ್ಲಿ ಹೊಸದಾಗಿದ್ದ ಮಠದ ವಿದ್ಯಾರ್ಥಿಗಳು ಕಾಲು ಟೇಲ್ ಅವರನ್ನು ... ಸಂಸ್ಥಾನದ ಪಾಠಶಾಲೆಗಳ ಪ್ರಬಂಧ ಮಂತ್ರವನ್ನು ಜಪಿಸುತ್ತ ಆ ಸಂಬಂಧ ಮಾಡಿದ್ದರು ಅವರಿಗೆ ಯಾವ ಗಾಯ ಮತ್ತೊಬ್ಬರ ಪೆಟ್ಟು ಮೂಳೆ ಮುರಿದಿದೆ

### ಕಾಫಿ ಹರಾಜಿಗೆ ಬಹಿಷ್ಕಾರ

ನೆನ್ನೆ ರಾಜಧಾನಿಯಲ್ಲಿ ನಡೆದ ಕಾಫಿ ಬೋರ್ಡಿನ ಲಾಟುಗಳ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸದೆ ಹರಾಜಿಗೆ ಬಂದ ಕಾಫಿ ವ್ಯಾಪಾರಿಗಳು ಬಹಿಷ್ಕಾರ ಹಾಕಿದರು ರಿಜಿಸ್ಟರ್ಡ್ ಆದ ಕಾಫಿ ವ್ಯಾಪಾರಿಗಳು ಮತ್ತು ಸಹಕಾರ ಸಂಘಗಳವರ ಬಗ್ಗೆ ಕಾಫಿ ಬೋರ್ಡಿನವರು ತೋರುತ್ತಿರುವ ಪಕ್ಷಪಾತ ನೀತಿಯನ್ನು ಬಹಿಷ್ಕಾರದ ಮೂಲಕ ಪ್ರತಿಭಟಿಸಲಾಯಿತು ೩೦೦ ಟನ್ ಕಾಫಿಗೆ ೩೫ ಟನ್ನು ಕೊಳ್ಳಲ ಮಾತ್ರ ಬಿಂದು ಒಂದು ಕೇವಲ ಐದು ಜನ ವ್ಯಾಪಾರಿಗಳು ಹರಾಜಿನಲ್ಲಿ ಭಾಗವಹಿಸಿದ್ದರು

ಚಿಕಿತ್ಸಾರ್ಥವಾಗಿ ಔಷಧಿಯನ್ನು ಒದಗಿಸುವುದಾಗಿ ಹಾ ಭರವಸೆಯಿತ್ತರು ಪರ್ಷಿಯದ ಎಲ್ಲ ನಗರಗಳೂ ಈಗ ಷಾರವರ ಸೈನಿಕರ ವಶದಲ್ಲಿರುವುದಾಗಿ ಹೇಳಲಾಗಿದೆ

ಷಾರವರ ಪಕ್ಷದವರು ಟೆಹರಾನಿನಲ್ಲಿ ರಷ್ಯದ ಕಮ್ಯೂನಿಸ್ಟರಿಗೆ ಸೇರಿದ ಒಂದು ಸಿನಿಮಾ ಮಂದಿರಕ್ಕೆ ಬೆಂಕಿ ಹಚ್ಚಿ, ಒಂದು ಅಂಗಡಿಯನ್ನು ನಾಶಪಡಿಸಿದರೆಂದು ವರದಿಯಾಗಿದೆ

ಷಾ ಮತ್ತು ಮುಸ್ಸಾದಿಕ್ಕರಿಗೆ ಅಧಿಕಾರದ ಬಗ್ಗೆ ಕಿತ್ತಾಟವು ಹೆಚ್ಚಿ, ಮುಸ್ಸಾದಿಕ್ಕರು ಷಾರ ಅಧಿಕಾರವನ್ನು ಮೊಟಕು ಮಾಡಲು, ತಮ್ಮನ್ನು ಯುದ್ಧ ಮಂತ್ರಿಯಾಗುವಂತೆ ಕೇಳಿದ್ದರು ಅದನ್ನು ಷಾ ಒಪ್ಪದಿದ್ದಾಗ ಮುಸ್ಸಾದಿಕ್ಕರು ರಾಜೀನಾಮೆಯಿತ್ತರು ನಂತರ ಖವಾಂ ಸುಲ್ತಾನರವರು ಕೆಲವು ದಿನ ಪ್ರಧಾನಿಯಾದ ವೇಳೆ, ಮತ್ತೆ ಮಜ್ಲಿಸ್ ಸಭೆಯ ಬೆಂಬಲದಿಂದ ಮುಸ್ಸಾದಿಕ್ಕರು ಅಧಿಕಾರಕ್ಕೆ ಬಂದರು ಷಾರ ಬಗ್ಗೆ ಮತ್ತು ವರಮಾನದ ಮೇಲೆ ಹತೋಟಿ ಹೊಂದಲು ಅವರು ಹಟ ತೊಟ್ಟು, ಷಾ ದೇಶ ಬಿಡುವುದಾಗಿ ತಿಳಿಸಲು ಟೆಹರಾನ್ ಜನರು ಪ್ರದರ್ಶನ ನಡೆಸಿ ಷಾರವರು ಅಲ್ಲಿಯೇ ಇರುವಂತೆ ಪ್ರಾರ್ಥಿಸಲು ಅವರು ನಿಂತರು ಈಗ ಅಲ್ಲಿ ಪರಿಸ್ಥಿತಿಯು ಬದಲಾಯಿಸಿದೆ

## ಪ್ರವಾಹಪೀಡಿತ ಜನರು ಬೆಟ್ಟಕ್ಕೆ

ಗೋದಾವರಿ ಪ್ರವಾಹದ ಹಾವಳಿಯಿಂದ ತಪ್ಪಿಸಿಕೊಳ್ಳಲು ರಾಜಮಹೇಂದ್ರಿ ಮತ್ತು ಇತರ ಹಳ್ಳಿಗಳ ಜನರು ಬೆಟ್ಟಗಳ ಮೇಲೆ ಆಶ್ರಯ ಪಡೆದಿರುತ್ತಾರೆ ಚಳಿ, ಗಾಳಿ, ಮಳೆಗೆ ಸಿಕ್ಕಿ ಅವರ ಗತಿ ಹಸಿದು ನಿಂತಿರುವರೆಂದೂ, ಅವರ ಸ್ಥಿತಿ ವ್ಯಾಕುಲಕರವಾಗಿರುವುದೆಂದೂ ಹೇಳಲಾಗಿದೆ ಪ್ರವಾಹದಲ್ಲಿ ಕೇಲಿಬಂದ ಹುಲಿಯೊಂದನ್ನು ಗುಂಡಿನಿಂದ ಹೊಡೆಯಲಾಯಿತು

### ಮುಷ್ಕರ ತಡೆಗಟ್ಟಲು ಪ್ಯಾರಿಸ್ಸಿನಲ್ಲಿ ಬ್ಯಾಂಕುಗಳ ಓಡಾಟ

ಮುಷ್ಕರ ನಡೆಸುತ್ತಿರುವ ಕಾರ್ಮಿಕರನ್ನು ಕೆಲಸಕ್ಕೆ ಹೋಗದಂತೆ ಹೆದರಿಸುತ್ತಿದ್ದರೆಂಬುದಾಗಿ ಫ್ರಾನ್ಸಿನ ಪ್ರಧಾನಿಯವರ ಪ್ಯಾರಿಸ್ ನಗರದಲ್ಲಿ ಟ್ಯಾಂಕುಗಳ ಪಡೆಯೊಂದನ್ನು ಬಿಟ್ಟಿರುತ್ತಾರೆ ಇದಕ್ಕೆ ಮುಂಚೆ ಮುಷ್ಕರದ ಮುಖಂಡರೊಡನೆ ಪ್ರಧಾನಿಯವರು ಸಂಧಾನ ನಡೆಸುತ್ತಿದ್ದರು

### ಪ್ರವಾಹದ ಪ್ರದೇಶದಲ್ಲಿ ೮ ಅಡಿ ಅಕ್ಕಿಗೆ ೫ ರೂ

ರಾಜಮಹೇಂದ್ರಿ ನಗರದ ಮುಕ್ಕಾಲು ಭಾಗಕ್ಕೆ ಪ್ರವಾಹದ ನೀರು ನುಗ್ಗಿರುತ್ತದೆ ಗೋದಾವರಿ ... ದವಸವನ್ನು ಆಡಿಗೆ ... ಸಾಹುಕಾರರು ... ತಮ್ಮ ಊರಿನಲ್ಲಿ ೫ ರೂ ಗಳಿಗೆ ಮಾರುತ್ತಿರುವರೆಂದು ಹೇಳಲಾಗಿದೆ

### ಬಿ ಎಸ್ ಗೋಪಾಲರಾಯರು ಜೈಲಿಗೆ

ಬೆಂಗಳೂರಿನ ಶ್ರೀ ಬಿ ಎಸ್ ಗೋಪಾಲರಾಯರ ಶಿಕ್ಷೆಯನ್ನು ಅಲ್ಲಿನ ಸೆಷನ್ಸ್ ನ್ಯಾಯಾಧೀಶರು ಖಾಯಂ ಮಾಡಿದ ಮೇಲೆ ಗೋಪಾಲರಾಯರನ್ನು ನೆನ್ನೆ ಜೈಲಿಗೆ ಕಳುಹಿಸಲಾಯಿತು

### ಬೆಂಗಳೂರಿಗೆ ಹೋಗುವ ಪ್ರಯಾಣಿಕರಿಗೆ ತೆರಿಗೆ

ಬೆಂಗಳೂರು ನಗರಕ್ಕೆ ಬರುವ ಪ್ರಯಾಣಿಕರ ಮೇಲೆ ತಲಾ ೨ ಕಾಸಿನಂತೆ ತೆರಿಗೆ ಹಾಕುವಂತೆ ಪೌರಸಭೆಯ ನಿಯಮಾವಳಿಗೆ ತಿದ್ದುಪಡಿ ಮಾಡಬೇಕೆಂದು ಸಭೆಯು ಉಪಕ್ರಮಿಸಿಯು ನಿರ್ಧರಿಸಿರುತ್ತದೆ

### ವಿವಾಹ ಮಹೋತ್ಸವ

ಶಿವಮೊಗ್ಗದಲ್ಲಿರುವ, ಕೂಡಲಿಯ ಜಮೀನ್ದಾರ ಶ್ರೀ ಸೂರ್ಯನಾರಾಯಣಪ್ಪನವರು ತಮ್ಮ ದ್ವಿತೀಯ ಪುತ್ರ ಶ್ರೀ ಶ್ರೀನಿವಾಸರವರಿಗೆ, ನಂಜನಗೂಡಿನ ಲೇಟ್ ವಕೀಲ್ ಶ್ರೀಕಂಠ ಶಾಸ್ತ್ರಿಗಳ ಪುತ್ರರಾದ ವಕೀಲ್ ಶ್ರೀ ಎನ್ ಸೀತಾರಾಮ ಶಾಸ್ತ್ರಿಯವರ ಸಹೋದರ ಶ್ರೀ ಎನ್ ದೊರೆಸ್ವಾಮಿಯವರ ಪುತ್ರಿ ಬಾಲಾಂಬಿಕೆಯನ್ನು ತಂದುಕೊಂಡು ಈ ದಿನ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

### ದಸರಾ ವಸ್ತು ಪ್ರದರ್ಶನ ಸಮಿತಿಗೆ ಹೊಸ ಸದಸ್ಯರು

ಮೈಸೂರು ದಸರಾ ವಸ್ತು ಪ್ರದರ್ಶನ ಸಮಿತಿಗೆ ... ಎ ಆರ್ ನಂಜಯ್ಯ ಎಸ್ ಎಂ ಲಿಂಗಪ್ಪ ... ಶ್ರೀ ಎ ರಾಮಣ್ಣ ಮತ್ತು ಶ್ರೀ ಸಿ ... ಲಕ್ಷ್ಮಣಶೆಟ್ಟಿ ಇವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ

## ಆಲ್ ಇಂಡಿಯಾ ರೇಡಿಯೊ ಅಧಿಕಾರಿಯ ವಜಾ

ಕೇಂದ್ರ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಶಿಫಾರಸಿನಂತೆ ಭಾರತ ಸರ್ಕಾರದವರು ಆಲ್ ಇಂಡಿಯಾ ರೇಡಿಯೋದಿನ ಮಾಜಿ ಡೈರೆಕ್ಟರ್ ಜನರಲ್ ಎಗ್ ಎ ಎಸ್ ಲಕ್ಷ್ಮಣನ್ [illegible] ವಜಾ ಮಾಡಿರುತ್ತಾರೆ ಅವರನ್ನು [illegible] ಹಠಾತ್ತನೆ ಸಸ್ಪೆಂಡ್ ಮಾಡಲಾಗಿ [illegible] ಸಿ ಎಸ್ ದರ್ಜೆಯ ಅಧಿಕಾರಿ [illegible] ಇವರ ಎರಡನೆಯವರು

### ಸ್ವಾತಂತ್ರ್ಯೋತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮಿ ಅಕಾಡೆಮಿ [illegible] ಆರ್ಟ್ಸ್ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ಕಳೆದ ಶನಿವಾರ [illegible] ಸ್ವಾತಂತ್ರ್ಯೋತ್ಸವವನ್ನು [illegible] ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಸಂಗೀತ ಮಂದಿರದ ಬಾಲಿಕೆಯರಿಂದ ದೇವತಾ ಪ್ರಾರ್ಥನೆ ರಾಷ್ಟ್ರೀಯ ಗೀತೆಯಾದ ಮೇಲೆ ಸ್ಥಾಪಕರಾದ ಶ್ರೀ ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿ ಸಂಸ್ಥಾನದ [illegible] ಕೇಂದ್ರ ಸರ್ಕಾರಗಳ ಕಲಾ ಪ್ರೋತ್ಸಾ[illegible] ಅಭಿನಂದಿಸಿ ಮಂದಿರಕ್ಕೆ ಸಾರ್ವಜ[illegible] ಸಹಕಾರಗಳನ್ನು ಕೋರಿ[illegible] ಸ್ವಾತಂತ್ರ್ಯಗೀತೆಯನ್ನು ಹಾಡಿ [illegible] ಮಂದಿರದ ವಿದ್ಯಾರ್ಥಿನಿಯಾದ ಶ್ರೀ [illegible] ಎಸ್ ಕೆ ನಾಗಲಕ್ಷ್ಮಿ ಮತ್ತು ಎಗ್ ವಿಜಯ ರವರಿಂದ ಸಂಗೀತ ಕಛೇರಿ ನಡೆಯಿತು ನಂತರ ಅಧ್ಯಕ್ಷರು ಮಾತನಾಡುತ್ತಾ ಕೊರಿಯಾದಲ್ಲಿ ನಡೆದ ಶಾಂತಿ ಸಂಧಾನದಲ್ಲಿ ಭಾರತದ ಪಾತ್ರ, ಕಾಶ್ಮೀರದ ಬಗ್ಗೆ ಪಾಕಿಸ್ಥಾನ ಮತ್ತು ಭಾರತಗಳ ಸಂಬಂಧದಲ್ಲಿರುವ ತೊಡಕುಗಳನ್ನು ವಿವರಿಸಿದರು ದೇಶದ ಪ್ರಧಾನಿ ನೆಹರುರವರ ದೂರ ದೃಷ್ಟಿ, ಮಾನವೀಯ ಭಾವ [illegible] ಚಾಣಾಕ್ಷತೆ, ಸಮತಾ ಭಾವನೆ [illegible] ವೆಂದು ತಿಳಿಸಿ ಅವರಿಗೆ ಸ[illegible]ಬಲವಾಗಿ ನಿಂತು ವಿಶ್ವ ಶಾಂತಿಗಾ[illegible] ಪುನ[illegible] ಕಾರ್ಯದಲ್ಲಿ [illegible] ಸೇವೆಯನ್ನು [illegible] ಬೇಕೆಂದರು [illegible] ಕಾಪಾಡಿಕೊಳ್ಳಲು ಸಕಲ [illegible] ವನ್ನು ಅರ್ಪಿಸಿ [illegible] ಬೇಕೆಂದರು

### ಭೋಜನ ಕೂಟ

[illegible] ತ್ರೈದಿನೋತ್ಸವಸಮಾರಂಭದ ಅಂಗವಾಗಿ ರಾಜಧಾನಿಯ ಬಾಂಡಿಚಂದ್ರಭವನದ ಮಾಲಿಕರಾದ ಶ್ರೀ ಬದ್ರಿ ಪ್ರಸಾದ್ ರವರು ಸಾರ್ವಜನಿಕ ವಿದ್ಯಾರ್ಥಿ ನಿಲಯದ ಅರವತ್ತೈದು ವಿದ್ಯಾರ್ಥಿಗಳಿಗೆ ಉಚಿತವಾಗಿ ಉತ್ತಮ ಭೋಜನ ಕೂಟವನ್ನೇರ್ಪಡಿಸಿದ್ದರು ಅದಕ್ಕಾಗಿ ನಿಲಯ ದವರು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ

## ಗೋದಾವರಿ ಪ್ರವಾಹದಿಂದ ೧೦ ಲಕ್ಷ ಜನರಿಗೆ ತೊಂದರೆ

ಗೋದಾವರಿಯಲ್ಲಿ ಉಂಟಾದ ಪ್ರವಾಹದಿಂದ ೧೦ ಲಕ್ಷ ಜನರು ಮನೆಮಠಗಳನ್ನು ಕಳೆದುಕೊಂಡು ಪೂರ್ಣ ನಿರ್ಗತಿಕರಾಗಿರುತ್ತಾರೆಂದು ಗೊತ್ತಾಗಿದೆ. ಅನೇಕ ಕೋಟಿ ರೂ.ಗಳಷ್ಟು ನಷ್ಟವಾಗಿರುವುದೆಂದು ಊಹಿಸಲಾಗಿದೆ ರಾಜಮಹೇಂದ್ರಿಯ, ಮುಕ್ಯಾಲು ಭಾಗದಷ್ಟು ಜನಸಂಖ್ಯೆಯುಳ್ಳ ಸುಮಾರು ೨೫ ಸಾವಿರ ಸಂಸಾರದವರು ವ ನೆರವುಗಳನ್ನು ಕಳೆದುಕೊಂಡಿರುತ್ತಾರೆ

## ವಿಷದ ಆಹಾರ ತಿಂದವರಿಗೆ ಹುಚ್ಚು ಹಿಡಿದ ಪ್ರಸಂಗ

ಕಾಟ್ಪಾಡಿಯ ಒಂದು ಅಂಗಡಿಯಲ್ಲಿ ಕೆಂಪು ಜೋಳವನ್ನು ಕೊಂಡು ಅದನ್ನು ಉಪಯೋಗಿಸಿದ ೬ ಸಂಸಾರಗಳಲ್ಲಿ ೨೬ ಜನರಿಗೆ ಬುದ್ಧಿಭ್ರಮಣೆಯುಂಟಾಗಿ ಹುಚ್ಚರಂತೆ ವರ್ತಿಸುತ್ತಿದ್ದರೆಂದೂ ಆ ಆಹಾರವನ್ನು ಸೇವಿಸಿದ ಜನರ್ ಅಂದು ರಾತ್ರಿ ಒಬ್ಬರನ್ನೊಬ್ಬರು ಹೊಡೆದರೆಂದೂ, ಹಲವು ಸ್ತ್ರೀಯರು ಬಟ್ಟೆಗಳನ್ನು ಕಳೆದು ಬೀದಿಗಳಲ್ಲಿ ಓಡಲು ಪ್ರಯತ್ನಿಸಿದರೆಂದೂ, ಅವರೆಲ್ಲರನ್ನೂ ಗಾಡಿಯಲ್ಲಿ ತುಂಬಿಕೊಂಡು ವೆಲ್ಲೂರು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ ಅವರ ಆಹಾರದಲ್ಲಿ ದತ್ತೂರಿ ವಿಷವು ಬೆರೆತಿರಬೇಕೆಂದು ಊಹಿಸಲಾಗಿದೆ ಅವರೆಲ್ಲರೂ ಗುಣವಾಗುತ್ತಿರುವರು

### ಮಹಿಳಾ ಸದನದ ವಾರ್ಷಿಕೋತ್ಸವ

ಮೈಸೂರು ಮಹಿಳಾ ಸದನದ ಹದಿನೈದನೆಯ ವಾರ್ಷಿಕೋತ್ಸವವು ಕಳೆದ ಭಾನುವಾರ ನೆರವೇರಿತು ಚಿಕ್ಕಮಗಳೂರಿನ ಮಹಿಳಾಶ್ರಮದ ಸ್ಥಾಪಕಿಯರೂ, ಅಧ್ಯಕ್ಷಿಣಿಯೂ ಆದ ಶ್ರೀಮತಿ ಇಂದಿರಾಬಾಯಿ ಭಗತ್ ಅವರು ಅಧ್ಯಕ್ಷತೆ ವಹಿಸಿದ್ದರು ವಿದ್ಯಾರ್ಥಿನಿಯರಿಂದ ಪ್ರಾರ್ಥನೆ ನಡೆದ ಬಳಿಕ ಸದನದ ಅಧ್ಯಕ್ಷಿಣಿ ಶ್ರೀಮತಿ ಪಿ ಎಗ್ ತಂಗಮ್ಮನವರು ಶ್ರೀಮತಿ ಇಂದಿರಾಬಾಯಿ ಭಗತ್ ಅವರನ್ನು ಸ್ವಾಗತಿಸಿ ಅವರ ಮತ್ತು ಅವರಿಂದ ಸ್ಥಾಪಿತವಾದ ಚಿಕ್ಕಮಗಳೂರಿನ ಮಹಿಳಾಶ್ರಮದ ಸೇವೆಯ ಪರಿಚಯವನ್ನು ಮಾಡಿಕೊಟ್ಟನಂತರ ವಿದ್ಯಾರ್ಥಿನಿಯರಿಂದ ಸಂಗೀತವು ನಡೆಯಿತು ಕಳೆದ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿಗಳು ಒಪ್ಪಿಸಿದ ಮೇಲೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ೪೬ ಮಂದಿ ವಿದ್ಯಾರ್ಥಿನಿಯರಿಗೆ ಸುಮಾರು ೬೦ ಬಹುಮಾನಗಳನ್ನು ವಿನಿಯೋಗ ಮಾಡಲಾಯಿತು ಮತ್ತೆ ವಿದ್ಯಾರ್ಥಿನಿಯರಿಂದ ವೀಣಾ ವಾದನವಾದ ಮೇಲೆ ಅಧ್ಯಕ್ಷರು ಭಾಷಣ ಮಾಡಿ ಸದನವು ಮಾಡುತ್ತಿರುವ ಸೇವೆಯನ್ನು ಪ್ರಶಂಸಿಸಿ, ಹಲವು ಉಪಯುಕ್ತ ಸಲಹೆಗಳನ್ನಿತ್ತರು ನೃತ್ಯ, ನಾಟಕ ಮತ್ತು ರಾಷ್ಟ್ರ ಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

## ವಿವಾಹ ಮಹೋತ್ಸವಗಳು

ಮೈಸೂರು ೨೦

ರಾಜಧಾನಿಯ ಪ್ರಮುಖ ಕಾಂಗ್ರೆಸ್ ಮುಖಂಡರೂ ವ ತ್ತು ವಕೀಲರೂ ಆದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ತಮ್ಮ ಪುತ್ರಿ ಸೌ॥ ಶಾರದೆಯನ್ನು ಸೆಂಟ್ರಲ್ ಪಿ ಡಬ್ಲ್ಯು ಡಿ ಕಛೇರಿಯ ಸೆಕ್ಷನಲ್ ಆಫೀಸರರಾಗಿದ್ದ ಲೇಟ್ ಎಂ ಎಗ್ ಅನಂತರಾಮಯ್ಯನವರ ಪುತ್ರ ಶ್ರೀ ಎಂ ಎ ಅಶ್ವತ್ಥನಾರಾಯಣರವರಿಗೆ ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು

ಶ್ರೀ ಚಾಮುಂಡೇಶ್ವರಿ ಭವನದ ಮಾಲೀಕರಾದ ಶ್ರೀ ಪಿ ವಿ ರಾಮಯ್ಯರ್ ರವರ ಸಹೋದರರಾದ ಶ್ರೀ ಪಿ ವಿ. ಎ ನಾರಾಯಣ ಅಯ್ಯರ್ ರವರ ಪುತ್ರಿ ಸೌ॥ ಕಾಮಾಕ್ಷಿಯನ್ನು ಮದರಾಸಿನ ಅಕೌಂಟೆಂಟ್ ಜನರಲ್ಲರ ಕಛೇರಿಯಲ್ಲಿ ಆಡಿಟರಾಗಿರುವ ಶ್ರೀ ಸುಂದರೇಶ್ವರರವರಿಗೆ ಕೊಟ್ಟು ಈ ದಿನ ವಿವಾಹವು ಜರುಗಿತು

ವಿಶ್ವವಿದ್ಯಾಲಯದ ನಿವೃತ್ತ ಲೈಬ್ರೇರಿಯನ್ನರಾದ ಡಾ॥ ಎ ಎಗ್ ನರಸಿಂಹಯ್ಯನವರು ತಮ್ಮ ಸಹೋದರ ಲೇಟ್ ಗುಂಡಾಪಂಡಿತರ ಪುತ್ರ ಶ್ರೀ ಎ ಜಿ ನರಸಿಂಹಮೂರ್ತಿಯವರಿಗೆ ರಾಜಸೇವಾ ಪ್ರಸಕ್ತ ಕಂಬಳೆ ಸುಬ್ರಹ್ಮಣ್ಯಅಯ್ಯರ್ ರವರ ಮೊಮ್ಮಗಳು ಸೌ॥ ಕಲಮೇಲುವನ್ನು ತಂದುಕೊಂಡು ಈ ದಿನ ವಿವಾಹವನ್ನು ಜರುಗಿಸಿದರು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ವೆಂಕಟಸುಬ್ಬರಾವ್ [illegible] ೨೦ ರೆಕಾರ್ಡ್ ಸಂಗೀತ ಮಧ್ಯಾಹ್ನ [illegible] ಬೇಲೂರು [illegible] ವಿಚಾರ ಸಂಜೆ [illegible] ಮತ್ತು [illegible] ಕನ್ನಡ ಗೀತೆಗಳು [illegible] ಭಾಗವತರ್ ಸಂಗೀತ [illegible] ಬಕ್ರೀದ್ ಹಬ್ಬ ಕನ್ನಡ ಭಾಷಣ [illegible] ರೆಕಾರ್ಡ್ ಸಂಗೀತ [illegible] ತರಂಗ

### ಅತ್ಯಾಚಾರದ ಆಪಾದನೆ

ರಾಜಧಾನಿಯ ನಜರ್ ಬಾದಿನ ಕೆ ಲೀಲಾಬಾಯಿ ಎಂಬ [illegible] ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದ ಆಪಾದನೆಗೆ ಒಳಗಾಗಿರುವ (ಶ್ರೀ ಅನಂತಸಿಂಗರ ಮಗ) ಕಾಮಸಿಂಗ್ ಎಂಬ ೧೮ ವರ್ಷದ ತರುಣನನ್ನು ನಗರ ನ್ಯಾಯಾಧೀಶರ ಮುಂದೆ ಹಾಜರ್ಪಡಿಸಿ ಜೈಲಿಗೆ ರಿಮ್ಯಾಂಡು ಪಡೆದು ಪೋಲೀಸಿನವರು, ಮುಂದಿನ ತನಿಖೆ ಕ್ರಮ ನಡೆಸುತ್ತಿರುವರು

### ಶಂಕರ ವಿಜಯದ ವಾಚನ

ಶಂಕರಮಠದಲ್ಲಿರುವ ಕುಂಬಳಗಿರ ಶ್ರೀ ರಾಮ ಮಂದಿರದಲ್ಲಿ ಮೈಸೂರಿನ ಗಮಕ ಪ್ರಮೋದರರಾದ ಶ್ರೀ ಬಿ ಎಸ್ ಎಸ್ ಕೌಶಿಕ್ ಮತ್ತು ಶ್ರೀ ಕೆ ವೆಂಕಟಸುಬ್ಬಯ್ಯನವರಿಂದ ಶ್ರೀ ಶಂಕರ ವಿಜಯ ಕಥಾ ವಾಚನವು ನೆನ್ನೆಯಿಂದ ಆರಂಭವಾಗಿ ಪ್ರತಿ ಸಂಜೆ ೬-೪೫ ರಿಂದ ನಡೆಯುವುದು ಭಕ್ತರು ಹಾಜರಿದ್ದು ದಯಮಾಡಿಸಬೇಕಾಗಿ ಕೋರಿದೆ

## ಕರ್ನೂಲಿನಲ್ಲೇ ಆಂಧ್ರದ ಗೌರ್ನರರ ನಿವಾಸ

ಆಂಧ್ರ ಪ್ರಾಂತದ ಗೌರ್ನರರ ನಿವಾಸವು ಕರ್ನೂಲಿನಲ್ಲೇ ಇರುವುದು ಆಂಧ್ರ ಪ್ರಾಂತದ ಸೆಕ್ರೆಟರಿಯಟ್ಟು ಮದ್ರಾಸಿನಿಂದ ಕರ್ನೂಲಿಗೆ ಸೆಪ್ಟೆಂಬರ್ ೧೫ ರಿಂದ ಹೊರಡಲು ಪ್ರಾರಂಭವಾಗುವುದು

## ವಿದ್ಯಾರ್ಥಿ ನಿಲಯಕ್ಕೆ ಸಹಾಯಕ್ಕಾಗಿ ಮನವಿ

ಈಗ್ಗೆ ಕೆಲವು ದಿವಸಗಳ ಹಿಂದೆ ಯಳಂದೂರಿನಲ್ಲಿ ತಾಲ್ಲೂಕು ಮುಖಂಡರುಗಳ ಸಭೆ ಸೇರಿದು, ಮೈಸೂರು ಸಾರ್ವಜನಿಕ ವಿದ್ಯಾರ್ಥಿನಿಲಯದ ಶಾಖೆಯೊಂದನ್ನು ಸ್ಥಾಪಿಸಲು ಒಂದು ಸಮಿತಿ ರಚಿತವಾಗಿ, ಅದು ಈಗಾಗಲೇ ಪೂರ್ವ ಕೆಲಸ ನಡೆಸುತ್ತಿರುವುದು ಈ ಸಂಸ್ಥೆಗೆ ತಾಲ್ಲೂಕಿನ ಜನರು ಧನಧಾನ್ಯದ ರೂಪದಲ್ಲಿ ಸಹಾಯವನ್ನು ಉದಾರವಾಗಿ ನೀಡಬೇಕು ಮತ್ತು ಬಡ ವಿದ್ಯಾರ್ಥಿಗಳ ವಿದ್ಯಾ ಪ್ರಗತಿ ಸುಗಮವಾಗಿ ನಡೆಯಲು ನೆರವಾಗಬೇಕು ಸರ್ಕಾರದವರೂ ಕೂಡ ಈ ಸಂಸ್ಥೆಗೆ ಎಲ್ಲಾ ಉಚಿತ ಸೌಲಭ್ಯಗಳನ್ನೂ ನೀಡುವರೆಂದು ನಂಬಿರುತ್ತೇನೆ. ಎಂಬುದಾಗಿ ಯಳಂದೂರು ತಾಲ್ಲೂಕಿನ ಪ್ರಜಾ ಸಮಾಜವಾದಿ ಪಕ್ಷದ ಶ್ರೀ ಕೆ ಪಿ. ಶಾಂತಮೂರ್ತಿಯವರು ಪತ್ರ ಬರೆದಿರುತ್ತಾರೆ

## ಪ್ರವಾಹದ ಬಿರುಸು ಕಡಿಮೆ

ಸ್ವಂ ಸು] [illegible] ನರಸೀಪುರ ೧೮

ಇಲ್ಲಿ ಹೊಳೆಗಳ ಪ್ರವಾಹದ ಬಿರುಸು ಕಡಿಮೆಯಾಗಿದ್ದರೂ ಮೈಸೂರು ಕಡೆಗೆ ಹೋಗುವ ಒಡ್ಡುಗಳನ್ನು ಬಿಡುತ್ತಿಲ್ಲ ತಿರುಮಕೂಡಲಿನಿಂದ ಎಲ್ಲರನ್ನೂ ಹೊಸ ಊರಿಗೂ, ನರಸೀಪುರಕ್ಕೂ ವರ್ಗಾಯಿಸಲಾಗಿದೆ ಮೋಟಾರುಗಳು ನಂಜನಗೂಡು ಮಾರ್ಗವಾಗಿ ಹೋಗುತ್ತಿವೆ ನೆನ್ನೆ ರಾಜಪ್ರಮುಖರು ಇಲ್ಲಿಗೆ ಭೇಟಿಯಿತ್ತರು ಪ್ರವಾಹದಿಂದ ಯಾವ ಅಪಾಯವೂ ಆಗಿರುವುದಿಲ್ಲ ಕಳೆದ ಸೋಮವಾರ ಬಸ್ಸು ಸ್ಟಾಂಡಿನಲ್ಲೇ ಸಂತೆಯು ನಡೆಯಿತು

### ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಿಂದ | ರೂ ಗೆ |
|---|---|---|
| ಕಡಲೆಕಾಯಿ | ೧೦ ೮ ೦ | ೨೫ ೬ ೦ |
| ಎಳ್ಳು | ೩೦ ೦ ೦ | ೮೦ ೧೨ ೦ |
| ಹುರುಳಿ | ೪೮ ೦ ೦ | ೪೮ ೧೨ ೦ |
| ಹೆಸರು | ೬೨ ೪ ೦ | ೬೪ ೦ ೦ |
| ಕಳಸಂದ | ೫೫ ೨ ೦ | |
| ಕುಸುಬೆ ಹಣ್ಣು | ೬ ೪ ೦ | |
| ತೆಂಗಿನಕಾಯಿ ೧೧೦೦ಕ್ಕೆ | ೧೮೦ ೦ ೦ | ೨೪೩ ೦ ೦ |

SRI GANESHA
TALKIES
Grand Bakrid Attraction
TO DAY AND TO-MORROW
CAVE OF OUTLAWS
(Technicolor)
Featuring – Macdonald Carey
Alexis Smith Edgar Buchanan and
Victor Jory
NEXT CHANGE—
OTHELLO

ಒಲಂಪಿಯಾ ಟಾಕೀಸ್
21 8-53 ರಿಂದ ಅಮೋಘ 2ನೇ ವಾರ
ಪ್ರತಿದಿನ 3 ಆಟಗಳು
★ ಪತಿತಾ ★
ತಾರೆ ಉಷಾಕಿರಣ್ ದೇವಾನಂದ್,
ಆಗ [illegible]

ಚಾಮುಂಡೇಶ್ವರಿ
ಟಾಕೀಸ್
21-8-53 ಅಮೋಘ ಪ್ರಾರಂಭ
ದಿನವೂ ಮೂರು ಆಟಗಳು
ಭರಣಿಯವರ ತೆಲುಗು ಚಿತ್ರ
★ ಪ್ರೇಮ ★
(LOVE)
ಪಾತ್ರ ಭಾನುಮತಿ ನಾಗೇಶ್ವರರಾವ್
ಶ್ರೀರಂಜನಿ (ಜೂನಿಯರ್) ರೇಲಂಗಿ, ಶಿವರಾವ್

ಜೀವವಿಮೆ . .
ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ,
ಮಗುವಿನ ಅವಶ್ಯಕತೆಯೂ ಆಗಿದೆ ..
ಮೈಸೂರು ಸರ್ಕಾರದ ವಿಮಾ ಇಲಾಖೆ
ಅನೇಕ ವರುಷಗಳ ನಂಬಿಕೆ, ಸೇವೆ ಸಹಕಾರ ಕಲ್ಪಿಸಿದೆ
ಪೂರ್ಣ ಭದ್ರತೆ— ಕಡಿಮೆ ಚಂದಾ ಇಡೀ ಭಾರತ
ದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು ! ಅಲ್ಲದೆ
ಕೂಲಿ ಪ್ರೀಮಿಯಂ ದರ ಸುಲಭ ಸಾಲ
ಸೌಕರ್ಯ, ತಡವಿಲ್ಲದ ವಿಮಾ ಮೊಬಲಗಿನ
ಪಾವತಿ ಪ್ರಜೆಗಳ ಶಾಖೆಯಲ್ಲಿ ವಿಮೆ
ಮಾಡಲು ಇಂದೇ ನಿರ್ಧರಿಸಿರಿ
★
ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು

ಪ್ರಭಾ ★ 21 8 53 ರಿಂದ ಅಮೋಘ ಪ್ರಾರಂಭ, ಪ್ರತಿದಿನ 3 ಆಟಗಳು
ಬಕ್ರೀದ್ ಹಬ್ಬದ ವಿಶೇಷ ಆಕರ್ಷಣೆ
ಬಕ್ಷಿ ಪ್ರೊಡಕ್ಷನ್ಸ್ ರವರ ಹೃದಯಾಕರ್ಷಣೀಯ
ಸಂಗೀತದಿಂದ ಕೂಡಿದ ಭವ್ಯ ಸಾಮಾಜಿಕ ಹಿಂದಿ ಚಿತ್ರ
★ ನಯಾ ಘರ್ ★
ತಾರೆ [illegible] ಮೀನಾಕುಮಾರಿ [illegible] ಮತ್ತು ಜಗದೀಪ್
ಸಂಗೀತ – ಶಂಕರ್ ಜೈಕಿಷನ್
[illegible] 21-8-53 ರಿಂದ ಮೂರು ದಿನಗಳು
ನರ್ಗೀಸ್, ರಾಜ್ ಕಪೂರ್, [illegible] ನಟಿಸಿರುವ ' ಆಗ್ '

Edited, Printed and Published by A. R Nagarajan at Sadhvi Press, D.Subbiah Road Mysore

ರಿಜಿಸ್ಟರ್ ನಂ. 792 || ವಂದೇ ಮಾತರಂ || ಅಂಚೆಯ ಪತ್ರಿಕೆ ತಿಂಗಳು

BOMBAY
ANANDA BHAVAN
The Rate of Coffee
Has been Reduced
to Re. 0-1-6
Public Patronage
Earnestly Solicited

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE FRIDAY 21-8-1953 : ಮೈಸೂರು ಶುಕ್ರವಾರ ೨೧-೮-೧೯೫೩ [ ಸಂಚಿಕೆ ೨೦

# ...ಳರಲ್ಲಿ ಕಾಶ್ಮೀರದ ಜನಮತಗಣನೆ ಅಧಿಕಾರಿ ನೇಮಕ

## ನೇಣು ಹಾಕಿಕೊಂಡು ವಿದ್ಯಾರ್ಥಿಯ ಆತ್ಮಹತ್ಯೆ

ಮೈಸೂರು ೨೦

...ಲ್ಲಿನ ಕೃಷ್ಣ ಕಾಲೊನಿಯಲ್ಲಿರುವ ಆಡಿಟ್ ...ಯ ಗುಮಾಸ್ತೆ ಶ್ರೀ ಗುರುವ ಅರ್ತಿಯವ... ಗ ಸುಮಾರು ೧೬ ವರ್ಷ ವಯಸ್ಸಿನ ಕಂ... ಎಂಬ ಹೈಸ್ಕೂಲು ವಿದ್ಯಾರ್ಥಿಯು ಕಳೆ... ಬುಧವಾರ ಸಂಜೆ ಮನೆ ಕೊಠಡಿಯಲ್ಲಿ ಕೊ... ಹಗ್ಗದಿಂದ ನೇಣು ಹಾಕಿಕೊಂಡು ಮೃ...ತ್ಯುವಾಗಿ ವರದಿಯಾಗಿದೆ ನಾಲ್ಕೈದು ದಿ... ತಂದೆ ಬಾಲಕನು ತಂದೆಯ ಕೈ ಗಡಿಯಾ...ರವನ್ನು ಕದ್ದು ಯಾರಿಗೋ ಮಾರಿದ್ದನೆಂದು ... ಯವರು ಅವನನ್ನು ಗದರಿಸಿದ್ದರು ... ನಡೆದಾಗ ಅವನ ಮಾತಾಪಿತೃಗಳು ವ...ಲ್ಲಿರಲಿಲ್ಲವೆಂದು ಹೇಳಲಾಗಿದೆ

...ತಿ ಮತ್ತು ಗಜಲಕ್ಷ್ಮಿ ಅಲಂಕಾರ ರಾಜಧಾನಿಯ ಮಂಡಿ ಮೊಹಲ್ಲಾ ಕಾಳ... ಗುಡಿ ಬೀದಿಯ ಚಾಮುಂಡೇಶ್ವರಿ ದೇವಸ್ಥಾ... ಈ ದಿನ ವರಮಹಾಲಕ್ಷ್ಮಿ ವ್ರತದ ಪ್ರ... ಸಂಜೆ ೭ ಗಂಟೆಗೆ ಶ್ರೀ ಗುರುರಾಜ ... ರವರಿಂದ ನಲ್ಲತಂಗ ಎಂಬ ಕಥೆ ... ನವರಿಗೆ ಗಜಲಕ್ಷ್ಮಿ ಅಲಂಕಾರವೂ ನ...ಡಾಗಿದೆ ನಾಳೆ ವ ಧ್ಯಾಹ್ನ ೩ ಗಂಟೆಗೆ ... ಬಿ ಎಸ್ ಎಂ ಕೌಶಿಕ್ ಮತ್ತು ತಿ...ಕಟ ಸುಬ್ಬಯ್ಯನವರಿಂದ ಶನಿ ಮಹಾತ್ಮೆ ಪು...ರಾಣವು ಇದೆ

...ವ್ಯದ ತಂತಿ ಕಳುವಿಗಾಗಿ ಬಂಧನ ...ವಿದ್ಯುಚ್ಛಕ್ತಿ ಇಲಾಖೆಯ ತಂತಿಯನ್ನು ಕ...ಂಬ ಆಪಾದನೆ ಮೇಲೆ ರಂಗ ಎಂಬವನ... ಒಂಟಿಕೊಪ್ಪಲು ಪೊಲೀಸರು ದಸ್ತಗಿರಿ ...ದ, ಅವನ ಮೇಲೆ ಮೊಕದ್ದಮೆ ರಿಜಿಸ್ಟರ್ ...ಮಾಡಿಕೊಂಡಿರುತ್ತಾರೆ ಅವನ ಬಳಿ ಇದ್ದ ...೦ ಅಡಿ ತಂತಿಯನ್ನು ವಶಪಡಿಸಿಕೊಳ್ಳ...ಲಾಗಿದೆ

## ಹೆಂಗಸಿನ ತಲೆ ಕಡಿದು ಮಾರಿಗೆ ಅರ್ಪಣೆ

...ಕೋಡು ಬಳಿ ಕೊಮಾರ ಪಾಳಯಂನಲ್ಲಿ ...ಯಂ ಚುಕಲಿ ಎಂಬುವನು ಕಳೆದ ೧೫ ...ರಂದು ತನ್ನ ರಖಾವುದಾರಳಾದ ೨೫ ವರ್ಷ ...ದ ...ಚಿಪ್ಪಾಯಿ ಎಂಬಾಕೆಯನ್ನು ಕೊಂದು ಆಕೆ ...ತಲೆಯನ್ನು ಕತ್ತರಿಸಿ, ಮಾರಮ್ಮನಿಗೆ ಅ...ರ್ಪಣೆ ಮಾಡಿದುದಾಗಿಯೂ, ಅವನನ್ನು ಪೊ...ಲೀಸರು ಬಂಧಿಸಿರುವರೆಂದೂ ವರದಿಯಾಗಿದೆ ...ಯು ಅಪಾದಿತನೊಡನೆ ಕಳೆದ ೫ ವರ್ಷಗ...ಳಿಂದಲೂ ಅಕ್ರಮ ಸಂಬಂಧವನ್ನು ಇಟ್ಟುಕೊಂ...ಡಿದ್ದು, ಇತ್ತೀಚೆಗೆ ಅವರಿಬ್ಬರಲ್ಲೂ ವ್ಯಾಜ್ಯವಾ...ಗಿತ್ತೆಂದೂ, ೧೫ ನೇ ತಾ|| ಅವಳು ನೀರನ್ನು ...ಹೊತ್ತುಕೊಂಡು ಮನೆಗೆ ಹೋಗುತ್ತಿದ್ದಾಗ ಅ...ವರಿಬ್ಬರಿಗೂ ಪುನಃ ಜಗಳವಾಗಿ ದುರಂತದಲ್ಲಿ ...ವಸಾನವಾಯಿತೆಂದೂ ಹೇಳಲಾಗಿದೆ

...ಗೆ ಸಿಕ್ಕಿ ಪೋಸ್ಟ್ ದರ ಮರಣ ...ಡಪ ಕೃಷ್ಣ ನಿಲಯದ ಖಾಸಿಂ ಎಂಬ ...ವರ್ಷದ ಪೋರ್ಟರನು ಕಳೆದ ೭ ತಾರಾ...ಪ್ಲಾಟ್‌ಫಾರಮ್ಮಿನಲ್ಲಿ ಚಲಿಸುತ್ತಿದ್ದ ...ವನ್ನು ಹತ್ತಲು ಹೋಗಿ, ಅಕಸ್ಮಾತ್ ಕೈ ತ...ಪ್ಪಿ ಬಿದ್ದು ರೈಲಿನ ಚಕ್ರಕ್ಕೆ ಸಿಕ್ಕಿ ಮೃತಪಟ್ಟ...ನು ವರದಿಯಾಗಿದೆ

## ಟೆಹರಾನಿನಲ್ಲಿ ಬೆಂಕಿ, ಲೂಟಿ ಕೊಲೆ ಪ್ರಕರಣಗಳು

ಮುಸ್ಸಾದಿಕ್‌ರವರ ಪರವಾಗಿದ್ದ ಬಕ್ತಾರ್ ಇವೆಸ್ತ್ರೋಜ್ ಪತ್ರಿಕೆ ಮತ್ತು ಇತರ ನಾಲ್ಕು ಪತ್ರಿಕಾ ಕಛೇರಿಗಳ ಮೇಲೆ ಮೊನ್ನೆ ಷಹನ ಪರ ಪಕ್ಷದ ಜನಸಂಘ ದಾಳಿ ಮಾಡಿ ಅವನ್ನು ನಾಶಪಡಿಸಿದರು ಇವೆಸ್ತ್ರೋಜ್ ಪತ್ರಿಕೆ ಕಛೇರಿಗೂ, ಪಾರ್ ಇರಾನ್ ಕ್ಲಬ್ಬಿಗೂ ಬೆಂಕಿ ಹತ್ತಿಸಲಾಯಿತು ಕಮ್ಯೂನಿಸ್ಟರ ಚಟುವಟಿಕೆ ನಡೆಸುತ್ತಿದ್ದ ಶಾಂತಿ ಮತ್ತು ಇತರ ಕಛೇರಿಗಳಿಗೂ ಬೆಂಕಿ ಹಾಕಲಾಯಿತು ಷಹರ ಗುಂಪು ಒಂದು ಖಾಸಗಿ ಪ್ರದರ್ಶನ ಉಯಕ್ಕೆ ನ...ಗ್ಗಿ ಅಲ್ಲಿದ್ದ ಮುಸ್ಸಾದಿಕ್ಕರ ಪ್ರತಿಮೆಯನ್ನು ಒಡೆಯುವ ಆತುರದಲ್ಲಿ ಷಹಾರವರ ಪ್ರತಿಮೆಯನ್ನು ಒಡೆದರು ಈ ಆತುರದ ವಸ್ತು ಪರಿಹರಿಸಲು ಆ ವಿಗ್ರಹವನ್ನು ಎತ್ತಿ ಪ್ರದರ್ಶನ ಮಾಡಲಾಯಿತು

ಮುಸ್ಸಾದಿಕ್ ಸರ್ಕಾರದವರೆಲ್ಲರೂ ಬಂಧಿತರಾಗಿರುವರು ಅಜರ್‌ಬೈಜಾನ್ ಪ್ರಾಂತದ ಎಲ್ಲ ನಗರಗಳೂ ಷಹಾರವರ ಸ್ವಾಧೀನವಾಗಿವೆ ಮುಸ್ಸಾದಿಕ್‌ರವರ ಪರವಾಗಿದ್ದ ಇಸ್ಪಹಾನ್ ಕೈಗಾರಿಕಾ ನಗರವೂ ಷಹಾರ ವಶಕ್ಕೆ ಹೋಗಿದೆ.

ಮುಸ್ಸಾದಿಕ್ಕರ ಅನೇಕ ಬಂಧು ಮಿತ್ರರ ಮನೆಗಳ ಲೂಟಿಯಾಗಿದೆ

## ಕರ್ನಾಟಕ ಪ್ರಾಂತ ರಚನೆಗಾಗಿ ಪಾರ್ಲಿಮೆಂಟಿನಲ್ಲಿ ಒತ್ತಾಯ

ಪಾರ್ಲಿಮೆಂಟಿನಲ್ಲಿ ಮೊನ್ನೆ ಆಂಧ್ರದ ಮಸೂದೆ ವಿಷಯವಾಗಿ ಮಾತನಾಡುತ್ತಾ, ಮೈಸೂರಿನ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಕರ್ನಾಟಕ ಪ್ರಾಂತದ ಬೇಡಿಕೆಯನ್ನು ಭಾರತ ಸರ್ಕಾರದವರು ಪೂರೈಸಬೇಕೆಂದು ತಿಳಿಸಿದರು ಕರ್ನಾಟಕ ಪ್ರಾಂತ ಚಳುವಳಿಯಲ್ಲಿ ಭಾಗವಹಿಸಿದ ಅನೇಕರನ್ನು ಬಂಧಿಸಲಾಗಿರುವುದೆಂದೂ, ಚಳುವಳಿಯ ಪ್ರಾಮುಖ್ಯತೆಯನ್ನು ಪರಿಗಣಿಸಲಾಗಿಲ್ಲವೆಂದೂ, ಬೇಡಿಕೆಯನ್ನು ಒಪ್ಪಿ ಸರ್ಕಾರದವರು ಶೀಘ್ರದಲ್ಲೇ ಘೋಷಣೆ ಮಾಡದಿದ್ದಲ್ಲಿ ಕರ್ನಾಟಕದಲ್ಲಿ ಚಳುವಳಿಯನ್ನು ತಡೆಯಲು ಸಾಧ್ಯವಿಲ್ಲವೆಂದೂ ಅವರು ತಿಳಿಸಿದರು

## ಬೊಂಬಾಯಿಯಲ್ಲಿ ತೀವ್ರ ನಿರುದ್ಯೋಗ

ವಿದ್ಯಾವಂತ ಸ್ತ್ರೀ ಪುರುಷ ನಿರುದ್ಯೋಗಿಗಳ ಸಮಸ್ಯೆಯು ಬೊಂಬಾಯಿಯಲ್ಲಿ ತೀವ್ರವಾಗಿರುವುದೆಂದೂ, ಉದ್ಯೋಗ ವಿನಿಮಯ ಸಂಸ್ಥೆಯವರು ಏನು ಮಾಡಲೂ ಸಾಧ್ಯವಿಲ್ಲದಂತಹ ಪರಿಸ್ಥಿತಿ ಒದಗಿರುವುದೆಂದೂ ಹೇಳಲಾಗಿದೆ

### "ಕಾಮುಕಲಾ" ಅಪೀಲಿನಲ್ಲಿ ಶಿಕ್ಷೆ ವಜಾ ದಂಡ ವಾಯಿದೆ

ಬೆಂಗಳೂರಿನ ಕಾಮುಕಲಾ ಪತ್ರಿಕೆಯ ಸಂಪಾದಕ ಶ್ರೀ ಎಂ ರಾಮಮೂರ್ತಿಯವರಿಗೆ ವಿಧಿಸಲಾಗಿದ್ದ ಮೂರು ತಿಂಗಳು ಕಠಿಣ ಸಜಾ ಮತ್ತು ೨೦೦ ರೂ ಗಳ ದಂಡದ ಶಿಕ್ಷೆ ವಿರುದ್ಧವಾಗಿ ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಹೂಡಲಾಗಿ ನೆನ್ನೆ ನ್ಯಾಯಾಧೀಶರು ಸಜಾವನ್ನು ರದ್ದು ಮಾಡಿ, ದಂಡವನ್ನು ಖಾಯಂಗೊಳಿಸಿದರು

## ಮುಸ್ಸಾದಿಕ್‌ರವರ ವಿಚಾರಣೆ

### ಟೆಹರಾನಿಗೆ ಇಂದು ಷಹಾ ಆಗಮನ

ಪರ್ಷಿಯಾದ ಪ್ರಧಾನಿಯಾಗಿದ್ದ ಡಾ|| ಮುಸ್ಸಾದಿಕ್ಕರು ತಮ್ಮ ಭವನದಿಂದ ತಪ್ಪಿಸಿಕೊಂಡು ಓಡಿದಾಗ ಅವರನ್ನು ಸಿ ಐ ಡಿ.ಗಳು ದಸ್ತಗಿರಿ ಮಾಡಿದರೆಂದು ಹೇಳಲಾಗಿದೆ. ಮುಸ್ಸಾದಿಕ್ಕರ ಪ್ರಾಣವನ್ನು ಉಳಿಸಿ, ಅವರನ್ನು ಸಾರ್ವಜನಿಕ ವಿಚಾರಣೆಗೆ ಗುರಿ ಪಡಿಸುವಂತೆ ಜಹೇದಿಯವರಿಗೆ ಷಹಾರವರು ಸೂಚಿಸಿದ್ದರೆಂದೂ, ಅದೇ ರೀತಿ ಕ್ರಮ ಜರುಗಿಸಲಾಗುವುದೆಂದೂ ಗೊತ್ತಾಗಿದೆ

ಮುಸ್ಸಾದಿಕ್ಕರ ಜೊತೆಗೆ ಮಜ್ಲಿಸ್ ಸಭೆಯ ಮಾಜಿ ಅಧ್ಯಕ್ಷ ಅಬ್ದುಲ್ಲಾ ಮುಜಾಹಿ, ಒಳಾಡಳಿತ ಮಂತ್ರಿ ಡಾ|| ಗುಲಾಂ ಹುಸೇನ್ ಸಿದಿಕಿ ಮತ್ತು ಎಣ್ಣೆ ರಾಷ್ಟ್ರೀಕರಣ ಸಮಿತಿ ಸದಸ್ಯ ಡಾ|| ಸೈಯದ್ ಅಲಿ ಷಾಯಿ ಗಾರದವರೂ ದಸ್ತಗಿರಿಯಾಗಿರುವರು

ಟೆಹರಾನಿನಲ್ಲಿ ಅಲ್ಲಲ್ಲೇ ಷಹಾ ಮತ್ತು ಮುಸ್ಸಾದಿಕ್ ಪಕ್ಷಗಳಿಗೆ ಘರ್ಷಣೆಯಾಗಿ ಒಂದು ಕಡೆ ಇಬ್ಬರು ಮುಸ್ಸಾದಿಕ್ ಪಕ್ಷದವರು ಘೋಷಣೆಗಳನ್ನು ಮಾಡುತ್ತಿದ್ದಾಗ, ಎದುರು ಪಕ್ಷದವರು ಅವರನ್ನು ಆಕ್ರಮಿಸಿ ಕೊಲೆ ಮಾಡಿದರೆಂದು ವರದಿಯಾಗಿದೆ ಷಹಾರವರು ಈ ದಿನ ಟೆಹರಾನಿಗೆ ಹಿಂತಿರುಗುವರೆಂದು ಪ್ರಧಾನಿ ಜಹೇದಿಯವರು ಹೇಳುವರು

ಹೊಸ ಸರ್ಕಾರವು ಆಜ್ಞೆಯೊಂದನ್ನು ಹೊರಡಿಸಿ, ಷಹಾರವರ ಭಾವಚಿತ್ರಗಳನ್ನು ತೆಗೆದು ಹಾಕಿದ ಸ್ಥಳಗಳಲ್ಲೆಲ್ಲಾ ಪುನಃ ಅವನ್ನು ಇಡುವಂತೆ ಸೂಚಿಸಿರುತ್ತಾರೆ

## ರಷ್ಯದಲ್ಲಿ ಜಲಜನಕ ಬಾಂಬಿನ ಸಿಡಿತ

ರಷ್ಯದಲ್ಲಿ ತಯಾರಾದ ಜಲಜನಕ ಬಾಂಬಿನ ಪ್ರಯೋಗಾರ್ಥ ಸಿಡಿತವು ಕಳೆದ ೧೨ನೇ ತಾ|| ನಡೆಯಿತೆಂದೂ ಅದು ಯಶಸ್ವಿಯಾಗಿ, ಅಣು ಬಾಂಬಿಗಿಂತಲೂ ಅನೇಕ ಬಾರಿ ಪ್ರಭಾವಪೂರಿತವಾಗಿದ್ದಿತೆಂದೂ ಮಾಸ್ಕೋವಿನ ಪ್ರಾವ್ಡಾ ಪತ್ರಿಕೆಯು ತಿಳಿಸಿರುತ್ತದೆ ಜಲಜನಕ ಬಾಂಬಿನಲ್ಲಿರುವ ಧನ್ಯಾ ನ್ಯೂಕ್ಲಿಯಸ್ ಧಾತುವಿನ ಪ್ರಚಂಡ ಶಕ್ತಿಯು ಬಲವಾದ ಆಸ್ಫೋಟನೆಗೆ ಕಾರಣವಾಯಿತು

## ಮತಾಂತರ ಕಾರ್ಯಕ್ಕೆ ಕೇಂದ್ರ ಸರ್ಕಾರದ ಅಸಮ್ಮತಿ

ವಿದೇಶೀ ಪಾದ್ರಿಗಳು ಭಾರತದಲ್ಲಿ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಮೊದಲಾದ ಸಮಾಜ ಸೇವಾ ಕಾರ್ಯದಲ್ಲಿ ತೊಡಗಲು ಅಡ್ಡಿಯಿಲ್ಲವೆಂದೂ ಆದರೆ ಅವರ ಕೈಗೊಳ್ಳುವ ಮತಾಂತರ ಕ್ರಮಗಳನ್ನು ಭಾರತ ಸರ್ಕಾರದವರು ಪುರಸ್ಕರಿಸುವುದಿಲ್ಲವೆಂದೂ ತಿಳಿಸಲಾಗಿದೆ ವಿದೇಶೀಯರ ಮತ ಪ್ರಚಾರದ ಬಗ್ಗೆ ಯಾವ ಆತಂಕವೂ ಇರುವುದಿಲ್ಲ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಮತಾಂತರ ಕಾರ್ಯವು ನಡೆಯುತ್ತಿಲ್ಲವೆಂದೂ, ಹಿಂದೆ ಮತಾಂತರ ಹೊಂದಿದ ಅನೇಕ ಆದಿವಾಸಿಗಳು ಮತ್ತು ಕಾಡು ಜನರೂ, ಈಗ ಅವರಿಗೆ ವಿದ್ಯಾರ್ಥಿ ವೇತನ ಮತ್ತು ನೌಕರಿಗಳಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿರುವುದರಿಂದ, ಹಿಂದಿನ ಧರ್ಮಕ್ಕೆ ಮರಳುತ್ತಿರುವರೆಂದೂ ಹೇಳಲಾಗಿದೆ

## ...ಳರಲ್ಲಿ ಕಾಶ್ಮೀರದಲ್ಲಿ ಜನಮತ ಗಣನೆ ಅಧಿಕಾರಿ ನೇಮಕ

### ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳ ಜಂಟಿ ಹೇಳಿಕೆ

ಪಾಕಿಸ್ತಾನ ಮತ್ತು ಭಾರತದ ಪ್ರಧಾನಿಗಳ ಜಂಟಿ ಹೇಳಿಕೆಯೊಂದು ನೆನ್ನೆ ಪ್ರಕಟವಾಗಿ ೧೯೫೪ನೇ ಏಪ್ರಿಲ್ ತಿಂಗಳು ಮುಕ್ತಾಯವಾಗುವುದರೊಳಗೆ ಕಾಶ್ಮೀರದ ಜನಮತ ಗಣನೆ ಅಧಿಕಾರಿಯನ್ನು ನೇಮಿಸಬೇಕೆಂದು ನಿರ್ಧಾರವಾಗಿರುವುದಾಗಿ ತಿಳಿಸಲಾಗಿದೆ ಜಮ್ಮು ಮತ್ತು ಕಾಶ್ಮೀರ ಸರ್ಕಾರದವರು ಆ ಅಧಿಕಾರಿಯನ್ನು ವಿಧಿ ಪೂರ್ವಕವಾಗಿ ನೇಮಿಸಿ, ಅವರನ್ನು ಕೆಲಸದ ಮೇಲೆ ನಿಯೋಜಿಸುವಂತೆ ನಿರ್ಧಾರವಾಗಿದೆ ಸದರಿ ಅಧಿಕಾರಿಯು ಇದೇ ಸಂಸ್ಥಾನದಲ್ಲಿ ನಿಷ್ಪಕ್ಷಪಾತವಾದ ಜನಮತ ಗಣನೆಗೆ ಸೂಕ್ತ ಸಲಹೆಯನ್ನು ಕೊಡುವರೆಂದು ಹೇಳಲಾಗಿದೆ.

ನಾರ್ವೆ, ಸ್ವೀಡನ್ ಅಥವಾ ಯೂರೋಪು ಇನ್ನಿತರ ತಾಟಸ್ಥ್ಯ ರಾಷ್ಟ್ರವೊಂದರ ಮನುಷ್ಯನನ್ನು ಜನಮತ ಗಣನೆ ಅಧಿಕಾರಿಯಾಗಿ ಮಾಡಬೇಕೆಂದು ನೆಹರೂರವರು ಅಭಿಪ್ರಾಯ ಹೊಂದಿರುವರೆಂದು ತಿಳಿದುಬಂದಿದೆ

## ಫ್ರೆಂಚರಿಂದ ಮೊರಾಕೊ ಸುಲ್ತಾನರ ಪದಚ್ಯುತಿ

ಉತ್ತರ ಆಫ್ರಿಕದಲ್ಲಿರುವ ಫ್ರೆಂಚ್ ಮೊರಾಕೊವಿನಲ್ಲಿರುವ ಸುಲ್ತಾನರನ್ನು ಫ್ರೆಂಚ್ ಸರ್ಕಾರದವರು ನೆನ್ನೆ ಗದ್ದುಗೆಯಿಂದ ಇಳಿಸಿ ಅವರನ್ನೂ ಅವರ ಇಬ್ಬರು ಗಂಡು ಮಕ್ಕಳನ್ನೂ ದೇಶ ಭ್ರಷ್ಟರನ್ನಾಗಿ ಮಾಡಿದರು ಅವರನ್ನು ಮೆಡಿಟರೇನಿಯನ್ ಸಮುದ್ರದಲ್ಲಿರುವ ಫ್ರೆಂಚರ ದ್ವೀಪವಾದ ಕಾರ್ಸಿಕದಲ್ಲಿ ಇಡಲಾಗುವುದೆಂದು ಹೇಳಲಾಗಿದೆ

## ಶಾಲೆಗೆ ಹೋಗಿ ಉಪಾಧ್ಯಾಯರನ್ನು ಹೊಡೆದುದಕ್ಕೆ ಶಿಕ್ಷೆ

ತಿರುಪನಂತಪುರದ ಬಳಿ ವೆಂಕಟಾಲಂ ಎಂಬಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯನೊಬ್ಬನು ಒಬ್ಬ ಬಾಲಕನನ್ನು ಹೊಡೆದುದಕ್ಕಾಗಿ, ಅವನ ತಂದೆ ಗೋಪಾಲಪಿಳ್ಳೆ ಎಂಬುವನು ಶಾಲೆಗೆ ಹೋಗಿ ಪಾಠ ಹೇಳುತ್ತಿದ್ದ ಉಪಾಧ್ಯಾಯನನ್ನು ಬಲವಾಗಿ ಹೊಡೆದನೆಂದು ಸದರಿ ಗೋಪಾಲಪಿಳ್ಳೆಯನ್ನು ತಿರುವಾಂಕೂರಿನ ಸೆಷನ್ಸ್ ನ್ಯಾಯಾಧೀಶರು ೧೮ ತಿಂಗಳು ಕಠಿಣ ಸಜಾ ಮತ್ತು ೨೦೦ ರೂ ದಂಡದ ಶಿಕ್ಷೆಗೆ ಗುರಿಪಡಿಸಿರುತ್ತಾರೆ. ತರಗತಿಯು ನಡೆಯುತ್ತಿದ್ದಾಗ ಶಾಲೆಯೊಳಗೆ ಪ್ರವೇಶಿಸಿದುದಕ್ಕಾಗಿ ಮತ್ತೆ ೩ ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

## ದೊಣ್ಣೆಯಿಂದ ಕೊಲೆ ಮಾಡಿದುದಕ್ಕಾಗಿ ೩ ವರ್ಷ ಸಜಾ

ಕೃಷ್ಣರಾಜನಗರದ ತಾಲ್ಲೂಕು ಹೊಸಕೊಪ್ಪಲು ಗ್ರಾಮದ ಬಸವಲಿಂಗಯ್ಯ ಎಂಬುವನು ತನ್ನ ನೆಂಟನಾದ ವೀರಭದ್ರಯ್ಯ ಎಂಬುವನನ್ನು ದೊಣ್ಣೆಯಿಂದ ಹೊಡೆದುದರಿಂದ ಅವನು ಮಡಿದನೆಂಬ ಕಾರಣಕ್ಕಾಗಿ ಸದರಿ ಬಸವಲಿಂಗಯ್ಯನಿಗೆ ಮೊನ್ನೆ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ೩ ವರ್ಷ ಕಠಿಣ ಸಜಾವನ್ನು ವಿಧಿಸಿದರು

## ಗೋವಧೆ ವಿರುದ್ಧವಾಗಿ ಬರ್ಮಾ ಪ್ರಧಾನಿಯ ಉಪವಾಸ

ಬರ್ಮಾ ಪ್ರಧಾನಿ ಥಕಿನ್ ನುರವರು ಮೊನ್ನೆಯಿಂದ ಉಪವಾಸವನ್ನು ಆರಂಭಿಸುತ್ತಾರೆ ಗೋವಧೆ ಸಮಸ್ಯೆಯು ಪರಿಹಾರಕ್ಕಾಗಿ ಉಪವಾಸವನ್ನು ಅವರು ಕೈಗೊಂಡಿರುತ್ತಾರೆ ಬೌದ್ಧರು ಗೋವಧೆಯು ನಿಲ್ಲುವ ತೆ ಒತ್ತಾಯ ಪಡಿಸುತ್ತಿರುವರು

## ಆಲ್ ಇಂಡಿಯಾ ರೇಡಿಯೋದಲ್ಲಿ ಕಾಶ್ಮೀರ ರೇಡಿಯೋ ಐಕ್ಯ

ಭಾರತದ ರೇಡಿಯೋ ವ್ಯವಸ್ಥೆಯಲ್ಲಿ ಕಾಶ್ಮೀರದ ರೇಡಿಯೋವನ್ನು ಐಕ್ಯಗೊಳಿಸಲು ಕಾಶ್ಮೀರ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಿರುವರೆಂದು ವರದಿಯಾಗಿದೆ

### ಕಡೂರಿನಲ್ಲಿ ರಾಘವೇಂದ್ರ ಸ್ವಾಮಿಗಳ ಆ ರಾ ಧ ನೆ

ಕಡೂರಿನಲ್ಲಿರುವ ಶ್ರೀ ರಾಘವೇಂದ್ರಸ್ವಾಮಿಗಳವರ ಮಂದಿರದಲ್ಲಿ ಇದೇ ೨೫ನೇ ತಾ॥ ನಿಂದ ೨೮ರ ವರೆಗೆ ಗುರುಗಳ ೨೮೩ನೇ ಆರಾಧನಾ ಮಹೋತ್ಸವವು ನಡೆಯುವುದು ಈ ಸಂದರ್ಭದಲ್ಲಿ ಹರಿ ಕೀರ್ತನೆ ವಿವಾಹ ಉಪನಯನ ಮುಂತಾದ ಶುಭ ಕಾರ್ಯಗಳಿಗೂ ಅವಕಾಶವಿರುವುದೆಂದು ಮಂದಿರದ ವ್ಯವಸ್ಥಾಪಕರಾದ ಶ್ರೀ ಟಿ ಲಕ್ಷ್ಮೀನಾರಾಯಣರಾಯರು ತಿಳಿಸುತ್ತಾರೆ

### ಆಯವ್ಯಯ ಪಟ್ಟಿ ಬಗ್ಗೆ ಟೌನ್ ಪೌರಸಭೆಗಳಿಗೆ ಸೂಚನೆ

ಸಂಸ್ಥಾನದ ಟೌನ್ ಪೌರಸಭೆಗಳು ಆಯವ್ಯಯದ ಅಂದಾಜನ್ನು ತಯಾರಿಸುವ ಬಗ್ಗೆ ಮೇಲಾಪಟ್ಟಿಯಲ್ಲಿ ಸರ್ಕಾರದವರು ಕೆಲವು ಬದಲಾವಣೆಗಳನ್ನು ಮಾಡುತ್ತಿದ್ದಾರೆ ಜಿಲ್ಲಾಧಿಕಾರಿಗಳಿಗೆ ಸಭೆಯವರು ಜನವರಿ ೩೧ರೊಳಗೆ ಪಟ್ಟಿಯನ್ನು ಕಳುಹಿಸಿಕೊಡಬೇಕು ಅವರು ತಮ್ಮ ಅಭಿಪ್ರಾಯದ ಸಮೇತ ಸಂಸ್ಥಾನದ ಲೆಕ್ಕಗಳ ಕಂಟ್ರೋಲರಿಗೆ ಜನವರಿ ೨೦ರ ಒಳಗೆ ಕಳುಹಿಸಬೇಕು ಕಂಟ್ರೋಲರರು ಸ್ಥಳೀಯ ಸಂಸ್ಥೆಗಳ ಕಮಿಷನರರಿಗೆ ಫೆಬ್ರವರಿ ೨೦ ರೊಳಗೆ ರವಾನಿಸಬೇಕು ಅವರು ಸರ್ಕಾರಕ್ಕೆ ಮಾರ್ಚಿ ೧೫ ರೊಳಗೆ ಕಳುಹಿಸಬೇಕು


**SRI GANESH**
TALKIES

A U ... ... for Lovers of Shakespearean Drama

From 22 8 53 For Three Days

# OTHELLO

Produced Directed and Enacted by Orson Welles

*Winner of the First Prize at the International Film Festival 1952*



ಒಲಂಪಿಯಾ ಟಾಕೀಸ್

21 8 53 ರಿಂದ ಅಮೋಘ ೭ನೇ ವಾರ

ಪ್ರತಿದಿನ 3 ಆಟಗಳು

★ ಪತಿತಾ ★


Edited Printed and Published by A K Nagrajan at Sadhvi Press D.Subbiah Road Mysore

## ಕೊರಿಯಕ್ಕೆ ಭಾರತದ ಸೈನ್ಯಗಳ ಯಾತ್ರೆ

ಮದ್ರಾಸಿನಿಂದ ಎಸ್ ಎಸ್ ಜಲದುರ್ಗ ಎಂಬ ಜಹಜಿನಲ್ಲಿ ೩೦೦೦ ಮಂದಿ ಭಾರತೀಯ ಸೈನಿಕರು ಮೊನ್ನೆ ಕೊರಿಯಕ್ಕೆ ಪ್ರಯಾಣ ಬೆಳೆಸಿದರು ಕೊರಿಯಾ ಯುದ್ಧ ಖೈದಿಗಳ ವಿನಿಮಯದ ಸಂಬಂಧವಾಗಿ ಅವರು ಸಹಾಯ ಮಾಡುವರು

### ಎಂ ಪಿ ಸಿ ಸಿ ಅಧಿವೇಶನ ಮುಂದಕ್ಕೆ

ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಆಗಲಿರುವ ಜಾಡ್ಯದ ಪ್ರಯುಕ್ತ ದಿ ಎಂ ಪಿ ಸಿ ಸಿ ಸಭೆಯನ್ನು ಮುಂದಕ್ಕೆ ಹಾಕಲು ನಿರ್ಧಾರವಾಗಿರುತ್ತದೆ

### ಮೈಸೂರು ಕಾಂಗ್ರೆಸ್ ರಾಜಕೀಯ ಅಧ್ಯಕ್ಷರ ಪರಿಶೀಲನೆಯಲ್ಲಿ

ದೆಹಲಿಗೆ ತೆರಳುವ ಮೈಸೂರು ಕಾಂಗ್ರೆಸ್ ಅಧ್ಯಕ್ಷರು, ಶ್ರೀ ಎಚ್ ಚೆನ್ನಯ್ಯ ಮತ್ತು ಶ್ರೀ ಟಿ ಸುಬ್ರಹ್ಮಣ್ಯಂರವರು ೨೩ ದಿನಗಳಲ್ಲಿ ಹಿಂದಿರುಗುವರೆಂದ ... ನ ಬಲಾಗಿದೆ ಮೈಸೂರು ಕಾಂಗ್ರೆಸ್ಸಿನ ರಾಜಕೀಯವನ್ನು ಮೌಲಾನಾ ಆಜಾದರು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ

### ದೇವರಿಗೆ ವಿಶೇಷ ಅಲಂಕಾರ

ರಾಜಧಾನಿಯ ಅರಮನೆ ಕೋಟೆಯೊಳಗಿರುವ ಶ್ರೀ ಕೋಡಿ ಸೋಮೇಶ್ವರ (ನವಗ್ರಹ) ಸ್ವಾಮಿ ದೇವಸ್ಥಾನದಲ್ಲಿ ಅಮಾವಾಸ್ಯೆಯ ದಿನದ ಪ್ರಯುಕ್ತ ವಿಶೇಷ ಅಲಂಕಾರವನ್ನು ನಾಳೆ ಶ್ರಾವಣ ಶನಿವಾರದ ಪ್ರಯುಕ್ತ ನಂದಿ ಮುಖ ಸ್ವಾಮಿಯವರಿಗೆ ಕೋದಂಡರಾಮನ ಅಲಂಕಾರವನ್ನು ಹಾಕಲಾಗುವುದು


ಚಾಮುಂಡೇಶ್ವರಿ

ಟಾಕೀಸ್

21 8 53 ಅಮೋಘ ಪ್ರಾರಂಭ

ದಿನವೂ ನಾಲ್ಕು ಆಟಗಳು

ಭರಣಿಯವರ ತೆಲುಗು ಚಿತ್ರ

★ ಪ್ರೇಮ ★

LOVE

ಪಾತ್ರ ಧಾರಿಗಳು ... ನಾಗೇಶ್ವರರಾವ್

ಶ್ರೀರಂಜನಿ (ಜೂನಿಯರ್) ... ಶಿವರಾವ್



**SRI GAYATHRI**
TALKIES
FOR TO-DAY

**METROSCOPIX**
AND

# A WOMAN IN JEOPARDY

On 22 8 53

**METROSCOPIX**
AND
**BONNIE SCOTLAND**

COMING
THE BUSY MAN

— MORNING SHOWS
On Sat 22 & Sun 23 at 10 30

**HENRY V**
(Technicolor)
Starring Laurence Olivier


## ಅಫ್ಘಾನಿಸ್ತಾನದಲ್ಲಿ ಬಿಕ್ಕಟ್ಟು

ಅಫ್ಘಾನಿಸ್ತಾನದ ಪ್ರಧಾನಿ ಷಹಾ ಮಹಮದ್ ಖಾನ್ ಘಾಜಿಯವರು ಪತ್ರಿಕಾ ಸಂದರ್ಶನದಲ್ಲಿ ಹೇಳಿಕೆಯಿತ್ತು ಅಲ್ಲಿನ ದೊರೆ ಮತ್ತು ಪ್ರಜೆಗಳ ... ಎನ್ನುವವರಿಗೆ ತಾವು ಪ್ರಧಾನಿಯಾಗಿರುವುದಾಗಿ ತಿಳಿಸಿರುತ್ತಾರೆ ಅವರು ಪ್ರಜೆಗಳ ಸಂಪರ್ಕ ಪಡೆಯಲು ದೇಶದಲ್ಲಿ ಪ್ರವಾಸ ಮಾಡಲಿರುವರು ಅಲ್ಲಿನ ದೊರೆ ಮೆಕ್ಕಾಕ್ಕೆ ಯಾತ್ರೆ ಹೋಗುವರೆಂದು ಹೇಳಲಾಗಿದೆ ದೊರೆ ಮತ್ತು ಪ್ರಧಾನಿಯವರು ದೇಶವನ್ನು ಬಿಟ್ಟ ಮೇಲೆ ಲಂಡನ್ನಿನಲ್ಲಿರುವ ಅಫ್ಘಾನ್ ರಾಯಭಾರಿ ಷಹಾ ವಾಲಿ ಖಾನರವರು ಕಾಬೂಲಿಗೆ ಹಿಂತಿರುಗಿ ಅಲ್ಲಿನ ರಾಜ್ಯಭಾರ ಕ್ರಮವನ್ನು ಪುನರ್ವ್ಯವಸ್ಥೆಗೊಳಿಸುವರೆಂದು ವದಂತಿ ಹರಡಿದೆ

### ೩೫೦ ವರ್ಷಗಳ ಹಿಂದೆ ಕಟ್ಟಿದ ಕಮಾನು ಮುರಿದು ಬಿತ್ತು

ಗೋವಾ ನಗರದಲ್ಲಿ ಪೋರ್ಚುಗೀಸರು ಕ್ರಿ ಶ ೧೬೦೦ ರಲ್ಲಿ ನಿರ್ಮಿಸಿದ್ದ ಕಮಾನು ಕಳೆದ ೧೫ನೇ ತಾ॥ ಮುರಿದು ಬಿದ್ದಿತೆಂದೂ ಇದು ಪೋರ್ಚುಗೀಸರಿಗೆ ಅಶುಭ ಸೂಚಕವೆಂದು ... ಎಂಬ ಪೋರ್ಚುಗೀಸ್ ಭವಿಷ್ಯವಾದಿನಿಯೊಬ್ಬಳು ತಿಳಿಸಿರುತ್ತಾಳೆ ಪೋರ್ಚುಗೀಸರು ಈ ಕಮಾನಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದರೆಂದೂ, ಅದು ಬಿದ್ದು ಹೋಗಿರುವುದರಿಂದ ಭಾರತದಲ್ಲಿ ಪೋರ್ಚುಗೀಸರ ಆಳ್ವಿಕೆಯು ಮುಕ್ತಾಯವಾಗುವುದೆಂದು ನಂಬಲಾಗಿದೆಯೆಂದೂ ಹೇಳಲಾಗಿದೆ

### ಮೈಸೂರು ಪೇಟೆ ಧಾರಣೆ

| | | |
|---|---|---|
| ದಳ್ಳಕ್ಕಿ | ರೂ ಇಂದ | ರೂ ... |
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಜಗಳಿ | [illegible] | |
| ಹಲಸಂದೆ | [illegible] | [illegible] |
| ಹುಣಸೇಹಣ್ಣು | [illegible] | |
| ಸೀಗೇಕಾಯಿ | [illegible] | |
| ಕೊಂಗಿಪಕಾಯಿ ... | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಎಸ್ ಸುಬ್ರಹ್ಮಣ್ಯಂ ಪಿಟೀಲು ... ಗಂಗಾಧರಯ್ಯ ದೇವರನಾಮಗಳು ಮಧ್ಯಾಹ್ನ ... ರೀತಿ ... ಸಂಗೀತ ... ವಿವಿಧ ... ಮಕ್ಕಳ ಕಾರ್ಯಕ್ರಮ ಮೈಸೂರು ಮಕ್ಕಳ ಕೂಟ ... ಸಂಜೆ ... ಗಾನ ... ಸಂಗೀತ ... ಭಾಗವತ್ ಕಥಾ ... ಕಾರ್ಯಕ್ರಮ ...

## ಫರೂಕರಿಂದ ಪ್ಲಾಸ್ಟಿಕ್ ವ್ಯಾಪಾರ

ಈಜಿಪ್ಟಿನ ಮಾಜಿ ದೊರೆ ಫರೂಕರು ತನ್ನ ಮುಂದೆ ಇಟಲಿಯಲ್ಲಿ ಪ್ಲಾಸ್ಟಿಕ್ ಸಾಮಾನುಗಳ ತಯಾರಿಕೆಗೆ ಸಂಬಂಧವಾದ ಉದ್ಯೋಗದಲ್ಲಿ ತೊಡಗುವರೆಂದು ಹೇಳಲಾಗಿದೆ ಫರೂಕರು ಅಮೆರಿಕದ ಸಂಸ್ಥೆಯೊಂದರೊಡನೆ ಸೇರಿ ಈ ವ್ಯಾಪಾರದಲ್ಲಿ ೨ ಲಕ್ಷ ಪೌಂಡುಗಳ ಬಂಡವಾಳ ಹಾಕುವರು

## ವಿವಾಹ ಮಹೋತ್ಸವಗಳು

ರಾಜಧಾನಿಯ ಔಷಧಿ ಮತ್ತು ಕನ್ನಡಕಗಳ ವ್ಯಾಪಾರಗಾರರಾದ ಶ್ರೀ ಟಿ ಸಿ. ನಟರಾಜ್‌ರವರು ತಮ್ಮ ಪುತ್ರಿ ಸೌ॥ ಲೀಲಾವತಿಯನ್ನು ಶ್ರೀ ಬಿ ಸಂತಾನಂರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ಅರಮನೆಯ ನಿವೃತ್ತ ಮೊಖ್ತೇಸರರಾದ ಶ್ರೀ ಎಚ್ ಅನಂತಸ್ವಾಮಿರಾಯರು ದೆಹಲಿಯ ಕಾಲ್ಟೆಕ್ಸ್ ಕಂಪೆನಿಯಲ್ಲಿರುವ ತಮ್ಮ ಪುತ್ರ ಶ್ರೀ ಎಚ್ ಆರ್ ರಾವ್‌ರವರಿಗೆ ದೆಹಲಿಯ ದರಿಯಾಗಂಜಿನಲ್ಲಿರುವ ಶ್ರೀ ಕೆ ಎಲ್ ರಾಯರ ಪುತ್ರಿ ಸೌ॥ ಲಕ್ಷ್ಮಿಯನ್ನು ತಂದುಕೊಂಡು ನೆನ್ನೆ ತಿರುಪತಿ ಕ್ಷೇತ್ರದಲ್ಲಿ ವಿವಾಹವನ್ನು ನೆರವೇರಿಸಿದರು

### ಗೃಹ ಪ್ರವೇಶೋತ್ಸವ

ರಾಜಧಾನಿಯ ಕಿಲ್ಲೆ ಮೊಹಲ್ಲಾ ಹಳೇ ಚಾವಡಿ ಬೀದಿಯಲ್ಲಿರುವ ಜಮೀನ್ದಾರ್ ಶ್ರೀ ಎಂ ವೆಂಕಟರಮಯ್ಯನವರ ತಂಪು ನೂತನವಾಗಿ ಕಟ್ಟಿಸಿದ ಮನೆಯ ಗೃಹ ಪ್ರವೇಶೋತ್ಸವವನ್ನು ನೆನ್ನೆ ಬೆಳಗ್ಗೆ ನೆರವೇರಿಸಿದರು


### ಸಿಟಿ ಮುನಿಸಿಪಲ್ ಆಫೀಸು

ಮೈಸೂರು, 20-8-53

ನೋಟಿಫಿಕೇಷನ್ ನಂ R8 ಎ 53 | 53-54

## ನೋಟಿಫಿಕೇಷನ್

ಮೈಸೂರು ಸಿಟಿ 100 ಅಡಿ ರಸ್ತೆಯಲ್ಲಿ ಹೊಸದಾಗಿ ಕಟ್ಟಿಸಿರುವ ಮುನಿಸಿಪಲ್ ಮಳಿಗೆಗಳ ಪೈಕಿ 1 2 3 4 5, 6 7, 8, 9 ಮತ್ತು 10 ನೇ ನಂಬರ್ ಮಳಿಗೆಗಳನ್ನು ಮಾಹೆಯಾನ ಬಾಡಿಗೆಗೆ ಪಡೆಯುವ ಹಕ್ಕನ್ನು ತಾ. 22 8-53ನೇ ದಿವಿ 10 ಘಂಟೆ ಲಾಗಾಯ್ತು ಮಳಿಗೆಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಸದರೀ ಹಕ್ಕನ್ನು ಹರಾಜಿನಲ್ಲಿ ಪಡೆಯಬಹುದು. ಇತರೇ ವಿವರಗಳನ್ನು ಕೆಲಸದ ವೇಳೆಯಲ್ಲಿ ಆಫೀಸಿನಲ್ಲಿ ತಿಳಿಯಬಹುದು

ಬಿ. ತಿಮ್ಮಯ್ಯ,
ರೆವಿನ್ಯೂ ಆಫೀಸರ್



## ಕಾಮನ್‌ವೆಲ್ತ್ ಕಾಫಿ ವರ್ಕ್ಸ್,

ಶ್ರೀರಾಮ ಪೇಟೆ, ಮೈಸೂರು

16 8-53 ರಲ್ಲಿ ಮೈಸೂರಿನಲ್ಲಿ ನಡೆದ ಕಾಫೀ ಪೂಲ್ ಹರಾಜುಗಳಲ್ಲಿ ರಿಜಿಸ್ಟರ್ಡ್ ಡೀಲರ್ಸ್ ಭಾಗವಹಿಸಕೂಡದೆಂದು ರಿಜಿಸ್ಟರ್ಡ್ ಕಾಫಿ ಡೀಲರ್ಸ್ ಆಫ್ ಇಂಡಿಯಾ ಸಂಸ್ಥೆಯವರು ತೀರ್ಮಾನಿಸಿರುವಂತೆ ಭಾಗವಹಿಸಲಿಲ್ಲವಾದ್ದರಿಂದ ಮಾರುಕಟ್ಟೆಯಲ್ಲಿ ಕಾಫಿ ಅಭಾವವುಂಟಾಗಿ ದರ ಹೆಚ್ಚುತ್ತದೆಂದು ಚಿಲ್ಲರೆ ವ್ಯಾಪಾರಸ್ಥರೂ ಮತ್ತು ಇತರರೂ ... ಸಬೇಕಿಲ್ಲವೆಂದೂ ನಮ್ಮಲ್ಲಿರುವ ದಾಸ್ತಾನನ್ನು ನೆಲ್ಲಿಂದ ಪೂಲ್ ಹರಾಜಿಗೆ ಮುಂಚೆ ಇದ್ದ ದರದಂತೆ ಕಾಫಿ ಮಾರಾಟ ಮಾಡಲಾಗುವುದೆಂದೂ ಈ ಮೂಲಕ ನಮ್ಮ ಗಿರಾಕಿಗಳಿಗೂ ... ಜನರಿಗೂ ತಿಳಿಸಲು ಇಚ್ಛಿಸುತ್ತೇವೆ

ಕೆ ವಿ ನಾರಾಯಣ ಶೆಟ್ಟಿ, ಪಾರ್ಟನರ್,
ಕಾಮನ್‌ವೆಲ್ತ್ ಕಾಫಿ ವರ್ಕ್ಸ್.



HERE IS ANOTHER GOOD CHANCE

**ABIDS GRAND AUCTION SALE**

**On SUNDAY the 23rd AUG 1953 at 10 A M at Showrooms**

T W DOORS & WINDOW FRAMES IN ASSORTED SIZES, W & R W FURNITURE HOUSE-HOLD GOODS ETC, ... ting of ALMIRAHS WITH & WITHOUT MIRRORS ... ors ... Sofa suites Single cots Easy ... rs ... ... tables, cradles ODEON & SONATA double ... Gramophones in perfect order, Records Golden colour ... Trunks Mounted Bison Horns Electric Stoves, ... and several other useful ... s



## ಪ್ರಭುದೇವಾ ಥಿಯೇಟರ್

ಸಪ್ನಾ ಟಾಕೀಸ್

22-8 53 ರಿಂದ :: ಅಮೋಘ 2 ನೇ ವಾರ

★ ಅಪ್ಪೈಯಾರ್ ★

ಕೆ ಬಿ ಸುಂದರಾಂಬಾಳ್ ... ... ... ಅಭಿನಯದ ತಮಿಳು ಚಿತ್ರ

ಟೆಲಿಫೋನ್ ನಂ 792 | ॥ ವಂದೇ ಮಾತರಂ ॥ | ಬಿಡಿ ಪ್ರತಿಗೆ 6 ಕಾಸು

[illegible]
ಆನಂದಭವನ
ಕಾಫಿ ಬೆಲೆ 0-1-6
ಅಣೆಗೆ ಇಳಿಸಿದೆ
ಸಾರ್ವಜನಿಕರು ಪ್ರೋತ್ಸಾಹಿಸ
ಬೇಕಾಗಿ ಪ್ರಾರ್ಥನೆ

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE SUNDAY 23-8-1953 : ಮೈಸೂರು : ಭಾನುವಾರ ೨೩-೮-೧೯೫೩ [ ಸಂಚಿಕೆ ೨೨

# ಕೋಲಾರದ ಗಡಿ ಬಳಿ ಮದರಾಸ್ ಪೋಲೀಸರ ಗುಂಡು

## ಜೋಡಿ ಮತ್ತು ಇನಾಂ ರೈತರನ್ನು ಬಿಡಿಸದಿರಲು ವಿಶೇಷಾಜ್ಞೆ

ಬೆಂಗಳೂರು ೨೨

ಜೋಡಿ ಮತ್ತು ಇನಾಂ ಗ್ರಾಮಗಳಲ್ಲಿ ರೈತರುಗಳಿಂದ ಜಮೀನುಗಳನ್ನು ತಪ್ಪಿಸದಂತೆ ಮಾಡಲು ಸರ್ಕಾರದವರು ವಿಶೇಷಾಜ್ಞೆಯೊಂದನ್ನು ಹೊರಡಿಸಲಿರುವರೆಂದು ವರದಿಯಾಗಿದೆ. ಈ ಸಂಬಂಧವಾಗಿ ತಯಾರಾಗಿರುವ ಮಸೂದೆಯನ್ನು ಶಾಸನ ಸಭೆಯಲ್ಲಿ ಕರಡಿಕ್ಕುವಾಗ ಈ ಆಜ್ಞೆಯನ್ನು ಹೊರಡಿಸಲಾಗುವುದು

## ಮೈಸೂರು ಮಾರ್ಗವಾಗಿ ಪೂನಾ ರೈಲು ಬೆಂಗಳೂರಿಗೆ

ತುಮಕೂರು ಮತ್ತು ಮಲ್ಲಸಂದ್ರದ ನಡುವೆ ರೈಲು ರಸ್ತೆಯಲ್ಲಿ ಸ್ವಲ್ಪ ತೊಂದರೆ ಇರುವುದರಿಂದ ಈ ಬೆಳಿಗ್ಗೆ ಬೆಂಗಳೂರಿಗೆ ತಲುಪಬೇಕಾಗಿದ್ದ ಪೂನಾ ಮೇಲು ಗಾಡಿಯು ಮೈಸೂರು ಮುಖಾಂತರ ಬೆಂಗಳೂರಿಗೆ ಹೊರಟಿತು. ಬೆಂಗಳೂರಿನಿಂದ ಇಂದು ೧೦॥ ಗೆ ಹೊರಡಬೇಕಾಗಿರುವ ಎಕ್ಸ್‌ಪ್ರೆಸ್ ರೈಲು ಮೈಸೂರು-ಅರಸೀಕೆರೆ ಮೂಲಕ ಮುಂದಕ್ಕೆ ಹೋಗಲಿದೆ

## ಊರನಗೆರೆಯಲ್ಲಿ ಕೊಲೆ ಪ್ರಕರಣ

ಮೈಸೂರು ೨೨

ರಾಜಧಾನಿಯ ಊರನಗೆರೆ ೨ನೇ ಸಂಜೀವಯ್ಯ ಮತ್ತು ಇತರ ೫ ಜನರನ್ನು ಲಷ್ಕರ್ ಪೋಲೀಸರು ನೆನ್ನೆ ಕೊಲೆಯೊಂದರ ಪ್ರಕರಣದಲ್ಲಿ ದಸ್ತಗಿರಿ ಮಾಡಿದರು. ರಾತ್ರಿ ನ್ಯಾಯಾಧೀಶರ ಮುಂದೆ ಅವರನ್ನು ಹಾಜರುಪಡಿಸಲಾಯಿತು. ಅವರ ಹೊಲಗಳಲ್ಲಿ ನಿತ್ಯವೂ ಬದನೇಕಾಯಿಗಳು ಕಳುವಾಗುತ್ತಿದ್ದುವೆಂದೂ, ನೆನ್ನೆ ಒಬ್ಬನು ಅತ್ಯಯತ್ನದಲ್ಲಿದ್ದು ಸಿಕ್ಕಿದನೆಂದೂ, ಅವನನ್ನು ಹೊಡೆಯಲಾಯಿತೆಂದೂ ಹೇಳಲಾಗಿದೆ. ಶವವನ್ನು ಬನ್ನಿಮಂಟಪದ ಬಳಿ ಬಿಸಾಡಲಾಗಿದ್ದಿತೆಂದು ಗೊತ್ತಾಗಿದೆ

## ಉಪಾಧ್ಯಾಯರುಗಳ ಕಾಲೇಜಿನ ಸಂಘದ ಆರಂಭ

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ಸಂಘದ ಆರಂಭೋತ್ಸವವನ್ನು ಕಳೆದ ಬುಧವಾರ ಮದ್ರಾಸಿನ ಬ್ರಿಟಿಷ್ ಕೌನ್ಸಿಲ್ಲಿನ ಪ್ರಾದೇಶಿಕ ಪ್ರತಿನಿಧಿ, ಶ್ರೀ ಎಸ್ ಸಿ ಬಾಚ್‌ರವರು ನೆರವೇರಿಸಿದರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ ಸಿ ದೇವೇಗೌಡರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಎಸ್ ಜಿ ಪ್ರಮೀಳಾರವರಿಂದ ಪ್ರಾರ್ಥನೆಯಾದ ನಂತರ, ಸಂಘದ ಅಧ್ಯಕ್ಷ ಶ್ರೀ ಕೆ ಮಲ್ಲಪ್ಪನವರು ಸ್ವಾಗತ ಬಯಸಿದರು. ಶ್ರೀ ಬಾಚ್‌ರವರು ಭಾಷಣ ಮಾಡಿ ಬ್ರಿಟಿಷ್ ಕೌನ್ಸಿಲ್ಲಿನವರು ಇತರ ದೇಶಗಳಲ್ಲಿ ಸಾಂಸ್ಕೃತಿಕ ಸಂಪರ್ಕ ಬೆಳೆಸುತ್ತಿರುವ ವಿಷಯವನ್ನು ಪ್ರಸ್ತಾಪಿಸಿ, ಪ್ರತಿಯೊಂದು ದೇಶದ ಜನರ ಜೀವನವನ್ನು ರೂಪಿಸುವ ಕಾರ್ಯದಲ್ಲಿ ಉಪಾಧ್ಯಾಯರುಗಳ ಮಹತ್ವವನ್ನು ವಿವರಿಸಿದರು. ಉಪಾಧ್ಯಾಯರುಗಳಲ್ಲಿ ಸಹಾನುಭೂತಿ, ಧ್ಯೇಯ ನಿಷ್ಠೆ, ಚಾರಿತ್ರ್ಯ— ಈ ಮೂರು ಗುಣಗಳು ಇರಬೇಕೆಂದು ಅವರು ತಿಳಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಎ ಸುರೇಂದ್ರನಾಥ್‌ರವರು ವಂದನಾರ್ಪಣೆ ಮಾಡಿದ ಮೇಲೆ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ನಡೆಯುತ್ತಿರುವ ಬಗ್ಗೆ ತೆಗೆಯಲಾದ ಚಲನಚಿತ್ರವನ್ನು ಪ್ರದರ್ಶಿಸಲಾಯಿತು

## ಅಕ್ಟೋಬರಿನಲ್ಲಿ ಭಾರತ ಮತ್ತು ಪಾಕಿಸ್ತಾನ್ ಪ್ರಧಾನಿಗಳ ಭೇಟಿ

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳು ಅಕ್ಟೋಬರ್ ತಿಂಗಳಲ್ಲಿ ಪುನಃ ಭೇಟಿ ಮಾಡುವರೆಂದು ಹೇಳಲಾಗಿದೆ. ಆಗ ಕಾಶ್ಮೀರದಿಂದ ಸೈನ್ಯಗಳನ್ನು ಹಿಂದಕ್ಕೆ ಕರೆಸುವುದು ಮತ್ತು ಇತರ ವಿಷಯಗಳನ್ನು ಚರ್ಚಿಸಲಾಗುವುದೆಂದು ಗೊತ್ತಾಗಿದೆ

## ಪರ್ಷಿಯಾ ರಾಜಧಾನಿಗೆ ಷಹಾ ಆಗಮನ

ಪರ್ಷಿಯಾದ ಷಹಾರವರು ನೆನ್ನೆ ಮಧ್ಯಾಹ್ನ ರಾಜಧಾನಿ ಟೆಹರಾನಿಗೆ ಹಿಂತಿರುಗಿದರು. ಅವರು ವಿಮಾನದಿಂದ ಇಳಿಯುವ ಸಮಯದಲ್ಲಿ [illegible] ಜನರ ಗುಂಪು [illegible] ಅವರಿಗೆ ಅದ್ಭುತ ಸ್ವಾಗತವನ್ನು ನೀಡಲಾಯಿತು. ಜನರಲ್ ಜಹೇದಿಯವರೂ ಸೈನ್ಯದವರೂ ರಾಜರನ್ನು ವಿಮಾನ ನಿಲ್ದಾಣದಲ್ಲಿ ಎದುರ್ಗೊಂಡರು. ಷಹಾರವರು ಭೇಟಿಯೊಂದರಲ್ಲಿ ಮಾತನಾಡುತ್ತಾ ದೇಶದಲ್ಲಿ ತೀವ್ರವಾದ ಸಾಮಾಜಿಕ ಸುಧಾರಣೆಗಳನ್ನು ತರಲಾಗುವುದಾಗಿ ಹೇಳಿದರು. ತಮಗೆ ಸೇರಿರುವ ಆಸ್ತಿಗಳನ್ನು ಹಂಚಲೂ ಸಿದ್ಧನಾಗಿರುವುದಾಗಿಯೂ ಅವರು ತಿಳಿಸಿದರು. ಆಂಗ್ಲೋ-ಇರಾನಿಯನ್ ಎಣ್ಣೆ ಕಂಪೆನಿಯ ರಾಷ್ಟ್ರೀಕರಣ ನೀತಿಯನ್ನು ಬದಲಾಯಿಸುವುದಿಲ್ಲವೆಂದು ಅವರು ವ್ಯಕ್ತಪಡಿಸಿದರು

## ಪ್ರವಾಹದಲ್ಲಿ ಸತಿಯು ಕೊಚ್ಚಲ್ಪಟ್ಟ ದುಃಖದಲ್ಲಿ ಪತಿ ಮರಣ

ಇಂದೂರಿನ ಬಳಿ ಚಮೇಲಿ ಎಂಬ ನದಿಯಲ್ಲಿ ಒಬ್ಬ ಹಳ್ಳಿ ಹೆಂಗಸು ಪ್ರವಾಹದಲ್ಲಿ ತೇಲಿಹೋದುದರಿಂದ, ಆಕೆಯ ವಿರಹವನ್ನು ತಾಳಲಾರದೆ ಗಂಡನು ಸ್ಥಳದಲ್ಲೇ ಮೃತಪಟ್ಟನೆಂದೂ, ಆದರೆ ಹಳ್ಳಿಯವರು ಕಷ್ಟಪಟ್ಟು ಹೆಂಗಸನ್ನು ರಕ್ಷಿಸಿದರೆಂದೂ ಹೇಳಲಾಗಿದೆ

## ಸೂಚನೆ

ಯಜುರುಪಾಕರ್ಮದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

## ಮಳವಳ್ಳಿಯಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆ

ಮಳವಳ್ಳಿಯಲ್ಲಿ ಸಕ್ಕರೆ ಕಂಪೆನಿಯೊಂದನ್ನು ಶೀಘ್ರವಲ್ಲೇ ಸ್ಥಾಪಿಸುವ ಚಟುವಟಿಕೆಗಳಿರುವುದಾಗಿಯೂ, ರಾಜಸ್ಥಾನದಲ್ಲಿರುವ ಎರಡು ಸಕ್ಕರೆ ಕಾರ್ಖಾನೆಗಳನ್ನು ಕೊಳ್ಳುವ ಬಗ್ಗೆ ಪಾರ್ಲಿಮೆಂಟಿನ ಮಂಡ್ಯದ ಸದಸ್ಯರಾದ ಶ್ರೀ ಎಂ.ಕೆ ಶಿವನಂಜಪ್ಪನವರು ಕೇಂದ್ರ ಆಹಾರ ಮಂತ್ರಿ ರಫಿ ಅಹಮದ್ ಕಿದ್ವಾಯಿರೊಡನೆ ಸಂಭಾಷಣೆ ನಡೆಸುತ್ತಿರುವುದಾಗಿಯೂ ತಿಳಿದುಬಂದಿದೆ. ರೈತರುಗಳು ಸಹಕಾರದ ತತ್ವದ ಆಧಾರದ ಮೇಲೆ ಈ ಕಾರ್ಖಾನೆಯನ್ನು ನಡೆಸಬೇಕಾಗುವುದೆಂದೂ, ಈ ಸಂಬಂಧವಾಗಿ ಜಾಗ್ರತೆಯಾಗಿಯೇ ಕಿದ್ವಾಯಿಯವರು ಸಂಸ್ಥಾನಕ್ಕೆ ಭೇಟಿ ಕೊಡಲಿರುವರೆಂದೂ ಹೇಳಲಾಗಿದೆ. ಆ ಪ್ರದೇಶದ ೪೫ ಸಾವಿರ ಎಕರೆಗಳಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ

## ಮೈಸೂರು ಗಡಿ ಬಳಿ ಕಾರಿನ ಮೇಲೆ ಗುಂಡು

### ಒಬ್ಬನ ಮರಣ, ಮದ್ರಾಸು ಪೋಲೀಸರ ಬಂಧನ

ಕೋಲಾರ ೨೨

ಸಂಸ್ಥಾನದ ಗಡಿಯಲ್ಲಿರುವ ಕಂಗ್ಲಿ ಗ್ರಾಮದಲ್ಲಿ ಮೊನ್ನೆ ರಾತ್ರಿ ಮದ್ರಾಸು ಪೋಲೀಸರು ಮೋಟಾರೊಂದರ ಮೇಲೆ ಗುಂಡು ಹಾರಿಸಲಾಗಿ, ಅದರಲ್ಲಿದ್ದ ಗರ್ಭ ಸಿಕ್ಕದ ಸುಮಾರು ೨೦ ವರ್ಷ ವಯಸ್ಸಿನ ಯುವಕನು ಮೃತಪಟ್ಟನು. ಕಾರಿನಲ್ಲಿ ಮೋಹರಾದಿ ಮಾದಕ ಪದಾರ್ಥಗಳ ಡಬ್ಬಗಳಿದ್ದುವು

ಮುಳಬಾಗಿಲು ಪೋಲೀಸರು ಐ ಪಿ ಸಿ ೩೦೪ ನೇ ವಿಧಿ ಪ್ರಕಾರ ಮೊಕದ್ದಮೆಯೊಂದನ್ನು ರಿಜಿಸ್ಟರ್ ಮಾಡಿ ಮದ್ರಾಸಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾಘವಲು ನಾಯ್ಡು, ಪೋಲೀಸ್ ಕಾನ್ಸ್‌ಟೇಬಲ್ ಎಂ ಎ ಮುನಿಸ್ವಾಮಿ, ಹೆಡ್ ಕಾನ್ಸ್‌ಟೇಬಲ್ ರಾಮಚಂದ್ರರೆಡ್ಡಿ, ನಿವಾಸಿಗಳಾದ ಎಲ್ ವಿ ಸುಬ್ರಹ್ಮಣ್ಯಂ, ಸೈಯದ್ ಹಬೀಬ್ ಮತ್ತು ನಾರಾಯಣರೆಡ್ಡಿಯವರನ್ನು ದಸ್ತಗಿರಿ ಮಾಡಿದರು. ಮದ್ರಾಸು ಪೋಲೀಸರು ಮತ್ತು ಇತರರು ಉಪಯೋಗಿಸಿದ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಮುನಿಸ್ವಾಮಿ ಮತ್ತು ಖಲೀಲ ಖಾನ್ ಎಂಬಿಬ್ಬರು ಬೆಂಗಳೂರು ನಿವಾಸಿಗಳು ಕಾರಿನಲ್ಲಿದ್ದು ಅವರಿಗೂ ಗುಂಡಿನೇಟು ತಗಲಿದೆ. ಕಾರಿನಲ್ಲಿದ್ದ ಇತರ ಜನರು ಪತ್ತೆಯಿಲ್ಲ

## ಕಡ್ಡಾಯದ ಮಿಲಿಟರಿ ಶಿಕ್ಷಣ ಮಸೂದೆ ವಾಪಸು

ಹೈಸ್ಕೂಲು ಮತ್ತು ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಿಗೆ ಕಡ್ಡಾಯದ ಮಿಲಿಟರಿ ಶಿಕ್ಷಣ ಕೊಡಬೇಕೆಂದು ಸೂಚಿಸುವ ಖಾಸಗಿ ಮಸೂದೆಯೊಂದನ್ನು ಪಾರ್ಲಿಮೆಂಟಿನಲ್ಲಿ ಡಾ॥ ರಾಂ ಸುಭಾಗ್‌ಸಿಂಗ್‌ರವರು ನೆನ್ನೆ ಮಂಡಿಸಿದಾಗ, ರಕ್ಷಣಾ ಉಪ ಮಂತ್ರಿ ಮಾತನಾಡಿ, ಹೆಚ್ಚು ಹೆಚ್ಚಾಗಿ ಮಿಲಿಟರಿ ಶಿಕ್ಷಣವನ್ನು ಒದಗಿಸಲು ಸರ್ಕಾರಕ್ಕೆ ಉದ್ದೇಶವಿದ್ದರೂ ಅದಕ್ಕೆ ಹಣಕಾಸಿನ ಅಡಚಣೆಯಿರುವುದಾಗಿ ತಿಳಿಸಿದ ಮೇಲೆ ಮಸೂದೆಯನ್ನು ವಾಪಸು ತೆಗೆದುಕೊಳ್ಳಲು ಸಭೆಯು ಅನುಮತಿ ಇತ್ತಿತು. ಈಗ ಸೈನ್ಯವಲ್ಲದೆ ಇತರ ನಾಲ್ಕು ಸಂಸ್ಥೆಗಳಲ್ಲಿ ಮಿಲಿಟರಿ ಶಿಕ್ಷಣವನ್ನು ಕೊಡಲಾಗುತ್ತಿರುವುದೆಂದು ಉಪ ಮಂತ್ರಿಗಳು ವ್ಯಕ್ತಪಡಿಸಿದರು

## ಭಾರತದಲ್ಲಿ ಕಾಶ್ಮೀರದ ತಂತಿ ಮತ್ತು ಫೋನ್ ವ್ಯವಸ್ಥೆಯ ಐಕ್ಯ

ಕಾಶ್ಮೀರದ ತಂತಿ ಮತ್ತು ಟೆಲಿಫೋನ್ ಸರ್ವೀಸ್‌ಗಳನ್ನು ಭಾರತದ ತಂತಿ ಮತ್ತು ಫೋನು ವ್ಯವಸ್ಥೆಯಲ್ಲಿ ಪೂರ್ಣವಾಗಿ ಐಕ್ಯಗೊಳಿಸುವ ಕಾರ್ಯವು ಶೀಘ್ರದಲ್ಲೇ ಅಂತಿಮಗೊಳ್ಳುವುದೆಂದು ಹೇಳಲಾಗಿದೆ

### ಸ್ವದೇಶೀ ವಸ್ತುಗಳ ಮಾರಾಟ ಪರಿಶೀಲನಾ ಸಮಿತಿ ನೇಮಕ

ಸ್ವದೇಶೀ ವಸ್ತುಗಳು, ಅದರ ಪೈಕಿ ಮುಖ್ಯವಾಗಿ [illegible] ಮಾರಾಟದ ಪರಿಶೀಲನೆ ನಡೆಸಲು ಸರ್ಕಾರದವರು ಕೈಗಾರಿಕಾ ಡೈರೆಕ್ಟರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುವರು

## ಆಡಳಿತದಲ್ಲಿ ಹಿಂದಿಯ ಪ್ರಾಮುಖ್ಯತೆ

### ಘಟಿಕೋತ್ಸವದಲ್ಲಿ ಬೊಂಬಾಯಿ ಮುಖ್ಯ ಮಂತ್ರಿಗಳ ಭಾಷಣ

ತುಮಕೂರಿನಲ್ಲಿ ನೆನ್ನೆ ಹಿಂದಿ ಪ್ರಚಾರ ಸಮಿತಿಯ ಆಶ್ರಯದಲ್ಲಿ ನಡೆದ ಘಟಿಕೋತ್ಸವದಲ್ಲಿ ಬೊಂಬಾಯಿಯ ಮುಖ್ಯ ಮಂತ್ರಿ ಮೊರಾರ್ಜಿ ದೇಸಾಯಿಯವರು ಭಾಷಣ ಮಾಡುತ್ತಾ, ದೇಶವನ್ನು ಐಕ್ಯಗೊಳಿಸುವುದರಲ್ಲಿ ಹಿಂದಿಯ ಪ್ರಾಮುಖ್ಯತೆಯನ್ನು ವಿವರಿಸಿದರು. ಹಿಂದಿಯನ್ನು ಬಹುಮಟ್ಟಿನ ಜನರು ತಿಳಿಯಬಲ್ಲವರಾಗಿರುವುದರಿಂದ ಅದನ್ನು ರಾಷ್ಟ್ರಭಾಷೆಯಾಗಿ ಮಾಡಲಾಗಿದೆಯೆಂದು ಅವರು ಹೇಳಿ, ಸ್ವರಾಜ್ಯ ಬಂದು ಆರು ವರ್ಷವಾದರೂ ಇಂಗ್ಲಿಷಿನಲ್ಲಿಯೇ ಆಡಳಿತ ನಡೆಸುತ್ತಿರುವುದು ನಾಚಿಕೆಗೇಡಿನ ವಿಷಯವೆಂದು ತಿಳಿಸಿದರು. ಕೆಲವು ಪಕ್ಷಗಳಲ್ಲೇ ಹಿಂದಿಯನ್ನು ಆಡಳಿತ ಭಾಷೆಯಾಗಿ ಮಾಡಲು ಪ್ರಯತ್ನಿಸಬೇಕೆಂದು ಅವರು ಹೇಳಿದರು. ದೇಶವನ್ನು ಭಾಷಾವಾರು ಪ್ರಾಂತಗಳಾಗಿ ವಿಂಗಡಿಸುವುದು ಸರಿಯಲ್ಲವೆಂದೂ, ಅದನ್ನು ತಾವು ವಿರೋಧಿಸುವುದಾಗಿಯೂ ಅವರು ತಿಳಿಸಿ, ಆ ಬಗ್ಗೆ ಹಿಂಸಾತ್ಮಕ ಕೃತ್ಯಗಳಿಂದ ಜನರು ತಮ್ಮ ಕೆಲಸಗಳನ್ನು ಸಾಧಿಸಲೆತ್ನಿಸುವುದನ್ನು ಖಂಡಿಸಿದರು

## ಗುಜರಾತಿನಲ್ಲಿ ರೈತರ ಸತ್ಯಾಗ್ರಹ

ಗುಜರಾತಿನ ಪರ್ಡಿ ತಾಲ್ಲೂಕಿನಲ್ಲಿ ಮುಂದಿನ ತಿಂಗಳು ೧ ರಿಂದ ಅಲ್ಲಿನ ರೈತರು ಭೂಸತ್ಯಾಗ್ರಹವನ್ನು ನಡೆಸಲು ನಿರ್ಧರಿಸಿರುತ್ತಾರೆ. ಪ್ರಜಾ ನಾಯಕರಾದ ಅಶೋಕ ಮೆಹತಾರವರು ಅದರ ನಾಯಕತ್ವವನ್ನು ವಹಿಸಲಿರುವರು. ಭಾರಿ ಜಮೀನುದಾರರ ವಶದಲ್ಲಿರುವ ಅನೇಕ ಜಮೀನುಗಳು ಬಂಜರು ಬಿದ್ದಿರುವುದರಿಂದ ಅದನ್ನು ಪ್ರತಿಭಟಿಸಲೂ, ಮತ್ತು ಕೇವಲ ಹುಲ್ಲಿಗಾಗಿ ಬೆಳೆಯುವ ಫಸಲನ್ನಲ್ಲದೆ ಆಹಾರ ಬೆಳೆಯನ್ನು ತೆಗೆಯಲು ರೈತರಿಗೆ ಹಕ್ಕು ಇರುವುದೆಂಬುದನ್ನು ಘೋಷಿಸಲೂ ಈ ಸತ್ಯಾಗ್ರಹವು ನಡೆಯಲಿದೆ

## ಬೆಂಗಳೂರಿನ ಪ್ರಮುಖ ವ್ಯಕ್ತಿಯೊಬ್ಬರ ಪತ್ತೆಯಿಲ್ಲ

ಬೆಂಗಳೂರಿನ ಕಟ್ಟಡಗಳ ಕಂಟ್ರಾಕ್ಟರೂ ಮತ್ತು ಲಂಚ ನಿರೋಧ ಇಲಾಖೆಯ ಡೈರೆಕ್ಟರ್ ಶ್ರೀ ಜಿ ಅಪ್ಪಾಜಿಗೌಡರ ಸಹೋದರರೂ ಆದ ಶ್ರೀ ಜಿ ಗೋವಿಂದಪ್ಪನವರು ಕಳೆದ ೧೭ನೇ ತಾ॥ ನಿಂದಲೂ ಪತ್ತೆಯಿರುವುದಿಲ್ಲ. ಅವರು ಆ ದಿನ ಮಧ್ಯಾಹ್ನ ಕಾರಿನಲ್ಲಿ ರೈಲ್ವೆ ನಿಲ್ದಾಣಕ್ಕೆ ಬಂದು, ಡ್ರೈವರನನ್ನು ಅಲ್ಲಿರುವಂತೆ ಹೇಳಿ ಹೊರಟುಹೋದವರು ಎಷ್ಟು ಹೊತ್ತಾದರೂ ಹಿಂತಿರುಗದಿದ್ದ ಕಾರಣ, ಡ್ರೈವರನು [illegible] ನಿಲ್ದಾಣದಲ್ಲೆಲ್ಲಾ ಹುಡುಕಿದನೆಂದು ಹೇಳಲಾಗಿದೆ. ಅವರಿಗಾಗಿ ಮೈಸೂರು, ವೆಲ್ಲೂರು, ತಿರುಪತಿ, ಪೂನಾ ಮುಂತಾದ ಕಡೆಗಳಲ್ಲಿ [illegible] ನೋಡಿದರೂ ಏನೂ ಪ್ರಯೋಜನವಾಗಲಿಲ್ಲವೆಂದು ಗೊತ್ತಾಗಿದೆ. ಅವರು ಕರುಳು ರೋಗಪೀಡಿತರಾಗಿದ್ದರೆಂದೂ, ಮನೆಯಿಂದ ಹೊರಡುವ ಮುಂಚೆ ಯಾವಾಗಲೂ ಹಿಡಿಯುತ್ತಿದ್ದ [illegible]ನ್ನು, ಚಪ್ಪಲಿಯ ಪೆಟ್ಟಿಗೆ [illegible] ಅಲ್ಲಿಯೇ ಬಿಟ್ಟು, ಜೇಬಿನಲ್ಲಿ ೫ ಸಾವಿರ ರೂ ಇಟ್ಟುಕೊಂಡಿದ್ದರೆಂದೂ ಹೇಳಲಾಗಿದೆ

# ವಾರ ಭವಿಷ್ಯ

ತಾ|| ೨೩-೮-೫೩ ರಿಂದ ೨೯-೮-೫೩ ರ ವರೆಗೆ

**ಮೇಷ—** ಸಹೋದ್ಯೋಗಿ ಮತ್ತು ವ್ಯವಹಾರದಲ್ಲಿ ಎಚ್ಚರಿಕೆ ವ್ಯಾಪಾರ ನೋಡಿ ಬಾವಿ ಶ್ರೇಯಸ್ಸು ... ಅವಮಾನ, ವಾರಾಂತ್ಯದಲ್ಲಿ ವ್ಯಾಪಾರಿಗಳಿಗೆ ಉತ್ತಮ, ಕಲಾವಂತರಿಗೆ ನೆಟ್ಟಿಗೆ ಹಣದ ಆದಾಯ ಸ್ವಲ್ಪ

**ವೃಷಭ—** ಹಣಕಾಸಿನ ಆದಾಯ ಕ್ಕೆ ಉತ್ತಮ ವಾರ, ಲಾಭದಾಯಕ ವ್ಯವಹಾರ ... ಉತ್ತಮ ಫಲ, ನ್ಯಾಯ ... ವಿಶ್ವಾಸ, ವಾರಾಂತ್ಯದಲ್ಲಿ ಹೆಂಡತಿಗೆ ಅನಾರೋಗ್ಯ

**ಮಿಥುನ—** ಒಳ್ಳೆಯ ಘಟನೆಗಳಿಂದ ಮನಸ್ಸಿಗೆ ಉಲ್ಲಾಸ, ನಿಮ್ಮ ಪ್ರೀತಿಯ ತ ಕೆಲಸದಲ್ಲಿ ಹಣವಂತರ ಸಹಾಯ ವ್ಯಾಪಾರಿಗಳಿಂದ ಇತರರ ವ್ಯಾಪಾರಗಳ ಖರೀದಿ ಗೃಹಕೃತ್ಯದಲ್ಲಿ ನೆಟ್ಟಗಿರದು, ವಾರದ ಪ್ರಥಮ ಭಾಗದಲ್ಲಿ ಕಲಹ, ಎರಡನೆಯದರಲ್ಲಿ ರೋಗ

**ಕರ್ಕ—** ಪರನಿಂದೆಗೆ ಗುರಿ, ಬಂಧುಗಳಿಂದ ತೊಂದರೆ, ಅನಾಥರಿಗೆ ಅಪ್ರಿಯ, ಅನಿರೀಕ್ಷಿತವಾಗಿ ಹಣದ ಆಗಮನ ವ್ಯಾಪಾರಿಗಳಿಗೆ ತೊಂದರೆ

**ಸಿಂಹ—** ಕೈಗೊಂಡ ಕಾರ್ಯದಲ್ಲಿ ಜಯ ಪ್ರತಿಷ್ಠೆ ಹೆಚ್ಚುವುದು, ಮೇಲ್ಪಟ್ಟವರಿಂದ ಸಹಾಯ, ದೊಡ್ಡ ಅಧಿಕಾರಿಗಳಿಗೆ ಸವ ಪ್ರವಪ್ರಯಾಣ, ನೌಕರರಿಗೆ ಹೆಚ್ಚು ಸಹಾಯ ಸಟ್ಟಾ ವ್ಯಾಪಾರ ಕೂಡದು.

**ಕನ್ಯಾ—** ಬಂಡವಾಳ ಹಾಕಿದ ಕಡೆಗಳಲ್ಲಿ ತೊಂದರೆ, ಕೋರ್ಟು ಹಕ್ಕಿನ ಪ್ರಸಂಗ ಹಣಕಾಸಿನ ಅಡಚಣೆ, ಪರಹದ ಸುದ್ದಿ ಪ್ರಯಾಣದ ಪ್ರವಾಸ, ವ್ಯಾಪಾರಿಗಳಿಗೆ ಉತ್ಸಾಹವಿಲ್ಲ

**ತುಲಾ—** ಕೈಗೊಂಡ ಕಾರ್ಯಕ್ಕೆ ಅಡ್ಡಿ, ಬಂಡವಾಳದ ನಾಶ, ನಿಶ್ಚಯಿಸದ ಹಣಕಾಸಿನ ಅಡಚಣೆ, ಪಿತ್ರಾರ್ಜಿತ ಆಸ್ತಿ ಪರಭಾರೆಯಾಗುವ ಸಂಭವ, ವಾರಾಂತ್ಯದಲ್ಲಿ ಉತ್ತಮ

**ವೃಶ್ಚಿಕ—** ಮೊದಲು ಹಣದ ಅಡಚಣೆ, ಬೇಸರ ಕಲಹ ... ಅನುಕರ ಸ್ವಲ್ಪ ಉತ್ತಮ, ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಒಳ್ಳೆ ವಾರ, ಸಟ್ಟಾದಲ್ಲಿ ಜಯ ಸ್ನೇಹಿತರಿಂದ ಲಾಭ, ಮನೆಯಲ್ಲಿ ಸಂತೋಷ

**ಧನು—** ರಕ್ತ ಪೀಡೆ, ಕಾರ್ಯದಲ್ಲಿ ವಿಘ್ನ, ಬೇಸರ, ಜಗಳ, ಅಪವಾದ ಅಶಾಂತಿ, ವ್ಯಾಪಾರಿಗಳು ನಿತ್ಯ ಕೆಲಸದಲ್ಲಿ ತೊಡಗಿರಬೇಕು. ವಾರಾಂತ್ಯದಲ್ಲಿ ಉತ್ತಮ

**ಮಕರ—** ಸೇವೆಗೆ ಮನ್ನಣೆ ದೊರೆಯುವುದು, ಸುಖ ಸಂತೋಷಕ್ಕೆ ಅವಕಾಶ ಅಧಿಕಾರಿಗಳ ಕೃಪೆ, ನೌಕರರಿಗೆ ಬಡ್ತಿ, ವರ್ತಕರಿಗೆ ಲಾಭದ ಅವಕಾಶ ವಾರಾಂತ್ಯದಲ್ಲಿ ನಷ್ಟ

**ಕುಂಭ—** ಅಕಾರಣ ತಪ್ಪುವದ ಕಷ್ಟ ... ಸ್ನೇಹಿತರಿಂದ ಸಹಾಯ ... ಲಾಕ್ಕೆ ಕಳ ವ್ಯಾಪಾರಿಗಳಿಗೆ ಒಳ್ಳೆ ಲಾಭ, ಅವರ ಸಂಪಾದನೆ ... ಕಟ್ಟಿ ಕೊಡು

**ಮೀನ—** ಸಂಬಳ ಹೆಚ್ಚುವುದು ವ್ಯಾಪಾರಿಗಳಿಗೆ ಉತ್ತಮ ಪಾಲುಗಾರಿಕೆ ... ಆರೋಗ್ಯ ಉತ್ತಮ

## ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರಾತ್ರಿಗೂ ಬೇಕಾದ ... ಪ್ರತಿದಿನವೂ ಅವಶ್ಯಕವಾಗಿ ಬೇಕಾದ ... ಶುಚಿಯಾದ ತಾಜಾ ಆಹಾರ


**ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ**

ದೊರೆಯುವ ಪ್ರಸಿದ್ಧ ಸ್ಥಳವೆಂದರೆ

**ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,**

(ಚಂದ್ರಮೌಳೀಶ್ವರ ಸಮೀಪ)

ಡಿ. ಸುಬ್ಬಯ್ಯ ರಸ್ತೆ ಮೈಸೂರು



Edited, Printed and Published by A R Nagarajan at Sadhvi Press, D. Subbiah Road Mysore


## ಕೊಡಗಿನ ಧನಲಕ್ಷ್ಮಿ ಬಗ್ಗೆ ಫ್ರೆಂಚ್ ವೈದ್ಯರ ಅಭಿಪ್ರಾಯ

ಸಾಯಿಜರ್ ಲ್ಯಾಂಡಿನ ಪ್ರದೇಶದಲ್ಲಿ ಇನ್ಸ್ಟಿಟ್ಯೂಟ್ ... ನಗರದಲ್ಲಿರುವ ಪ್ರೊ|| ರೋಜರ್ ಗೋಡೆಲ್ ಎಂಬ ಫ್ರೆಂಚ್ ವೈದ್ಯಾಧಿಕಾರಿಯು ಕೊಡಗಿನ ಧನಲಕ್ಷ್ಮಿಯನ್ನು ಭೇಟಿ ಮಾಡಿದ ತ್ವರಿತ ಆಕೆಯ ಪರಿಸ್ಥಿತಿಯ ಬಗ್ಗೆ ಅವರ ಕುತೂಹಲವನ್ನು ವ್ಯಕ್ತಪಡಿಸಿ, ಆಕೆಯು ಆಹಾರ ಸೇವನೆ ಮಾಡದಿರುವ ಸಂಬಂಧವಾಗಿ ಪ್ರಕಟವಾಗಿರುವ ವಿಷಯಗಳು ನಿಜವಾಗಿದ್ದರೆ ಜಗತ್ತಿನ ವೈದ್ಯಶಾಸ್ತ್ರದ ವಿಷಯವಾಗಿ ನಡೆದಿರುವ ಸಂಶೋಧನೆಗಳನ್ನು ಪುನರ್ವಿಮರ್ಶೆ ಮಾಡಬೇಕಾಗುವುದೆಂದು ತಿಳಿಸಿರುತ್ತಾರೆ

## ಜೇನು ಹುಳುಗಳು ಕಡಿದು ಬಾಲಕನ ಮರಣ

ಕಾಶಿಯ ಬಳಿ ಬಾಳ್ಕಿ ಎಂಬ ಹಳ್ಳಿಯಲ್ಲಿ ೬ ವರ್ಷದ ಒಬ್ಬ ಹುಡುಗನನ್ನು ಆಟ್ಟಿಸಿಕೊಂಡು ಹೋದ ಜೇನುಹುಳಗಳ ಸಮೂಹವು ಅವನನ್ನು ಕಡಿದು ದರಿಂದ ಮೃತಪಟ್ಟಿರುತ್ತಾನೆ ಆಟಕ್ಕಾಗಿ ಹುಡುಗನು ಜೇನುಗೂಡನ್ನು ಹುಲ್ಲು ಕಡ್ಡಿಯಿಂದ ಕೆಡವಲು ಯತ್ನಿಸಿದನೆಂದು ಹೇಳಲಾಗಿದೆ

### ಸಂಗೀತ ಕಚೇರಿ

ರಾಜಧಾನಿಯ ಸುಬ್ರಾಯನ ಕೆರೆಯ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮದ್ರಾಘವೇಂದ್ರ ಸ್ವಾಮಿಗಳವರ ಆರಾಧನೆ ಪ್ರಯುಕ್ತ ನಾಳೆ ರಾತ್ರಿ ೮ ಘಂಟೆಗೆ ಸಂ|| ಟಿ ಚೌಡಯ್ಯನವರ ಪಿಟೀಲು ವಾದನವೂ ಆ|| ವಿ|| ಟಿ ... ವೆಂಕಟೇಶ ದೇವರುರವರ ಮೃದಂಗ ... ವಿದ್ವಾನ್ ... ರವರ ಘಟವಾದನವೂ ನಡೆಯುವುದು

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಸಂಗೀತ ... ಕಾರ್ಯಕ್ರಮ.

### ಶಿಶು ವಿಹಾರ

ಬೆಳಿಗ್ಗೆ ... ಪಿಟೀಲು ... ನಮ್ಮ ಸಹೋದರಿಯರು ... ಬಾಲಕಾಗಳ ... ಕಾರ್ಯಕ್ರಮ.


# ರಾಜಕಮಲ್ ಟಾಕೀಸ್

ಮೈಸೂರು

22-8-53ರಿಂದ 5ನೇ ಕಡೇ ವಾರ

ಪ್ರಸಾದ್ ಪ್ರೊ ರವರ ಹಿಂದಿ ಚಿತ್ರ ★ ಪೂನಂ ★

**SRI GAYATHRI TALKIES**

TO DAY AND TO MORROW

RKO's

**THE LUSTY MEN**

Starring — Susan Hayward and Robert Mitchum

On THURSDAY the 25th ONE DAY ONLY

20th Century Fox's

BELVEDERE RINGS THE BELL

Starring Clifton Webb


## ಅಧಿಕಾರಿಗಳ ಕಪ್ಪಿನಲ್ಲಿ ಮುಸ್ತಾಫಾ ಡಿರವರ ಬಂಧನ

ಸಿರಿಯಾದ ಮಾಜಿ ಪ್ರಧಾನಿ ಡಾ|| ಮುಸ್ತಾಫಾ ಡಿರವರನ್ನು ಬಂಧಿಸಿ ತಂದು ಹೊಸ ಪ್ರಧಾನಿ ಜಹೇದಿಯವರ ಎದುರಿನಲ್ಲಿ ನಿಲ್ಲಿಸಲಾಯಿತೆಂದೂ ಜನರಲ್ ಜಹೇದಿಯವರು ಅವರಿಗೆ ಹಸ್ತಲಾಘವವನ್ನಿತ್ತು ಅವರನ್ನು ಅಧಿಕಾರಿಗಳ ಕಪ್ಪಿನಲ್ಲಿ ಬಂಧಿಸಿಡುವಂತೆ ಆಜ್ಞಾಪಿಸಿದರೆಂದೂ ವರದಿಯಾಗಿದೆ

## ಭೂತವನ್ನೋಡಿಸಲು ಬಾಲಕನ ತಲೆ ಕಡಿದ ಮಂತ್ರವಾದಿ

ಅವಂತಿಪುರದಲ್ಲಿ ಜ್ವರದಿಂದ ಪೀಡಿತನಾಗಿದ್ದ ಶಾಶ್ಮೀರ ಸಿಂಗ್ ಎಂಬ ೧೫ ವರ್ಷದ ಬಾಲಕನೊಬ್ಬನನ್ನು, ಭೂತ ಪಿಶಾಚಿಗಳನ್ನು ಓಡಿಸುವುದರಲ್ಲಿ ಪ್ರವೀಣನೆಂದು ಹೇಳಲಾದ ವರ್ಯಾಲ ಸಿಂಗ್ ಎಂಬುವನ ಬಳಿ ಕರೆತರಲಾಗಿ, ಅವನು ಹುಡುಗನಿಗೆ ಭೂತಹಿಡಿದಿದೆಯೆಂದು ಹೇಳಿ ಅವನ ರಾತ್ರಿಗೆಯನ್ನು ಕಡಿದುಹಾಕಿದನೆಂದು ವರದಿಯಾಗಿದೆ ಬಾಲಕನ ತಲೆಯನ್ನು ಪುನಃ ಮುಂಡಕ್ಕೆ ಸೇರಿಸಿ ಅವನಿಗೆ ಜೀವ ಬರುವಂತೆ ಮಾಡುವುದಾಗಿ ಆವನು ಬಾಲಕನ ಕಡೆಯವರನ್ನು ನಂಬಿಸಿ ಅವರು ಕಣ್ಣು ಮುಚ್ಚುವಂತೆ ಸೂಚಿಸಲು ಅವರುಗಳು ಅದೇ ಪ್ರಕಾರ ಮಾಡಲಾಗಿ, ಮಾಂತ್ರಿಕನು ಅಲ್ಲಿಂದ ಪರಾರಿಯಾದನೆಂದು ಹೇಳಲಾಗಿದೆ

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಆಣೆ | ರೂ ಆ |
|---|---|---|
| ಕಡಲೆಕಾಯಿ | ೧೪ ೦ ೦ | ೨೬ ೦ ೦ |
| ಎಳ್ಳು | ೩೩ ೦ ೦ | ೩೪ ೧೨ ೦ |
| ಹುರುಳಿ | ೪೫ ೦ ೦ | ೬೦ ೦ ೦ |
| ಹಲಸಂದೆ | ೩೦ ೦ ೦ | |
| ಬೆಲ್ಲ | ೦ ೦ ೦ | |
| ತೆಂಗಿನಕಾಯಿ ೧೦೦೦ಕ್ಕೆ | ೨೦೨ ೦ ೦ | ೨೨೩ ೦ ೦ |

## ಕಥಾಲೋಕ

ರಾಮಾವಿಲಾಸ ರಸ್ತೆ ಮೈಸೂರು.

ಕಥಾಲೋಕದ ಎರಡನೇ ವರ್ಷದ ಮೊದಲನೆ ಸಂಚಿಕೆಯು ಈ ತಿಂಗಳ ಕೊನೆಯಲ್ಲಿ ಪ್ರಕಟವಾಗುವುದು ಇದನ್ನು ಮುದ್ರಣ ... ಅನಕೃ... ಹೊಸ ... "ಜಯಂತಿ"ಯನ್ನೂ, ಸಂಗೀತ ಭೂಷಣ ... ಎಸ್ ... ಗೀತೆ ... ವಾಗುವುದು ಇದಲ್ಲದೆ ಸಣ್ಣ ಕಥೆ ... ನಗೆಹನಿ, ಮಾಸ ಭವಿಷ್ಯ—ಇವೆಲ್ಲವೂ ಇವೆ ... ಚಂದಾದಾರರು ... ಮಾಡಿಕೊಳ್ಳಬೇಕಾಗಿದೆ

## ಅಪ್ಪೈಯಾರ್

ವಡ್ಡಾಪಿನ ಜೆಮಿನಿ ಸ್ಟುಡಿಯೋದಿನವರು ಹೊಸದಾಗಿ ತಯಾರಿಸಿರುವ ಅಪ್ಪೈಯಾರ್ ಚಿತ್ರ ದಕ್ಷಿಣ ಭಾರತದಲ್ಲಿ ಚಲನ ಚಿತ್ರೋದ್ಯಮ ರಂಗಕ್ಕೆ ಹೊಸ ವೈಶಿಷ್ಟ್ಯವನ್ನೂ ಛಾಯೆಯನ್ನೂ ತಂದುಕೊಟ್ಟಿದೆ ... ಹೇಳಬಹುದು ಚಿತ್ರದಲ್ಲಿ ಮುದ್ದಾಗಿ ಸಿದ್ಧ ನಟಿ ಶ್ರೀ ... ಪಾತ್ರವಹಿಸಿರುತ್ತಾರೆ ಕಥೆಯು ಒಬ್ಬ ದೈವ ಭಕ್ತೆಯುಳ್ಳ ಮಹಿಳೆಯ ಜೀವನವನ್ನು ... ರುತ್ತದೆ

ಒಬ್ಬ ಮುನಿಯೊಡನೆ ಸಾಮಾನ್ಯ ಸ್ತ್ರೀಯು ... ಸೇರಿದ ಪರಿಣಾಮವಾಗಿ ಆಕೆಗೆ ಅಪ್ಪೈಯಾರ್ ಎಂಬ ಹೆಣ್ಣು ಮಗುವು ಜನಿಸಿತು. ಪಿಗೂ ಮತ್ತು ಹಂಗುಸಿಗೂ ಮೊದಲೇ ... ಒಪ್ಪಂದದಂತೆ ಹೆಣ್ಣು ಕೂಸನ್ನು ತಾಯಿಯು ... ಬಿಟ್ಟಳು. ಅನಾಥ ... ಒಂಬ ಹೆಣ್ಣಿಗೆ ಸಿಕ್ಕಿ, ಅವನು ಅದನ್ನು ಪಾಲಿಸಿದನ ಕ್ರಮೇಣ ಮಗುವಿನ ದೈವ ಭಕ್ತಿ ... ಆಕೆಯು ಗಣೇಶನ ... ಅನೇಕ ಪ್ರಸಿದ್ಧ ಕವಿಗಳನ್ನು ... ಪ್ರಾಪ್ತ ವಯಸ್ಸಾದಾಗ, ... ವಿವಾಹವಾಗಲು ನಿರಾಕರಿಸಿ, ಜನ ... ಮೂಲಕ ಈಶ್ವರನ ಸಾಕ್ಷಾತ್ಕಾರ ಪಡೆಯಲು ... ಆಕಾಂಕ್ಷೆ ಹೊಂದಿದ್ದಳು ಆಕೆಯ ... ರಾಜರು ಮತ್ತು ಕೈಕರು, ಪಾಪಿಗಳು ಮತ್ತು ಪುಣ್ಯಶಾಲಿಗಳು—ಎಲ್ಲರನ್ನೂ ... ಕಳುಹಿಸಲು ಕೇವಲ ... ಕೈಗೊಂಡಿದ್ದಳು

ಚಿತ್ರರಂಗದಲ್ಲಿ ಇತ್ತೀಚಿಗೆ ಕಾಣಬರುವ ... ಸಾಮಾಜಿಕ ದೋಷಗಳನ್ನು ಕಡಿಮೆ ಮಾಡುವುದರ ಬದಲು ಹೆಚ್ಚುತ್ತಿರುವ ಈ ಕಾಲದಲ್ಲಿ ದೈವಭಕ್ತಿಯು ಮಹಿಮೆಯನ್ನು ... ಕಾಲಕ್ಕೆ ... ತಯಾರಾಗಿ ... ಈ ಕಥೆಯು ಚಿತ್ರವು ಎಲ್ಲರ ಮೇಲೂ ... ಬೀರುವುದರಲ್ಲಿ ಸಂದೇಹವಿಲ್ಲ ಇದನ್ನು ತಯಾರಿಕೆ—ಆರಾದ ಎಸ್ ಎಸ್ ವಾಸನ್ ರವರು ... ಯೋಜಿತ ಕಾರ್ಯಕ್ಕಾಗಿ ಅಭಿನಂದನಾರ್ಹರು

ಈ ಚಿತ್ರವು ನಗರದ ಪ್ರಭುದೇವಾ ಥಿಯೇಟರಿನ ಪದ್ಮಾಲಂಕೀಸಿನಲ್ಲಿ ... ಜನರ ದಣಿಗೆ ... ವಾರದಲ್ಲಿ ... ಶೀತವಾಗುತ್ತಿದೆ

ಪ್ರಧಾನ ... ಇದು ವರೆಗೆ ೧೭,೬೮,೮೫೪ ಎಕರೆ ... ಜಮೀನುಗಳು, ಬಂದಿ...


ಗುಪ್ತಾಗಿ ನರಳಬೇಡಿ! ಸಂಕೋಚದಿಂದ ಕೊರಗಬೇಡಿ!!

ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರ್‌ರವರ 96 ವರ್ಷ ಪ್ರಖ್ಯಾತ

**ಸಂತಾನ ಸಿಂಧೂರ** (ಭಸ್ಮ) ★ **ಮದನ ವಿಲಾಸ** (ಗುಳಿಗೆ)

ಧಸ್ಮವು ಬಹಿಷ್ಠೆ (Mensus) ಸಂಬಂಧವಾದ ಹೊಟ್ಟೆ ನೋವನ್ನು ನಿವಾರಿಸಿ ... ಗರ್ಭಪಾತ ಇತ್ಯಾದಿ ಗರ್ಭಾಶಯದ ರೋಗಗಳನ್ನು ನಿವಾರಿಸಿ ಬಂಜೆತನ (Sterility) ವನ್ನು ಹೋಗಲಾಡಿಸುತ್ತದೆ

ಗುಳಿಗೆಗಳು ಅತ್ಯಕ್ಷವನ್ನು ... ಮಾಡಿ ಸ್ವಪ್ನ ಸ್ಖಲನ ಇತ್ಯಾದಿಗಳನ್ನು ತಡೆಗಟ್ಟಿ ವೀರ್ಯಾಣು (Sperms) ಗಳನ್ನು ವೃದ್ಧಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಈ ಹೊಟ್ಟೆ ನೋವು ನಿಂತು ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಇಂದೇ ಒಂದು ಸೆಟ್ ಸೇವಿಸಿ ವಿಶೇಷವಾಗಿ 15-16 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ ಕ್ರಯ ಸೆಟ್ 6 ರೂ ಅಂಚೆಖರ್ಚು ಉಚಿತ

ತಯಾರಕರು ಎ ಆರ್ ಅಯ್ಯಂಗಾರ್ ಸನ್ ಅಂಡ್ ಕಂ,

618 ... ಹಿಂದೆ, ಮೈಸೂರು

ಸ್ಟಾಕಿಸ್ಟರು :— ಅಶೋಕ ಫಾರ್ಮಸಿ, ... ಬಜಾರ್, ಮೈಸೂರು

**SRI GANESHA TALKIES**

TO-DAY AND TO-MORROW ✻ OTHELLO ✻

From 25 8 53 For Two Days ★ BLACK JACK ★

Featuring — George Sanders Herbert Marshall, Patricia Roc and Agnes Moorhead

Adventure on High Seas! Music in Majorca and Romance Under Mediterranean ... THIS IS BLACK JACK

ಟೆಲಿಫೋನ್ ನಂ 792

|| ವಂದೇ ಮಾತರಂ ||

ಈ ದಿನ ಪತ್ರಿಕೆ 3 ಕಾಸು

೧೨ರ ಹಬ್ಬಕ್ಕೆ ಬೇಕಾದ
ಗಾ। ಕ್ರೀಪ್ ಸೀರೆಗಳು ಜೋಳ
ಕೇಸುಗಳು, ಧರ್ಮಾವರಂ ಮದಿ
ರೇಷ್ಮೆ ಸೀರೆಗಳು ಪೂನಾ ಸೀರೆ
ಗಳು ಲಕ್ಷ್ಮೀರ್ ಶಾಲುಗಳಿಗೆ
M. V. ಭೋಜಯ್ಯ
ಬಿ ಎ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE · TUESDAY 25-8-1953 · ಮೈಸೂರು : ಮಂಗಳವಾರ ೨೫-೮-೧೯೫೩ [ ಸಂಚಿಕೆ ೨೩

# ಗೊತ್ತಿಲ್ಲದ ಸ್ಥಳಕ್ಕೆ ಡಾ॥ ಮುಸ್ಸಾದಿಕ್‌ರವರ ರವಾನೆ

## ರಾಘವೇಂದ್ರ ಮಠದಲ್ಲಿ ಸಂಗೀತ ಮತ್ತು ಉಪನ್ಯಾಸ

ಮೈಸೂರು ೨೪

ರಾಜಧಾನಿಯ ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ನಾಳೆ ರಾತ್ರಿ ೮॥ ಗಂಟೆಗೆ ಶ್ರೀ ಗುರುಗಳವರ ಮಹಿಮೆಯ ಬಗ್ಗೆ ಉಪನ್ಯಾಸವೂ, ನಾಳಿದ್ದು ರಾತ್ರಿ ೮॥ ಗೆ ದರ್ಬಾರ್ ಭಕ್ಷಿ ಶ್ರೀ ಹೆಚ್ ಎಲ್ ದೇವರಾಜೇ ಅರಸಿನವರ ನೇತೃತ್ವದಲ್ಲಿ ಬೆಂಗಳೂರಿನ ವಿ॥ ಎ ಸುಬ್ಬರಾಯರ ಸಂಗೀತವೂ ಏರ್ಪಾಡಾಗಿದೆ ವಿದ್ವಾಂಸರಾದ ಶ್ರೀ ಅರುಣಾಚಲಪ್ಪನವರು ಮತ್ತು ಪಾರ್ಟಿಯವರ ಹಾರ್ಮೋನಿಯಂ ವಾದನವೂ ಇದೆ ಆಸ್ತಿಕ ಮಹಾಶಯರೆಲ್ಲರೂ ಬರಬೇಕೆಂದು ಕೋರಲಾಗಿದೆ.

### ರಾಘವೇಂದ್ರ ಸ್ವಾಮಿಗಳವರ ಜಯಂತಿ ಉತ್ಸವ

ರಾಜಧಾನಿಯ ಲಷ್ಕರ್ ಮೊಹಲ್ಲಾ ಆರೋಗ್ಯ ರಸ್ತೆಯ ೨ನೇ ಪಶ್ಚಿಮ ಕ್ರಾಸಿನಲ್ಲಿರುವ ಸಂಗೀತ ವಿದ್ವಾನ್ ಶ್ರೀ ವೆಂಕಟರಮಣಯ್ಯನವರ ಮನೆಯಲ್ಲಿ ಪ್ರತಿ ವರ್ಷದಂತೆ ಈ ಸಂವತ್ಸರ ಇಂದಿನಿಂದ ೧೦ ದಿನಗಳವರೆಗೆ ಶ್ರೀಮದ್ರಾಘವೇಂದ್ರ ಗುರುಗಳವರ ಜಯಂತಿ ಉತ್ಸವವು ನೆರವೇರುವುದು ಪ್ರತಿ ನಿತ್ಯ ರಾತ್ರಿ ೭॥ ಗಂಟೆಯಿಂದ ೯॥ ಗಂಟೆ ವರೆಗೆ ಆಸ್ಥಾನ ವಿದ್ವಾಂಸರುಗಳಿಂದಲೂ ಇತರ ಸಂಗೀತಗಾರರಿಂದಲೂ ಗಾಯನ ಕಛೇರಿಗಳನ್ನು ಏರ್ಪಡಿಸಲಾಗಿದೆ

### ಮಹಾರಾಜರೊಡನೆ ನಗರದ ಕಲಾವಿದರ ಭೇಟಿ

ರಾಜಧಾನಿಯಲ್ಲಿರುವ ಸುಪ್ರಸಿದ್ಧ ಕಲಾವಿದರಾದ ಮಧುಗಿರಿಯ ಶ್ರೀ ಎಂ ಹೆಚ್ ರಾಮೂರವರಿಗೆ ನೆನ್ನೆ ದಿನ ಶ್ರೀಮನ್ ಮಹಾರಾಜರು ಭೇಟಿಯನ್ನು ದಯಪಾಲಿಸಿದ್ದರು ಶ್ರೀ ರಾಮು ರವರು ರಾಜಕುಮಾರರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರರ ಬಗ್ಗೆ ಶ್ರೀವತ್ಸರವರಿಂದ ರಚಿತವಾಗಿರುವ ಕನ್ನಡ ಪದ್ಯ ಮಾಲಿಕೆಯನ್ನೂ ಮತ್ತು ತಾವು ಬರೆದಿರುವ ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರ ಚಿತ್ರವನ್ನೂ ಮಹಾರಾಜರಿಗೆ ಅರ್ಪಿಸಿದರು ಕಲಾವಿದರಿಗೆ ಶ್ರೀಮನ್ ಮಹಾರಾಜರು ಶ್ರೀರಕ್ಷೆಯನ್ನು ಕೊಟ್ಟರು

## ಹಿಮಾಲಯದ ಮತ್ತೊಂದು ಶಿಖರವೇರಲು ಹಿಲಾರಿ ಯತ್ನ

ಮುಂದಿನ ಮಾರ್ಚಿಯಲ್ಲಿ ಹಿಮಾಲಯದ ಬಿಮಕಾಲು ಎಂಬ ಯಾರೂ ಹತ್ತದಿರುವ ಬೇರೊಂದು ಶಿಖರವನ್ನು ಎವರೆಸ್ಟ್ ಶಿಖರಾರೋಹಿ ನ್ಯೂಜಿಲೆಂಡಿನ ಹಿಲಾರಿಯವರು ಹತ್ತಲು ಆಲೋಚಿಸಿರುತ್ತಾರೆ.

## ಗಡಿನಾಡಿನ ಮಂತ್ರಿಯ ರಾಜೀನಾಮೆ

ಪಾಕಿಸ್ತಾನದ ವಾಯುವ್ಯ ಗಡಿನಾಡಿನ ಸ್ಥಳೀಯ ಸಂಸ್ಥೆ, ನಿರಾಶ್ರಿತರು ಮತ್ತು ಪುನರ್ವಸತಿ ಶಾಖಾ ಮಂತ್ರಿ ಜಲಾಲುದ್ದೀನ್ ಖಾನ್ ರವರು ತಮ್ಮ ಮೇಲೆ ಲಂಚ ಮುಂತಾದ ಅಪಾದನೆಗಳನ್ನು ಮಾಡಲ್ಪಟ್ಟುದರಿಂದ, ರಾಜೀನಾಮೆಯನ್ನು ಕೊಟ್ಟಿರುತ್ತಾರೆ

## ನವೆಂಬರಿನಲ್ಲಿ ಪೌರಸಭಾ ಚುನಾವಣೆ

ಮೈಸೂರು ೨೪

ರಾಜಧಾನಿಯ ಪೌರಸಭಾ ಚುನಾವಣೆಯು ಬಹುಶಃ ಬರುವ ನವೆಂಬರ್ ತಿಂಗಳು ಕಡೆಯ ವಾರದಲ್ಲಿ ನಡೆಯಲಿರುವುದಾಗಿ ತಿಳಿದುಬಂದಿದೆ ಪೌರಸಭೆಗೆ ಕಳೆದ ವರ್ಷವೇ ಚುನಾವಣೆಯು ನಡೆಯಬೇಕಾಗಿದ್ದು, ಮೊದಲು ಮೂರು ತಿಂಗಳು, ಅನಂತರ ೯ ತಿಂಗಳ ಜೀವದಾನ ಕೊಡಲಾಯಿತು.

## ಕಾಶ್ಮೀರದಲ್ಲಿ ಜನಮತಗಣನೆಗೆ ಮಹಾಸಭೆಯ ವಿರೋಧ

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳಿಂದ ಕೊಡಲ್ಪಟ್ಟಿರುವ ಹೇಳಿಕೆಯ ಪ್ರಕಾರ ಕಾಶ್ಮೀರದಲ್ಲೆಲ್ಲಾ ಪೂರ್ಣವಾಗಿ ಜನತ ಗಣನೆಯನ್ನು ತೆಗೆದುಕೊಳ್ಳುವ ವಿಷಯದ ಬಗ್ಗೆ ಅಖಿಲ ಭಾರತ ಹಿಂದೂ ಮಹಾಸಭೆ ಕಾರ್ಯಕಾರಿ ಸಮಿತಿಯು ಅಸಮ್ಮತಿಯನ್ನು ವ್ಯಕ್ತಪಡಿಸುತ್ತಾ, ಜಮ್ಮು ಮತ್ತು ಲಡಕ್ ಜನರ ಭವಿಷ್ಯವನ್ನು ಈ ಮತಗಣನೆಯಿಂದ ಅಪಾಯಕ್ಕೆ ಗುರಿಪಡಿಸಲಾಗಿರುವುದೆಂದು ಸಮಿತಿಯು ಭಾವಿಸುತ್ತದೆ ಭಾರತದಲ್ಲಿ ಕಾಶ್ಮೀರವು ಈಗಾಗಲೇ ಸೇರಿರುವುದೆಂದೂ ಸಮಿತಿಯು ಹೇಳಿದೆ

## ಟಿಬೆಟ್ ದಿನಾಚರಣೆ

ಟಿಬೆಟ್ ದೇಶದ ಜನರು ಹಂಗಾಮಿಯಾಗಿ ದಾಸ್ಯದಲ್ಲಿ ನರಳುತ್ತಿರುವುದರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲೂ ಮತ್ತು ಅಲ್ಲಿ ಚೀಣಾ ಸೈನ್ಯಗಳಿರುವುದರಿಂದ ಭಾರತಕ್ಕೆ ಇರುವ ಅಪಾಯವನ್ನು ಕುರಿತು ಎಚ್ಚರಿಸಲೂ ಸೆಪ್ಟೆಂಬರ್ ೧ನೇ ತಾ॥ ದೇಶದಲ್ಲಿ ಟಿಬೆಟ್ ದಿನಾಚರಣೆಯನ್ನು ನಡೆಸಲಾಗುವುದು ಇದಕ್ಕಾಗಿ ಪಾರ್ಲಿಮೆಂಟಿನ ಸದಸ್ಯರುಗಳಾದ ಎನ್ ಜಿ ರಂಗಾ, ಎಂ ಎಸ್ ಗುರುಪಾದಸ್ವಾಮಿ ಮತ್ತು ಪಿ ಎನ್ ರಾಜಭೋಜರುಗಳುಳ್ಳ ಸಮಿತಿಯೊಂದು ರಚಿತವಾಗಿದೆ

## ಗೊತ್ತಿಲ್ಲದ ಸ್ಥಳಕ್ಕೆ ಮುಸ್ಸಾದಿಕ್ಕರ ರವಾನೆ

ಪರ್ಷಿಯಾದ ಮಾಜಿ ಪ್ರಧಾನಿ ಡಾ॥ ಮುಸ್ಸಾದಿಕ್ಕರನ್ನು ನೆನ್ನೆ ಗೊತ್ತಿಲ್ಲದ ಸ್ಥಳಕ್ಕೆ ಸಾಗಿಸಲಾಯಿತು ಅವರನ್ನು ವಿಪರೀತ ಗೌರವದಿಂದ ಕಾಣಲಾಗುತ್ತಿದೆಯೆಂದೂ, ಬೇರೆ ಕಡೆಗೆ ವರ್ಗಾಯಿಸುವಂತೆ ಸಾರ್ವಜನಿಕರ ಒತ್ತಾಯ ಬರುತ್ತಿದ್ದೆಂದೂ ಹೇಳಲಾಗಿದೆ ಹೊಸ ಪ್ರಧಾನಿಗಳು ಕಛೇರಿ ನಡೆಸುತ್ತಿದ್ದ ಅಧಿಕಾರಿಗಳ ಕ್ಲಬ್ ಎಂಬ ಅರಮನೆಯಲ್ಲಿ ಇದುವರೆಗೆ ಅವರು ಇಡಲ್ಪಟ್ಟಿದ್ದರು

## ವಿಧಾನ ಸೌಧಕ್ಕೆ ಅತಾರಾ ಕಛೇರಿ ವರ್ಗ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, ಇನ್ನೆರಡು ವರ್ಷದಲ್ಲಿ ಕಟ್ಟಲಾಗುವ 'ವಿಧಾನ ಸೌಧ"–ಶಾಸನ ಸಭಾ ಭವನಕ್ಕೆ ಅತಾರಾ ಕಛೇರಿಯನ್ನು ವರ್ಗಾಯಿಸಲಾಗುವುದೆಂದೂ, ಈಗಿನ ಅತಾರಾ ಕಛೇರಿಯಲ್ಲಿ ಹೈಕೋರ್ಟು ಮತ್ತು ಬೆಂಗಳೂರಿನ ಎಲ್ಲಾ ಕೋರ್ಟುಗಳು ಇರುವುವೆಂದೂ ಹೇಳಿದರು

## ಮುಖ್ಯಮಂತ್ರಿ ಸ್ಥಾನದಿಂದ ನನ್ನನ್ನು ಉರುಳಿಸಲು ಸಾಧ್ಯವಿಲ್ಲ

### ಟೀಕಾಕಾರರ ಪ್ರಯತ್ನದ ಬಗ್ಗೆ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೨೪

ಸಂಸ್ಥಾನದ ಶೀಘ್ರಲಿಪಿಗಾರರ ಸಂಘದ ವಾರ್ಷಿಕ ಸಭೆಯಲ್ಲಿ ಮೊನ್ನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡಿ, ಟೀಕಾಕಾರರು ತಮ್ಮನ್ನು ಅಧಿಕಾರದಿಂದ ತೆಗೆದು, ತಮ್ಮ ಪದವಿಯನ್ನು ಕಸಿದುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದರು ಟೀಕೆ ಮಾತುಗಳನ್ನು ಅವರು ಹಾವಿಗೆ ಹೋಲಿಸಿದರು ಜನರನ್ನು ಕಚ್ಚಿ ಕೊಲ್ಲುವುದು ಹಾವಿನ ಸ್ವಭಾವವಾಗಿರುವುದೇ ಹೊರತು ಪದಾರ್ಥಗಳನ್ನು ಪರೀಕ್ಷಿಸಿ ಪರಿಶೀಲಿಸುವುದಲ್ಲವೆಂದು ಅವರು ಹೇಳಿದರು ತಮ್ಮನ್ನು ಟೀಕಿಸುವವರಿಗೆ ದೇಶದ ಹಿತದೃಷ್ಟಿಯಿಲ್ಲವೆಂದೂ ತಿಳಿಸಿದರು. ಮುಂದುವರಿದು, ಸಂಸ್ಥಾನ ಆಡಳಿತದಲ್ಲಿ ಈಗ ಸಮಾರು ೬೦ ಲಕ್ಷ ರೂ ಉಳಿತಾಯವಿರುವುದೆಂದೂ ಸರ್ಕಾರದ ಬಳಿ ೫॥ ಕೋಟಿ ರೂ ಇರುವುದಾಗಿಯೂ ಅವರು ಹೇಳಿದರು

ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮತ್ತೊಂದು ಸಭೆಯಲ್ಲಿ ಮಾತನಾಡುತ್ತಾ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಸಿ ದಾಸಪ್ಪ ಮತ್ತು ಈಗಿನ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರೊಡನೆ ತಮಗೆ ಉಂಟಾದ ಭಿನ್ನತೆಯನ್ನು ಅವರು ವಿವರಿಸಿದರು ಕೆಲವು ದಿನಗಳ ಹಿಂದೆ ಶ್ರೀ ವೀರಣ್ಣಗೌಡ ಮತ್ತು ಶ್ರೀ ಎಸ್ ಚೆನ್ನಯ್ಯನವರುಗಳು ಬಂದು ಆಡಳಿತವು ಸ್ವಚ್ಛಕರವಾಗಿಲ್ಲವೆಂದೂ, ಅದನ್ನು ಬದಲಾಯಿಸಲು ತಾವು ನಿಶ್ಚಯಿಸಿರುವುದಾಗಿ ಹೇಳಿದುದಾಗಿಯೂ ಅವಕ್ಕೆ ದೇವರು ತಮ್ಮನ್ನು ಎಲ್ಲಿವರೆಗೆ ಅಧಿಕಾರದಲ್ಲಿಟ್ಟಿರುವನೋ ಅದುವರೆಗೂ ಇರುವುದಾಗಿ ತಾವು ಉತ್ತರವಿತ್ತುದಾಗಿಯೂ ಹೇಳಿದರು

ಆಡಳಿತವು ದುಷ್ಪ್ರವೃತ್ತಿಗಳ ಬಗ್ಗೆ ಬಂದಿರುವ ದೂರುಗಳನ್ನು ಪ್ರಸ್ತಾಪಿಸಿ,ಆಶ್ರಮವಾಸಿಗಳನ್ನು ಸುಧಾರಿಸಲು ಗಾಂಧೀಜಿಯವರು ಉಪವಾಸ ಮಾಡಬೇಕಾಯಿತೆಂದೂ,ರಾಮರಾಜ್ಯದಲ್ಲೂ ಒಡಕತನವು ತಪ್ಪಿರಲಿಲ್ಲವೆಂದೂ ತಿಳಿಸಿದರು ಮುಖ್ಯ ಮಂತ್ರಿತ್ವ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಇವೆರಡನ್ನೂ ಒಂದುಗೂಡಿಸಿದ ಹೊರತು ಕಾಂಗ್ರೆಸ್ ಸಂಸ್ಥೆಯಲ್ಲಿ ಸೌಹಾರ್ದವಿರುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು

### ಹಾಸನದ ಶಾಸನಸಭಾ ಸದಸ್ಯರಿಗೆ ಮುಖ್ಯಮಂತ್ರಿಯವರ ಕರೆ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಹಾಸನದ ಶಾಸನ ಸಭಾ ಸದಸ್ಯರಾದ ಶ್ರೀಗಳು ಜಿ ಎ ತಿಮ್ಮಪ್ಪಗೌಡ ಮತ್ತು ಬಿ ಎನ್. ಬೋರಣ್ಣಗೌಡ ಇವರುಗಳನ್ನು ಕರೆಸಿಕೊಂಡು ಭೇಟಿ ಮಾಡಲು ಶ್ರೀ ಡಿ ಆರ್. ಕರೀಗೌಡರ ಮೂಲಕ ತಂತಿಕಳುಹಿಸಿರುವುದಾಗಿಯೂ ಶಾಸನ ಸಭೆಯ ಹಲವು ಸದಸ್ಯರು ಅವಿಶ್ವಾಸ ನಿರ್ಣಯವನ್ನು ಮಂಡಿಸಲಿರುವ ವಿಷಯಕ್ಕೆ ಭೇಟಿಯು ಸಂಬಂಧಿಸಿರುವುದಾಗಿಯೂ ಕೇಳಲಾಗಿದೆ

## ವಿಶ್ವವಿದ್ಯಾಲಯದಲ್ಲಿ ಸಧ್ಯದಲ್ಲೇ ಭಾರಿ ಬದಲಾವಣೆಯಿಲ್ಲ

ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಸಧ್ಯದಲ್ಲಿ ಯಾವ ಭಾರಿ ಬದಲಾವಣೆಯೂ ಆಗುವುದಿಲ್ಲವೆಂದು ವೈಸ್ ಛಾನ್ಸಲರಾದ ಡಾ॥ ಬಿ ಎಲ್ ಮಂಜುನಾಥ್‌ರವರು ತಿಳಿಸಿರುತ್ತಾರೆ

## ತುಂಗಭದ್ರಾ ನದಿ ಸೌಲಭ್ಯಗಳ ಬಗ್ಗೆ ಆಂಧ್ರಕ್ಕೆ ಹಕ್ಕು

ತುಂಗಭದ್ರಾಯೋಜನೆಯ ಅಂಗವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸೌಕರ್ಯಗಳನ್ನು ಆಂಧ್ರದ ಜನರು ಪಡೆಯಲು ಪೂರ್ಣ ಹಕ್ಕಿರುವುದೆಂದೂ, ಅದನ್ನು ಮೋಸ ಮಾಡಲು ಯಾರಿಗೂ ಅವಕಾಶವಿಲ್ಲವೆಂದೂ, ನೆನ್ನೆ ಪಾರ್ಲಿಮೆಂಟಿನಲ್ಲಿ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ತಿಳಿಸಿದರು ಈ ಸೌಲಭ್ಯಗಳ ಬಗ್ಗೆ ಮೈಸೂರು ಮತ್ತು ಆಂಧ್ರ ಸದಸ್ಯರುಗಳಲ್ಲಿ ಭಿನ್ನಾಭಿಪ್ರಾಯ ಬಂದಾಗ ದೇಶಮುಖ್‌ರವರು ಮಾತನಾಡಿದರು ಆಂಧ್ರವು ತನ್ನ ಹಕ್ಕನ್ನು ಪೂರೈಸಿಕೊಳ್ಳಲು ಅವಕಾಶ ಕಲ್ಪಿಸುವುದು ಮೈಸೂರಿನ ಹೊಣೆಯೆಂದು ಅವರು ಎಲ್ಲಿ ಎರಡು ಸಂಸ್ಥಾನಗಳಿಗೂ ಭಿನ್ನತೆಯುಂಟಾದರೆ ರಾಷ್ಟ್ರಾಧ್ಯಕ್ಷರು ಅಖೈರಾಗಿ ನಿರ್ಧರಿಸಲು ಅಧಿಕಾರ ಹೊಂದಿರುವರೆಂದು ಸ್ಪಷ್ಟಪಡಿಸಿದರು

## ಚಿಲಿಯಲ್ಲಿ ಭೀಕರ ಪ್ರವಾಹ

ದಕ್ಷಿಣ ಅಮೆರಿಕದ ಚಿಲಿ ರಾಜ್ಯದ ದಕ್ಷಿಣ ಭಾಗದಲ್ಲಿ ಬಿರುಗಾಳಿ ಮತ್ತು ಪ್ರವಾಹಗಳಿಂದ ೩೩ ಜನರು ಮಡಿದು, ೧೦ ಸಾವಿರ ಜನರು ನಿರಾಶ್ರಿತರಾಗಿರುತ್ತಾರೆ

## ದೆಹಲಿಗೆ ಕಾಶ್ಮೀರದ ಮುಖ್ಯಮಂತ್ರಿ

ಕಾಶ್ಮೀರದ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರು ನೆನ್ನೆ ದೆಹಲಿಗೆ ವಿಮಾನದಲ್ಲಿ ಬಂದು, ಪ್ರಧಾನಿ ನೆಹರೂ, ಮೌಲಾನಾ ಆಜಾದ್, ಕಟ್ಜು ಮತ್ತು ರಫಿ ಅಹಮದ್ ಕಿದ್ವಾಯಿಯರನ್ನು ಭೇಟಿ ಮಾಡಿದರು ಇವರು ಅವರು ಶ್ರೀನಗರಕ್ಕೆ ವಾಪಸು ತೆರಳುವರು

## ರೈತರಿಗೆ ಷಹಾರವರ ಭೂಮಿಯ ಹಂಚಿಕೆ

ಪರ್ಷಿಯಾದ ಷಹಾರವರು ತಮಗೆ ಸೇರಿದ ಭೂಮಿಯನ್ನೆಲ್ಲಾ ಇಂದಿನಿಂದಲೇ ರೈತರಿಗೆ ಹಂಚುವ ಕಾರ್ಯವನ್ನು ಆರಂಭಿಸುವುದಾಗಿ ಘೋಷಿಸಿರುತ್ತಾರೆ

## ಬಿಹಾರಿನ ಕಬ್ಬಿಣ ಕಾರ್ಖಾನೆ ಬಂದು

ಬಿಹಾರಿನಲ್ಲಿರುವ ಬರ್ನ್‌ಪುರದ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯನ್ನು ಆಡಳಿತ ವರ್ಗದವರು ಮುಚ್ಚಲು ನಿರ್ಧರಿಸಿ ಲಾಕ್‌ಔಟ್ ಮಾಡಿರುತ್ತಾರೆ ನೆನ್ನೆಯಿಂದ ಕಾರ್ಖಾನೆಯ ಬಾಗಿಲು ಬಂದಾಗಿದೆ ಅಲ್ಲಿ ೧೪ ಸಾವಿರ ಕಾರ್ಮಿಕರಿದ್ದರು ಕಾರ್ಖಾನೆಯಲ್ಲಿ ಕೆಲಸವು ಸುಸೂತ್ರವಾಗಿ ನಡೆಯುತ್ತಿರಲಿಲ್ಲ ಮುಷ್ಕರ ಹೂಡುವುದಾಗಿ ಕಾರ್ಮಿಕರು ೧೬ನೇ ತಾ॥ ನೋಟೀಸು ಕೊಟ್ಟಿದ್ದರು ಕಾರ್ಖಾನೆಯ ಬಳಿ ಮಿಲಿಟರಿ ಮತ್ತು ಪೋಲೀಸು ಕಾವಲು ಹಾಕಲ್ಪಟ್ಟಿದೆ

## ಮೈಸೂರು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವಿಲ್ಲ

### ದೆಹಲಿಯಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ದೆಹಲಿಯಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಚ್ ಕೆ ವೀರಣ್ಣಗೌಡರು ನಿನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಡುತ್ತಿದ್ದಾಗ ಮೈಸೂರು [illegible] ... ಕಾಂಗ್ರೆಸ್ ... ಆದರೆ ಸಂಸ್ಥಾನ ಸರ್ಕಾರದ ... ಮತ್ತು ಕಾಂಗ್ರೆಸ್ ಸಂಸ್ಥೆಯ ... ಶ್ರೀ ಗೌಡರು ತಿಳಿಸಿದರು ... ಶ್ರೀ ಕೆ ... ಸುಬ್ರಹ್ಮಣ್ಯ ಮತ್ತು ... ರಾಧಾಕೃಷ್ಣನ್ ... ಮತ್ತು ಅಗರ್‌ವಾಲ ... ಭೇಟಿ ಮಾಡಿದ್ದರು [illegible]

## ಗ್ರೀಸ್ ದ್ವೀಪದ ಭೂಕಂಪದಲ್ಲಿ ೩೦ ಸಾವಿರ ಮನೆಗಳ ನಾಶ

ಗ್ರೀಸಿಗೆ ಸೇರಿದ ಸಿಫಲೋನಿಯಾ ... ಮತ್ತು ಇತರ ದ್ವೀಪಗಳ ... ಘೋರ ... ೨೦ ಸಾವಿರಕ್ಕಿಂತ ಹೆಚ್ಚು ... ಭೂಮಿಯು ಬಿರುಕಿತು [illegible]

## ೭೬ ರಷ್ಯ ನೈಜೀರಿಯಕ್ಕೆ ಸ್ವಪ್ರಭುತ್ವ

ಆಫ್ರಿಕದಲ್ಲಿ ನೈಜೀರಿಯಾ ದೇಶದಲ್ಲಿರುವ ಪ್ರದೇಶಗಳು ... ರಷ್ಟ ಸ್ವಪ್ರಭುತ್ವ ... ತಿಳಿಸಿದ್ದಾರೆ [illegible]

## ಜಲಜನಕ ಬಾಂಬನ್ನು ಮೀರಿಸುವ ಅಣು ಬಾಂಬು

ಜಲಜನಕ ಬಾಂಬುಗಿಂತಲೂ ... ಪ್ರಭಾವಶಾಲಿಯಾದ ... ಬಾಂಬನ್ನು ... [illegible]

೩,೦೦೦ ಪೌಂಡು ... [illegible] ... ಯೂಗೊಸ್ಲಾವಿಯಾ ... ತಿಳಿಸಿದ್ದಾರೆ

## ಅಮಲ್ದಾರರುಗಳಾಗಿ ನೇಮಕ

ಕೆಳಗೆ ಕಂಡವರನ್ನು ... ಅಮಲ್ದಾರರಾಗಿ ಸರ್ಕಾರದವರು ನೇಮಿಸಿದ್ದಾರೆ

ಶಿವಮೊಗ್ಗ ತಾಲ್ಲೂಕ ಶಿರಸ್ತೇದಾರ ... ಎಂ ಎಸ್ ... ಶ್ರೀ ... ಸೂರಯ್ಯ ... ತಾಲ್ಲೂಕ ಶಿರಸ್ತೇದಾರ್ ಶ್ರೀ ಎಸ್ ಅಬ್ದುಲ್ ಅಜೀಜ್ ... ಮ್ಯಾನೇಜರ್ ಶ್ರೀ ಎಸ್ ... ಚಿತ್ರದುರ್ಗ ತಾಲ್ಲೂಕ ಶಿರಸ್ತೇದಾರ್ ... ಕೆ ಎಂ ಗುರುಲಿಂಗಪ್ಪ ... ಶ್ರೀ ಕೆ ವೆಂಕಟ ... ಬೆಂಗಳೂರು ... ಶ್ರೀ ... [illegible]

## ಕರ್ನಾಟಕ ಪ್ರಾಂತ ರಚನೆಗೆ ಬೊಂಬಾಯಿಯ ಅಡ್ಡಿಯಿಲ್ಲ

[illegible] ... ಕನ್ನಡ ... ಸಂಯುಕ್ತ ... ಕ್ರಮಗಳು ... [illegible]

## ಫಾರ್ಮೋಸಾ ದ್ವೀಪದಲ್ಲಿ ಬಿರುಗಾಳಿಯಿಂದ ೫೦ ಜನರ ಮರಣ

[illegible] ... ಜನರು ... [illegible]

### ಆಕಾಶವಾಣಿ ಸಾಂಜ ಕಾರ್ಯಕ್ರಮ

[illegible]

## ಬ್ರಿಟಿಷ್ ಚಕ್ರವರ್ತಿ ಜನ್ಮದಿನದ ರಜಾ ರದ್ದು

ಮದ್ರಾಸು ಸರ್ಕಾರದವರು ಬ್ರಿಟಿಷ್ ಸಾರ್ವಭೌಮರ ಜನ್ಮದಿನದ ರಜೆಯನ್ನು ... ಜನ್ಮದಿನದ ರಜಾ ಕೊಟ್ಟಿರುವುದಾಗಿ ಪ್ರಕಟಿಸಿದ್ದಾರೆ

## ೧೫ ಸಾವಿರ ಹಳ್ಳಿಗರಿಂದ ೧೬ ಮೈಲಿ ರಸ್ತೆ ನಿರ್ಮಾಣ

[illegible] ... ಮೈಲಿ ... ತಾವೇ ನಿರ್ಮಿಸಿಕೊಳ್ಳಲು ... ೧೫ ಸಾವಿರ ಜನರು ನಿರ್ಧರಿಸಿದ್ದಾರೆ ಆದರಿಂದ ೩೦ ಹಳ್ಳಿಗಳ ... ಜನರಿಗೆ ... ಯೋಜನೆ ... ಲಕ್ಷ ರೂ ವಚ್ಚದಲ್ಲಿ ಕೈಗೊಳ್ಳಲಾಗುವುದು

## ಪರ್ಷಿಯಾದ ಖಜಾನೆ ಖಾಲಿ

ಷಹಿ ಯಿದ ಸರ್ಕಾರವು ನಿನ್ನೆ ಒಂದು ... ದೇಶದ ಖಜಾನೆಯು ... [illegible]

## ಚಿನ್ನದ ಸರ ಕಳುವು ಮಾಡಿ, ಕಠಿಣ ಶಿಕ್ಷೆ ಬಯಸಿದ ಮುದುಕಿ

ಚಿನ್ನದ ಸರವನ್ನು ಕಳವು ಮಾಡಿದಳೆಂದು ... [illegible]

## ದಸ್ತಗಿರಿಯಾದ ಗಂಡನನ್ನು ಹಿಂಬಾಲಿಸಿದ ತರುಣಿ

[illegible] ... ದಸ್ತಗಿರಿಯಾಗಿದ್ದ ... ಚಿನ್ನದ ... ಕಾಣೆಯಾಗಿದ್ದ ... [illegible]

## ಆಕಸ್ಮಿಕ ಅಗ್ನಿಪ್ರಮಾಣಿಗೆ ಭೀತಿಗೊಂಡು ಮನೆ ಖಾಲಿ

ಚಿಕ್ಕಮಗಳೂರಿನ ಬಸವನಹಳ್ಳಿ ಪ್ರದೇಶದಲ್ಲಿರುವ ಮನೆಯೊಂದರಲ್ಲಿ ಆಕಸ್ಮಿಕ ... ಒಂದು ಸಂಸಾರದವರು ಮನೆಯನ್ನು ಖಾಲಿ ಮಾಡಿದ ಪ್ರಸಂಗವು ನಡೆದಿರುತ್ತದೆ ... ಬೆಳಕಿನಲ್ಲಿ ... ಅದಾದ ಮಾರನೆ ದಿನ ಮನೆಯಲ್ಲಿರುವವರಿಗೆ ... ಮನೆಯನ್ನು ಖಾಲಿ ಮಾಡದಿದ್ದರೆ ತೊಂದರೆಯಾಗುವುದೆಂದು ... ಎಚ್ಚರಿಸಿದುದರ ಮೇಲೆ ಅವರುಗಳು ಮನೆ ಬಿಟ್ಟು ಹೊರಟುಹೋದರೆಂದೂ ಗೊತ್ತಾಗಿದೆ

### ತುಮಕೂರು ಬಳಿ ಗೂಡ್ಸ್ ರೈಲಿನ ಅಪಘಾತ

ಅರಸೀಕೆರೆಯಿಂದ ಬೆಂಗಳೂರಿಗೆ ನಿನ್ನೆ ಹೋಗುತ್ತಿದ್ದ ಗೂಡ್ಸ್ ರೈಲು ತುಮಕೂರು ಮತ್ತು ... ನಡುವೆ ಕಂಬಿ ತಪ್ಪಿ ... ಉರುಳಿದುವು ... ರೈಲು ... ವ್ಯಾಗನ್ನುಗಳನ್ನು ತುಂಬ ... [illegible]


SRI GAYATHRI TALKIES

TO DAY ONLY

BELVEDERE RINGS THE BELL

From 26-8-53 For 2 Days

Century Fox

WITH A SONG IN MY HEART

(Technicolor)

With Susan Howard Rory Calhoun

NEXT CHANGE –

From 28 8 53 Daily 4 Shows

*Morning Show at 10-30 Matinee at 3 30 Evening Show at 6-30 and Last Show at 9-45*

A QUEEN IS CROWNED


Edited Printed and Published by A R Nagarajan at Sadhvi Press D Subbiah Road Mysore


ಮನೆ ಕ್ರಯ ಅಥವಾ ಭೋಗ್ಯಕ್ಕಿದೆ

ಡೋರ್ ನಂ 2671

[illegible]

ವಿಚಾರಿಸಿ — ಜಯ ಅಂಡ್ ಕಂಪೆನಿ, [illegible]

[illegible]



SARADAVILAS COLLEGE,

Mysore Date 22-8 1953

Applications are invited for the post of Lecturer in [illegible] passed M A [illegible] or [illegible] English Selected candidate will have to [illegible] Apply to the undersigned on or before 30th August 1953 stating qualifications, experience, present [illegible] and the minimum salary required

Hon Secretary



# TENDER NOTIFICATION

1 The Public are hereby informed that the Hotel portion of the newly constructed Bus Shelter at Santhemarahalli, [illegible] Taluk is available for being rented out for a period of one year

2 Tenders will be received from the persons who require the Hotel portion till [illegible] on 31 8 1953 by the undersigned

3 Tenderers should state clearly the monthly rent they are prepared to pay and each tender should be accompanied with a Treasury Chellan for Rs 200 for having credited to District Fund as earnest money

4 After acceptance of tender the tenderer should deposit [illegible] rent failing which the tender will be cancelled and the earnest money forfeited

5 Tenders which are not accompanied with the earnest money will not be considered.

6 The successful tenderer should execute an agreement on 10 anna [illegible] paper agreeing to the conditions specified [illegible] week from the date of intimation

7 The tenderer should be willing to run the Hotel making his own arrangement for water supply till the well is sunk and the pump is fixed

H M CHANNABASAPPA,

President District Board, Mysore

ರಿಜಿಸ್ಟರ್ ನಂ. 792 ॥ ವಂದೇ ಮಾತರಂ ॥ ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE WEDNESDAY 26-8-1953 · ಮೈಸೂರು : ಬುಧವಾರ ೨೬-೮-೧೯೫೩ [ ಸಂಚಿಕೆ ೨೪

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ದೆಹಲಿ ಒಪ್ಪಂದಕ್ಕೆ ಪಾಕಿಸ್ತಾನ ಮಂತ್ರಿಮಂಡಲದ ಸಮ್ಮತಿ

## ರಿಟ್ ಅರ್ಜಿಗಳ ಶುಲ್ಕ ಹೆಚ್ಚಿಸಿರುವುದರ ಪುನರ್ವಿಮರ್ಶೆಗೆ ಒತ್ತಾಯ

ಮೈಸೂರು ೨೬

ರಾಜಧಾನಿಯ ವಕೀಲರಾದ ಶ್ರೀ ಎ. ಎಸ್. ರಾಮಯ್ಯನವರು ಸಂಸ್ಥಾನದ ಹೈಕೋರ್ಟಿನ ರಿಜಿಸ್ಟ್ರಾರರಿಗೆ ಪತ್ರವೊಂದನ್ನು ಬರೆದು, ರಿಟ್ ಅರ್ಜಿಗಳ ಬಗ್ಗೆ ೨ ರೂ ರುಸುಂ ಅನ್ನು ೨೦ ರೂ. ಗಳಿಗೆ ಹೆಚ್ಚಿಸಿರುವುದನ್ನು ಹೈಕೋರ್ಟಿನವರು ಪುನರ್ವಿಮರ್ಶೆ ಮಾಡಬೇಕೆಂದು ಕೋರಿರುತ್ತಾರೆ. ರಿಟ್ ಅರ್ಜಿಗಳ ದಾಖಲಾತಿ ಮತ್ತು ಆ ಸಂಬಂಧವಾದ ನಡವಳಿಕೆಗಳ ಬಗ್ಗೆ ನಿಯಮಗಳನ್ನು ಗೊತ್ತುಪಡಿಸಲು ರಾಜ್ಯಾಂಗದ ೨೨೬ನೇ ವಿಧಿ ಪ್ರಕಾರ ಹೈಕೋರ್ಟಿಗೆ ಅಧಿಕಾರವಿರುವುದಾದರೂ ಅದರಲ್ಲಿಯೇ ಮಿತಿಯನ್ನು ಹಾಕಲಾಗಿರುವುದೆಂದೂ, ಯಾವ ನಿಯಮವೂ ಹಾಲಿ ಜಾರಿಯಲ್ಲಿರತಕ್ಕ ಕಾನೂನಿಗೆ ವಿರೋಧವಾಗಿರಬಾರದೆಂದೂ ಅವರು ಹೇಳಿ, ಕೋರ್ಟ್ ಫೀ ಆಕ್ಟ್ ಪ್ರಕಾರ ಹೈಕೋರ್ಟಿನಲ್ಲಿ ದಾಖಲಾಗುವ ಎಲ್ಲಾ ಅರ್ಜಿಗಳಿಗೂ ೨ ರೂಪಾಯಿಗಳ ರುಸುಂ ಮಾತ್ರ ಕೊಡಬೇಕೆಂಬ ನಿಯಮವಿರುವುದಾಗಿಯೂ, ರಿಟ್ ಅರ್ಜಿ ಶುಲ್ಕವನ್ನು ೨೦ ರೂ ಗಳಿಗೆ ಹೆಚ್ಚಿಸಿರುವುದು ಸದರಿ ಕಾನೂನಿಗೆ ವಿರೋಧವಾಗಿರುವುದೆಂದೂ ಅಭಿಪ್ರಾಯಪಟ್ಟಿರುವರು. ಅಲ್ಲದೆ, ಫೀಜು ಹೆಚ್ಚಿಸಿರುವುದರಿಂದ ಜನಸಾಮಾನ್ಯರು ಪರಿಹಾರಕ್ಕಾಗಿ ಅಹವಾಲುಗಳನ್ನು ಹೈಕೋರ್ಟಿಗೆ ಹಾಕಿಕೊಳ್ಳಲು ತಡೆಗಟ್ಟಿದಂತಾಗಿರುವುದೆಂದೂ, ಮೂಲಭೂತ ಹಕ್ಕಿನ ಸ್ಥಾಪನೆ ಬಗ್ಗೆ ಹಾಕಲ್ಪಡುವ ಎಲ್ಲಾ ಅರ್ಜಿಗಳಿಗೂ ಸುಪ್ರೀಂ ಕೋರ್ಟಿನಲ್ಲೇ ೧೦ ರೂ ರುಸುಂ ಇರುವುದೆಂದೂ ಅವರು ಹೇಳಿರುವರು.

### ಮೈದುನನಿಂದ ಅತ್ತಿಗೆಗೆ ಮಚ್ಚಿನೇಟು

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಚಲುವಾಂಬಾ ಅಗ್ರಹಾರದ ಬಳಿ ಇರುವ ಶ್ರೀ ಸಿ. ವಿಶ್ವನಾಥ ಎಂಬುವರ ಪತ್ನಿ ಶ್ರೀಮತಿ ಅಂಬುಜಾದೇವಿ ಎಂಬಾಕೆಯನ್ನು ಆಕೆಯ ಮೈದುನ ಜನಾರ್ದನ ಎಂಬುವನು ೧೯ನೇ ತಾ|| ಮಚ್ಚಿನಿಂದ ಕತ್ತು ಮತ್ತು ಎದೆ ಮೇಲೆ ಹೊಡೆದು ಗಾಯಗೊಳಿಸಿರುವುದಾಗಿಯೂ, ಆಕೆಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ. ಪೊಲೀಸರು ತನಿಖೆ ನಡೆಸುತ್ತಿರುವರು. ಆಕೆಯು ಗುಣವಾಗುತ್ತಿರುವರು. ಅಪರಾಧಿಯು ಪತ್ತೆಯಿಲ್ಲ.

### ರಾಜಮಹೇಂದ್ರಿಗೆ ವಿಮಾನದಲ್ಲಿ ರಾಜಾಜಿಯವರ ರಹಸ್ಯ ಭೇಟಿ

ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ನೆನ್ನೆ ಬೆಳಿಗ್ಗೆ ಯಾರಿಗೂ ತಿಳಿಯದಂತೆ ಮದ್ರಾಸಿನಿಂದ ವಿಮಾನದಲ್ಲಿ ಹೊರಟು ರಾಜಮಹೇಂದ್ರಿಯನ್ನು ತಲುಪಿದರು. ಮದ್ರಾಸಿನ ಇತರ ಮಂತ್ರಿಗಳಾಗಲಿ ಅಥವಾ [illegible] ಆಗಲಿ ಅವರೆಲ್ಲಿಗೆ ಹೊರಟರೆಂಬ ಗುಟ್ಟು ಅರಿತಿರಲಿಲ್ಲ. ಬೆಂಗಳೂರಿಗೋ, ಕುತ್ತಾಲಮ್ಮಿಗೋ ಹೋಗಿರಬೇಕೆಂದು ಒಬ್ಬ ಅಧಿಕಾರಿಯು ತಿಳಿಸಿದರು. ರಾಜಮಹೇಂದ್ರಿಯಲ್ಲಿ ಅವರು ಪ್ರವಾಹ ಪೀಡಿತ ಪ್ರದೇಶಗಳನ್ನು ಪರಿಶೀಲಿಸಿದರೆಂದು ವರದಿಯಾಗಿದೆ.

## ಬೆಂಗಳೂರಿಗೆ ಮೆಡಿಕಲ್ ಕಾಲೇಜಿನ ವರ್ಗವೇ ?

ಮೈಸೂರು ೨೬

ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಮೊನ್ನೆ ಇಲ್ಲಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿ ಮೆಡಿಕಲ್ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಿ, ಸೆಂಟ್ರಲ್ ಜೈಲಿನಲ್ಲಿ ಅದನ್ನು ಇಡಲೂ ಮತ್ತು ಸೆಂಟ್ರಲ್ ಜೈಲನ್ನು ಬಳ್ಳಾರಿಗೆ ವರ್ಗಾಯಿಸಲೂ ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿಸಿದರು. ಕಾಲೇಜಿನಲ್ಲಿ ೬೩ ಸ್ಥಾನಗಳ ಪೈಕಿ ಈ ವರ್ಷ ೧೦ ಸ್ಥಾನಗಳನ್ನು ಮುಚ್ಚಿಯಿಡಲಾಯಿತೆಂದೂ ಮುಂದಿನ ವರ್ಷ ಉಳಿದ ಸ್ಥಾನಗಳ ಸಂಖ್ಯೆಯನ್ನು ಇನ್ನೂ ಕಡಿಮೆಗೊಳಿಸಲು ಯೋಚಿಸಲಾಗುತ್ತಿರುವುದೆಂದೂ ಹೇಳಿದರು.

### ಸೈಕಲ್ ಕಳುವಿನ ಸಂಬಂಧದಲ್ಲಿ ದಸ್ತಗಿರಿ

ರಾಜಧಾನಿಯ ಮಂಡಿ ಪೊಲೀಸರು ಅಬ್ದುಲ್ ಕರೀಂ ಎಂಬುವನನ್ನು ದಸ್ತಗಿರಿ ಮಾಡಿರುತ್ತಾರೆ. ಅವನು ಹಲವಾರು ಸೈಕಲ್ಲುಗಳನ್ನು ಕಳುವು ಮಾಡಿದ್ದನೆಂದು ಹೇಳಲಾಗಿದೆ. ಅಶೋಕಾ ರಸ್ತೆಯಲ್ಲಿರುವ ವರ್ತಕರಾದ ಶ್ರೀ ಟೇಕ್ ಚಂದ್ ಎಂಬುವರ ಬಳಿ ಇದ್ದ [illegible] ಸೈಕಲ್ಲುಗಳನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ.

### ಗಡಿಯಾರದ ಕಳವಿಗಾಗಿ ದಸ್ತಗಿರಿ

ರಾಜಧಾನಿಯ ಜಗನ್ಮೋಹನ ಭವನದ ಬಳಿ ಹುಡುಗನೊಬ್ಬನ ಕೈಗಡಿಯಾರವನ್ನು ಷಂಷಾ ಎಂಬುವನು ಕಿತ್ತುಕೊಂಡು ಮಂಡಿ ಮೊಹಲ್ಲಾದಲ್ಲಿ ಮಾರಲೆತ್ನಿಸಿದಾಗ ಪೊಲೀಸರು ಅವನನ್ನು ದಸ್ತಗಿರಿ ಮಾಡಿರುತ್ತಾರೆ.

### ಶಾರದಾ ವಿಲಾಸ ಕಾಲೇಜಿನಲ್ಲಿ ಲಾ ತರಗತಿಗಳು

ರಾಜಧಾನಿಯ ಶಾರದಾ ವಿಲಾಸ ಕಾಲೇಜಿನಲ್ಲಿ ನ್ಯಾಯಶಾಸ್ತ್ರ ವಿಭಾಗವನ್ನು ತೆರೆಯುವ ಸಂಬಂಧವಾಗಿ ವಿಶ್ವವಿದ್ಯಾನಿಲಯದ [illegible] ಸದಸ್ಯರಾದ ಬೆಂಗಳೂರು ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ನಾರಾಯಣರಾವ್, ವಿದ್ಯಾ ಇಲಾಖಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯ ಮತ್ತು ವಿಶ್ವವಿದ್ಯಾಲಯದ ಕೌನ್ಸಿಲ್ ಸದಸ್ಯ ಶ್ರೀ ಕೆ. ಪುಟ್ಟಸ್ವಾಮಿಯವರ ನೆನ್ನೆ ಕಾಲೇಜಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿದರು.

### ಕೋಲಾರದ ಗಡಿ ಬಳಿ ಗುಂಡು ಹಾರಿಸಿದ ಪ್ರಕರಣ

ಕೋಲಾರ ಜಿಲ್ಲೆಯ ನಂಗಲಿ ಗ್ರಾಮದಲ್ಲಿ ಕೆಲವು ದಿನಗಳ ಹಿಂದೆ ನಡೆದ ಗುಂಡಿನೇಟಿನ ಪ್ರಕರಣದಲ್ಲಿ ದಸ್ತಗಿರಿಯಾಗಿರುವ ಮದ್ರಾಸಿನ ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಪೊಲೀಸರನ್ನು ಕೋಲಾರದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ರಿಮ್ಯಾಂಡು ಪಡೆಯಲಾಗಿದೆ.

### ವಿರೋಧಿಗಳನ್ನು ಕೊಲ್ಲಲು ಮುಸಾದಿಕ್ಕರಿಂದ ೨೨ ಶೂಲಗಳು

ತಮ್ಮ ವಿರೋಧಿಗಳನ್ನು ಗಲ್ಲಿಗೇರಿಸಲು ಪದಚ್ಯುತ ಮಾಜಿ ಪ್ರಧಾನಿ ಮುಸಾದಿಕ್‌ರವರು ಪೊಲೀಸು ಕೇಂದ್ರದಲ್ಲಿ ೨೨ ಶೂಲಗಳನ್ನು ತಯಾರಿಸಿಟ್ಟಿದ್ದರೆಂದು ಟೆಹರಾನಿನ ಮಿಲಿಟರಿ ಗವರ್ನರು ತಿಳಿಸಿರುತ್ತಾರೆ.

## ೧೨ ಜನ ಡಕಾಯಿತರ ದಸ್ತಗಿರಿ

ನಂಜನಗೂಡು ೨೬

ಕಳೆದ ೬ ತಿಂಗಳಿಂದ ತಾಲ್ಲೂಕಿನ ಪೊಲೀಸರು ತೀವ್ರ ಶೋಧನೆ ನಡೆಸಿದ ಪರಿಣಾಮವಾಗಿ, ಈ ಊರು ಮತ್ತು ಗುಂಡ್ಲುಪೇಟೆಗಳ ನಡುವೆ ರಸ್ತೆಯಲ್ಲಿ ಎತ್ತಿನ ಗಾಡಿಗಳವರನ್ನು ಹೆದರಿಸಿ, ದರೋಡೆ ಮಾಡುತ್ತಿದ್ದರೆಂದು ಹೇಳಲಾದ ೧೨ ಜನ ಭಾರಿ ಡಕಾಯಿತರ ದಸ್ತಗಿರಿಯಾಗಿದೆ. ಪೊಲೀಸರು ಉಪಾಯ ಹೂಡಿ, ಡಕಾಯಿತರು ತಮ್ಮ ಮುಖಂಡ ಯಲ್ಲ ಎಂಬುವನ ಸಮೇತ ಒಂದು ಕಸಬಾನೆಗೆ ಬರುವಂತೆ ಮಾಡಿ ಅಲ್ಲಿ ಅವರನ್ನು ದಸ್ತಗಿರಿ ಮಾಡಿದರೆಂದು ಹೇಳಲಾಗಿದೆ. ನಾಲ್ವರು ಇನ್ನೂ ಸಿಕ್ಕಿಲ್ಲ. ಈ ತಂಡದವರು ಹೊಳೆನರಸೀಪುರ, ಸಿರಾ, ಮಳವಳ್ಳಿ, ಕೃಷ್ಣರಾಜನಗರ ಮುಂತಾದ ಕಡೆಗಳಲ್ಲಿ ದರೋಡೆ ನಡೆಸಿದುದಾಗಿ ಹೇಳಲಾಗಿದೆ.

ದಸ್ತಗಿರಿಯಾದವರ ಬಳಿ ೨ ಸಾವಿರ ರೂ ಬೆಲೆ ಬಾಳುವ ಸಾಮಾನು ದೊರಕಿದೆ. ಬೆಳ್ಳಿ [illegible] ಹಂಚಿಕೊಳ್ಳಲು [illegible] ಭಾಗ ಮಾಡಿ [illegible] ಇವರು ಹಿಂದೆ ಜೋಗಿಗಳೆಂಬ [illegible] ಸೇರಿದವರು.

### ಮುಸಾದಿಕ್ಕರೊಡನೆ ಪತ್ನಿಯ ಭೇಟಿ

ಗೊತ್ತಿಲ್ಲದ ಸ್ಥಳದಲ್ಲಿ ಬಂಧಿಸಲ್ಪಟ್ಟಿರುವ ಪರ್ಷಿಯಾದ ಮಾಜಿ ಪ್ರಧಾನಿ ಡಾ|| ಮುಸ್ಸಾದಿಕ್‌ರವರನ್ನು ಅವರ ಪತ್ನಿಯು ಮೊನ್ನೆ ಭೇಟಿ ಮಾಡಿದ್ದರು. ದಸ್ತಗಿರಿಯಾಗಿರುವ ಅವರ ಮಗ ಗುಲಾಂ ಹುಸೇನರವರೂ ಇಷ್ಟಪಟ್ಟರೆ ತಂದೆಯ ಜೊತೆಯಲ್ಲಿ ಇರಲು ಸರ್ಕಾರದವರು ಅವಕಾಶವಿತ್ತಿರುವರು.

### ರಾಜಾಜಿಯವರ ಗ್ರಂಥಕ್ಕೆ ಬಹುಮಾನ

ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಬರೆದಿರುವ ಶ್ರೀ ರಾಮಕೃಷ್ಣ ಉಪನಿಷತ್ ಎಂಬ ತಮಿಳು ಗ್ರಂಥಕ್ಕೆ ಅತ್ಯುತ್ತಮ ಗ್ರಂಥಗಳಿಗಾಗಿ ಕೊಡುವ ಬಹುಮಾನಗಳಲ್ಲಿ ಒಂದು ದೊರಕಿದೆ. ಬಹುಮಾನದ ಮೊತ್ತವಾದ ೫೦೦ ರೂ ಗಳನ್ನು ರಾಮಕೃಷ್ಣಾಶ್ರಮಕ್ಕೆ ಕೊಡಲು ರಾಜಾಜಿಯವರು ಸೂಚಿಸಿರುವರು.

### ಕನ್ನಂಬಾಡಿ ಕಟ್ಟೆಗೆ ಬಿದ್ದು ಆತ್ಮಹತ್ಯೆ

ರಾಜಧಾನಿಯ ನಿವೃತ್ತ ಅರಮನೆ ಇಂಜನಿಯರ್ ಶ್ರೀ ಎನ್. ವಿ. ಬಾಪಟ್‌ರವರ ಮಕ್ಕಳು ಶ್ರೀ ತ್ರಯಂಬಕರಾವ್ ಬಾಪಟ್‌ರವರು ಕಳೆದ ಶುಕ್ರವಾರ ಪತ್ನಿ ಮತ್ತು ಮಗುವಿನೊಡನೆ ಕನ್ನಂಬಾಡಿಗೆ ಹೋಗಿದ್ದಾಗ, ಅವರ ಪತ್ನಿಯು ಮಗುವನ್ನು ಯಜಮಾನರ ಕೈಗೆ ಕೊಟ್ಟು ಸ್ವಲ್ಪ ದೂರ ಹೋಗಿ ಕಟ್ಟೆಯೊಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ. ಅವರ ಶವವು ಮೊನ್ನೆ ಸಿಕ್ಕಿತು.

### ಎಂ. ಸಿ. ಶ್ರೀಕಂಠಪ್ಪನವರ ನಿಧನ

ರಾಜಧಾನಿಯ ಸಂತೆಪೇಟೆಯ ದಿನಸಿ ವರ್ತಕರಾದ ಶ್ರೀ ಎಂ. ಸಿ. ಶ್ರೀಕಂಠಪ್ಪನವರು ನೆನ್ನೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಹಿಂದೆ ಪೌರ ಸಭಾಸದಸ್ಯರಾಗಿದ್ದ ಶ್ರೀ ಎಂ. ಸಿ. ತಮ್ಮಯ್ಯನವರ ಸಹೋದರರು. ಅವರು ಬಹುದಿನಗಳಿಂದಲೂ ಪಾರ್ಶ್ವವಾಯು ರೋಗದಿಂದ ಹಾಸಿಗೆ ಹಿಡಿದಿದ್ದರು.

## ಪ್ರಧಾನಿಗಳ ಒಪ್ಪಂದಕ್ಕೆ ಪಾಕ್ ಮಂತ್ರಿಮಂಡಲದ ಒಪ್ಪಿಗೆ

ಕಾಶ್ಮೀರದ ಭವಿಷ್ಯವನ್ನು ಕುರಿತು ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳಿಗೆ ಆದ ಒಪ್ಪಂದದ ಬಗ್ಗೆ ಪಾಕಿಸ್ತಾನ ಮಂತ್ರಿಮಂಡಲದಲ್ಲಿ ಭಿನ್ನತೆ ತಲೆದೋರಿತ್ತೆಂದೂ, ದೆಹಲಿ ಒಪ್ಪಂದವನ್ನು ಅಂಗೀಕರಿಸುವಂತೆ ತಮ್ಮ ಮಂತ್ರಿಮಂಡಲದ ಸದಸ್ಯರನ್ನು ಒಪ್ಪಿಸಲು ಪಾಕಿಸ್ತಾನ ಪ್ರಧಾನಿಯವರಿಗೆ ತುಂಬಾ ಪ್ರಯಾಸವಾಗಿತ್ತೆಂದೂ ವರದಿಯಾಗಿದ್ದಿತು. ಈ ವಿಷಯವಾಗಿಯೇ ಪಾಕಿಸ್ತಾನ ಸರ್ಕಾರದವರು ೬ ಸಲ ಸಭೆ ನಡೆಸಿ, ಈಗ ಒಪ್ಪಂದವನ್ನು ಐಕ್ಯಮತ್ಯವಾಗಿ ಅನುಮೋದಿಸಿರುವರೆಂದು ತಿಳಿದುಬಂದಿದೆ.

### ವಿದ್ಯಾರ್ಥಿನಿಯಿಂದ ವಿದ್ಯಾರ್ಥಿಗೆ ಮಚ್ಚಿನ ಏಟು

ಕೋಲಾರ ಟೌನ್ ಹೈಸ್ಕೂಲಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿ ಅಜಾರ್ಥಸಿಂಗ್ ಎಂಬುವನಿಗೆ ಪಿ. ಸಿ. ಸರೋಜಮ್ಮ ಎಂಬ ಅದೇ ತರಗತಿಯ ವಿದ್ಯಾರ್ಥಿನಿಯು ಕಳೆದ ಭಾನುವಾರ ಕುಡುಗೋಲಿನಿಂದ ಹೊಡೆದ ಸಂಬಂಧವಾಗಿ ಆಕೆಯನ್ನು ದಸ್ತಗಿರಿ ಮಾಡಲಾಗಿದೆ. ಪೆಟ್ಟು ತಿಂದವನನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಅವರಿಬ್ಬರ ಮನೆಯವರು ಸಾರ್ವಜನಿಕ ನಲ್ಲಿಯಲ್ಲಿ ಕುಡಿಯುವ ನೀರನ್ನು ತೆಗೆದುಕೊಳ್ಳಲು ಬಂದಾಗ ಪರಸ್ಪರ ಮನಸ್ತಾಪ ಉಂಟಾಗಿ ಜಗಳವಾಯಿತೆಂದೂ, ಯುವತಿಯು ಮನೆಯಲ್ಲಿದ್ದ ಆಯುಧವನ್ನು ತಂದು ನಲ್ಲಿ ಬಳಿ ಇದ್ದ ತರುಣನ ತಲೆ ಮೇಲೆ ಹೊಡೆದಳೆಂದೂ ವರದಿಯಾಗಿದೆ. ಹುಡುಗಿಯ ಅಕ್ಕ ಸಟೀಕಾಬಾಯಿ ಮತ್ತು ಅಜ್ಜಿ ರಂಗಮ್ಮ ಎಂಬುವರ ಮೇಲೂ ಪೊಲೀಸರು ಮೊಕದ್ದಮೆ ಹೂಡಿರುವರು.

### ಚೀಣಾದಲ್ಲಿ ಈ ವರ್ಷ ಅತ್ಯಂತ ಹೆಚ್ಚಿನ ಬೆಳೆ

ಈ ವರ್ಷ ಚೀಣಾದ ರೈತರು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯನ್ನು ತೆಗೆಯಲಿರುವರೆಂದು ವರದಿಯಾಗಿದೆ. ಕಳೆದ ವರ್ಷ ಅಲ್ಲಿ ೧೬ [illegible] ೫೦,೦೦೦ ಟನ್ನುಗಳಷ್ಟು ಧಾನ್ಯವನ್ನು ಬೆಳೆಯಲಾಗಿದ್ದಿತು.

### ರಾಷ್ಟ್ರೀಯ ಚೀಣರಿಂದ ಬರ್ಮಾ ನಗರದ ವಶ

ಬರ್ಮಾಕ್ಕೆ ಸೇರಿದ ಷಾನ್ ಸಂಸ್ಥಾನಗಳ ಪೈಕಿ ಒಂದಾದ ಮೋಂಗ್‌ಮೈ ಪ್ರಾಂತದ ಮುಖ್ಯ ಪಟ್ಟಣ ಕೆಂಟಾಪುಂಗ್ ಅನ್ನು ರಾಷ್ಟ್ರೀಯ ಚೀಣಾ ಪಡೆಗಳು ವಶಪಡಿಸಿಕೊಂಡಿವೆ. ಆ ಸಂಸ್ಥಾನದ ಒಬ್ಬ ಚಿಕ್ಕ ರಾಜರನ್ನು ಸೆರೆ ಹಿಡಿದು ಎಲ್ಲಿಗೋ ಸಾಗಿಸಲಾಗಿದೆ. ಸಂಸ್ಥಾನದ ಅಧಿಪತಿಯು ಅವರಿಗೆ ಸಿಗದೆ ಪರಾರಿಯಾಗಿರುವರು.

○ ಬೆಂಗಳೂರಿನಲ್ಲಿರುವ ಕೇಂದ್ರ ಅಬ್ಕಾರಿ ಸಿಬ್ಬಂದಿಯವರು ನಾಲ್ಕು ಕಡೆ ಶೋಧನೆ ನಡೆಸಿ, ಸುಂಕ ಕೊಡದೆ ಮುಚ್ಚಿಟ್ಟಿದ್ದ ಒಟ್ಟು ೧೩|| ಸಾವಿರ ಪೌಂಡು ಹೊಗೆಸೊಪ್ಪನ್ನು ವಶಪಡಿಸಿಕೊಂಡಿರುತ್ತಾರೆ. ರಾಮನಗರದಲ್ಲಿ ೨,೦೦೦ ರಾಬರ್ಟ್‌ಸನ್‌ಪೇಟೆಯಲ್ಲಿ, ೭,೦೦೦, ಬೆಂಗಳೂರಿನಲ್ಲಿ ೩|| ಸಾವಿರ ಮತ್ತು ಗೌರಿಬಿದನೂರಿನಲ್ಲಿ ೧೦೦೦ ಪೌಂಡು ಈ ರೀತಿ ಸೊಪ್ಪನ್ನು ವಶಪಡಿಸಿಕೊಳ್ಳಲಾಗಿದೆ.

## ರಾಮನಗರದಲ್ಲಿ ಮಿತ ಸಂತಾನ ಯೋಜನೆ ಕೇಂದ್ರ

ಮೈಸೂರು ಸಂಸ್ಥಾನದ ರಾಮನಗರದ ಗ್ರಾಮಗಳಲ್ಲಿ ಮಿತಸಂತಾನದ ಯೋಜನೆಯನ್ನು ಜಾರಿಗೆ ತರಲಾಗುವುದೆಂದು ಕೇಂದ್ರದ ಆರೋಗ್ಯ ಮಂತ್ರಿ ... ಈ ಸಂಬಂಧವಾಗಿ ... ಕೇಂದ್ರವನ್ನು ... ಕಳೆದ ವರ್ಷ ... ಹೊಸ ಯೋಜನೆಗೆ ... ಹಣವನ್ನು ... ತಿಳಿಸಲು ... ಕುಟುಂಬದ ... ಮಿತ ಸಂತಾನ ಯೋಜನೆಯನ್ನು ಜಾರಿಗೆ ತರಲಾಗುವುದು

## ಕರ್ನಾಟಕ ಪ್ರಾಂತ ರಚನೆಗಾಗಿ ನೆಹರೂರವರಲ್ಲಿ ಒತ್ತಾಯ

ಪ್ರಧಾನಿ ನೆಹರೂ ... ಕೇಂದ್ರ ಗೃಹ ಮಂತ್ರಿ ... ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ... ಅಧ್ಯಕ್ಷರಾದ ... ಕರ್ನಾಟಕ ಪ್ರಾಂತವನ್ನು ... ಒತ್ತಾಯಪಡಿಸಿದರು ... ದೆಹಲಿಯಲ್ಲಿ ... ಬೆಂಗಳೂರಿನಲ್ಲಿ ...

## ಬಲವಾದ ಗಾಳಿಯಿಂದ ಮನೆ ಉರುಳಿ ೭ ಜನರ ಮರಣ

... ಮನೆ ... ಬೀಸಿದ ... ಗಾಳಿಯಿಂದ ... ಜನರು ಸತ್ತರು ...

## ೩,೦೦೦ ಮೈಲಿ ವೇಗದ ರಾಕೆಟ್

ಗಂಟೆಗೆ ೩ ಸಾವಿರ ಮೈಲಿ ವೇಗದ ರಾಕೆಟ್ ವಿಮಾನಗಳನ್ನು ಬ್ರಿಟನ್ನು ತಯಾರಿಸಲಿರುವುದೆಂದೂ ... ವಿಮಾನ ... ಬ್ರಿಟನ್ ... ಮಂತ್ರಿ ... ತಿಳಿಸಿದರಂತೆ

## ಹೆಣ್ಣು ಸಿಂಹದಿಂದ ಮರಿಯ ಕೊಲೆ

... ಹೆಣ್ಣು ಸಿಂಹವು ತನ್ನ ... ಮರಿಯನ್ನು ... ಕೊಂದು ... ಜೀವನವು ... ವಿನಾಶ ...

## ಒಂದು ವರ್ಷಕ್ಕಾಗಿ ಹೈದರಾಬಾದಿನ ವ್ಯಾಪಾರಿಗಳು

ಹೈದರಾಬಾದ ಸಂಸ್ಥಾನದಲ್ಲಿ ... ೨೦೦ ಮಂದಿ ... ಇರುವರೆಂದು ... ಮತ್ತು ... ಕೇಂದ್ರಗಳನ್ನು

## ೨ ವರ್ಷಗಳಲ್ಲಿ ೮೦ ಸಾವಿರ ಜನರಿಗೆ ಉಪಾಧ್ಯಾಯ ವೃತ್ತಿ

ಕೇಂದ್ರ ಯೋಜನಾ ಸಮಿತಿಯವರ ... ಯೋಜನೆಯ ಅಂಗವಾಗಿ ೨ ವರ್ಷಗಳಲ್ಲಿ ೮೦ ಸಾವಿರ ಜನರಿಗೆ ಉಪಾಧ್ಯಾಯರ ಕೆಲಸವನ್ನು ಒದಗಿಸಲಾಗುವುದು ... ಶಾಲೆಗಳನ್ನು ... ಪ್ರದೇಶಗಳಲ್ಲಿ ... ಸ್ಥಾಪಿಸಲು ...

## ೩೧ ಗಂಟೆ ಕಾಲ ಸತತ ಭೂಕಂಪ

... ಹಳ್ಳಿಯಲ್ಲಿ ... ೩೧ ಗಂಟೆಯಿಂದ ... ಭೂಕಂಪ ... ಭೂಕಂಪನಗಳನ್ನು ಎಣಿಸಲಾಯಿತು ...

## ನಾಡು ಬಾಂಬು ಸಿಡಿದು ಕೈ ಕತ್ತರಿಸಿತು

... ನಾಡ ಬಾಂಬು ... ಕೈ ಕತ್ತರಿಸಿ ... ಆಸ್ಪತ್ರೆಗೆ ಸಾಗಿಸಲಾಗಿದೆ

### ವಿವಾಹ ಮಹೋತ್ಸವ

... ಶ್ರೀ ... ರಂಗಸ್ವಾಮಿ ... ವಿವಾಹ ...

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಸಂಜೆ ... ವಾರ್ತೆಗಳು ... ಸಂಗೀತ ...

### ಸ್ವಾತಂತ್ರ್ಯ ದಿನಾಚರಣೆ

... ಶಾಲೆ ... ಸ್ವಾತಂತ್ರ್ಯ ದಿನಾಚರಣೆ ... ಶ್ರೀ ... ಅಧ್ಯಕ್ಷತೆ ವಹಿಸಿದ್ದರು ... ಸ್ವಾತಂತ್ರ್ಯ ದಿನದ ಮಹತ್ವವನ್ನು ... ಪ್ರಜೆಗಳ ಕರ್ತವ್ಯವನ್ನು ವಿವರಿಸಿದರು ...

### ಸೀಬೆ ಹಣ್ಣಿನ ... ೬ ತಿಂಗಳು ...

ಬೆಂಗಳೂರಿನ ... ಆಸ್ಪತ್ರೆಯ ... ಸೀಬೆಹಣ್ಣುಗಳನ್ನು ... ೬ ತಿಂಗಳು ... ಶಿಕ್ಷೆಯನ್ನು ವಿಧಿಸಲಾಗಿದೆ

## ಯೂರೋಪು ಮತ್ತು ಅಮೇರಿಕಾ ಮೇಲೆ ರಷ್ಯಾ ಅಣು ಬಾಂಬ್

... ಅಣು ಬಾಂಬ್ ... ರಷ್ಯಾ ... ವಿಮಾನ ... ಮಂತ್ರಿ ... ಪ್ರಯೋಗಿಸಲು ...

## ಸಂಜೆ ಹೊತ್ತು ಅರಳುವ ಹೂ

... ಹೂಗಳು ... ಸಂಜೆ ಹೊತ್ತು ... ಅರಳುವ ...

### ಸಂಸ್ಕೃತ ಶ್ಲೋಕಗಳ ಗಾಯನ ತರಗತಿ

... ಸ್ವಾಮಿಗಳವರ ... ತರಗತಿ ...

### ಯುಕ್ತಿಂದ್ರರು ಪ್ರೌಢಶಾಲೆಯ ವಿದ್ಯಾರ್ಥಿ ಸಂಘ

... ವಿದ್ಯಾರ್ಥಿ ಸಂಘದ ... ಶ್ರೀ ... ಭಾಷಣವನ್ನು ... ಅಧ್ಯಕ್ಷತೆ ವಹಿಸಿದ್ದರು


# SRI GAYATHRI
TALKIES
From 26 8 53 ... 20th Century Fox
# WITH A SONG IN MY HEART
(Technicolor)
With Susan Hayward ...
NEXT CHANGE
From 28 8 53 Daily 4 Shows
... 
# A QUEEN IS CROWNED


Edited, Printed and Published by A R Nagarajan at Sadhvi Press D Subbiah Road, Mysore

## ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಸಾಮೂಹಿಕ ವ್ಯಾಯಾಮ

ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಸಾಮೂಹಿಕ ವ್ಯಾಯಾಮವನ್ನು ಕಲಿಸಲು ಮತ್ತು ... ಯೋಜನೆಯನ್ನು ಜಾರಿಗೆ ತರಲಿರುವರು ... ವ್ಯಾಯಾಮ ... ಕರ್ತವ್ಯ ... ಇದರ ಗುರಿಯಾಗಿದೆ

## ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಆಣೆ | ರೂ ಆ |
|---|---|---|
| ಕಡಲೆಬೀಜ | ... | ... |
| ಎಳ್ಳು | ... | ... |
| ... | ... | ... |
| ಹೆಸರು | ... | |
| ಅವರೆ | ... | |
| ... | ... | |
| ಅಲಸಂದೆ | ... | ... |
| ... | ... | ... |
| ... | ... | |
| ತೆಂಗಿನಕಾಯಿ ೧೦೦ಕ್ಕೆ | ... | ... |

### ವಾರ್ಷಿಕ ಕೋತ್ಸವ

... ಚಾಮರಾಜ ... ಪೇಟೆಯಲ್ಲಿರುವ ... ಸಂಸ್ಕೃತ ಮಹಾಪಾಠಶಾಲೆ ... ಶ್ರೀ ... ಅಧ್ಯಕ್ಷತೆ ವಹಿಸುವರು

### ನೆಹರೂ ಕಪ್ ಮತ್ತು ಜನರಲ್ ಸ್ಪೋರ್ಟ್ಸ್

... ಚಾಮುಂಡಿಪುರದ ... ನೆಹರೂ ಕಾಫಿ ಮತ್ತು ಜನರಲ್ ... ತೆರೆದರು


# SRI GANESHA
TALKIES
FOR TO DAY ONLY
# BLACK JACK
From 27-8-53 For 2 Days
M G M's Big Adventure Spectacle
In Brilliant Technicolor
# ACROSS THE WIDE MISSOURI
Featuring Clark Gable, Ricardo Montalban, Adolf Menjou and Maria Elena Marques

## ಚಂದಾದಾರರಲ್ಲಿ ವಿನಂತಿ

ಸಾಧ್ವಿ ಚಂದಾದಾರರೆಲ್ಲರೂ ದಯವಿಟ್ಟು ... ಚಂದಾ ಹಣವನ್ನು ಮುಂಗಡವಾಗಿ ... ಕೋರಲಾಗಿದೆ ...

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಮುದ್ರಣಾಲಯ, ಮೈಸೂರು

ಮಿತ ... ಉಪಯೋಗಕ್ಕಿದೆ
ಫೋನ್ ನಂ 2671
... ಮೈಸೂರು
ಜಯ ಅಂಡ್ ಕಂಪೆನಿ, (ಫೋನ್ 520)

ರಿಜಿಸ್ಟರ್ ನಂ. 792 | ॥ ವಂದೇ ಮಾತರಂ ॥ | ಇಂದಿನ ಪತ್ರಿಕೆ 3 ಆಣೆ

ಗೌರಿ ಹಬ್ಬಕ್ಕೆ ಬೇಕಾದ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು
ಜೋಡಿನ ರಮುಂದಾರಿ
ಸೀರೆಗಳು ಬಂದಿವೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE THURSDAY 27-8-1953 : ಮೈಸೂರು : ಗುರುವಾರ ೨೭-೮-೧೯೫೩ [ ಸಂಚಿಕೆ [illegible]

# ರಾಜರುಗಳ ವರಮಾನ ತೆರಿಗೆ ವಿನಾಯಿತಿ ರದ್ದು-

## ಟಿ. ಕೃಷ್ಣರಾಯರ ನಿಧನ

### ನಗರದ ಪ್ರಸಿದ್ಧ ಪತ್ರಿಕೋದ್ಯೋಗಿಗಳು

ಮೈಸೂರು ೨೬

ರಾಜಧಾನಿಯ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಶ್ರೀ ಟಿ ಕೃಷ್ಣರಾಯರು ಈ ದಿನ ಬೆಳಿಗ್ಗೆ ೭.೧೫ ಗಂಟೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಶ್ರೀಯುತರು ಬಹು ದಿನಗಳಿಂದಲೂ ಹಾಸಿಗೆ ಹಿಡಿದಿದ್ದರು ಅವರಿಗೆ ೬೦ ವರ್ಷ ವಯಸ್ಸಾಗಿದ್ದಿತು ಅವರು ಹಿಂದೆ ವೆಸ್ಲಿಯನ್ ಮಿಷನ್ನಿನವರು ಹೊರಡಿಸುತ್ತಿದ್ದ ವೃತ್ತಾಂತ ಪತ್ರಿಕೆಯಲ್ಲಿ ಬಹುಕಾಲ ಉಪ ಸಂಪಾದಕರಾಗಿದ್ದರು ಅವರು ಕೆಲವು ಕಾಲ ನಗರದ ಪೌರಸಭಾ ಸದಸ್ಯರಾಗಿಯೂ ನಗರದ ಪತ್ರಿಕೋದ್ಯೋಗಿಗಳ ಸಂಘದ ಉಪಾಧ್ಯಕ್ಷರಾಗಿಯೂ ಇದ್ದರು ಅವರಿಗೆ ಈಗ ಇಬ್ಬರು ಗಂಡು ಮಕ್ಕಳೂ ಮೂವರು ಹೆಣ್ಣು ಮಕ್ಕಳೂ, ೨೦ ಜನ ಗಂಡು ಮತ್ತು ೨೦ ಹೆಣ್ಣು ಮೊಮ್ಮಕ್ಕಳೂ ಇರುವರು ಮೃತರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಹಾರೈಸುತ್ತೇವೆ ಶ್ರೀ ಕೃಷ್ಣರಾಯರ ನಿಧನದ ಬಗ್ಗೆ ರಾಜಧಾನಿಯ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ ಮತ್ತು ನಗರದ ಪತ್ರಿಕೋದ್ಯೋಗಿಗಳ ಸಂಘದವರು ಸಂತಾಪವನ್ನು ವ್ಯಕ್ತಪಡಿಸುತ್ತಾರೆ ಎರಡು ಸಂಘಗಳ ಅಧ್ಯಕ್ಷರಾದ ಶ್ರೀ ಆರ್. ಗೋಪಾಲಕೃಷ್ಣರಾಯರೂ, ಶ್ರೀ ಜಿ.ಎಲ್ ಸ್ವಾಮಿಯವರೂ ಈ ಬೆಳಿಗ್ಗೆ ಮೃತರ ಗೃಹಕ್ಕೆ ಹೋಗಿ ಅವರ ಕಳೇಬರಕ್ಕೆ ಹಾರಗಳನ್ನು ಅರ್ಪಿಸಿದರು ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರೂ ಮತ್ತು ರೆ|| ಫಾ|| ಪ್ಯಾಗಾನವರೂ ಅವರ ಮನೆಗೆ ತೆರಳಿ ಗೌರವವನ್ನು ಸಲ್ಲಿಸಿದರು

## ನೆಹರೂ ಮತ್ತು ರಾಧಾಕೃಷ್ಣನ್ ಟೀಮುಗಳಿಗೆ ಕ್ರಿಕೆಟ್ ಪಂದ್ಯ

### ಪರಿಹಾರ ನಿಧಿಯ ಸಹಾಯಾರ್ಥವಾಗಿ

ಪ್ರಧಾನಿಯವರ ಹೆಸರಿನಲ್ಲಿ ಏರ್ಪಾಡಾಗಿರುವ ಪ್ರವಾಹ ಪೀಡಿತರ ಪರಿಹಾರ ನಿಧಿಯ ಸಹಾಯಾರ್ಥವಾಗಿ ಪಾರ್ಲಿಮೆಂಟಿನ ಲೋಕ ಸಭೆ ಮತ್ತು ರಾಜ್ಯ ಪರಿಷತ್ತುಗಳ ಎರಡು ಟೀಮುಗಳ ಕ್ರಿಕೆಟ್ ಪಂದ್ಯವು ಬರುವ ೧೨ ನೇ ತಾ|| ದೆಹಲಿಯಲ್ಲಿ ನಡೆಯಲಿದೆ ಲೋಕ ಸಭೆಯ ಟೀಮಿನ ಕ್ಯಾಪ್ಟನ್ನರಾಗಿ ನೆಹರೂರವರೂ, ಕೌನ್ಸಿಲಿನ ಸಭೆಯ ಕ್ಯಾಪ್ಟನ್ನರಾಗಿ ರಾಧಾಕೃಷ್ಣನ್‌ರವರೂ ಇರುವರು. ಆದರೆ ಇವರಿಬ್ಬರೂ ಆಟದಲ್ಲಿ ಭಾಗವಹಿಸುವುದಿಲ್ಲ ಪಂದ್ಯದಲ್ಲಿ ಟಾಂಡನ್, ಗಾಡ್ಗೀಲ್, ಎ. ಕೆ ಗೋಪಾಲನ್ ಮುಂತಾದವರು ಸೇರುವರು ನೆಹರೂರವರು ೪೦ ವರ್ಷಗಳಿಂದಲೂ ಕ್ರಿಕೆಟ್ ಆಡಿಲ್ಲ. ಟಾಂಡನ್ನರು ವಿದ್ಯಾರ್ಥಿ ದೆಸೆಯಲ್ಲಿ ಒಂದು ಟೀಮಿನ ಕ್ಯಾಪ್ಟನ್ ಆಗಿದ್ದರು ಪಾರ್ಲಿಮೆಂಟಿನ ಸದಸ್ಯರು ಟಿಕೆಟ್ಟುಗಳನ್ನು ಮಾರಾಟ ಮಾಡುವ ನಿರೀಕ್ಷೆಯಿದೆ

### ಜಿ. ಎನ್ ನಾಗರಾಜರಾಯರು ರೆವಿನ್ಯೂ ಕಮಿಷನರ್

ಸಂಸ್ಥಾನದ ರೆವಿನ್ಯೂ ಕಮಿಷನರಾದ ಶ್ರೀ [illegible] ಮಾಧವರಾಯರನ್ನು ಸರ್ಕಾರದ ಹಣಕಾಸಿನ ಇಲಾಖಾ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಸರ್ಕಾರದ ಗೃಹ ಶಾಖಾ ಕಾರ್ಯದರ್ಶಿ ಶ್ರೀ ಜಿ ಎನ್ ನಾಗರಾಜರಾಯರು ರೆವಿನ್ಯೂ ಕಮಿಷನರ್ ಆಗಿ ನೇಮಕವಾಗಿರುವರು

## ರಾಜರುಗಳ ವರಮಾನ ತೆರಿಗೆ ವಿನಾಯಿತಿ ರದ್ದು

ದೇಶದಲ್ಲಿರುವ ಎಲ್ಲಾ ಮಾಜಿ ರಾಜರುಗಳಿಗೂ ಭಾರತ ಸರ್ಕಾರದವರು ಸೂಚನೆಯೊಂದನ್ನು ಕಳುಹಿಸಿ ಅವರುಗಳು ವರಮಾನ ತೆರಿಗೆ ಮತ್ತು ಸೂಪರ್ ಟ್ಯಾಕ್ಸ್ ಕೊಡದಿರುವ ಬಗ್ಗೆ ಇದುವರೆಗೆ ಹೊಂದಿದ್ದ ವಿನಾಯಿತಿಯನ್ನು ಮುಂದೆ ವರಿಸಲಾಗುವುದಿಲ್ಲವೆಂದು ತಿಳಿಸಿರುತ್ತಾರೆ ಈ ಸೂಚನೆಯು ಕಳೆದ ಏಪ್ರಿಲ್ ೧ ನೇ ತಾ||ನಿಂದ ಜಾರಿಗೆ ಬಂದಿದೆ ಇದುವರೆಗೆ ರಾಜರುಗಳು ಪಡೆದಿರುವ ಬಾಂಡು ಮುಂತಾದುವುಗಳ ಬಗ್ಗೆ ಬರುವ ವರಮಾನಗಳ ಮೇಲೆ ಎಲ್ಲಾ ತೆರಿಗೆಗಳಿಗೂ ಕೇಂದ್ರ ಸರ್ಕಾರದವರು ವಿನಾಯಿತಿ ಕೊಟ್ಟಿದ್ದರು ಇತರ ವರಮಾನಗಳಿಗೆ ಮಾತ್ರ ತೆರಿಗೆಯನ್ನು ಹಾಕಲಾಗುತ್ತಿತ್ತು ಆದರೆ ಸೂಪರ್ ಟ್ಯಾಕ್ಸ್ ಅನ್ನು ವಿಧಿಸುತ್ತಿರಲಿಲ್ಲ

ಹೊಸ ರಾಜ್ಯಾಂಗವು ಜಾರಿಗೆ ಬಂದಿರುವುದರಿಂದ ಕೇಂದ್ರ ಸರ್ಕಾರದವರ ತನ್ನ ಅಧಿಕಾರವನ್ನು ಚಲಾಯಿಸಿ, ವಿನಾಯಿತಿ ಕೊಟ್ಟಿರುವುದು ಶಾಸನಬದ್ಧವಾಗುವುದಿಲ್ಲವೆಂದು ಅವರಿಗೆ ತಿಳಿಸಲಾಗಿದೆ ಆದ್ದರಿಂದ ಅವರುಗಳು ಎಲ್ಲಾ ತೆರಿಗೆಗಳನ್ನು ಕೊಡಬೇಕಾಗುವುದು.

ಈ ಆಜ್ಞೆಯು ಶೇರುಗಳು ಮತ್ತು ಸಾಲಗಳಲ್ಲಿ ವಿಪರೀತ ಹಣವನ್ನು ಹಾಕಿರುವ ಗ್ವಾಲಿಯರ್ ಮಹಾರಾಜರಿಗೂ ಮತ್ತು ಹೈದರಾಬಾದಿನ ನಿಜಾಮರಿಗೂ ವಿಶೇಷವಾಗಿ ಅನ್ವಯಿಸುತ್ತದೆ.

## ೧೦ ಲಕ್ಷ ರೂ. ವೆಚ್ಚದಲ್ಲಿ ದೆಹಲಿಯಲ್ಲಿ ಕಾಡುಮೃಗಗಳ ವನ

ದೆಹಲಿಯಲ್ಲಿ ಹಳೆ ಕೋಟೆ ಮತ್ತು ಹುಮಾಯೂನ್ ಗೋರಿಗಳ ನಡುವೆ ೨೧೦ ಎಕರೆ ಪ್ರದೇಶದಲ್ಲಿ ಕಾಡು ಮೃಗಗಳಿಗಾಗಿ ಒಂದು ವನವನ್ನು ೧೦ ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾಗುವುದೆಂದು ಗೊತ್ತಾಗಿದೆ ಮೃಗಗಳನ್ನು ಇತರ ಕಡೆಗಳಲ್ಲಿ ನಿರ್ಬಂಧದಲ್ಲಿ ಇಟ್ಟಿರುವಂತೆ ಇಡದೆ ಅವು ತಮಗೆ ತೋರಿದಂತೆ ತಿರುಗಲು ಅವಕಾಶವಿರುವಂತೆ ಏರ್ಪಡಿಸಲಾಗುವುದೆಂದು ಹೇಳಲಾಗಿದೆ

## ಗೂಡ್ಸ್ ರೈಲಿನ ಲೂಟಿ ಮಾಡುತ್ತಿದ್ದವರ ಮೇಲೆ ಗುಂಡು

ಅಹಮದಾಬಾದು ಬಳಿ ಒಂದು ನಿಲ್ದಾಣದಲ್ಲಿ ಕಳೆದ ೨೩ನೇ ತಾ|| ರಾತ್ರಿ ಗೂಡ್ಸ್ ರೈಲೊಂದು ನಿಂತಿದ್ದಾಗ ಹಲವು ಕಳ್ಳರು ಲೂಟಿ ಮಾಡಲು ಪ್ರಯತ್ನಿಸಿದರೆಂದೂ, ಗಾಡಿಯಲ್ಲಿದ್ದ ಸಶಸ್ತ್ರ ಪೋಲೀಸರು ಅವರ ಮೇಲೆ ಎರಡು ಬಾರಿ ಗುಂಡು ಹಾರಿಸಿದರೆಂದೂ ವರದಿಯಾಗಿದೆ ಕಳ್ಳರು ರೈಲು ಮುಂದೆ ಹೋಗಲು ಅವಕಾಶ ಕೊಡಲಿಲ್ಲವೆಂದೂ, ಗುಂಡು ಹಾರಿಸಿದ ಮೇಲೆ ಪರಾರಿಯಾದರೆಂದೂ ತಿಳಿದುಬಂದಿದೆ

### ತಿರುಪತಿಗೆ ಮುಖ್ಯ ಮಂತ್ರಿಯವರ ಪ್ರಯಾಣ

ಮೈಸೂರು ಮುಖ್ಯ ಮಂತ್ರಿಯವರಾದ ಶ್ರೀ ಕೆ ಹನುಮಂತಯ್ಯನವರು ಈ ದಿನ ತಿರುಪತಿಗೆ ಪ್ರಯಾಣ ಬೆಳೆಸಿ ಅಲ್ಲಿ ಎರಡು ದಿನಗಳಿರುವರು

## ವಿಶ್ವಸಂಸ್ಥೆಯಲ್ಲಿ ಭಾರತದ ವಿರುದ್ಧ ಪಾಕಿಸ್ತಾನದ ಓಟು

ಕೊರಿಯಾ ಶಾಂತಿ ಸ್ಥಾಪನೆಗಾಗಿ ಏರ್ಪಾಡಾಗಿರುವ ರಾಜಕೀಯ ಸಮ್ಮೇಳನದಲ್ಲಿ ಭಾರತವು ಭಾಗವಹಿಸಲು ಅವಕಾಶ ಕೊಡಕೂಡದೆಂದು ಪಾಕಿಸ್ತಾನವು ವಿಶ್ವಸಂಸ್ಥೆಯಲ್ಲಿರುವ ತನ್ನ ಪ್ರತಿನಿಧಿಗೆ ಸೂಚಿಸಿ, ಭಾರತದ ವಿರುದ್ಧವಾಗಿ ಓಟು ಕೊಡಲು ತಿಳಿಸಿರುವುದಾಗಿ ಗೊತ್ತಾಗಿದೆ ಭಾರತವು ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಸೂಚಿಸಿ ನಾಲ್ಕು ರಾಷ್ಟ್ರಗಳು ನಿರ್ಣಯವನ್ನು ತಂದಿರುತ್ತವೆ ಪಾಕಿಸ್ತಾನದ ಸೂಚನೆ ಬಗ್ಗೆ ಅರಬ್ ರಾಜ್ಯಗಳಲ್ಲಿ ಅಸಮಾಧಾನವು ಮೂಡಿರುತ್ತದೆ

## ಕಾಶ್ಮೀರದ ಮಾಜಿ ಉಪ ಮಂತ್ರಿಯ ದಸ್ತಗಿರಿ

ಷೇಕ್ ಅಬ್ದುಲ್ಲಾರವರ ಮಂತ್ರಿಮಂಡಲದಲ್ಲಿ ಹಣಕಾಸಿನ ಉಪಮಂತ್ರಿಯಾಗಿದ್ದ ಮುಬಾರಕ್ ಅಲಿ ಷಾರವರನ್ನು ಮೊನ್ನೆ ಶ್ರೀನಗರದಲ್ಲಿ ದಸ್ತಗಿರಿ ಮಾಡಲಾಯಿತು ಷೇಕ್ ಅಬ್ದುಲ್ಲಾರವರು ದಸ್ತಗಿರಿಯಾದಾಗಿನಿಂದಲೂ ಅವರು ಪೋಲೀಸರಿಗೆ ಸಿಗದೆ ಅಲ್ಲಿನ ವಿಶ್ವವಿದ್ಯಾಲಯದ ಮಾಜಿ ರಿಜಿಸ್ಟ್ರಾರರ ಗೃಹದಲ್ಲಿ ಅವಿತುಕೊಂಡಿದ್ದರೆಂದು ಹೇಳಲಾಗಿದೆ

### ಮುಖ್ಯ ಮಂತ್ರಿಯವರಲ್ಲಿ ಮಹಿಳೆಯರ ನಿಯೋಗ

ಬೆಂಗಳೂರಿನ ಸ್ತ್ರೀಯರ ಆಹಾರ ಮಂಡಲದ ಪರವಾಗಿ ನೆನ್ನೆ ಶ್ರೀಮತಿಗಳಾದ ಇಂದಿರಾಬಾಯಿ ವಾಸುದೇವಮೂರ್ತಿ, ಅಲ್ಬುಕರ್ಕ್, ರತ್ನಮ್ಮ ಐಸಾಕ್, ಮಾಲತಿ ರಾಮಕೃಷ್ಣರಾವ್ ಎಂ ಆರ್ ಲಕ್ಷ್ಮಮ್ಮ ಮುಂತಾದವರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರಲ್ಲಿ ನಿಯೋಗ ಹೋಗಿ ವಿದ್ಯಾ ಸಂಸ್ಥೆಗಳಲ್ಲಿರುವ ಹೋಟೇಲುಗಳ ಬದಲು ಸ್ತ್ರೀಯರ ಆಹಾರ ಕೌನ್ಸಿಲ್ಲಿನ ಪರವಾಗಿ ಕ್ಯಾಂಟೀನುಗಳನ್ನು ಏರ್ಪಡಿಸಲು ತಕ್ಕ ಕಟ್ಟಡ ಸೌಲಭ್ಯಗಳನ್ನು ಕಲ್ಪಿಸುವಂತೆ ಮನವಿಮಾಡಿಕೊಂಡರು ವಿದ್ಯಾರ್ಥಿನಿಯರು ಬೆಳಗಾಗುತ್ತಲೇ ಮನೆಗಳಿಂದ ಶಾಲೆಗಳಿಗೆ ಹೋಗಿ ಸಂಜೆವರೆಗೂ ಅಲ್ಲಿರಬೇಕಾಗಿರುವುದೆಂದೂ, ಅವರುಗಳಿಗೆ ಶುಚಿ ರುಚಿಯಾದ ಆಹಾರಗಳನ್ನು ಕ್ಯಾಂಟೀನ್ ಮೂಲಕ ಒದಗಿಸಬೇಕೆಂದೂ ತಿಳಿಸಲಾಯಿತು ಕಟ್ಟಡಗಳ ಅವಶ್ಯಕತೆ ಇರುವುದಿಲ್ಲವೆಂದೂ ಕೆಲಸವನ್ನು ಗುಡಿಸಿಲುಗಳಲ್ಲಿ ಪ್ರಾರಂಭಿಸಬಹುದೆಂದೂ ಮುಖ್ಯ ಮಂತ್ರಿಯವರು ತಿಳಿಸಿದುದಾಗಿ ಹೇಳಲಾಗಿದೆ ಗ್ರಾಮಾಂತರ ಪ್ರದೇಶಗಳಲ್ಲಿ ನರ್ಸರಿ ಶಾಲೆಗಳನ್ನು ತೆರೆಯಲು ವಿದ್ಯಾವಂತ ಮಹಿಳೆಯರು ಮುಂದೆ ಬಂದರೆ ತಮ್ಮ ಸಹಾಯ ಸಿದ್ಧವಾಗಿರುವುದೆಂದು ಅವರು ತಿಳಿಸಿದರು.

### ಕೆ ಶೇಷಗಿರಿರಾಯರು ಬಳ್ಳಾರಿ ಜಿಲ್ಲಾಧಿಕಾರಿಗಳು

ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಅಕ್ಟೋಬರ್ ೧ ರಿಂದ ಮೈಸೂರಿಗೆ ಸೇರುವ ಸಂಬಂಧವಾಗಿ ಅಲ್ಲಿನ ಆಡಳಿತವನ್ನು ವಹಿಸಿಕೊಳ್ಳುವ ಬಗ್ಗೆ ಸರ್ಕಾರದವರು ವ್ಯವಸ್ಥೆ ಮಾಡುತ್ತಿರುವರೆಂದೂ, ಅಲ್ಲಿಗೆ ಶ್ರೀ ಕೆ ಶೇಷಗಿರಿರಾಯರನ್ನು ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸುವ ಸಂಭವವಿರುವುದಾಗಿ [illegible]

## ರೈಲಿನಲ್ಲಿ ಡಾ|| ತಿರುಮೂರ್ತಿಯವರ ನಿಧನ

ಮೈಸೂರು ೨೬

ನೆನ್ನೆ ಬೆಂಗಳೂರಿನಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಅಖಿಲ ಭಾರತ ಮೆಡಿಕಲ್ ಕೌನ್ಸಿಲ್ಲಿನ ಅಧ್ಯಕ್ಷ ಡಾ|| ಟಿ. ತಿರುಮೂರ್ತಿಯವರು ಹೃದಯಕ್ರಿಯೆ ನಿಂತು ಮೃತರಾದರು ಮಂಡ್ಯ ನಿಲ್ದಾಣದ ಬಳಿ ಸೆಕೆಂಡ್ ಕ್ಲಾಸ್ ಗಾಡಿಯೊಂದರಲ್ಲಿ ಅವರ ಕಳೇಬರವು ಪತ್ತೆಯಾಯಿತೆಂದು ಹೇಳಲಾಗಿದೆ ಶವವನ್ನು ಮದರಾಸಿಗೆ ಒಯ್ಯಲಾಯಿತು

### ಹಿಂದೀ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಾಷ್ಟ್ರ ಭಾಷಾ, ಪ್ರವೀಣ, ವಿಶಾರದ ಮತ್ತು ಪ್ರವೇಶಿಕಾ ಪರೀಕ್ಷೆಗಳು ನಾಳಿದ್ದಿನಿಂದಲೂ, ಪ್ರಾಥಮಿಕ ಮಾಧ್ಯಮ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳು ೩೦ನೇ ತಾ|| ಭಾನುವಾರದಿಂದಲೂ ಆರಂಭವಾಗುವುವು ಪ್ರಾಥಮಿಕ ಮುಂತಾದ ಪರೀಕ್ಷೆಗಳು ಶಾರದಾವಿಲಾಸ ಹೈಸ್ಕೂಲು ಮತ್ತು ರಾಷ್ಟ್ರ ಭಾಷಾ, ಪ್ರವೀಣ ಮತ್ತು ಇತರ ಪರೀಕ್ಷೆಗಳು ಡಿ ಬನುಮಯ್ಯ ಹೈಸ್ಕೂಲಿನಲ್ಲಿ ನಡೆಯುವುವು ಪ್ರವೇಶ ಪತ್ರಗಳನ್ನು ಹಿಂದಿ ಪ್ರಚಾರ ಸಭೆಯಲ್ಲಿ ಪಡೆಯಬಹುದು

### ವಿಶ್ವವಿದ್ಯಾಲಯದ ವ್ಯಾಯಾಮ ಡೈರೆಕ್ಟರ್

ರಾಷ್ಟ್ರೀಯ ಕ್ಯಾಡೆಟ್ ಕೋರಿನ ಅಧಿಕಾರಿಗಳಾಗಿ ನೇಮಕವಾಗಿರುವ ಶ್ರೀ ಎಂ ಟಿ ವಿಜಯಸಾರಥಿಯವರ ಸ್ಥಾನದಲ್ಲಿ ಶ್ರೀ ಎ ನಾರಾಯಣಸ್ವಾಮಿಯವರನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ವ್ಯಾಯಾಮ ಶಿಕ್ಷಣದ ಹಂಗಾಮಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ನೇಮಿಸಲಾಗಿದೆ

### ಶ್ರೀಮನ್ ಮಹಾರಾಜರೊಡನೆ ಟಿ. ಎಸ್ ಸತ್ಯನ್‌ರವರ ಭೇಟಿ

ಸುಪ್ರಸಿದ್ಧ ಪತ್ರಿಕೋದ್ಯೋಗಿಗಳೂ, ಛಾಯಾ ಚಿತ್ರಗ್ರಾಹಕರೂ ಆದ ಶ್ರೀ ಟಿ ಎಸ್ ಸತ್ಯನ್‌ರವರಿಗೆ ಶ್ರೀಮನ್ ಮಹಾರಾಜರು ಈ ದಿನ ಬೇಸಿಗೆ ಅರಮನೆಯಲ್ಲಿ ಭೇಟಿಯನ್ನಿತ್ತರು ಅವರು ಜರ್ಮನಿ, ಸ್ವಿಟ್ಸರ್‌ಲೆಂಡ್ ಮುಂತಾದ ದೇಶಗಳ ಪತ್ರಿಕೆಗಳಲ್ಲಿ ಪ್ರಕಟಿಸುವ ಲೇಖನ ಮತ್ತು ಚಿತ್ರಗಳನ್ನು ನೋಡಿ ಮೆಚ್ಚಿಗೆಯನ್ನು ಸೂಚಿಸಿದರು ಶ್ರೀ ಸತ್ಯನ್‌ರವರು ತಾವು ತೆಗೆದಿದ್ದ ಚಿತ್ರಗಳ ಸಂಗ್ರಹವೊಂದನ್ನು ಪ್ರಭುಗಳಿಗೆ ಸಮರ್ಪಿಸಿದರು.

## ಪಾರ್ಲಿಮೆಂಟಿನ ಕಾಶ್ಮೀರದ ಸದಸ್ಯರ ದಸ್ತಗಿರಿ

ಭಾರತ ಪಾರ್ಲಿಮೆಂಟಿನ ಕಾಶ್ಮೀರದ ಸದಸ್ಯ ಸೂಫಿ ಮಹಮ್ಮದ್ ಅಕ್ಬರ್‌ರವರನ್ನು ಕಾಶ್ಮೀರ ಸರ್ಕಾರದವರು ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ೨೪ನೇ ತಾ|| ಬಂಧಿಸಿದರು ಈ ವಿಷಯವನ್ನು ಪಾರ್ಲಿಮೆಂಟ್ ಸಭೆಗೆ ತಿಳಿಸಲಾಗಿದೆ ಕಾಶ್ಮೀರದಲ್ಲಿ ಅವರು ಇರುವುದರಿಂದ ಅಲ್ಲಿ ಶಾಂತಿ ಮತ್ತು ನೆಮ್ಮದಿಗೆ ಭಂಗ ಬರುವ ಸಂಭವವಿತ್ತೆಂದು ಭಾವಿಸಲಾಗಿದ್ದಿತು

○ ಆಸ್ಟ್ರೇಲಿಯದ ಜೆಟ್ ವಿಮಾನವೊಂದು ಘಂಟೆಗೆ ೬೦೦ ಮೈಲಿ ವೇಗದಲ್ಲಿ ೩ ಸಾವಿರ ಅಡಿ ಎತ್ತರದಿಂದ ಕೆಳಮುಖನಾಗಿ ಹಾರಿ ಹೊಸ [illegible]

## ಜರ್ಮನಿ ಬಗ್ಗೆ ಚತುರ್ರಾಷ್ಟ್ರ ಸಮ್ಮೇಳನ

ಮುಂದಿನ ತಿಂಗಳು ಸ್ವಿಟ್ಸರ್ಲೆಂಡಿನ ಜಿನೀವಾ ನಗರದಲ್ಲಿ ಚತುರಾಷ್ಟ್ರ ವಿದೇಶಾಂಗ ಮಂತ್ರಿಗಳ ಸಭೆಗೆ ಬರಬೇಕೆಂದು ರಷ್ಯಕ್ಕೆ ಬ್ರಿಟನ್ ಫ್ರಾನ್ಸ್ ಮತ್ತು ಅಮೆರಿಕಾ ಸರ್ಕಾರಗಳು ಆಹ್ವಾನವೀಯಲಿರುವುದಾಗಿಯೂ ಜರ್ಮನಿಯ ಭವಿಷ್ಯದ ವಿಚಾರವಾಗಿ ವಿದೇಶಾಂಗ ಮಂತ್ರಿಗಳು ಸಮಾಲೋಚನೆ ನಡೆಸುವರೆಂದೂ ತಿಳಿದು ಬಂದಿದೆ

## ಬರ್ಮಾದಲ್ಲಿ ಭೀಕರ ಪ್ರವಾಹ

ಐರಾವತಿ, ಸಿತ್ತಾಂಗ್, ಪೆಗು ಮತ್ತು ಕೃಷ್ಣ ನದಿಗಳಲ್ಲಿ ಭಾರಿ ಪ್ರವಾಹವುಂಟಾಗಿರುವುದರಿಂದ ಆ ಪ್ರದೇಶಗಳಲ್ಲಿ ಸರ್ವನಾಶವಾಗಿ ಪರಿಣಮಿಸಿದೆ ೫೦ ಸಾವಿರ ಟನ್ನಿನಷ್ಟು ಸರ್ಕಾರದ ಭತ್ತವು ನಾಶವಾಗಿದೆ ೩ ಲಕ್ಷ ಎಕರೆ ಜಮೀನುಗಳು ಹಾಳಾಗಿವೆ ಒಟ್ಟು ೩ ಕೋಟಿ ರೂ ನಷ್ಟವಾಗಿದೆ ಒಂದು ನದಿಯಲ್ಲಿ ೧೫ ಜನರ ಮೃತದೇಹಗಳು ತೇಲುತ್ತಿದ್ದುವೆಂದು ಗೊತ್ತಾಗಿದೆ

## ಖಾದಿ ಧರಿಸಲು ಪಶ್ಚಿಮ ಪಂಜಾಬಿನ ಮುಖ್ಯ ಮಂತ್ರಿ ಕರೆ

ವಿದೇಶಕ್ಕೆ ಹೋಗುವ ಹಣವನ್ನು ಉಳಿಸಲೂ ಮತ್ತು ದೇಶದ ಸಂಪತ್ತನ್ನು ಹೆಚ್ಚಿಸಲೂ ಜನರು ಖಾದಿ ಬಟ್ಟೆಯನ್ನೇ ಧರಿಸಬೇಕೆಂದು ಪಶ್ಚಿಮ ಪಂಜಾಬಿನ ಮುಖ್ಯ ಮಂತ್ರಿ ... ಫಿರೋಜ್ ಖಾನ್ ನೂನ್ ರವರು ... ಕಾರ್ಯಕರ್ತರ ಸಭೆಯಲ್ಲಿ ... ಮಾಡಲು ಬಂದಿದ್ದಾಗ ... ಖಾದಿ ಉಡುಪನ್ನು ಧರಿಸಿದರೆ ವಿದೇಶಗಳಿಗೆ ಬಟ್ಟೆಗಾಗಿ ವರ್ಷಕ್ಕೆ ೪೦ ಕೋಟಿ ರೂ ಹೋಗುತ್ತಿದೆಯೆಂದು ಅವರು ತಿಳಿಸಿದರು

## ಖಾದಿ ಪ್ರಸಾರಕ್ಕಾಗಿ ಮಂತ್ರಿಗಳ ಸಮ್ಮೇಳನ

ಸರ್ಕಾರಿ ಕಛೇರಿಗಳಲ್ಲಿ ಖಾದಿಯನ್ನು ಉಪಯೋಗಿಸುವ ಬಗ್ಗೆಯೂ ಅಧಿಕಾರಿಗಳು ಖಾದಿ ವಸ್ತ್ರಗಳನ್ನು ಧರಿಸುವಂತೆ ಸೂಚಿಸುವ ಸಲುವಾಗಿಯೂ ಇದೇ ತಿಂಗಳು ೨೮ನೇ ತಾ॥ ದೆಹಲಿಯಲ್ಲಿ ಕೇಂದ್ರ ಮತ್ತು ಸಂಸ್ಥಾನ ಮಂತ್ರಿಗಳ ಸಮ್ಮೇಳನವು ನಡೆಯಲಿದೆ ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿಯವರು ಸಮ್ಮೇಳನದಲ್ಲಿ ಭಾಷಣ ಮಾಡುವರು.

## ವೈದ್ಯರಿಂದ ಚಿಕಿತ್ಸೆ ಪಡೆದ ಕಪಿಯ ಕೃತಜ್ಞತೆ

ಬೊಂಬಾಯಿನ ಮಹೀಂ ಬಜಾರಿನ ಕಪಿಯೊಂದರ ಕಾಲಿಗೆ ಮುಳ್ಳು ಚುಚ್ಚಿ ಅದು ನರಳುತ್ತಿದ್ದುದನ್ನು ಕಂಡ ವೈದ್ಯರೊಬ್ಬರು ಅದಕ್ಕೆ ಬಾಳೆ ಹಣ್ಣನ್ನು ಕೊಡಲು ಅದು ಅವರನ್ನೇ ... ಅವರ ಮನೆಗೆ ಹೋಗಲಾಗಿ ... ಚಿಕಿತ್ಸೆ ಮಾಡಿದರು ... [illegible] ... ವರ ಬಳಿಗೆ ಹೋಗಿ ... ಹಣ್ಣುಗಳನ್ನು ಕೊಡುತ್ತಿದೆ ...


ಚಾಮುಂಡೇಶ್ವರಿ
ಟಾಕೀಸ್
... ನೇ ... ದಿಂದ
ಅಮೋಘ ಪ್ರದರ್ಶನಾರಂಭ
ದಿನವೂ ಮೂರು ಆಟಗಳು
ನವೀನ ... ನೂತನ
ಸಂಗೀತ ನೃತ್ಯಮಯ
ಚಿತ್ರ
ಅನಾರ್ಕಲಿ
ತಾರಾಗಣ ... ಕೆ ... ಲಲಿತ ... ರಾಜಕುಮಾರಿ.


## ಕಳ್ಳ ರೈಲ್ವೆ ಟಿಕೆಟ್ ಮಾರಾಟಗಾರರ ಬಂಧನ

ಕಲ್ಕತ್ತೆಯ ಪೊಲೀಸರು ಕಳ್ಳ ರೈಲ್ವೆ ಟಿಕೆಟ್ಟುಗಳನ್ನು ಮಾರುತ್ತಿದ್ದ ೮ ಜನರನ್ನು ವಶಕ್ಕೆ ತೆಗೆದುಕೊಂಡಿರುವರು ಅವರ ಬಳಿ ೧,೬೦೦೦೦ ರೂ ಬೆಲೆಯ ಕೃತಕ ಇಂಟರ್ ಮತ್ತು ಮೂರನೇ ತರಗತಿಯ ಟಿಕೆಟ್ಟುಗಳು ಇದ್ದುವು ಅವುಗಳನ್ನು ಅಚ್ಚು ಹಾಕಲು ಉಪಯೋಗಿಸಲ್ಪಟ್ಟವೆಂದು ಹೇಳಲಾದ ಮುದ್ರಣಾಲಯ ... ನೋಟುಗಳನ್ನು ಮುದ್ರಿಸುವ ಸಾಧನಗಳೂ ಅವರ ಬಳಿ ಇದ್ದು ಅವೆಲ್ಲವನ್ನೂ ವಶಪಡಿಸಿಕೊಳ್ಳಲಾಗಿದೆ

## ವಿಷ ಸೇವಿಸಿ ನಿರುದ್ಯೋಗಿಯ ಇಡೀ ಸಂಸಾರದ ಆತ್ಮಹತ್ಯೆ

ಬಡತನ ಮತ್ತು ನಿರುದ್ಯೋಗಗಳ ಬಾಧೆಯಿಂದ ಪೀಡಿತರಾಗಿ ಮಧುರೆಯ ಟಿ ಆರ್ ರಾಧಾಕೃಷ್ಣ ಅಯ್ಯಂಗಾರ್ ಎಂಬ ೪೦ ವರ್ಷ ವಯಸ್ಸಿನವರೊಬ್ಬರು, ತಮ್ಮ ಪತ್ನಿ ೩೪ ವರ್ಷದ ಟಿ ಆರ್ ಇಂದಿರಾ, ೮ ವರ್ಷ ಮತ್ತು ೬ ವರ್ಷದ ಇಬ್ಬರು ಗಂಡು ಮಕ್ಕಳು, ಮತ್ತು ೧೮ ತಿಂಗಳಿನ ಹೆಣ್ಣು ಶಿಶು ಇವರಿಗೆ ವಿಷವನ್ನು ಕೊಟ್ಟು, ತಾವೂ ಅದನ್ನು ಸೇವಿಸಿ ಮೃತರಾದರೆಂದು ವರದಿಯಾಗಿದೆ

## ೧೫ ದಿನದ ಮಗುವನ್ನು ಭಾವಿಗೆ ಹಾಕಿದುದಕ್ಕೆ ಜೀವಾವಧಿ ಶಿಕ್ಷೆ

ಸಿಂಹಭೂಮಿ ಜಿಲ್ಲೆ ತಾಲ್ಲೂಕಿನ ಲಿಂಗಂಪಟ್ಟಿ ಎಂಬ ಹಳ್ಳಿಯಲ್ಲಿ ಭಾಗ್ಯಂ ಎಂಬ ೨೨ ವರ್ಷದ ಸ್ತ್ರೀಯು ತಾನು ಪ್ರಸವಿಸಿದ ೧೫ ದಿನಗಳ ಹೆಣ್ಣು ಮಗುವನ್ನು ಭಾವಿಗೆ ಎತ್ತಿಹಾಕಿದಳೆಂದು ಅವಳಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ ಗಂಡನು ಆಕೆಯನ್ನು ಬಿಟ್ಟಿದ್ದನೆಂದೂ ತಂದೆ ಮನೆಯಲ್ಲಿ ಇದ್ದಾಗ ಮಗು ಹುಟ್ಟಿದೊಡನೆ ಸಂಸಾರ ಹೊರೆ ಆಕೆಗೆ ಹೆಚ್ಚಾಗಿ ಹೀಗೆ ಮಾಡಿದಳೆಂದೂ ಹೇಳಲಾಗಿದೆ.

## ಪತ್ನಿಯ ಕಿವಿ ಕತ್ತರಿಸಿದುದಕ್ಕಾಗಿ ೯ ತಿಂಗಳು ಸಜಾ

ಕೊಯಮತ್ತೂರು ಜಿಲ್ಲೆ ... ಎಂಬ ... ತನ್ನ ಹೆಂಡತಿಯ ಕಿವಿ ... ವೇಲಪ್ಪನ್ ಎಂಬಾತನು ಕತ್ತರಿಸಿದ ಪಕ್ಕಾಗಿ ಅವನಿಗೆ ೯ ತಿಂಗಳ ಕಠಿಣ ಸಜಾ ವಿಧಿಸಲಾಗಿದೆ

## ೨೧೭ ದಿವಸ ನಿದ್ರಿಸುತ್ತಿದ್ದ ಹುಡುಗಿ

ಇಂಗ್ಲೆಂಡಿನ ಜ್ಯೂನ್ ಎಂಬಲ್ಲಿನ ಹುಡುಗಿಯೊಬ್ಬಳು ಕಾರು ಅಪಘಾತವೊಂದರಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರಿದಮೇಲೆ ೨೧೭ ದಿನಗಳಕಾಲ ನಿದ್ರೆ ಮಾಡುತ್ತಿದ್ದು ಕಣ್ಣನ್ನು ತೆರೆಯಲೇ ಇಲ್ಲವೆಂದು ವರದಿಯಾಗಿದೆ ಈಗ ಎರಡು ತಿಂಗಳ ಕೆಳಗೆ ಕಣ್ಣು ತೆರೆದಳಾದರೂ ಅವಳಿಗೆ ಮಾತನಾಡುವುದಕ್ಕೆ ಬರುತ್ತಿಲ್ಲವೆಂದೂ ಹೊಸದಾಗಿ ಅವಳಿಗೆ ಅಕ್ಷರಾಭ್ಯಾಸ ಮಾಡಿಸಲಾಗಿದೆಯೆಂದೂ ಗೊತ್ತಾಗಿದೆ ಅವಳು ಕಷ್ಟಪಟ್ಟು ಚಿತ್ರವಿದ್ಯೆಯನ್ನೂ ಕಲಿಯುತ್ತಾಳೆ


ಒಲಂಪಿಯಾ ಟಾಕೀಸ್
28-8-53 ರಿಂದ ಜಯಪ್ರದ 3ನೇ ವಾರ
... ಪ್ರದರ್ಶನ ...
★ ಪತಿತಾ ★
... ಅಶೋಕ ಕುಮಾರ್

SRI GAYATHRI
TALKIES
FROM TO MORROW
Daily 4 Shows
Arthur Rank Productions
A QUEEN IS CROWNED
(Technicolor)
*Morning at 10-30, Matinee at 3-30*
*Evening Show at 6-30 and*
*Last Show at 9-15*


## ನೆಯ್ಗೆಯವರ ಉಪವಾಸದ ಮೆರವಣಿಗೆ

ಮದ್ರಾಸಿನ ನಾಗಲಾಪುರಂ ಮತ್ತು ವಿಳ್ಳಿವಾಕಂ ಎಂಬಲ್ಲಿಂದ ೪೦ ಮಂದಿ ಸ್ತ್ರೀಯರೂ ಮತ್ತು ಮಕ್ಕಳೂ ಸೇರಿ ೧೫೫ ಮಂದಿ ನೆಯ್ಗೆಯವರು ಅಲ್ಲಿಗೆ ೩೬ ಮೈಲಿ ದೂರವಿರುವ ಕಾಂಜೀವರಂಗೆ ಮೆರವಣಿಗೆ ಹೊರಟಿರುತ್ತಾರೆ ಹಸಿದಿರುವ ಆ ಜನರು ಹಾಗೆಯೇ ಅಷ್ಟು ದೂರವೂ ಕಾಲುನಡಗೆಯಲ್ಲಿ ಹೋಗಿ ತಮಗೆ ಕೆಲಸವನ್ನು ಕೊಡಬೇಕೆಂದೂ, ತಮ್ಮ ಊರುಗಳಲ್ಲಿ ಗಂಜಿ ಕೇಂದ್ರಗಳನ್ನು ತೆರೆಯಬೇಕೆಂದೂ ಅಧಿಕಾರಿಗಳನ್ನು ಪ್ರಾರ್ಥಿಸಲಿರುವರು ಕಾಂಜೀವರಂ ತಾಲ್ಲೂಕು ಕಛೇರಿ ಮುಂದೆ ಅವರು ಸತ್ಯಾಗ್ರಹವನ್ನು ಆಚರಿಸುವರು.

## ವಿಶ್ವಸಂಸ್ಥೆ ಕಛೇರಿಯಲ್ಲಿ ಬೆಂಗಳೂರು ವಿದ್ಯಾರ್ಥಿನಿ

ಭಾರತ, ಪಾಕಿಸ್ತಾನ, ಬರ್ಮಾ ಮತ್ತು ನೇಪಾಳದ ಒಟ್ಟು ೫೦ ಮಂದಿ ವಿದ್ಯಾರ್ಥಿಗಳು ವಿಶ್ವಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವರು ಆ ಪೈಕಿ ಬೆಂಗಳೂರಿನ ಶ್ರೀಮತಿ ವರಲಕ್ಷ್ಮಿ ಎಂಬುವರೂ ಇರುವರು ಈಕೆಯು ವಿಸ್‌ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ಸಮಾಜ ಸೇವಾ ಶಿಕ್ಷಣ ಪಡೆಯುವುದಕ್ಕಾಗಿ ಅಮೆರಿಕಾಕ್ಕೆ ಹೋಗಿರುವರು

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಎಂ ಎಸ್ ಸುಬ್ರಹ್ಮಣ್ಯಂ ಪಿಟೀಲು ೭-೩೦ ಕರ್ನಾಟಕ ಸಂಗೀತ ಮಧ್ಯಾಹ್ನ ೧೨-೪೦ ವೀಣೆ ... ವಿಚಾರ- ಪಿ ಜಯವಂತಿ ದೇವಿ ಮತ್ತು ಕೆ ಸಾವಿತ್ರಮ್ಮ ನವರಿಂದ ಕನ್ನಡದಲ್ಲಿ ಸಂಭಾಷಣೆ ಸಂಜೆ ... ಎಂ ಎಸ್ ನಾರಾಯಣ ಅಯ್ಯಂಗಾರ್ ಕೊಳಲು ... ಹಿಂದಿ ಶಿಕ್ಷಣ ... ಮತ್ತು ... ಎಂ ಎಸ್ ಶೆಲ್ವಪಿಳ್ಳೆ ಅಯ್ಯಂಗಾರ್ ಸಂಗೀತ ... ಜನಪದ ಗೀತೆ ಕನ್ನಡದಲ್ಲಿ ಹಳ್ಳಿ ಹಾಡುಗಳು ... ಸಾತನೂರು ಸುಬ್ರಹ್ಮಣ್ಯಂ, ಕರ್ನಾಟಕ ಸಂಗೀತ ೯-೩೦ ಹಿಂದಿಯಲ್ಲಿ ವಿವಿಧ ಕಾರ್ಯಕ್ರಮ

## ವಿವಾಹೋಪನಯನಗಳು

ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲು ಉಪಾಧ್ಯಾಯರಾದ ಶ್ರೀ ಎಸ್ ಕೃಷ್ಣಪ್ಪನವರು ತಮ್ಮ ಕುಮಾರ ಚಿ॥ ರಾ॥ ಎಸ್ ಕೆ. ಸೀತಾರಾಂ ಎಂಬ ವಟುವಿಗೆ ಮೊನ್ನೆ ಉಪನಯನವನ್ನೂ, ಮಗಳು ಸೌ॥ ಪಾರ್ವತಮ್ಮನನ್ನು ಶಿವಮೊಗ್ಗದ ಶ್ರೀ ಕೆ ಆರ್ ಕಾಮಣ್ಣನವರ ಪುತ್ರ ಶ್ರೀ ಕೆ ಎಸ್ ಗುಂಡೂರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನೂ ನೆರವೇರಿಸಿದರು.

ರಾಜಧಾನಿಯ ಸಂತೇಪೇಟೆ ಏಜೆಂಟ್ ವ್ಯಾಪಾರಿಗಳಾದ ಶ್ರೀ ಕೆ ನರಸಿಂಹಯ್ಯನವರು ತಮ್ಮ ದ್ವಿತೀಯ ಕುಮಾರ ಚಿ॥ ರಾ॥ ಕೆ ಎನ್. ಸತ್ಯನಾರಾಯಣನಿಗೆ ಶಿವಪುರದ ಶ್ಯಾನುಭೋಗರಾದ ಶ್ರೀ ಹೆಚ್ ಸುಬ್ಬರಾಯರ ಮಗಳು ಸೌ॥ ನಾಗರತ್ನಮ್ಮನನ್ನು ತಂದುಕೊಂಡು ಈ ದಿವಸ ವಿವಾಹವನ್ನು ಮೈಸೂರಿನಲ್ಲಿ ಜರುಗಿಸಿದರು.

## ಜೋಧಪುರದ ಅರಸರಿಗೆ ೧೦ ಲಕ್ಷ ರೂ. ರಾಜಧನ

ಜೋಧಪುರದ ಈಗಿನ ಮಹಾರಾಜರಿಗೆ ಕೇಂದ್ರ ಸರ್ಕಾರದವರು ವರ್ಷಕ್ಕೆ ೧೦ ಲಕ್ಷ ರೂ ರಾಜಧನ ಕೊಡಲು ನಿರ್ಧರಿಸಿರುತ್ತಾರೆ ಅವರ ಹಿಂದಿನವರಿಗೆ ೧೭॥ ಲಕ್ಷ ರೂ. ಅನ್ನು ಕೊಡಲಾಗುತ್ತಿತ್ತು

## ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಇಂದ | ರೂ ವರೆಗೆ |
|---|---|---|
| ಕಡಲೆಕಾಯಿ | ೮೯ ೧೪ ೦ | ೩೫ ೪ ೦ |
| ಎಳ್ಳು | ೩೫ ೧೪ ೦ | ೪೦ ೦ ೦ |
| ಹುರುಳಿ | ೯೫ ೪ ೦ | ೯೭ ೧೦ ೦ |
| ಹೆಸರು | ೭೩ ೨ ೦ | |
| ಉದ್ದು | ೩೯ ೪ ೦ | |
| ಮಲನಾಡು | ೩೪ ೧೦ ೦ | |
| ಹೊಗೆಸೊಪ್ಪು | ೬ ವ್ಯಾಪಾರ | |
| ತೆಂಗಿನಕಾಯಿ ೧೧೦೦ಕ್ಕೆ | ೧೮೨ ೦ ೦ | ೩೪೦ ೦ ೦ |

Edited, Printed and Published by A R Nagarajan at Sadhvi Press D.Subbiah Road, Mysore


ಮನೆ ಕ್ರಯ ಅಥವಾ ಭೋಗ್ಯಕ್ಕಿದೆ
ಡೋರ್ ನಂ. 2671.
೧ನೇ ಮೇನ್ ರಸ್ತೆ, (ಬಸ್ ರಸ್ತೆ), ವಾಣೀವಿಲಾಸ ಮೊಹಲ್ಲ ಮೈಸೂರು
ವಿಶಾಲವಾದ ಸೈಟಿನಲ್ಲಿ ಕಟ್ಟಿರುವ ಪೂರಾ ತಾರಸಿ ಮನೆ
ವಿವರಗಳಿಗೆ — ಜಯ ಅಂಡ್ ಕಂಪೆನಿ, (ಫೋನ್ 520)
ಮನೆ ಇರುವ ಸ್ಥಳ ಕೊಡಿಸುವ ಏಜೆಂಟರು, ಪಶ್ಚಿಮ ಮೈಸೂರು ಬ್ಯಾಂಕ್ ಕಟ್ಟಡ

ರಾಜಕಮಲ್ ಟಾಕೀಸ್, ಮೈಸೂರು
28-8-53 ನೇ :: ಶುಕ್ರವಾರದಿಂದ :: ಅಮೋಘ ಪ್ರಾರಂಭ




ಪ್ರತಿ ದಿನ ಮೂರು ಆಟಗಳು : (ತೆಲುಗು ಚಿತ್ರ)

ರಿಜಿಸ್ಟರ್ಡ್ ನಂ. 792 [ಶಂಕರ ಮಾಸಿಕ] ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE : FRIDAY 28-8-1953 :: ಮೈಸೂರು : ಶುಕ್ರವಾರ ೨೮-೮-೧೯೫೩ [ ಸಂಚಿಕೆ ೨೬

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಕೊರಿಯದ ರಾಜಕೀಯ ಸಮ್ಮೇಳನಕ್ಕೆ ಭಾರತಕ್ಕೆ ಆಹ್ವಾನ

## ಹನುಮಂತಯ್ಯನವರನ್ನು ಉರುಳಿಸುವುದು ನಮ್ಮ ಉದ್ದೇಶವಲ್ಲ

### ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ವಿವರಣೆ

ಬೆಂಗಳೂರು ೨೮ ದಿಹಲಿಯಿಂದ ನೆನ್ನೆ ಇಲ್ಲಿಗೆ ವಾಪಸು ಬಂದ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಕೆ. ವೀರಣ್ಣಗೌಡರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಶ್ರೀ ಕೆ. ಹನುಮಂತಯ್ಯನವರನ್ನು ಮುಖ್ಯ ಮಂತ್ರಿ ಸ್ಥಾನದಿಂದ ತೆಗೆದುಹಾಕಲು ತಾವುಗಳು ಪ್ರಯತ್ನಿಸಿಲ್ಲವೆಂದು ತಿಳಿಸಿ, ಶ್ರೀ ಹನುಮಂತಯ್ಯನವರು ಈ ಬಗ್ಗೆ ಅಪಾರ್ಥ ಕಲ್ಪಿಸಿಕೊಂಡು ಕೋಪೋದ್ರಿಕ್ತರಾಗಿರುವರೆಂದು ಹೇಳಿದರು.

ತಾವೂ ಮತ್ತು ಇತರ ಕಾಂಗ್ರೆಸ್ ಮುಖಂಡರುಗಳಿಗೆ ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯ ವ್ಯವಹಾರ ಮತ್ತು ಆಡಳಿತದ ವಿಷಯಗಳನ್ನು ತಿಳಿದುದಾಗಿಯೂ, ಮಾತುಕತೆಗಳು ಅತ್ಯವಶ್ಯವಾಗಿದ್ದುವೆಂದೂ ಕಾಂಗ್ರೆಸ್ ಸಂಸ್ಥೆಯ ಪ್ರತಿಷ್ಠೆಯನ್ನು ಹೆಚ್ಚಿಸುವ ಉದ್ದೇಶದಿಂದಲೇ ಇವುಗಳನ್ನು ನಡೆಸಲಾಯಿತೆಂದೂ ಅವರು ವಿವರಿಸಿ, ತಾವು ತಿಳಿಸಿದ ವಿಚಾರಗಳೆಲ್ಲವನ್ನೂ ಆಮೂಲಾಗ್ರವಾಗಿ ಪರಿಶೀಲಿಸುವುದಾಗಿ ನೆಹರೂರವರು ಭರವಸೆಯಿತ್ತರೆಂದು ಹೇಳಿದರು. ಪ್ರಧಾನಿ ನೆಹರೂರವರೊಡನೆ ಚರ್ಚಿಸಿದ ಪರಿಣಾಮವಾಗಿ ಮುಂದೇನು ನಡೆಯುವುದೆಂಬುದನ್ನು ತಾವು ಹೇಳಲು ಸಾಧ್ಯವಿಲ್ಲವೆಂದು ಅವರು ತಿಳಿಸಿದರು.

ಮಂತ್ರಿಮಂಡಲದ ವಿಷಯವು, ಪ್ರದೇಶ ಕಾಂಗ್ರೆಸ್ ಸಮಿತಿಗೆ ಸಂಬಂಧಿಸಿಲ್ಲವಾದರೂ, ಶಾಸನಸಭಾ ಕಾಂಗ್ರೆಸ್ ಪಕ್ಷದ ವ್ಯಾಪ್ತಿಗೆ ಒಳಪಡುವುದೆಂದು ಅಭಿಪ್ರಾಯಪಟ್ಟರು.

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ, ಮುಖ್ಯ ಮಂತ್ರಿಯವರೂ ಒಬ್ಬರೇ ಆಗಬೇಕೆಂಬ ಅಭಿಪ್ರಾಯವನ್ನು ಶ್ರೀ ವೀರಣ್ಣಗೌಡರು ನಿರಾಕರಿಸಿದರು.

### ಸಂಸ್ಕೃತ ಪರೀಕ್ಷೆ ಸಮಿತಿಯ ಪುನರ್ರಚನೆ

ಸಂಸ್ಕೃತ ವಿದ್ಯಾಭ್ಯಾಸ ಮತ್ತು ಪರೀಕ್ಷಾ ಸಮಿತಿಯನ್ನು ಸರ್ಕಾರದವರು ಕಳೆದ ತಿಂಗಳು ೧ರಿಂದ ೩ ವರ್ಷಗಳ ಕಾಲಕ್ಕೆ ಪುನರ್ರಚಿಸಿದ್ದಾರೆ. ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರು ಅದಕ್ಕೆ ಅಧ್ಯಕ್ಷರಾಗಿರುವರು. ಸಮಿತಿಯಲ್ಲಿ ಶಿವಕುಮಾರ ಸ್ವಾಮಿಗಳು, ಪಂಡಿತರತ್ನಂ ಲಕ್ಷ್ಮೀಕಾಂತಶಾಸ್ತ್ರಿ, ಬಿ. ಎಸ್. ವಿಜಯದೇವ, ಡಾ|| ಎಸ್. ವಿ. ಗೋವಿಂದಸ್ವಾಮಿ, ಡಾ|| ಎಸ್. ನರಸಿಂಹಯ್ಯ, ಶ್ರೀ ದೇವುಡು ನರಸಿಂಹಶಾಸ್ತ್ರಿ, ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಶ್ರೀ ವೆಂಕಟಾಚಲ ಗುಪ್ತ, ಶ್ರೀ ಚಂದ್ರಶೇಖರಭಟ್ಟ, ಮತ್ತು ಡಾ|| ಎಚ್. ಎಲ್. ಹರಿಯಪ್ಪನವರು ಸದಸ್ಯರಾಗಿರುವರು.

## ೧೮ ಲಕ್ಷ ರೂ. ವೆಚ್ಚದಲ್ಲಿ ಗಾಂಧಿ ಸಮಾಧಿ ನಿರ್ಮಾಣ

ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯವರು ದೆಹಲಿಯ ರಾಜಘಾಟಿನಲ್ಲಿ ನಿರ್ಮಿಸಬೇಕೆಂದಿರುವ ಮಹಾತ್ಮಾ ಗಾಂಧಿಯವರ ಸಮಾಧಿಯ ನಕ್ಷೆಯನ್ನು ತಯಾರಿಸಿರುತ್ತಾರೆ. ಇದನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ. ಅದರ ನಿರ್ಮಾಣಕ್ಕೆ ೧೮ ಲಕ್ಷ ರೂ. ವೆಚ್ಚವಾಗುವುದೆಂದು ಹೇಳಲಾಗಿದೆ.

## ಚಿತ್ರದುರ್ಗದ ಜಿಲ್ಲೆಯಲ್ಲಿ ಆಹಾರ ಅಭಾವ

ಸಂಸ್ಥಾನದ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಚಿತ್ರದುರ್ಗ ಜಿಲ್ಲೆಯ ೬೦ ಹಳ್ಳಿಗಳಲ್ಲಿ ಪ್ರವಾಸ ಮಾಡಿ, ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿರುತ್ತಾರೆ. ಸಂಸ್ಥಾನದ ಇತರ ಕಡೆಗಳೆಲ್ಲಕ್ಕಿಂತಲೂ ಆ ಜಿಲ್ಲೆಯಲ್ಲಿ ಹೆಚ್ಚು ಅಭಾವ ಪರಿಸ್ಥಿತಿ ಇರುವುದಾಗಿ ಅವರು ಹೇಳಿರುತ್ತಾರೆ. ಜನರಿಗೆ ಪರಿಹಾರ ಒದಗಿಸಲು ಸರ್ಕಾರದವರು ೨ ಲಕ್ಷ ರೂ. ವೆಚ್ಚ ಮಾಡಿರುವುದಾಗಿಯೂ ತಿಳಿಸಿರುತ್ತಾರೆ.

## ಲಕ್ನೋ ಕಾಲೇಜು ವಿದ್ಯಾರ್ಥಿಗಳಿಂದ ಅನಿರ್ದಿಷ್ಟ ಕಾಲದ ಉಪವಾಸ

ಲಕ್ನೋ ವಿಶ್ವವಿದ್ಯಾಲಯದ ವಿವಿಧ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ೩೭ ಮಂದಿಯ ಜನರಲ್ ಕೌನ್ಸಿಲಿನ ವಿರುದ್ಧವಾಗಿ ಚಳುವಳಿ ನಡೆಸುತ್ತಿರುವ ವಿದ್ಯಾರ್ಥಿ ಸಂಘದವರು ಸಂಘದ ಬಗ್ಗೆ ತಯಾರಿಸಿರುವ ಹೊಸ ಅಂಗರಚನಾ ವಿಧಿಯನ್ನು ಸರ್ವ ಸದಸ್ಯರ ಸಭೆಗೆ ಒಪ್ಪಿಸಬೇಕೆಂದು ಸೂಚಿಸಿ, ಆ ಸಂಬಂಧವಾಗಿ ಉಪವಾಸ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ. ಅದರ ಪ್ರಕಾರ ೪ ಜನ ವಿದ್ಯಾರ್ಥಿಗಳು ಮೊನ್ನೆಯಿಂದ ಅನಿರ್ದಿಷ್ಟ ಕಾಲದ ಉಪವಾಸವನ್ನು ಪ್ರಾರಂಭಿಸಿರುವರು.

### ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆ

ರಾಜಧಾನಿಯ ಶ್ರೀ ವರಲಕ್ಷ್ಮಿ ಲಲಿತ ಕಲಾಶಾಲೆಗಳ ಸಂಸ್ಥೆಯ ಆಶ್ರಯದಲ್ಲಿ ಸಂಘದ ೮ನೇ ವಾರ್ಷಿಕೋತ್ಸವದ ಅಂಗವಾಗಿ ಎಂದಿನಂತೆ ನಡೆಯುವ ರಾಮಯ್ಯನವರ ಸ್ಮಾರಕ ಸಂಗೀತ ಸ್ಪರ್ಧೆಗಳನ್ನು ಈ ಸಾರಿಯೂ ಏರ್ಪಡಿಸಲಾಗಿದೆ. ಮೈಸೂರು ಸಹೋದರರ ಕೃತಿಗಳು, ದೇವರ ನಾಮಗಳು ಮತ್ತು ಇತರ ವಾಗ್ಗೇಯಕಾರರ ಕೃತಿಗಳು ಎಂಬುದಾಗಿ ಮೂರು ಭಾಗಗಳ ಸ್ಪರ್ಧೆಗಳಿವೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಗಳಲ್ಲಿ ೩ ದರ್ಜೆ, ವಿದ್ವತ್ತಿನಲ್ಲಿ ಎರಡು ದರ್ಜೆಗಳಲ್ಲಿ ಗಾಯನ ಮತ್ತು ವಾದ್ಯಗಳಲ್ಲಿ ಸ್ಪರ್ಧೆ ನಡೆಯುವುವು. ಸಂಸ್ಥೆಯ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ನಾಳೆ, ಕೇಂದ್ರ ಮಂದಿರದಲ್ಲಿ ನಾಳಿದ್ದು, ಚಾಮುಂಡಿಪುರದ ಶಾಖೆಯಲ್ಲಿ ೩ನೇ ತಾ|| ಬೆಳಿಗ್ಗೆ, ವಾಣಿವಿಲಾಸಪುರಂ ಶಾಖೆಯಲ್ಲಿ ಅದೇ ದಿನ ಸಂಜೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

### ಮಹಾರಾಜರೊಡನೆ ಜರ್ಮನ್ ಪತ್ರಿಕೋದ್ಯೋಗಿಗಳ ಭೇಟಿ

ಮೋಟಾರು ಸೈಕಲ್ಲಿನ ಮೇಲೆ ಪ್ರಪಂಚ ಪರ್ಯಟನಕ್ಕಾಗಿ ಹೊರಟಿರುವ ಜರ್ಮನಿಯ ಪತ್ರಿಕೋದ್ಯಮಿಗಳಾದ ಏಸೆಲ್ ಮತ್ತು ರಾಲ್ಫ್ ಲಾಂಜ್‌ರವರು ರಾಜಧಾನಿಗೆ ಆಗಮಿಸಿದ್ದು, ಶ್ರೀಮನ್ಮಹಾರಾಜರನ್ನು ಕಳೆದ ಮಂಗಳವಾರ ಭೇಟಿ ಮಾಡಿದರು. ಅವರ ಪ್ರವಾಸದ ವಿಷಯವಾಗಿ ರಾಜಪ್ರಮುಖರು ಹೆಚ್ಚು ಆಸಕ್ತಿಯನ್ನು ತೋರಿಸಿದರಲ್ಲದೆ ಅರಮನೆಯಲ್ಲಿರುವ ವಿವಿಧ ವರ್ಣಗಳ ಚಿತ್ರಗಳನ್ನು ತೆಗೆಯಲು ಅವರಿಗೆ ಅವಕಾಶವಿತ್ತರು. ಕೃಷ್ಣರಾಜಸಾಗರಕ್ಕೆ ಅವರುಗಳು ತೆರಳಿ ಅಲ್ಲಿನ ರಮ್ಯವಾದ ನೋಟಗಳ ವರ್ಣರಂಜಿತ ಚಿತ್ರಗಳನ್ನು ತೆಗೆದುಕೊಂಡರು.

## ಕೊರಿಯಾ ಸಮ್ಮೇಳನಕ್ಕೆ ಭಾರತವನ್ನು ಸೇರಿಸಲು ನಿರ್ಣಯ

ವಿಶ್ವ ಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ರಾಜ್ಯಗಳು ನಿರ್ಣಯವೊಂದನ್ನು ಮಂಡಿಸಿ, ಕೊರಿಯದ ರಾಜಕೀಯ ಸಮ್ಮೇಳನಕ್ಕೆ ಭಾರತವನ್ನು ಆಹ್ವಾನಿಸಬೇಕೆಂದು ಸೂಚಿಸಿದ್ದುದರ ಮೇಲೆ, ನೆನ್ನೆ ಓಟು ತೆಗೆದುಕೊಳ್ಳಲಾಗಿ, ೨೭ ರಾಷ್ಟ್ರಗಳು ಪರವಾಗಿಯೂ, ೨೧ ವಿರೋಧವಾಗಿಯೂ ಮತವಿತ್ತುವು. ೧೧ ರಾಷ್ಟ್ರಗಳು ತಟಸ್ಥವಾಗಿದ್ದುವು. ಅಮೆರಿಕವು ಭಾರತದ ವಿರುದ್ಧವಾಗಿ ಮತವಿತ್ತಿತು. ಈ ನಿರ್ಣಯದ ಅನುಮೋದನೆ ಕಾಲದಲ್ಲಿ ವಿಶ್ವ ಸಂಸ್ಥೆಯ ಸಾಧಾರಣ ಸಭೆಯಲ್ಲಿ ಮೂರನೇ ಎರಡು ಭಾಗದಷ್ಟು ಮತಗಳು ಬಂದ ಹೊರತು ಭಾರತವು ಸಮ್ಮೇಳನದಲ್ಲಿ ಪಾತ್ರವಹಿಸುವಂತಿಲ್ಲ. ನೆನ್ನೆ ಓಟು ತೆಗೆದುಕೊಂಡಾಗ ಭಾರತವು ತಟಸ್ಥವಾಗಿದ್ದಿತು. ಪಾಕಿಸ್ತಾನವೂ ವಿರೋಧವಾಗಿ ಓಟು ಕೊಟ್ಟಿತು.

## ಯುದ್ಧ ಖೈದಿಗೆ ಹುಲ್ಲು ಮತ್ತು ನೀರೇ ಆಹಾರ

ಕೊರಿಯಾ ಯುದ್ಧ ಕ್ಷೇತ್ರದಲ್ಲಿ ಅಮೆರಿಕದ ಮಿಲಿಟರಿ ಅಧಿಕಾರಿ ಚಾರ್ಲಸ್ ಡೇವಿಸ್ ಎಂಬಾತನು ೧೨ ದಿನಗಳವರೆಗೆ ಹುಲ್ಲು ತಿಂದು, ನೀರು ಕುಡಿದುಕೊಂಡಿದ್ದನೆಂದು ವರದಿಯಾಗಿದೆ. ಕಮ್ಯೂನಿಸ್ಟ್ ಸೈನ್ಯಗಳ ಹಿಂಬದಿಯಲ್ಲಿ ಅವನು ಇತರರೊಡನೆ ಕಾರ್ಯಾಚರಣೆ ನಡೆಸುತ್ತಿದ್ದಾಗ ಅವರಿಗೆ ಬೇರೆ ಆಹಾರವಿರಲಿಲ್ಲ. ನಂತರ ಕಮ್ಯೂನಿಸ್ಟರಿಗೆ ಅವನು ಸೆರೆಸಿಕ್ಕಿ ಈಗ ಯುದ್ಧ ಖೈದಿಗಳ ವಿನಿಮಯದ ಒಪ್ಪಂದದ ಪ್ರಕಾರ ಬಂಧಮುಕ್ತನಾಗಿರುವನು.

## ವಿಮಾನ ಸಿಡಿದು ೯ ಜನರ ಮರಣ

ಪೂನಾದಿಂದ ಜಾಮ್‌ನಗರಕ್ಕೆ ನೆನ್ನೆ ಹೊರಟ ವಿಮಾನವೊಂದು ಆಕಾಶದಲ್ಲೇ ಸಿಡಿದು, ೯ ಜನರು ಮೃತಪಟ್ಟರೆಂದೂ, ವಿಮಾನ ಒಡೆದು ಚೂರುಚೂರಾಗಿ ಬಿದ್ದಿತೆಂದೂ ವರದಿಯಾಗಿದೆ.

### ನೀಲಗಿರಿಯ "ಮೈಸೂರು ಭವನ"

ನೀಲಗಿರಿಯಲ್ಲಿರುವ ಮೈಸೂರು ಅತಿಥಿಗಳ ಭವನಕ್ಕೆ ಇಡಲಾಗಿದ್ದ ವನದರ್ಶಿನಿ ಎಂಬ ಹೆಸರನ್ನು ಮೈಸೂರು ಭವನ ಎಂಬುದಾಗಿ ಬದಲಾಯಿಸಲಾಗಿದೆ.

### ಲಾಂಗ್ ಜಂಪ್ ಪಂದ್ಯದಲ್ಲಿ ಬೆಂಗಳೂರು ತರುಣಿಯ ರಿಕಾರ್ಡ್

ಬೆಂಗಳೂರಿನ ಬಾಲ್ಡ್‌ವಿನ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಕ್ರಿಸ್ಟೀನ್ ಬ್ರೌನ್ ಎಂಬಾಕೆಯು ೧೭ ಅಡಿ ೪ ಅಂಗುಲದಷ್ಟು ದೂರ ಲಾಂಗ್ ಜಂಪ್ ಪಂದ್ಯದಲ್ಲಿ ಹಾರಿ ಭಾರತದ ಹೊಸ ರಿಕಾರ್ಡನ್ನು ಸ್ಥಾಪಿಸಿರುತ್ತಾಳೆ.

### ವಾರ್ಡ್ ಬಾಯ್ ಅನ್ನು ಹೊಡೆದುದಕ್ಕೆ ಸಜಾ

ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ವಾರ್ಡ್ ಬಾಯ್ ಡಿ. ಸಿದ್ದ ಎಂಬುವನು ಕೆಲಸದ ಮೇಲೆ ಇದ್ದ ವೇಳೆಯಲ್ಲಿ ಅವನನ್ನು ಸಿ. ಸಿದ್ದ ಎಂಬುವನು ಕಳೆದ ಮಾರ್ಚಿ ೨೯ನೇ ತಾರೀಕು ಹೊಡೆದುದಕ್ಕಾಗಿ, ನಗರದ ಎರಡನೇ ನ್ಯಾಯಾಧೀಶರು ಈ ದಿನ ಅಪರಾಧಿಗೆ ಕೋರ್ಟು ಏಳುವ ವರೆಗೆ ಸಜಾ ಮತ್ತು ಹತ್ತು ರೂ. ಜುಲ್ಮಾನೆ ವಿಧಿಸಿದರು.

## ಹಾಸನದ ಕಾರ್ಖಾನೆಯಲ್ಲಿ ೧ ಕೋಟಿ ರೂ. ನಷ್ಟ

ಹಾಸನದಲ್ಲಿರುವ ಯಂತ್ರ ಸಾಮಗ್ರಿಗಳ ಕಾರ್ಖಾನೆಯಲ್ಲಿ ೧ ಕೋಟಿ ರೂ. ನಷ್ಟವಾಗಿರುವುದೆಂದೂ, ಸೆಪ್ಟೆಂಬರ್ ೩ನೇ ತಾ|| ಕಾರ್ಖಾನೆಯ ಲೆಕ್ಕವನ್ನು ಪರಿಶೀಲಿಸಲು ಡೆಪ್ಯುಟಿ ಅಕೌಂಟೆಂಟ್ ಜನರಲ್ಲರು ಅಲ್ಲಿಗೆ ತೆರಳುವರೆಂದೂ ಹೇಳಲಾಗಿದೆ.

### ಸಯಾಂ ಸರ್ಕಾರವನ್ನು ಉರುಳಿಸಲು ಪಿತೂರಿ

ಸಯಾಂ ದೇಶದ ಪ್ರಧಾನಿ ಮಾರ್ಷಲ್ ಪಿಬುಲ ಸಂಗ್ರಾಮರ ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಸುತ್ತಿದ್ದರೆಂದು ೧೧ ಜನ ಕಮ್ಯೂನಿಸ್ಟರನ್ನು ಅಲ್ಲಿನ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಆ ವ್ಯಕ್ತಿ ಚಟ್ಟಿಂಗ್ರಾಪ್ ಎಂಬ ಮಾಜಿ ಮಿಲಿಟರಿ ಅಧಿಕಾರಿಯೂ ಇರುವರು.

## ವಿಶ್ವಸಂಸ್ಥೆಯ ಪ್ರಣಾಳಿಕೆ ಬದಲಾಗಬೇಕೆಂದು ಡಲ್ಲೆಸರ ಸಲಹೆ

ಅಮೆರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲ್ಲೆಸ್‌ರವರು ಬಾಸ್ಟನ್ ನಗರದಲ್ಲಿ ಭಾಷಣ ಮಾಡಿ, ವಿಶ್ವಸಂಸ್ಥೆಯ ಪ್ರಣಾಳಿಕೆಯನ್ನು ಬದಲಾಯಿಸಬೇಕೆಂದು ಸಲಹೆ ಮಾಡಿರುತ್ತಾರೆ. ಪ್ರಣಾಳಿಕೆಯಲ್ಲಿ ನ್ಯೂನತೆಗಳಿರುವುದಾಗಿಯೂ, ಸಂಸ್ಥೆಯ ಬಗ್ಗೆ ಅಮೆರಿಕವು ಹೊಂದಿದ್ದ ಆಶೆ ಮತ್ತು ನಿರೀಕ್ಷಣೆಗಳು ಕಾರ್ಯಗತವಾಗಿಲ್ಲವೆಂದೂ ಅವರು ತಿಳಿಸಿರುವರು.

### ಹೈಕೋರ್ಟಿಗೆ ಮೆಡಿಕಲ್ ವಿದ್ಯಾರ್ಥಿಯ ಅರ್ಜಿ

ಬೆಂಗಳೂರು ಮೆಡಿಕಲ್ ಸ್ಕೂಲಿನ ಪ್ರಥಮ ವರ್ಷದ ತರಗತಿಗೆ ಸೇರಲು ಅವಕಾಶವಿಲ್ಲದಿದ್ದುದಕ್ಕಾಗಿ ಶ್ರೀ ಎಸ್. ಆರ್. ಪಾಟೀಲ್ ಎಂಬ ವಿದ್ಯಾರ್ಥಿಯು ಹೈಕೋರ್ಟಿಗೆ ಅರ್ಜಿಯನ್ನು ಸಲ್ಲಿಸಿ, ತನಗೆ ಸ್ಥಾನವನ್ನು ಕೊಡುವಂತೆ ಆಜ್ಞೆಯಾಗಬೇಕೆಂದು ಕೋರಿರುತ್ತಾನೆ. ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತಾನು ೧೯ನೇ ರ್‍ಯಾಂಕನ್ನು ಪಡೆದಿರುವುದಾಗಿಯೂ, ತನಗಿಂತಲೂ ಕಡಿಮೆ ಸಂಖ್ಯೆಯನ್ನು ಪಡೆದವರಿಗೆ ಶಾಲೆಯಲ್ಲಿ ಸ್ಥಾನಗಳನ್ನು ಕಲ್ಪಿಸಿ ತಾರತಮ್ಯತನ್ನು ತೋರಲಾಗಿರುವುದೆಂದೂ ಅವನು ಅರಿಕೆ ಮಾಡಿಕೊಂಡಿರುತ್ತಾನೆ.

### ಕೋಳಿಪಿನ ಮಠದ ಗುರುಗಳ ನಿಧನ

ಚಿ. ಪರಮೇಶ್ವರದ ತಾಲ್ಲೂಕು ಕೋಡಿಹಳ್ಳಿಯ ಕೋಳಿಪಿನ ಮಠದ ನಿರಂಜನ ಶ್ರೀ ಪರಮೇಶ್ವರ ದೇಶಿಕೇಂದ್ರ ಸ್ವಾಮಿಗಳವರು ಮೊನ್ನೆ ಸಂಜೆ ಲಿಂಗೈಕ್ಯರಾದರು. ಶ್ರೀ ಬಸವರಾಜ ಶರ್ಮರವರು ಸ್ವಾಮಿಗಳವರ ಸ್ಥಾನವನ್ನು ಅಲಂಕರಿಸಿ ನಿರಂಜನ ವಿರೂಪಾಕ್ಷ ದೇಶಿಕೇಂದ್ರ ಸ್ವಾಮಿಗಳೆಂದು ನಾಮಧಾರಣೆ ಮಾಡಿಕೊಂಡರು.

### ಸ್ಕೂಲ್ ಫೈನಲ್ ಸಪ್ಲಿಮೆಂಟರಿ ಪರೀಕ್ಷೆಗಾಗಿ ಶಿಕ್ಷಣ ತರಗತಿ

ಸಹಾಯ ಪಡೆಯುತ್ತಿರುವ ಪ್ರೌಢಶಾಲಾ ಉಪಾಧ್ಯಾಯರುಗಳ ಸಂಘದ ಆಶ್ರಯದಲ್ಲಿ ನಾಳೆಯಿಂದ ಪ್ರತಿ ದಿನ ಸಂಜೆ ೬|| ಗಂಟೆಗೆ ಸಿದ್ಧಿವಿದ್ಯಾಪಾಠಶಾಲೆಯಲ್ಲಿ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳಿಗಾಗಿ ಪುನರಾವರ್ತನೆಯ ತರಗತಿಗಳನ್ನು ನಡೆಸಲಾಗುವುದು.

## ಜನನನಿ ಬಗ್ಗೆ ಚ[illegible]

ಮೈಸೂರು ೨೮

### ಸಮ್ಮೇಳನ ನಾಳೆ ದಿನ ೮

ಮುಂದಿನ ತಿಂಗಳು ಸೈಟಂಬರ್ ಆಚಂತುಮಾರಿ ನಗರದಲ್ಲಿ ಚತುರಾಷ್ಟ್ರ ವಿ॥ಯಿಂದ ೯॥ ಗಂಟೆ ಸಭೆಗೆ ಬರುವಂತೆ ಧರ್ಮಾಲೀಕರು ಕಾರ್ಯವು ಮತ್ತು ಅಮೆರಿಕಾ ಶಸ್ತ್ರಗಳ ಸಣ್ಣ ಸಣ್ಣ ರಿಪೇರಿಯಲಿರುವುದುಬಲಸಗಳನ್ನು ಕೈಗೊಳ್ಳಲಾಗುವುದು ದೀವಿ ಹಾಕುವುದು ಮತ್ತು ವಕ್ಕಳ ಮತ್ತು ಗರ್ಭಿಣಿಯರ ಪರೀಕ್ಷೆಗಳನ್ನು ಸುಬ್ರಹ್ಮಣ್ಯಂ ಹಾಲಿನ ಕೇಂದ್ರದಲ್ಲಿ ನಡೆಸಲಾಗುವುದು ಸಾರ್ವಜನಿಕ ಆರೋಗ್ಯದ ವಿಷಯವಾಗಿಯೂ ಜನರಿಗೆ ತಿಳುವಳಿಕೆ ಕೊಡಲಾಗುವುದು ಸಂಜೆ ೬ ಗಂಟೆಗೆ ಕಾಂತರಾಜ ಪಾರ್ಕಿನಲ್ಲಿ ಪೌರಸಭಾಧ್ಯಕ್ಷರ ನೇತೃತ್ವದಲ್ಲಿ ಬಹಿರಂಗ ಸಭೆಯು ನಡೆಯುವುದು ಮಹಾಜನರು ಸಹಕರಿಸುವಂತೆ ಪ್ರಾರ್ಥಿಸಲಾಗಿದೆ

### ವಯಸ್ಕರ ಶಿಕ್ಷಣದ ಉಪಾಧ್ಯಾಯರ ಶಿಬಿರ

ಕಳೆದ ೩೦ರಂದು ಮೈಸೂರ ನಗರ ಮತ್ತು ತಾಲ್ಲೂಕಿನ ವಯಸ್ಕರ ತರಗತಿಗಳ ಉಪಾಧ್ಯಾಯರಿಗೆ ಶಿಕ್ಷಣ ಶಿಬಿರವನ್ನು ಕೇಂದ್ರ ಕಛೇರಿಯಲ್ಲಿ ಏರ್ಪಡಿಸಲಾಗಿದ್ದಿತು ೩೮ ಜನ ಉಪಾಧ್ಯಾಯರು ಮತ್ತು ಉಪಾಧ್ಯಾಯಿನಿಯರು ಭಾಗವಹಿಸಿದ್ದರು ಶಿಬಿರದ ಆರಂಭೋತ್ಸವವನ್ನು ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಲ್ ಶಿವಯ್ಯನವರು ನೆರವೇರಿಸಿದರು ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಚ್ ಭದ್ರಯ್ಯನವರು ಶಿಬಿರದ ಮಹತ್ವದ ಭಾಷಣವನ್ನು ಮಾಡಿ ಸಮಾಜದಲ್ಲಿ ಉಪಾಧ್ಯಾಯರುಗಳ ಪಾತ್ರವನ್ನು ವಿವರಿಸಿದರು

### ಹಿಟ್ಟಿನ ಗಿರಣಿ ಮಾಲೀಕರ ಸಭೆ

ರಾಜಧಾನಿಯ ಹಿಟ್ಟಿನ ಗಿರಣಿಗಳ ಮಾಲೀಕರ ಸಂಘದ ಸರ್ವ ಸದಸ್ಯರ ವಿಶೇಷ ಸಭೆಯು ಇದೇ ೩೦ ನೇ ತಾ॥ ಭಾನುವಾರ ಸಂಜೆ ೪ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯಲಿದೆ ಹಲ್ಲು ಪುತ್ರಿ ಪಾಲಿಷ್ ಮಾಡುವ ವಿಷಯವಾಗಿ ಜಿಲ್ಲಾಧಿಕಾರಿಗಳಿಂದ ಬಂದಿರುವ ಸೂಚನೆಯನ್ನು ವಾರದ ರಜಾ ಕೊಡುವಂತೆ ಬಂಗಡಿ ಸಿಬ್ಬಂದಿ ಇನ್ಸ್‌ಪೆಕ್ಟರವರಿಂದ ಬಂದಿರುವ ಪತ್ರವನ್ನೂ ಸಭೆಯು ಪರಿಶೀಲಿಸುವುದು.

## ಮಹಿಳೆಯರ ಸಂಘಟನೆಗಾಗಿ ಕಮ್ಯೂನಿಸ್ಟ್ ಕೇಂದ್ರದ ಸೂಚನೆ

ಕಮ್ಯೂನಿಸ್ಟ್ ಪಕ್ಷದ ಸಲಹೆಯ ಮೇರೆ ಪ್ರಜಾಸತ್ತಾತ್ಮಕ ತತ್ವಗಳಿಗನುಗುಣವಾಗಿ ಮಹಿಳೆಯರ ಸಂಘವೊಂದನ್ನು ಭಾರತದಲ್ಲಿ ಸ್ಥಾಪಿಸಲಾಗಿದೆಯೆಂದು ಗೊತ್ತಾಗಿದೆ ಈ ಸಂಘಕ್ಕೆ ಪ್ರತ್ಯೇಕವಾದ ನೀತಿ ಬಾವುಟವಿರುವುದು ಇದು ಯಾವ ರಾಜಕೀಯ ಪಕ್ಷಕ್ಕೂ ಸೇರಿರುವುದಿಲ್ಲವೆಂದೂ ಮತ್ತು ಅದರ ವೇದಿಕೆಯನ್ನು ರಾಜಕೀಯ ಪಕ್ಷಗಳ ಪ್ರಚಾರಕ್ಕೆ ಉಪಯೋಗಿಸುವುದಿಲ್ಲವೆಂದೂ ಹೇಳಲಾಗಿದೆ ಎಲ್ಲೆಲ್ಲೂ [illegible] ಸಂಘಟನೆ ಮಾಡುವುದು, ಪತ್ರಿಕೆ ಬಲವನ್ನು ಕೂಡಿಸುವುದು [illegible] ಕೇಂದ್ರ ಕಮ್ಯೂನಿಸ್ಟ್ ಕಚೇರಿಯಿಂದ ಸಲಹೆ ಬಂದಿರುವುದಾಗಿ ತಿಳಿದುಬಂದಿದೆ

## ದಿನಾಚರಣೆ ರಥೋತ್ಸವ ಮತ್ತು ಕೃಷ್ಣೋತ್ಸವ

ಮೈಸೂರು ೨೮

ರಾಜಧಾನಿಯ ಅರಮನೆ ಕೋಟೆಯಲ್ಲಿರುವ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿ ೩೦ನೇ ತಾ॥ ಭಾನುವಾರ ಬೆಳಿಗ್ಗೆ ರಥೋತ್ಸವವು ನೆರವೇರುವುದು ಶ್ರೀ ಕೃಷ್ಣೋತ್ಸವದ ಅಂಗವಾಗಿ ೧ನೇ ತಾ॥ ನಿಂದ ೯ರ ವರೆಗೆ ನಿತ್ಯವೂ ಸಂಜೆ ೫॥ ಗಂಟೆಗೆ ವಿವಿಧ ಉತ್ಸವಗಳು ನಡೆಯುವುವು ೨ನೇ ತಾ॥ ಉರಿಯುಡಿ ಉತ್ಸವ, ೩ನೇ ತಾ॥ ಪೂತನಿ ಸಂಹಾರ, ೪ರಂದು ಶಕಟಾಸುರ ವಧೆ ೫ ಬಕಾಸುರ ವಧೆ ೬ ಯಮಳಾರ್ಜುನರ ೭ ರಾಸಕ್ರೀಡೆ ೮ ಮಲ್ಲಯುದ್ಧ ಮತ್ತು ೯ ರಾಸಕ್ರೀಡೆ ಮತ್ತು ರಂ ಮುಥೇನ ಅಲಂಕಾರ ಈ ಉತ್ಸವಗಳು ಇವೆ

### ದಳವಾಯಿ ಪ್ರೌಢಶಾಲೆಯ ಹಳೇ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ದಳವಾಯಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳ ಕೂಟವು ಇದೇ ೩೦ ನೇ ತಾ॥ ಭಾನುವಾರ ಸಂಜೆ ೬ ಗಂಟೆಗೆ ಶಾಲೆಯಲ್ಲಿ ಸೇರುವುದು ವಿದ್ಯಾರ್ಥಿ ಸಂಘದ ಸದಸ್ಯರೂ ಮತ್ತು ಹಿತೈಷಿಗಳೂ ಸಭೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ ಸಂಘದ ಅಧ್ಯಕ್ಷರಾದ ಶ್ರೀ ಹೆಚ್ ನಾಗಪ್ಪನವರು ಅಧ್ಯಕ್ಷತೆ ವಹಿಸುವರು

### ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆಯವರ ರೇಡಿಯೋ ಸಂಗೀತ

ನಾಳೆ ರಾತ್ರಿ ೯ ೩೦ ಗಂಟೆಯಿಂದ ೧೧ ಘಂಟೆವರೆಗೆ ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆಯವರು ದೆಹಲಿ ರೇಡಿಯೋವಿನಲ್ಲಿ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ಗಾಯನ ಮಾಡುವರು ಅವರ ಸಂಗೀತವನ್ನು ಮೈಸೂರಿನ ರೇಡಿಯೋ ವಿಸವರು ಪುನಃಪ್ರಸಾರ ಮಾಡುವರು

### ಮತ್ಸ್ಯಾವತಾರದ ಅಲಂಕಾರ

ರಾಜಧಾನಿಯ ಅರಮನೆ ಕೋಟೆಯಲ್ಲಿರುವ ಶ್ರೀ ಕೋಡಿ ಸೋಮೇಶ್ವರ ಸ್ವಾಮಿಯವರ (ನವಗ್ರಹ) ದೇವಾಲಯದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ನಾಳೆ ದೇವರಿಗೆ ಮತ್ಸ್ಯಾವತಾರದ ಅಲಂಕಾರವನ್ನು ಹಾಕಲಾಗುವುದು

### ಚಾಮರಾಜನಗರದ ಆಸ್ಪತ್ರೆ ವೈದ್ಯರು ಲಂಡನ್ನಿಗೆ

ಚಾಮರಾಜನಗರದ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಶ್ರೀ ಎಸ್ ಶಾಂತರಾಜ ಶೆಟ್ಟಿಯವರ ಕಿವಿ, ಮೂಗು ಮತ್ತು ಗಂಟಲು ರೋಗಗಳ ನಿವಾರಣೆ ಕ್ರಮದ ಬಗ್ಗೆ ಉಚ್ಚ ಶಿಕ್ಷಣ ಪಡೆಯಲು ಮಂಗಳವಾರ ಬೊಂಬಾಯಿಯಿಂದ ಲಂಡನ್ನಿಗೆ ತೆರಳಿದರೆಂದು ತಿಳಿದುಬಂದಿದೆ

### ಸ್ವಪ್ನ ವಾಸವದತ್ತ ನಾಟಕ ವಿಮರ್ಶೆ

ಪಂಡಿತ ಶ್ರೀ 'ಸೂರಿ' ಯವರಿಂದ ರಚಿತವಾಗಿ ರಾಜಧಾನಿಯ ಶ್ರೀ ತಿರು ಶ್ರೀರಂಗರವರಿಂದ ಪ್ರಕಟಿಸಲ್ಪಟ್ಟಿರುವ ಮೇಲ್ಕಂಡ ಕನ್ನಡ ಪುಸ್ತಕವನ್ನು ಆದರದಿಂದ ಸ್ವೀಕರಿಸಿರುತ್ತೇವೆ ನಾಟಕದ ಕವಿ ಮತ್ತು ಕಾಲ ನಿರ್ಣಯ, ಪಾತ್ರಗಳು, ಶೈಲಿ ಮುಂತಾದುವುಗಳನ್ನು ಸರಳವೂ, ಸುಂದರವೂ ಆದ ಭಾಷೆಯಲ್ಲಿ ವಿವರಿಸಲಾಗಿದೆ ಸ್ವಪ್ನವಾಸವದತ್ತ ನಾಟಕವನ್ನು ಅಭ್ಯಾಸ ಮಾಡುವವರಿಗೆ ಇದು ಬಹಳ ಉಪಯುಕ್ತವಾಗಿದೆ ಬೆಲೆ ೬ಣೆ

## ಮದ್ರಾಸು ಪೋಲೀಸರ ಬಿಡುಗಡೆಗಾಗಿ ಜಾಮೀನು ಅರ್ಜಿ

ಕೋಲಾರದ ಪ್ರಥಮ ನ್ಯಾಯಾಧೀಶರ ಮುಂದೆ ಅಲ್ಲಿನ ವಕೀಲರಾದ ಶ್ರೀ ಶ್ರೀನಿವಾಸರಾಯರು ಅರ್ಜಿಯನ್ನು ಸಲ್ಲಿಸಿ ಮೈಸೂರು ಪೋಲೀಸರು ಬಂಧಿಸಿರುವ ಮದ್ರಾಸಿನ ಸಬ್ ಇನ್ಸ್‌ಪೆಕ್ಟರ್ ರಾಘವಲು ನಾಯರ್ ಮತ್ತಿಬ್ಬರು ಪೋಲೀಸರನ್ನು ಜಾಮೀನು ಮೇಲೆ ಬಿಡುವಂತೆ ಕೋರಿರುತ್ತಾರೆ ಕೋರ್ಟಿನ ಅನುಮತಿ ಮೇರೆ ಚಿತ್ತೂರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಕ್ರಾಸ್‌ವೆಲ್‌ರವರ ಹೇಳಿಕೆಯನ್ನಿತ್ತು ತಮ್ಮ ಸರಕಾರದ ಅನುಮತಿ ಪಡೆದು ಜಾಮೀನು ಅರ್ಜಿಯನ್ನು ಹಾಕಲಾಗಿರುವುದೆಂದು ತಿಳಿಸಿದರು ಕಳ್ಳರವಾನೆ ಮಾಡುತ್ತಿದ್ದವರ ಮೇಲೆ ಸರಿಯಾದ ಕ್ರಮ ಕೈಗೊಂಡುದಕ್ಕಾಗಿ ಅವರು ಹೆಮ್ಮೆಪಟ್ಟಿದ್ದಾರೆ, ಮದ್ರಾಸು ಎಲ್ಲೆಯೊಳಗೇ ಗುಂಡು ಹಾರಿಸಲಾಯಿತೆಂದೂ, ಮೈಸೂರು ಗಡಿಯೊಳಗೆ ಗುಂಡು ಹಾರಿಸಿದ ಬಗ್ಗೆ ಇಲ್ಲಿನ ಪೋಲೀಸರು ವಿಚಾರಣೆ ಮಾಡಬಹುದೆಂದೂ ಸವಾಲು ಹಾಕಿದರು ನ್ಯಾಯಾಧೀಶರು ತನಿಖಾಧಿಕಾರಿಗಳ ಡೈರಿಯನ್ನು ಜಾಗ್ರತೆಯಾಗಿ ಒಪ್ಪಿಸುವಂತೆ ಸೂಚಿಸಿದರು

○ ಭಾರತದಲ್ಲಿ ೩೫,೩೪೫ ಮಂದಿ ವಿದೇಶೀಯರು ಸರ್ಕಾರಿ ಮತ್ತು ಖಾಸಗಿ ನೌಕರರುಗಳಾಗಿರುವರೆಂದು ಗೊತ್ತಾಗಿದೆ ಅವರಲ್ಲಿ ಅಮೆರಿಕಾ, ಜರ್ಮನಿ, ಬ್ರಿಟನ್, ಪಾಕಿಸ್ತಾನ, ಬರ್ಮಾ ನೇಪಾಳ ಇಟಲಿ ಮತ್ತು ಸ್ವಿಟ್ಜರ್ಲೆಂಡಿನವರಿರುವರೆಂದು ಹೇಳಲಾಗಿದೆ

ಈ ವರ್ಷ ಶೇ॥ ೫ರಷ್ಟು ಹೆಚ್ಚು ಫಸಲು

ಸಂಸ್ಥಾನದ ಆಹಾರ ಸಚಿವರಾದ ಶ್ರೀ ಸಿದ್ದವೀರಪ್ಪನವರು ಹೋದ ವರ್ಷಕ್ಕಿಂತಲೂ ಈ ಸಾರಿ ಶೇ॥ ೫ರಷ್ಟು ಹೆಚ್ಚು ಬೆಳೆಯಾಗುವ ನಿರೀಕ್ಷೆಯಿರುವುದಾಗಿ ಹೇಳಿರುತ್ತಾರೆ ಹಾಗೆ ಆದರೆ ಮುಖ್ಯವಾದ ಬೆಳೆ ಇಲ್ಲದಿರುವ ಕಷ್ಟವು ಬಹುಮಟ್ಟಿಗೆ ನಿವಾರಣೆಯಾಗುವುದೆಂದು ಅವರು ತಿಳಿಸಿರುತ್ತಾರೆ


## ಮನೆಗಳು ಕ್ರಯಕ್ಕಿವೆ

1) ಡೋರ್ ನಂಬರು 2835 ಶಂಕರನಾರಾಯಣಸ್ವಾಮಿ ದೇವಸ್ಥಾನದ ರೋಡು, ಮೈಸೂರು

2) ಡೋರ್ ನಂಬರ್ 1080 ಮತ್ತು 1081 ಸಿಮೆಂಟ್ ಬ್ಲಾಕ್, ಚಾಮುಂಡಿಪುರಂ, ಮೈಸೂರು

3) ಡೋರ್ ನಂಬರು 906 ವೈಸರಾಯ್ ರೋಡು, ಚಾಮುಂಡಿಪುರಂ, ಮೈಸೂರು

ವಾಣೀವಿಲಾಸ ಮೊಹಲ್ಲಾದಲ್ಲಿ ಅನೇಕ ಬಂಗ್ಲೆಗಳು ಮತ್ತು ಮನೆಗಳು ಕ್ರಯಕ್ಕಿವೆ

ಮನೆಗಳು ಮತ್ತು ಜಮೀನುಗಳ ಮೇಲೆ ಸಾಲ ಸಹಾ ಕೊಡಿಸಲಾಗುತ್ತೆ

ಹೆಚ್ಚಿಗೆ ವಿಷಯಗಳಿಗೆ

ಬ್ರೋಕರ್ಸ್ ಸಿಂಡಿಕೇಟ್

ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು ಇವರಲ್ಲಿ ವಿಚಾರಿಸಿ


## ಮೈಸೂರು ಪೇಟೆ ಧಾರಣೆ

| ಪದಾರ್ಥ | [illegible] | [illegible] |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಹೊಂಗೆಬೀಜ | [illegible] | |
| ಹರಳುಬೀಜ | [illegible] | |
| ಹಲಸಂದೆ | [illegible] | [illegible] |
| ಹುಣಸೇಹಣ್ಣು | [illegible] | |
| ತೆಂಗಿನಕಾಯಿ ೧೦೦೦ಕ್ಕೆ | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]


SRI GANESHA TALKIES

From 29-8-53 : For 2-Days

M G M s Spectacular Technicolor Musical Comedy

ANNIE, GET YOUR GUN

Featuring:- Betty Hutton and Howard Keel

SRI GAYATHRI TALKIES

FROM TO-DAY

Daily 4 Shows

Morning at 10-30, Matinee at 3.30, Evening Show at 6-30 and Last Show at 9.45


Edited, Printed and Published by A R Nagarajan at Sadhvi Press, D. Subbiah Road, Mysore


ಮನೆ ಕ್ರಯ ಅಥವಾ ಭೋಗ್ಯಕ್ಕಿದೆ

ಡೋರ್ ನಂ. 2671.

೧ನೇ ಮೇನ್ ರಸ್ತೆ, (ಬಸ್ ರಸ್ತೆ), ವಾಣೀವಿಲಾಸ ಮೊಹಲ್ಲಾ ಮೈಸೂರು

ವಿಶಾಲವಾದ ಸೈಟಿನಲ್ಲಿ ಕಟ್ಟಿರುವ ಪೂರ್ವ ತಾರಸಿ ಮನೆ

ವಿವರಗಳಿಗೆ — ಜಯ ಅಂಡ್ ಕಂಪೆನಿ, (ಫೋನ್ 520)

ಮನೆ ಜಮೀನು ಸಾಲ ಕೊಡಿಸುವ ಏಜೆಂಟರು, ಹಳೇ ಮೈಸೂರು ಬ್ಯಾಂಕ್ ಕಟ್ಟಡ

ಪ್ರಭುದೇವಾ ಥಿಯೇಟರ್

ಪದ್ಮಾ ಟಾಕೀಸ್

29-8 53 ರಿಂದ :: ಅಮೋಘ 3 ನೇ ವಾರ

ಅವ್ವೈಯಾರ್

ಕೆ ಬಿ ಸುಂದರಾಂಬಾಳ್ ಪಾತ್ರ ವಹಿಸಿರುವ ಜೆಮಿನಿಯವರ ತಮಿಳು ಚಿತ್ರ

ಚಾಮುಂಡೇಶ್ವರಿ ಟಾಕೀಸ್, ಮೈಸೂರು

29-8-53 ನೇ ಶನಿವಾರದಿಂದ ಅಮೋಘ ಪ್ರಾರಂಭ ದಿನಕ್ಕೆ 3 ಆಟಗಳು

ನಟೇಶ್ ಅಯ್ಯರ್ ಪಿಕ್ಚರ್ಸ್‌ರವರ ಪೂರ್ಣ ಸಂಗೀತ ಮತ್ತು ನೃತ್ಯಮಯ ತಮಿಳು ಚಿತ್ರ

ಅಂಬು

ತಾರಾಗಣ — ಶಿವಾಜಿ ಗಣೇಶನ್, ಕೆ ರಾಮಸ್ವಾಮಿ, ಟಿ ಎಸ್ ಬಾಲಯ್ಯ, ಲಲಿತ ಪದ್ಮಿನಿ, ಟಿ ಆರ್ ರಾಜಕುಮಾರಿ, ಪುಷ್ಪೇಂದ್ರಮಣಿ ಮುಂತಾದವರು

MORNING SHOWS On Sat 29th and Sun. 30th

ALL QUIET ON THE WESTERN FRONT

ಟೆಲಿಫೋನ್ ನಂ: 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಗೌರಿ ಹಬ್ಬಕ್ಕೆ ಬೇಕಾದ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು
ನೂಲಿನ ರವುಂವಾರಿ
ಸೀರೆಗಳು ಬಂದಿವೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE · SATURDAY 29-8-1953 : ಮೈಸೂರು : ಶನಿವಾರ ೨೯-೮-೧೯೫೩ [ ಸಂಚಿಕೆ ೨೭

# ಅಜಾದ್ ಕಾಶ್ಮೀರದಲ್ಲಿ 'ವಿಮೋಚನಾ ಪಡೆ'ಯ ಸ್ಥಾಪನೆ

## ಸರ್ಕಾರಿ ಜಮೀನು ಹರಾಜು ಪದ್ಧತಿಯ ರದ್ದು

ಬೆಂಗಳೂರು ೨೮

ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ ಸರ್ಕಾರೀ ಜಮೀನುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡತಕ್ಕ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಅಮಲ್ದಾರರಿಗೆ ಇರುವ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿರುವರೆಂದು ತಿಳಿದುಬಂದಿದೆ. ಜಮೀನು ಇಲ್ಲದವರಿಗೆ ಮಾತ್ರ ಜಮೀನುಗಳನ್ನು ಅಪ್ಸೆಟ್ ಬೆಲೆಗೆ ಕೊಡುವ ಬಗ್ಗೆ ಒಂದು ಪಟ್ಟಿಯನ್ನು ಸಿದ್ಧಗೊಳಿಸುವಂತೆ ಸರ್ಕಾರದವರು ರೆವಿನ್ಯೂ ಕಮಿಷನರಿಗೆ ಸೂಚಿಸಿರುವರೆಂದು ಹೇಳಲಾಗಿದೆ. ೩ ಎಕರೆ ತರಿ ಅಥವಾ ೫ ಎಕರೆ ಖುಷ್ಕಿ ಜಮೀನನ್ನು ಹೊಂದಿರುವವರಿಗೆ ಮುಂದೆ ಹೊಸ ಜಮೀನನ್ನು ಕೊಡಕೂಡದೆ ಒಂದೂ, ಸರ್ಕಾರಿ ಜಮೀನನ್ನು ಪಡೆದು ಅದರ ಮೇಲೆ ಲಂಭಕ್ಕಾ ವ್ಯಾಪಾರ ಮಾಡುವುದನ್ನು ತಪ್ಪಿಸಬೇಕೆಂದೂ ಸರ್ಕಾರದ ಉದ್ದೇಶವಾಗಿರುವುದೆಂದು ತಿಳಿದುಬಂದಿದೆ. ಜಮೀನು ಇದ್ದವರಿಗೆ ಹೊಸ ಜಮೀನನ್ನು ಕೊಡಬೇಕಾದರೆ ಸರ್ಕಾರದ ವಿಶೇಷ ಅನುಮತಿ ಪಡೆಯಬೇಕಾಗಿದೆ.

### ಗುಜರಾತಿ ಭಾಷೆಯಲ್ಲಿ ಲೆಕ್ಕವಿಟ್ಟಿದ್ದಕ್ಕಾಗಿ ದಂಡ

ಬೆಂಗಳೂರಿನ ಸ್ಟೇಟ್ ಇಂಪೋರ್ಟರ್ ಕಂಪೆನಿಯ ಮುರಾರ್ಜೀಲಾಲ್ ಷಾ ವಿಜಯ ಚಂದ್ರರವರ ೧೯ವರ್ಷವಾಗಿದ್ದರೂ ಮಾರಾಟ ತೆರಿಗೆ ಕಾನೂನಿಗೆ ವಿರುದ್ಧವಾಗಿ ಅಂಗಡಿ ತೆರೆದು ಲೆಕ್ಕ ಪತ್ರಗಳನ್ನು ಗುಜರಾತಿ ಭಾಷೆಯಲ್ಲೇ ಇಟ್ಟಿದ್ದರೆಂದು ಅವರಿಗೆ ೫೦ ರೂ ದಂಡ, ತಪ್ಪಿದರೆ ೨ ದಿನ ಸಾದಾ ಸಜಾ ವಿಧಿಸಲಾಗಿದೆ.

### ಕಾಫಿ ತಯಾರಿಸುತ್ತಿದ್ದಾಗ ಬಾಲಕಿಯ ಸುಟ್ಟು ಮರಣ

ಬೆಂಗಳೂರಿನ ಶ್ರೀ ಕರೀಂ ಸಾಹೇಬರ ೧೫ ವರ್ಷದ ಮಗಳು ಕುಮಾರಿ ಮುಸ್ತೇರಿ ಜಾನಳು ಇದೇ ೨೬ನೇ ತಾ|| ರಾತ್ರಿ ಕಾಫಿ ಕಾಯಿಸುತ್ತಿರುವಾಗ ಉಟ್ಟಿದ್ದ ಬಟ್ಟೆಗೆ ಬೆಂಕಿ ತಗುಲಿ ಮೈಯೆಲ್ಲಾ ಸುಟ್ಟು ಗಾಯವಾಗಿ ಮಾರನೇ ದಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಳಾದಳೆಂದು ವರದಿಯಾಗಿದೆ

### ೨೨ ದಿನ ಹುಲ್ಲು ನೀರಿಲ್ಲದೆ ಬದುಕಿದ್ದ ಹಸು

ಅಬ್ಬಲ್ಪುರದ ಉಗ್ರಾಣವೊಂದರಲ್ಲಿ ಆಕಸ್ಮಿಕವಾಗಿ ಕೂಡಿಹಾಕಲ್ಪಟ್ಟಿದ್ದ ಹಸುವೊಂದು ೨೨ ದಿನಗಳನಂತರ ಉಗ್ರಾಣದ ಬಾಗಿಲನ್ನು ತೆರೆದಾಗ ಜೀವಸಹಿತ ಇದ್ದಿತೆಂದು ವರದಿಯಾಗಿದೆ

### ಪಿಂಚನು ವೇತನ ಪಡೆಯುವವರಿಗೆ ಸೂಚನೆ

ಖಜಾನೆಯ ನಿಯಮದಂತೆ ಪ್ರತಿ ತಿಂಗಳು ೧ನೇ ತಾ|| ಮತ್ತು ಮಾಹೆಯ ಕಡೆಯ ದಿನ ೧ ಗಂಟೆ ಹೊತ್ತಿಗೆ ಜಿಲ್ಲಾ ಖಜಾನೆಯು ಮುಚ್ಚಲ್ಪಡುವುದೆಂದೂ, ಪಿಂಚನು ವೇತನ ಪಡೆಯುವವರು ತಮ್ಮ ಪೆನ್ಷನ್ ಹಣವನ್ನು ತಿಂಗಳ ಕೊನೆಯ ದಿನ ಮಧ್ಯಾಹ್ನ ೧೨ ಗಂಟೆಯೊಳಗೆ ತೆಗೆದುಕೊಳ್ಳಬೇಕೆಂದೂ ಕೋರಿ ಮೈಸೂರು ಜಿಲ್ಲಾ ಖಜಾನೆಯ ಅಧಿಕಾರಿಗಳು ಪತ್ರ ಬರೆದಿರುವರು

## ಜಾಮೀನು ಮೇಲೆ ಕೃಷ್ಣಮೂರ್ತಿಯವರ ಬಿಡುಗಡೆಗೆ ಆಜ್ಞೆ

ಸ್ವಂ. ವ. ಪ್ರ.] ಬೆಂಗಳೂರು ೨೮

ಇಲ್ಲಿನ ಮೂರನೇ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ರಂಗರಾವ್ ಕದಂಬರವರ ಈ ದಿನ ಆಜ್ಞೆಯೊಂದನ್ನು ಇತ್ತು ಸ್ಥಳೀಯ ಜಿಲ್ಲಾ ಖಜಾನೆಯ ಟ್ರೆಜರರ್ ಶ್ರೀ ಸಿ ಎನ್ ಕೃಷ್ಣಮೂರ್ತಿಯವರನ್ನು ೫ ಸಾವಿರ ರೂ ಗಳ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊತ್ತದ ಎರಡು ಜಾಮೀನು ಪತ್ರಗಳ ಮೇಲೆ ಬಿಡುವಂತೆ ಸೂಚಿಸಿರುತ್ತಾರೆ. ಇಂದು ಅವರನ್ನು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಹಾಜರುಪಡಿಸಿ ಸಪ್ಟೆಂಬರ್ ೩ನೇ ತಾ|| ವರೆಗೂ ಪೋಲೀಸರು ರಿಮ್ಯಾಂಡ್ ಪಡೆದರು

ಇದೇ ಸಂಬಂಧವಾಗಿ ನೆನ್ನೆ ನಗರದ ಪೋಲೀಸರು ಮೋಹನ್ ಟೈಯ್ಯಾ ಎಂಬಾತನನ್ನು ವಶ್ತಗಿರಿ ಮಾಡಿದರು

## ಮದ್ರಾಸು ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಮೋಟಾರು ಕಾರಿಲ್ಲ

ಮದ್ರಾಸು ಪ್ರಾಂತದ ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳ ಉಪಯೋಗಕ್ಕಾಗಿ ಕಾರು ಅಥವಾ ಜೀಪುಗಳನ್ನು ಇಟ್ಟುಕೊಳ್ಳಲು ಅಲ್ಲಿನ ಸರ್ಕಾರದವರು ಕೊಟ್ಟಿದ್ದ ಅನುಮತಿಯನ್ನು ಈಗ ವಾಪಸು ತೆಗೆದುಕೊಂಡಿರುತ್ತಾರೆ. ಮೋಟಾರು ವಾಹನಗಳಿಗೆ ವಿಪರೀತ ಹಣ ವೆಚ್ಚವಾಗುತ್ತಿರುವುದಲ್ಲದೆ, ಜಿಲ್ಲಾ ಬೋರ್ಡುಗಳ ಅಧ್ಯಕ್ಷರುಗಳು ತಮ್ಮ ಪ್ರವಾಸಗಳಿಗಾಗಿ ಬಹಳ ಹಣವನ್ನು ಪ್ರಯಾಣ ಭತ್ಯವಾಗಿ ತೆಗೆದುಕೊಳ್ಳುತ್ತಿರುವುದೇ ಇದಕ್ಕೆ ಕಾರಣ. ವಾಹನ ಸೌಕರ್ಯಗಳನ್ನು ಕೊಟ್ಟಾಗಲೂ ಸಹ ಹಲವು ಅಧ್ಯಕ್ಷರು ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೂ ಪ್ರಯಾಣ ಭತ್ಯವನ್ನು ಪಡೆದಿರುವರೆಂದು ಹೇಳಲಾಗಿದೆ.

### ಭಾರತ ಮತ್ತು ಶಂಕರ ವಿಜಯಗಳ ವಾಚನ

ರಾಜಧಾನಿಯ ಸಂತೇಪೇಟೆಯಲ್ಲಿರುವ ಇಂಟಿಗರ ಶ್ರೀ ರಾಮ ಮಂದಿರದಲ್ಲಿ ನಿತ್ಯವೂ ಸಂಜೆ ೫|| ಗಂಟೆಯಿಂದ ೭ರ ವರೆಗೆ ಗಮಕ ವಿದ್ವಾನ್ ಕೃಷ್ಣರಾಯರಿಂದ ಭಾರತ ವಾಚನವೂ, ೭ ರಿಂದ ೮ ರ ವರೆಗೆ ಶ್ರೀಗಳು ಕೌಶಿಕ್ ಮತ್ತು ವೆಂಕಟಸುಬ್ಬಯ್ಯನವರಿಂದ ಶಂಕರ ವಿಜಯ ವಾಚನವೂ ನಡೆಯುವುವು

### ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ಶ್ರೀ ಎಲ್ಲಮ್ಮಾಂಬ ಮತ್ತು ಶ್ರೀ ಚಂದ್ರಗುಪ್ತಮಾಂಬಾ ದೇವರುಗಳ ಸೇವಾರ್ಥವಾಗಿ ಈ ರಾತ್ರಿ ೯ ಗಂಟೆಗೆ ಶ್ರೀ ಆರ್ ಎಸ್ ಶೇಷಗಿರಿ ದಾಸರಿಂದ ಸಂತ ಜ್ಞಾನೇಶ್ವರ ಎಂಬ ಹರಿಕಥೆಯು ಶ್ರೀಮತಿ ನಂಜಮ್ಮನವರ ಧರ್ಮಶಾಲೆಯಲ್ಲಿ ನಡೆಯುವುದು

### ರೈಲ್ವೆಯ ಸಾಮಾನುಗಳ ಕಳುವಿಗಾಗಿ ಬಂಧನ

ನಗರದ ರೈಲ್ವೆ ಪೋಲೀಸರು ರೈಲ್ವೆಗೆ ಸಂಬಂಧಿಸಿದ ಸುಮಾರು ೯೦೦ ರೂ ಬೆಲೆ ಬಾಳುವ ಸಾಮಾನುಗಳನ್ನು ಕದ್ದನೆಂದು ಹೇಳಲಾದ ಸಾಬಣ್ಣ ಎಂಬ ರೈಲ್ವೆ ನೌಕರನನ್ನು ವಶ್ತಗಿರಿ ಮಾಡಿರುತ್ತಾರೆ

## ಧಾನ್ಯದ ಖಾಸಗಿ ಮಾರಾಟದ ಬೆಲೆ ತಗ್ಗಿಸಬೇಕು

### ಪೌರಸಭೆಯಲ್ಲಿ ನಿರ್ಣಯದ ತಿರಸ್ಕಾರ

ಮೈಸೂರು ೨೮

ನಗರದ ಪೌರಸಭೆಯ ಸಾಧಾರಣ ಅಧಿವೇಶನವು ನೆನ್ನೆ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಮಾಜಿ ಪೌರಸಭಾಸದಸ್ಯರೂ ಪತ್ರಿಕೋದ್ಯಮಿಗಳೂ ಆದ ಶ್ರೀ ಟಿ ಕೃಷ್ಣರಾಯರ ನಿಧನಕ್ಕಾಗಿ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮಂಡಿಸಿದ ಸಂತಾಪ ಸೂಚಕ ನಿರ್ಣಯವನ್ನು ಸಭೆಯು ಅಂಗೀಕರಿಸಿ ಎದ್ದುನಿಂತು ಒಂದು ನಿಮಿಷದ ಮೌನವನ್ನು ಆಚರಿಸಿತು

ಬರುವ ಅಕ್ಟೋಬರ್ ತಿಂಗಳಲ್ಲಿ ಮಾರ್ಕೆಟ್ ಪ್ರದರ್ಶನವನ್ನು ನಡೆಸಲು ೧,೫೦೦ ರೂ, ನಜರ್‌ಬಾದಿನಲ್ಲಿ ಹೊಸದಾಗಿ ಕಟ್ಟುತ್ತಿರುವ ಹೆರಿಗೆ ಆಸ್ಪತ್ರೆಯ ಪ್ರಾರಂಭೋತ್ಸವಕ್ಕಾಗಿ ೫೦೦ ರೂ ವೆಚ್ಚವನ್ನೂ ಮತ್ತು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ನರ್ಸರಿ ಶಾಲೆಗೆ ೩೦೦ ಮತ್ತು ಲಿಟರರಿ ಯೂನಿಯನ್ನಿಗೆ ೧೫೦ ರೂ ಸಹಾಯ ದ್ರವ್ಯವನ್ನೂ ಮಂಜೂರ ಮಾಡಲಾಯಿತು

ಸರ್ಕಾರದವರು ನಿಗದಿ ಮಾಡಿರುವ ಬೆಲೆಗಿಂತಲೂ ಖಾಸಗಿ ವರ್ತಕರು ಧಾನ್ಯವನ್ನು ಹೆಚ್ಚು ಬೆಲೆಗೆ ಮಾರುತ್ತಿರುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಡಾ|| ಬಿ ಜಿ ದಾಸ್‌ರವರು ನಿರ್ಣಯವನ್ನು ಮಂಡಿಸಿದರು. ಶ್ರೀ ಎ. ವೆಂಕಟೇಶಯ್ಯನವರು ಅನುಮೋದಿಸಿದರು

ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ, ಪಿ ಡಿ ಕೃಷ್ಣಸ್ವಾಮಿ, ಹೆಚ್ ಎನ್ ಮುದ್ದಯ್ಯ, ಅಬ್ದುಲ್ ರಹಮಾನ್ ಮತ್ತು ಟಿ ನರಸಿಂಹಯ್ಯಂಗಾರ್ಯರು ನಿರ್ಣಯವನ್ನು ವಿರೋಧಿಸಿದರು. ಸರ್ಕಾರದವರು ಈಗಾಗಲೇ ಆಹಾರದ ಹತೋಟಿಯನ್ನು ತೆಗೆದಿರುವುದರಿಂದ ಪುನಃ ವರ್ತಕರ ಮೇಲೆ ಕ್ರಮ ಕೈಗೊಳ್ಳಲು ಪ್ರಾರ್ಥಿಸಿದರೆ, ಹತೋಟಿಯನ್ನು ಮತ್ತೆ ಹಾಕುವಂತೆ ಸೂಚಿಸಬೇಕಾಗುವುದೆಂದು ತಿಳಿಸಿದರು. ನಿರ್ಣಯವನ್ನು ಓಟಿಗೆ ಹಾಕಲಾಗಿ ೭ ೧೨ ಮತಗಳು ಬಂದು ಬಿದ್ದುಹೋಯಿತು

ಡಾ|| ಬಿ ಜಿ ದಾಸ್‌ರವರ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವಿತ್ತು, ಪೌರಸಭಾ ಕಾನೂನು ಪ್ರಕಾರ ೧ ವರ್ಷಕ್ಕೆ ಮೇಲ್ಪಟ್ಟು ಸಭೆಯ ಅವಧಿಯನ್ನು ಹೆಚ್ಚಿಸಲು ಅವಕಾಶವಿಲ್ಲವೆಂದೂ, ಚುನಾವಣೆಯ ದಿನವನ್ನು ಚುನಾವಣಾಧಿಕಾರಿಗಳು ಪ್ರಕಟಿಸುವರೆಂದೂ ತಿಳಿಸಿದರು

### ಕೃಷ್ಣರಾಜೇಂದ್ರ ಆಸ್ಪತ್ರೆ ವೈದ್ಯರ ವರ್ಗ

ಮೈಸೂರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ವೈದ್ಯರಾದ ಡಾ|| ಡೇವಿಡ್ ರವರನ್ನು ಕೋಲಾರದ ಚಿನ್ನದ ಗಣಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾಗಿಯೂ, ಅಲ್ಲಿರುವ ಶ್ರೀ ಕೆ ಎಂ ಕೃಷ್ಣ ಯರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ ವರ್ಗಾಯಿಸಲಾಗಿದೆ. ಡಾ|| ಡೇವಿಡ್‌ರವರ ನಡವಳಿಕೆ ಸಂಬಂಧವಾಗಿ ಹಿರಿಯ ಶಾಸನ ಸಭೆಯಲ್ಲಿ ವಿಪರೀತ ಪ್ರಶ್ನೆಗಳನ್ನು ಕೇಳಲಾಗಿದ್ದಿತು

## ಅಜಾದ್ ಕಾಶ್ಮೀರದಲ್ಲಿ 'ವಿಮೋಚನಾ ಪಡೆ'

ಪಾಕಿಸ್ತಾನದ ವಶದಲ್ಲಿರುವ ಅಜಾದ್ ಕಾಶ್ಮೀರದಲ್ಲಿ ಕಾಶ್ಮೀರ ಸಂಸ್ಥಾನದ ವಿಮೋಚನಾ ಪಡೆ ಯನ್ನು ಸ್ಥಾಪಿಸಲು ಅಲ್ಲಿನ ಮುಖಂಡರು ನಿರ್ಧರಿಸಿರುತ್ತಾರೆ. ಅವರ ಪೈಕಿ ಒಬ್ಬರಾದ ಸರ್ದಾರ್ ಇಬ್ರಾಹಿಂಖಾನ್‌ರವರು ಮಾತನಾಡಿ, ಪಾಕಿಸ್ತಾನವು ಕಾಶ್ಮೀರವೊಳಗೆ ನೇರವಾಗಿ ನುಗ್ಗಬೇಕೆಂದು ತಿಳಿಸಿರುವರು. ಷೇಕ್ ಅಬ್ದುಲ್ಲಾರವರ ದಸ್ತಗಿರಿ ಮತ್ತು ಮಹಾರಾಜಾ ಹರಿಸಿಂಗರ ಸಿಂಹಾಸನ ತ್ಯಾಗಗಳಾದನಂತರ ಕಾಶ್ಮೀರದಲ್ಲಿ ಇರುವ ಹಕ್ಕನ್ನು ಭಾರತವು ಎಷ್ಟರಮಟ್ಟಿಗೆ ಹೊಂದಿರುವುದೋ ಅಷ್ಟನ್ನೇ ಪಾಕಿಸ್ತಾನವೂ ಹೊಂದಿರುವುದಾಗಿ ಅವರು ಹೇಳಿರುವರು

## ಕೊರಿಯಾ ಸಮ್ಮೇಳನದಿಂದ ಭಾರತದ ಹೆಸರು ವಾಪಸು

ಕೊರಿಯದ ರಾಜಕೀಯ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನವಿರಬೇಕೆಂದು ಸೂಚಿಸಲ್ಪಟ್ಟಿದ್ದು ಈಗ ಭಾರತದ ಪ್ರತಿನಿಧಿ ವಿ ಕೆ ಕೃಷ್ಣಮೆನನ್‌ರವರು ಭಾರತದ ಉಮೇದವಾರಿಕೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ. ಕೊರಿಯಾ ಶಾಂತಿ ಮಾತುಕತೆಗಳು ಸುಗಮವಾಗಿ ನಡೆಯಲು ತಕ್ಕ ವಾತಾವರಣವನ್ನು ಕಲ್ಪಿಸುವುದಕ್ಕಾಗಿ ಭಾರತವು ಈ ರೀತಿ ಮಾಡಿರುವುದಾಗಿ ಗೊತ್ತಾಗಿದೆ.

## ಬಡ ಉಪಾಧ್ಯಾಯರ ಮನೆಯಲ್ಲಿ ಶ್ರೀ ಕೃಷ್ಣನ ಪಾದದ ಗುರುತು

ಮಲಬಾರ್ ಜಿಲ್ಲೆಯ ಪಲ್ಲಿಪುರಂ ಎಂಬ ಹಳ್ಳಿಯ ಬಡ ಉಪಾಧ್ಯಾಯರೊಬ್ಬರ ಮನೆಗೆ ಭಗವಾನ್ ಶ್ರೀ ಕೃಷ್ಣನು ಬಂದಿದ್ದನೆಂಬ ಸುದ್ದಿಯು ಹರಡಿ, ಅಲ್ಲಿಗೆ ದಿನವಹಿ ನೂರಾರು ಜನರು ಬಂದುಹೋಗುತ್ತಿರುವರೆಂದು ಹೇಳಲಾಗಿದೆ. ಪೂಜಾ ಗೃಹದಲ್ಲಿ ಎರಡು ತಿಂಗಳುಗಳ ಹಿಂದೆ ಕಾಣಬಂದ ಪಾದದ ಗುರುತುಗಳು ಶ್ರೀ ಕೃಷ್ಣನ ಕಾಲಿನ ಗುರುತುಗಳಾಗಿರುವುದಾಗಿ ಪ್ರತೀತಿ. ಇವರು ಅನೇಕ ವರ್ಷಗಳಿಂದ ಅವರ ಶ್ರೀ ಕೃಷ್ಣನನ್ನು ಭಕ್ತಿಯಿಂದ ಪೂಜಿಸುತ್ತಿರುವರು. ಇತ್ತೀಚೆಗೂ ಅದೇ ರೀತಿ ಪಾದದ ಗುರುತುಗಳು ಕಾಣಬರುತ್ತಿರುವುದರಿಂದ ಜನರ ಕುತೂಹಲವು ಮತ್ತೂ ಕೆರಳಿರುತ್ತದೆ

### ಸಂಗೀತ ಕಛೇರಿ

ರಾಜಧಾನಿಯ ಲಷ್ಕರ್ ಮೊಹಲ್ಲಾ ಅಶೋಕಾ ೮ ನೇ ವೆಸ್ಟ್ ಕ್ರಾಸಿನಲ್ಲಿರುವ ಶ್ರೀ ಸರಸ್ವತಿ ಸಂಗೀತ ಪಾಠಶಾಲೆಯ ಸ್ಥಾಪಕರಾದ ವಿ|| ವೆಂಕಟರಮಣಯ್ಯನವರ ಮನೆಯಲ್ಲಿ ರಾಘವೇಂದ್ರ ಗುರುಗಳ ಆರಾಧನೆಯ ಅಂಗವಾಗಿ ಈ ದಿನ ಸಂಜೆ ೭|| ಘಂಟೆಗೆ ವಿ|| ಎನ್ ನಂಜುಂಡಸ್ವಾಮಿಯವರ ಸಂಗೀತ ಕಛೇರಿಯು ನಡೆಯುವುದು

○ ಭಾರತ ಸರ್ಕಾರದವರು ನೇಮಿಸಿರುವ ಮಾಧ್ಯಮಿಕ ವಿದ್ಯಾಭ್ಯಾಸ ಸಮಿತಿಯವರು ಕೊಟ್ಟಿರುವ ವರದಿಯಲ್ಲಿ ಮಾಧ್ಯಮಿಕ ಶಾಲೆ ಶಿಕ್ಷಣವು ಪ್ರಾದೇಶಿಕ ಭಾಷೆಯಲ್ಲಿಯೇ ನಡೆಯಬೇಕೆಂದೂ, ಮಿಡಲ್ ಸ್ಕೂಲ್ ದರ್ಜೆಯಲ್ಲಿ ರಾಷ್ಟ್ರೀಯ ಭಾಷೆ ಮತ್ತು ಒಂದು ವಿದೇಶೀ ಭಾಷೆಯನ್ನು ಕಲಿಸಬೇಕೆಂದೂ ತಿಳಿಸಲಾಗಿದೆ

## ಮದ್ರಾಸು ಶಿಕ್ಷಣ ಸುಧಾರಣೆ ಯೋಜನೆ ಪರಿಶೀಲನೆಗೆ ಸಮಿತಿ

ಮದ್ರಾಸಿನಲ್ಲಿ ಜಾರಿಗೆ ತಂದಿರುವ ಪ್ರಾಥಮಿಕ ವಿದ್ಯಾಭ್ಯಾಸ ಸುಧಾರಣಾ ಯೋಜನೆಯನ್ನು ಪರಿಶೀಲಿಸಿ, ಸೂಕ್ತ ಶಿಫಾರಸನ್ನು ಮಾಡುವಂತೆ ಸರ್ಕಾರದವರು ಬೊಂಬಾಯಿಯ ವಿದ್ಯಾಭ್ಯಾಸ ಶಾಖೆಯ ಡೈರೆಕ್ಟರಾದ ಪ್ರೊ|| ಆರ್. ವಿ. ಪರುಳೇಕರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದ್ದಾರೆ. ಅದರಲ್ಲಿ ಮದ್ರಾಸಿನ ನಿವೃತ್ತ ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಬಿ. ಬಿ. ಡೇಯವರು ದೆಹಲಿಯ ಜಮಿಯಾ ಮಿಲ್ಲಿಯಾದ ವೈಸ್ ಛಾನ್ಸಲರಾದ ಎಂ. ಮುಜೀಬ್ ಮತ್ತು ಮದ್ರಾಸಿನ ವಿದ್ಯಾ ಇಲಾಖೆ ಡೈರೆಕ್ಟರ್ ಎಸ್. ಗೋವಿಂದರಾಜುಲುರವರು ಸದಸ್ಯರಾಗಿರುವರು. ವಿದ್ಯಾಭ್ಯಾಸದಲ್ಲಿ ಸುಧಾರಣೆ ಮಾಡಿದ ಬಗ್ಗೆ ಮದ್ರಾಸು ಶಾಸನ ಸಭೆಯಲ್ಲಿ ಟೀಕೆಯಾಗಿ ಸರ್ಕಾರದ ವಿರುದ್ಧವಾಗಿ ಎರಡು ಓಟುಗಳ ಹೆಚ್ಚಾಗಿ ಬಂದಿದ್ದುವು.

## ಕೇಂದ್ರ ಅಧಿಕಾರಿಯ ವಜಾ

ಆಲ್ ಇಂಡಿಯಾ ರೇಡಿಯೋವಿನ ಮಾಜಿ ಡೈರೆಕ್ಟರ್ ಜನರಲ್ಲರಾದ ಮಿ|| ಎ. ಎಸ್. ಬುಖಾರಿಯವರನ್ನು ಸಂಪೂರ್ಣವಾಗಿ ವಜಾ ಮಾಡಿದ್ದಾರೆ.

## ಗೋದಾವರಿ ಪ್ರವಾಹ ಪೀಡಿತರ ಸಹಾಯಕ್ಕಾಗಿ ೩ ಕೋಟಿ ರೂ

ಗೋದಾವರಿ ಪ್ರವಾಹದಿಂದ ಪೀಡಿತರಾಗಿರುವವರ ಪರಿಹಾರಕ್ಕಾಗಿ ಮದ್ರಾಸ್ ಸರ್ಕಾರದವರ ೩ ಕೋಟಿ ರೂ. ಗಳನ್ನು ಸಾಲ ಪರಿಹಾರ ಮಂತಾದ ರೂಪದಲ್ಲಿ ಕೊಡಲಿರುವರು. ಮನೆಗಳನ್ನು ಕಟ್ಟಿಕೊಳ್ಳಲು ಸಾವಿರ ರೂ.ಗಳಷ್ಟು ಸಾಲವೀಯಲಾಗುವುದು.

## ಮಿಡತೆಯನ್ನು ಕೊಂದು ತಿನ್ನುವ ಪಕ್ಷಿ

ಮಿಡತೆ ಹಾವಳಿಯನ್ನು ತಪ್ಪಿಸುವ ಹೊಸ ಪಕ್ಷಿಯೊಂದು ಗೋಚರವಾಗಿದೆ. ರಾಜಸ್ಥಾನದ ಪತ್ರಿಕೆಗಳಲ್ಲಿ ... ಉದ್ದದ ... ಪಕ್ಷಿಯೊಂದು ಮಿಡತೆಗಳನ್ನು ಹಿಡಿದು ತಿನ್ನುತ್ತಿರುವುದಾಗಿ ವರದಿಯಾಗಿದೆ.

## ಕತ್ತೆಕಿರುಬಗಳಿಂದ ೧೨ ಜನರ ಅಪಹಾರ

ಉತ್ತರ ಪ್ರದೇಶ ಪ್ರಾಂತದ ... ಜಿಲ್ಲೆಯಲ್ಲಿ ಕತ್ತೆಕಿರುಬಗಳ ಹಾವಳಿಯು ವಿಶೇಷವಾಗಿ ಹೆಚ್ಚಿರುತ್ತದೆ. ೧೨ ಜನರಿಗಿಂತಲೂ ಹೆಚ್ಚು ಮಂದಿಯನ್ನು ಅವು ಎತ್ತಿಕೊಂಡು ಹೋಗಿ ತಿಂದುಹಾಕಿರುವುದಾಗಿ ವರದಿಯಾಗಿದೆ. ೨ ವರ್ಷದ ಮಗುವೊಂದನ್ನು ಒಂದು ಕಿರುಬನು ಎತ್ತಿಕೊಂಡುಹೋಗುತ್ತಿರಲು ಜನರು ಅಟ್ಟಿಸಿಕೊಂಡು ಹೋಗಿ, ... ಬಟ್ಟೆ ಶರೀರವನ್ನು ಕಿತ್ತುಕೊಂಡರು. ಮತ್ತೊಂದು ಕಡೆ ೭ ವರ್ಷದ ... ಬಾಲಕಿಯನ್ನು ಕಿರುಬನು ಅರ್ಧ ತಿಂದು ಬಿಟ್ಟಿತು.

## ಮನೆಗಳು ಕ್ರಯಕ್ಕಿವೆ

1 ಡೋರ್ ನಂಬರು 2855 ... ದೇವಸ್ಥಾನದ ರೋಡು ಮೈಸೂರು

2 ಡೋರ್ ನಂಬರು 1495 ... ರಸ್ತೆ ... ಕೃಷ್ಣಮೂರ್ತಿಪುರಂ, ಮೈಸೂರು.

3 ಡೋರ್ ನಂಬರು 4613 ... ನರಸಿಂಹರಾಜ ಮೊಹಲ್ಲಾ ...

ವಾಣೀವಿಲಾಸ ಮೊಹಲ್ಲಾದಲ್ಲಿ

ಅನೇಕ ಬಂಗ್ಲೆಗಳು ಮತ್ತು

ಮನೆಗಳು ಕ್ರಯಕ್ಕಿವೆ

ಮನೆ ... ಮತ್ತು ಜಮೀನುಗಳ ಕೊಳ್ಳು ... ಸಹಾಯ ಕೊಡಿಸಲಾಗುತ್ತೆ

... ಗಳಿಗೆ

ಬ್ರೋಕರ್ಸ್ ಸಿಂಡಿಕೇಟ್

... ರಸ್ತೆ,

... ಮೈಸೂರು

## ನೆಹರೂರವರಿಗೆ ಪಾಕಿಸ್ತಾನ ಪ್ರಧಾನಿಯ ಮನವಿ

ಕಾಶ್ಮೀರದಲ್ಲಿ ಜನಮತಗಣನೆಯನ್ನು ತೆಗೆದುಕೊಳ್ಳುವ ವಿಷಯವನ್ನು ಕುರಿತು ಪಾಕಿಸ್ತಾನ ಮಂತ್ರಿಮಂಡಲವು ಎರಡು ಸಾರಿ ಸಭೆ ನಡೆಸಿ ಅದಕ್ಕಾಗಿ ತಯಾರಿಸಿದ ಒಂದು ದೀರ್ಘ ಮನವಿಯನ್ನು ಅಲ್ಲಿನ ಪ್ರಧಾನಿ ಮಹಮದ್ ಅಲಿಯವರು ನೆಹರೂರವರಿಗೆ ಕಳುಹಿಸಿರುತ್ತಾರೆ.

## ಟೈಪ್‌ರೈಟಿಂಗ್ ಸ್ಪೀಡಿನ ಹೊಸ ರಿಕಾರ್ಡು

ಅಕೋಲಾದಿನ ಎನ್. ಎ. ಸಿಲೋಟೆ ಎಂಬುವರ ಒಂದು ನಿಮಿಷದಲ್ಲಿ ೧೨೪ ಪದಗಳನ್ನು ಟೈಪು ಮಾಡಿ ಹೊಸ ರಿಕಾರ್ಡನ್ನು ಸ್ಥಾಪಿಸಿರುತ್ತಾರೆ.

## ೧೨ ವರ್ಷದ ಬಾಲಕಿಯ ಪ್ರಪಂಚ ಪರ್ಯಟನ

ಕೆನಡಾದ ವ್ಯಾಂಕೂವರ್ ನಗರದಲ್ಲಿ ಪತ್ರಕರ್ತರ ... ಎಂಬ ಒಬ್ಬ ಚಿಕ್ಕ ... ವರ್ಷದ ಮಗಳು ಪ್ರಪಂಚದ ಪರ್ಯಟನಕ್ಕಾಗಿ ಹೊರಟು ಈಗ ಮಲಯಕ್ಕೆ ಆಗಮಿಸಿರುತ್ತಾಳೆ. ಅವಳು ... ಜಪಾನ್ ಹಾಂಕಾಂಗ್ ಫಿಲಿಪೈನ್ ದ್ವೀಪಗಳನ್ನು ಸಂಚರಿಸಿ, ಅಲ್ಲಿಂದ ... ಮಲಯ ... ಆಕೆಯು ... ಆಕೆಯ ... ಪ್ರಪಂಚವನ್ನು ಸುತ್ತಿದ್ದನೆಂದು ಹೇಳಲಾಗಿದೆ.

## ಗುಂಡಿ ಒತ್ತಿ ಓಟು ಎಣಿಸುವುದು

ವಿದ್ಯುಚ್ಛಕ್ತಿ ... ಒತ್ತಿ ಓಟುಗಳನ್ನು ರಿಕಾರ್ಡು ಮಾಡುವ ಸಾಧನವನ್ನು ... ಶಾಸನ ಸಭೆಗಳಲ್ಲೂ ಉಪಯೋಗಿಸಲಾಗುತ್ತಿದೆ. ಒಬ್ಬ ಜರ್ಮನ್ ಇಂಜನಿಯರು ಅದನ್ನು ... ನಿರತರಾಗಿರುವರು.

ಪ್ರಭಾ 30—8—53 ರಿಂದ ... ದಿನಗಳು

ದಿನಕ್ಕೆ 3 ಪ್ರದರ್ಶನಗಳು

ವಿ. ಶಾಂತಾರಾಂರವರ

ಅಮರ್ ಭೂಪಾಲಿ

ಪಾತ್ರ — ಪಂಡಿತರಾವ್ ನಗರ್‌ಕರ್ ಸಂಧ್ಯಾ, ಲಲಿತಾ ಪವಾರ್

ಕಡೆಯ 2 ದಿನಗಳು "ನಯಾಘರ್"

ಬೆಳಗಿನ ಪ್ರದರ್ಶನ 28—8—53 ರಿಂದ 3 ದಿನಗಳು ... ನಟಿಸಿರುವ

ನಾಚ್ ನೀನ್

SRI GAYATHRI TALKIES

FROM 28-8-1953

Daily 4 Shows




*Morning at 10 30 Matinee at 3.30 Evening Show at 6-30 and Last Show 9 45*

Edited, Printed and Published by A R Nagarajan at Sadhvi Press, D.Subbiah Road, Mysore

## ಆಂಧ್ರ ಪ್ರಾಂತದ ನಿರ್ಮಾಣಕ್ಕೆ ಸಮ್ಮತಿ

ಆಂಧ್ರ ಪ್ರಾಂತವು ಅಕ್ಟೋಬರ್ ೧ ರಂದು ಸ್ಥಾಪಿತವಾಗುವ ಬಗ್ಗೆ ಪಾರ್ಲಿಮೆಂಟಿನ ಕೆಳಸಭೆಯು ಅದಕ್ಕಾಗಿ ಸಮ್ಮತಿಯಿತ್ತಿರುತ್ತದೆ. ಪ್ರಾಂತ ನಿರ್ಮಾಣದ ಮಸೂದೆಯು ಹಿರಿಯ ಸಭೆಯ ಮುಂದೆ ಮಂಡಿಸಲ್ಪಡುತ್ತದೆ.

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | ೧೩ ೨ ೦ | ೨೮ ೨ ೦ |
| ಎಳ್ಳು | ೩೦ ೮ ೦ | ೫೮ ೦ ೦ |
| ಹರಳುಬೀಜ | ೪೩ ೩ ೦ | ೪೩ ೦ ೦ |
| ಹೆಸರು | ೪೫ ೨ ೦ | ೬೧ ೧೦ ೦ |
| ಹಲಸಂದೆ | ೫೭ ೧೦ ೦ | ೭೯ ೧೦ ೦ |
| ಉದ್ದು | ೩೦ ೧೦ ೦ | ೬೨ ೩ ೦ |
| ಮೆಣಸಿನಕಾಯಿ | ೭ ೦ ೦ | |
| ಸೀಗೇಕಾಯಿ | ೭ ೦ ೦ | |
| ಬೆಲ್ಲ | ೮ ೦ ೦ | |
| ತೆಂಗಿನಕಾಯಿ ೧೦೦೦ಕ್ಕೆ | ೧೩೦ ೦ ೦ | ೨೭೮ ೦ ೦ |

## ಹೋಟೇಲಿನಲ್ಲಿ ಕಾಫಿ ಕುಡಿಯುತ್ತಿದ್ದಾಗ ಮರಣ

ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ವಿಷ್ಣುಪ್ರಸನ್ನ ಕಾಫಿ ಕ್ಲಬ್ಬಿನಲ್ಲಿ ಕಳೆದ ಬುಧವಾರ ಒಬ್ಬಾತನ ಕಾಫಿಯನ್ನು ಕುಡಿಯುತ್ತಲೇ ಸಿ, ಹಾಗೆಯೇ ಮೃತಪಟ್ಟನೆಂದು ವರದಿಯಾಗಿದೆ. ಅವನೊಬ್ಬ ಭಿಕ್ಷುಕನೆಂದು ಹೇಳಲಾಗಿದೆ. ಕಾಫಿಯನ್ನು ಕುಡಿಯಲು ಲೋಟವನ್ನು ಮೇಲೆತ್ತಿ ... ನೆಲಕ್ಕೆ ಉರುಳಿದನೆಂದೂ, ಹಾಗೆಯೇ ... ಪಕ್ಕದಲ್ಲಿ ಕುಳಿತಿದ್ದ ಕೃಷ್ಣರಾಜ ಪೊಲೀಸ್ ಸ್ಟೇಷನ್ನಿನ ... ರವರು ಅವನಿಗೆ ಶುಶ್ರೂಷೆ ಮಾಡಿದರೆಂದೂ, ಆದರೂ ಸಫಲವಾಗಲಿಲ್ಲವೆಂದೂ ಹೇಳಲಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಎಂ. ವಿ. ... ಗೋಟು ವಾದ್ಯ ... ರೆಕಾರ್ಡು ಸಂಗೀತ ಮಧ್ಯಾಹ್ನ ... ಸಂಗೀತಗಳು ಸಂಜೆ ... ಎಲ್. ಚೆಲುವರಾಯ ಸಂಗೀತ ... ರಂಗಪ್ಪ ... ಪಕ್ಷಿನೋಟ ... ವೆಂಕಟಸುಬ್ಬರಾವ್ ವೀಣೆ ... ರೆಕಾರ್ಡು ಸಂಗೀತ. ... ಎಲ್. ನಾರಾಯಣರಾವ್ ಕನ್ನಡ ನಾಟಕ

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ರುಚಿರುಚಿಯಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಹತ್ತಿರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೀಶ್ವರ ಬಿಲ್ಡಿಂಗ್)

ಡಿ. ಸುಬ್ಬಯ್ಯ ರಸ್ತೆ ಮೈಸೂರು.

## ಎ ಕ್ವೀನ್ ಈಸ್ ಕ್ರೌನ್ಡ್

### ಗಾಯತ್ರಿಚಿತ್ರಮಂದಿರದಲ್ಲಿ ಎಲಿಜಬೆತ್ತರ ಕಿರೀಟಧಾರಣೋತ್ಸವದ ಚಿತ್ರ

ರಾಜಧಾನಿಯ ಶ್ರೀ ಗಾಯತ್ರಿ ಚಿತ್ರ ಮಂದಿರದಲ್ಲಿ ನೆನ್ನೆಯಿಂದ ಪ್ರದರ್ಶಿಸಲಾಗುತ್ತಿರುವ ಅತ್ಯಮೂಲ್ಯವಾದ ವರ್ಣರಂಜಿತ ಚಿತ್ರವೆಂದರೆ, ಬ್ರಿಟಿಷ್‌ನ ರಾಣಿ ಎರಡನೇ ಎಲಿಜಬೆತ್ತರ ಕಿರೀಟಧಾರಣೋತ್ಸವಕ್ಕೆ ಸಂಬಂಧಿಸಿದ, ಎ ಕ್ವೀನ್ ಈಸ್ ಕ್ರೌನ್ಡ್ ಎಂಬ ಚಿತ್ರ. ಅದರಲ್ಲಿ ಕಾಣಬರುವ ದೃಶ್ಯಗಳು ನಿಜವಾಗಿಯೂ ಜನರನ್ನು ಮೈಮರೆಸಿ, ಸಾವಿರಾರು ಮೈಲಿ ದೂರವಿರುವ ಲಂಡನ್ ನಗರದಲ್ಲಿಯೇ ಉತ್ಸವ ಕಾಲದಲ್ಲಿ ಇದ್ದು ಪ್ರತ್ಯಕ್ಷವಾಗಿ ನೋಡುವಂತೆ ಭಾಸಗೊಳಿಸುವುದು. ಈ ಚಿತ್ರದಲ್ಲಿರುವ ಸುಂದರವಾದ ನೋಟಗಳು ಸುಲಭವಾಗಿ ಇಲ್ಲಿಯೇ ತಿಳಿಯುವುದು. ಅಣ್ಣತಮ್ಮಂದಿರು, ಅಕ್ಕತಂಗಿಯರು, ತಾಯಂದಿರು, ಹಿರಿಯರು ಬಂಧುವರ್ಗದವರು, ಎಲ್ಲರೂ ತಪ್ಪದೆ ನೋಡಿ ಸಂತೋಷಪಡಬೇಕಾದ ಸಮಯವನ್ನು ಶ್ರೀ ಗಾಯತ್ರಿ ಚಿತ್ರಮಂದಿರದವರು ಒದಗಿಸಿರುವುದು ಗಮನಾರ್ಹವಾದ ವಿಷಯವಾಗಿದೆ.

## ಅಮೆರಿಕಾ ಪ್ರವೀಣರಿಂದ ಉಪಾಧ್ಯಾಯರುಗಳಿಗೆ ಶಿಕ್ಷಣ

ಅಮೆರಿಕದ ನಾಲ್ಕುಮಂದಿ ವಿದ್ಯಾಪಾರಂಗತರು ಭಾರತಕ್ಕೆ ಆಗಮಿಸಿರುತ್ತಾರೆ. ಅವರು ಇಲ್ಲಿರುವ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಇತರರಿಗೆ ಹೆಚ್ಚಿನ ಶಿಕ್ಷಣಕೊಡಲು ಆಲೋಚಿಸಿರುತ್ತಾರೆ. ಅವರು ಭಾರತದ ಮಾಧ್ಯಮಿಕ ಶಾಲೆಗಳು ಮತ್ತು ಶಿಕ್ಷಣ ಕಾಲೇಜುಗಳ ಸ್ಥಿತಿಗಳನ್ನು ಪರಿಶೀಲಿಸುತ್ತಿರುವರು. ಸಧ್ಯದಲ್ಲೇ ಅವರು ಪಾಟ್ನಾದಲ್ಲಿ ೬ ವಾರಗಳ ಶಿಕ್ಷಣ ತರಗತಿಯನ್ನು ತೆರೆಯುವರು. ಅನಂತರ ಜಬ್ಬಲ್ಪುರ, ಬರೋಡಾ ಮತ್ತು ಮೈಸೂರುಗಳಲ್ಲೂ ಶಿಕ್ಷಣ ಕೊಡುವರು.

## ಗೃಹಕೃತ್ಯದ ನೋಟೀಸು

ಮೈಸೂರು ಸಿಟಿ ಮಂಡಿಮೊಹಲ್ಲಾ ಬಂಡಿ ನವಾಬರ ಬೀದಿ ಡೋರ್ ನಂಬರು 1692 ಮನೆಯು ನನಗೆಗಳಿಗೂ ಮತ್ತು ನನ್ನ ತಂದೆಯವರಿಗೂ ಸೇರಿದ ಸ್ವತ್ತಾಗಿ, ಮೈಸೂರು ಸಬಾರ್ಡಿನೇಟ್ ಜಡ್ಜಿರವರ ಕೋರ್ಟ್ O S 79/49-50 ರಲ್ಲಿ 25 ನೇ ಹಿಸ್ಸೆಗೆ ಡಿಕ್ರಿಯಾಗಿರುತ್ತೆ. ನನ್ನ ತಂದೆ ನಾಗೂಜಿ ರವರು ಪೂರಾ ಸ್ವತ್ತನ್ನು ಬಾಡಿಗೆಗೆ ಕೊಟ್ಟು ಅದ್ದಾನ್ನು ... ಸಹ ... ಮಾಡುತ್ತಿರುತ್ತಾರೆ. ನನ್ನ ತಂದೆಯವರಿಂದ ಯಾರೂ ಸಹ ಬಾಡಿಗೆಗೆ ಪಡೆಯಕೂಡದು ಮತ್ತು ಅಡ್ವಾನ್ಸನ್ನೂ ಸಹ ಕೊಡಕೂಡದು. ಇದಕ್ಕೆ ವಿರೋಧವಾಗಿ ಹರಾಜಿನಲ್ಲಿ ... ಎತ್ತು ... ಸಹ ಸದರಿ ನಡವಳಿಕೆಗೆ ಬದ್ಧರಲ್ಲ. ಮತ್ತು ನನ್ನನ್ನು ಸದರಿ ನಡವಳಿಕೆಗಳು ಬದ್ಧಪಡಿಸುವುದಿಲ್ಲ. ಮತ್ತು ಅದರಿಂದ ನನಗೆ ಉಂಟಾಗುವ ವಿಶಿಷ್ಟ ನಷ್ಟಗಳಿಗೆಲ್ಲಾ ಹಿತ್ತುಗಳೇ ಜವಾಬ್ದಾರರಾಗುತ್ತೀರೆಂದು ಈ ಮೂಲಕ ತಿಳಿಸಿರುತ್ತೆ.

ಎಂ. ಎನ್. ವಿಶ್ವನಾಥ ರಾ,

ಲಕ್ಷ್ಮೀನಾರಾಯಣ.

ಚಾಮುಂಡೇಶ್ವರಿ ಟಾಕೀಸ್, ಮೈಸೂರು

29-8-53 ನೇ

ಶನಿವಾರದಿಂದ

ಅಮೋಘ ಪ್ರಾರಂಭ

ದಿನವೂ 3 ಆಟಗಳು

ನಟೇಶ್ ಆರ್ಟ್

ಪಿಕ್ಚರ್ಸ್‌ರವರ ನೂತನ

ಸಂಗೀತ ಮತ್ತು ನೃತ್ಯಮಯ ತಮಿಳು ಚಿತ್ರ

ಅರ್ಬು

ತಾರಾಗಣ — ಶಿವಾಜಿ ಗಣೇಶ, ಕೆ. ರಾಮಸ್ವಾಮಿ, ಟಿ. ಎಸ್. ಬಾಲಯ್ಯ, ಲಲಿತ ಪದ್ಮಿನಿ, ಟಿ. ಆರ್. ರಾಜಕುಮಾರಿ, ಮನೋಹರ ಮುಂತಾದವರು

MORNING SHOWS On Sat 29th and Sun 30th

ALL QUIET ON THE WESTERN FRONT

ಟೆಲಿಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 6 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE SUNDAY 30-8-1953 : ಮೈಸೂರು : ಭಾನುವಾರ ೩೦ ೮ ೧೯೫೩ [ ಸಂಚಿಕೆ ೨೮

# ಟ್ರಿಯಸ್ಟೆ ಬಗ್ಗೆ ಯುಗೋಸ್ಲೇವಿಯಾ–ಇಟಲಿಗಳ ತಿಕ್ಕಾಟ

## ನಗರದಲ್ಲಿ ಗೋ ಹತ್ಯೆ ಬಗ್ಗೆ ಪೌರಸಭೆಯಲ್ಲಿ ದೂರು

ಮೈಸೂರು, ೨೦

ಮೊನ್ನೆ ನಡೆದ ಪೌರಸಭಾಧಿವೇಶನದಲ್ಲಿ ... ಚೌಡಯ್ಯನವರು ಮಾತನಾಡಿ, ಲಷ್ಕರ್ ... ಹಲ್ಲಾ ಜಲಪುರಿಯ ೩೦ ಮನೆಗಳಲ್ಲಿ ಪ್ರ... ತ್ಯವೂ ಗೋ ವಧೆಯು ನಡೆಯುವುದಾಗಿ ತಿ... ಅದನ್ನು ತಡೆಗಟ್ಟಬೇಕೆಂದು ಪ್ರಾರ್ಥಿಸಿ... ಈ ವಿಷಯವನ್ನು ಪೋಲೀಸರ ಗಮನಕ್ಕೆ ... ಲಾಗಿರುವುದೆಂದೂ, ಅವರು ಈ ಬಗ್ಗೆ ಸೂ... ಭಂವಸೆಯನ್ನು ನೀಡಿರುವರೆಂದೂ ಅಧ್ಯಕ್ಷ ... ತಿಳಿಸಿದರು

... ಪಂಚ ವಾರ್ಷಿಕ ಯೋಜನೆ ಅಂಗವಾಗಿ ನ... ರದಲ್ಲಿ ವ್ಯವಸ್ಥಿತ ಪಾನ ಮಾರಾಟದ ಒಂ... ಕೇಂದ್ರವನ್ನು ಸ್ಥಾಪಿಸುವ ವಿಷಯವನ್ನ... ರಸಭಾ ಮ್ಯಾನೇಜಿಂಗ್ ಸಮಿತಿಗೆ ಒಪ್ಪಿಸ... ಲಾಯಿತು

... ರಸ್ತೆಗಳಿಗೆ ಒಳಚರಂಡಿ ಸೌಕರ್ಯವನ್ನು ... ಶೇಷವಾಗಿ ಒದಗಿಸುತ್ತಿರುವ ಪದ್ಧತಿ ಬದಲು ... ಸೆ ಮಾಲೀಕರುಗಳು ಸ್ವಂತ ವೆಚ್ಚದಿಂದ ಅ... ಗಳನ್ನು ಏರ್ಪಡಿಸಿಕೊಳ್ಳುವಂತೆ ವ್ಯವಸ್ಥೆ ... ಡುವುದನ್ನು ಜಾರಿಗೆ ತರುವಂತೆ ಸರ್ಕಾರ... ರು ಸೂಚಿಸಿರುವ ವಿಷಯವನ್ನು ಸಭೆಯು... ರೀಲಿಸಿ, ಈಗ ಇರುವ ರಿಯಾಯಿತಿಯನ್ನು ... ನ್ನು ಎರಡು ವರ್ಷಕಾಲ ಮುಂದುವರಿಸಬೇ... ೦ದು ಸರ್ಕಾರವನ್ನು ಪ್ರಾರ್ಥಿಸಿತು

... ಅಶೋಕಾ ರಸ್ತೆಗೆ ಟಾರು ಬದಲು ಸಿಮೆಂ... ರಸ್ತೆಯನ್ನು ಹಾಕಲು ಮುಂತಾದ ... ವೆಯನ್ನು ಕೋರುವ ನಿರ್ಣಯವು ಅಂಗೀ... ರವಾಯಿತು

... ಂಟರ್‌ಕ್ಲಬ್ ಟೆನ್ನಿಸ್ ಟೋರ್ನಮೆಂಟ್ ... ರಾಜಧಾನಿಯ ಸಿಟಿ ಇನ್ಸ್ಟಿಟ್ಯೂಟಿನ ಆಶ್ರ... ದಲ್ಲಿ ಜೂನಿಯರ್‌ಗಳಿಗಾಗಿ ಟೆನ್ನಿಸ್ ಟೂ... ಮೆಂಟನ್ನು ನಡೆಸಲಾಗುತ್ತಿದೆ ಈ ಪಂದ್ಯ... ಲ್ಲಿ ಕೊಳ್ಳೇಗಾಲ ಯೂನಿಯನ್ ಕ್ಲಬ್ಬಿನವ... ಸಹಾ ಭಾಗವಹಿಸುತ್ತಿರುವರು ಪಂದ್ಯಗ... ಭಕ್ತ ನರಸಪ್ಪನವರ ಕ್ರೀಡಾರಂಗದಲ್ಲಿ ನಡೆ... ತ್ತಿವೆ ನೆನ್ನೆ ನಡೆದ ಪಂದ್ಯಗಳಲ್ಲಿ ರೈಲ್ವೆ ... ಸ್ಟಿಟ್ಯೂಟ್ ಮತ್ತು ಸಿಟಿ ಇನ್ಸ್ಟಿಟ್ಯೂಟ್‌ನ... ಎರಡೆರಡು ಆಟಗಳನ್ನು ಗೆದ್ದಿರುವರು ... ದ್ಯಗಳ ಸಮಿತಿಗೆ ಶ್ರೀ ಎನ್. ಕೃಷ್ಣಸ್ವಾಮಿ... ಯರು ಅಧ್ಯಕ್ಷರಾಗಿಯೂ, ಶ್ರೀ ಎಂ.ಸಿ. ರಾ... ಮುನ್ಶಿರ್‌ರವರು ಕಾರ್ಯದರ್ಶಿಗಳಾಗಿಯೂ ... ವರು

## ... ಲಕ್ಷ ರೂ. ಬಗ್ಗೆ ವಿಮಾ ಕಂಪೆನಿ ... ರೆಕ್ಟರರ ಮೇಲೆ ಮೊಕದ್ದಮೆ

ಬೊಂಬಾಯಿಯ ಜ್ಯೂಪಿಟರ್ ಕಂಪೆನಿಯ ... ಲಕ್ಷ ರೂ ಗಳ ಸಂಬಂಧವಾಗಿ ನಂಬಿಕೆ... ತ ಮಾಡಲು ಪಿತೂರಿ ನಡೆಸಿದರೆಂದು ... ಪೆನಿ ಐದು ಜನ ಡೈರೆಕ್ಟರರುಗಳ ಮೇಲೆ ... ಕದ್ದಮೆ ಹೂಡಲಾಗಿದೆ ಲಾಲಾ ಶಂಕರ ... ಲ್, ಪಿ ಎನ್ ... ಎಸ್ ... ಮು... ಆರ್ ... ವೇರಿ, ಎಸ್ ಯು ... ಲಿ, ಮುಂತಾದ ಡೈರೆಕ್ಟರುಗಳೂ, ಸಿ ಸಿ ... ಲಾಲಾ ರಾಮ ಶರಣ್ ಮತ್ತು ಸರ್ದಾ... ಶಾರ್ದೂಲಸಿಂಗರೂ ಈ ಮೊಕದ್ದಮೆಯಲ್ಲಿ ... ಪಾದಿತರಾಗಿರುವರು ಲಾಲಾ ಶಂಕರಲಾಲ ... ಈಚೆಗೆ ನಿಧನ ಹೊಂದಿರುತ್ತಾರೆ

## ಭಾರತದ ಪ್ರತಿಷ್ಠೆಗೆ ಕುಂದು ತರಲು ಪಾಕಿಸ್ತಾನದ ಓಟು

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾರತವು ಭಾಗವಹಿಸಕೂಡದೆಂದು ಅಭಿಪ್ರಾಯಪಟ್ಟ ಪಾಕಿಸ್ತಾನದ ಪತನೋಭಾವವನ್ನು ಕುರಿತು ಲಾಹೋರಿನ ಪಾಕಿಸ್ತಾನ್ ಟೈಮ್ಸ್ ಪತ್ರಿಕೆಯ ವಿಶ್ವಕಂಸ್ಥೆ ಬಾತ್ಮೀದಾರರು ವಿವರಣೆಯಿತ್ತು, ವಿಷ್ಯಾ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಭಾರತವು ಬಹುವಾಗಿ ಗೌರವ ಮತ್ತು ಪ್ರತಿಷ್ಠೆಗಳನ್ನು ಸಂಪಾದಿಸಿರುವುದನ್ನು ಕಂಡು ಅಸೂಯೆಪಟ್ಟು ಅದನ್ನು ಕುಂದಿಸಲು ಭಾರತದ ವಿರೋಧವಾಗಿ ಪಾಕಿಸ್ತಾನವು ಓಟು ಕೊಟ್ಟಿರುವುದಾಗಿ ವಿಶ್ವಸಂಸ್ಥೆಯ ವೀಕ್ಷಕರು ಭಾವಿಸಿರುವರೆಂದು ತಿಳಿಸಿರುತ್ತಾರೆ ವಿಷ್ಯಾ ದಲ್ಲೆಲ್ಲಾ ಪಾಕಿಸ್ತಾನವೊಂದೇ ಭಾರತದ ವಿರೋಧವಾಗಿ ಓಟು ಮಾಡಿದ ದೇಶವೆಂದು ಹೇಳಲಾಗಿದೆ

## ಕಾಂಗ್ರೆಸ್ ಅಧಿವೇಶನದ ಸ್ಥಳ

ಕಲ್ಕತ್ತಾ ಬಳಿ ಇರುವ ಕಲ್ಯಾಣಿ ಶಿಬಿರದಲ್ಲಿ ಈ ಸಾರಿ ಕಾಂಗ್ರೆಸ್ ಅಧಿವೇಶನವು ಸೇರುವುದು ಅಲ್ಲಿರುವ ಕಟ್ಟಡಗಳ ಬಾಡಿಗೆಗಾಗಿ ಬಂಗಾಳಾ ಸರ್ಕಾರದವರು ಕಾಂಗ್ರೆಸ್ ಸಮಿತಿಗೆ ೧ ಲಕ್ಷ ರೂ ರುಸುಂ ವಿಧಿಸುವರು

## ನ್ಯಾಯಾಂಗದಲ್ಲಿ ಸುಧಾರಣೆ

ಕಡಿಮೆ ವೆಚ್ಚ ಮತ್ತು ಸ್ವಲ್ಪ ಕಾಲದಲ್ಲಿ ತೊಡಕುಗಳಿಲ್ಲದಂತೆ ದೊರೆಯುವ ನ್ಯಾಯಾಂಗ ಪದ್ಧತಿಯನ್ನೊಳಗೊಂಡ ಸುಧಾರಣೆಯನ್ನು ಜಾರಿಗೆ ತರುವ ಸೂಚನೆಯನ್ನು ಕೇಂದ್ರ ಗೃಹ ಮಂತ್ರಿ ಕಟ್ಜುರವರು ಪಾರ್ಲಿಮೆಂಟಿನಲ್ಲಿ ಕೊಟ್ಟಿರುತ್ತಾರೆ ಬರುವ ನವೆಂಬರ್ ತಿಂಗಳಲ್ಲಿ ಈ ಸಂಬಂಧವಾದ ಮಸೂದೆಯನ್ನು ಸಭೆಯಲ್ಲಿ ಮಂಡಿಸಲಾಗುವುದೆಂದು ಅವರು ಹೇಳಿರುವರು ಹೊಸ ಸುಧಾರಣೆಗಳು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಿಗೆಲ್ಲಾ ಅನ್ವಯಿಸುವುವೆಂದೂ, ಈ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಲಹೆ ಮಾಡಿದ್ದಿತೆಂದೂ ಅವರು ತಿಳಿಸಿರುತ್ತಾರೆ.

## ಜೇನು ಹುಳು ಕಾಟ ತಪ್ಪಿಸಿಕೊಳ್ಳಲು ನೀರಿನಲ್ಲಿ ವಾಸ

ಅಜ್ಮೀರಿನ ಬಳಿ ಬರ್ಲಿಯಾ ಎಂಬಲ್ಲಿಗೆ ವಿಹಾರಾರ್ಥವಾಗಿ ಹೋಗಿದ್ದ ವಿದ್ಯಾರ್ಥಿಗಳ ತಂಡವೊಂದು ಮರದ ಬುಡದಲ್ಲಿ ಚಹಾ ಕಾಯಿಸುತ್ತಿದ್ದಾಗ, ಮೇಲೆ ಗೂಡು ಕಟ್ಟಿದ್ದ ಜೇನುಗಳು ಎದ್ದು ಅವರನ್ನು ಕಚ್ಚಿದುವೆಂದೂ, ಹುಳುಗಳ ಕಾಟವನ್ನು ತಪ್ಪಿಸಿಕೊಳ್ಳಲು ವಿದ್ಯಾರ್ಥಿಗಳು ಓಡಿಹೋಗಿ ಹತ್ತಿರವಿದ್ದ ಒಂದು ಸರೋವರದಲ್ಲಿ ಕಂಠದವರೆಗೆ ನೀರಿನಲ್ಲಿ ೩ ಘಂಟೆಕಾಲ ಮುಳುಗಿ ಕುಳಿತ್ತಿದ್ದರೆಂದೂ, ತರುವಾಯ ಹುಳುಗಳೆಲ್ಲ ಹೋದಮೇಲೆ ಅವರು ಹಿಂದಿರುಗಿದರೆಂದೂ ವರದಿಯಾಗಿದೆ

## ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರಿಗೆ ವಿಶೇಷ ಪೂಜೆ

ರಾಜಧಾನಿಯ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ದೇವಾಲಯದಲ್ಲಿ ನಡೆಯುತ್ತಿರುವ ಡೋಲೋತ್ಸವದ ಅಂಗವಾಗಿ ಈ ರಾತ್ರಿ ೮॥ ಗಂಟೆಗೆ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ

## ಜಾಡಮಾಲಿಗಳ ಮುಷ್ಕರ

ಬೆಂಗಳೂರು ೨೦

ಇಲ್ಲಿನ ಕಾರ್ಪೊರೇಷನ್ನಿನ ಜಾಡಮಾಲಿಗಳು ನೆನ್ನೆ ಒಂದು ದಿನದ ಮುಷ್ಕರವನ್ನು ನಡೆಸಿ, ಮೆರವಣಿಗೆಯಲ್ಲಿ ಪೌರಸಭಾ ಕಛೇರಿಯ ಬಳಿ ಹೋಗಿ ಪ್ರದರ್ಶನ ಮಾಡಿದರು ಹೆಚ್ಚು ತುಟ್ಟಿ ಭತ್ಯ ಗ್ರಾಚುಯಿಟಿ ಸೌಲಭ್ಯ ಹೆಂಗಸರು ಮತ್ತು ಗಂಡಸರಿಗೆ ಸಮಾನ ವೇತನ, ಮತ್ತು ಕೆಲಸದಿಂದ ತೆಗೆಯಲ್ಪಟ್ಟ ೧೭ ಜನರನ್ನು ಪುನಃ ತೆಗೆದುಕೊಳ್ಳುವುದು–ಇವೇ ಮುಂತಾದುವುಗಳ ಬಗ್ಗೆ ಅವರು ಬೇಡಿಕೆಯಿಟ್ಟಿದ್ದರು ಸಂಜೆ ಅವರುಗಳು ಸಭೆ ನಡೆಸಿ ಬರುವ ತಿಂಗಳು ೧೫ ರಿಂದ ಮುಷ್ಕರ ಹೂಡುವುದಾಗಿ ಪೌರಸಭೆಗೆ ನೋಟೀಸನ್ನು ಕೊಡಲು ನಿರ್ಧರಿಸಿದರು

## ಬೆಂಗಳೂರು ಮೆಡಿಕಲ್ ಶಾಲೆಯನ್ನು ಕಾಲೇಜಾಗಿ ಮಾಡುವುದಿಲ್ಲ

ಬೆಂಗಳೂರಿನಲ್ಲಿರುವ ಮೆಡಿಕಲ್ ಶಾಲೆಯನ್ನು ಕಾಲೇಜಾಗಿ ಪರಿವರ್ತಿಸುವ ಬಗ್ಗೆ ಬೊಂಬಾಯಿ ಸರ್ಕಾರದ ನೆರವನ್ನು ಪಡೆಯುವುದಕ್ಕಾಗಿ ನಡೆಯುತ್ತಿದ್ದ ಸಮಾಲೋಚನೆಯನ್ನು ಮೈಸೂರು ಸರ್ಕಾರದವರು ನಿಲ್ಲಿಸಿರುವರೆಂದು ಗೊತ್ತಾಗಿದೆ ಎರಡು ಸರ್ಕಾರಗಳ ಜಂಟಿ ಯೋಜನೆಯು ಕಾರ್ಯಗತವಾಗಲು ಅನೇಕ ತೊಡಕುಗಳಿರುವುದೇ ಇದಕ್ಕೆ ಕಾರಣ

## ದೆಹಲಿ ಮುಂತಾದ ಕಡೆಗಳಲ್ಲಿ ಭೂಕಂಪ

ಉತ್ತರ ಭಾರತದ ಹಲವು ಕಡೆಗಳಲ್ಲಿ ನೆನ್ನೆ ಬೆಳಿಗ್ಗೆ ಭೂಮಿಯು ನಡುಗಿತು ದೆಹಲಿ ಲಕ್ನೋ, ಅಲಹಾಬಾದು, ಕಾಶಿ, ಗೋರಖಪುರ, ಮತ್ತು ಇತರ ನಗರಗಳಲ್ಲಿ ಭೂಕಂಪವಾದ ಬಗ್ಗೆ ವರದಿಗಳು ಬಂದಿವೆ ಕಾಶಿಯಲ್ಲಿ ಐದಾರು ಸಲ ಆಯಿತು ಕೆಲವು ಮನೆಗಳಿಗೆ ಜಖಂ ಆಗಿವೆ. ಗೋರಖಪುರದಲ್ಲಿ ಅರ್ಧ ನಿಮಿಷ ಭೂಮಿಯು ನಡುಗಿ ಜನರು ಹೆದರಿ ಮನೆಗಳನ್ನು ಬಿಟ್ಟು ಹೊರಕ್ಕೆ ಓಡಿದರು

## ಬ್ರಿಟನ್ನಿನೊಡನೆ ಪುನಃ ಇರಾನಿನ ಎಣ್ಣೆ ಸಂಧಾನ

ಪರ್ಷಿಯಾ ಮತ್ತು ಬ್ರಿಟನ್ನುಗಳ ನಡುವೆ ಪರಿಹಾರವಾಗದೆ ಉಳಿದಿರುವ ಎಣ್ಣೆ ವ್ಯಾಜ್ಯದ ಬಿಕ್ಕಟ್ಟನ್ನು ಹೋಗಲಾಡಿಸಲು ಪರ್ಷಿಯವು ಮುಂದಿನ ತಿಂಗಳು ಎರಡನೇ ವಾರದಲ್ಲಿ ಬ್ರಿಟನ್ನಿನೊಡನೆ ಪುನಃ ಸಂಧಾನವನ್ನು ಆರಂಭಿಸುವುದೆಂದು ಇರಾನಿನ ಹೊಸ ಪ್ರಧಾನಿ ಜಹೇದಿಯವರು ತಿಳಿಸಿರುವರೆಂದು ವರದಿಯಾಗಿದೆ

## ಗುಂಡಿನ ಪ್ರಕರಣದ ಬಗ್ಗೆ ಮೈಸೂರು ಮದ್ರಾಸ್ ಅಧಿಕಾರಿಗಳ ಮಾತುಕತೆ

ಮದ್ರಾಸ್ ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿ ಶ್ರೀ ಸುಂದರಂರವರು ನೆನ್ನೆ ಸಂಸ್ಥಾನದ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರೊಡನೆ ಕೋಲಾರ ಜಿಲ್ಲೆಯ ನಂಗಲಿ ಗ್ರಾಮದ ಗುಂಡಿನ ಪ್ರಕರಣದ ಸಂಬಂಧವಾಗಿ ಮಾತುಕತೆ ನಡೆಸಿದರು. ಗೃಹ ಕಾರ್ಯದರ್ಶಿ ಶ್ರೀ ಜಿ ಎಸ್ ನಾಗರಾಜರಾವ್, ಪೋಲೀಸು ಐ ಜಿ ಶ್ರೀ ಎಸ್. ವಿ ಬಾಬುರೆಡ್ಡಿ ಮತ್ತು ಕೋಲಾರದ ಜಿಲ್ಲಾಧಿಕಾರಿ ಶ್ರೀ ಅಬೂಬೇಕರ್‌ರವರೂ ಹಾಜರಿದ್ದರು ಭೇಟಿಯ ಪರಿಣಾಮವಾಗಿ, ಗುಂಡಿನೇಟಿನ ಪ್ರಕರಣದಲ್ಲಿ ಪರಸ್ಪರ ಉಂಟಾಗಿದ್ದ ತಪ್ಪು ತಿಳುವಳಿಕೆಯು ಬಹುಮಟ್ಟಿಗೆ ಮಾಯವಾಯಿತೆಂದು ಹೇಳಲಾಗಿದೆ

## ಟ್ರಿಯಸ್ಟೆ ನಗರದ ವಶಕ್ಕಾಗಿ ಯುಗೋಸ್ಲೇವಿಯಾ ನಿರ್ಧಾರ?

ಇಟಲಿ ಮತ್ತು ಯುಗೋಸ್ಲೇವಿಯಾ ರಾಜ್ಯಗಳಿಗೆ ಟ್ರಿಯಸ್ಟೆ ನಗರದ ಬಗ್ಗೆ ಪುನಃ ತಿಕ್ಕಾಟಕ್ಕೆ ಆರಂಭವಾಗಿದೆ ಮೊನ್ನೆ ರಾತ್ರಿ ಇದ್ದಕ್ಕಿದ್ದಂತೆಯೇ ಯುಗೋಸ್ಲೇವಿಯಾ ಪತ್ರಿಕೆಗಳಲ್ಲಿ ಇಟಲಿ ಬಗ್ಗೆ ತಮ್ಮ ರಾಜ್ಯವು ಇಟ್ಟುಕೊಂಡಿದ್ದ ತಾಳ್ಮೆಯು ನಾಶವಾಗಿರುವುದಾಗಿಯೂ, ಟ್ರಿಯಸ್ಟೆ ನಗರದ ಭಾಗವನ್ನು ತಮ್ಮ ರಾಜ್ಯವು ವಶಪಡಿಸಿಕೊಳ್ಳಬಹುದೆಂದೂ ತಿಳಿಸಿದುವು ಈ ವಿಷಯವನ್ನು ತಿಳಿದಕೂಡಲೇ ಇಟಲಿಯ ಪ್ರಧಾನಿ ಸಿನಾರ್ ಪೆಲ್ಲಾರವರು ತಮ್ಮ ರಕ್ಷಣಾ ಮಂತ್ರಿ ಮತ್ತು ಸೇನಾಧಿಪತಿಗಳು ಮತ್ತು ಇತರ ಅಧಿಕಾರಿಗಳೊಡನೆ ಚರ್ಚೆ ನಡೆಸಿ, ಯುಗೋಸ್ಲೇವಿಯಾ ಕಾರ್ಯಕ್ಕೆ ಪ್ರತೀಕಾರದ ಕ್ರಮವನ್ನು ಕುರಿತು ಪರ್ಯಾಲೋಚಿಸಿದುದಾಗಿ ಹೇಳಲಾಗಿದೆ. ಇದಲ್ಲದೆ ಅವರು ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸುಗಳ ರಾಯಭಾರಿಗಳನ್ನೂ ಕರೆಸಿಕೊಂಡು ಯುಗೋಸ್ಲೇವಿಯಾದವರ ಕಾರ್ಯದಿಂದ ಉಂಟಾಗುವ ಅಪಾಯ ಪರಿಸ್ಥಿತಿ ಬಗ್ಗೆ ಎಚ್ಚರಿಕೆಯಿತ್ತರೆಂದೂ ಹೇಳಲಾಗಿದೆ.

## ಮದ್ರಾಸು ಪೋಲೀಸರ ಜಾಮೀನು ಅರ್ಜಿ ನಿರಾಕರಣೆ

ಕೋಲಾರದ ಗಡಿ ಬಳಿ ನಂಗಲಿಯಲ್ಲಿ ಕೆಲವು ದಿನಗಳ ಹಿಂದೆ ಗುಂಡು ಹಾರಿಸಿದ ಸಂಬಂಧವಾಗಿ ದಸ್ತಗಿರಿಯಾಗಿರುವ ಮದ್ರಾಸಿನ ಸಬ್‌ಇನ್ಸ್‌ಪೆಕ್ಟರ್ ರಾಘವಲು ನಾಯ್ಡು ಮತ್ತು ಅಲ್ಲಿನ ಇಬ್ಬರು ಪೋಲೀಸರನ್ನು ಜಾಮೀನು ಮೇಲೆ ಬಿಡಲು ಕೋಲಾರದ ಪ್ರಥಮ ನ್ಯಾಯಾಧೀಶರಾದ ಶ್ರೀ ಆರ್ ಕೃಷ್ಣಶೆಟ್ಟರು ನಿರಾಕರಿಸಿರುತ್ತಾರೆ ಈ ವಿದ್ಯಮಾನವು ಇನ್ನೂ ತನಿಖೆಯಲ್ಲಿದ್ದು, ಚಾರ್ಜ್‌ಷೀಟು ಪೂರ್ಣವಾಗಿಲ್ಲವೆಂದೂ, ಪೋಲೀಸರ ಪ್ರಥಮ ತನಿಖೆ ವರದಿ ಮತ್ತು ಜಾಮೀನು ಅರ್ಜಿಯಲ್ಲಿ ಆಪಾದಿತರು ಕೊಟ್ಟಿರುವ ಹೇಳಿಕೆಗಳನ್ನು ಪರಿಶೀಲಿಸಿದರೆ, ಅವರುಗಳು ಫಾಸಿ ಅಥವಾ ಜೀವಾವಧಿ ಶಿಕ್ಷೆಗೆ ಗುರಿಯಾಗಬೇಕಾಗುವ ಆಧಾರವಿರುವುದಾಗಿಯೂ ನ್ಯಾಯಾಧೀಶರು ತಿಳಿಸಿರುತ್ತಾರೆ.

## ಬ್ಯಾಂಕರರ ದಸ್ತಗಿರಿ

ಬೆಂಗಳೂರು ಜಿಲ್ಲಾ ಖಜಾನೆಯಲ್ಲಿ ೧,೫೦,೦೦೦ ರೂ ವ್ಯತ್ಯಾಸ ಬಂದಿರುವ ಸಂಬಂಧವಾಗಿ ದಸ್ತಗಿರಿಯಾಗಿರುವ ಶ್ರೀ ಕೃಷ್ಣಮೂರ್ತಿಯವರಿಂದ ಹೆಚ್ಚಿನ ಪಾಲು ಹೆಚ್ಚು ಹಣವನ್ನು ಪಡೆದ ಮೋಹನಲಾಲ್ ಉರುಫ್ ಸೂರಜ್‌ಮಲ್‌ರವರಲ್ಲದೆ ಛೋಟಿಲಾಲ್ ಎಂಬ ಸಿವಿಲ್ ಪ್ರದೇಶದ ಪ್ರಸಿದ್ಧ ಬ್ಯಾಂಕರರನ್ನೂ ಪೋಲೀಸರು ದಸ್ತಗಿರಿ ಮಾಡಿರುವರು. ಖಜಾನೆಗೆ ಸೇರಿದ ೧೦,೫೦೦ ರೂ ಗಳನ್ನು ಒಬ್ಬರಿಂದ ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ಶ್ರೀ ಕೃಷ್ಣಮೂರ್ತಿಯವರಿಂದ ಜೂಜಿನಲ್ಲಿ ಹಣ ಪಡೆದ ಇತರರನ್ನು ಪೋಲೀಸರು ವಶಪಡಿಸಿಕೊಳ್ಳುವುದರಲ್ಲಿ ಉದ್ಯುಕ್ತರಾಗಿರುವರು.

○ ನ್ಯಾಯಾಂಗ ಮತ್ತು ಪೋಲೀಸು ವ್ಯವಹಾರಗಳ ಬಗ್ಗೆ ಕಾಂಬೋಡಿಯಾ ಸಂಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡಲು ಫ್ರಾನ್ಸು ಒಪ್ಪಿ ಈ ಬಗ್ಗೆ ಅದು ಒಪ್ಪಂದಕ್ಕೆ ರುಜು ಮಾಡಿರುತ್ತದೆ

# ವಾರ ಭವಿಷ್ಯ

ತಾ॥ ೩೦ ೮-೫೩ ರಿಂದ ೬-೯ ೫೩ ರ ವರೆಗೆ

ಮೇಷ— ಸಾಂಸಾರಿಕ ಸ ಖವಿರದ, ವ್ಯಾಪಾರಾದಿಗಳಲ್ಲಿ ಯೋಚ ತೊಂದರೆ, ಸಿತ್ರಾಜ ತ ಆತ್ಮ ಬಗ್ಗೆ ವಾತ್ಸಲ್ಯ ಆರೋಗ್ಯ ಅಧಿ ಕ ಮತ್ತು ಮಾನಸಿಕ ಸ್ಥಿತಿ ಸಂಧಾರಣ ಪ್ರವಾಸದಲ್ಲಿ ಲಾಭ ತಾ॥ ೩೧ ... ಕ ಚಿಂತಾ ... ದಣೆ ಪ್ರಾಣ ಭಯ

ವೃಷಭ ಮಾನಸಿಕ ... ಇರದ ವ್ಯಾಪಾರ ... ಉದ್ಯೋಗ ಪ್ರವಾಸ ... ಅವಮಾನ ತಾ॥ ... ಪ ತ್ರದ ಹತ್ರ ದ್ರವ್ಯ ಲಾಭ

ಮಿಥುನ - ಉತ್ಸಾಹೋತ್ಸಾಹ ... ಆರೋಗ್ಯ ಉತ್ತಮ ಆದಾಯಕ್ಕಿಂತ ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ಹಿತಕರ ವಾತಾವರಣ ಪ್ರವಾಸದಲ್ಲಿ ಸುಖ ತಾ॥ ೩೧, ... ನೇತ್ರ ಬಾಧೆ ಮನರಂಜನೆಗಾಗಿ ವೆಚ್ಚ

ಕರ್ಕ— ಮಾನಸಿಕ ಸ್ಥಿತಿಯ ... ಆರೋಗ್ಯ ತೃಪ್ತಿಕರ ... ಸ್ಥಿತಿ ... ದೆ ಉತ್ತಮಗೊಳ್ಳಬಹುದು ಪ್ರವಾಸ ಬೇಡ. ವ್ಯಾಪಾರಾದಿಗಳಲ್ಲಿ ಚಿಂತೆ ತಾ॥ ... ಕಷ್ಟ ... ಅನಾರೋಗ್ಯವಾದ ...

ಸಿಂಹ ಆರೋಗ್ಯ ... ಮಾನಸಿಕ ಸ್ಥಿತಿಗಳು ತಾಪಕರ, ವ್ಯಾಪಾರ ಉದ್ಯೋಗಗಳಲ್ಲಿ ಹಿತ ಶತ್ರು ಮತ್ತು ಸ್ನೇಹಿತರಿಂದ ತೊಂದರೆ ತಾ॥ ... ಮಿತ್ರ ಭೇಟಿ ... ಚಿಂತೆ

ಕನ್ಯಾ— ಆರೋಗ್ಯ ಉತ್ತಮ ಜೀವನದಲ್ಲಿ ಸಂಶಯ ಹಣಕಾಸಿನ ಸ್ಥಿತಿ ಸಾಮಾನ್ಯ ವ್ಯಾಪಾರ ಉದ್ಯೋಗ ಪ್ರವಾಸಗಳು ... ಕ್ಷಯದ ಚಿಹ್ನೆ ತಾ॥ ೩೧ ... ಮಿತ್ರ ಭೇಟಿ ಧನ ಲಾಭ

ತುಲಾ— ಕೈಗೊಂಡ ಕಾರ್ಯ ... ಅಪೇಕ್ಷಿತ ವ್ಯಕ್ತಿಯ ಆಸಿರೀಕ್ಷಿತ ಭೇಟಿ ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ ... ತಾ॥ ... ಬಂಧುಗಳಿಂದ ... ನಾಶ

ವೃಶ್ಚಿಕ ವ್ಯಥೆ ದೂರವಾಗುವ ಪ್ರಸಂಗ, ... ತೊಂದರೆ ... ಪ್ರವಾಸ ನೋಡಿಕೊಂಡು ಮಾಡಿ ತಾ॥ ... ಸುಖ ಭೋಜನ ವ ಹತ್ವದ ಪತ್ರ

ಧನು— ಆರ್ಥಿಕ ಪರಿಸ್ಥಿತಿ ... ತೃಪ್ತಿಕರ ಮಾನ ಹಾನಿ ತಪ್ಪುವುದು ವ್ಯಾಪಾರಾದಿಗಳಲ್ಲಿ ಮಿತ್ರ ಸಹಾಯ, ಸಂತತಿಗೆ ಕ್ಲೇಶ ಪ್ರವಾಸ ಸುಖವಿಲ್ಲ ತಾ॥ ... ಹೆಚ್ಚು ಖರ್ಚು ... ದ್ರವ್ಯ ನಾಶ

ಮಕರ— ಆರೋಗ್ಯ ಚೆನ್ನಾಗಿಲ್ಲ, ವ್ಯಾಪಾರ, ಉದ್ಯೋಗ ಪ್ರವಾಸ, ಆರ್ಥಿಕ ಸ್ಥಿತಿ ಸಾಧಾರಣ ತಾ॥ ... ವ್ಯಾಕುಲ ನಿದ್ರಾನಾಶ

ಕುಂಭ ಉದ್ಯೋಗಶೀಲರಾಗಿ, ಆರೋಗ್ಯ ಆರ್ಥಿಕ ಮಾನಸಿಕ ಸ್ಥಿತಿಗಳು ಉತ್ತಮ ತಾ॥ ... ವ್ಯಾಕುಲ ನಿದ್ರಾನಾಶ

ಮೀನ ಆರೋಗ್ಯ, ಆರ್ಥಿಕ ಮಾನಸಿಕ ಸ್ಥಿತಿಗಳು ತೃಪ್ತಿಕರ ವ್ಯಾಪಾರಾದಿಗಳಲ್ಲಿ ತೊಂದರೆ ತಾ॥ ... ಧರ್ಮ ಕಾರ್ಯಕ್ಕೆ ...

## ... ಕೂಡಲ್ಲಿ ೫೦ಳ ಜನರ ಬಂಧನ

... ಜನ ಸ ... ಶ್ರೀ ... ಕಾರ್ಯ ... ಸಿದ ಸಂಬಂಧವಾಗಿ ಇಲ್ಲಿ ... ಗಲಭೆಗಳ ಸಂಬಂಧದಲ್ಲಿ ೫೦ಳ ಜನರನ್ನು ದಸ್ತಗಿರಿ ಮಾಡಲಾಗಿದೆ

## ಹಾಲೆಂಡ್ ರಾಣಿಯ ಗಂಡ ಅನಾರೋಗ್ಯದಿಂದ ನರಳು

ಹಾಲೆಂಡಿನ ... ಸಮುದ್ರದೊಳಗೆ ... ಅಲ್ಲಿನ ರಾಣಿ ಜೂಲಿಯಾನ ... ರಾಜಕುಮಾರ ... ಹೋ ... ಗಿದೆ ... ಉಪಯೋಗಿಸುತ್ತಿದ ... ತನ್ನ ... ಮಾಡಿದ್ದಾರೆ.

## ಸಂಸ್ಥಾನದಲ್ಲಿ ಹೊಸ ಕೈಗಾರಿಕೆಗಳು

ಬೆಂಗಳೂರು ೩೦

ಸಂಸ್ಥಾನದ ಕೈಗಾರಿಕಾ ಡೈರೆಕ್ಟರಾದ ಶ್ರೀ ಆ ವಿ ಗಣಪತಿ ಅಯ್ಯಂಗಾರರವರು ಮೊನ್ನೆ ... ದ ಕದ ಭಾಷಣ ಮಾಡುತ್ತಾ ಒಂದೆರಡು ವರ್ಷಗಳಲ್ಲಿ ಕಚ್ಚಾ ... ವ ತು ಫೋಟೋ ತೆಗೆ ... ದ ಎಲ್ಲಾ ವಿಧವಾದ ವಿದ್ಯುಚ್ಛಕ್ತಿ, ಫೋರ್ಸಲೇನ್ ವಿಮಾನ ಎತ್ತು ಮೋಟಾರು ವಾಹನಗಳಿಗೆ ಬೇಕಾಗುವ ಪ್ಲಗ್ ಗಳು ವಿದ್ಯುಚ್ಛಕ್ತಿ ಟ್ರಾನ್ಸ್‌ಫಾರ್ಮರ್‌ಗಳು ವಿದ್ಯುಚ್ಛಕ್ತಿ ಮೋಟಾರುಗಳು ಫ್ಲೂರೊಸೆಂಟ್ ದೀಪಗಳು ಇವುಗಳನ್ನು ತಯಾರಿಸುವ ಕಾರ್ಖಾನೆಗಳನ್ನೂ ಮೈಸೂರು ಗಂಧದ ಎಣ್ಣೆಯನ್ನು ಹೆಚ್ಚಾಗಿ ತಯಾರಿಸುವ ಭಾರಿ ಕಾರ್ಖಾನೆಯನ್ನೂ ಏರ್ಪಡಿಸಲಾಗುವುದೆಂದು ತಿಳಿಸಿದರು

ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿದ ಮೇಲೆ ಫೆರೋ ಮ್ಯಾಂಗನೀಸ್ ಕಬ್ಬಿಣ ಮತ್ತು ಹೊಸ ಹತ್ತಿ ಬಟ್ಟೆ ಗಿರಣಿಗಳನ್ನು ತೆಗೆಯಲು ಸಾಧ್ಯವಾಗುವುದೆಂದೂ ಅವರು ಹೇಳಿದರು

## ಸರ್ಕಾರಿ ಬಸ್ಸು ಪ್ರಯಾಣಿಕರಲ್ಲಿ ಮನವಿ

ಮೈಸೂರು ಸರ್ಕಾರದ ಬಸ್ಸುಗಳಲ್ಲಿ ಸಿಬ್ಬಂದಿಯವರು ತಮ್ಮ ಪ್ರಯಾಣಿಕರಿಗೆ ಟಿಕೆಟ್ಟುಗಳನ್ನು ಕೊಡದೆ ಹಣವನ್ನು ದುರುಪಯೋಗ ಪಡಿಸಿಕೊಳ್ಳುವ ವಿಷಯವು ಸರ್ಕಾರ ಮತ್ತು ಬಸ್ ಸಂಚಾರದ ಕಂಪೆನಿಯ ಮ್ಯಾನೇಜರವರ ಗಮನಕ್ಕೆ ಬಂದಿರುವುದರಿಂದಲೂ ಪ್ರಯಾಣಿಕರು ತಮ್ಮ ಜವಾಬ್ದಾರಿಯನ್ನರಿತುಕೊಂಡು ಬಸ್ಸು ಹತ್ತಿದ ಕೂಡಲೇ ಟಿಕೆಟ್ಟುಗಳನ್ನು ಕೊಡುವಂತೆ ... ತ್ತಾಯಪಡಿಸಬೇಕೆಂದೂ ಸರ್ಕಾರದ ಪತ್ರಿಕಾ ಪ್ರಕಟನೆಯೊಂದು ತಿಳಿಸುತ್ತದೆ. ಬಸ್ಸಿನಲ್ಲಿರುವ ಪ್ರತಿಯೊಬ್ಬ ಪ್ರಯಾಣಿಕನಿಗೂ ಟಿಕೆಟ್ ಕೊಟ್ಟ ನಂತರ ಬಸ್ಸನ್ನು ಬಿಡಕೂಡದೆಂದು ನಿರ್ಬಂಧಿಸಲಾಗುವುದೆ ... ಪ್ರಯಾಣಿಕರು ಬಸ್ಸಿನಲ್ಲಿಟ್ಟಿರುವ ಪುಸ್ತಕಗಳನ್ನು ಪಡೆದು ಅದರಲ್ಲಿ ದೂರುಗಳನ್ನು ಬರೆದಿಡಬಹುದೆಂದೂ ಸೂಚಿಸಲಾಗಿದೆ

## ಕನ್ನಡ ಸಾಹಿತ್ಯ ಪರಿಷತ್ತಿನ ಹೊಸ ಕಾರ್ಯದರ್ಶಿ

ಬೆಂಗಳೂರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ಸಿ ಕೆ ನಾಗರಾಜರಾಯರು ರಾಜೀನಾಮೆ ಯಿತ್ತಿರುವುದರಿಂದ ಶ್ರೀ ಎ ಎನ್ ಮೂರ್ತಿರಾಯರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ

## ಸೀನಿಯರ್ ಅಸಿಸ್ಟೆಂಟ್ ಕಮಿಷನರುಗಳಾಗಿ ಬಡ್ತಿ

ಶ್ರೀಗಳಾದ ವೈ ಸಿ ಹೊಂಬಾಳಯ್ಯ ಸ್ಟ್ರಿಂಡ್‌ಗೌಸ್ ಮೊಹಿಯುದ್ದೀನ್ ಮತ್ತು ... ಸಿ ... ಯವರಿಗೆ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿ ಕೊಡಲಾಗಿದೆ

## ಪ್ರಕಟಣೆ

ತಾ ... ನೇ ಸಂಚಿಕೆಯಲ್ಲಿ ... ನೇ ನಂಬರ್ ... ಪುರಂ, ಕಂಠೀರವ ನಾರಾಯಣ ಸ್ವಾಮಿ ರಸ್ತೆ ಮನೆ ಬಾಡಿಗೆಗೆ ಇದೆ ಎಂಬುದಾಗಿ ಪ್ರಕಟವಾಗಿರುತ್ತ ಇದು ಸರಿಯಲ್ಲ, ಅದೇ ಮೊಹಲ್ಲಾದಲ್ಲಿರುವ ಡೋರ್ ನಂಬರ್ ... ನೇ ನಂಬರ್ ಮ॥ ಎಂ ಎಸ್ ಪರಶುರಾಮಯ್ಯನವರ ಬಾಬತು ಮನೆ ಬಾಡಿಗೆಗಿದೆ ಎಂದು ಮಹಾಜನರಲ್ಲಿ ವಿಜ್ಞಾಪನೆ

ದಿ ಮೈಸೂರು ಬ್ರೋಕರ್ಸ್ ಸಿಂಡಿಕೇಟ್

ಹಳೇ ಮೈಸೂರು ಬ್ಯಾಂಕ್ ಕಟ್ಟಡ ಮೈಸೂರು

## ಹಿಂದಿ ಭಾಷೆ ಕಲಿಯಲು ಒತ್ತಾಯ ಕೂಡದು

ದಕ್ಷಿಣ ಭಾರತದ ಜನರ ಹಿಂದಿ ಮೇಲೆ ಭಾಷೆಯನ್ನು ಹೇರುವುದರಿಂದ ದೇಶದ ಏಕಮತ್ಯಕ್ಕೆ ಅಪಾಯವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಭಾಷೆಯು ಒಂದುಗೂಡಿಸಬಲ್ಲ ಅಥವಾ ಮನಸ್ತಾಪವನ್ನುಂಟು ಮಾಡಿ ಯುದ್ಧ ಮಾಡಿಸಬಲ್ಲ ಶಕ್ತಿಯನ್ನು ಹೊಂದಿರುವುದಾಗಿಯೂ ಅವರು ಹೇಳಿರುವರು ಆದರೆ ಇಂಗ್ಲೀಷು ರಾಜ ಭಾಷೆಯಾಗಲಾಗದೆಂದೂ, ಅದರಿಂದ ದೇಶದ ಗೌರವಕ್ಕೆ ಹಾನಿಯುಂಟೆಂದೂ ಅವರು ತಿಳಿಸಿರುತ್ತಾರೆ

## ಕುರೂಪಿಗಳ ಸಂಘ

ಪ್ರಪಂಚದಲ್ಲಿ ತನ್ನಷ್ಟು ಕುರೂಪಿಯಿಲ್ಲವೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ರತ್ನಪಡಿ ವ್ಯಾಪಾರಿಯೊಬ್ಬನು ತನಗಿಂತಲೂ ಕುರೂಪಿಯಾದ ಒಬ್ಬ ಸ್ಪಾಕ್ ಬ್ರೋಕರ್, ಒಬ್ಬ ಸಾಬೂನು ತಯಾರಕ ಒಬ್ಬ ಸಂಗೀತ ಕಛೇರಿಗಳ ಏರ್ಪಾಡಕ ಇವರಗಳನ್ನು ಕಂಡಮೇಲೆ ಅವರುಗಳೊಂದಿಗೆ ಈಗ ಕುರೂಪಿಗಳ ಸಂಘವೊಂದನ್ನು ಸ್ಥಾಪಿಸಿರುವನೆಂದು ವರದಿಯಾಗಿದೆ ಇದರಂತೆಯೇ ಅಮೆರಿಕದಲ್ಲಿ ಸುಳ್ಳುಗಾರರ ಸಂಘ ಮತ್ತು ಜಿಪುಣರ ಸಂಘಗಳೂ ಇವೆ ಸುಳ್ಳುಗಾರರ ಸಂಘದ ಸದಸ್ಯರು ನಿಜ ಹೇಳಿದರೆ ಜಿಪುಣರು ಹಣವ್ಯಯಿಯಾಗಿದ್ದರೆ ಅವರುಗಳನ್ನು ಸಂಘದಿಂದ ಬಹಿಷ್ಕಾರ ಮಾಡಲಾಗುವುದು

## ಗುರುಗಳ ಆರಾಧನೆ

ರಾಜಧಾನಿಯ ಶ್ರೀರಾಮಪೇಟೆ ಶ್ರೀರಾಮಚಂದ್ರ ಮಂದಿರದಲ್ಲಿ ಕಳೆದ ಗುರುವಾರ ಶ್ರೀ ರಾಘವೇಂದ್ರ ಗುರುಗಳವರ ಆರಾಧನಾ ಉತ್ಸವವು ನಡೆಯಿತು ನಗರದ ವಕೀಲರಾದ ಶ್ರೀ ಹೆಚ್ ಸುಬ್ಬರಾಯರು ಶ್ರೀ ಗುರುಗಳವರ ಜೀವನ ವ ತ್ತು ವ ಹಿಮೆಯ ಬಗ್ಗೆ ಅನೋಘ ಭಾಷಣ ಮಾಡಿದರು ಬೆಂಗಳೂರು ನಗರದ ವಕೀಲರು ರಾಮದ ... ಶ್ರೀ ರಾಘವೇಂದ್ರರಾವ್ ಕುಲ್ಕರ್ಣಿರವರು ಅಧ್ಯಕ್ಷತೆ ವಹಿಸಿದ್ದರು

## ವಿವಾಹ ಮಹೋತ್ಸವ

ನಂಜನಗೂಡು ಸದ್ವಿದ್ಯಾ ಶಾಲೆಯ ಮ್ಯಾನೇಜರಾಗಿರುವ ಶ್ರೀ ಟಿ ಎಸ್. ಶ್ರೀನಿವಾಸಯ್ಯನವರು ತಮ್ಮ ಕುಮಾರಿ ಸೌ॥ ಮಂಗಳಾಂಬಾರವರನ್ನು ಮಂಡ್ಯದ ಮುನ್ಸಿಪಲ್ ಸ್ಕೂಲಿನ ಮೇಷ್ಟರಾದ ಶ್ರೀ ಅಪ್ರಮೇಯ ಅಯ್ಯಂಗಾರ್‌ರವರ ಕುಮಾರ ಶ್ರೀ ಗೋಪಾಲನವರಿಗೆ ಕೊಟ್ಟು ಮೊನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು


SRI GANESHA TALKIES

FOR TO-DAY

ANNIE, GET YOUR GUN

From 31-8-53 For 2 Days

Republic's

FIGHTING COAST GUARD

A Real Life Adventure Brought to Screen

Featuring Brian Donlevy, Forrest Tucker and Ella Raines

— NEXT CHANGE —

Columbia's

WHEN THE RED SKINS RODE

In Super Cine Color

With John Hall


## ಸ್ವದೇಶಕ್ಕೆ ರಷ್ಯಾ ರಾಯಭಾರಿ ವಾಪಸು

ಭಾರತದಲ್ಲಿರುವ ರಷ್ಯಾ ರಾಯಭಾರಿ ಶ್ರೀ ಮೆಕ್ಸಿಲಿವ್‌ರವರು ಸ್ವದೇಶಕ್ಕೆ ಹಿಂತಿರುಗಿ, ಅಲ್ಲಿ ವ್ಯಾಪಾರದ ವ್ಯವಸಾಯ ಮಂತ್ರಿಗಳಾಗುವರೆಂದು ವರದಿಯಾಗಿದೆ.

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಆಣೆ | ರೂ |
|---|---|---|
| ಕಡಲೆಕಾಯಿ | ೧೫ ೦ ೦ | ೩೬ ೧ |
| ಕಡಲೆಕಾಯಿ ಬೀಜ | ೬೭ ೦ ೦ | |
| ಎಳ್ಳು | ೫೨ ೧೨ ೦ | ೧೦೦ ೨ |
| ತೊಗರಿ | ೪ ೧೨ ೦ | ೪೯ ೦ |
| ಹೆಸರು | ೫೩ ೨ ೦ | |
| ಹಲಸಂದೆ | ೭೪ ೧೪ ೦ | |
| ಉದ್ದು | ೬೫ ೦ ೦ | ೭೦ ೮ |
| ಹುಣಸೇಹಣ್ಣು | ೬ ೪ ೦ | |
| ತೆಂಗಿನಕಾಯಿ ೧೦೦೦ಕ್ಕೆ | ೧೨೬ ೦ ೦ | ೨೦೦ ೦ |

## ಕಾಮರ್ಸ್ ಕಾಲೇಜು ಸಂಘದ ಚುನಾವಣೆ

ರಾಜಧಾನಿಯ ಡಿ ಬನುಮಯ್ಯನವರ ಕಾಮರ್ಸ್ ಕಾಲೇಜು ಸಂಘದ ಚುನಾವಣೆ ಮೊನ್ನೆ ನಡೆದು, ಶ್ರೀ ಎಸ್ ಎಲ್ ಅನಂತ ಪದ್ಮನಾಭರವರು ಅಧ್ಯಕ್ಷರಾಗಿಯೂ, ಶ್ರೀ ಕೆ ಲಕ್ಷ್ಮೀನಾರಾಯಣರವರು ಉಪಾಧ್ಯಕ್ಷರಾಗಿಯೂ ಶ್ರೀ ಸಿದ್ದಪ್ಪನವರು ಕಾರ್ಯದರ್ಶಿಯಾಗಿಯೂ, ಶ್ರೀ ಅನಂತ ಸ್ವಾಮಿಯವರು ಕ್ರೀಡೆಗಳ ಕಾರ್ಯದರ್ಶಿಯಾಗಿಯೂ ಅದಲ್ಲದೆ ಶ್ರೀಗಳಾದ ಎಸ್ ವಿ ದ್ವಾರಕಾನಾಥ ನಾಗೇಶ್ವರಯ್ಯ, ಎಂ ಎಸ್ ರಾಜಯ್ಯ ಎಸ್ ಶ್ರೀಧರ, ಹೆಚ್ ಆರ್ ವಿಶ್ವೇಶ್ವರಯ್ಯನವರುಗಳು ಸಂಘದ ಪ್ರತಿನಿಧಿಗಳಾಗಿ ಆಯ್ಕೆಯಾದರು.

## ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಟಿ ನಾಗಸ್ವರ ಸಂಗೀತ ... ಎಸ್ ಸಿ ಬೇಲೂರಯ್ಯ ನಾಗಸ್ವರ ... ೧ ೩೦ ಕರ್ನಾಟಕ ಸಂಗೀತ ... ಮತ್ತು ಸಂಜೆ ೬-೫ ಗಾಯನ ... ೫ ೩೦ ಎಸ್ ಸಿ ಬೇಲೂರಯ್ಯ ನಾಗಸ್ವರ ಗಾನ ವಿಹಾರ ... ಶಿವಪ್ರಸಾದ್, ... ಮಾಯಾ ... ರಾಜರತ್ನಂ, ಕೃಷ್ಣ ಜಯಂತಿ ಬಗ್ಗೆ ಭಾಷಣ ... ಭಾರತ ... ಕೃಷ್ಣ ಲೀಲಾ ರಂಗಿನ ... ವಿಜಯ ಸಾರಥಿ ... ಶ್ರೀ ಕೃಷ್ಣನ ಬಗ್ಗೆ ಕನ್ನಡ ಕೀರ್ತನೆಗಳು ಮತ್ತು ವ್ಯಾಖ್ಯಾನ


## ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಆವಶ್ಯಕವಾಗಿ ಬೇಕಾಗುವ ರುಚಿಕರವಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಹತ್ತಿರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

( ಚಂದ್ರಮೌಳೀಶ್ವರ ಬಿಲ್ಡಿಂಗ್ )

ಡಿ ಸುಬ್ಬಯ್ಯ ರಸ್ತೆ ಮೈಸೂರು


## ಮನೆಗಳು ಕ್ರಯಕ್ಕೆ

1 ಡೋರ್ ನಂಬರು 2092/2 ಮಹ ಮನೆ, ಆನೆ ಸಾರೋಟು ಬೀದಿ, ಮೈಸೂರು

2 ಡೋರ್ ನಂಬರು 350 ತಳರು ಮ ದ ಬೀದಿ, ಕಿಲ್ಲೆ ಮೊಹಲ್ಲಾ, ಮೈಸೂರು

3 ಡೋರ್ ನಂಬರು 1176 ಬಾಲಕೃ ರಾವ್ ರೋಡು, ಲಾ ಕೋರ್ಟಿನ ಹತ್ತಿ ಮೈಸೂರು

4 ಡೋರ್ ನಂಬರು 2916 ಸರಸ್ವತಿಪುರ ಮೆಯಿನ್ ರೋಡು, ಮೈಸೂರು ಭೋ 5000 ರೂ

ಮನೆಗಳು ಮತ್ತು ಜಮೀನುಗಳ ಮೇಲೆ ಸಾಲ ಸಹಾ ಕೊಡಿಸಲಾಗುತ್ತ

ಹೆಚ್ಚಿಗೆ ವಿಷಯಗಳಿಗೆ —

ಬ್ರೋಕರ್ಸ್ ಸಿಂಡಿಕೇಟ

ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು, ಇವರಲ್ಲಿ ವಿಚಾರಿಸಿ


# ರಾಜಕಮಲ್, ಮೈಸೂರು

28-8-53 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ಭರಣಿಯವರ ತೆಲುಗು ಚಿತ್ರ

## ಚಂಡೀ ರಾಣಿ

ಭೂಮಿಕೆ – ಭಾನುಮತಿ, ವಿದ್ಯಾವತಿ ಎನ್ ಟಿ ರಾಮರಾವ್, ಎಸ್ ವಿ ರಂಗರಾವ್, ರೇಲಂಗಿ ಮುಂತಾದವರು

ನಿರ್ದೇಶಕ, ಭಾನುಮತಿ


Edited, Printed and Published by A R Nagarajan at Sadhvi Press, D.Subbiah Road, Mysore

ಟೆಲಿಫೋನ್ ನಂ. 792

॥ ವಂದೇ ಮಾತರಂ ॥

ಇಂಡಿಯನ್ ಪತ್ರಿಕೆ ೩ ಕಾಸು

ಗೌರಿ ಹಬ್ಬಕ್ಕೆ ಬೇಕಾದ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು
ನೂಲಿನ ರಖಂವಾರಿ
ಸೀರೆಗಳು ಬಂದಿವೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE WEDNESDAY 2-9-1953 : ಮೈಸೂರು : ಬುಧವಾರ ೨-೯-೧೯೫೩ [ ಸಂಚಿಕೆ ೩೧

# ಹನುಮಂತಯ್ಯನವರು ವಿಶ್ವಾಸದ ಓಟು ಗಳಿಸಬೇಕು ?

## ಹನುಮಂತಯ್ಯನವರಿಂದ ವಿಶ್ವಾಸ ಸೂಚಕ ಓಟಿನ ಬೇಡಿಕೆ

### ನೆಹರೂರವರಿಗೆ ಮುಖಂಡರಿತ್ತ ಹೇಳಿಕೆ ಪಟ್ಟಿಗೆ ಉತ್ತರದ ನಿರೀಕ್ಷಣೆ

ಬೆಂಗಳೂರು ೨

ಮೈಸೂರು ಕಾಂಗ್ರೆಸ್ ವ್ಯವಹಾರಗಳಲ್ಲಿ ಇತ್ತೀಚೆಗೆ ಉಂಟಾಗಿರುವ ಪರಿಸ್ಥಿತಿಯನ್ನು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೂ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರಿಗೂ ಆಗಿರುವ ಬಹಿರಂಗ ಘರ್ಷಣೆಯನ್ನೂ ಕೇಂದ್ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಆತಂಕದಿಂದ ಪರಿಶೀಲಿಸುತ್ತಿರುವುದಾಗಿ ವರದಿಯಾಗಿದೆ. ಶ್ರೀ ಹನುಮಂತಯ್ಯನವರ ಅಧಿಕಾರವು ಮುಂದುವರಿಯಬೇಕಾದರೆ ಅವರು ಶಾಸನ ಸಭಾ ಕಾಂಗ್ರೆಸ್ ಪಕ್ಷದವರಿಂದ ವಿಶ್ವಾಸ ಸೂಚಕ ಓಟನ್ನು ಹೊಸದಾಗಿ ಗಳಿಸಬೇಕಾಗಬಹುದೆಂದು ದೆಹಲಿಯಲ್ಲಿ ಅಭಿಪ್ರಾಯಪಡಲಾಗಿದೆ. ಮೈಸೂರು ಪ್ರಮುಖವಾದ ಆಡಳಿತವನ್ನು ಹೊಂದಿರುವ ಸಂಸ್ಥಾನವಾಗಿರುವುದರಿಂದ ಇಲ್ಲಿನ ಕಾಂಗ್ರೆಸ್ ವ್ಯವಹಾರಗಳಿಂದ ಕೇಂದ್ರಕ್ಕೆ ತೀವ್ರವಾದ ಸಮಸ್ಯೆಯನ್ನು ತಂದೊಡ್ಡಲಾಗಿರುವುದೆಂದು ಭಾವಿಸಲಾಗಿದೆ.

ಕಳೆದ ತಿಂಗಳು ಶ್ರೀ ಹೆಚ್ ಕೆ ವೀರಣ್ಣಗೌಡರು ಮತ್ತು ಇತರ ಮುಖಂಡರು ದೆಹಲಿಗೆ ಹೋಗಿದ್ದಾಗ ನೆಹರೂ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರು ಅವರುಗಳಿಗೆ ಸಮಸ್ಯೆಯನ್ನು ಅಗೌರವವುಂಟಾಗದ ರೀತಿಯಲ್ಲಿ ಬಗೆಹರಿಸಿಕೊಳ್ಳುವಂತೆ ಬುದ್ಧಿವಾದವನ್ನಿತ್ತರೆಂದು ಹೇಳಲಾಗಿದೆ.

ಶ್ರೀ ಹನುಮಂತಯ್ಯನವರ ಆಡಳಿತ ಮತ್ತು ಇತರ ವಿಚಾರಗಳಲ್ಲಿ ಕಂಡುಬಂದಿರುವ ದೋಷಗಳನ್ನು ಕುರಿತು ಮೈಸೂರಿನ ಮುಖಂಡರು ನೆಹರೂರವರಿಗೆ ಒಂದು ಆಪಾದನಾ ಪಟ್ಟಿಯನ್ನು ಒಪ್ಪಿಸಿರುವರೆಂದೂ ಅದನ್ನು ಪಂಡಿತಜಿಯವರು ಶ್ರೀ ಹನುಮಂತಯ್ಯನವರಿಗೆ ಕಳುಹಿಸಿ, ಅವರ ಉತ್ತರದ ನಿರೀಕ್ಷೆಯಲ್ಲಿರುವರೆಂದೂ ವರದಿಯಾಗಿದೆ.

## ಭಾರತಕ್ಕೆ ರಷ್ಯದ ಹೊಸ ರಾಯಭಾರಿ

ರಷ್ಯದ ರಾಯಭಾರಿ ಬೆನಿಡಿಕ್ಟೋವ್‌ರವರು ಸ್ವದೇಶಕ್ಕೆ ಹಿಂತಿರುಗಲಿರುವುದರಿಂದ ಅವರ ಸ್ಥಾನದಲ್ಲಿ ಮಿಕೇಲ್ ಅಲೆಕ್ಸೀವಿಚ್ ಮೆಂಶಿಕೋವ್‌ರವರನ್ನು ಭಾರತದಲ್ಲಿ ರಷ್ಯದ ರಾಯಭಾರಿಯಾಗಿ ನೇಮಿಸಲಾಗಿದೆ.

### ಸಿ ಎಸ್ ರಘುನಾಥರಾಯರ ನಿಧನ

ರಾಜಧಾನಿಯ ವಕೀಲರೂ, ಯುನೈಟೆಡ್ ಆಟೊಮೊಬೈಲ್ಸ್ ಅಂಗಡಿಯ ಮಾಲೀಕರೂ ಆದ ಶ್ರೀ ಸಿ ಎಸ್ ರಘುನಾಥರಾಯರು ನೆನ್ನೆ ಹೃದಯವೇದನೆಯಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೨ ದಿನಗಳ ಹಿಂದೆ ನೋವು ಕಾಣಿಸಿಕೊಂಡು ಚಿಕಿತ್ಸೆ ನಡೆಯುತ್ತಿತ್ತು. ಅವರು ನಗರದ ಮತ್ತು ಸುತ್ತಿನ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಆರು ತಿಂಗಳುಗಳ ಹಿಂದೆ ಬದರಿ ಯಾತ್ರೆ ಮಾಡಿದ್ದರು. ಅವರಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುವರು. ಅವರಿಗೆ ೬೩ ವರ್ಷ ವಯಸ್ಸಾಗಿದ್ದಿತು.

## ಮದ್ರಾಸು ಶಾಸನ ಸಭೆಗೆ ಸಂಜೀವರೆಡ್ಡಿಯವರ ಆಯ್ಕೆ

ಚಿತ್ತೂರು ಜಿಲ್ಲೆಯ ಕಾಳಹಸ್ತಿ ಕ್ಷೇತ್ರದಿಂದ ಮದ್ರಾಸು ಶಾಸನ ಸಭೆಗೆ ನಡೆದ ಉಪಚುನಾವಣೆಯಲ್ಲಿ ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನೀಲಂ ಸಂಜೀವರೆಡ್ಡಿಯವರು ೧೪ ಸಾವಿರ ಅಧಿಕ ಬಹುಮತದ ಓಟುಗಳಿಸಿ ಸ್ವತಂತ್ರ ಉಮೇದುವಾರರೊಬ್ಬರನ್ನು ಪರಾಭವಗೊಳಿಸಿ, ಆರಿಸಿ ಬಂದಿರುವರು.

## ವಿಜಯಲಕ್ಷ್ಮಿ ಪಂಡಿತರಿಗೆ ಪಾಕಿಸ್ತಾನದ ಬೆಂಬಲ

ವಿಶ್ವ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿರುವ ಭಾರತದ ಪ್ರತಿನಿಧಿ ವಿಜಯಲಕ್ಷ್ಮಿ ಪಂಡಿತರಿಗೆ ಪಾಕಿಸ್ತಾನವು ಬೆಂಬಲ ನೀಡುವುದಾಗಿ ತೀರ್ಮಾನಿಸಿದೆ.

## ಭಾರತದಲ್ಲಿ ಅಣು ಶಕ್ತಿ ತಯಾರಿ ಯಂತ್ರ

ಅಣು ಶಕ್ತಿಯನ್ನು ಉತ್ಪನ್ನ ಮಾಡಬಲ್ಲ ಯಂತ್ರವನ್ನು ಭಾರತವು ಇನ್ನು ಮೂರು ವರ್ಷಗಳೊಳಗೆ ಹೊಂದಲಿದೆಯೆಂದು ಭಾರತದ ಅಣು ಶಕ್ತಿಯ ಸಮಿತಿ ಅಧ್ಯಕ್ಷರಾದ ಡಾ॥ ಹೆಚ್ ಜೆ. ಭಾಭಾರವರು ತಿಳಿಸಿರುತ್ತಾರೆ. ಬೊಂಬಾಯಿ ಬಳಿ ಟ್ರಾಂಬೆ ಎಂಬಲ್ಲಿ ಯುರೇನಿಯಂ ಮತ್ತು ತೋರಿಯಂ ಕಾರ್ಖಾನೆಯನ್ನು ಇನ್ನು ೧॥ ವರ್ಷದಲ್ಲಿ ಸ್ಥಾಪಿಸಲಾಗುವುದೆಂದು ಅವರು ಹೇಳಿರುತ್ತಾರೆ.

## ರೈಲಿನಿಂದ ಪಾರಾಗಲು ಸೇತುವೆಯಿಂದ ಬಿದ್ದು ಮರಣ

ಈರೋಡಿನ ೬೫ ವರ್ಷದ ತಂಗಮ್ಮಾಳ್ ಮತ್ತು ಆಕೆಯ ೩೫ ವರ್ಷದ ಮಗ ಕಾಳಿಮುತ್ತು ಗೌಂಡರ್ ಎಂಬುವರಿಬ್ಬರು ಉದ್ಯೋಗವನ್ನು ಹುಡುಕಿಕೊಂಡು ಮಣಿಮುತ್ತೂರಿಗೆ ಬಂದಿದ್ದು, ಕೆಲಸವು ಸಿಗದೆ ತಮ್ಮ ಸ್ಥಳಕ್ಕೆ ವಾಪಸು ಹೋಗಲು ಟಿಕೆಟ್ಟು ಇಲ್ಲದೆ ರೈಲು ಹತ್ತಿದರೆಂದೂ, ಅವರನ್ನು ಒಂದು ಕಡೆ ಇಳಿಸಲಾಗಿ, ಅವರುಗಳು ನಡೆದುಕೊಂಡು ರೈಲು ಸೇತುವೆ ಮೇಲೆ ಬರುತ್ತಿದ್ದಾಗ ಎದುರಾಗಿ ರೈಲೊಂದು ಬರಲು, ಅದಕ್ಕೆ ಸಿಕ್ಕದಂತೆ ತಪ್ಪಿಸಿಕೊಳ್ಳಲು ತಾಯಿಯನ್ನು ಮಗನು ಕೆಳಕ್ಕೆ ತಳ್ಳಿ ತಾನೂ ಹಾರಿದನೆಂದೂ ಕೆಲವು ಗಂಟೆಗಳಾದ ನಂತರ ತಾಯಿಯು ಮೃತಪಟ್ಟಳೆಂದೂ, ಗಾಯಗೊಂಡ ಯುವಕನನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ ವರದಿಯಾಗಿದೆ.

## ದೇವ್ವಗಳ ದ್ವೀಪಕ್ಕೆ ಪರ್ಷಿಯಾದ ಟೂಡೇ ಪಕ್ಷದವರ ರವಾನೆ

ದಸ್ತಗಿರಿ ಮಾಡಲ್ಪಟ್ಟಿರುವ ಪರ್ಷಿಯಾದ ಟೂಡೇ ಪಕ್ಷದ ಮುಂದಾಳುಗಳನ್ನು ಪರ್ಷಿಯಾ ಬಳಿ ದೆವ್ವಗಳ ದ್ವೀಪಕ್ಕೆ ರವಾನಿಸಲಾಗುತ್ತಿರುವುದೆಂದು ವರದಿಯಾಗಿದೆ. ಆ ಪಕ್ಷದ ಸದಸ್ಯರುಗಳ ಶಿಬಿರಗಳನ್ನು ಪತ್ತೆ ಹಚ್ಚುವಂತೆ ಈಗಿನ ಪ್ರಧಾನಿ ಜಹೇದಿಯವರ ಸರ್ಕಾರದ ಮಂದಿ ಶೋಧಿಸುತ್ತಿರುವರೆಂದು ಗೊತ್ತಾಗಿದೆ. ಅಲ್ಲಿನ ಅನೇಕ ಕಮ್ಯೂನಿಸ್ಟರು ಸ್ವಾಲಿನ್ನರ ಮಾಸ್ಕೋ ನಿಯಂತೆ ತಾವೂ ಪಲಾಯನ ಮಾಡಬೇಕೆಂದಿದ್ದು ಈಗ ತಲೆ ತಪ್ಪಿಸಿಕೊಳ್ಳುತ್ತಿರುವರೆಂದು ಹೇಳಲಾಗಿದೆ.

## ಸೂರತ್ ಬಳಿ ಭೂ ಸತ್ಯಾಗ್ರಹ

### ಅಶೋಕ ಮೆಹತ ಮತ್ತು ೧೦೦೦ ಜನರ ಬಂಧನ

ಸೂರತ್ ಬಳಿ ಪತಿಯಾ ಎಂಬ ಹಳ್ಳಿಯಲ್ಲಿ ನೆನ್ನೆ ಭೂ ಸತ್ಯಾಗ್ರಹವು ಆರಂಭವಾಯಿತು. ಆದಾದ ೨ ಗಂಟೆಗಳ ನಂತರ ಸತ್ಯಾಗ್ರಹದ ನಾಯಕರಾದ ಪ್ರಜಾ ಸಮಾಜವಾದಿಗಳ ಮುಖಂಡ ಅಶೋಕ ಮೆಹತಾ ಮತ್ತು ೧೦೦೫ ಮಂದಿ ಸತ್ಯಾಗ್ರಹಿಗಳನ್ನು ಪೋಲೀಸರು ಬಂಧಿಸಿದರು. ಅವರಲ್ಲಿ ೯೭ ಜನ ಸ್ತ್ರೀಯರೂ ಇರುವರು. ದಸ್ತಗಿರಿಯಾಗಿರುವವರಲ್ಲಿ ಅಶೋಕ ಮೆಹತಾರವರ ಸಹೋದರಿ ಶಾಂತಿ, ಪುರಾಫ್, ಬೊಂಬಾಯಿ ಶಾಸನ ಸಭಾ ಸದಸ್ಯ ಡಾ॥ ಅಮೂಲ್ ದೇಸಾಯಿ ಮುಂತಾದವರು ಇರುವರು. ಸತ್ಯಾಗ್ರಹಿಗಳು ಜಮೀನುದಾರರಿಗೆ ಸೇರಿದ ಹುಲ್ಲುಗಾವಲು ಪ್ರದೇಶಕ್ಕೆ ನೆನ್ನೆ ಮಧ್ಯಾಹ್ನ ಹೋಗಿ ಅಲ್ಲಿ ಉಳಲೂ ಮತ್ತು ಅಗೆಯಲೂ ಪ್ರಾರಂಭಿಸಿದರೆಂದೂ, ಜಮೀನುದಾರರು ಈ ಬಗ್ಗೆ ಸರ್ಕಾರಕ್ಕೆ ದೂರನ್ನಿತ್ತರೆಂದೂ ಹೇಳಲಾಗಿದೆ. ದಸ್ತಗಿರಿಯಾಗಿರುವವರಲ್ಲಿ ರತನ್‌ಜಿ ಎಂಬ ೮೦ ವರ್ಷದ ಆದಿವಾಸಿ ವೃದ್ಧನೂ, ೭೦ ವರ್ಷದ ಮಂಗಲ್ ದಾಜಿ ಎಂಬ ರೈತನೂ ಇರುವರು. ಈ ತಾಲ್ಲೂಕಿನಲ್ಲಿರುವ ಆಗಾಧವಾದ ಹುಲ್ಲುಗಾವಲುಗಳನ್ನು ವ್ಯವಸಾಯ ಮಾಡಿ, ಆ ಮೂಲಕ ಜಮೀನು ಇಲ್ಲದವರಿಗೆ ಉದ್ಯೋಗ ಕೊಡಿಸುವುದೇ ಸತ್ಯಾಗ್ರಹದ ಉದ್ದೇಶವೆಂದು ಹೇಳಲಾಗಿದೆ.

## ರಷ್ಯದಲ್ಲಿ ಮತ್ತೊಂದು ಅಣು ಬಾಂಬಿನ ಸಿಡಿತ

ಕಳೆದ ತಿಂಗಳು ೨೩ ನೇ ತಾ॥ ರಷ್ಯದಲ್ಲಿ ಮತ್ತೊಂದು ಅಣು ಬಾಂಬಿನ ಸಿಡಿತವು ನಡೆದಿರುವುದಾಗಿ ಅಮೆರಿಕದ ಅಣು ಶಕ್ತಿ ಸಮಿತಿಯವರು ಪ್ರಕಟಿಸಿರುತ್ತಾರೆ. ಅಮೆರಿಕದಲ್ಲಿ ತಯಾರಾಗಿರುವ ಅಣು ಬಾಂಬಿನ ಶಕ್ತಿಗೆ ರಷ್ಯದ ಬಾಂಬು ಸಮಾನವಾಗಿರುವುದೆಂದು ಸಮಿತಿಯವರು ಭಾವಿಸಿರುತ್ತಾರೆ.

## ಸಿಂಹಳದ ಸರ್ಕಾರಕ್ಕೆ ವಿಶ್ವಾಸದ ಓಟು

ಸಿಂಹಳದ ಪ್ರತಿನಿಧಿಗಳ ಸಭೆಯಲ್ಲಿ ವಿರೋಧ ಪಕ್ಷದವರು ಮಂಡಿಸಿದ್ದ ಅವಿಶ್ವಾಸ ಸೂಚಕ ನಿರ್ಣಯವು ನೆನ್ನೆ ೫೯-೩೭ ಓಟುಗಳಿಂದ ತಿರಸ್ಕೃತವಾಗಿ ಸರ್ಕಾರಕ್ಕೆ ಜಯವಾಗಿದೆ.

### ಜೂಜಾಟಕ್ಕೆ ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ

ಶಿವಣ್ಣ, ವಿ ಶ್ರೀನಿವಾಸ್, ಎಸ್ ನಾರಾಯಣಸ್ವಾಮಿ, ರಾಮು, ವಿಶ್ವ, ಕೃಷ್ಣಪ್ಪ, ಮದನ್, ಪಿ ಜಿ ಶಿವಣ್ಣ, ಆರ್ ಸುಂದರರಾವ್, ಲಕ್ಷ್ಮೀನಾರಾಯಣ, ಬಿ ನರಸಿಂಹಯ್ಯಂಗಾರ್, ರಾಜಗೋಪಾಲ್, ವೆಂಕಟಯ್ಯ, ನರಸಿಂಹಯ್ಯ, ಕೆ ನಾಗರಾಜ್‌ರವರುಗಳು ಉಡುಪಿ ಆನಂದ ಭವನದ ಮೇಲೆ ಜೂಜಾಡುತ್ತಿದ್ದುದಕ್ಕಾಗಿ ನಗರದ ಎರಡನೇ ನ್ಯಾಯಾಧೀಶರು ಅವರಿಗೆ ತಲಾ ೨೦ ರೂ ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ ವಿಧಿಸಿರುತ್ತಾರೆ. ಇನ್ನಿಬ್ಬರು ಆಪಾದಿತರ ವಿಚಾರಣೆಯು ಮುಂದುವರಿಯುತ್ತಿದೆ.

## ಹನುಮಂತಯ್ಯನವರಿಗೆ ವೀರಣ್ಣಗೌಡರ ಉತ್ತರ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಹೇಳಿಕೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರು ಉತ್ತರವಿತ್ತು, ಮಂತ್ರಿಮಂಡಲದವರ ಆಡಳಿತದ ಬಗ್ಗೆ ಪೂರ್ಣ ವಿಷಯಗಳನ್ನು ಕಾಲಕ್ರಮೇಣ ಸಾರ್ವಜನಿಕರ ಅವಗಾಹನೆಗೆ ತರಲಾಗುವುದೆಂದು ತಿಳಿಸಿರುತ್ತಾರೆ. ನೆಹರೂರವರಿಂದ ಸಲಹೆಯನ್ನು ತಾವೂ ನಿರೀಕ್ಷಿಸುತ್ತಿರುವುದಾಗಿಯೂ ಅವರು ಹೇಳಿರುವರು.

## ವಿಶ್ವಸಂಸ್ಥೆಯಿಂದ ಕಾಶ್ಮೀರದ ಪ್ರಶ್ನೆ ವಾಪಸಿಲ್ಲ

ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮದ್ ಅಲಿಯವರು ಕರಾಚಿ ರೇಡಿಯೋವಿನಲ್ಲಿ ಮಾತನಾಡಿ, ಕಾಶ್ಮೀರದ ಸಮಸ್ಯೆಯನ್ನು ವಿಶ್ವ ಸಂಸ್ಥೆಯಿಂದ ವಾಪಸು ಪಡೆಯುವ ಪ್ರಶ್ನೆಯೇ ಇಲ್ಲವೆಂದೂ, ಪಾಕಿಸ್ತಾನದ ರಕ್ಷಣಾ ಇಲಾಖೆಯಲ್ಲಿ ಸಿಬ್ಬಂದಿ ಕಡಿತ ಮಾಡುವುದನ್ನು ತಡೆಯಬೇಕೆಂದು ಆಜ್ಞಾಪಿಸಲಾಗಿರುವುದಾಗಿಯೂ ಹೇಳಿದರು.

## ಎರಡು ತಲೆ ಕರು

ಬೇಲೂರಿನ ಒಬ್ಬರ ಮನೆಯ ಹಸುವು ಎರಡು ತಲೆಗಳ ಕರುವೊಂದನ್ನು ಹಾಕಿರುತ್ತದೆ. ಅದನ್ನು ಸ್ಥಳೀಯ ಪಶು ವೈದ್ಯರು ಆಸ್ಪತ್ರೆಗೆ ರವಾನಿಸಿರುತ್ತಾರೆ. ಅನೇಕ ಜನರು ಕರುವನ್ನು ನೋಡಿಕೊಂಡು ಹೋಗುತ್ತಿರುವರು.

## ಭಾರಿ ಕೇಡಿಯ ಬಂಧನ

ಬೆಂಗಳೂರಿನ ನಾರಾಯಣ ರೆಡ್ಡಿ ಉರುಫ್ ನಾರಾಯಣರಾವ್ ಎಂಬ ಭಾರಿ ಕೇಡಿಯನ್ನು ರಾಜಧಾನಿಯ ಕ್ರೈಂ ಬ್ರಾಂಚ್ ಪೋಲೀಸರು ಮೊನ್ನೆ ಬಂಧಿಸಿ, ಅವನು ಕೊಟ್ಟ ವರ್ತಮಾನದ ಮೇಲೆ ಹಲವಾರು ಅಂಗಡಿಗಳಿಗೆ ಸಂಬಂಧಪಟ್ಟ ಪಾತ್ರೆಗಳು, ಬಟ್ಟೆಗಳು ಮುಂತಾದ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ತನಿಖೆ ಮುಂದುವರಿಯುತ್ತಿದೆ. ಇವನಿಗೆ ಹಿಂದೆ ಅನೇಕ ಬಾರಿ ಶಿಕ್ಷೆಯಾಗಿತ್ತು.

## ಕನ್ಯಾಪಹಾರ ಮತ್ತು ಮಾರಾಟಕ್ಕಾಗಿ ದಸ್ತಗಿರಿ

ಮೈಸೂರು ೨

ಮೈಸೂರು ನಗರ ಪೋಲೀಸರು ಹೈದರಾಬಾದು ಪೋಲೀಸರ ಸೂಚನೆ ಪ್ರಕಾರ, ಸುಬ್ಬಯ್ಯ ಉರುಫ್ ಸುಬ್ಬಯ್ಯ ಶೆಟ್ಟಿ ಎಂಬ ಮಂಡಿ ನಿವಾಸಿಯನ್ನು ಮೊನ್ನೆ ದಸ್ತಗಿರಿ ಮಾಡಿ ನೆನ್ನೆ ಜೈಲು ರಿಮ್ಯಾಂಡು ತೆಗೆದುಕೊಂಡರು. ಜಯಲಕ್ಷ್ಮಿ ಎಂಬ ಹುಡುಗಿಯನ್ನು ಆತನು ಅಪಹರಿಸಿ, ಹೈದರಾಬಾದಿನಲ್ಲಿ ಮಾರಿದುದಾಗಿ ವರದಿಯಾಗಿದೆ.

○ ಮೈಸೂರು ಮಹಾರಾಜಾ ಕಾಲೇಜಿನಲ್ಲಿರುವ ಕನ್ನಡ ಅಧ್ಯಾಪಕ ಶ್ರೀ ಕೆ ವಿ ರಾಘವಾಚಾರ್ಯರಿಗೆ ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರರಾಗಿ ಬಡ್ತಿ ಕೊಡಲಾಗಿದೆ. ಬೇರೆ ಕಡೆಗೆ ಕಳುಹಿಸಲ್ಪಟ್ಟಿರುವ ಶ್ರೀ ಎಸ್ ಎ. ನಿರಂಜನವರ ಸ್ಥಾನದಲ್ಲಿ ಶ್ರೀ ಹೆಚ್ ಕೆ ರಾಜಾರಾಯರನ್ನು ಅಸಿಸ್ಟೆಂಟ್ ಫಿಲಾಸಫಿ ಪ್ರೊಫೆಸರಾಗಿ ನೇಮಿಸಲಾಗಿದೆ.

## ಕೆನಡದ ಒಂದು ಪ್ರಾಂತದಲ್ಲಿ ೧೧೫ ಕಡೆ ಕಾಡ್ಗಿಚ್ಚುಗಳು

ಕೆನಡದ ಆಂಟೇರಿಯೊ ಪ್ರಾಂತದಲ್ಲಿ ಕಳೆದ ೨೦ನೇ ತಾ|| ಸಾವಿರ ಜನ ಬೆಂಕಿ ಆರಿಸುವವರು ವಿಮಾನ ಹೆಲಿಕಾಪ್ಟರ್ ಮತ್ತು ಟ್ರಕ್ ಡೋಜರುಗಳ ಸಹಾಯದಿಂದ ಆ ಪ್ರಾಂತದ ಕಾಡುಗಳಲ್ಲಿ ಉಂಟಾದ ೧೧೫ ಬೆಂಕಿ ಪ್ರಕರಣಗಳನ್ನು ಶಮನ ಮಾಡುವುದರಲ್ಲಿ ಉದ್ಯುಕ್ತರಾಗಿದ್ದರೆಂದು ಹೇಳಲಾಗಿದೆ ಆ ಪೈಕಿ ೨೨ ಕಡೆ ಉಂಟಾದ ಬೆಂಕಿಗಳನ್ನು ಹತೋಟಿಗೆ ತರಲು ಅವರಿಗೆ ಸಾಧ್ಯವಾಗಲಿಲ್ಲ ಈ ಕಾಡುಗಳಲ್ಲಿ ೩ ಜನರ ಪ್ರಾಣ ಬಿಟ್ಟವರು ಬೇಸಿಗೆಯ ಬಿಸಿಲ ಸಿಡಿಲುಗಳಿಂದ ಕಾಡಿನ ಎರಡು ಮತ್ತು ವಳಿಗಳೇ ಈ ಅನಾಹುತಗಳಿಗೆ ಕಾರಣವೆಂದು ಹೇಳಲಾಗಿದೆ

## ಸಿದ್ಧಪಡಿಸಿದ ಪಟ್ಟಣಗಳ ರಚನೆ

ಬ್ರಿಟನ್ನಿನ ಮೂವರು ಪ್ರವೀಣರು ಶೀತವಲಯದಿಂದ ಉಷ್ಣವಲಯದವರೆಗೆ ಎಲ್ಲಾ ಕಡೆಗಳಲ್ಲೂ ಆಯಾ ಪ್ರದೇಶಕ್ಕೆ ತಕ್ಕಂತಹ ಸಿದ್ಧಪಡಿಸಿದ ಪಟ್ಟಣಗಳನ್ನು ತಯಾರಿಸಿರುವರು. ಅವರು ತಮ್ಮ ಬಳಿ ನಗರಕ್ಕೆ ಅವಶ್ಯಕವಾದ ಮನೆ ಶಾಲೆ ಆಸ್ಪತ್ರೆ ಕಟ್ಟಡಗಳ ಚೌಕಟ್ಟುಗಳನ್ನು ಸಿದ್ಧಗೊಳಿಸಿ ಇಟ್ಟುಕೊಂಡಿರುವರು. ಕಳೆದ ಮೂರು ವರ್ಷಗಳಿಂದ ೩೦ ಲಕ್ಷ ಪೌಂಡ ಬೆಲೆಯ ಗೃಹನಿರ್ಮಾಣದ ವಸ್ತುಗಳನ್ನು ೩೦ ದೇಶಗಳಿಗೆ ಸರಬರಾಜು ಮಾಡಿದ್ದಾರೆ ಮನೆಗಳಿಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನೂ ಒಂದು ಕಡೆಗೆ ರವಾನಿಸುವ ಅವಶ್ಯಕತೆ ಇಂದಿ, ಆಯಾ ಸ್ಥಳಗಳಲ್ಲಿ ದೊರೆಯುವ ಸಾವ ಗ್ರಿಗಳಿಂದ ಗೋಡೆ ಮತ್ತು ನೆಲಗಟ್ಟಿನ ವಸೆಗಳನ್ನು ನಿರ್ಮಿಸಿಕೊಳ್ಳಬಹುದಾಗಿದೆ ಉಕ್ಕಿನ ಚೌಕಟ್ಟುಗಳನ್ನು ಮಾತ್ರ ತರಿಸಿ ಮಾಡಿಕೊಳ್ಳಬೇಕು ಪ್ರವೀಣರು ಆಫ್ರಿಕದ ಕಾವಿ ಕೋಸ್ಟ್ ರಾಜ್ಯದ ಬೇರೆ ಎಂಬಲ್ಲಿ ಸುಮಾರು ೧೦೦೦ ಭವನಗಳನ್ನು ಕಟ್ಟಿರುವರು

### ಶ್ರೀ ಕೃಷ್ಣ ಜಯಂತಿ

ರಾಜಧಾನಿಯ ಮಹಾರಾಜಾ ಕಾಲೇಜ್ ಹಾಸ್ಟಲಿನಲ್ಲಿ ಶ್ರೀ ಕೃಷ್ಣಜಯಂತಿಯನ್ನು ಮೊನ್ನೆ ದಿನ ನೆರವೇರಿಸಲಾಯಿತು ಕಾಲೇಜು ಪ್ರಿನ್ಸಿಪಾಲರೂ ಮತ್ತು ಹಾಸ್ಟಲ್ ಅಧ್ಯಕ್ಷರೂ ಆದ ಶ್ರೀ ವಿ ಎಲ್ ಡಿಸೋಜರವರು ಅಧ್ಯಕ್ಷತೆ ವಹಿಸಿದ್ದರು ಹಾಸ್ಟಲ್ ವಾರ್ಡನ್ ಶ್ರೀ ಬಿ ಕೆ ಸಂಬಿಯಾರರು ಸ್ವಾಗತ ಬಯಸಿದರು ವಿದ್ಯಾರ್ಥಿಯಾದ ಶ್ರೀ ಗಣಪತಿಯವರಿಂದ ಪ್ರಾರ್ಥನೆಯಾದನಂತರ ಮಹಾರಾಜಾ ಕಾಲೇಜು ತರ್ಕಶಾಸ್ತ್ರ ಅಧ್ಯಾಪಕರಾದ ಡಾ|| ಪುರುಷೋತ್ತಮರವರು ಹಿಂದುಗಳು ಶ್ರೀ ಕೃಷ್ಣ ಜಯಂತಿಯನ್ನು ನೆರವೇರಿಸುವ ಉದ್ದೇಶ, ಕೃಷ್ಣನ ಅವತಾರ, ಬಗ್ಗೆ ತಲೆ ಮೇಲಿರುವ ನವಿಲುಗರಿ ಮತ್ತು ಕೊಳಲು ಇವುಗಳ ಸಂಕೇತವನ್ನು ಕುರಿತು ಭಾಷಣ ಮಾಡಿದರು ವಿದ್ಯಾರ್ಥಿ ಶ್ರೀ ನರಾಯಣರವರಿಂದ ವಂದನಾರ್ಪಣೆಯಾದನಂತರ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಭೆ ಮುಕ್ತಾಯವಾಯಿತು

### ಸಂಗೀತ

ರಾಜಧಾನಿಯ ಚೆಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೃಷ್ಣಜಯಂತಿ ಮಹೋತ್ಸವದ ಅಂಗವಾಗಿ ನಾಳೆ ಸಂಜೆ ೭|| ಗಂಟೆಗೆ ಶ್ರೀ ಟಿ. ಆರ್ ಶ್ರೀನಿವಾಸರವರ ಸಂಗೀತವು ಶ್ರೀ ಎಸ್ ಮಹದೇವಪ್ಪನವರ ಪಿಟೀಲು ಮತ್ತು ಶ್ರೀ ಕೆ ಹರಿಶ್ಚಂದ್ರ-ಬಾಬು ರವರುಗಳ ಮೃದಂಗದ ಸಮೇತ ನಡೆಯುವುದು

### ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಇದೇ ೬ ನೇ ತಾ ಭಾನುವಾರ ಸಂಜೆ ೬|| ಗಂಟೆಗೆ ನಿಲಯದ ಹೊಸಕಟ್ಟಡದಲ್ಲಿ ಮಾಡುವರು ಕಸ್ತೂರಿಬಾ ಟ್ರಸ್ಟಿನ ಮೈಸೂರು ಶಾಖಾ ಪ್ರತಿನಿಧಿ ಶ್ರೀ ತಿ ಚಿಕ್ಕೋಳಿ ಬಾಸಪ್ಪನವರು ಅಧ್ಯಕ್ಷತೆ ವಹಿಸುವರು

## ವೀರಣ್ಣಗೌಡರ ಆಪಾದನೆಗೆ ಉತ್ತರ

### ಮುಖ್ಯಮಂತ್ರಿ ಕೆ. ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೨

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿಕೆಯೊಂದನ್ನಿತ್ತು ಈ ರೀತಿ ತಿಳಿಸಿದ್ದಾರೆ

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ಕೆ ವೀರಣ್ಣಗೌಡರ ಹೇಳಿಕೆಯನ್ನು ಓದಿ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗಿದೆ ಕಾಂಗ್ರೆಸ್ ಇತಿಹಾಸದಲ್ಲೇ ಇಂತಹ ಹೇಳಿಕೆಯು ಹೊರಬಿದ್ದಿಲ್ಲ ಈ ಹೇಳಿಕೆಗೆ ಉತ್ತರ ಕೊಡುವುದು ಸುಲಭವಾದ ಕೆಲಸ ಆದರೆ ಇಂದೇ ನನ್ನ ಉತ್ತರವನ್ನು ಕೊಡುವುದು ಸೂಕ್ತವಲ್ಲ ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಹರಲಾಲ್ ನೆಹರೂರವರು ಈ ವಿಷಯಗಳನ್ನೆಲ್ಲಾ ಪರಿಶೀಲಿಸುತ್ತಿದ್ದಾರೆ ಆದುದರಿಂದ ಅವರ ಅನುಮತಿ ಇಲ್ಲದೆ ನಾನು ಉತ್ತರ ಕೊಡುವುದು ಕಾಂಗ್ರೆಸ್ ಶಿಸ್ತಿಗೆ ಅನುಗುಣವಾಗಿರುವುದಿಲ್ಲ.

ಈ ಮಂತ್ರಿಮಂಡಲವು ತೃಪ್ತಿಕರವಾಗಿ ಕೆಲಸ ಮಾಡಿದೆಯೇ ಇಲ್ಲವೇ ಎಂಬುದು ಗೌಣವಾದ ವಿಚಾರವೇನೂ ಅಲ್ಲ ಕಾಂಗ್ರೆಸ್ ಸಂಸ್ಥೆಗೂ, ಮೈಸೂರಿನ ಮಹಾ ಜನತೆಗೂ ಶ್ರೀ ವೀರಣ್ಣಗೌಡರ ಹೇಳಿಕೆಯನ್ನು ಅರ್ಥ ಮಾಡಿಕೊಳ್ಳಬಲ್ಲ ತಿಳುವಳಿಕೆ ಇದೆ ಎಂದು ನನ್ನ ನಂಬಿಕೆ

## ಸ್ಥಳದಲ್ಲೇ ವ್ಯಾಜ್ಯ ಪರಿಹಾರದ ನ್ಯಾಯಾಲಯಗಳು

ವ್ಯಾಜ್ಯಗಳನ್ನು ನ್ಯಾಯಾಸ್ಥಳದಲ್ಲೇ ಶೀಘ್ರದಲ್ಲಿ ಪಂಚಾಯಿತದಾರರು ಮುಂತಾದವರ ಗ್ರಾಮದ ವಿಚಾರಣೆ ನಡೆಸಿ ತೀರ್ಮಾನ ಕೊಡುವ ಪದ್ಧತಿಯನ್ನು ಸ್ಟೇಟ್ ಸರ್ಕಾರದವರು ಜಾರಿಗೆ ತರಲಿರುವರೆಂದು ಗೊತ್ತಾಗಿದೆ ಸಾರ್ವಜನಿಕರ ಕುಂದು ಕೊರತೆಗಳನ್ನೂ ಇದೇ ರೀತಿ ವಿಚಾರಿಸಿ ಪರಿಹರಿಸಲಾಗುವುದು

## ನೆಲಮಾಳಿಗೆಯಲ್ಲಿ ವಾಹನಗಳ ನಿಲ್ದಾಣ

ಲಂಡನ್ನಿನಲ್ಲಿ ವಾಹನಗಳ ನಿಲ್ಲಲು ಸ್ಥಳದ ಅಭಾವವು ಬಹಳ ಹೆಚ್ಚಾಗುತ್ತಿರುವುದರಿಂದ ನೆಲಮಾಳಿಗೆಯಲ್ಲಿ ಎರಡಂತಸ್ತಿನ ವಾಹನ ನಿಲ್ದಾಣಗಳನ್ನು ಏರ್ಪಡಿಸುವ ಆಲೋಚನೆಯಿದೆಯೆಂದು ಗೊತ್ತಾಗಿದೆ ಇದಕ್ಕೆ ೫೦ ಲಕ್ಷ ಪೌಂಡು ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ

### ಚಾಮರಾಜನಗರದಲ್ಲಿ ಶನಿದೇವರ ಪಲ್ಲಕ್ಕಿ ಉತ್ಸವ

ಚಾಮರಾಜನಗರದ ದೊಡ್ಡ ಅರಸಿನವರ ಕೊಳದ ಶ್ರೀ ಆಂಜನೇಯ ಸ್ವಾಮಿಯವರ ದೇವಾಲಯದಲ್ಲಿ ಶನಿ ಮಹಾತ್ಮರ ಪಲ್ಲಕ್ಕಿ ಉತ್ಸವವು ಇದೇ ೫ನೇ ತಾ|| ಶನಿವಾರ ನಡೆಯುವುದು ಅದರ ಅಂಗವಾಗಿ ಅಭಿಷೇಕ, ಪಾರಾಯಣ ಪುರಾಣ ಶ್ರವಣ, ಮಹಾ ಮಂಗಳ ರತಿಯು ಬೆಳೆದು ಸಂಜೆ ೭|| ಗಂಟೆಗೆ ದೀಪಾರಾಧನೆಯಾದನಂತರ ಪಲ್ಲಕ್ಕಿ ಉತ್ಸವವು ನೆರವೇರುವುದು. ನಾದಸ್ವರ ಬ್ಯಾಂಡ್ ಹಿಂಚುಗುಡಿ ಎ. ಕೆ ಚಿಕ್ಕ ಕೃಷ್ಣಪಿಳ್ಳೆಯವರ ಮತ್ತು ಅವರ ಪುತ್ರ ಶ್ರೀ ಎ ಪಿ ಕಂದಸ್ವಾಮಿ ಪಿಳ್ಳೆಯವರ ನಾದಸ್ವರವೂ ಶ್ರೀ ಪಿ ಪಳನಿವೇಲು ಪಿಳ್ಳೆ, ವಿ|| ತಿರುಮಲೆವಾಸಲ್ ಮತ್ತು ವಿ|| ಷಣ್ಮುಗಸುಂದರಂ ಪಿಳ್ಳೆಯವರ ಡೊಲು ಇವೆ

SRI GAYATHRI
TALKIES
TO DAY & TO-MORROW
K. Arthur Rank's
VALLEY OF EAGLES
Starring J... ... ...
NEXT CHANGE -
Arthur Rank's
ENCORE

## ರೀಟಾ ಹೇವರ್ತ್-ಅಲಿಖಾನರ ವ್ಯವಹಾರದಲ್ಲಿ ಒಪ್ಪಂದ

ಅಲಿಖಾನರೊಡನೆ ದಾಂಪತ್ಯ ವಿಚ್ಛೇದವನ್ನು ಪಡೆದುಕೊಂಡಿರುವ ಸಿನಿಮಾ ನಟಿ ರೀಟಾ ಹೇವರ್ತ್‌ಳು ತಮ್ಮ ಕಡೆಯ ವಕೀಲರುಗಳು ತಯಾರಿಸಿರುವ ಹಣಕಾಸಿನ ವ್ಯವಹಾರದ ಪತ್ರಗಳನ್ನು ಪರಿಶೀಲಿಸುತ್ತಿರುವುದಾಗಿ ಹೇಳಲಾಗಿದೆ ಅವರ ಮಗಳು ಯಾಸ್ಮಿನ್ನಳ ಪೋಷಣೆಗಾಗಿ ೨೦ ಸಾವಿರ ಡಾಲರು ಹಣವನ್ನು ವರ್ಷಂಪ್ರತಿ ಅಲಿಖಾನರು ಕೊಡುವಂತೆಯೂ, ೧ ಲಕ್ಷ ಡಾಲರು ಹಣವನ್ನು ನಿಧಿ ರೂಪದಲ್ಲಿ ಇಡುವಂತೆಯೂ ಸೂಚಿಸಲಾಗಿರುವುದೆಂದು ಹೇಳಲಾಗಿದೆ

## ಚಲಿಸುವ ಪ್ರಾಥಮಿಕ ಶಾಲೆಗಳು

ಬಡೋಡದ ಜಿಲ್ಲಾ ಶಾಲಾ ಬೋರ್ಡಿನವರು ಹೊಸದೊಂದು ವಿದ್ಯಾ ಸುಧಾರಣಾ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ ಅದರ ಪ್ರಕಾರ, ಹಿಂದುಳಿದ ಹಳ್ಳಿಗಳ ಸಮೂಹದಲ್ಲಿ ಚಲಿಸುವ ಪ್ರಾಥಮಿಕ ಶಾಲೆಗಳನ್ನು ತೆಗೆಯುವಂತೆ ಸೂಚಿಸಲಾಗಿದೆ ಕಟ್ಟಡಗಳ ಅವಶ್ಯಕತೆಯಿಲ್ಲದೆ ಎಲ್ಲರಿಗೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಲಿಸಲು ಅವಕಾಶವಾಗುವುದೆಂದೂ, ಈ ಯೋಜನೆಯನ್ನು ಕಾರ್ಯಗತ ಮಾಡಿದರೆ ೩,೦೦೦ ಜನರಿಗೆ ಉಪಾಧ್ಯಾಯ ವೃತ್ತಿಯು ದೊರೆತು ನಿರುದ್ಯೋಗವು ಪರಿಹಾರವಾಗುವುದೆಂದೂ ಭಾವಿಸಲಾಗಿದೆ

### " ತಾರಾಲೋಕ "

ರಾಜಧಾನಿಯಲ್ಲಿ ಪ್ರಕಟವಾಗುತ್ತಿರುವ ಕನ್ನಡ ಮಾಸ ಪತ್ರಿಕೆ "ತಾರಾಲೋಕದ" ಪ್ರಥಮ ವಾರ್ಷಿಕ ಸಂಚಿಕೆಯು ನಮ್ಮ ಕೈಸೇರಿದೆ ಇದು ಕೇವಲ ತಾರೆಯರ ವರ್ಣರಂಜಿತ ಚಿತ್ರಗಳನ್ನು ಮಾತ್ರ ಪ್ರಕಟಿಸದೆ, ಭಾರತೀಯರ ಜನಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒಳಗೊಂಡಿರುವ ಪತ್ರಿಕೆಯಾಗಿದೆ ಅದಕ್ಕಾಗಿ ಸಾಂಸ್ಕೃತಿಕ ವಿಭಾಗವೊಂದನ್ನು ತೆರೆಯಲಾಗಿರುವುದೆಂದೂ ಸಂಪಾದಕರಾದ ಶ್ರೀ ಬಿ ವಿ ನರಸಿಂಹಾಚಾರ್ಯರು ತಿಳಿಸಿರುತ್ತಾರೆ ಕನ್ನಡ ಭಾಷಾಭಿಮಾನಿಗಳು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ ಬೆಲೆ ಆಣೆ

### ಬ್ಯಾಡ್‌ಮಿಂಟನ್ ಸ್ಪರ್ಧೆಯಲ್ಲಿ ಬಹುಮಾನ ಹಂಚಬೇಕು

ಮೈಸೂರು ಶ್ರೀ ಕೃಷ್ಣಾ ಸ್ಪೋರ್ಟ್ಸ್‌ನವರು ೫೦-೫೧ ನೇ ಸಾಲಿನ ಬ್ಯಾಡ್‌ಮಿಂಟನ್ ಸ್ಪರ್ಧೆಯನ್ನು ಏರ್ಪಡಿಸಿದ್ದುದರ ಅಂಗವಾಗಿ, ಕಳೆದ ಡಿಸೆಂಬರ್ ೨೩ ರಲ್ಲಿ ಪಂದ್ಯವು ನಡೆದು ಗೆದ್ದವರಿಗೆ ಇನ್ನೂ ಬಹುಮಾನವನ್ನು ಹಂಚಿಲ್ಲವೆಂದೂ, ಈ ಬಹುಮಾನಕ್ಕೆಂದು ಹೇಳಿ ಚಲನಚಿತ್ರದ ಸಹಾಯಾರ್ಥ ಪ್ರದರ್ಶನವೊಂದನ್ನೂ ಏರ್ಪಡಿಸಲಾಗಿತ್ತೆಂದೂ, ಕ್ರೀಡೆಯ ಏರ್ಪಾಡಿಗೆ ಸಂಬಂಧಿಸಿದವರು ಈಗಲಾದರೂ ಅದಷ್ಟು ಜಾಗ್ರತೆ ಬಹುಮಾನ ವಿನಿಯೋಗ ಮಾಡಬೇಕೆಂದೂ ಕೋರಿ, ರಾಜಧಾನಿಯ ಗಾಂಧಿ ಬ್ಯಾಡ್‌ಮಿಂಟನ್ ಕ್ಲಬ್ಬಿನವರು ಪತ್ರ ಬರೆದಿರುತ್ತಾರೆ

ಒಲಂಪಿಯಾ ಟಾಕೀಸ್
ಕಡೇ ದಿನ ಪತಿತ
1-9-1953ರಿಂದ ಪ್ರತಿ ದಿನ ೩ ಆಟಗಳು
ಜೈಂ ಫಿಲಂಸ್ ರವರ ★ ಬಾಪ್ಪಿ ★
ಪಾತ್ರ - ರಂಜನ್, ಸಾವಿತ್ರಿ, ಅನ್ವರ್, ಶ್ಯಾಮ ಸವಿ ಮತ್ತು ಮುಂತಾದವರು

Edited, Printed and Published by A R Nagarajan at Sadhvi Press D.Subbiah Road Mysore

## ಹೈದರಾಬಾದಿನಲ್ಲೂ ಪತ್ರಿಕೋದ್ಯಮದಲ್ಲಿ ಶಿಕ್ಷಣ

ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಶೀಘ್ರದಲ್ಲೇ ಪತ್ರಿಕೋದ್ಯಮ ಶಿಕ್ಷಣದ ವ್ಯವಸ್ಥೆ ಮಾಡಲಾಗುವುದೆಂದೂ, ಅಲ್ಲಿನ ವೈಸ್ ಛಾನ್ಸೆಲರು ಈ ಬಗ್ಗೆ ಯೋಜನೆಯನ್ನು ಪೂರ್ಣಗೊಳಿಸುತ್ತಿರುವರೆಂದೂ ವರದಿಯಾಗಿದೆ

## ಬಾಲಕಿಯಿಂದ ಬಾಲಕನ ಕೊಲೆ

ಕಾರವಾರ ಜಿಲ್ಲೆ ಅಳ್ನಾವರ್ ಎಂಬಲ್ಲಿ ೧೪ ವರ್ಷದ ಬಾಲಕಿಯು ೧೦ ವಯಸ್ಸಿನ ಬಾಲಕನನ್ನು ಕೊಲೆ ಮಾಡಿರುವಳೆಂದು ಅವಳನ್ನು ದಸ್ತಗಿರಿ ಮಾಡಲಾಗಿದೆ ಅದೇ ಜಿಲ್ಲೆಯಲ್ಲಿ ನುಸ್ತ್ರಾಂದ ಕಡೆ ಆಳಿಯನೊಬ್ಬನು ಅತ್ತೆಯನ್ನು ಕೊಂದುಹಾಕಿ ಪರಾರಿಯಾಗಿರುವನೆಂದು ಹೇಳಲಾಗಿದೆ

### ಗಣಪತಿ ಪೂಜೆ

ರಾಜಧಾನಿಯ ಚಾಮುಂಡಿಪುರದ ಶ್ರೀ ವಿನಾಯಕ ಮಂಡಲಿಯಲ್ಲಿ ಶ್ರೀ ಗಣಪತಿ ಉತ್ಸವವನ್ನು ವಿಜೃಂಭಣೆಯಿಂದ ನಡೆಸಲು ಏರ್ಪಾಡಾಗುತ್ತಿವೆ ಅದರ ಅಂಗವಾಗಿ ಭಾಷಣ, ಸಂಗೀತ, ಕ್ರೀಡಾಸ್ಪರ್ಧೆ ಮತ್ತು ಮೆರವಣಿಗೆಗಳನ್ನು ಏರ್ಪಡಿಸಲಾಗಿದೆ ಮಹಾಜನರು ಈ ಕಾರ್ಯಕ್ಕೆ ಸಕಲ ವಿಧವಾದ ಸಹಾಯವನ್ನೂ ಮಾಡುವಂತೆ ಕೋರಲಾಗಿದೆ. ಶ್ರೀ ಶ್ರೀನಿವಾಸ ಮೂರ್ತಿಯವರನ್ನು ಅಧ್ಯಕ್ಷರಾಗಿ ಮಂಡಲಿಯು ಆರಿಸಲಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ಹೆಚ್ ಆರ್ ನಾಗರಾಜಶಾಸ್ತ್ರಿ ದಿವ್ಯಪ್ರಬಂಧ ೬-೩೦ ಎಸ್ ಎಂ ರಾಮಚಂದ್ರಾಚಾರ್ ಸಂಗೀತ ಮಧ್ಯಾಹ್ನ ೧-೪೦ ಮತ್ತು ೧-೫೦ ಗ್ರಾಮಫೋನು ... ೨ ಎಸ್ ಎನ್ ರಾಮಚಂದ್ರಾಚಾರ್ ಸಂಗೀತ ಸಂಜೆ ೫-೪೦ ಮತ್ತು ೮ ಎಸ್ ಶ್ರೀಮರಾವ್ ಪಿಟೀಲು ೬ ಹಿಂದಿ ಶಿಕ್ಷಣ ೬-೧೫ ಹೆಚ್. ಎಂ ಸುಶೀಲ ಭಾರತ ವಾಣಿ ... ಸಂಗೀತ ೭ ೪೦ ಹಿಂದಿ ಭಜನೆ ೮-೪೦ ... ೯-೧೫ ಪಿಟೀಲು ಗಿಟಾರ್ ಮತ್ತು ಸಿತಾರ್ ೯-೪೦ ನಿನ್ನ ಮೆಚ್ಚಿನ ಗೀತೆಗಳು

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಆಂದ | ರೂ.ಗೆ |
|---|---|---|
| ಕಡಲೇಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | |
| ಉದ್ದು | [illegible] | [illegible] |
| ಹಲಸಂದೆ | [illegible] | [illegible] |
| ಸಾಸಿವೆ | [illegible] | [illegible] |
| ಹುಣಸೇಹಣ್ಣು | [illegible] | [illegible] |
| ತೆಂಗಿನಕಾಯಿ ೧೧೦೦ಕ್ಕೆ | [illegible] | [illegible] |

## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ ಕಾಂಪೌಂಡ, ನಲ್ಲಿ, ದೀಪ, ಫ್ಲಷಿಂಗ್ ಇವೆ

"ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿರಿ

## ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಹಣವನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಏಜೆಂಟರು, .. ಮೈಸೂರು

SRI GANESHA TALKIES
FROM 2 9 53
For 2 Days



ರಿಜಿಸ್ಟರ್ ನಂ. 792 ॥ ಶಂಕರ ಮಾಕರಂ ॥ ಇಂದಿನ ಪತ್ರಿಕೆ 3 ಕಾಸು

ಗೌರಿ ಹಬ್ಬಕ್ಕೆ ಬೇಕಾದ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು
ನೂಲಿನ ರವುಕಾರಿ
ಸೀರೆಗಳು ಬಂದಿವೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

# ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

SADHVI · LEADING NATIONALIST DAILY OF MYSORE

ಸಂಪುಟ ೧೨ ] MYSORE : THUR DAY 3-9-1953 :: ಮೈಸೂರು : ಗುರುವಾರ ೩-೯-೧೯೫೩ [ ಸಂಚಿಕೆ ೩೨

# ಜಯಪುರದಲ್ಲಿ ತೆರಿಗೆಗಳ ವಿರುದ್ಧ ಹರತಾಳ್; ೯೦ ಬಂಧನ

## ಆಲ್ಪ್ಸ್ ಪರ್ವತಕ್ಕೆ ತಗುಲಿ ವಿಮಾನಾಪಘಾತ

ಫ್ರಾನ್ಸಿನ ರಾಜಧಾನಿ ಪ್ಯಾರಿಸ್ಸಿನಿಂದ ಇಂಡೋಚೀಣದ ಸೈಗಾನಿಗೆ ನೆನ್ನೆ ಹೊರಟ ವಿಮಾನವೊಂದು ನೀಸ್ ನಗರದ ಬಳಿ ಆಲ್ಪ್ಸ್ ಪರ್ವತ ಶಿಖರಕ್ಕೆ ಬಡಿದು ಒಡೆಯಿತು. ಅದರಲ್ಲಿದ್ದ ೮ ತಿಂಗಳ ಮಗು, ೭೩ ವರ್ಷದ ಫ್ರೆಂಚ್ ಪಿಟೀಲು ವಾದನಗಾರ ಮುಂತಾದ ೩೩ ಮಂದಿ ಯಾತ್ರಿಕರೂ ೮ ಜನ ಚಾಲಕರೂ ಮೃತಪಟ್ಟರು.

## ಅಂಚೆ ಪೆಟ್ಟಿಗೆಯಲ್ಲಿ ಹಾವು

ಇಂದೋರಿನಲ್ಲಿ ಒಬ್ಬ ಅಂಚೆಯವನು ಕಳೆದ ಭಾನುವಾರ ಕಾಗದಗಳ ಪೆಟ್ಟಿಗೆಯ ಬಾಗಿಲನ್ನು ತೆಗೆದಾಗ ಒಳಗಿನಿಂದ ಬುಸ್ಸೆಂಬ ಶಬ್ದವು ಕೇಳಿಬಂದು ಅವನಿಗೆ ಗಾಬರಿಯಾಯಿತೆಂದೂ, ಅವನು ಕಾಗದಗಳನ್ನು ತೆಗೆದುಕೊಳ್ಳಲು ಕೈ ಹಾಕುವುದಕ್ಕೆ ಅಂಜಿ ಹಾಗೆಯೇ ನಿಂತಿದ್ದಾಗ ಒಳಗಿನಿಂದ ಒಂದು ಭಾರಿ ಹಾವು ಹೊರಕ್ಕೆ ಬಂದು ಪಕ್ಕದಲ್ಲಿದ್ದ ಪೊದೆಯೊಳಗೆ ಹರಿದು ಹೋಯಿತೆಂದೂ ವರದಿಯಾಗಿದೆ.

## ಕತ್ತರಿಸಿದ ಕಾಲನ್ನು ಕೂಡಿಸಲು ರಷ್ಯದಲ್ಲಿ ಶಸ್ತ್ರ ಚಿಕಿತ್ಸೆ

ರಷ್ಯದ ರಾಜಧಾನಿ ಮಾಸ್ಕೋವಿನ ಇಬ್ಬರು ವೈದ್ಯರು ನಾಯಿಯೊಂದರ ಕತ್ತರಿಸಲ್ಪಟ್ಟ ಕಾಲನ್ನು ಪುನಃ ಶಸ್ತ್ರ ಚಿಕಿತ್ಸೆಯ ಮೂಲಕ ಸೇರಿಸುವುದರಲ್ಲಿ ಯಶಸ್ವಿಯಾಗಿರುವರೆಂದು ವರದಿಯಾಗಿದೆ. ಕಾಲನ್ನು ಕತ್ತರಿಸಿದ ೪೦ ನಿಮಿಷಗಳ ನಂತರ ಅದನ್ನು ಪುನಃ ಒಂದುಗೂಡಿಸಲಾಯಿತು. ಈಗ ನಾಯಿಯು ಸುಖವಾಗಿ ಓಡಾಡುತ್ತಿರುವುದೆಂದು ಹೇಳಲಾಗಿದೆ. ಇಂತಹ ಚಿಕಿತ್ಸೆಗಳಿಂದ ಮನುಷ್ಯರಿಗೂ ಬಹಳ ಉಪಯೋಗವಾಗುವುದೆಂದು ಅಭಿಪ್ರಾಯಪಡಲಾಗಿದೆ.

## ಹನುಮಂತ ರೆಡ್ಡಿಯವರ ಅಪೀಲು ವಜಾ

ಮಾಜಿ ಪಣಕಾಸಿನ ಮಂತ್ರಿ, ಶ್ರೀ ಹೆಚ್. ದಾಸಪ್ಪನವರ ಮನೆಗೆ ಅತಿಕ್ರಮ ಪ್ರವೇಶ ಮಾಡಿ, ಅವರನ್ನು ಕೊಲೆ ಮಾಡುವ ಪ್ರಯತ್ನ ನಡೆಸಿದರೆಂಬ ಆಪಾದನೆಯಲ್ಲಿ ಜ್ಯೂರಿಯವರು ಆಪಾದಿತರು ತಪ್ಪಿತಸ್ಥರಲ್ಲವೆಂದು ಕೊಟ್ಟಿದ್ದ ತೀರ್ಪಿನ ವಿರುದ್ಧವಾಗಿ ಬೆಂಗಳೂರು ಸೆಷನ್ಸ್ ನ್ಯಾಯಾಧೀಶರು ಹೈಕೋರ್ಟಿಗೆ ಒಪ್ಪಿಸಿದ್ದ ವ್ಯವಹಾರ ಮತ್ತು ಸೆಷನ್ಸ್ ನ್ಯಾಯಾಧೀಶರ ಆಜ್ಞೆಯ ವಿರುದ್ಧವಾಗಿ ಆಪಾದಿತ ಶ್ರೀ ಹನುಮಂತರೆಡ್ಡಿಯವರು ಮಾಡಿದ್ದ ಅಪೀಲುಗಳನ್ನು ಹೈಕೋರ್ಟಿನವರು ಪರಿಶೀಲಿಸಿ, ಸೆಷನ್ಸ್ ನ್ಯಾಯಾಧೀಶರ ಆಜ್ಞೆಯನ್ನು ಎತ್ತಿಹಿಡಿದು, ಅಪೀಲನ್ನು ವಜಾ ಮಾಡಿರುವರಲ್ಲದೆ, ಆಪಾದಿತರು ೨,೦೦೦ ರೂ ಸ್ವಂತ ಮುಚ್ಚಳಿಕೆ ಮತ್ತು ಅದರಂತೆಯೇ ಸೇರಿ ಒಟ್ಟು ೧,೦೦೦ ರೂ ವಿನ ಎರಡು ಜಾಮೀನುಗಳನ್ನು ಕೊಟ್ಟ ನಂತರ ಪ್ರೊಬೇಷನ್ ಮೇಲೆ ಬಿಡಲು ಆಜ್ಞೆ ಮಾಡಿರುವರಲ್ಲದೆ ೩ ವರ್ಷ ಕಾಲ ಒಳ್ಳೆಯ ನಡತೆಯಿಂದಿದ್ದು ಶಾಂತಿಯನ್ನು ಪಾಲಿಸುವಂತೆಯೂ ಆಜ್ಞಾಪಿಸಲಾಗಿದೆ.

## ಗುಂಡ್ಲುಪೇಟೆ ಪೌರಸಭೆಗೆ ಅಧಿಕಾರಿ

ಗುಂಡ್ಲುಪೇಟೆ ಪೌರಸಭೆಗೆ ಒಬ್ಬ ಅಧಿಕಾರಿಯನ್ನು ನೇಮಿಸಲು ಸರ್ಕಾರದವರು ನಿರ್ಧರಿಸಿರುವರು.

## ಅತ್ಯಾಚಾರಕ್ಕಾಗಿ ಶಿಕ್ಷೆ

ಮೈಸೂರು ೩

ಟಿ. ನರಸೀಪುರ ತಾಲ್ಲೂಕು ಹುಣಸೂರು ಗ್ರಾಮದ ಪರಿವಾರ ಮತದ ೧೪ ವರ್ಷದ ಸಿದ್ಧವ್ವ ಎಂಬ ಹುಡುಗಿಯು ಕೆಲವು ದಿನಗಳ ಹಿಂದೆ ಟಿ. ನರಸೀಪುರದ ಹೋಟೆಲೊಂದಕ್ಕೆ ಹಾಲು ಕೊಟ್ಟು ವಾಪಸು ಬರುತ್ತಿದ್ದಾಗ ಅದೇ ಗ್ರಾಮದ ಮರಿ ಎಂಬುವವನು ದಾರಿಯಲ್ಲಿ ಹುಡುಗಿಯನ್ನು ಎತ್ತಿಕೊಂಡುಹೋಗಿ ಅತ್ಯಾಚಾರ ನಡೆಸಿದನೆಂದು ಟಿ. ನರಸೀಪುರದ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಸ್ಪೆಷಲ್ ಡಿಸ್ಟ್ರಿಕ್ಟ್ ಜಡ್ಜ್ ಶ್ರೀ ಜಿ. ನಟರಾಜನ್‌ರವರು ಮೊನ್ನೆ ತೀರ್ಪಿತ್ತು, ಆಪಾದಿತನಿಗೆ ೪ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಆಪಾದಿತನ ಪರ ಶ್ರೀ ಟಿ. ರಂಗರಾಯರೂ, ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಜಿ. ಶಂಕರ ಶೆಟ್ಟರೂ ವಕಾಲತ್ತು ವಹಿಸಿದ್ದರು.

## ಚಾಕುವಿನಿಂದ ಇರಿದುದಕ್ಕೆ ಶಿಕ್ಷೆ

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ ಹೋಟೇಲಿನ ಚಟ್ನಿ ರಾವ ನಾರಾಯಣ್ ಎಂಬುವನು ಇಡ್ಲಿ ರಾಮನಾರಾಯಣ್ ಎಂಬುವನನ್ನು ಕೆಲವು ದಿನಗಳ ಹಿಂದೆ ಚಾಕುವಿನಿಂದ ಇರಿದು ಗಾಯಗೊಳಿಸಿದನೆಂದು ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಡಿಷನಲ್ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜ್ ಶ್ರೀ ಕೆ. ವಿಶ್ವೇಶ್ವರಯ್ಯನವರು ನೆನ್ನೆ ತೀರ್ಪಿತ್ತು ಆಪಾದಿತನಿಗೆ ೩ ತಿಂಗಳು ಕಠಿಣ ಸಜಾವನ್ನು ವಿಧಿಸಿದರು. ಆಪಾದಿತನ ಪರ ಶ್ರೀ ತಿಮ್ಮೇಗೌಡರೂ, ಸರ್ಕಾರದ ಪರ ಶ್ರೀ ಜಿ. ಶಂಕರಶೆಟ್ಟರೂ ವಕಾಲತ್ತು ವಹಿಸಿದ್ದರು.

## ಲಷ್ಕರ್ ಮೊಹಲ್ಲಾ ದಿನಾಚರಣೆ

ನಗರದ ಪೌರಸಭೆಯ ಆಶ್ರಯದಲ್ಲಿ ಕಳೆದ ಶನಿವಾರ ಲಷ್ಕರ್ ಮೊಹಲ್ಲಾ ದಿನಾಚರಣೆಯು ನೆರವೇರಿತು. ಬೀದಿಗಳ ರಸ್ತೆಗಳ ನಿರ್ಮಲೀಕರಣ, ಗರ್ಭಿಣಿ, ಮತ್ತು ಶಿಶುಗಳ ಪರೀಕ್ಷೆ ಮತ್ತು ಹಾಲಿನ ಹಂಚಿಕೆಯೂ, ಸಂಜೆ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ನಡೆದವು. ಶ್ರೀಗಳಾದ ಬಿ. ಜಿ. ದಾಸ್, ಎಂ. ಆರ್. ಶ್ರೀನಿವಾಸಯ್ಯಂಗಾರ್, ಟಿ. ಸುಬ್ಬಣ್ಣ ಮತ್ತು ಹೆಚ್. ಎಂ. ರುದ್ರಯ್ಯನವರು ಭಾಷಣ ಮಾಡಿ, ನಗರವನ್ನು ಚೊಕ್ಕಟವಾಗಿ ಇಟ್ಟುಕೊಳ್ಳುವುದರ ಆವಶ್ಯಕತೆಯನ್ನು ಒತ್ತಿ ಹೇಳಿದರು.

## ಟೆನ್ನಿಸ್ ಪಂದ್ಯ

ನೆನ್ನೆ ಆರ್ ಜಿ. ಎ. ಟಿ. ಸಿ. ಎ ಟೀಮಿಗೂ ಕ್ವಿಲ್ಟ್ ಇನ್ಸ್ಟಿಟ್ಯೂಟಿನ ಎ ಟೀಮಿಗೂ ಇಂಟರ್ ಟೆನ್ನಿಸ್ ಪಂದ್ಯವು ನಡೆದು ಆರ್. ಬಿ. ಎ. ಟಿ. ಸಿ. ಟೀಮು ೩-೦ ಆಟಗಳಿಂದ ಜಯ ಪಡೆಯಿತು. ರಾಜಧಾನಿಯ ಒಟಿ ಇನ್ಸ್ಟಿಟ್ಯೂಟನ್ನು ಕ್ವಿಲ್ಟ್ ಇನ್ಸ್ಟಿಟ್ಯೂಟಿನ ಬಿ. ಟೀಮಿನವರು ೩-೨ ಆಟಗಳಿಂದ ಸೋಲಿಸಿದರು.

## ಬಾರ್ ಕೌನ್ಸಿಲ್ಲಿಗೆ ನೇಮಕ

ಮೈಸೂರಿನ ಬಾರ್ ಕೌನ್ಸಿಲ್ಲಿನ ಸದಸ್ಯರಾಗಿ ನ್ಯಾಯಾಧೀಶ ಶ್ರೀ ಬಿ. ವಾಸುದೇವಮೂರ್ತಿ, ಚಿತ್ರದುರ್ಗದ ಶ್ರೀ ಅಪ್ಪಾಜಿದ ಮರುಳಪ್ಪ, ಬೆಂಗಳೂರಿನ ಶ್ರೀ ಎ. ಆರ್. ಸೋಮನಾಥ ಅಯ್ಯರ್ ಮತ್ತು ಶ್ರೀ ಪಿ. ಕೃಷ್ಣಪ್ಪನವರನ್ನು ಹೈಕೋರ್ಟಿನವರು ನೇಮಿಸಿರುತ್ತಾರೆ.

## ಕಂದಾಯಗಳ ಏರಿಕೆ ವಿರುದ್ಧವಾಗಿ ಹೈಕೋರ್ಟಿಗೆ ರಿಟ್ ಅರ್ಜಿ

ಬೆಂಗಳೂರು ೩

ಮೈಸೂರು ಪುರಸಭೆಯವರು ಮನೆಗಂದಾಯವನ್ನು ಹೆಚ್ಚಿಸಿರುವ ಬಗ್ಗೆ ಶ್ರೀ ನಗಡಾರು ರಾಮಚಂದ್ರರಾವ್ ಮತ್ತು ಇತರ ೫ ಜನರು ರಿಟ್ ಅರ್ಜಿಯೊಂದನ್ನು ಕಳೆದ ಶನಿವಾರ ಹೈಕೋರ್ಟಿನಲ್ಲಿ ದಾಖಲ್ಮಾಡಿದ್ದಾರೆ. ಕಂದಾಯ ಹೆಚ್ಚಿಸಿರುವುದರಲ್ಲಿ ಅಸಮಾನತೆಯನ್ನು ತೋರಿಸಿರುವುದು ರಾಜ್ಯಾಂಗದ ಪ್ರಕಾರ ಮೂಲಭೂತ ಹಕ್ಕಿಗೆ ವಿರುದ್ಧವಾಗಿದೆಯಾದ್ದರಿಂದ ಅದನ್ನು ರದ್ದು ಮಾಡಬೇಕೆಂದೂ, ಮುಂದೆ ಮನೆ ಕಂದಾಯವನ್ನು ವಿಧಿಸಲು ಬಾಡಿಗೆ ಹಾಕುವ ಹಿಂದಿನ ಪ್ರಕಾರ ವಾರ್ಷಿಕ ಬಾಡಿಗೆಯನ್ನು ನಿಶ್ಚಯಿಸುವಂತೆ ಆಜ್ಞೆ ಮಾಡಬೇಕೆಂದೂ ಕೋರಿದ್ದಾರೆ. ರಿಟ್ ಅರ್ಜಿಗಳ ಬಗ್ಗೆ ಕುಮುಂ ಅನ್ನು ೩೦ ರೂಗಳಿಗೆ ಹೆಚ್ಚಿಸಿರುವುದು ಜಾಮೂನಿಗೆ ವಿರೋಧವಾಗಿದೆಯಾದ್ದರಿಂದ ಹೆಚ್ಚಿಗೆ ಕೊಟ್ಟಿರುವ ಕುಮುಂ ಅನ್ನು ವಾಪಸು ಕೊಡಿಸಬೇಕೆಂದೂ ಕೋರಿರುತ್ತಾರೆ.

## ಪೌರಸಭಾ ಚುನಾವಣಾ ಓಟರು ಪಟ್ಟಿಯ ಪುನರ್ವಿಮರ್ಶೆ

ಬರುವ ಜನವರಿ ೧೫ನೇ ತಾ॥ ನಿಂದ ಹೊಸ ಪೌರಸಭೆಯ ರಚನೆಯಾಗುವುದರ ಸಂಬಂಧವಾಗಿ ಈ ವರ್ಷ ನಡೆಯುವ ಪೌರಸಭಾ ಸದಸ್ಯರ ಚುನಾವಣೆ ಬಗ್ಗೆ ಓಟುದಾರರ ಪಟ್ಟಿಯ ಪರಿಷ್ಕರಣ ಮಾಡುವ ಕಾರ್ಯವನ್ನು ನಾಳೆಯಿಂದ ೧೫ನೇ ತಾ॥ ವರೆಗೆ ನಡೆಸಲಾಗುವುದು. ಕಳೆದ ಏಪ್ರಿಲ್ ೧ನೇ ತಾ॥ಗೆ ೨೧ ವರ್ಷ ತುಂಬುವವರೆಲ್ಲರೂ ತಮ್ಮ ಹೆಸರುಗಳನ್ನು ಸೇರಿಸಬಹುದು. ಪೌರಸಭಾ ರೆವಿನ್ಯೂ ಇಲಾಖಾ ನೌಕರರು ತಮ್ಮ ಪ್ರದೇಶಗಳಲ್ಲಿ ತನಿಖೆ ನಡೆಸಿ, ವರದಿಯನ್ನೊಪ್ಪಿಸುವಂತೆ ಸೂಚಿಸಲ್ಪಟ್ಟಿರುತ್ತಾರೆ. ಈ ಕಾರ್ಯಕ್ಕೆ ಮಹಾಜನರ ನೆರವನ್ನು ಪೌರಸಭಾ ಕಮಿಷನರು ಕೋರಿರುತ್ತಾರೆ.

## ಜಾಮೀನಿನಮೇಲೆ ಬಿ. ಎಸ್. ಗೋಪಾಲರಾಯರ ಬಿಡುಗಡೆ

ಮೋಸದ ಆಪಾದನೆಗಾಗಿ ಶಿಕ್ಷೆಗೆ ಗುರಿಯಾಗಿರುವ ಶ್ರೀ ಬಿ. ಎಸ್. ಗೋಪಾಲರಾಯರು ಹೈಕೋರ್ಟಿನಲ್ಲಿ ರಿವಿಜನ್ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರ ಇತ್ಯರ್ಥವಾಗುವವರೆಗೆ ಅವರನ್ನು ಜಾಮೀನು ಮೇಲೆ ಬಿಡುವಂತೆ ಹೈಕೋರ್ಟಿನವರು ಸೂಚಿಸಿದ ಪ್ರಕಾರ ಅವರನ್ನು ಬಿಡಲಾಗಿದೆ.

## ಡಿಪೋಗಳಲ್ಲಿ ಅರ್ಧಭಾಗ ಮಾತ್ರ ಸಕ್ಕರೆ

ಸಕ್ಕರೆಯು ಹೆಚ್ಚಾಗಿ ಇಲ್ಲದಿರುವುದರಿಂದ ಪಡಿತರದ ಪೂರ್ತಾ ಕೋಟಾ ಸಕ್ಕರೆಯನ್ನು ಡಿಪೋಗಳಲ್ಲಿ ಕೊಡಲು ಸಾಧ್ಯವಿಲ್ಲವೆಂದೂ, ಅರ್ಧಭಾಗ ಮಾತ್ರ ಅದು ಇರುವವರಿಗೆ ಕೊಡಲಾಗುವುದೆಂದೂ, ಉಳಿದ ಅರ್ಧ ಭಾಗಕ್ಕೆ ಸಣ್ಣ ಸಕ್ಕರೆಯನ್ನು ಪಡೆಯಬೇಕೆಂದೂ ನಗರದ ರೇಷನಿಂಗ್ ಅಧಿಕಾರಿಗಳು ತಿಳಿಸಿರುತ್ತಾರೆ. ಆರ್ ತರಗತಿ ಕಾರ್ಡಿನವರಿಗೆ ತಿಂಗಳಿಗೆ ತಲಾ ೧॥ ಪೌಂಡು, ಎಂ. ತ ಗತಿಯವರಿಗೆ ಮುಕ್ಕಾಲು ಪೌಂಡಿನಂತೆ ಸಕ್ಕರೆ ಕೊಡಲು ವ್ಯವಸ್ಥೆ ಮಾಡಲಾಗಿದೆ. ಇತರ ಧಾನ್ಯಗಳ ಕೋಟಾ ಬದಲು ಕಾಳು ಭಾಗವನ್ನು ರಾಗಿಯನ್ನು ಕೊಡಲು ಏರ್ಪಾಡಾಗಿದೆ.

## ಮದ್ರಾಸು ಪೋಲೀಸರ ಜಾಮೀನು ಅಪೀಲು

ಸ್ವಂ ವ ರ್ಪೋ೯ ] ಬೆಂಗಳೂರು ೩

[illegible] ನ ಗಲಿ ಬಳಿ ಗುಂಡಿನ ಪ್ರಕರಣದ ಸಂಬಂಧವಾಗಿ ದಸ್ತಗಿರಿಯಾಗಿರುವ ಮದ್ರಾಸಿನ ಸಬ್ ಇನ್ಸ್ಪೆಕ್ಟರ್ ಶ್ರೀ ರಾಘವಲು ನಾಯ್ಡು ಮತ್ತು ಇಬ್ಬರು ಪೋಲೀಸರ ಜಾಮೀನು ಬಗ್ಗೆ ಇಲ್ಲಿನ ಮುಖ್ಯ ಸೆಷನ್ಸ್ ನ್ಯಾಯಾಧೀಶರ ಮುಂದೆ ಹೂಡಿರುವ ಅಪೀಲಿನಲ್ಲಿ ಈ ದಿನ ಮದ್ರಾಸಿನ ಸರ್ಕಾರಿ ವಕೀಲರಾದ ಶ್ರೀ ಮುತಿರಾಜುಲುರವರು ವಾದ ಮಾಡಿದರು. ರಿಕಾರ್ಡುಗಳನ್ನು ತರಿಸಲು ವಿಚಾರಣೆಯನ್ನು ಮುಂದಕ್ಕೆ ಹಾಕಲಾಗಿದೆ.

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ತಿಂಗಳು ೧೬ನೇ ತಾ॥ ಕನ್ನಿಕೆ ದಿಯಲ್ಲಿರುವ ಅಲಗಪ್ಪ ಚೆಟ್ಟಿಯಾರರ ಇಂಜಿನಿಯರಿಂಗ್ ಕಾಲೇಜಿನ ಪ್ರಾರಂಭೋತ್ಸವವನ್ನು ನೆರವೇರಿಸುವರು.

## ಜಯಪುರದಲ್ಲಿ ಆಬ್ಕಾರಿ ಮತ್ತು ಕಂದಾಯದ ವಿರುದ್ಧ ಹರತಾಳ

೯೦ ಜನರ ಬಂಧನ; ಒಬ್ಬನ ಉಪವಾಸ; ರಕ್ಷಿತ ಪುಸ್ತಕಗಳಿಗೆ ಬೆಂಕಿ

ಜಯಪುರದ ಪೌರಸಭೆಯವರು ಮೊನ್ನೆಯಿಂದ ಜಾರಿಗೆ ತಂದಿರುವ ಮನೆಗಂದಾಯ ಮತ್ತು ಆಕ್ಟ್ರಾಯ್ ಸುಂಕಗಳ ವಿರುದ್ಧವಾಗಿ ನಡೆಯುತ್ತಿರುವ ಚಳುವಳಿ ಸಂಬಂಧವಾಗಿ ೯೦ ಜನರನ್ನು ಬಂಧಿಸಲಾಗಿದೆ. ಆ ಪೈಕಿ ಹಲವು ಮುಖಂಡರನ್ನು ೬೦ ಮೈಲಿ ದೂರದ ಟೋಂಕ್ ಎಂಬಲ್ಲಿಗೆ ಒಯ್ಯಲಾಗಿದೆ. ಇತರರು ದೊಂಬಿ ಮುಂತಾದ ಕಾರಣಗಳಿಗಾಗಿ ದಸ್ತಗಿರಿಯಾಗಿರುವರು. ಒಬ್ಬ ಸುಂಕದ ಇನ್ಸ್ಪೆಕ್ಟರನ್ನು ಜನರು ಹೊಡೆದಿರುವರು. ರಕ್ಷಿತ ಪುಸ್ತಕಗಳಿಗೆ ಬೆಂಕಿ ಹಚ್ಚಲಾಗಿದೆ. ಹನ್ನೆರಡು ಬೀದಿ ದೀಪಗಳನ್ನೂ, ಹಲವು ಟ್ರಾಫಿಕ್ ಸಿಗ್ನಲ್‌ಗಳನ್ನೂ ನಾಶಪಡಿಸಲಾಗಿದೆ. ನಗರದಲ್ಲಿ ಮೂರು ದಿನಗಳಿಂದ ಹರತಾಳವು ನಡೆಯುತ್ತಿದ್ದು ಸಿನಿಮಾಗಳೂ, ಅಂಗಡಿಗಳೂ ಬಂದಾಗಿವೆ. ಒಬ್ಬ ಪ್ರಜಾ ಸಮಾಜವಾದಿ ಕಾರ್ಯಕರ್ತನು ತೆರಿಗೆ ವಿರುದ್ಧವಾಗಿ ಉಪವಾಸ ವ್ರತವನ್ನು ಹೂಡಿರುವನು.

## ಎರಡು ಮುಖಗಳ ಶಿಶು

ಜಗದಾಲ್‌ಪುರದ ಬಳಿ ಒಂದು ಹಳ್ಳಿಯಲ್ಲಿ ೧೮ ವರ್ಷದ ಯುವತಿಯೊಬ್ಬಳು ಎರಡು ಮುಖಗಳುಳ್ಳ ಹೆಣ್ಣು ಮಗುವನ್ನು ಹಡೆದಿರುತ್ತಾಳೆ. ಅದನ್ನು ಸಾಕ್ಷಾತ್ ಮಹಾ ಲಕ್ಷ್ಮಿ ಅವತಾರವೆಂದು ಭಾವಿಸಿ, ಅನೇಕರು ಬಂದು ಅದರ ದರ್ಶನಪಡೆಯುತ್ತಿರುವುದಾಗಿ ಹೇಳಲಾಗಿದೆ.

## ಸಂಗೀತ ಮತ್ತು ಯಕ್ಷಗಾನ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಕುಮಾರಿ ಎಸ್. ಇಂದಿರಾರವರ ಸಂಗೀತ, ೭ ಗಂಟೆಗೆ ಶ್ರೀ ಎಂ. ವಿ. ಲಕ್ಷ್ಮಿನರಸಿಂಹಯ್ಯನವರ ಹಾರ್ಮೋನಿಯಂ ಸೋಲೋ ಮತ್ತು ರಾತ್ರಿ ೧೦ಕ್ಕೆ ಶ್ರೀ ಹನುಮನ್ನಂಚರಿತ್ರ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ವಿರಾಟಪರ್ವ ಎಂಬ ಯಕ್ಷಗಾನ- ಇವು ಏರ್ಪಾಡಾಗಿವೆ.

## ದ್ರಾವಿಡ ನಾಯಕರಿಗೆ ಸಜಾ ಮತ್ತು ದಂಡ

ಮದ್ರಾಸಿನ ದ್ರಾವಿಡ ಮುನ್ನೇತ್ರ ಸಂಘದ ಮುಖಂಡ ಸಿ ಎನ್ ಅಣ್ಣಾದುರೈ ಮತ್ತು ಇತರ ೪ ಜನರು ಹಿಂದಿ ಬೋರ್ಡುಗಳನ್ನು ಅಳಿಸುವ ಕಾರ್ಯದಲ್ಲಿ ನಿರತರಾಗಿದ್ದರೆಂದು ಅವರಿಗೆ ಕೋರ್ಟ್ ಏಳುವವರೆಗೆ ಸಜಾ ಮತ್ತು ತಲಾ ೫೦ ರೂ ದಂಡವನ್ನು ವಿಧಿಸಲಾಗಿದೆ

## ಖೋಟಾ ನೋಟುಗಳ ತಯಾರಿ ಕೆಯೇ ಗೃಹ ಕೈಗಾರಿಕೆಯಾಗಿದೆ

[illegible] ಕೊಟ್ಟ [illegible] ತಕ ನಾಣ್ಯ [illegible] ತಯಾರಿಕೆಯು ಒಂದು ಗೃಹ ಕೈಗಾರಿಕೆಯಾಗಿ ಪರಿಣಮಿಸಿರುವುದೆಂದು ಕೇಂದ್ರ ಗೃಹ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು. ಕಳೆದ ಎರಡು ವರ್ಷಗಳಲ್ಲಿ ಪೋಲೀಸರು [illegible] ಲಕ್ಷ ರೂ ಬೆಲೆಯ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿರುವುದಾಗಿ ಅವರು ಹೇಳಿರುವರು

## ಹಿಮಾಲಯಾ ಶಿಖರಾರೋಹಿಯ ಮರಣ

ಹಿಮಾಲಯಕ್ಕೆ ಸೇರಿದ [illegible] ಎರಡನೇ ಅತ್ಯುನ್ನತ ಶಿಖರವನ್ನು [illegible] ಹೋಗಿದ್ದ ಅಮೆರಿಕಾ [illegible] ಹಿಮ ಪ್ರವಾಹದ [illegible] ರವುದಾಗಿ ವರದಿಯಾಗಿದೆ [illegible] ಎತ್ತರದಿಂದ ಅವರ [illegible] ಈ ದುರ್ಘಟನೆಯು ಸಂಭವಿಸಿದ ಬಾಗಿ ಹೇಳಲಾಗಿದೆ

## ಗಂಗಾ ಪ್ರವಾಹದಲ್ಲಿ ಏಳು ಸೇತುವೆಗಳ ನಾಶ

ಗಂಗೋತ್ರಿಬಳಿಗ [illegible] ಉಪನದಿಗಳಲ್ಲಿ ಇತ್ತೀಚೆಗೆ ವಿಶೇಷ ಪ್ರವಾಹವು ಬಂದು ಏಳು ಸೇತುವೆಗಳು ಕೊಚ್ಚಿಕೊಂಡು ಹೋಗಿರುವವೆಂದು ವರದಿಯಾಗಿದೆ

### ಶನಿ ಮಹಾತ್ಮೆ

ಮೈಸೂರು ಚಾಮುಂಡಿಪುರದಲ್ಲಿರುವ [illegible] ಶ್ರೀ [illegible] ರಂಗಪ್ಪನವರ ಮನೆಯಲ್ಲಿ [illegible] ರಾತ್ರಿ [illegible] ಗಂಟೆಗೆ ಶ್ರೀ [illegible] ಯು [illegible] ನಡೆಯುವುದು

### ಹರಿಕಥೆ

ಮೈಸೂರು ನಜರ್‌ಬಾದ್ ಮಹಾರಾಷ್ಟ್ರ ಬಿ ಡಿ ಶ್ರೀ ಮರುಗಮ್ಮನವರ ದೇವಸ್ಥಾನದಲ್ಲಿ ಈ ರಾತ್ರಿ [illegible] ಗಂಟೆಗೆ ಕೀರ್ತನ [illegible] ಶ್ರೀ ಪಿ ರಾಮಸ್ವಾಮಿ [illegible] ಹರಿಕಥಾ ಶಿರೋಮಣಿ ಶ್ರೀ ಗುರುರಾಜ ನಾಯ್ಡುರವರಿಂದ ಶ್ರೀ ರಾಮಾಂಜನೇಯರ ಯುದ್ಧ ಎಂಬ [illegible] ಕಥೆ ನಡೆಯುತ್ತದೆ

---

[illegible] ಟಾಕೀಸ್

[illegible] 3 9 53 ರಿಂದ

[illegible] ಪಿಲ್ಮ್ಸ್ ರವರ

★ ಬಾಷ್ಪಿ ★

[illegible] ನೃತ್ಯ ಮತ್ತು [illegible]

[illegible] ಚಿತ್ರ

[illegible]

ಟಿಕೆಟ್ ಸಪ್ಪ ದರ್ಶನ

[illegible]

ಸಾಯರ್

---

Edited Printed and Published by A K Nagarajan at Sadhvi Press D Subbiah Road Mysore

## ರಷ್ಯದ ರಾಯಭಾರಿಯಿಂದ ಆತ್ಮಹತ್ಯ ಪ್ರಯತ್ನ

ಟರ್ಕಿಯದಲ್ಲಿರುವ ರಷ್ಯದ ರಾಯಭಾರಿ ಅಂಟೋನಿ ಲಾವ್ರಿಯೆಂಟಿಯೇವ್‌ರವರು ಕೆಲವು ದಿನಗಳಿಂದ ಹೃದ್ರೋಗದಿಂದ ನರಳುತ್ತಿರುವರೆಂದೂ, ಕಳೆದ ೩೦ನೇ ತಾ|| ಅವರನ್ನು ಸ್ವದೇಶಕ್ಕೆ ಹಿಂತಿರುಗುವಂತೆ ಕರೆದಾಗ ಅವರು ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟರೆಂದೂ ಹೇಳಲಾಗಿದೆ

## ಬೊಂಬಾಯಿಯ ಭಾರಿ ಬೆಂಕಿಗೆ ಬೀಡಿಯೇ ಕಾರಣ

ಕೆಲವು ದಿನಗಳ ಹಿಂದೆ ಬೊಂಬಾಯಿಯ ಕೃತಕ ಚರ್ಮದ ಕಾರ್ಖಾನೆಯಲ್ಲಿ ಭಾರಿ ಬೆಂಕಿ ಬಿದ್ದಾಗಲು ಒಬ್ಬ ಕಾರ್ಮಿಕನು ಸೇದುತ್ತಿದ್ದ ಬೀಡಿಯೇ ಕಾರಣವಾಯಿತೆಂದು ಅಲ್ಲಿನ ಪೌರಸಭಾ ಕಮಿಷನರರು ತಿಳಿಸಿರುತ್ತಾರೆ. ಬೆಂಕಿ ಪ್ರಕರಣದಲ್ಲಿ [illegible] ಜನರು ಸತ್ತು, [illegible] ಅಂತಸ್ತಿನ ಭಾರಿ ಕಟ್ಟಡವು ಉರಿದುಹೋಯಿತು. ಬೀಡಿ ಸೇದ [illegible] ಕಾರ್ಮಿಕನು ಬೆಂಕಿ ಹತ್ತುವ ಪದಾರ್ಥವನ್ನು ಮುಟ್ಟಿದಾಗ ಅದಕ್ಕೆ ಬೆಂಕಿ ತಗುಲಿತೆಂದು ಹೇಳಲಾಗಿದೆ

## ಅಬ್ದುಲ್ಲಾರ ವಿಚಾರಣೆಯಿಲ್ಲ

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾರವರನ್ನು ಲಂಚ, ಮುಂತಾದ ಆಪಾದನೆಗಳ ಮೇಲೆ ವಿಚಾರಣೆಗೆ ಗುರಿಪಡಿಸಲಾಗುವುದೆಂಬ ಸುದ್ದಿಯನ್ನು ಕಾಶ್ಮೀರದ ಅಧಿಕಾರಿಗಳು ನಿರಾಕರಿಸಿರುತ್ತಾರೆ

## ಮೈಸೂರು ಪೇಟೆ ಧಾರಣೆ

| ಪಳ್ಳಿಕ್ಕ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಮರ [illegible] | [illegible] | [illegible] |
| ಹಲಸಂದೆ | [illegible] | [illegible] |
| ಹೆಸರು | [illegible] | |
| ತೆಂಗಿನಕಾಯಿ ೧೦೦೦ಕ್ಕೆ | [illegible] | [illegible] |

## ಇಂಜನಿಯರಿಂಗ್ ಕಾಲೆ ಹಳೇವಿದ್ಯಾರ್ಥಿ ಸಂಘ

ಬೆಂಗಳೂರು ಇಂಜನಿಯರಿಂಗ್ ಕಾಲೆಯ ಹಳೇ ವಿದ್ಯಾರ್ಥಿಗಳ ಸಭೆಯು ಕಳೆದ ಭಾನುವಾರ ನಡೆದು ಶ್ರೀ ಎಸ್ ರಾಮರಾಯರು ಅಧ್ಯಕ್ಷರು, ಶ್ರೀ ಜಿ ಆರ್ ರಾಮಾನುಜಲುರವರು ಉಪಾಧ್ಯಕ್ಷರು ಶ್ರೀಗಳಾದ ಎಂ ಕೆ ಶ್ರೀನಿವಾಸ ಮತ್ತು ಸಿ ಎಲ್. ವಾಸುದೇವರಾವ್‌ರವರುಗಳು ಕಾರ್ಯದರ್ಶಿಗಳು ಮತ್ತು ಶ್ರೀ ಜಿ ವಿ ಪುಟ್ಟಸ್ವಾಮಿಯವರು ಖಜಾಂಚಿಯಾಗಿ ಚುನಾಯಿತರಾದರು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ನರಸಿಂಹರಾಜ ಮೊಹಲ್ಲಾದಲ್ಲಿ ಪತ್ರಿಕೆ ಹಂಚುವವರು ಬೇಕು

ನರಸಿಂಹರಾಜ ಮೊಹಲ್ಲಾದಲ್ಲಿ ಮನೆಮನೆಗೆ ಪತ್ರಿಕೆ ಹಂಚುವವರು ಬೇಕು ವಿವರಗಳಿಗೆ ಬಂದು ವಿಚಾರಿಸಿ.

**ನ್ಯೂಸ್ ಪೇಪರ್ ಹೌಸ್,**

ಸಾಧ್ವಿ ಏಜೆಂಟರು, ಮೈಸೂರು.

## ದೇವಸ್ಥಾನದ ಒಡವೆ ಕದ್ದು ನದಿಯಲ್ಲಿ ಮುಳುಗಿ ಪರಾರಿ

ಸ್ವಂ ಬು ] [illegible] ನರಸೀಪುರ [illegible]

Edited Printed and Published by A R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ-792

|| ಸತ್ಯಮೇವ ಜಯತೇ ||

ಬಿಡಿ ಪತ್ರಿಕೆ 3 ಕಾಸು

ಗೌರಿ ಹಬ್ಬಕ್ಕೆ ಬೇಕಾದ
ನವೀನ ಮಾದರಿ ರೇಷ್ಮೆ ಸೀರೆ
ಗಳು, ಜರಿಯ ರವಿಕಣಗಳು
ಸೀರೆಗಳು ಬಂದಿವೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

# ಸಾಧ್ವಿ

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE THURSDAY 10-9-1953 ಮೈಸೂರು : ಗುರುವಾರ ೧೦-೯-೧೯೫೩ [ ಸಂಚಿಕೆ ೬೯

# ಕಾಶ್ಮೀರ ಧಾಳಿ ತಡೆಗೆ ಲಕ್ಷಗಟ್ಟಲೆ ಭಾರತೀಯರು ಸಿದ್ಧ

## ಕೈಗಾರಿಕೆಯಲ್ಲಿ ನೂತನ ಯುಗದ ಆರಂಭ

### ದ್ವಾವತಿ ಒಪ್ಪಂದದ ಶಹಾರಂಭದಲ್ಲಿ ವಿದ್ಯಾಮಂತ್ರಿಗಳ ಭಾಷಣ

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಆಡಳಿತ ವರ್ಗ ಮತ್ತು ಕಾರ್ಮಿಕರಲ್ಲಿ ಮೂರು ವರ್ಷಗಳ ಅವಧಿಯ ಕೈಗಾರಿಕಾ ಶಾಂತಿ ಸ್ಥಾಪನೆಯ ಆರಂಭೋತ್ಸವವನ್ನು ನ್ಯಾಯಾಂಗ ಮತ್ತು ಕಾರ್ಮಿಕ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ನೆನ್ನೆ ನೆರವೇರಿಸಿದರು. ಗೃಹ ಮತ್ತು ಕೈಗಾರಿಕಾ ಮಂತ್ರಿ ಶ್ರೀ ಸಿದ್ಧವೀರಪ್ಪನವರ ಭಾಷಣ ಮಾಡಿ, ಆರಂಭೋತ್ಸವವನ್ನು ನೆರವೇರಿಸುವಂತೆ ನ್ಯಾಯಾಂಗ ಮಂತ್ರಿಗಳನ್ನು ಕೋರಿದರು.

ನ್ಯಾಯಾಂಗ ಮಂತ್ರಿಗಳು ತಮ್ಮ ಭಾಷಣದಲ್ಲಿ ಕೈಗಾರಿಕಾ ಶಾಂತಿಯ ಒಡಂಬಡಿಕೆಯಾದ ಬಗ್ಗೆ ಹರ್ಷವನ್ನು ವ್ಯಕ್ತಪಡಿಸಿದರು. ಈ ಒಪ್ಪಂದ ಮೂರು ವರ್ಷದ ಅವಧಿಯಲ್ಲಿ ಹೊಸ ಬೇಡಿಕೆಯನ್ನು ಮಂಡಿಸದೆ ಶಾಶ್ವತವಾಗಿ ಶಾಂತಿಯನ್ನು ಕಾಪಾಡಲು ಕಾರ್ಮಿಕರು ಒಪ್ಪಿರುವುದು ಶುಭಸೂಚನೆಯೆಂದು ಅವರು ಹೇಳಿ ಸಂಸ್ಥಾನದ ಇತರ ಕಾರ್ಖಾನೆಗಳೂ ಈ ಮಾದರಿಯನ್ನು ಅನುಸರಿಸುವುದು ಮೇಲೆಂದು ಅಭಿಪ್ರಾಯಪಟ್ಟರು.

ತಾತ್ಕಾಲಿಕ ಶಾಂತಿ ಎನ್ನುವುದರಲ್ಲಿ ತಪ್ಪು ಕಲ್ಪನೆಯುಂಟಾಗಿದೆಯೆಂದೂ ಸಹ್ಯಕ್ಕೆ ಮಾತ್ರ ಕಾರ್ಮಿಕರು ತಮ್ಮ ವಿರೋಧವನ್ನು ನಿಲ್ಲಿಸಿ ಸಹನಾಧೀನವನ್ನು ಮುಂದು ಹಾಕಿರುವುದಾಗಿ ಅದರಿಂದ ಭಾಸವಾಗುವುದೆಂದೂ ಹೇಳಿ ಈಗ ನೆಲಸಿರುವ ಶಾಂತಿಯು ಶಾಶ್ವತ ಶಾಂತಿಯಾಗಲೆಂದು ಅವರು ಹಾರೈಸಿದರು.

ಮುಂದುವರಿದು, ಒಪ್ಪಂದದಂತೆ ನಡೆದುಕೊಂಡು, ಉತ್ಪನ್ನವನ್ನು ಹೆಚ್ಚಿಸುವುದರಲ್ಲಿ ಶ್ರಮವಹಿಸಿ, ಕೈಗಾರಿಕೆಯ ಇತಿಹಾಸದಲ್ಲಿ ನೂತನ ಯುಗವು ಆರಂಭವಾಗಲು ಕಾರ್ಮಿಕರು ಸಹಕಾರ ಭಾವ ಮತ್ತು ಕರ್ತವ್ಯ ಶ್ರದ್ಧೆಯನ್ನು ತೋರಿ ಮಾತೃಭೂಮಿಯ ಅಭ್ಯುದಯವನ್ನು ಸಾಧಿಸಬೇಕೆಂದು ಹೇಳಿದರು.

ಮುಷ್ಕರವು ಮಾತುಮಾತಿಗೂ ಉಪಯೋಗಿಸುವ ಅಸ್ತ್ರವಲ್ಲವೆಂದೂ, ಇತರ ಪರಿಹಾರ ಕ್ರಮಗಳು ನಿಷ್ಫಲವಾದ ನಂತರ ಅದನ್ನು ಕೊನೆಯ ಸಾಧನೆಯಾಗಿ ಕಾರ್ಮಿಕರು ಉಪಯೋಗಿಸಬೇಕೆಂದೂ, ಮುಷ್ಕರದ ಪರಿಣಾಮವು ಒಂದು ಕಡೆಗೇ ಅಲ್ಲದೆ ಎಲ್ಲ ಪ್ರದೇಶಗಳ ಮೇಲೂ ಬೀಳುವುದಾಗಿ, ಕೊನೆಗೆ ರಾಷ್ಟ್ರದ ಆಗುಹೋಗುಗಳ ಮೇಲೂ ಪ್ರಭಾವ ಬೀರುವುದಾಗಿಯೂ ಅವರು ತಿಳಿಸಿದರು. ಮುಷ್ಕರ ನಡೆಸುವುದರಿಂದ ಕಾರ್ಮಿಕರು ಸಹಿಯ ಜೊತೆಗೆ ಅದರ ಕಹಿಯನ್ನೂ ಅನುಭವಿಸಬೇಕಾಗುವುದೆಂದು ಎಚ್ಚರಿಸಿದರು.

## ಪಾಯ ತೆಗೆಯುತ್ತಿದ್ದಾಗ ಚಿನ್ನ ಸಿಕ್ಕಿತು

ಚನ್ನಪಟ್ಟಣದ ಸಮೀಪದಲ್ಲಿರುವ ಚಿಕ್ಕಮಳೂರು ಗ್ರಾಮದಲ್ಲಿ ಮನೆ ಕಟ್ಟಲು ಒಬ್ಬ ಪಾಯ ತೆಗೆಯುತ್ತಿದ್ದಾಗ ಚಿನ್ನದ ನಾಣ್ಯಗಳು ದೊರಕಿದುವೆಂದೂ, ಪೋಲೀಸರು ಸ್ಥಳಕ್ಕೆ ಹೋಗಿ ಮಾಲೀಕರಿಂದ ಆ ನಾಣ್ಯಗಳನ್ನು ವಶಪಡಿಸಿಕೊಂಡಿರುವರೆಂದೂ ವರದಿಯಾಗಿದೆ.

## ರೇಷನ್ ಡಿಪೋಗಳಲ್ಲಿ ರಾಗಿಯ ಮಾರಾಟ

ಬೆಂಗಳೂರು ೧೦

ಸಂಸ್ಥಾನದ ರೇಷನ್ ಡಿಪೋಗಳಲ್ಲಿ ಇದುವರೆಗೆ ರಾಗಿಯ ಮಾರಾಟವನ್ನು ನಿಲ್ಲಿಸಲಾಗಿತ್ತಷ್ಟೆ. ಈಗ ಪರಿಮಿತ ಪ್ರಮಾಣದಲ್ಲಿ ರೇಷನ್ ಕಾರ್ಡಿಗೆ ರಾಗಿಯನ್ನು ಈಗ ಡಿಪೋಗಳಲ್ಲಿ ಮಾರಾಟ ಮಾಡುವಂತೆ ಸೂಚಿಸಿ ಸರ್ಕಾರದ ಆಜ್ಞೆ ಹೊರಬಿದ್ದಿರುತ್ತದೆ.

### ಸಂಸ್ಥಾನದ ಗುಡ್ಡಗಾಡಿನವರ ಅಭಿವೃದ್ಧಿಗಾಗಿ ಕೇಂದ್ರದಿಂದ ೨ ಲಕ್ಷ ರೂ

ಬಿಳಿಗಿರಿರಂಗನ ಬೆಟ್ಟ, ಬಾಬಾಬುಡನಗಿರಿ, ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಒಟ್ಟಾಗಿ ಇರುವ ಸುಮಾರು ೧೭ ಸಾವಿರ ಜನ ಗುಡ್ಡಗಾಡಿನವರ ಪುರೋಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ೨ ಲಕ್ಷ ರೂ ಸಹಾಯವನ್ನು ಕೊಟ್ಟಿರುತ್ತಾರೆ. ಗುಡ್ಡಗಾಡಿನ ಜನರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಮೈಸೂರು ಗೃಹ ನಿರ್ಮಾಣ ಕಮಿಷನರ್ ಶ್ರೀ ಎಂ. ಎಸ್. ಹಿರಣ್ಣಯ್ಯನವರ ೧ ಲಕ್ಷ ರೂ ಯೋಜನೆಯನ್ನು ತಯಾರಿಸಿರುವರೆಂದು ಹೇಳಲಾಗಿದೆ. ಆ ಜನರ ವಿದ್ಯಾಭ್ಯಾಸ, ಆರೋಗ್ಯ ಇವುಗಳ ವ್ಯವಸ್ಥೆಯನ್ನೂ ಕೈಗೊಳ್ಳಲಾಗುವುದು. ಬಟ್ಟೆ ಮತ್ತು ಹಗ್ಗಗಳ ತಯಾರಿಕೆ, ಜೇನು ಸಾಕುವುದು ಮುಂತಾದ ಗೃಹ ಕೈಗಾರಿಕೆಗಳನ್ನು ನಡೆಸಲು ಸರ್ಕಾರದವರು ಅವರಿಗೆ ಈಗಾಗಲೇ ೧೪ ಸಾವಿರ ರೂಗಳನ್ನು ಒದಗಿಸಿದ್ದಾರೆ.

## ನೆಹರೂರವರಿಂದ ಆಂಧ್ರ ಪ್ರಾಂತದ ಆರಂಭೋತ್ಸವ

ಪ್ರಧಾನಿ ನೆಹರೂರವರು ಬರುವ ೧ನೇ ತಾ॥ ಕರ್ನೂಲಿನಲ್ಲಿ ಆಂಧ್ರ ಪ್ರಾಂತದ ಆರಂಭೋತ್ಸವವನ್ನು ನೆರವೇರಿಸುವರು. ಅದಕ್ಕೆ ಮುಂಚೆ ಮದ್ರಾಸಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ವಿ. ರಾಜಮನ್ನಾರರ ಸಮ್ಮುಖದಲ್ಲಿ ಹೊಸ ಪ್ರಾಂತ ಗೌರ್ನರರೂ ನಂತರ ಗವರ್ನರರ ಸಮ್ಮುಖದಲ್ಲಿ ಮಂತ್ರಿಗಳೂ ಪ್ರಮಾಣ ವಚನವನ್ನು ಸ್ವೀಕರಿಸುವರು. ಈ ಸಮಾರಂಭಕ್ಕಾಗಿ ಅಲ್ಲಿ ವಿಶೇಷ ಮಂಟಪವನ್ನು ನಿರ್ಮಿಸಲಾಗುವುದು. ಪ್ರಾರಂಭೋತ್ಸವ ನಡೆಸಿದ ನಂತರ ಪ್ರಧಾನಿಯವರು ಸಚಿವರುಗಳಿಗೂ, ಸಂಸ್ಥಾನದ ಗಣ್ಯ ಮಹನೀಯರುಗಳಿಗೂ ಭೇಟಿ ಕೊಡುವರು. ಸಂಜೆ ಗೌರ್ನರರು ಔತಣ ಕೂಟವನ್ನು ಏರ್ಪಡಿಸಿರುವರು. ಅದೇ ಸಂಜೆ ನೆಹರೂರವರ ಹೈದರಾಬಾದಿಗೆ ತೆರಳಿ ಮಾರನೇ ದಿನ ಮದ್ರಾಸಿಗೂ ೩ ಮತ್ತು ೪ನೇ ತಾ॥ ಮಧುರೆ ಮತ್ತು ಕೊಯಮತ್ತೂರುಗಳಿಗೂ ಭೇಟಿಯಿತ್ತು ದೆಹಲಿಗೆ ಹಿಂತಿರುಗುವರು.

## ಕಳ್ಳತನದಲ್ಲಿ ಬಚ್ಚಿಟ್ಟಿದ್ದ ೪,೦೦೦ ಪೌಂಡು ಹೊಗೆಸೊಪ್ಪಿನ ಪತ್ತೆ

ಪೆಂಯಾಪಟ್ಟಣದ ತಾಲ್ಲೂಕಿನ ಕರೀಗೌಡ ಮತ್ತು ನಿಂಗೇಗೌಡ ಎಂಬುವರು ಕಳ್ಳತನದಲ್ಲಿ ಬಚ್ಚಿಟ್ಟಿದ್ದ ಸುಮಾರು ೪,೦೦೦ ಪೌಂಡು ಹೊಗೆಸೊಪ್ಪನ್ನು ಸುಂಕದ ಅಧಿಕಾರಿಗಳು ಪತ್ತೆ ಹಚ್ಚಿ ಮುಂದಿನ ಕ್ರಮ ಜರುಗಿಸುತ್ತಿರುವರೆಂದು ವರದಿಯಾಗಿದೆ.

## ಶ್ರೀಮನ್ಮಹಾರಾಜರ ಆಗಮನ

ಮೈಸೂರು ೧೦

ಶ್ರೀಮನ್ಮಹಾರಾಜರು ದಕ್ಷಿಣ ಭಾರತದ ಪ್ರವಾಸವನ್ನು ಮುಗಿಸಿಕೊಂಡು ನೆನ್ನೆ ಬೆಂಗಳೂರಿಗೆ ಬಂದು ಈ ದಿನ ಮಧ್ಯಾಹ್ನ ಇಲ್ಲಿಗೆ ಆಗಮಿಸಿದರು. ಅವರು ನೆನ್ನೆ ಮದ್ರಾಸಿನಲ್ಲಿ ಮುಖ್ಯ ಮಂತ್ರಿ ರಾಜಾಜಿಯವರ ಮನೆಗೆ ತೆರಳಿ ಅವರನ್ನು ಸಂದರ್ಶಿಸಿದ್ದರು.

## ಟಿ. ಪ್ರಕಾಶಂರವರೇ ಆಂಧ್ರದ ಮುಖ್ಯ ಮಂತ್ರಿ ?

ಪ್ರಜಾ ಸೋಷಲಿಸ್ಟ್ ಪಕ್ಷವು ಒಪ್ಪಿದಲ್ಲಿ ಶ್ರೀ ಟಿ. ಪ್ರಕಾಶಂರವರೇ ಹೊಸ ಆಂಧ್ರ ಸಂಸ್ಥಾನದ ಸರ್ಕಾರವನ್ನು ರಚಿಸಲಿರುವರೆಂದೂ, ದೆಹಲಿಯಲ್ಲಿ ಶ್ರೀಗಳಾದ ಟಿ. ಪ್ರಕಾಶಂ ಮತ್ತು ಸಂಜೀವರೆಡ್ಡಿಯವರು ಪ್ರಧಾನಿ ನೆಹರೂರವರೊಡನೆ ಭೇಟಿ ನಡೆಸಿದಾಗ ಈ ನಿರ್ಧಾರವನ್ನು ಕೈಗೊಳ್ಳಲಾಯಿತೆಂದೂ ಮದರಾಸಿನ ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಶಂಕರರೆಡ್ಡಿಯವರು ತಿಳಿಸಿರುವರು. ಆಂಧ್ರ ಪ್ರಾಂತ್ಯದ ಸರ್ಕಾರಿ ಕಛೇರಿಗಳು ಕೆಲವು ಕಾಲದ ಮಟ್ಟಿಗೆ ಮದರಾಸಿನಲ್ಲೇ ಇರಲು ಅಲ್ಲಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಒಪ್ಪಿರುವರೆಂದು ಗೊತ್ತಾಗಿದೆ.

## ಚಿತ್ರದುರ್ಗ ಜಿಲ್ಲೆಗೆ ೪೦ ವ್ಯಾಗನ್ನಿನಷ್ಟು ಧಾನ್ಯ

ಚಿತ್ರದುರ್ಗ ಜಿಲ್ಲೆಯಲ್ಲಿ ಆಹಾರದ ಅಭಾವವನ್ನು ಸುಧಾರಿಸಲು ೪೦ ವ್ಯಾಗನ್ನುಗಳಷ್ಟು ಧಾನ್ಯವನ್ನು ಅಲ್ಲಿಗೆ ತರಿಸಿಕೊಳ್ಳಲಾಗಿದೆಯೆಂದು ಅಲ್ಲಿನ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಆ ಜಿಲ್ಲೆಯಲ್ಲಿ ೧೪ ಗಂಜಿ ಕೇಂದ್ರಗಳನ್ನು ತೆರೆದು ೧೫೫೬ ಮಂದಿಗೆ ಒಂದು ಹೊತ್ತಿನ ಗಂಜಿ ಊಟವನ್ನು ಕೊಡಲಾಗುತ್ತಿದೆಯೆಂದು ಹೇಳಲಾಗಿದೆ.

## ಖಜಾನೆಗೆ ಜಮಾ ಆಗಬೇಕಾದ ಹಣದ ಅಪಹಾರ ಪ್ರಯತ್ನ

ದಾವಣಗೆರೆಯ ಸಹಕಾರ ಸಂಘದ ಇಬ್ಬರು ಗುಮಾಸ್ತರು ಅಲ್ಲಿನ ತಾಲ್ಲೂಕು ಖಜಾನೆಗೆ ಹಣವನ್ನು ಜಮಾ ಮಾಡುವ ಮುಂಚೆ ಅದನ್ನು ಎಣಿಸುತ್ತಿದ್ದಾಗ ಒಬ್ಬನು ೩ ಸಾವಿರ ರೂಗಳ ನೋಟಿನ ಕಂತೆಗಳನ್ನು ಕದ್ದು ಪರಾರಿಯಾದನೆಂದೂ ಗುಮಾಸ್ತರು ಕೂಗಿಕೊಳ್ಳಲು ನೂರಾರು ಜನರು ಅವನನ್ನು ಹಿಂಬಾಲಿಸಿ ಕೊನೆಗೆ ಸಣ್ಣ ಕಣ್ಣಿನಲ್ಲಿ ಹಿಡಿದರೆಂದೂ ವರದಿಯಾಗಿದೆ. ಅವನು ನೋಟುಗಳನ್ನು ಕಣ್ಣಿನಲ್ಲಿಯೇ ಬಚ್ಚಿಟ್ಟಿದ್ದನೆಂದೂ ಅದಕ್ಕೆ ಒಬ್ಬ ಹೆಂಗಸು ಬೇರೆ ಕಡೆ ತೆಗೆದಿಟ್ಟಿದ್ದಳೆಂದೂ, ಅವುಗಳನ್ನು ವಶಪಡಿಸಿಕೊಂಡಾಗ ೮೨೦ ರೂ ಕಡಿಮೆಯಾಗಿದ್ದಿತೆಂದೂ ಹೇಳಲಾಗಿದೆ. ಕಳ್ಳನೊಡನೆ ಹೆಂಗಸು ಮತ್ತು ಇನ್ನೊಬ್ಬನನ್ನೂ ಬಂಧಿಸಲಾಗಿದೆ.

## ವಿವಾಹದ ಸಮಾರಂಭಕ್ಕೆ ಹೋಗಿ ದೇವರ ಪೆಟ್ಟಿಗೆ ಅಪಹರಣ

ಹುಣಸೂರಿನ ಒಬ್ಬರ ಮನೆಯಲ್ಲಿ ನಡೆದ ವಿವಾಹದ ಸಂಬಂಧವಾದ ಸಭೆಗಳ ಸಮಾರಂಭಕ್ಕೆ ಹೋದವನೊಬ್ಬನು ದೇವರ ಮನೆಗೆ ನುಗ್ಗಿ ದೇವರ ಪೆಟ್ಟಿಗೆಯನ್ನು ಅಪಹರಿಸಿಕೊಂಡು ಹೋಗಿರುವುದಾಗಿ ವರದಿಯಾಗಿದೆ.

## ಕಾಶ್ಮೀರದ ಮೇಲೆ ಧರ್ಮ ಯುದ್ಧ ತಡೆಯಲು ಜನಸಂಘದ ಬೆಂಬಲ

ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದರೆ, ಅದನ್ನು ಮುರಿಸಲು ಪ್ರಧಾನಿ ನೆಹರೂರವರಿಗೆ ಭಾರತೀಯ ಜನಸಂಘವು ಪೂರ್ಣ ಬೆಂಬಲವನ್ನೀಯುವುದಾಗಿ ಜನಸಂಘದ ಹಂಗಾಮಿ ಅಧ್ಯಕ್ಷ ಪಂಡಿತ ಮೌಳಿ ಚಂದ್ರಶರ್ಮರವರು ತಿಳಿಸಿದ್ದಾರೆ. "ಕಾಶ್ಮೀರದ ವಿಮೋಚನೆಗಾಗಿ ೪ ಲಕ್ಷ ಜನ ಪಾಕಿಸ್ತಾನಿಗಳು ಸಿದ್ಧರಾಗಿರುವರೆಂದು ಪಾಕಿಸ್ತಾನದ ಮಂತ್ರಿಯೊಬ್ಬರು ಹೇಳಿರುವುದನ್ನು ಅವರು ಟೀಕಿಸಿ, ಕಾಶ್ಮೀರದ ಸಂರಕ್ಷಣೆಗೆ ಲಕ್ಷಾಂತರ ಭಾರತೀಯ ಯುವಕರು ರಕ್ತವನ್ನು ಚೆಲ್ಲಲು ತಯಾರಾಗಿರುವುದಾಗಿಯೂ ಶರ್ಮರವರು ತಿಳಿಸಿರುತ್ತಾರೆ.

## ರಸ್ತೆ ಮೇಲೆ ಜಾರಿ ಬಂದ ೪೦ ಅಡಿ ಎತ್ತರದ ಗುಡ್ಡ !

ಸಕಲೇಶಪುರಕ್ಕೆ ೧೫ ಮೈಲಿ ದೂರದಲ್ಲಿ ಬೆಂಗಳೂರು ಮಂಗಳೂರು ರಸ್ತೆಯ ಮೇಲೆ ಮೂರು ವಾರಗಳ ಹಿಂದೆ ಪಕ್ಕದ ಭಾರಿ ಗುಡ್ಡವೊಂದು, ಬಂಡೆಗಳು ಮತ್ತು ಭಾರಿ ಮರಗಳ ಸಮೇತ ೩೦ ಅಡಿ ಜಾರಿಬಂದು ರಸ್ತೆ ಸಂಚಾರಕ್ಕೆ ಅಡ್ಡಿಯಾಗಿರುವುದೆಂದು ವರದಿಯಾಗಿದೆ. ಅದು ೪೦ ಅಡಿ ಎತ್ತರವಿದೆಯೆಂದು ಹೇಳಲಾಗಿದೆ. ಗುಡ್ಡವು ಅಲ್ಲಿಯೇ ಸ್ವಾಭಾವಿಕವಾಗಿ ಇದ್ದಿರಬೇಕೆಂದು ನೋಟಕರಿಗೆ ಭಾಸವಾಗುತ್ತದೆ. ೨ ತಿಂಗಳ ಕಾಲ ಅಲ್ಲಿ ರಸ್ತೆ ಸಂಚಾರಕ್ಕೆ ಅಡಚಣೆಯಾಗುವುದಾಗಿ ಸಕಲೇಶಪುರದ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಎಸ್. ಹೈದರ್ ಅಲಿಯವರು ತಿಳಿಸಿರುವರು. ಅದನ್ನು ಸಂಚಾರಕ್ಕೆ ಅನುಕೂಲ ಪಡಿಸಲು ೧೫ ಸಾವಿರ ರೂಗಳಾದರೂ ಬೇಕಾಗುವುದೆಂದು ಹೇಳಲಾಗಿದೆ.

## ಮದುವೆಗಾಗಿ ಹೊರಟ ೪೦ ಜನರ ಜಲಸಮಾಧಿ

ಲಾಹೋರಿನ ಬಳಿ ಉಜ್ ಷರೀಫ್ ಎಂಬಲ್ಲಿ ಶತದ್ರು ನದಿಯಲ್ಲಿ ದೋಣಿಯೊಂದು ಮುಳುಗಿದುದರ ಪರಿಣಾಮವಾಗಿ ಅದರಲ್ಲಿದ್ದ ೪೦ ಜನರು ಮೃತಪಟ್ಟರೆಂದು ವರದಿಯಾಗಿದೆ. ಅವರೆಲ್ಲರೂ ಒಂದು ಮದುವೆಗಾಗಿ ಹೋಗುತ್ತಿದ್ದರೆಂದು ಹೇಳಲಾಗಿದೆ.

## ಆಸ್ತಿ ತೆರಿಗೆ ವಿನಾಯಿತಿ ಆದಾಯದ ಮಟ್ಟ ಹೆಚ್ಚಳ

ಹಿಂದುಗಳಲ್ಲಿನ ಅವಿಭಕ್ತ ಕುಟುಂಬಗಳ ಆಸ್ತಿ ಮೇಲೆ ವಿಧಿಸಲಾಗುವ ತೆರಿಗೆಯ ಬಗ್ಗೆ ಕೊಡಲಿರುವ ವಿನಾಯಿತಿ ಮಟ್ಟವನ್ನು ೫೦ ಸಾವಿರ ರೂಗಳಿಂದ ೧ ಲಕ್ಷ ರೂ ವರೆಗೆ ಹೆಚ್ಚಿಸಲು ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ಒಪ್ಪಿರುತ್ತಾರೆ.

## ಕಾಳಿದಾಸನ ಜನ್ಮದಿನೋತ್ಸವ

ಬರುವ ನವೆಂಬರ್ ತಿಂಗಳು ೧೪ ನೇ ತಾ॥ ಮಹಾಕವಿ ಕಾಳಿದಾಸನ ಜನ್ಮ ದಿನೋತ್ಸವವನ್ನು ಮಧ್ಯ ಭಾರತ ಸರ್ಕಾರದವರು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ನಿರ್ಧರಿಸಿದ್ದಾರೆ. ಕಾಳಿದಾಸನ ಜೀವನವನ್ನು ತಿಳಿಸುವ ವಿಶೇಷ ಗ್ರಂಥವೊಂದನ್ನು ಪ್ರಕಟಿಸುವ ವ್ಯವಸ್ಥೆಯೂ ಆಗುತ್ತಿದೆ.

## ಭಾರತಕ್ಕೆ ೪ ಫ್ರೆಂಚ್ ಜೆಟ್ ವಿಮಾನಗಳು

ಭಾರತವು ಫ್ರೆಂಚರಿಂದ ಕೊಳ್ಳಲಿರುವ ೭ ಜೆಟ್ ವಿಮಾನಗಳ ಪೈಕಿ ನಾಲ್ಕು [illegible] ಜೆಟ್ ವಿಮಾನಗಳನ್ನು ಇದೇ [illegible] ಭಾರತದ ರಾಯಭಾರಿಯ ವಶಕ್ಕೆ ಒಪ್ಪಿಸಲಾಗಿದೆ ಅವನ್ನು ಈ ತಿಂಗಳ [illegible] ಭಾರತಕ್ಕೆ ಕಳುಹಲಾಗುವುದು [illegible] ಫ್ರೆಂಚ್ ವಿಮಾನ [illegible] ವರದಿ

## ನಾಲ್ಕಂತಸ್ತಿನ ಮನೆಗೆ ಬೆಂಕಿ ಬಿದ್ದು ೧೮ ಜನರ ಮರಣ

ಚಿಕಾಗೊ ನಗರದ ಜನಬಿಡ ಪ್ರದೇಶದಲ್ಲಿರುವ ೪ ಅಂತಸ್ತಿನ ಭವನವೊಂದಕ್ಕೆ ಬೆಂಕಿ ಬಿದ್ದು ಏಳು ಮಕ್ಕಳೂ ಸೇರಿ ೧೮ ಜನ [illegible] ಪಟ್ಟಿರುವರೆಂದು ವರದಿಯಾಗಿದೆ

## ಬರ್ಮಾ ಮಂತ್ರಿಯ ದಸ್ತಗಿರಿ

ಬಲವಂತದಿಂದ [illegible] ಹಣವನ್ನು ವಸೂಲು ಮಾಡಿದ ಬರ್ಮದ ಮಂತ್ರಿ [illegible] ಅವರನ್ನು ದಸ್ತಗಿರಿ ಮಾಡಲಾಗಿದೆ ಅವರನ್ನು ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯತ್ವದಿಂದ ತೆಗೆದು ಸಾಮಾನ್ಯ ಸದಸ್ಯರನ್ನಾಗಿ ಮಾಡಲಾಗಿದೆ ಅವರನ್ನು [illegible] ಒಡಲಾಗಿದೆ ಚೀಣದ ಧನಿಕ [illegible] ಗಿರುವುದು ಅವರ ದಸ್ತಗಿರಿಗೆ ಕಾರಣ

### ಮೈಸೂರು ಜಿಲ್ಲೆಯಲ್ಲಿ ಡಾ. ಮೋದಿಯವರ ಪ್ರವಾಸ

ನೇತ್ರವೈದ್ಯ ಡಾ. ಎಂ. ಸಿ. ಮೋದಿಯವರು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಲು ಇದೇ ತಿಂಗಳು [illegible] ಬಿಡುವರು

### ಜಮಖಾನಾ ಟೆನಿಸ್ ಪಂದ್ಯಗಳು

ಇದೇ ತಿಂಗಳು ೧೭ ರಿಂದ [illegible] ಮಹಾರಾಜಾ ಕಾಲೇಜಿನ [illegible] ಮೈಸೂರ [illegible] ಗಳನ್ನು [illegible] ನಡೆಸಿರುತ್ತಾರೆ [illegible] ವಿಶ್ವಮೋಹನ [illegible] ಪಾಲ್ಗೊಳ್ಳುವರು

### ವಿಶ್ವವಿದ್ಯಾಲಯ ಸಂಘದ ವ್ಯವಹಾರದಲ್ಲಿ ಉಪಾಧ್ಯಾಯರ ಪ್ರವೇಶ ಕೂಡದು

ಮಹಾರಾಜಾ ಕಾಲೇಜಿನ ಆವರಣದಲ್ಲಿ ವರಗಳು ಮತ್ತು ಗೋಡೆಗಳ ಮೇಲೆ [illegible] ದೊಡ್ಡದಾದ ಪ್ಲಕಾರ್ಡುಗಳನ್ನು ಹಾಕಲಾಗಿದೆ ವಿಶ್ವವಿದ್ಯಾಲಯದ ಸಂಘದ ವ್ಯವಹಾರಗಳಲ್ಲಿ ಅಧ್ಯಾಪಕರುಗಳ ಪ್ರವೇಶ ತಪ್ಪಿಸಬೇಕೆಂದೂ ಸಂಘವು ಪೂರ್ಣವಾಗಿ ವಿದ್ಯಾರ್ಥಿಗಳದೆಂದು [illegible] ಗಳು [illegible] ವಿದ್ಯಾರ್ಥಿಗಳ [illegible] ವನ್ನು [illegible] ವ್ಯಕ್ತಪಡಿಸಲಾಗಿದೆ

## ವಿವಾಹಗಳನ್ನೆಲ್ಲ ರಿಜಿಸ್ಟರ್ ಮಾಡಿಸಲು ಶಾಸನ

ಬೊಂಬಾಯಿ ಸಂಸ್ಥಾನದಲ್ಲಿ ನಡೆಯುವ ಎಲ್ಲಾ ವಿವಾಹಗಳೂ ರಿಜಿಸ್ಟರ್ ಆಗಬೇಕೆಂದು [illegible] ಮಸೂದೆಯೊಂದು ಪ್ರಕಟಿಸಲ್ಪಟ್ಟಿರುತ್ತದೆ ರಿಜಿಸ್ಟರ್ ಮಾಡಿಸದ [illegible] ವಿಧಾನಸಭೆಯಲ್ಲಿ [illegible] ತಿಂಗಳ [illegible] ಅಥವಾ [illegible] ಸಜಾ ಮತ್ತು ದಂಡ ವಿಧಿಸುವಂತೆ ಮಸೂದೆಯಲ್ಲಿ ಸೂಚಿಸಲಾಗಿದೆ

### ಕೊಡಗಿನಲ್ಲಿ ಅಫೀಮು ಸೇವನೆಗೆ ನಿಷೇಧ

ಕೊಡಗಿನ ಸರ್ಕಾರದವರು ಬರುವ [illegible] ರಿಂದ [illegible] ಸೇವನೆಯನ್ನು ನಿಷೇಧಿಸಲು ನಿರ್ಧರಿಸಿರುತ್ತಾರೆ

## ಕುದಿಯುವ ಸಾಬೂನು ಕಡಾಯಿಗೆ ಹಾರಿ ಆತ್ಮಹತ್ಯೆ

ಬೊಂಬಾಯಿ [illegible] ಸಾಬೂನ ಕಾರ್ಖಾನೆಯೊಂದರಲ್ಲಿ ಕಳೆದ ಸೋಮವಾರ ಒಬ್ಬ ಕಾರ್ಮಿಕನು ಸಾಬೂನ ತಯಾರಿಸಲು ಉಪಯೋಗಿಸುವ [illegible] ಕುದಿಯುತ್ತಿರುವ ಕಡಾಯಿ [illegible] ಆತ್ಮಹತ್ಯೆ ಮಾಡಿಕೊಂಡುದಾಗಿ ವರದಿಯಾಗಿದೆ [illegible] ಧಿಯಾದ [illegible] ಪೊಲೀಸರ ಪತ್ತೆ ಮಾಡಿದರು ಬುದ್ಧಿ ವಿಕಲ್ಪವಾಗಿದ್ದು ಅವನು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಹೇಳಲಾಗಿದೆ

### ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಚುನಾವಣೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಈ ತಿಂಗಳ ಅಂತ್ಯದಲ್ಲಿ ಚುನಾವಣೆಗಳನ್ನು ನಡೆಸಲು ಮೈಸೂರು ಪ್ರದೇಶ ಕಾಂಗ್ರೆಸ್ ಚುನಾವಣಾ [illegible] ತಯಾರು [illegible] ಸದಸ್ಯರ ಪಟ್ಟಿಯನ್ನು [illegible] ಚುನಾವಣಾ [illegible] ಪಟ್ಟಿಯನ್ನು [illegible] ಪ್ರಕಟಿಸಲು [illegible]

### ಚುನಾವಣೆ ಅರ್ಹತೆ ರದ್ದು

[illegible] ಚುನಾವಣಾ [illegible] ಕೋಲಾರ [illegible] ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಕೆ. ಲಕ್ಕಪ್ಪ, ಸಂಜೀವನಗೂಡಿನ ಡಾ. ಎಸ್. ಸಿ. ಬಂಗಾರಂಗಯ್ಯ [illegible] ಅವರನ್ನು ಅನರ್ಹರನ್ನಾಗಿ ಮಾಡಿರುತ್ತಾರೆ [illegible] ಶ್ರೀಗಳು [illegible] ಹಾಸನದ [illegible] ಅಹಮದ್ ಖಾನ್, [illegible] ಹಬೀಬುಲ್ಲಾ, ಕೆ. ವೀರಣ್ಣ ಮತ್ತು ಕೆ. ಎಸ್. [illegible]ಯ್ಯ ಮುಂತಾದವರು ಅನರ್ಹತೆ ಪಡೆದಿರುವರು

## ಹೈದರಾಬಾದಿನಲ್ಲೊಂದು ಮಾದರೀ ಗ್ರಾಮ

ಹೈದರಾಬಾದಿನ ಸಿದ್ದಿಪೇಟ ತಾಲ್ಲೂಕಿನ [illegible] ಯನ್ನು ಮಾದರಿ ಗ್ರಾಮವನ್ನಾಗಿ ಪರಿವರ್ತಿಸಲಾಗಿದೆ ಅಲ್ಲಿ [illegible] ನಿವಾಸಿಗಳಿರುತ್ತಾರೆ [illegible] ಪಂಚಾಯತಿ ಪ್ರಾಥಮಿಕ ಶಾಲೆ ಔಷಧಾಲಯ ಆಧುನಿಕ ಪುಸ್ತಕ [illegible] ಮತ್ತು ಒಂದು ಸಣ್ಣ ಸಭಾಭವನಗಳಿವೆ ಅಲ್ಲಿನ ಜನರು ತಮ್ಮ ಆರ್ಥಿಕ ಸ್ಥಿತಿಯನ್ನು ತಾವೇ ಉತ್ತಮಗೊಳಿಸಿಕೊಳ್ಳುವರೆಂದು ಹೇಳಲಾಗಿದೆ ಜನರೆಲ್ಲರೂ ಋಣಬಾಧೆಯಿಲ್ಲದೆ ಮದ್ಯಪಾನವನ್ನು ತ್ಯಜಿಸಿ ಸುಖ ಸಂತೋಷದಿಂದಿರುವರು

## ಮಹಿಳೆಯನ್ನು ಸುಟ್ಟುಹಾಕಿದ ಪ್ರಸಂಗ

ಶ್ರವಣಬೆಳಗೊಳದ ನಿವಾಸಿ ಜ್ವಾಲಮ್ಮ ಎಂಬ ೩೦ ವರ್ಷದ ಮಹಿಳೆಯನ್ನು ಜೀವಸಹಿತ ಸುಟ್ಟುಹಾಕಲಾಗಿರುವುದೆಂದು ವರದಿಯಾಗಿದೆ ಪೊಲೀಸರು ತನಿಖೆ ನಡೆಸುತ್ತಿರುವರು

## ಇಂಡೋಚೀಣದ ಯುದ್ಧಕ್ಕಾಗಿ ಫ್ರಾನ್ಸಿಗೆ ಧನ ಸಹಾಯ

ಇಂಡೋಚೀಣದ ಯುದ್ಧಕ್ಕಾಗಿ ಫ್ರಾನ್ಸಿಗೆ ೨೦ ಕೋಟಿ ಡಾಲರುಗಳ ಹೆಚ್ಚು ಸಹಾಯವನ್ನು ಅಮೆರಿಕವು ಒದಗಿಸುವಂತೆ ಫ್ರಾನ್ಸ್ ಕೇಳಿರುವುದೆಂದು ವರದಿಯಾಗಿದೆ

## ಭೂ ಸತ್ಯಾಗ್ರಹದ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆ

ಸರ್ಕಾರ್ [illegible] ತಾಲ್ಲೂಕಿನಲ್ಲಿ ಪ್ರಜಾ ಸಮಾಜವಾದಿಗಳು ಭೂ ಸತ್ಯಾಗ್ರಹವನ್ನು ನಡೆಸದಂತೆ [illegible] ಅಧಿಕಾರಿಗಳು ಕಳೆದ ಸೋಮವಾರದಿಂದ ೧ ತಿಂಗಳು ಕಾಲ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ [illegible] ಹೆಚ್ಚು ಜನರು ಸೇರದಂತೆ ನಿಷೇಧಿಸಿರುತ್ತಾರೆ ಮೆರವಣಿಗೆ ನಡೆಸುವುದು [illegible] ಅಥವಾ ಅದರಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಗಿದೆ

## ಶಿವಮೊಗ್ಗದಲ್ಲಿ ಮಲೆನಾಡು ಸಮ್ಮೇಳನ

ಶಿವಮೊಗ್ಗೆಯಲ್ಲಿ ಬರುವ ಡಿಸೆಂಬರ್ ತಿಂಗಳಿನಲ್ಲಿ ಮಲೆನಾಡು ಸಮ್ಮೇಳನ ಮತ್ತು ಪ್ರದರ್ಶನವನ್ನು ಏರ್ಪಡಿಸಲು ಅಲ್ಲಿನ ಜಿಲ್ಲಾ ಬೋರ್ಡಿನವರು ನಿರ್ಧರಿಸಿರುತ್ತಾರೆ ಸಮ್ಮೇಳನಕ್ಕೆ ೫೦ ಸಾವಿರ ರೂ ಸಹಾಯವನ್ನು ಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸಲಾಗಿದೆ

## ಕಡಬಿನ ಪಾತ್ರೆಗೆ ಬಿದ್ದು ಮುದುಕಿಯ ಮರಣ

ತಿರುವನಂತಪುರದ ಕೋಟೆ ಆವರಣದಲ್ಲಿ ಕಳೆದ ಭಾನುವಾರ ನಡೆಯಲಿದ್ದ ಧಾರ್ಮಿಕ ಸಮಾರಂಭದ ಕೆಲಸಕಾರ್ಯಗಳು ವಿಧ್ಯುಕ್ತವಾಗಿ ಕ್ರಮವಾಗಿ ನಡೆಯುತ್ತಿರುವಾಗ [illegible] ಒಬ್ಬ ವೃದ್ಧ ವಿಧವೆಯು ಅಡಿಗೆ ಕೊಠಡಿಗೆ ಹೋಗಿ [illegible] ಕಡಬು ತಯಾರಿಸುತ್ತಿದ್ದ ಒಂದು ದೊಡ್ಡ ಪಾತ್ರೆಗೆ ಬಿದ್ದು ಮೃತಪಟ್ಟಳೆಂದೂ ಈ ಘಟನೆಯಿಂದ ಉಂಟಾದ ಅಪವಿತ್ರತೆಯ ಪರಿಣಾಮವಾಗಿ ಸಮಾರಂಭವನ್ನು ರದ್ದುಗೊಳಿಸಲಾಯಿತೆಂದೂ ವರದಿಯಾಗಿದೆ

### ಗುಂಡ್ಲುಪೇಟೆ ಉಪಾಧ್ಯಾಯರ ಸಂಘದ ಸಭೆ

ಗುಂಡ್ಲುಪೇಟೆ ಸೆಂಟರ್ ಉಪಾಧ್ಯಾಯರ ಸಂಘದ ಸಭೆಯು ಕಳೆದ ಶನಿವಾರ ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಲ್. [illegible] ಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಅಧ್ಯಕ್ಷರಾದ ಶ್ರೀ ಎಂ. ಸಿ. ಸುಬ್ಬಪ್ಪನವರು ಉಪಾಧ್ಯಾಯರ ಮೇಲ್ಮೆಗೆ ಬೇಕಾದ ಅನೇಕ ವಿಷಯಗಳನ್ನು ಅಧ್ಯಕ್ಷರ ಮುಂದಿಟ್ಟರು ಅಧ್ಯಕ್ಷರು [illegible] ಕೆಲಸವನ್ನು ಶ್ಲಾಘಿಸಿ [illegible] ಉಪಾಧ್ಯಾಯರ ಕರ್ತವ್ಯ [illegible] ವಿಷಯವಲ್ಲೂ ಮತ್ತು ಅಧ್ಯಾಪಕರು ಹೇಗೆ ಪೋಷಕರ ಸಹಕಾರವನ್ನು ಪಡೆಯಬೇಕೆಂಬ ವಿಷಯದಲ್ಲೂ ದೀರ್ಘವಾದ ಭಾಷಣವನ್ನು ಮಾಡಿದರು

## ಕಾಂ|| ಅಧ್ಯಕ್ಷತೆ ಮತ್ತು ಮುಖ್ಯ ಮಂತ್ರಿತ್ವ ಒಬ್ಬರಿಗೇ ಕೂಡದು

ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಎನ್ ಸಂಜೀವರೆಡ್ಡಿಯವರು ಒಂದು ಹೇಳಿಕೆಯನ್ನಿತ್ತು ಒಬ್ಬ ವ್ಯಕ್ತಿಯೇ ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆ ಮತ್ತು ಮುಖ್ಯ ಮಂತ್ರಿ ಸ್ಥಾನಗಳಲ್ಲಿರುವುದನ್ನು ವಿರೋಧಿಸಿರುತ್ತಾರೆ

## ದೇವಸ್ಥಾನದ ಬಳಿ ಹೊಡೆದಾಟವಾಗಿ ಇಬ್ಬರ ಮರಣ

ಬಿಹಾರಿನ ಮೋತಿಹಾರಿ ಎಂಬಲ್ಲಿನ ಈಶ್ವರ ದೇವಾಲಯದ ಅಧಿಕಾರಿಗಳಿಗೂ ಮತ್ತು ಹೂವು ಮಾರುವವರಿಗೂ ಕಳೆದ ಸೋಮವಾರ ಹೊಡೆದಾಟ ನಡೆದು ಒಬ್ಬನು ಸ್ಥಳದಲ್ಲೇ ಮೃತಪಟ್ಟು ಮತ್ತೊಬ್ಬನು ಆಸ್ಪತ್ರೆಯಲ್ಲಿ ಸತ್ತನೆಂದು ವರದಿಯಾಗಿದೆ

## ಬಿಹಾರಿನಲ್ಲೂ ಅಣುಶಕ್ತಿ ಸಾಮಗ್ರಿಯ ಪತ್ತೆ

ಅಣುಶಕ್ತಿಯನ್ನು ಉತ್ಪನ್ನ ಮಾಡಬಹುದಾದಂಥ ಯುರೇನಿಯಂ ಧಾತುವು ಬಿಹಾರ್ ಪ್ರಾಂತದ ಒಂದು ಕಡೆ ದೊರೆತಿರುವುದೆಂದು ಕೇಂದ್ರ ಪಾರ್ಲಿಮೆಂಟಿನಲ್ಲಿ ಮೌಲಾನಾ ಆಜಾದರು ತಿಳಿಸಿರುತ್ತಾರೆ

## ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | ೯೦ ೦ ೦ | ೨೭ ೦ ೦ |
| ಎಳ್ಳು | ೬೦ ೬ ೦ | ೮೨ ೧೦ ೦ |
| ಹುಚ್ಚೆಳ್ಳು | ೪೭ ೦ ೦ | |
| ಹೊಂಗೆಬೀಜ | ೨೭ ೦ ೦ | |
| ಹುಣಸೇಹಣ್ಣು | ೭ ೯ ೦ | |
| ಬೇಗೆ [illegible] | ೭ ೨ ೦ | |
| ತೆಂಗಿನಕಾಯಿ ೧೦೦೦ಕ್ಕೆ | ೧೪೬ ೦ ೦ | ೨೫೫ ೦ ೦ |

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಕರ್ನಾಟಕ ಸಂಗೀತ ಮಧ್ಯಾಹ್ನ [illegible] ಪ್ರಮೀಳಾದೇವಿ [illegible] ಗರ್ಭಿಣಿ ಮತ್ತು ಶಿಶು ಸಂರಕ್ಷಣೆ ಗರ್ಭಿಣಿಯರಿಗೆ ಸಲಹೆಗಳು [illegible] ಸಂಜೆ ೬ ೪೦ ಎಸ್ ರಾಮಚಂದ್ರರಾವ್, ಗಾಯನ [illegible] ಹಿಂದಿ [illegible] ಕನ್ನಡ ಗೀತೆಗಳು [illegible] ಸಂಗೀತ [illegible] ಕರ್ನಾಟಕದ ಜನಪದ ಗೀತೆ [illegible] ಕರ್ನಾಟಕ [illegible] ತರಂಗರಂಗ

ಒಲಂಪಿಯಾ ಟಾಕೀಸ್
10 9 53 ರಿಂದ
ಅಮೋಘ ೭ನೇ ವಾರ ಬಾಪ್ಪಿ
[illegible] ಶ್ರೀ ಪ್ರದರ್ಶನ [illegible]
[illegible] ಹಿಂದಿ ಚಿತ್ರ
★ ನನ್ನೆ ಮುನ್ನೆ ★

## ಕಳೆದುಹೋಗಿದೆ

ತಾ|| 7-9 53 ನೇ ಸೋಮವಾರ ಮಧ್ಯಾಹ್ನ ಬೆಂಗಳೂರಿಗೆ ಹೊರಡುವ ಮೇಲ್ ಟ್ರೈನಿನಲ್ಲಿ ನಾನು ಬೆಂಗಳೂರಿಗೆ ಹೋಗುವಾಗ ಪಾಂಡವಪುರ (ಫ್ರೆಂಚ್ ರಾಕ್ಸ್)ದ ರೈಲ್ವೆ ಸ್ಟೇಷನ್ನಿನಲ್ಲಿ ನನ್ನ ಇತರ ಸಾಮಾನುಗಳೊಡನೆ ಒಂದು ಲೆದರ್ ಬ್ಯಾಗೂ ಸಹ ಕಳುವಾಗಿದೆ ಅದರಲ್ಲಿ ಮುಖ್ಯವಾಗಿ ಮೈಸೂರು ಸರ್ಕಾರದ ಇನ್ಷೂರೆನ್ಸ್ ಇಲಾಖೆಯ 71665 E ಮತ್ತು 134715 ! ನಂಬರುಗಳುಳ್ಳ (ಹೆಚ್ ಶ್ರೀನಿವಾಸಾಚಾರ್ ಮತ್ತು ಎನ್ ನಂಜಪ್ಪಾಚಾರ್) ಇವರುಗಳ ಪಾಲಿಸಿಗಳೂ ಮತ್ತು ಗೌ|| ಪ್ರೊನೋಟ್ ಇನ್ಷೂರೆನ್ಸ್ ಕವರ್ ನೋಟ್ ಬುಕ್ (7921-7940) ನಂಬರುಳ್ಳ ರಸೀದಿ ಮತ್ತು ಇತರ ಕಾಗದ ಪತ್ರಗಳೂ ಇದ್ದುವು ಇವುಗಳನ್ನು ಪತ್ತೆ ಹಚ್ಚಿಕೊಟ್ಟವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುತ್ತದೆ

ಜಿ ವಿ ದೇಶಿಕಾಚಾರ್,
3046/1 ಒಂಟಿಕೊಪ್ಪಲು, ಮೈಸೂರು

ಜೀವವಿಮೆ

ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ,
ಮಗುವಿನ ಆವಶ್ಯಕತೆಯೂ ಆಗಿದೆ

ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರುಷಗಳ ನಂಬಿಕೆ [illegible] ಸಹಕಾರ ಗಳಿಸಿದೆ
ಪೂರ್ಣ ಭದ್ರತೆ—ಕಡಿಮೆ ಕಂತು [illegible] ಇಡೀ ಭಾರತ
ದಲ್ಲಿ ಅತ್ಯಧಿಕ ಬೋನಸ ಹಂಚಿರುವುದು! ಅತ್ಯಲ್ಪ
ಕಾಲಾವಧಿ [illegible] ದರ ಸುಲಭ ಸಾಲ
[illegible] ವಿಮಾ ಪಾಲಿಸಿಗಳು
[illegible] ಪ್ರಜೆಗಳ [illegible]
ಮಾಡಲು ಇಂದೇ ನಿರ್ಧರಿಸಿರಿ

★

ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು

Edited Printed and Published by A R Nagarajan at Sadhvi Press D Subbiah Road, Mysore

ಟೆಲಿಫೋನ್ ನಂ 792

|| ವಂದೇ ಮಾತರಂ ||

ಬಿಡಿ ಪತ್ರಿಕೆ 6 ಕಾಸು

ಮೈಸೂರು ಗೌ|| ಸಿಲ್ಕ್ ಸೀರೆಗಳು

ಧರ್ಮಾವರಂ, ಪೂನಾ, ನಾಗಪುರ, ಆರ್ಟ್ ಸೀರೆಗಳು ಮತ್ತು ತರಹೆ ವಾರಿ ನೂಲಿನ ಸೀರೆಗಳಿಗೆ

M V. ಭೋಜಯ್ಯ

ಇಂಡಿಯನ್ ಬ್ಯಾಂಕ್ ಎದುರು ಮೈಸೂರು ಫೋನ್ 446

# ಸಾಧ್ವಿ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೩ ] MYSORE SUNDAY 13-9-1953 : ಮೈಸೂರು : ಭಾನುವಾರ ೧೩-೯ ೧೯೫೩ [ ಸಂಚಿಕೆ ೪೮

# ಡೆಲ್ಲಿಯ ಚೀಣಾ ರಾಯಭಾರಿ ಕಛೇರಿ ಮುಂದೆ ಪ್ರದರ್ಶನ

## ಗಣಪತಿ ಉತ್ಸವ

ಮೈಸೂರು ೧೨

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿದ್ಯಾ ಗಣಪತಿ ಸಭೆಯವರು ಗಣಪತಿ ಮಂಗಳ ರತಿ ಉತ್ಸವದ ಸಂಬಂಧದಲ್ಲಿ ನಾಳೆ ಸಂಜೆ ೬ ಘಂಟೆಗೆ ಸಂಗೀತವನ್ನು ಏರ್ಪಡಿಸಿರುತ್ತಾರೆ

ಕೃಷ್ಣರಾಜ ಮೊಹಲ್ಲದಲ್ಲಿರುವ ಶ್ರೀ ಮಹಾಗಣಪತಿ ಮಂಡಲಿಯವರು ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ಗಣೇಶೋತ್ಸವವನ್ನು ನಡೆಸಿ ಈ ಸಂಜೆ ಮೆರವಣಿಗೆಯನ್ನು ಏರ್ಪಡಿಸಿರುತ್ತಾರೆ

ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ಈ ಸಂಜೆ ೭ ಘಂಟೆಗೆ ಸಂಸ್ಕೃತ ಪಾಠಶಾಲೆಯ ಪ್ರಾಧ್ಯಾಪಕರಾದ ಶ್ರೀ ಬಿ ಎಸ್ ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಎಲ್ ನಂಜುಂಡಸ್ವಾಮಿಯವರ ಗೀತವು ವಿ|| ಎ ಕೃಷ್ಣವತಿಯವರ ಪಿಟೀಲು ಮತ್ತು ವಿ|| ಗೋಪಾಲರಾವ ರವರ ಮೃದಂಗದೊಡನೆ ನಡೆಯುವುದು

ಇರ್ವಿನ್ ರಸ್ತೆಯಲ್ಲಿರುವ ಶ್ರೀ ಶಿವ ವಿದ್ಯಾಚಾರ್ಯರ ಛತ್ರದ ಎಳೆ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ ವಿದ್ಯಾ ಗಣಪತಿ ಮಂಗಳಾರತಿಯು ನಡೆಯುವುದು ದರ್ಬಾರ್ ಭಕ್ಷಿಯವರಾದ ಶ್ರೀ ಎಚ್ ಎಲ್ ದೇವರಾಜೇ ಅರಸಿನವರು ಶ್ರೀಮನ್ಮಹಾರಾಜರ ಭಾವಚಿತ್ರವನ್ನು ಅನಾವರಣ ಮಾಡುವರು

ಶ್ರೀ ವಿದ್ಯಾ ಗಣಪತಿ ಸೇವಾ ಸಂಘದ ಆಶ್ರಯದಲ್ಲಿ ಮೈಸೂರು ಅಶೋಕಾ ರಸ್ತೆಯ ವೆಸ್ಟ್ ಕ್ರಾಸ್ ೫ ನೇ ರಸ್ತೆಯಲ್ಲಿ ಹಾಕಿರುವ ಚಪ್ಪರದಲ್ಲಿ ಶ್ರೀ ವಿದ್ಯಾ ಗಣಪತಿ ಸ್ವಾಮಿಯವರ ಉತ್ಸವದ ಸಂಬಂಧವಾಗಿ ನೆನ್ನೆಯಿಂದ ೯ ದಿನಗಳ ವರೆಗೆ ಪ್ರತಿ ಸಂಜೆ ೭|| ಘಂಟೆಯಿಂದ ಹರಿಕಥೆ ಸಂಗೀತ ವಗೈರಾದುವು ನಡೆಯುವುವು ೨೧ ನೇ ತಾರೀಖು ಸಂಜೆ ೭ ಘಂಟೆಗೆ ಗಣಪತಿ ಮೆರವಣಿಗೆಯು ಇದೆ

ರಮಾವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದಲ್ಲಿ ಈ ರಾತ್ರಿ ೮|| ಗಂಟೆಗೆ ಶ್ರೀ ಆರ್ ಕೆ ಶ್ರೀಕಂಠನ್ ಗಾಯನ, ವಿ|| ಟಿ ಎಸ್ ತಾತಾಚಾರ್ ಪಿಟೀಲು ಮತ್ತು ಶ್ರೀ ಎಂ ಎಸ್ ರಾಮಯ್ಯನವರ ಮೃದಂಗವು ಗಣಪತಿ ಉತ್ಸವದ ಅಂಗವಾಗಿ ಏರ್ಪಾಟಾಗಿವೆ

ಕೃಷ್ಣವಿಲಾಸ ರಸ್ತೆಯಲ್ಲಿರುವ ಮಾದರಿ ಶಾಲೆಯಲ್ಲಿ ನಾಳೆ ಸಂಜೆ ೫|| ಗಂಟೆಗೆ ಆ||ವೈ|| ವಿ|| ದೊರೆಸ್ವಾಮಿ ಅಯ್ಯಂಗಾರ್ ಮತ್ತು ಪಾರ್ಟಿಯವರಿಂದ ವೀಣಾ ವಾದನವು ಇದೆ

## ಮಧ್ಯ ಭಾರತ ಸರ್ಕಾರದಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸೋಲು

ಮಧ್ಯ ಭಾರತದ ಮುಖ್ಯ ಮಂತ್ರಿ ಮಿಶ್ರಿಲಾಲ ಗಂಗ್ವಾಲ್ ರವರ ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ವಿರೋಧ ಪಕ್ಷದ ನಾಯಕ ನಿರಂಜನ ವರ್ಮಾರವರು ಶಾಸನ ಸಭೆಯಲ್ಲಿ ಮೊನ್ನೆ ತರಲಾಗಿ ಅದು ೫೫ ೮೯ ಓಟುಗಳಿಂದ ಬಿದ್ದುಹೋಯಿತು ವಿರೋಧ ಪಂಗಡದವರಿಗೆ ಸರ್ಕಾರದವರು ಕಿರುಕುಳ ಕೊಡುತ್ತಿರುವರೆಂದು ಅವಿಶ್ವಾಸ ನಿರ್ಣಯಕ್ಕೆ ಬೆಂಬಲವಿತ್ತವರು ಆಪಾದನೆ ಮಾಡಿದರು

## ನೆಹರೂ ಮತ್ತು ರಾಧಾಕೃಷ್ಣನ್ ಟೀಮುಗಳಿಗೆ ಕ್ರಿಕೆಟ್ ಪಂದ್ಯ

### ನೆಹರೂರವರ ಬೌಲಿಂಗ್

ಪ್ರವಾಹ ಪೀಡಿತರ ಪರಿಹಾರಾರ್ಥ ವಾಗಿ ದೆಹಲಿಯಲ್ಲಿ ನೆನ್ನೆ ಪ್ರಧಾನಿ ನೆಹರೂ ಮತ್ತು ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್ ರವರ ಟೀಮುಗಳಿಗೆ ನಡೆದ ಕ್ರಿಕೆಟ್ ಪಂದ್ಯದಲ್ಲಿ ಪಂಡಿತ ನೆಹರೂರವರು ಟಾಸ್ ಗೆದ್ದು ಮೊದಲು ಬ್ಯಾಟಿಂಗನ್ನು ಆರಿಸಿದರು ಅವರ ಕಡೆಯ ಮೊದಲು ಆಟಗಾರರ ತಂಡ ರನ್ನುಗಳನ್ನು ಹೊಡೆದು ಡಿಕ್ಲೇರ್ ಮಾಡಿಕೊಂಡ ತರುವಾಯ ಉಪರಾಷ್ಟ್ರಾಧ್ಯಕ್ಷರ ಪಂಗಡದವರ ಬ್ಯಾಟಿಂಗನ್ನು ಆರಂಭಿಸಿ ಟೀ ವಿರಾಮ ಸಮಯ ವೇಳೆಗೆ ಎರಡು ವಿಕೆಟ್ಟುಗಳಿಗೆ ೮ ರನ್ನುಗಳನ್ನು ಮಾಡಿದ್ದರು ನೆಹರೂರವರು ಆಟದ ಕೊನೆಯಲ್ಲಿ ತಾವೇ ಬೌಲಿಂಗ್ ತೆಗೆದುಕೊಂಡರು ಅವರ ಮೇಡನ್ ಓವರ್ ಆಯಿತು ೨೦ ವರ್ಷಗಳ ಹಿಂದೆ ತಾವು ಬೌಲಿಂಗ್ ಮಾಡಿದ್ದುದಾಗಿಯೂ ತಮ್ಮ ಎಸೆದ ಚೆಂಡು ಎಲ್ಲಿಯಾದರೂ ಅಂಪೈರರಿಗೆ ತಗಲುವುದೋ ಎಂದು ತಮ್ಮ ಮನಸ್ಸಿನಲ್ಲೇ ಗಾಬರಿಯಾಗಿತ್ತೆಂದೂ ಅವರ ಹೇಳಿದರು ಈ ಪಂದ್ಯವನ್ನು ನೋಡಲು ೫೦ ಸಾವಿರ ಜನರು ಸೇರಿದ್ದರು

### ಒಂದೇ ಕಣ್ಣಿನ ಶಿಶು

ಸಿಕಂದರಾಬಾದಿನ ಆಸ್ಪತ್ರೆಯೊಂದರಲ್ಲಿ ಜನಿಸಿ, ಮಡಿದ ಒಂದು ಹೆಣ್ಣು ಶಿಶುವಿಗೆ ಒಂದೇ ಒಂದು ಕಣ್ಣು ಇದ್ದಿತು ಮೂಗಿನ ಹಣೆಯ ಮೇಲೆ ಆ ಕಣ್ಣು ಇದ್ದು ಕಣ್ಣಿನ ಮೇಲೆ ಮಾಂಸ ಖಂಡವು ಬೆಳೆದಿತ್ತೆಂದೂ ರೆಪ್ಪೆಗಳೇ ಇಲ್ಲವೆಂದೂ ಹೇಳಲಾಗಿದೆ ಶಿಶುವನ್ನು ಆಸ್ಪತ್ರೆಯವರು ಪ್ರದರ್ಶನಕ್ಕಾಗಿ ಇಟ್ಟುಕೊಂಡಿರುವರು

## ಸ್ಪೇನಿನಲ್ಲಿ ಅಮೆರಿಕದ ನೌಕಾ ಮತ್ತು ವಿಮಾನ ನೆಲೆ

ಸ್ಪೇನ್ ಮತ್ತು ಅಮೆರಿಕಗಳ ನಡುವೆ ಮಿಲಿಟರಿ ಮತ್ತು ಆರ್ಥಿಕಗಳ ಒಪ್ಪಂದದ ಎಲ್ಲ ಯೋಜನೆಗಳು ಸಿದ್ಧವಾಗಿ ಇನ್ನು ಮೂರು ವಾರಗಳಲ್ಲೇ ರಹಸ್ಯ ಬೀಳಲಿರುವುವೆಂದು ವಾಷಿಂಗ್ಟನ್ನಿನಲ್ಲಿರುವ ರಾಜತಾಂತ್ರಿಕ ಕಛೇರಿ ಅಧಿಕಾರಿ ಆವರಣಗಳಿಂದ ತಿಳಿದುಬಂದಿದೆ ಯೂರೋಪಿನ ಮೇಲೆ ನಡೆಯಬಹುದಾದ ಆಕ್ರಮಣವನ್ನು ನಿವಾರಿಸಲು ಸ್ಪೇನಿನ ಚುನಾಯಿತ ಸ್ಥಳಗಳಲ್ಲಿ ಅವೆ ಕಳದ ವಿಮಾನ ಮತ್ತು ನೌಕಾ ನೆಲೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸುವ ವಿಷಯವು ಒಪ್ಪಂದದಲ್ಲಿ ಅಡಕವಾಗಿರುವುದೆಂದು ಹೇಳಲಾಗಿದೆ ಮ್ಯಾಡ್ರಿಡ್ಡಿನಲ್ಲಿ ಒಪ್ಪಂದಕ್ಕೆ ಅಮೆರಿಕದ ಪ್ರತಿನಿಧಿಯೂ ಸ್ಪೇನಿನ ಮಿಲಿಟರಿ ಮತ್ತು ವಿದೇಶೀ ಸಚಿವಾಲಯದ ಅಧಿಕಾರಿಗಳೂ ರುಜು ಹಾಕಿದ ಮೇಲೆ ೯೦ ದಿನಗಳ ನಂತರ ಅದು ಜಾರಿಗೆ ಬರುವುದು ಸ್ಪೇನಿಗೆ ಅಮೆರಿಕದಿಂದ ೨ ಕೋಟಿ ಡಾಲರಿನ ಸಹಾಯವನ್ನೊದಗಿಸಲಾಗುವುದೆಂದೂ ಹೇಳಲಾಗಿದೆ

### ಖೈದಿಗಳಿಗಾಗಿ ಹರಿಕಥೆ

ಮೈಸೂರು ಜೈಲಿನಲ್ಲಿರುವ ಖೈದಿಗಳಿಗಾಗಿ ಗಣಪತಿ ಹಬ್ಬದ ಪ್ರಯುಕ್ತ ಶ್ರೀಗಳಾದ ಪಿ ರಾಮುಸ್ವಾಮಿ ನಾಯ್ಡು ಮತ್ತು ಅವರ ಮಕ್ಕಳು ಗುರುರಾಜರವರಿಂದ ಶಬರಶಂಕರ ವಿಲಾಸ ಎಂಬ ಹರಿಕಥೆಯು ನೆನ್ನೆ ಏರ್ಪಾಟಾಗಿದ್ದಿತು

## ಮುಸ್ತಾಫಿಕ್ ರವರ ಉಪವಾಸ ಮುಕ್ತಾಯ

ಪರ್ಷಿಯದ ಈಗಿನ ಪ್ರಧಾನಿ ಜನರಲ್ ಜಹೆದಿಯವರು ಮುಸ್ತಾಫಿಕ್ ರವರಿಗೆ ಹೊಸ ಬಂಧನದ ಸ್ಥಳದಲ್ಲಿ ಸಕಲ ಸೌಲಭ್ಯಗಳನ್ನು ಒದಗಿಸುವುದಾಗಿ ಭರವಸೆಯಿತ್ತಿರುವುದರಿಂದ ಮುಸ್ತಾಫಿಕ್ ರವರು ಉಪವಾಸವನ್ನು ಮುಕ್ತಾಯ ಮಾಡಿರುವರೆಂದು ವರದಿಯಾಗಿದೆ

## ಮೊರಾಕೊ ಸುಲ್ತಾನರ ಕೊಲೆಗೆ ವಿಫಲ ಪ್ರಯತ್ನ

ಫ್ರೆಂಚ್ ಮೊರಾಕೊವಿನ ಹೊಸ ಸುಲ್ತಾನರು ಮೊನ್ನೆ ರಾಬಟ್ ನಗರದಲ್ಲಿ ಕುದುರೆ ಮೇಲೆ ಸವಾರಿ ಮಾಡುತ್ತಿದ್ದಾಗ ವೇಗದಿಂದ ಬರುತ್ತಿದ್ದ ಮೋಟಾರೊಂದು ಸುಲ್ತಾನರ ಕುದುರೆಗೆ ಡಿಕ್ಕಿ ಹೊಡೆದುದರಿಂದ ಸುಲ್ತಾನರು ಕೆಳಕ್ಕೆ ಉರುಳಿದರೆಂದೂ, ಅವರನ್ನು ಕೊಲ್ಲಲು ಈ ರೀತಿಯ ಪ್ರಯತ್ನ ನಡೆಸಲಾಯಿತೆಂದೂ, ಸುಲ್ತಾನರ ಅಂಗರಕ್ಷಕರು ಮೋಟಾರಿನ ಡ್ರೈವರನನ್ನು ಗುಂಡಿನಿಂದ ಹೊಡೆದು ಸಾಯಿಸಿದರೆಂದೂ ವರದಿಯಾಗಿದೆ

## ಹಾಕಿ ಪಂದ್ಯದಲ್ಲಿ ಸಿಂಹಳದ ಮೇಲೆ ಮೈಸೂರಿನ ವಿಜಯ

ಬೆಂಗಳೂರಿನಲ್ಲಿ ನೆನ್ನೆ ಮೈಸೂರಿನ ಜೂನಿಯರ್ ಹಾಕಿ ಟೀಮಿನವರು ಸಿಂಹಳದ ಹಾಕಿ ಸಂಘದ ಟೀಮಿನ ಮೇಲೆ ಆಟವಾಡಿ ೭ ಗೋಲುಗಳನ್ನು ಹೊಡೆದು ವಿಜಯ ಗಳಿಸಿದರು ಮೈಸೂರಿನವರ ಆಟವು ಎಲ್ಲ ಭಾಗದಲ್ಲೂ ಉತ್ತಮವಾಗಿದ್ದಿತು ಮೈಸೂರಿನ ಗೋಲ್ ಕೀಪರಿಗೆ ಕೆಲಸವೇ ಇರಲಿಲ್ಲ ರಾಜನ್ ರೊಬ್ಬರೇ ೪ ಗೋಲುಗಳನ್ನೂ, ವಾಸನ್ ಮತ್ತು ಭಾಸ್ಕರ್ ಇಬ್ಬರೂ ಒಂದೊಂದು ಗೋಲುಗಳನ್ನೂ ಹೊಡೆದರು

## ವಿವಾಹ ಮಹೋತ್ಸವಗಳು

ರಾಜಧಾನಿಯ ಚಾಮರಾಜ ಬ್ರೂಯರಿಯ ಶ್ರೀ ಸಿ ಜಯರಾಮರವರು ತಮ್ಮ ಸಹೋದರಿ ಶ್ರೀ ಸೀತಮ್ಮ ಮುದಲಿಯಾರರ ಮಗ ಶ್ರೀ ಸಿ ಎಸ್ ಶೇಷಾಚಲಂರವರಿಗೆ ಮೈಸೂರು ಮೆಡಿಕಲ್ ಆಸ್ಪತ್ರೆ ಹನವರಾದ ಡಾ|| ಎ ಜೆ ರಾಜಗೋಪಾಲ ಮುದಲಿಯಾರರ ಮಗಳು ಸೌ|| ಪ್ರೇಮ ಕುಮಾರಿಯವರನ್ನು ತಂದುಕೊಂಡು ಕಳೆದ ಗುರುವಾರ ವಿವಾಹವನ್ನು ಜರುಗಿಸಿದರು

ರಾಜಧಾನಿಯ ಶ್ರೀರಾಂಪೇಟೆಯಲ್ಲಿರುವ ಶ್ರೀ ಸಿ ಶೇಷಯ್ಯ ಶೆಟ್ಟಿಯವರು ತಮ್ಮ ಮಕ್ಕಳು ಶ್ರೀ ಸಿ ಎಸ್ ನಾಗರಾಜ ಗುಪ್ತರವರಿಗೆ ಬೆಂಗಳೂರಿನ ಶ್ರೀ ಟಿ ವೆಂಕಟಸುಬ್ಬಯ್ಯ ಶೆಟ್ಟರವರ ಮಗಳು ಸೌ|| ಸರೋಜಮ್ಮನನ್ನು ತಂದುಕೊಂಡು ಕಳೆದ ಗುರುವಾರ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು

### ದಸರಾ ಉತ್ಸವಗಳು

ದಸರಾ ಹಬ್ಬಕ್ಕೆ ಸಂಬಂಧಿಸಿದ ಉತ್ಸವಗಳು ಇರುವುದಿಲ್ಲವೆಂದು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರಿಯಲ್ಲವೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ ಎಂದಿನಂತೆ ಉತ್ಸವಗಳು ನಡೆಯುವುವಲ್ಲದೆ, ವಿಜಯ ದಶಮಿ ಮೆರವಣಿಗೆಯೂ ಇರುವುದಾಗಿ ತಿಳಿಸಲಾಗಿದೆ

## ದೆಹಲಿಯ ಚೀಣಾ ರಾಯಭಾರಿ ಕಛೇರಿ ಮುಂದೆ ಪ್ರದರ್ಶನ

ದೆಹಲಿಯಲ್ಲಿ ನೆನ್ನೆ ಸುಮಾರು ೫೦ ಜನರು ಬೋರ್ಡುಗಳನ್ನು ಹಿಡಿದು ಚೀಣದ ರಾಯಭಾರಿಯ ಕಛೇರಿ ಮುಂದೆ ಪ್ರದರ್ಶನ ನಡೆಸಿದರು "ಚೀಣಾ ಸಾಮ್ರಾಜ್ಯ ಶಾಹಿ ಬೀಳಲಿ ಟಿಬೆಟ್ ಸ್ವತಂತ್ರ ರಾಜ್ಯ, ಟಿಬೆಟ್ ಆಕ್ರಮಣ ಕೊನೆಗಾಣಿಸಿ" ಎಂಬುದಾಗಿ ಬೋರ್ಡುಗಳಲ್ಲಿ ಬರೆಯಲಾಗಿದ್ದಿತು ಪಾರ್ಲಿಮೆಂಟಿನ ಹಲವು ಸದಸ್ಯರೂ ಪ್ರದರ್ಶನಕ್ಕೆ ಸೇರಿದ್ದರು ಟಿಬೆಟ್ ದಿನಾಚರಣೆಯ ಅಂಗವಾಗಿ ಈ ಪ್ರದರ್ಶನವು ನಡೆದು, ಸಂಜೆ ಮೈಸೂರಿನ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ವಿದೇಶೀಯರ ದಾಸ್ಯದಲ್ಲಿ ನರಳುತ್ತಿರುವ ಟಿಬೆಟ್ಟಿನ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು

## ಪೋಲೆಂಡಿನಲ್ಲಿ ಯುದ್ಧ ಸಿದ್ಧತೆ ?

ಪೋಲೆಂಡಿನಲ್ಲಿ ಯುದ್ಧ ಸಿದ್ಧತೆಗಳಾಗುತ್ತಿರುವುವೆಂದು ಪೋಲೆಂಡಿನ ಯುದ್ಧ ಮುಕ್ತಾಯ ಸಮಿತಿ ಸದಸ್ಯರಲ್ಲೊಬ್ಬರಾದ ಆರ್ ಡಾ ಪಾಸಿವಿಚ್ ರವರು ತಿಳಿಸಿರುತ್ತಾರೆ ಅವರು ವಿಶ್ವ ಸಂಸ್ಥೆಯ ರಕ್ಷಣೆಯ ಪಡೆದು ಈಗ ರೋಮಿಯದಲ್ಲಿ ಇರುವರು

### ವಿಷಪೂರಿತ ನೊಣ

ಆಗ್ರಾ ಬಳಿ ಫರೂಕಾಬಾದ್ ಜಿಲ್ಲೆಯಲ್ಲಿ ವಿಷಪೂರಿತವಾದ ಹೊಸ ನೊಣಗಳ ಹಾವಳಿಯು ಜಾಸ್ತಿಯಾಗಿರುತ್ತದೆ ಅದು ಒಂದು ಅಂಗುಲ ಉದ್ದವಿದ್ದು ಹಸಿರು ಬಣ್ಣವುಳ್ಳದ್ದಾಗಿದೆ ಅದು ಕಡಿದ ಕೂಡಲೇ ಮೈ ಬಾತುಕೊಂಡು ಉರಿಯಲು ಪ್ರಾರಂಭವಾಗುವುದೆಂದೂ, ಮನುಷ್ಯರು ಮರಣ ಹೊಂದಿದ ಪ್ರಸಂಗಗಳೂ ಇರುವುವೆಂದೂ ಹೇಳಲಾಗಿದೆ ನಿತ್ಯವೂ ಸಹಸ್ರಾರು ಜನರನ್ನು ಈ ನೊಣಗಳು ಕಚ್ಚುತ್ತಿರುವುದಾಗಿ ಹೇಳಲಾಗಿದೆ

## ಜೈಪುರದಲ್ಲಿ ಅಕ್ಸೈಸ್ ವಿರುದ್ಧ ಹರತಾಳ ಮುಕ್ತಾಯ

ಜೈಪುರದಲ್ಲಿ ಅಕ್ಸೈಸ್ ಮತ್ತು ಮಾರಾಟ ತೆರಿಗೆ ವಿರುದ್ಧವಾಗಿ ೧೪ ದಿನಗಳಿಂದ ನಡೆಯುತ್ತಿದ್ದ ಹರತಾಳವು ನೆನ್ನೆ ಮುಕ್ತಾಯವಾಯಿತು ನೆನ್ನೆ ಎಲ್ಲಾ ಅಂಗಡಿಗಳೂ ತೆರೆದಿದ್ದುವು ಆ ಊರಿನಲ್ಲಿ ಅಕ್ಸೈಸ್ ಹಾಕುವುದರ ಬಗ್ಗೆ ಸಮಿತಿಯೊಂದು ಪರಿಶೀಲನೆ ನಡೆಸುವವರೆಗೂ ಸುಂಕವನ್ನು ತಾತ್ಕಾಲಿಕವಾಗಿ ವಸೂಲು ಮಾಡದಂತೆ ಸರ್ಕಾರದವರು ಒಪ್ಪಿರುತ್ತಾರೆ

### ಟೀಟಿ ನಿಧಿಯ ಆರಂಭ

ನಗರದ ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರು ನೆನ್ನೆ ಚಾಮುಂಡೇಶ್ವರಿ ಭವನದಲ್ಲಿ ಮೈಸೂರು ಬಟ್ಟೆ ವರ್ತಕರ ಸಂಘದ ಆಶ್ರಯದಲ್ಲಿ ಏರ್ಪಟ್ಟಿರುವ ಟೀಟಿ ನಿಧಿಯ ಆರಂಭೋತ್ಸವವನ್ನು ನೆರವೇರಿಸಿದರು ಉಪಾಹಾರಾನಂತರ, ಉಪ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ಎಸ್ ಸತ್ಯನಾರಾಯಣರಾಯರು ಸ್ವಾಗತ ಭಾಷಣ ಮಾಡಿದರು ಪೌರಸಭಾಧ್ಯಕ್ಷರು ಮಾತನಾಡಿ ಹೊಸ ಉದ್ಯಮದಲ್ಲಿ ಯಶಸ್ಸುಂಟಾಗಲೆಂದು ಹಾರೈಸಿದರು ಕಾರ್ಯದರ್ಶಿ ಶ್ರೀ ಬಿ ಎಸ್ ರುದ್ರಪ್ಪನವರು ವಂದನಾರ್ಪಣೆ ಮಾಡಿದರು

# ವಾರ ಭವಿಷ್ಯ

ತಾ॥ ೧೩-೯-೫೩ ರಿಂದ ೨೦-೯-೫೩ರ ವರೆಗೆ

ಮೇಷ—ಕೃತಕೃತ್ಯರಾಗದಿಂ ಆರೋಗ್ಯವ ತ್ತು ಮಾನಸಿಕ ಸ್ಥಿತಿ ಉತ್ತಮ ಹಂಟಿಯುಲ್ಲಿ ಕಾಲ ಹರಣ ವ್ಯಾಪಾರ ಧಿಗಳಲ್ಲಿ ಹಾನಿ ಪ್ರವಾಸ ಸಾಮಾನ್ಯಕರದ್ದು ತಾ॥ [illegible] ಕ್ಕೆಳಗೆ ಅಗ್ನಿ ಭಯ ಅನವಶ್ಯಕ ಖರ್ಚು

ವೃಷಭ—ತಾಪದ ಮಾನಸಿಕ ಸ್ಥಿತಿ ವ್ಯಾಪಾರ ಉದ್ಯೋಗಗಳಲ್ಲಿ ಹಾನಿ ಆರೋಗ್ಯ ಆರ್ಥಿಕ ಸ್ಥಿತಿ ಕಷ್ಟಕರ ಪ್ರವಾಸ [illegible] ಪತ್ನಿಯೊಡನೆ ವಿರಸ ತಾ [illegible] ಅಸಭ್ಯ ತ ಕಲಹ

ಮಿಥುನ—ಗ್ರಹ ಬಲ ನೆಟ್ಟಗೆ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಲಾಭ ಆರ್ಥಿಕ ಆರೋಗ್ಯ ಮಾನಸಿಕ ಸ್ಥಿತಿಗಳು ಉತ್ತಮ ನಿರ್ವಿಘ್ನ ಪ್ರವಾಸ ವಿದ್ಯಾರ್ಥಿಗಳು ಶೀಲ ಮತ್ತು ಸತ್ಯವನ್ನು ಬಿಡಬಾರದು ತಾ॥ [illegible] ದಿನ ಬಂಧುವಿ ತ್ರರೊಡನೆ ಸಂತೋಷವಾಗಿ ಕಾಲ ಹರಣ

ಕರ್ಕ—ಮಿತಿಮೀರಿದ ಖರ್ಚು ಇದ್ದರೂ ಅದಕ್ಕೆ ತಕ್ಕಂತೆ ಧನ ಲಾಭವಿದೆ ಆರೋಗ್ಯದಲ್ಲಿ ಕೆಡಕಿಲ್ಲ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಸುಗಮ ಸ್ಥಿತಿ ಪ್ರವಾಸ [illegible] ತಾ॥ [illegible] ಸುಖ ಶಾಂತಿ

ಸಿಂಹ—ಆರೋಗ್ಯಕ್ಕೆ ಕ್ಲೇಶ ವ [illegible] ವ್ಯಾಪಾರಾದಿಗಳಲ್ಲಿ [illegible] ದ ಹಾನಿ ಸಾಂಪತ್ತಿಕ ಸ್ಥಿತಿ ಸಾಮಾನ್ಯ ತಾ [illegible] ಹಾನಿ ಹೆಚ್ಚು ಖರ್ಚು

ಕನ್ಯಾ—ಆರೋಗ್ಯ ನೆಟ್ಟಗಿರದು [illegible] ಬು ನೋವು ವಿಶೇಷ [illegible] ಪ್ರವಾಸ [illegible] ನಷ್ಟ ಅಕ್ಕರೊಡನೆ ಕಲಹ, [illegible] ಸ್ಥಿತಿ ಸಾಮಾನ್ಯ ವ್ಯಾಪಾರ ಉದ್ಯೋಗದಲ್ಲಿ ಸ್ಪರ್ಧೆಯಿಂದ ಹಾನಿ ತಾ॥ [illegible] ಜನರ ಆಗಮನ ಅಮೂಲ್ಯ ವಸ್ತು [illegible]

ತುಲಾ—ಆರೋಗ್ಯ ಉತ್ತಮ [illegible] ನೌಕರರ ಗಿದ್ದರೆ ಜನರಲ್ಲಿ [illegible] ತೋರ ಬೇಡಿ ವ್ಯಾಪಾರ ಉದ್ಯೋಗದಲ್ಲಿ ಪ್ರಗತಿ ಪ್ರವಾಸದಲ್ಲಿ ಜಯ ತಾ [illegible] ವೃಷ್ಟ [illegible] ಹತ್ತು ಹಕ್ಕು

ವೃಶ್ಚಿಕ—ಉತ್ಸಾಹದ ವಾರ ಕೈಗೊಂಡ ಕಾರ್ಯ ಜಯ ಪ್ರವಾಸ ಸುಖಕರ ವ್ಯಾಪಾರಾದಿ ಗಳಲ್ಲಿ ಪ್ರಗತಿ ಆರೋಗ್ಯ ಆರ್ಥಿಕ ಸ್ಥಿತಿ ತೃಪ್ತಿಕರ ತಾ॥ [illegible] ಹೆಚ್ಚು ಖರ್ಚು

ಧನು—ಉತ್ತಮ ವಾರ ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಲಾಭ ಪ್ರತಿಸ್ಪರ್ಧಿಗಳ ನಿಗ್ರಹ ಪ್ರವಾಸ ನಿರ್ವಿಘ್ನ ತಾ॥ [illegible] ಧರ್ಮಾರ್ಥ ಕಾರ್ಯಗಳಿಗೆ ಖರ್ಚು [illegible]

ಮಕರ—ಶಾಂತಿ ಅಹಿಂಸೆ ಶಿಸ್ತು [illegible] ಆರೋಗ್ಯ, ವ್ಯಾಪಾರಾದಿಗಳಲ್ಲಿ ಹಾನಿ ತಾ॥ [illegible] ದೇಹಾಲಸ್ಯ, ಯೋಚಿಸಿದ [illegible] ಗಳಲ್ಲಿ ವಿಘ್ನ

ಕುಂಭ—ಆರೋಗ್ಯ ಆರ್ಥಿಕ ಮಾನಸಿಕ [illegible] ಉದ್ಯೋಗ ನೌಕರಿಗಳಲ್ಲಿ [illegible] ತಾಪದಾಯಕ, ಸಂಕಟ ನಿವಾರಣೆಗೆ [illegible] ಪ್ರಾರ್ಥನೆ ಮಾಡಿ ತಾ॥ [illegible] ಮಿತ್ರ ಭೇಟಿ

ಮೀನ—ಆರೋಗ್ಯ ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ಪತ್ನಿ [illegible] ದಿನ ಧರ್ಮ ಕಾರ್ಯ ನಿರ್ವಿಘ್ನ ತಾ॥ [illegible] ಮಹೋತ್ಸವ, ಹಬ್ಬ, [illegible] ವಾದದಲ್ಲಿ ಜಯ

## ಜಮೀನು ವಿಲೇವಾರಿ ಬಗ್ಗೆ ಸರ್ಕಾರದ ಆಜ್ಞೆಗೆ ಸ್ವಾಗತ

ಹುಣಸೂರು [illegible]

ಈ ತಾಲ್ಲೂಕಿನ ಕಾಂಗ್ರೆಸ್ ಸಮಿತಿಯು ಇಂದು ಸಭೆ ಸೇರಿ ತಾಲ್ಲೂಕಿನ ಕೆಲವು ಗೋಮಾಳಗಳನ್ನು ಸರ್ಕಾರದವರು ಉಳುವಿಕೆಗೆ ಬಿಟ್ಟುಕೊಡುವ ಬಗ್ಗೆ ಮಾಡಿರುವ ಆಜ್ಞೆಯನ್ನು ಸ್ವಾಗತಿಸಿರುತ್ತದೆ ಜಮೀನು ಇಲ್ಲದವರಿಗೆ ಅವನ್ನು ಕೊಡುವ ಬಗ್ಗೆ ಸರ್ಕಾರದವರು ಮಾಡಿರುವ ಆಜ್ಞೆಗಾಗಿ ಸಮಿತಿಯು ಕೃತಜ್ಞತೆಯನ್ನು [illegible] ಇವುಗಳನ್ನು ವಿಲೆ ಮಾಡಲು ಒಂದು ಸಮಿತಿಯನ್ನು ನೇಮಿಸಿ ಸದರಿ ಸಮಿತಿ [illegible] ಸಲಹೆಯಂತೆ ಹಂಚಬೇಕೆಂದೂ [illegible] ಕಮೀಷನರರು ಹಂಚುತ್ತಿರುವ ಕ್ರಮವನ್ನೂ ಕೂಡಲೇ [illegible] ಬೇಕೆಂದೂ ಸರ್ಕಾರವನ್ನು ಕೋರಿರುತ್ತದೆ

## ಅಧಿಕ ಬೆಳೆ ತೆಗೆಯುವ ಸ್ಪರ್ಧೆ

ಭತ್ತ ಗೋಧಿ [illegible] ಜೋಳ ಬಾಜರ ಮತ್ತು ಕಡಲೆ ಈ [illegible] ಬೆಳೆಗಳಲ್ಲಿ ಹೆಚ್ಚು ಬೆಳೆ ತೆಗೆದವರಿಗೆ "ಕೃಷಿ ಪಂಡಿತ" ಎಂಬ ಪ್ರಶಸ್ತಿ ಪತ್ರ, ಐದು ಸಾವಿರ ರೂ ಬಹುಮಾನವನ್ನು ಕೊಡುವ ಸಂಬಂಧವಾಗಿ ಕೇಂದ್ರ ಸರಕಾರದವರು ಹೊಸ ವಿಧಾನವನ್ನು ಅನುಸರಿಸಿರುತ್ತಾರೆ ಅದರಂತೆ ಸಂಸ್ಥಾನಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಹೆಚ್ಚು ಬೆಳೆ ತೆಗೆದಂಥವರಿಗೆ ಅಖಿಲ ಭಾರತ ಬಹುಮಾನಗಳನ್ನಾಗಲೀ ಕೃಷಿ ಪಂಡಿತ ಬಿರುದನ್ನಾಗಲೀ ಕೊಡಲಾಗುವುದಿಲ್ಲ ಈ ಬೆಳೆಗಳನ್ನು ಹೆಚ್ಚಾಗಿ ತೆಗೆದವರು ಮಾರನೇ ವರ್ಷ ಅಖಿಲ ಭಾರತ ಬೆಳೆ ತೆಗೆಯುವ ಸ್ಪರ್ಧೆಯಲ್ಲಿ ಸೇರಬಹುದು ಅವರಲ್ಲಿ ಪ್ರಥಮವಾಗಿ ಬರುವ [illegible] ಜನರಿಗೆ ಬಹುಮಾನಗಳನ್ನು ಕೊಡುವಂತೆ ಶಿಫಾರಸು ಮಾಡಲಾಗುವುದು

## ದೇವಾಲಯದಲ್ಲಿದ್ದ ಚಿನ್ನದ ಕೃಷ್ಣ ವಿಗ್ರಹದ ಕಳುವು

[illegible] ಬಳಿ [illegible] ಯಾ ಎಂಬ ಗ್ರಾಮದ ದೇವಾಲಯದಲ್ಲಿ ಪ್ರತಿಷ್ಠಿಸಿದ್ದ ಶ್ರೀ ಕೃಷ್ಣನ ಚಿನ್ನದ ವಿಗ್ರಹವನ್ನು ಯಾರೋ ಕದ್ದುಕೊಂಡು ಹೋಗಿರುವರೆಂದು ವರದಿಯಾಗಿದೆ ವಿಗ್ರಹವು ಒಂದು ಮಣ ತೂಕವಿರುವುದಾಗಿ ಗೊತ್ತಾಗಿದೆ

### ಕಳ್ಳಭಟ್ಟಿ ಹೆಂಡದ ಪತ್ತೆ

ನಂದಿಪಟ್ಟದ ಬಳಿ [illegible] ಗ್ರಾಮದಲ್ಲಿ ಅಕ್ರಮವಾಗಿ ತಯಾರಾಗುತ್ತಿದ್ದ ಹೆಂಡವನ್ನು ದೊಡ್ಡಬಳ್ಳಾಪುರದ ಅಬ್ಕಾರಿ ಇನ್ಸ್‌ಪೆಕ್ಟರ್‌ರವರು ಪತ್ತೆ ಹಚ್ಚಿರುತ್ತಾರೆ ಈ ಸಂಬಂಧವಾಗಿ [illegible] ಬೈಯಪ್ಪ ಮತ್ತು ಕರಿಯಪ್ಪ ಎಂಬುವರು ದಸ್ತಗಿರಿಯಾಗಿರುತ್ತಾರೆ ಹೊಟ್ಟಿಪ್ಪ ಎಂಬುವನು ಪರಾರಿಯಾಗಿರುವನೆಂದು ಹೇಳಲಾಗಿದೆ [illegible] ಹೆಂಡ ತಯಾರಿಕೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ರೈಲ್ವೆ ನೌಕರರ ಬೇಡಿಕೆ

ಮೈಸೂರು ೧೧

ದಕ್ಷಿಣ ರೈಲ್ವೆ ನೌಕರರ ಸಂಘದ ಮೈಸೂರು ವರ್ಕ್‌ಷಾಪ್ ಶಾಖೆಯ ಸದಸ್ಯರ ಸಭೆಯು ಶ್ರೀ ಕೆ ಎನ್ ಎಸ್ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು ಮೈಸೂರ ರೈಲ್ವೆಯು ಕೇಂದ್ರದಲ್ಲಿ ಸೇರಿದ ಮೇಲೆ ೧೯೫೦ ನೇ ಏಪ್ರಿಲ್ ೧ ರಿಂದ ಇತರ ರೈಲ್ವೆಯ ನೌಕರರಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಮೈಸೂರು ರೈಲ್ವೆ ನೌಕರರಿಗೆ ಕಲ್ಪಿಸುವುದಾಗಿ ಇತ್ತ [illegible] ಪಾಲಿಸದೆ ಇರುವುದು ನೌಕರರಿಗೆ ಅನ್ಯಾಯ ಮಾಡಿದಂತಾಗಿರುವುದೆಂದೂ ವರ್ಕ್‌ಷಾಪಿನಲ್ಲಿ ೧೦ [illegible] ವರ್ಷಗಳಿಂದಲೂ ಇರುವವರ ಸ್ಥಿತಿಗತಿಗಳನ್ನು ಉತ್ತಮಪಡಿಸದೆ, ಈಚೆಗೆ ಬಂದವರನ್ನು ಸೀನಿಯರುಗಳಾಗಿ ಮಾಡಲಾಗಿರುವುದೆಂದೂ ಅಧ್ಯಕ್ಷರು ಆಕ್ಷೇಪಿಸಿದರು ಸರ್ವಿಸ್ ಪ್ರೈವೇಜ್ ಪ್ರಾವಿಡೆಂಟ್ ನಿಧಿ ಬೋನಸ್ಸು ಸೀನಿಯಾರಿಟಿ, [illegible] ನೌಕರರನ್ನು ಖಾಯಂಗೊಳಿಸುವುದು ಓವರ್ ಟೈಂ ಮತ್ತು ರಾತ್ರಿ ಕಾಲದ ಭತ್ಯ ಇತ್ಯಾದಿ ವಿಷಯಗಳಲ್ಲಿ ನೌಕರರ ಕುಂದುಕೊರತೆಗಳನ್ನು ಈಗಾಗಲೇ ತಿಳಿಸಿದ್ದಾಗ್ಯೂ ಯಾವ ಪರಿಹಾರವೂ ದೊರೆಯದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಲಾಯಿತು ಸಧ್ಯದಲ್ಲೇ ದೆಹಲಿಯಲ್ಲಿ ಸೇರಲಿರುವ ಕೈಗಾರಿಕಾ ನ್ಯಾಯಾಲಯದ ಮುಂದೆ ಪ್ರೈವೇಜ್ ಮತ್ತು ಸೆಂಟ್ರಲ್ ಪೇ ಕಮಿಷನ್ ಶಿಫಾರಸು ಪರಿಶೀಲನೆಗೆ ಬರುವುದಿದ್ದು ಆಗ ಮೈಸೂರು ನೌಕರರ ಪರವಾಗಿ ಶ್ರೀ ಕೆ ಎನ್ ಎಸ್ ಮೂರ್ತಿಯವರು ಹಾಜರಾಗುವಂತೆ ಗೊತ್ತುಪಡಿಸಲಾಯಿತು

## ದಕ್ಷಿಣ ಕೊರಿಯದ ಇಬ್ಬರು ಸಚಿವರ ವಜಾ

ದಕ್ಷಿಣ ಕೊರಿಯದ ಗೃಹ ಸಚಿವ ಚಿನ್ [illegible] ಹೆಯಾನ್ ಸಿಕ್ ಮತ್ತು ವ್ಯವಸಾಯ ಮಂತ್ರಿ ಹಿಚುಂಗ್ ಮೂನ್‌ರವರ ಮಿತಿಮೀರಿದ ತೆರಿಗೆಯನ್ನು ವಸೂಲು ಮಾಡುತ್ತಿದ್ದರೆಂಬ ಕಾರಣಕ್ಕಾಗಿ ಅಲ್ಲಿನ ಅಧ್ಯಕ್ಷ ಸಿಂಗ್ಮನ್ ರ್ಹೀಯವರು ಅವರಿಬ್ಬರನ್ನೂ ವಜಾ ಮಾಡಿರುವರೆಂದು ಗೊತ್ತಾಗಿದೆ.

## ರಸ್ತೆಗೆ ಸಿಮೆಂಟಿನ ಬದಲು ಹೊಸ ಸಾಮಗ್ರಿ

ರಸ್ತೆಯ ನಿರ್ಮಾಣಕ್ಕೆ ಸಿಮೆಂಟಿನ ಬದಲು ಹೊಸ ಸಾಮಗ್ರಿಯನ್ನು ಉತ್ತರ ಪ್ರದೇಶದ ಮಣ್ಣು ಮತ್ತು ಇಲಾಖೆಯ ಸಂಶೋಧನಾ ಶಾಖೆಯವರು ಉತ್ಪನ್ನ ಮಾಡುತ್ತಲಿರುವುದಾಗಿ ಗೊತ್ತಾಗಿದೆ


ರಾಜಕಮಲ್,

11 9 53 ರಿಂದ ಅಮೋಘ 3 ನೇ ವಾರ

ಭರಣಿಯವರ ತೆಲುಗು ಚಿತ್ರ

# ✱ ಚಂಡೀರಾಣಿ ✱

ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಬಾದರಿ ಮನೆ ಕಾಂಪೌಂಡು, ನಲ್ಲಿ, ದೀಪ ಫ್ಲಷಿಂಗ್ ಇವೆ

"ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿ

ಇದು ನಿಮಗೆ ಗೊತ್ತೇ?

[illegible]

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪ್ರಸಿದ್ಧ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೇಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ ಮೈಸೂರು


Edited Printed and Published by A R Nagarajan at Sadhvi Press, D Subbiah Road, Mysore

## ಗೌರಿ ಹಬ್ಬದ ದಿನ ಸೀರೆ ತಂದುಕೊಡದಿದ್ದುದಕ್ಕೆ ಆತ್ಮಹತ್ಯೆ

ಬೆಂಗಳೂರು ಮಾವಳ್ಳಿಯ ಗ್ರಾಮ ದೇವತೆ ಗಲ್ಲಿಯಲ್ಲಿ ವಾಸಿಸುತ್ತಿದ್ದ ಬಡಗಿ ರಾಜು ಎಂಬುವನ ಪತ್ನಿ ಪುಟ್ಟಮ್ಮ ಎಂಬ ಹೆಳ ಗೌರಿ ಹಬ್ಬಕ್ಕಾಗಿ ತನಗೆ ಸೀರೆ ತಂದುಕೊಡುವಂತೆ ಗಂಡನನ್ನು ಕೇಳಿ ವಿಫಲಳಾದುದಕ್ಕಾಗಿ ಮೊನ್ನೆ ಬೆಳಗ್ಗೆ ಹೊರಿಯಿಂದ ಕತ್ತನ್ನು ಕುಯಿದುಕೊಂಡು ಪ್ರಾಣ ನೀಗಿದ ಪ್ರಸಂಗವು ವರದಿಯಾಗಿದೆ ಆ ಬೆಳಗ್ಗೆ ಕೆಲಸಕ್ಕಾಗಿ ಹೊರಟ ತನ್ನ ಗಂಡನಿಗೆ ಜವಳಿ ತಿಂಡಿಯನ್ನು ಕೊಟ್ಟು ಅವನು ಹೊರಡುತ್ತಿರುವಲ್ಲಿದ್ದಾಗ ಪಕ್ಕದ ಮನೆಯವರೊಬ್ಬರು ಪುಟ್ಟಮ್ಮನನ್ನು ಹುಡುಕಿಕೊಂಡು ಬಂದು, ಆಕೆಯ ಕೊಠಡಿ ಬಾಗಿಲನ್ನು ಬಹಳ ಹೊತ್ತು ತಟ್ಟಿದರೂ ಯಾವ ಜವಾಬೂ ಬಾರದಿದ್ದುದರಿಂದ ಮೇಲ್ಛಾವಣಿಯ ಹೆಂಚನ್ನು ಕಳೆದು ಒಳಗಿಳಿದು ನೋಡುವಲ್ಲಿ ಆಕೆಯ ರಕ್ತದ ಮಡುವಿನಲ್ಲಿ ಸತ್ತುಬಿದ್ದಿದ್ದುದು ಗೊತ್ತಾಯಿತೆಂದೂ ವರದಿಯಾಗಿದೆ ಪುಟ್ಟಮ್ಮನು ಇನ್ನೂ ಬದುಕಿರಬಹುದೆಂದು ಭಾವಿಸಿ ಬಾಯಿಯಲ್ಲಿ ನೀರು ಹಾಕಲು ಕತ್ತಿನಲ್ಲಿ ಕುಯ್ಯಲ್ಪಟ್ಟ ಭಾಗದಿಂದ ನೀರು ಹೊರಬಂದಿತೆಂದು ವರದಿಯಾಗಿದೆ

## ಕಾಂಗ್ರೆಸ್ಸಿನವರೇ ಆಂಧ್ರದ ಮುಖ್ಯ ಮಂತ್ರಿಯಾಗಬೇಕು

ಆಂಧ್ರ ಪ್ರಾಂತ್ಯದ ಮುಖ್ಯ ಮಂತ್ರಿಯಾಗಿ ಕಾಂಗ್ರೆಸ್ಸಿನವರೇ ಇರಬೇಕೆಂದು ಪ್ರಧಾನಿ ನೆಹರೂರವರು ತಮಗೆ ಸ್ಪಷ್ಟಪಡಿಸಿರುವುದಾಗಿ ಟಿ ಪ್ರಕಾಶಂರವರು ಹೇಳುತ್ತಾರೆ

○ ರಷ್ಯನರು ಆಸ್ಟ್ರಿಯದಲ್ಲಿದ್ದ ತಮ್ಮ ಸೈನ್ಯಗಳಲ್ಲಿ ಬಹುಭಾಗವನ್ನು ಹಿಂದಕ್ಕೆ ಕರೆಸಿಕೊಂಡಿರುವರೆಂದೂ ಅಲ್ಲಿಗೆ ಬೇರೆ ಸೈನ್ಯಗಳನ್ನು ಕಳುಹಿಸುವ ಸಂಭವವಿಲ್ಲವೆಂದೂ ಹೇಳಲಾಗಿದೆ

## ಹುಣಸೂರು ಮುನ್ಸೀಫ್ ಕೋರ್ಟು

O S 269 of 53

ವಾದಿ ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಹೋಬಳಿ ಚಕ್ಕೂರು ಗ್ರಾಮದಲ್ಲಿರುವ ನಾಮಧಾರಿ ಜಾತಿ ಪುಟ್ಟಗೌಡರ ಮಗ ಗುಡಿಗೌಡರ ಲಿಂಗೇಗೌಡರ,

Vs

ಪ್ರತಿವಾದಿಗಳು 1 ಡಿಟೊ ಚಕ್ಕೂರಿನಲ್ಲಿರುವ ಪರಿವಾರದ ಜಾತಿ ಬೆಟ್ಟನಾಯಕನ ಮಗ ಬೆಟ್ಟನಾಯಕ 2 ಪರಿವಾರದ ಯಜಮಾನ್ ಲಿಂಗನಾಯಕನ ಮಗ ಸುಕೀಚಿ ಲಿಂಗನಾಯಕ

ವಿಷಯ: ಚಕ್ಕೂರು ಗ್ರಾಮದ ಹಟ್ಟಿನ ಚಾವಡಿಯಲ್ಲಿ ಗುಡಿಗೌಡಿಕೆ ಲಿಂಗೇಗೌಡರ ಧಿಯಾಗಿದು ವೇರಿ ಹೆಗ್ಗಡದೇವನಕೋಟೆ ತಾಲ್ಲೂಕು ಪೋಲೀಸಿನವರು 20 3 50 ರಲ್ಲಿ ಅಪಾನತ್ತು ಪಡಿಸಿಕೊಂಡು ಹುಣಸೂರು ಮ್ಯಾಜಿಸ್ಟ್ರೇಟರ ಕೋರ್ಟು C C 2 of 50-51 ನೇ ಕೇಸಿನಲ್ಲಿ ವಿವಾದಸ್ಪದವಾದ ಚಿಕ್ಕದೇವಮ್ಮನ ಪತ್ತಿಗೆ ಮತ್ತು ಇದಕ್ಕೆ ಸಂಬಂಧಪಟ್ಟ ಸಾಮಾನುಗಳು ಚಕ್ಕೂರು ಗ್ರಾಮದ ಸಮಗ್ರ ಎಲ್ಲಾ ಕೋಮುಗಳಿಗೂ ಸಂಬಂಧಪಟ್ಟದ್ದೇ ಹೊರತು ಯಾವ ಒಂದು ಕೋಮಿಗೂ ಸೇರಿದ್ದಲ್ಲವೆಂದೂ ಪರಿವಾರದ ಕೋಮಿಗೆ ಸೇರಿದ್ದಲ್ಲವೆಂದೂ [illegible] ಪರಿವಾರದ ಕೋಮಿಗೇನೇ ಸೇರತಕ್ಕದೆಂಬ ಪ್ರತಿವಾದಿಯರ ವಾದ ವುಊಜಿ [illegible] ವೆಂದೂ, ಸದರಿ ಪತ್ತಿಗೆಯು ಮಾಮೂಲು ಮೇರೆ ಗ್ರಾಮದ ಗುಡಿಗೌಡರ ಲಿಂಗೇಗೌಡರಾದ ವಾದಿ ಸುಪರ್ದಿನಲ್ಲೇ ಇರತಕ್ಕದ್ದೆಂದೂ ವಗೈರೆ ವಿಷಯವಾಗಿ ಮೇಲ್ಕಂಡ ನಂಬರು ಕೇಸಿನಲ್ಲಿ ದಾವಾ ಹೂಡುತ್ತಿ ಇದು ಊರೊಟ್ಟಿನ ಹಕ್ಕಿಗೆ ಸಂಬಂಧಪಟ್ಟ ವ್ಯವಹಾರವಾದ್ದರಿಂದ ಆಕ್ಷೇಪವುಳ್ಳವರು ಈ ದಾವಾಕ್ಕೆ ಪಾರ್ಟಿಯಾಗಬಹುದು ಸದರಿ ದಾವೆಯು ಹಿಯರಿಂಗು 26 9 53 ಕ್ಕೆ ಹುಣಸೂರು ಮುನ್ಸೀಫ್‌ರವರ ಕೋರ್ಟಿನಲ್ಲಿರುತ್ತೆ

(ರುಜು) ಲಿಂಗೇಗೌಡ (ವಾದಿ),

ವಿ ಲಿಂಗಪ್ಪಯ್ಯ,

[illegible]


# ದತ್ತಾ ಟ್ಯುಟೋರಿಯಲ್ ಕಾಲೇಜು,

ಮೈಸೂರು

ತರಗತಿಗಳು ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯುತ್ತವೆ)

ಎಸ್ ಎಸ್ ಎಲ್ ಸಿ ಮದ್ರಾಸು ಮೆಟ್ರಿಕ್ [illegible]

[illegible] ಮತ್ತು ಎಲ್ ಸಿ ಇ ಪರೀಕ್ಷೆಗಳಿಗೆ [illegible]

[illegible] ಸ್ತ್ರೀಯರುಗಳಿಗೂ [illegible]

([illegible]) [illegible]

ವಿವರಗಳಿಗೆ [illegible] 0 2 0 [illegible]

ದತ್ತ ನಿವಾಸ, 170/3 ರಮಾವಿಲಾಸ ಅಗ್ರಹಾರ ಮೈಸೂರು.

ರಿಜಿಸ್ಟರ್ಡ್ ನಂ 792

[ ವಂದೇ ಮಾತರಂ ]

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ

ಏಜೆಂಟರ ಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE MONDAY 14-9-1953 ಮೈಸೂರು ಸೋಮವಾರ ೧೪-೯-೧೯೫೩ [ ಸಂಚಿಕೆ ೪೨

# ಕೊರಿಯ ಸಭೆ ಬಗ್ಗೆ ವಿಶ್ವಸಂಸ್ಥೆ ಸಲಹೆಗೆ ಚೀಣಾ ತಿರಸ್ಕಾರ

## ಸ್ವಾಮಿ ಸೀತಾರಾಮರವರ ಉಪವಾಸ

ಆಂಧ್ರ ಪ್ರಾಂತ ನಿರ್ಮಾಣದ ಸ್ವರೂಪ ಮತ್ತು ವಿಧಾನಗಳ ಬಗ್ಗೆ ಅಸಂತೃಪ್ತಿಗೊಂಡಿರುವ ಸ್ವಾಮಿ ಸೀತಾರಾಮರವರು ಈ ತಿಂಗಳು ೨೦ನೇ ತಾರೀಖಿನಿಂದ ೮ ದಿನಗಳ ಉಪವಾಸ ಮಾಡಲಿರುವರು. ಭಾಷಾವಾರು ಪ್ರಾಂತವೆಂದರೆ ಆಡಳಿತವನ್ನು ಸ್ವಕೀಯ ಭಾಷೆಯಲ್ಲೇ ನಡೆಸಬೇಕೇ ಹೊರತು ಬೇರೆ ಜನರ ಹೆಚ್ಚಿಯಕೆ ವಿದೇಶೀ ಭಾಷೆಯಿಂದ ವ ಪ್ರಜಾ ರಾಜ್ಯವು ವಿರೋಧಾಭಾಸವಾಗುವುದೆಂದು ಅವರ ಅಭಿಪ್ರಾಯ.

## ಪಾರ್ಲಿಮೆಂಟಿನಲ್ಲಿ ಕೆಮ್ಮಲು ಮತ್ತು ಉಗುಳಲು ಅವಕಾಶವಿಲ್ಲ

ಪಾರ್ಲಿಮೆಂಟಿನ ಕೆಳ ಸಭೆಯಲ್ಲಿ ಕಳೆದ ಶುಕ್ರವಾರ ಸಭೆಯ ಉಪಾಧ್ಯಕ್ಷರು ರೂಲಿಂಗ್ ಕೊಟ್ಟು ಸಭೆಯಲ್ಲಿ ಯಾರೂ ಉಗುಳುವುದಾಗಲಿ ಕೆಮ್ಮುವುದಾಗಲಿ ಕೂಡದೆಂದು ಹೇಳಿರುತ್ತಾರೆ. ಯಾವ ಸದಸ್ಯರಾದರೂ ಕೆಮ್ಮನ್ನು ತಡೆಯಲು ಸಾಧ್ಯವಿಲ್ಲದಿದ್ದರೆ ಸಭೆಯಿಂದ ಹೊರಕ್ಕೆ ಹೋಗಿ ವಿಶ್ರಾಂತಿ ತೆಗೆದುಕೊಂಡು ನಂತರ ಹಿಂತಿರುಗಬಹುದೆಂದು ಅವರು ತಿಳಿಸಿರುವರು.

## ಸಾಂಗ್ಲಿ ಜಿಲ್ಲೆಯಲ್ಲಿ ೩೩ ಜನ ನೂರು ವರ್ಷಕ್ಕೆ ಮೀರಿದವರು

ಸಾಂಗ್ಲಿ ಜಿಲ್ಲೆಯಲ್ಲಿ ನೂರು ವರ್ಷ ತುಂಬಿದವರು ೩೩ ಮಂದಿ ಇದ್ದಾರೆ. ಅವರಲ್ಲಿ ೨೭ ಜನರಿಗೆ ೧೧೦ ವರ್ಷಗಳಾಗಿವೆ. ಮೂವರಿಗೆ ೧೧೦, ಒಬ್ಬನಿಗೆ ೧೧೬, ಇತರ ೩ ಮಂದಿಗೆ ಮತ್ತು ಇಬ್ಬರಿಗೆ ಕ್ರಮವಾಗಿ ೧೧೩ ಮತ್ತು ೧೧೨ ವರ್ಷಗಳಾಗಿವೆ. ಹದಿನೇಳು ಮಂದಿ ಈಚೆಗೆ ೧೦೦ ವರ್ಷಗಳು ತುಂಬಿದುವೆಂದು ಹೇಳಲಾಗಿದೆ.

## ಡಕಾಯಿ ಬಳಿ ರೈಲುಗಳಿಗೆ ಡಿಕ್ಕಿ

ಡಕಾಯಿ ಬಳಿ ತೇಜಗಾಂವ್ ರೈಲ್ವೆ ಸ್ಟೇಷನ್ನಿನಲ್ಲಿ ಗೂಡ್ಸ್ ಗಾಡಿಗಳನ್ನು ಎಳೆಯುತ್ತಿದ್ದ ಒಂದು ಇಂಜಿನ್ನಿಗೂ ಮತ್ತೊಂದು ಪ್ರಯಾಣಿಕರ ರೈಲಿಗೂ ಡಿಕ್ಕಿಯಾದುದರ ಪರಿಣಾಮವಾಗಿ ೯ ಜನ ಪ್ರಯಾಣಿಕರಿಗೆ ಗಾಯಗಳಾಗಿವೆ. ೩ ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಪ್ರಯಾಣಿಕರ ಗಾಡಿಯು ನಿಲ್ದಾಣಕ್ಕೆ ಬರುವಾಗ ನಿಲ್ದಾಣದ ಬಳಿ ಕಂಬಿ ಮೇಲೆ ಹರಿಯುವ ಪಕ್ಕದ ಲೈನಿನಲ್ಲಿ ಬಂದಾಗ ಈ ಘಟನೆಯು ನಡೆಯಿತೆಂದೂ ಈ ಸಂಬಂಧವಾಗಿ ಪಾಯಿಂಟ್ಸ್‌ಮನ್ ಒಬ್ಬನನ್ನು ವಶ್ತಗಿರಿ ಮಾಡಲಾಗಿದೆಯೆಂದೂ ವರದಿಯಾಗಿದೆ.

## ಮಹಡಿಯೇರಿ ಕುಳಿತ ಆಳನ್ನು ಹಗ್ಗ ಕಟ್ಟಿ ಇಳಿಸಲಾಯಿತು

ಕಾಶಿಯಲ್ಲಿ ಹಸು ಒಂದು ನೆನ್ನೆ ದಿನ ಮಳೆಯ ತೊಟ್ಟಿಯನ್ನು ... ಮನೆ ಒಂದರ ಮೆಟ್ಟಿಲುಗಳನ್ನೇರಿ ಒಂದು ಕೊಠಡಿಯಲ್ಲಿ ಆಶ್ರಯ ಪಡೆದು ಕುಳಿತಿದ್ದಿತೆಂದೂ, ಅದನ್ನಿಳಿಸಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿ ಕಡೆಗೆ ಪೋಲೀಸರು ಬಂದು ಮಹಡಿಯ ಒಂದು ಭಾಗವನ್ನು ಕೆಡವಿ, ಹಸುವನ್ನು ಹಗ್ಗದಿಂದ ಕಟ್ಟಿ ಅನಾಮತ್ತಾಗಿ ಕೆಳಕ್ಕಿಳಿಸಿದರೆಂದೂ ವರದಿಯಾಗಿದೆ.

## ಇಟಲಿಗೆ ಮಾರ್ಷಲ್ ಟಿಟೋರವರ ಎಚ್ಚರಿಕೆ

ಯುಗೊಸ್ಲೇವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ೩ ಲಕ್ಷ ಜನರ ಕೂಟವನ್ನುದ್ದೇಶಿಸಿ ನೆನ್ನೆ ಭಾಷಣಮಾಡಿ ಟ್ರಿಯೆಸ್ಟ್ ನಗರದಲ್ಲಿ ... ಇಟಲಿಯು ಪ್ರವೇಶಿಸಿದರೆ ಅದನ್ನು ಯುಗೊಸ್ಲೇವಿಯಾ ಆಕ್ರಮಣ ಕಾರ್ಯವೆಂದು ಭಾವಿಸಿ ಅದಕ್ಕೆ ಸೂಕ್ತ ಪ್ರತೀಕಾರವನ್ನು ಕೈಗೊಳ್ಳುವುದಾಗಿ ತಿಳಿಸಿದರು.

## ವಿಶ್ವ ಸಂಸ್ಥೆ ನಿರ್ಧಾರಕ್ಕೆ ಚೀಣಾದ ನಿರಾಕರಣೆ

ಕೊರಿಯಾ ಕದನ ವಿರಾಮದ ನಂತರ ನಡೆಯುವ ರಾಜಕೀಯ ಸಮ್ಮೇಳನದ ಬಗ್ಗೆ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಕೈಗೊಂಡ ತೀರ್ಮಾನವನ್ನು ಚೀಣಾದ ಪ್ರಧಾನಿ ಚೌ ಎನ್ ಲೈರವರು ಅಂಗೀಕರಿಸಲು ಸಾಧ್ಯವಿಲ್ಲವೆಂದು ಸಂಯುಕ್ತ ರಾಷ್ಟ್ರ ಪರಿಷತ್ತಿನ ಸಕ್ರೆಟರಿ ಜನರಲ್ಲರಿಗೆ ತಿಳಿಸಿರುವರು. ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾರತ, ಪಾಕಿಸ್ತಾನಗಳೂ ರಷ್ಯಾ, ಇಂಡೋನೇಷ್ಯಾ, ಮೊದಲಾದ ಏಷ್ಯಾ ರಾಷ್ಟ್ರಗಳೂ ಭಾಗವಹಿಸುವಂತಾಗಬೇಕೆಂದು ಅವರು ಒತ್ತಾಯಪಡಿಸಿರುವರು. ರಾಜಕೀಯ ಸಮ್ಮೇಳನದ ಸದಸ್ಯತ್ವದ ಬಗ್ಗೆ ನಡೆಯುವ ಚರ್ಚೆಗೆ ಚೀಣಾ ಮತ್ತು ಉತ್ತರ ಕೊರಿಯಾಗಳ ಪ್ರತಿನಿಧಿಗಳನ್ನೂ ಆಹ್ವಾನಿಸಬೇಕೆಂದೂ ಅವರು ಕೋರಿರುವರು.

## ಮನೆ ಹೊಂದಲು ದಂಪತಿಗಳ ಕೊಳಕು ಕೆಲಸಗಾರರ ಸಂಘ

ಇಂಗ್ಲೆಂಡಿನ ಬ್ರಿಸ್ಟಲ್ ನಗರದ ಬಳಿ ಇರುವ ವಿಮಾನ ಕೆಲಸಗಾರ ಜಾನ್ ಬರ್ಡ್ ಮತ್ತು ಆತನ ಪತ್ನಿ ಜೂನ್ ತವ ... ಒಂದು ಮನೆಯನ್ನು ಕೊಂಡುಕೊಳ್ಳಲು ದುಡ್ಡು ಸಿಗದೆ ತೀವ್ರಾಲೋಚನೆ ಮಾಡಿ ಕಡೆಗೆ "ಕೊಳಕು ಕೆಲಸಗಾರರ ಸಂಘ" ವೆಂದು ತಮ್ಮನ್ನು ಕರೆದುಕೊಂಡು ತಾವು ಯಾವ ಜನರೂ ಹೇಸುವ ಕೊಳಕು ಕಾರ್ಯವನ್ನು ಮಾಡುವುದಾಗಿ ಪ್ರಚಾರ ಮಾಡುತ್ತಿರುತ್ತಾರೆ. ಅವರಿಗೆ ಈಗ ವಿಪರೀತವಾಗಿ ಕೆಲಸಗಳು ಲಭಿಸಿ ಹಣ ಸಿಗುತ್ತಿದೆಯೆಂದು ಹೇಳಲಾಗಿದೆ.

### ಡೋಲೋತ್ಸವ ಸಂಗೀತ

ಈ ರಾತ್ರಿ ೬-೩೦ ಗಂಟೆಗೆ ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಡೋಲೋತ್ಸವದ ಪ್ರಯುಕ್ತ ಶ್ರೀಮತಿ ಜಲಜಾಕ್ಷಮ್ಮನವರ ಸಂಗೀತವು ನಡೆಯುತ್ತದೆ. ಇದು ಧರ್ಮದರ್ಶಿ ... ನಂದೀಬಸಪ್ಪನವರ ಸೇವಾರ್ಥ.

### ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ ರಾತ್ರಿ ೭ ಗಂಟೆಗೆ ಶ್ರೀ ಎ. ರಾಮಸ್ವಾಮಿನಾಯ್ಡು ಮತ್ತು ಅವರ ಮಕ್ಕಳು ಆರ್. ಗುರುರಾಜನಾಯ್ಡು ರವರಿಂದ ಅರ್ಜುನ ಆಂಜನೇಯ ಸಂವಾದವೆಂಬ ಹರಿಕಥೆ ನಡೆಯುತ್ತದೆ.

## ತಿರುವಾಂಕೂರು-ಕೊಚ್ಚಿ ಮಂತ್ರಿಮಂಡಲದಲ್ಲಿ ಒಡಕು

### ತಮಿಳು ಕಾಂಗ್ರೆಸ್ ಮಂತ್ರಿಯ ರಾಜೀನಾಮೆ

ತಿರುವಾಂಕೂರು ಕೊಚ್ಚಿ ಸಂಸ್ಥಾನದ ವಿಶ್ವ ಮಂತ್ರಿಮಂಡಲಕ್ಕೆ ಕೊಡುತ್ತಿದ್ದ ಬೆಂಬಲವನ್ನು ಅಲ್ಲಿನ ತಮಿಳುನಾಡು ಕಾಂಗ್ರೆಸ್ ಪಕ್ಷವು ಇನ್ನು ಮುಂದೆ ಕೊಡಲು ನಿರಾಕರಿಸಿರುವುದರಿಂದ ಆ ಸಂಸ್ಥಾನದ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ತಪ್ಪಿದಂತಾಗಿದೆ. ಶಾಸನ ಸಭೆಯು ಸಧ್ಯದಲ್ಲೇ ನಡೆಯಲಿದ್ದು ಆಗ ... ಶ್ರೀ ಎ. ಜೆ. ಜಾನ್‌ರವರ ಸರ್ಕಾರವು ರಾಜಕೀಯ ಬಿಕ್ಕಟ್ಟನ್ನೆದುರಿಸಬೇಕಾಗಿ ಬರುತ್ತದೆ. ಸಂಸ್ಥಾನದ ರೆವಿನ್ಯೂ ಸಚಿವರೂ ತಮಿಳು ಪಕ್ಷದ ಸದಸ್ಯರೂ ಆದ ಶ್ರೀ ಚಿದಂಬರನಾಥ ನಾದರ್‌ರವರು ಇಂದು ರಾಜೀನಾಮೆ ಕೊಡುವುದಾಗಿ ತಿಳಿಸಿರುವರು. ಶಾಸನ ಸಭೆಯಲ್ಲಿರುವ ೯ ಜನ ತಮಿಳು ಸದಸ್ಯರು ಮಂತ್ರಿಮಂಡಲದ ವಿರುದ್ಧ ವೋಟು ಮಾಡುವುದಾಗಿಯೂ ಸರ್ಕಾರದಲ್ಲಿ ಅವಿಶ್ವಾಸ ನಿರ್ಣಯವನ್ನು ತಂದರೆ ಅದಕ್ಕೆ ಬೆಂಬಲ ನೀಡುವುದಾಗಿಯೂ ಸಚಿವ ನಾದರ್‌ರವರು ಹೇಳಿರುತ್ತಾರೆ.

## ಕೋರ್ಟ್ ಮಾರ್ಷಲ್ ವಿಚಾರಣೆಗೆ ಮುಸದ್ದಿಕ್ ಗುರಿ

ಕೋರ್ಟ್ ಮಾರ್ಷಲ್ ವಿಚಾರಣೆಗೆ ಒಳಪಡಿಸಲ್ಪಟ್ಟ ಮಾಜಿ ಪ್ರಧಾನಿ ಮುಸದ್ದಿಕ್‌ರವರನ್ನು ಕುರಿತು ಅಲ್ಲಿನ ಸರ್ಕಾರದವರು ಆಪಾದಿಸಿರುತ್ತಾರೆ. ನ್ಯಾಯಸಮ್ಮತವಲ್ಲದ" ಜನಾಭಿಪ್ರಾಯ ಪಡೆದು ಮಜ್ಲಿಸ್ ಸಭೆಯನ್ನು ವಿಸರ್ಜಿಸಿದುದು, ಮುಸದ್ದಿಕ್ಕರ ವಜಾ ಮಾಡಿದ ಬಗ್ಗೆ ಆಜ್ಞೆಯನ್ನು ತಂದ ದೂತನನ್ನು ದಸ್ತಗಿರಿ ಮಾಡಿದುದು, ಷಹಾರವರ ಸೈನ್ಯವನ್ನು ನಿಶ್ಶಸ್ತ್ರೀಕರಿಸಿ ಹಲವು ಅಧಿಕಾರಿಗಳನ್ನು ದಸ್ತಗಿರಿ ಮಾಡಿದುದು ಮತ್ತು ಜನರ ಮೇಲೆ ಗುಂಡು ಹಾರಿಸಿದುದು ಈ ಆಪಾದನೆಗಳನ್ನು ಅವರ ಮೇಲೆ ಹೊರಿಸಲಾಗುವುದು. ಮುಸದ್ದಿಕ್‌ರವರನ್ನು ವಿಚಾರಣೆ ನಡೆಸುತ್ತಿರುವ ಅಧಿಕಾರಿಗಳಿಗೆ ಅವರು ಉತ್ತರವಿತ್ತು ತಾವು ಜೀವಿಸಬೇಕೆಂಬ ಆಸೆ ಹೊಂದಿಲ್ಲವೆಂದು ತಿಳಿಸಿರುವುದಾಗಿ ವರದಿಯಾಗಿದೆ.

## ಕಾನ್ಪುರದಲ್ಲಿ ೧೦೦ ಮಂದಿ ಪ್ರಜಾಸಮಾಜವಾದಿಗಳ ಬಂಧನ

ಕಾನ್ಪುರದಲ್ಲಿ ಸಭೆ ಮತ್ತು ಮೆರವಣಿಗೆಗಳಿಗೆ ಹಾಕಲಾಗಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿದುದಕ್ಕಾಗಿ ೧೦೦ ಜನ ಪ್ರಜಾ ಸಮಾಜವಾದಿಗಳನ್ನು ಬಂಧಿಸಲಾಗಿದೆ.

ಪ್ರತ್ತಿಯ ... ಸಂಘ, ಮೈಸೂರು

ಮೇಲ್ಕಂಡ ಸಂಘದ ಆಶ್ರಯದಲ್ಲಿ ಮಂಡಿ ಮೊಹಲ್ಲಾ ಎಲೆ ಮಂಡಿಯಲ್ಲಿರುವ ಸಾಹುಕಾರ್ ಚನ್ನಪ್ಪ ... ಭಾವನವರ ಧರ್ಮ ಛತ್ರದಲ್ಲಿ ಮೊನ್ನೆಯಿಂದ ೨೦ ನೇ ತಾ|| ಭಾನುವಾರದವರೆಗೆ ಶ್ರೀ ಮಹಾ ಗಣಪತಿ ಪೂಜಾ ಮಹೋತ್ಸವದ ಪ್ರಯುಕ್ತ ಪ್ರತಿ ನಿತ್ಯವೂ ಸಂಜೆ ೭ ಗಂಟೆಯಿಂದ ೧೦ ಗಂಟೆ ವರೆಗೆ ವೇ|| ಬ್ರಂ|| ಶ್ರೀ|| ... ಭಾರತಿಯವರ ಅಧ್ಯಕ್ಷತೆಯಲ್ಲಿ ಭಜನೆ, ಹರಿಕಥೆ, ಸಂಗೀತ ಉಪನ್ಯಾಸ ಇವುಗಳನ್ನು ಏರ್ಪಡಿಸಿರುತ್ತಾರೆ.

## ಕ್ರಿಕೆಟ್ ಪಂದ್ಯದಿಂದ ಪರಿಹಾರ ನಿಧಿಗೆ ೧ ಲಕ್ಷ ರೂ

ಪ್ರಧಾನಿ ನೆಹರೂ ಮತ್ತು ಉಪಾಧ್ಯಕ್ಷ ರಾಧಾಕೃಷ್ಣನ್ ರವರ ಟೀಮು ಗಳಿಗೆ ಎರಡು ದಿನಗಳ ಕ್ರಿಕೆಟ್ ಪಂದ್ಯವು ನಡೆದು ಡ್ರಾ ಆಗಿ ಮುಕ್ತಾಯಗೊಂಡಿತು. ನೆಹರೂರವರ ಟೀಮಿಗೆ ಒಂದನೇ ಇನ್ನಿಂಗ್ಸಿನಲ್ಲಿ ೨೩೦ ಎರಡನೆಯದರಲ್ಲಿ ೧೬೯ ರನ್ನುಗಳು ದೊರೆತುವು. ರಾಧಾಕೃಷ್ಣನ್ ಟೀಮು ಮೊದಲಿನದರಲ್ಲಿ ೨೩೧ ಎರಡನೆಯದರಲ್ಲಿ ೯೫ ರನ್ನುಗಳನ್ನು ಮಾಡಿತು. ಮೌಲಾನಾ ಆಜಾದರು ಕೊಟ್ಟ ಕ್ಯಾಚನ್ನು ನೆಹರೂರವರು ಹಿಡಿದರು. ಪಂದ್ಯವು ಮುಗಿದನಂತರ ನೆಹರೂರವರು ಎರಡು ಬ್ಯಾಟುಗಳ ಮೇಲೆ ತಮ್ಮ ರುಜು ಮಾಡಿ ಅವನ್ನೂ, ಟಾಸ್ ಎಸೆದ ಚಿನ್ನದ ನಾಣ್ಯ ಮತ್ತು ಸ್ಕೋರ್ ಪುಸ್ತಕವನ್ನೂ ಹರಾಜು ಹಾಕಿದರು. ಅದರಿಂದ ೧೧೫೦೦ ರೂಗಳು ಬಂದವು. ಈ ಪಂದ್ಯದಿಂದ ಪರಿಹಾರ ನಿಧಿಗೆ ೧ ಲಕ್ಷ ರೂ ಶೇಖರಣೆಯಾಗುವುದೆಂದು ಗೊತ್ತಾಗಿದೆ.

## ತಾಯಿನಾಡುವಿನ ರಜತ ಮಹೋತ್ಸವ

ಬೆಂಗಳೂರು ೧೪

ಮೊನ್ನೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಾಯಿನಾಡು ಪತ್ರಿಕೆಯ ರಜತ ಮಹೋತ್ಸವವನ್ನು ನೆರವೇರಿಸಿದರು. ಸಮಾರಂಭಕ್ಕೆ ಮಂತ್ರಿಗಳೂ, ಹೈಕೋರ್ಟ್ ನ್ಯಾಯಾಧೀಶರೂ ಮುಂತಾಗಿ ಅನೇಕರು ದಯಮಾಡಿಸಿದ್ದರು. ಪತ್ರಿಕೆಗೆ ಶುಭವನ್ನು ಹಾರೈಸಿ ಶ್ರೀಮನ್ಮಹಾರಾಜರು, ರಾಜಾಜಿ, ಟಿ. ಪ್ರಕಾಶಂ, ಹೆಚ್. ಕೆ. ವೀರಣ್ಣಗೌಡ, ಹೆಚ್. ಸಿ. ದಾಸಪ್ಪ ಮುಂತಾದವರು ಸಂದೇಶಗಳನ್ನು ಕಳುಹಿಸಿದ್ದರು. ಮದ್ರಾಸಿನ ವಕೀಲರಾದ ಶ್ರೀ ವಿ. ವಿ. ಶ್ರೀನಿವಾಸ ಅಯ್ಯಂಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ ಮತ್ತು ಶ್ರೀ ... ಪತ್ರಿಕೆಯ ... ಯನ್ನು ಪ್ರಶಂಸಿಸಿದರು. ಮಾಲೀಕರಾದ ಪಿ. ಆರ್. ರಾಮಯ್ಯನವರು ಪತ್ರಿಕೆಯ ಇತಿಹಾಸವನ್ನು ವಿವರಿಸಿ ವಂದನಾರ್ಪಣೆ ಮಾಡಿದರು.

## ಚಳುವಳಿ ನಡೆಸಲು ಉತ್ತರ ಪ್ರದೇಶ ವಿದ್ಯಾರ್ಥಿಗಳ ನಿರ್ಧಾರ

ಅಲಹಾಬಾದು ಮತ್ತು ಲಕ್ನೋ ವಿಶ್ವವಿದ್ಯಾಲಯದ ಸಂಘಗಳಲ್ಲಿ ಜಾರಿಗೆ ತಂದಿರುವ ಶುಲ್ಕ ಅಂಗೀಕರಣೆಯ ವಿರುದ್ಧವಾಗಿ ಚಳುವಳಿಯನ್ನು ಮುಂದುವರಿಸುವುದಲ್ಲದೆ ಆ ಸಂಸ್ಥಾನಾದ್ಯಂತವೂ ನಡೆಸಬೇಕೆಂದು ವಿದ್ಯಾರ್ಥಿ ಸಂಘದ ಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆ.

## ವಯಸ್ಕರ ವಿದ್ಯಾಭ್ಯಾಸಕ್ಕೆ ಸಹಾಯ

ಮೈಸೂರು ಬೀಡಿ ಕೆಲಸಗಾರರ ಸಂಘದ ವಯಸ್ಕರ ವಿದ್ಯಾಭ್ಯಾಸಕ್ಕಾಗಿ ರಾಜಧಾನಿಯ ಪೀರ್‌ಬೀಡಿ ಕಾರ್ಖಾನೆ ಮಾಲೀಕರಾದ ಜ|| ಅಬ್ದುಲ್ ರಹೀಂರವರು ೧೦೦ ರೂ ಗಫೂರ್ ಮತ್ತು ಜಹಾಂಗೀರ್ ಬೀಡಿ ವರ್ಕ್ಸ್‌ನ ಜ|| ಎಫ್. ಎ. ಗಫಾರ ರವರು ೨೫ ರೂ ಮತ್ತು ಯೂನಿಯನ್ ಬೀಡಿ ಕಾರ್ಖಾನೆ ಮಾಲೀಕರಾದ ಜ|| ಇಬ್ರಾಹಿಂಬೇಗ್ ರವರು ೭೫ ರೂಗಳನ್ನು ಕೊಟ್ಟಿರುತ್ತಾರೆ.

## ಕಾರ್ಮಿಕರಿಗೂ ಮಾಲೀಕರಿಗೂ ಸಾಧಾರಣ

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದಲ್ಲಿ ಮರಿಯಪ್ಪನವರ ಭಾಷಣ

ಮೈಸೂರು [illegible]

ನೆನ್ನೆ ಸಂಜೆ ಟೌನ್ ಹಾಲಿನಲ್ಲಿ [illegible] ಗಿರಣಿ ಕೆಲಸಗಾರರ [illegible] ಪ್ರದೇಶ [illegible] ನೀಡಿದ್ದ [illegible]

[illegible] ನಡೆದ [illegible] ಕೆಲಸ ಕಾರ್ಯಗಳನ್ನು ವಿವರಿಸಿದರು

ಪ್ರದೇಶ ಕಾಂಗ್ರೆಸ್ ಸಮಿತಿಯ [illegible] ಶ್ರೀ [illegible] ಮರಿಯಪ್ಪನವರು ದೀರ್ಘವಾದ ಭಾಷಣವನ್ನು ಮಾಡಿ ಈ ಸಂಘದ [illegible] ವ್ಯವಸ್ಥೆಗ [illegible] ಕಾರ್ಯಗಳನ್ನು ಸಾಧಿಸಿ [illegible] ಉಪಯೋಗವಾಗಿರುವ [illegible] ಪ್ರವೃತ್ತಿಯನ್ನು [illegible]

[illegible]

[illegible] ಅಧ್ಯಕ್ಷತೆ ವಹಿಸಿದ್ದರು

ವರಲಕ್ಷ್ಮಿ ಲಲಿತ ಕಲಾ ಶಾಲೆಗಳ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮಿ ಲಲಿತ ಕಲಾ ಶಾಲೆಗಳ [illegible] ವಾರ್ಷಿಕೋತ್ಸವವು [illegible] ಗಂಟೆಗೆ [illegible] ಡೈರೆಕ್ಟರಾದ [illegible] ಅಧ್ಯಕ್ಷತೆ ವಹಿಸಿದ್ದರು

ಪುರ [illegible] ಹೋಟೆಲು ಕೆಲಸಗಾರರ ಸಂಘ

[illegible] ನಿಯೋಗ [illegible] ಸನ್ನಿಧಿಯ [illegible] ಎಸ್ ಮೂರ್ತಿ, [illegible] ವೇದವ್ಯಾಸರಾವ್, [illegible] ಭಾಷಣ ಮಾಡಿದರು. [illegible] ನಿಯೋಗ ಮಾಡಲಾಯಿತು

ಮಹಿಳಾ ಸಮಾಜದ ಹಿಂದಿ ತರಗತಿಗಳು

[illegible] ರಸ್ತೆಯ [illegible] ಮಹಿಳಾ ಸಮಾಜದಲ್ಲಿ ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರಭಾಷಾ, ಪ್ರವೇಶ, ವಿಶಾರದ ಹಿಂದೀ ಪರೀಕ್ಷೆಗಳಿಗೆ ವಿದ್ಯಾರ್ಥಿನಿಯರನ್ನು [illegible] ಮಾಡಲು [illegible] ತರಗತಿಗಳನ್ನು [illegible] ಹಿಂದೀ ಅಧ್ಯಾಪಕಿಯರು [illegible]

[illegible] ವಿದ್ಯಾರ್ಥಿನಿಯರ ಸಂಘ

[illegible] ಕಾಲೇಜಿನ [illegible] ಸಂಘದ [illegible] ಜಾನ್ಸನ್‌ರಿಂದ ಡಾ|| [illegible] ಸಂಜೆ [illegible] ಗಂಟೆಗೆ [illegible] ಮಾಡುವರು [illegible]

## ಬಳ್ಳಾರಿ ಸೇರ್ಪಡೆಯು ಕನ್ಯಾದಾನದಂತೆ

[illegible] ಪಾತಕರಾದ ಬಳ್ಳಾರಿ ತಾಲ್ಲೂಕುಗಳನ್ನು ಮೈಸೂರು ಸಂಸ್ಥಾನಕ್ಕೆ ಅಕ್ಟೋಬರ್ ೧ನೇ ತಾ|| ಸೇರಿಸಿಕೊಳ್ಳುವ ಸಮಾರಂಭವನ್ನು ಕನ್ಯಾದಾನಕ್ಕೆ ಹೋಲಿಸಿದರು ವರನಿಗೆ ಕನ್ಯೆಯನ್ನು ಒಪ್ಪಿಸುವಾಗ ಮಾತಾಪಿತೃಗಳ ಮನಸ್ಸಿನ [illegible] ಹಾಗೆಯೇ [illegible] ಬಳ್ಳಾರಿಯು [illegible] ತನಗೆ [illegible] ದಿಗಳು ದೊರಕು [illegible] ಬಳ್ಳಾರಿಯ [illegible] ವರ್ಣಿಸಿದರು

## ಪರೂಕರಿಗೆ ಮಾಜಿ ರಾಣಿಯು ಪರವಾಗಿ ಸಮನ್ಸ್

ಈಜಿಪ್ಟಿನ ಮಾಜಿ ದೊರೆ ಫರೂಕರ [illegible] ಈಜಿಪ್ಟಿನ ಮಾಜಿಯು [illegible] ಕಲಿಯರ್ ಪೋಲಿಸ್‌ಗೆ ಒಂದು [illegible] ರಾಜಕಾಂತ್ರಿಕರ [illegible] ಮಾಜಿ ರಾಣಿ ನರಿಮನ್ನರ [illegible] ಅವರು ಜೀವನಾಂಶ ಕೊಡುವಂತೆ ಕೋರಿರುವರು [illegible] ನೋಟೀಸಿನಲ್ಲಿ [illegible]

## ರೋಗಿಯು ಮಾಂಗಲ್ಯದ ಅಪಹಾರ

[illegible] ಆಸ್ಪತ್ರೆಯ [illegible] ಚಿಕಿತ್ಸೆ [illegible] ಮಾಂಗಲ್ಯವ [illegible] ದೊರಕಿತು

ಸಂಸ್ಕೃತ ಮಹಾ ಪಾಠಶಾಲಾ ವಿದ್ಯಾರ್ಥಿಗಳ ಸಂಘ

ಮೈಲ್ಯಾಂಡ್ ಸಂಘದ ಇತ್ತೀಚಿನ ದಸರೆಯ [illegible] ಸಂಜೆ [illegible] ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಡೆಯುವ [illegible] ಶ್ರೀ [illegible] ಅಧ್ಯಕ್ಷತೆ ವಹಿಸುವರು. ವಿದ್ಯಾಭೂಷಣಂ ಶ್ರೀ ಎ [illegible] ಶಾಸ್ತ್ರಿಗಳು ಭಾಷಣ ಮಾಡುವರು ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

ಗಣಪತಿ ಉತ್ಸವದ ಸಂಗೀತ

ಕೃಷ್ಣವಿಲಾಸ ಅಗ್ರಹಾರದಲ್ಲಿರುವ [illegible] ನಾಳೆ ಸಂಜೆ [illegible] ಗಂಟೆಗೆ ಬೆಂಗಳೂರಿನ [illegible] ಚಂದ್ರಪ್ಪನವರ ಗಾಯನವು ಶ್ರೀ [illegible] ಪಿಟೀಲು, [illegible] ವೆಂಕಟೇಶದೇವರ [illegible] ಮೃದಂಗ, ವಿ|| [illegible] ಖಂಜರಿ ವಿ|| ನಾಗಭೂಷಣ [illegible] ಬಾಬು [illegible] ನಡೆಯುವುದು

ಸಂಗೀತ ಮತ್ತು ಹರಿಕಥೆ

ರಾಜಧಾನಿಯ ಶ್ರೀ [illegible] ಸಂಗೀತ [illegible] ನಾಳೆ ಸಂಜೆ [illegible] ಗಂಟೆಗೆ ವಿದ್ವಾನ್ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಸಂಗೀತವೂ, ಶ್ರೀ ಎಂ [illegible] ಹರಿಕಥೆಯೂ ನಡೆಯುವುವು

ಅಕ್ಟೋಬರ್ [illegible] ನೇ ತಾರೀಖು ಎಂ. ಪಿ ಸಿ ಸಿ. ಸಭೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧಿವೇಶನವು ಚಿನ್ನದ ಗಣಿಯಲ್ಲಿ ಮುಂದಿನ ತಿಂಗಳ [illegible] ನೆ ತಾರೀಕು [illegible]

## ಭೂ ದಾನ ಯಜ್ಞದ ಜೊತೆಗೆ ಕೂಪ ದಾನ

ಆಚಾರ್ಯ ವಿನೋಬಾ ಭಾವೆಯವರ [illegible] ನೇ ವರ್ಷ ವರ್ಧಂತಿಯು ಶುಕ್ರವಾರ ದೆಹಲಿಯಲ್ಲಿ ಆಚರಿಸಲ್ಪಟ್ಟಿತು ರಾಜಘಾಟಿನಲ್ಲಿ ನಡೆದ ಪ್ರಾರ್ಥನೆಯಲ್ಲಿ ರಾಜೇಂದ್ರ ಪ್ರಸಾದರೂ ಭಾಗವಹಿಸಿದ್ದರು ಅವರು ಒಂದು ಹಸ್ತಲಿಖಿತ ಸಂದೇಶವನ್ನಿತ್ತು, ನೀರಾವರಿ ಸೌಕರ್ಯವನ್ನು ಕಲ್ಪಿಸದಿದ್ದರೆ ವಿನೋಬಾಜಿಯವರ ಭೂದಾನ ಯಜ್ಞವು ಪೂರ್ಣವಾಗಿ ಯಶಸ್ವಿಯಾಗುವುದಿಲ್ಲವೆಂದು ಹೇಳಿ ಅವಶ್ಯಾಗಿಯೇ ಆಚಾರ್ಯರು ಸಂಪತ್ತಿ ದಾನವನ್ನು ಮಾಡುವಂತೆ ಕೋರಿರುವುದಾಗಿ ತಿಳಿಸಿದರು ರಾಷ್ಟ್ರಾಧ್ಯಕ್ಷರು ಎರಡು ಭಾವಿಗಳನ್ನು ದಾನವಾಗಿ ಕೊಟ್ಟರು ಪಂಡಿತ ನೆಹರೂರವರು ಒಂದು ಭಾವಿಯನ್ನು ಕೊಡಲು ವಾಗ್ದಾನ ಮಾಡಿದರು

## 'ಸಂತಾನ ಹೀನತೆ' ನಿರ್ಣಯ ವಾಪಸು

ಬುದ್ಧಿ ಭ್ರಮಣೆ ಹಿಡಿದವರನ್ನೂ [illegible] ಗಳನ್ನು ಸಂತಾನ ಹೀನರನ್ನಾಗಿ ಮಾಡುವಂತೆ ವಿಧಿಸುವ ನಿರ್ಣಯವನ್ನು ಸೂಚಕರಾದ [illegible] ಮುನ್ಸಿಯವರು ವಾಪಸು ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿ ಚರ್ಚೆ ನಡೆದು ಕೆಲವರು ವಿರೋಧವನ್ನು ವ್ಯಕ್ತಪಡಿಸಿದ್ದರು

## ಗೌರೀಶಂಕರವನ್ನು ಮತ್ತೆ ಹತ್ತಲು ಹಿಲಾರಿ ಆಶೆ

ಗೌರೀಶಂಕರವನ್ನು ಹತ್ತಿದ ನ್ಯೂಜಿಲೆಂಡ್ ಪರ್ವತಾರೋಹಿ ಎಡ್ಮಂಡ್ ಹಿಲಾರಿಯವರು ಅದೇ ಶಿಖರವನ್ನು ಟಿಬೆಟ್ ಕಡೆಯಿಂದ ಹತ್ತಲು ಆಶಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible] ಸುಬ್ರಹ್ಮಣ್ಯ ಭಾರತಿ, ಭಾರತಿಯವರ [illegible] ಸಂಜೆ [illegible] ಹಾಡುಗಳು [illegible] ಎಸ್ ಚಂದ್ರಶೇಖರಯ್ಯ [illegible] ಸಂಗೀತ [illegible] ದೊಡನೆ ಭೇಟಿ.

SREE GANESHA TALKIES

From 15-9-53 For 2 days only

GOLDEN HORDE OF CHENGHIS KHAN

(In Technicolor)

Starring Ann Blyth, David Farrar and Peggy Castle

## ಹರಾಜು

ಮೈಸೂರು 1ನೇ ಪ್ರಿನ್ಸಿಪಾಲರವರ ಕೋರ್ಟು ಒ.ಎಸ್. 701|53—[illegible] 1 of 49 50

[illegible] ಪಟ್ಟಣದಲ್ಲಿ [illegible] 1) [illegible] 2) ಕೃಷ್ಣಪ್ಪ 3) [illegible]

ಮೇಲ್ಕಂಡ [illegible] ಕೋರ್ಟ್ [illegible] ಮೈಸೂರು [illegible] 15 9 53 ರ ದಿವಸಂಗಳಂದ [illegible] 11 [illegible] ಹರಾಜು ಮಾಡಲಾಗುವುದು

ಎಸ್ ಶ್ರೀರಂಗಾಚಾರ್,

[illegible] ಅಮೀನ್

Edited, Printed and Published by A R Nagarajan at Sadhvi Press D.Subbiah Road, Mysore

## ಸ್ವೀಡನ್ನಿನಲ್ಲಿ ಅಣು ಬಾಂಬು ಧಾಳಿ ತಡೆಯಬಲ್ಲ ಠೇವುಗಳು

ಬಾಲ್ಟಿಕ್ ಸಮುದ್ರದ ಪರ್ವತ ತೀರ ಪ್ರದೇಶಗಳಲ್ಲೆಲ್ಲಾ ಅಣು ಬಾಂಬು ಧಾಳಿಗೆ ಜಗ್ಗದ ಠೇವುಗಳನ್ನು ಸ್ವೀಡನ್ನು ಕಟ್ಟುವುದೆಂದು ವರದಿಯಾಗಿದೆ ಅವುಗಳೊಳಗೆ ಸ್ವೀಡಿಷ್ ಯುದ್ಧ ನೌಕೆಗಳನ್ನ ಧಾಳಿ ಕಾಲದಲ್ಲಿ ರಕ್ಷಣೆಗಾಗಿ ಸೇರಿಸಬಹುದೆಂದು ಹೇಳಲಾಗಿದೆ ಇದಲ್ಲದೆ [illegible] ಜನರು ಏಕಕಾಲದಲ್ಲಿ ಧಾಳಿಯ ಸಮಯದಲ್ಲಿ ಆಶ್ರಯ ಪಡೆಯುವ ಪ್ರಪಂಚದಲ್ಲೇ ಅತ್ಯಂತ ಭಾರಿಯಾದ ಕಟ್ಟಡವನ್ನೂ ಆ ದೇಶದಲ್ಲಿ ನಿರ್ಮಿಸಲಾಗುವುದೆಂದೂ, ವಿಮಾನ ನೆಲೆ ಮತ್ತು ಕೈಗಾರಿಕೆಗಳನ್ನೂ ಪರ್ವತಗಳೊಳಗೆ ಜರೂರು ಪರಿಸ್ಥಿತಿ ಕಾಲದಲ್ಲಿ ಸ್ಥಾಪಿಸಲಾಗುವುದೆಂದೂ ತಿಳಿದುಬಂದಿದೆ

## ೯೦ ವರ್ಷದ ವರ, ೬೬ ವರ್ಷದ ವಧು

ಲಂಡನ್ನಿನಲ್ಲಿ ಈಸ್ಟ್‌ಬರ್ನ್ ಪ್ರದೇಶದಲ್ಲಿ ೯೦ ವರ್ಷದ ಕ್ರಿಸ್ಟೋಫರ್ ಹೀಲ್ ಎಂಬ ವೃದ್ಧನು ೬೬ ವರ್ಷದ ಆಲ್ಬೈಸ್ ಎಂಬಾಕೆಯನ್ನು ವಿವಾಹವಾಗಿರುತ್ತಾನೆ ಅವರಿಬ್ಬರೂ ಒಂದು ಸಿನಿಮಾ ಮಂದಿರದಲ್ಲಿ ಸಂಧಿಸಿದಾಗ ಅವರಲ್ಲಿ ಅನುರಾಗವು ಹುಟ್ಟಿತು ವಿವಾಹಾನಂತರದ ವಿಹಾರವನ್ನು ಮುಗಿಸಿ, ನಿತ್ಯಜೀವನದಲ್ಲಿ ಅವರು ತೊಡಗಿರುತ್ತಾರೆ.

## ಕಂಬಿ ತಪ್ಪಿದ ಗೂಡ್ಸ್ ಗಾಡಿ ಪುನಃ ಕಂಬಿ ಮೇಲೆ ಹತ್ತಿತು

ಮೈಸೂರು-ಚಾಮರಾಜನಗರದ ರೈಲು ರಸ್ತೆಯಲ್ಲಿ ಕಳೆದ ಗುರುವಾರ ಒಂದು ಗೂಡ್ಸ್ ಗಾಡಿ ಹೋಗುತ್ತಿದ್ದಾಗ ಒಂದು ವ್ಯಾಗನ್ನು ಕಂಬಿ ತಪ್ಪಿ, ಪುನಃ ಕಂಬಿಯ ಮೇಲೆ ಬಂದು ಇಂಜನ್ನು ಡ್ರೈವರನನ್ನು ಚಕಿತಗೊಳಿಸಿತೆಂದು ವರದಿಯಾಗಿದೆ ಗಾಡಿಯನ್ನು ಇಂಜನ್ನು ಬಹು ಪ್ರಯಾಸದಿಂದ ಎಳೆಯುತ್ತಿದ್ದುದನ್ನು ಕಂಡು, ಡ್ರೈವರನು ಹೊರಗಡೆಯಿಂದ ಬಗ್ಗಿನೋಡಲಾಗಿ ಒಂದು ವ್ಯಾಗನ್ನು ಜಲ್ಲಿ ಕಲ್ಲಿನ ಮೇಲೆ ಹರಿಯುತ್ತಿದ್ದುದು ಕಂಡು ರೈಲನ್ನು ನಿಲ್ಲಿಸಿದನೆಂದೂ ಅಷ್ಟರೊಳಗೆ ಗಾಡಿಯ ಚಕ್ರಗಳು ಕಂಬಿ ಮೇಲೆ ಪುನಃ ಕುಳಿತು ರೈಲು ಸರಾಗವಾಗಿ ಮುಂದೆ ಸಾಗಿತೆಂದೂ ಗೊತ್ತಾಗಿದೆ

ಸಂಗೀತ ಕಛೇರಿ

ರಾಜಧಾನಿಯ ದೇವರಾಜಾ ಮಾರ್ಕೆಟ್ಟಿನ ವರ್ತಕರು ಏರ್ಪಡಿಸಿರುವ ಗಣಪತಿ ಉತ್ಸವದ ಅಂಗವಾಗಿ ನಾಳೆ ರಾತ್ರಿ ೮ ಗಂಟೆಗೆ ಸಂಗೀತ ವಿದುಷಿ ಆರ್ ಜಲಜಾಕ್ಷಮ್ಮನವರ ಗಾಯನ ಕಛೇರಿಯು ಸೂಕ್ತ ಪಕ್ಕವಾದ್ಯಗಳೊಡನೆ ಜರುಗುವುದು ಮಾಜಿ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು ನೆನ್ನೆ ಸಂಜೆ ನಡೆದ ಸಮಾರಂಭದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ. ವೀರಣ್ಣಗೌಡರು ಭಾಷಣ ಮಾಡಿ ಉತ್ಸವದ ಹಿರಿಮೆಯನ್ನು ವಿವರಿಸಿದರು ಈ ರಾತ್ರಿ ೮ ಗಂಟೆಗೆ ವಿ|| ಬಿ ಎಸ್ [illegible] ಮತ್ತು ವಿ|| ಕೆ ವೆಂಕಟಸುಬ್ಬಯ್ಯನವರಿಂದ ಭಾರತ ವಾಚನ ವ್ಯಾಖ್ಯಾನವು ನಡೆಯುವುದು

## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ [illegible] ಪೌಂಡ, ನಕ್ಷೆ, ದೀಪ, ಫ್ಲಷಿಂಗ್ ಇವೆ

"ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿರಿ

SRI GAYATHRI TALKIES

TO-DAY LAST DAY

THE CRIMSON PIRATE

From 15 9-53 For 3 Days

R K O s

NEVER WAVE AT A WAC

With—Paul Douglas

— NEXT CHANGE —

SONS OF MUSKETEERS

ರಿಜಿಸ್ಟರ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE : TUESDAY 15-9-1953 : ಮೈಸೂರು : ಮಂಗಳವಾರ ೧೫-೯-೧೯೫೩ [ ಸಂಚಿಕೆ ೯೩

# ಮೈಸೂರು ಮಂತ್ರಿಮಂಡಲಕ್ಕೆ ಬಳ್ಳಾರಿ ನಾಗನಗೌಡರು ?

## ಮೈಸೂರು ಮಂತ್ರಿಮಂಡಲಕ್ಕೆ ಮದರಾಸ್ ಮಂತ್ರಿ

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ನೆನ್ನೆ ಮದರಾಸಿನ ಹಲವು ಪತ್ರಿಕಾ ಪ್ರತಿನಿಧಿಗಳು ಭೇಟಿ ಮಾಡಿ ಸಂಸ್ಥಾನದ ಮಂತ್ರಿಮಂಡಲದಲ್ಲಿ ಬಳ್ಳಾರಿಗೆ ಪ್ರಾತಿನಿಧ್ಯ ಕೊಡಲಾಗುವುದೇ ಎಂದೂ ಮತ್ತು ಬಳ್ಳಾರಿ ಜಿಲ್ಲಾ ಹೊಸಪೇಟೆಯ ಡಾ|| ಆರ್. ನಾಗನಗೌಡರನ್ನು ಸಚಿವರನ್ನಾಗಿ ನೇಮಿಸಲಾಗುವುದೇ ಎಂದು ಕೇಳಲು ಆ ವಿಷಯವು ತಮ್ಮ ತೀವ್ರ ಪರ್ಯಾಲೋಚನೆಯಲ್ಲಿರುವುದಾಗಿ ಅವರು ತಿಳಿಸಿದರು

## ಬಳ್ಳಾರಿಯಲ್ಲಿ ಪಾನನಿರೋಧ ಮುಂದುವರಿಯುವುದು

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಮದ್ರಾಸಿನಲ್ಲಿ ರಾಜಾಜಿಯವರನ್ನು ಭೇಟಿ ಮಾಡಿದ್ದರು. ಆಗ ಮದ್ರಾಸಿನ ಹಣಕಾಸಿನ ಮಂತ್ರಿ ಸಿ. ಸುಬ್ರಹ್ಮಣ್ಯಂ ಮತ್ತು ವ್ಯವಸಾಯ ಮಂತ್ರಿ ಡಾ|| ನಾಗನಗೌಡರವರು ಇದ್ದರು. ಅನಂತರ ಶ್ರೀ ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಅಕ್ಟೋಬರ್ ೧ನೇ ತಾ|| ಯಿಂದ ಬಳ್ಳಾರಿಯು ಮೈಸೂರು ಸಂಸ್ಥಾನಕ್ಕೆ ಸೇರಲಿರುವ ವಿಷಯವನ್ನು ಪ್ರಸ್ತಾಪಿಸಿದರು. ಮೈಸೂರಿಗೆ ಸೇರುವ ಏಳು ತಾಲ್ಲೂಕುಗಳನ್ನೂ ಒಂದು ಪ್ರತ್ಯೇಕ ಜಿಲ್ಲೆಯಾಗಿ ಮಾಡಲಾಗುವುದೆಂದೂ, ಅಲ್ಲಿ ಈಗ ಇರುವ ಪಾನನಿರೋಧವನ್ನು ಮುಂದುವರಿಸಿಕೊಂಡು ಬರಲಾಗುವುದೆಂದೂ ಶ್ರೀ ಹನುಮಂತಯ್ಯನವರು ತಿಳಿಸಿದರು. ರಾಜಾಜಿಯವರ ಭೇಟಿ ವಿಷಯವನ್ನು ಕುರಿತು ಮಾತನಾಡಿ, ಅವರ ಆಶೀರ್ವಾದ ಮತ್ತು ಸಲಹೆಗಳನ್ನು ತಾವು ಪಡೆದುದಾಗಿ ಹೇಳಿದರು

## ಆಂಧ್ರದಲ್ಲಿ ಸರ್ಕಾರ ರಚಿಸಲು ಪ್ರಕಾಶಂರವರಿಗೆ ಅವಕಾಶ

ಆಂಧ್ರದಲ್ಲಿ ಪ್ರಜಾ ಸತ್ತಾತ್ಮಕವಾದ ಮತ್ತು ಸುಭದ್ರವಾದ ಸಮ್ಮಿಶ್ರ ಸರ್ಕಾರವನ್ನು ರಚಿಸಲು ಟಿ. ಪ್ರಕಾಶಂರವರಿಗೆ ಆಂಧ್ರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸದಸ್ಯರೂ ಮತ್ತು ಶಾಸನ ಸಭಾ ಸದಸ್ಯರೂ ನೆನ್ನೆ ಅವಕಾಶವನ್ನು ಕಲ್ಪಿಸಿ, ಪಕ್ಷದ ಜವಾಬ್ದಾರಿ ನಿರ್ವಹಣಾ ಸ್ಥಾನದಿಂದ ಅವರನ್ನು ವಿಮುಕ್ತರನ್ನಾಗಿ ಮಾಡಿದರು

### ನಿ ಧ ನ

ರಾಜಧಾನಿಯ ಸರಸ್ವತೀಪುರದಲ್ಲಿರುವ ಶ್ರೀ ಎಂ. ಎಲ್. ನಾರಾಯಣರಾಯರು ಈ ದಿನ ಬೆಳಗ್ಗೆ ಹೃದಯ ಕ್ರಿಯೆ ನಿಂತು ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ಮೃತರಿಗೆ ಪತ್ನಿ, ಮೂವರು ಹೆಣ್ಣು ಮಕ್ಕಳು ಮತ್ತು ಇಬ್ಬರು ಪುತ್ರರಿರುವರು. ಅವರು ಹಾಜಿ ಹಬೀಬ್ ಹಾಜಿ ಮಹಮದ್ ಸೇಠ್‌ರವರ ಸಂಸ್ಥೆಯಲ್ಲಿ ಕೆಲಸದಲ್ಲಿದ್ದರು. ಅವರು ಹಿಂದೆ ಅನೇಕ ವರ್ಷಕಾಲ ವಕೀಲರ ಗುಮಾಸ್ತರಾಗಿಯೂ ಇದ್ದರು. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿ-

## 'ಬಿ' ತರಗತಿ ರೇಷನ್‌ದಾರರಿಗೆ ಪಡಿತರದ ಪುನರ್ಹಂಚಿಕೆ

ಬೆಂಗಳೂರು ೧೪

ಸಂಸ್ಥಾನದಲ್ಲಿ ರಾಗಿ ಜೋಳಗಳು ಸಾಕಷ್ಟು ಇಲ್ಲವಾದುದರಿಂದ "ಬಿ" ತರಗತಿ ರೇಷನ್ ಕಾರ್ಡುದಾರರ ಪಡಿತರ ಪ್ರಮಾಣದಲ್ಲಿ ತಾತ್ಕಾಲಿಕ ಪುನರ್ಹಂಚಿಕೆ ಮಾಡಿ ಇನ್ನು ಮುಂದೆ ಪ್ರತಿಯೊಬ್ಬರಿಗೂ ನಾಲ್ಕು ಔನ್ಸ್ ಅಕ್ಕಿ, ನಾಲ್ಕು ಔನ್ಸ್ ರಾಗಿ ಅಥವಾ ಜೋಳ ಮತ್ತು ನಾಲ್ಕು ಔನ್ಸ್ ಗೋದಿಯನ್ನು ಕೊಡಲಾಗುವುದೆಂದು ತಿಳಿಸಲಾಗಿದೆ. ಇದುವರೆಗೆ ಮೂರು ಔನ್ಸ್ ಅಕ್ಕಿ, ಎರಡು ಔನ್ಸ್ ಗೋಧಿ ಮತ್ತು ಏಳು ಔನ್ಸ್ ರಾಗಿ ಅಥವಾ ಜೋಳವನ್ನು ಕೊಡಲಾಗುತ್ತಿತ್ತು.

## ತಿರುವಾಂಕೂರು-ಕೊಚ್ಚಿಯಲ್ಲಿ ಮತ್ತೆ ಸಾರ್ವತ್ರಿಕ ಚುನಾವಣೆ ?

ತಿರುವಾಂಕೂರು ಕೊಚ್ಚಿ ಸಂಸ್ಥಾನದ ಕಾಂಗ್ರೆಸ್ ಪಕ್ಷದಿಂದ [illegible]. ಕಾಂಗ್ರೆಸ್ಸಿನ ಒಂಭತ್ತು ಮಂದಿ ಸದಸ್ಯರು ಹೊರಬಿದ್ದುದರಿಂದ ಅಲ್ಲಿ ತೀವ್ರ ಬಿಕ್ಕಟ್ಟು ಸಂಭವಿಸಿ, ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಇದೇ ೨೮ನೇ ತಾ|| ಸೇರಲಿರುವ ಸಂಸ್ಥಾನದ ಶಾಸನ ಸಭೆಯಲ್ಲಿ ವಿಶ್ವಾಸವನ್ನು ಕೋರುವುದೆಂದೂ, ಈ ಬಗ್ಗೆ ಸಭೆಯ ಅಧ್ಯಕ್ಷರಿಗೆ ಇನ್ನು ಒಂದೆರಡು ದಿನಗಳಲ್ಲೇ ಸೂಚನೆ ಕೊಡಲಾಗುವುದೆಂದೂ ವರದಿಯಾಗಿದೆ. ಸಭೆಯ ವಿಶ್ವಾಸವು ದೊರೆಯದಿದ್ದ ಪಕ್ಷದಲ್ಲಿ ಸಭೆಯನ್ನು ವಿಸರ್ಜಿಸಿ ಸಂಸ್ಥಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆಸುವಂತೆ ಸಭಾನಾಯಕರು ರಾಜಪ್ರಮುಖರಿಗೆ ಸಲಹೆ ಮಾಡುವರೆಂದೂ ಹೇಳಲಾಗಿದೆ. ಅಲ್ಲಿನ ಶಾಸನ ಸಭೆಯ ೧೦೮ ಸದಸ್ಯರ ಪೈಕಿ ವಿರೋಧ ಪಕ್ಷದ ಬಲವು ಈಗ ೫೭ಕ್ಕೆ ಏರಿದೆ

## ಮೈಸೂರು ಸಂಸ್ಥಾನಕ್ಕೆ ೨,೫೦೦ ಟನ್ ಗೋಧಿ

೧೦,೧೦೦ ಟನ್ ಅಮೆರಿಕದ ಗೋಧಿಯನ್ನು ಹೊತ್ತು ತಂದ ಹಡಗೊಂದು ನೆನ್ನೆ ಮದರಾಸು ಬಂದರಿಗೆ ಆಗಮಿಸಿ, ಅಲ್ಲಿ ಮೈಸೂರಿಗಾಗಿ ೨,೫೦೦ ಟನ್ನನ್ನು ಇಳಿಸಿ, ಉಳಿದುದನ್ನು ಕಲ್ಕತ್ತಾವಿಗೆ ಕೊಂಡೊಯ್ಯಿತೆಂದು ತಿಳಿದುಬಂದಿದೆ

## ಮಣ್ಣು ಗುಡ್ಡೆ ಕುಸಿದು ೧೦ ಮಹಿಳೆಯರ ಸಮಾಧಿ

ಅಂಬಾಲಾವಿಗೆ ಈಶಾನ್ಯದಲ್ಲಿ ೨೦ ಮೈಲಿ ದೂರವಿರುವ ಜಗಧಾರಿ ಎಂಬಲ್ಲಿ ನೆನ್ನೆ ಒಂದು ಮಣ್ಣುಗುಡ್ಡೆಯು ಕುಸಿದು ಬಿದ್ದು ಅದರ ಅಡಿಯಲ್ಲಿ ಹತ್ತು ಮಂದಿ ಮಹಿಳೆಯರು ಸಿಕ್ಕಿ ಮೃತಪಟ್ಟರೆಂದೂ, ಇನ್ನೊಬ್ಬಳ ಎರಡು ಕಾಲುಗಳು ಮುರಿದುವೆಂದೂ ವರದಿಯಾಗಿದೆ

### ನಾ ಗ ಸ್ವ ರ ಕ ಛೇ ರಿ

ರಾಜಧಾನಿಯ ಕೃಷ್ಣವಿಲಾಸ ರಸ್ತೆಯಲ್ಲಿರುವ ಮಾದರೀ ಶಾಲೆಯಲ್ಲಿ ವಿದ್ಯಾ ಗಣಪತಿ ಉತ್ಸವದ ಅಂಗವಾಗಿ ನಾಳೆ ಮಧ್ಯಾಹ್ನ ೩|| ಗಂಟೆಗೆ ವಿ|| ಎ. ವಿ. ನಾರಾಯಣಪ್ಪ ಮತ್ತು ಪಾರ್ಟಿಯವರಿಂದ ನಾಗಸ್ವರ ಕಛೇರಿಯೂ, ಸಂಜೆ ೬|| ಗಂಟೆಗೆ ಗಣಪತಿ ಮಂಗಳಾರತಿ ಮ-

## ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ವಾರ್ಷಿಕೋತ್ಸವ

ಮೈಸೂರು ೧೪

ಶ್ರೀಮನ್ಮಹಾರಾಜಾ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ಸಿಂಹಾಸನಕ್ಕೆ ಬಂದು ೧೪ ವರ್ಷಗಳಾದ ಸಂತೋಷ ಸಮಯದಲ್ಲಿ ಅರಮನೆಯ ಅಧಿಕಾರಿಗಳೂ ಮತ್ತು ಆಶ್ರಿತ ವರ್ಗದವರೂ ಈ ದಿನ ಬೆಳಿಗ್ಗೆ ಜಗನ್ಮೋಹನ ಭವನದಲ್ಲಿ ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿದ್ದರು

ಬೆಳಿಗ್ಗೆ ೭ ಗಂಟೆಗೆ ಅರಮನೆ ಬತೇರಿಯಿಂದ ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಕೋಟೆ ದೇವಸ್ಥಾನಗಳಲ್ಲಿ ವಿಶೇಷ ಸೇವೆಯನ್ನೂ ಸಹ ನಡೆಸಲಾಯಿತು

ಉಪಾಹಾರಾನಂತರ ಶ್ರೀಮನ್ಮಹಾರಾಜರ ಎ. ಡಿ. ಸಿ. ಯವರಾದ ಮೇಜರ್ ಎಲ್. ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅ|| ವಿ|| ಬಿ. ಚನ್ನಕೇಶವಯ್ಯನವರಿಂದಲೂ, ಅರಮನೆ ಕಛೇರಿ ಮ್ಯಾನೇಜರ್ ಶ್ರೀ ಬಿ. ಎಸ್. ಕಪನೀಪತಯ್ಯನವರಿಂದಲೂ ರಚಿತವಾದ ಮಂಗಳ ಪದ್ಯಗಳನ್ನು ಅ|| ವಿ|| ವಿ. ವೆಂಕಟನಾರಾಯಣರಾಯರು ಸುಶ್ರಾವ್ಯವಾಗಿ ಪಠಿಸಿದರು

ಅಧ್ಯಕ್ಷರು ಭಾಷಣ ಮಾಡಿ ಶ್ರೀಮನ್ಮಹಾರಾಜರ ದೈವ ಭಕ್ತಿ, ಪ್ರಜಾ ವಾತ್ಸಲ್ಯ ಮತ್ತು ಗುಣೈಕ ಪಕ್ಷಪಾತಗಳನ್ನು ವಿವರಿಸಿ, ಅವರ ಆಳ್ವಿಕೆಯು ಚಿರಕಾಲ ಯಶಸ್ವಿಯಾಗಿ ಮುಂದುವರಿಯಲೆಂದು ಹಾರೈಸಿದರು. ಶ್ರೀಮನ್ಮಹಾರಾಜರವರಿಗೆ ರಾಜಭಕ್ತಿಯನ್ನು ಸಮರ್ಪಿಸುವುದಲ್ಲದೆ, ಲೋಕ ಮಾತೆಯಾದ ಚಾಮುಂಡೇಶ್ವರಿಯು ಪ್ರಭುಗಳವರಿಗೂ, ರಾಜ ಕುಟುಂಬಕ್ಕೂ ದೀರ್ಘಾಯು ಆರೋಗ್ಯ, ಕೀರ್ತಿಗಳನ್ನು ಅಪಾರವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುವ ನಿರ್ಣಯವನ್ನು ಎಲ್ಲರೂ ಎದ್ದುನಿಂತು ಅಂಗೀಕರಿಸಿದರು

ಅ|| ವಿ|| ಬಿ. ಎಂ. ಶಿವಪ್ಪನವರಿಂದ ಸಂಗೀತವಾದನಂತರ ಜಯಕಾರದೊಡನೆ ಸಭೆಯು ಮುಕ್ತಾಯವಾಯಿತು

ಈ ಸಂಜೆ ಅರಮನೆ ಕೋಟೆಯಲ್ಲಿ ದೇವರುಗಳ ಉತ್ಸವವನ್ನೂ, ಅರಮನೆಗೆ ದೀಪಾಲಂಕಾರವನ್ನೂ ಏರ್ಪಡಿಸಲಾಗಿದೆ

## ರಾಷ್ಟ್ರಾಧ್ಯಕ್ಷರಿಗೆ ಕಫದ ವ್ಯಾಧಿ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರಿಗೆ ಕಫದ ವ್ಯಾಧಿಯು ಕಾಣಿಸಿಕೊಂಡಿರುವುದರಿಂದ ಅವರು ಸದ್ಯಕ್ಕೆ ಯಾವ ಪ್ರವಾಸವನ್ನೂ ಕೈಗೊಳ್ಳಬಾರದೆಂದು ವೈದ್ಯರು ಸಲಹೆ ಮಾಡಿರುವರೆಂದು ಗೊತ್ತಾಗಿದೆ

## ಪರ್ಷಿಯಾದ ಮಾಜಿ ವಿದೇಶಾಂಗ ಮಂತ್ರಿ ಈಜಿಪ್ಟಿನಲ್ಲಿ

ಪರ್ಷಿಯದಲ್ಲಿ ಡಾ|| ಮುಸ್ಸಾದಿಕ್ ಸರ್ಕಾರದ ವಿದೇಶಾಂಗ ಮಂತ್ರಿಯಾಗಿದ್ದ ಡಾ|| ಹುಸೇನ್ ಫಾತೆಮಿಯವರು ನೆನ್ನೆ ರಾತ್ರಿ ಕೈರೋವನ್ನು ತಲಪಿದರೆಂದು ಈಜಿಪ್ಟಿನ ಸುದ್ದಿಯಿಂದ ತಿಳಿದುಬಂದಿದೆ

○ ಗೌರೀಶಂಕರ ಶಿಖರವನ್ನು ಜಯಿಸಿದ ಶೆರ್ಪಾ ಟೆನ್ಸಿಂಗರು ಬರುವ ನವೆಂಬರ್ ತಿಂಗಳಲ್ಲಿ ಅಖಿಲ ಭಾರತ ಪ್ರವಾಸವನ್ನು ಕೈಗೊಳ-

## ಕಾಶ್ಮೀರದ ಪ್ರಶ್ನೆಯಲ್ಲಿ ಅಮೆರಿಕದ ಕೈವಾಡ

### ಡಲ್ಲೆಸ್‌ರ ಮೂಲಕ ಷೇಕ್ ಅಬ್ದುಲ್ಲಾರಿಗೆ ಐಸೆನ್‌ಹೋವರರ ರಹಸ್ಯ ಪತ್ರ ?

ಅಖಿಲ ಭಾರತ ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ವಿ. ಜಿ. ದೇಶಪಾಂಡೆಯವರು ನೆನ್ನೆ ಬೊಂಬಾಯಿಯ ಪತ್ರಿಕಾ ಪ್ರತಿನಿಧಿಗಳನ್ನು ಕುರಿತು ಮಾತನಾಡಿ, ಕಾಶ್ಮೀರದ ಸಮಸ್ಯೆಯಲ್ಲಿ ಅಮೆರಿಕದ ಕೈವಾಡ ನಡೆದಿರುವ ಬಗ್ಗೆ ತಮಗೆ ಸಾಕಷ್ಟು ನಿದರ್ಶನ ದೊರೆತಿರುವುದೆಂದೂ, ಅಮೆರಿಕದ ವಿದೇಶಾಂಗ ಶಾಖಾ ಕಾರ್ಯದರ್ಶಿ ಡಲ್ಲೆಸರು ಇತ್ತೀಚೆಗೆ ಭಾರತದಲ್ಲಿ ಪ್ರವಾಸ ಕೈಗೊಂಡಿದ್ದಾಗ, ಅಧ್ಯಕ್ಷ ಐಸೆನ್‌ಹೋವರರು ಕಾಶ್ಮೀರದ ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರಿಗೆ ಬರೆದಿದ್ದ ರಹಸ್ಯ ಪತ್ರವೊಂದನ್ನು ಅವರು ತಂದಿದ್ದರೆಂದೂ ತಿಳಿಸಿದರು. ಆ ಪತ್ರದ ಪರಿಣಾಮವಾಗಿ ಷೇಕ್ ಅಬ್ದುಲ್ಲಾರವರ ಮನೋವೃತ್ತಿಯೇ ಬದಲಾಯಿತೆಂದು ತಾವು ಭಾವಿಸುವುದಾಗಿಯೂ ಅವರು ನುಡಿದರು. ಡಲ್ಲೆಸರ ಭಾರತದ ಪ್ರವಾಸ ಕಾಲದಲ್ಲಿ, ಜಮ್ಮು ಪ್ರಜಾ ಪರಿಷತ್ತಿನ ಚಳುವಳಿಯಲ್ಲಿ ತಾವು ಭಾಗವಹಿಸಿ ಬಂಧನದಲ್ಲಿದ್ದುದಾಗಿಯೂ, ಮೇಲ್ಕಂಡ ರಹಸ್ಯ ಪತ್ರದ ಸುದ್ದಿಯನ್ನು ಈಗ ಬಹಿರಂಗಪಡಿಸುವುದು ಯುಕ್ತವಲ್ಲವೆಂದು ತಾವು ಹೊರಗೆಡಹಲಿಲ್ಲವೆಂದೂ ಶ್ರೀ ದೇಶಪಾಂಡೆಯವರು ತಿಳಿಸಿದರು

### ಜೂಜಾಟಕ್ಕೆ ಸಜಾ ಮತ್ತು ದಂಡ

ರಾಜಧಾನಿಯ ನಜರ್‌ಬಾದ್ ಪೋಲೀಸ್ ಸ್ಟೇಷನ್ನಿನ ಸಬ್ ಇನ್‌ಸ್ಪೆಕ್ಟರ್ ಶ್ರೀ ಎ. ಸಿ. ನಂಜಪ್ಪನವರೂ ಮತ್ತು ದಫೇದಾರ್ ಶ್ರೀ ವೀರರಾಜೇ ಅರಸಿನವರೂ ನೆನ್ನೆ ರಾತ್ರಿ ಇಟ್ಟಿಗೆಗೂಡಿನ ಸಾರಂಗಪಾಣಿ ಟ್ರಂಕ್ ಕಾರ್ಖಾನೆಯನ್ನು ಶೋಧಿಸಿ, ಅಲ್ಲಿ ಜೂಜಾಡುತ್ತಿದ್ದ ವೇಣುಗೋಪಾಲ್, ಕೃಷ್ಣ, ಲೋಗನಾಥ್, ಚಲುವರಾಜು, ವಹಾಬ್ ಮತ್ತು ಗಣೇಶ್‌ರವರ ಮೇಲೆ ಮೊಕದ್ದಮೆ ಹೂಡಲಾಗಿ, ಈ ದಿನ ನಗರ ನ್ಯಾಯಾಧೀಶರು ಆಪಾದಿತರಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ೨೦ ರೂ. ದಂಡವನ್ನು ವಿಧಿಸಿದರು. ಜೂಜಾಟಕ್ಕೆ ಮನೆಯನ್ನು ಕೊಟ್ಟ ವಹಾಬ್‌ರವರಿಗೆ ೧ ತಿಂಗಳು ಸಾದಾ ಸಜಾ, ೨೦೦ ರೂ. ಜುಲ್ಮಾನೆ ತಪ್ಪಿದರೆ ಮತ್ತೊಂದು ತಿಂಗಳ ಸಜಾವನ್ನು ವಿಧಿಸಲಾಯಿತು. ಜೂಜಿನ ಸ್ಥಳದಲ್ಲಿ ಸಿಕ್ಕಿದ ೩೦ ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ

### ತುಂಗಭದ್ರಾ ಯೋಜನೆ ಬಗ್ಗೆ ಪೂರ್ವಭಾವೀ ಚರ್ಚೆ

ಸಂಸ್ಥಾನದ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಕಛೇರಿಯಲ್ಲಿ ನೆನ್ನೆ ಇಂಜನಿಯರಿಂಗ್ ಮತ್ತು ವಿದ್ಯುಚ್ಛಕ್ತಿ ಶಾಖೆಗಳ ಉನ್ನತಾಧಿಕಾರಿಗಳ ಸಭೆಯು ನಡೆದು ಇದೇ ೧೮ನೇ ತಾರೀಖು ದೆಹಲಿಯಲ್ಲಿ ಸೇರುವ ತುಂಗಭದ್ರಾ ಯೋಜನೆಗೆ ಸಂಬಂಧಪಟ್ಟ ಸಮ್ಮೇಳನದ ಬಗ್ಗೆ ಪೂರ್ವಭಾವೀ ಚರ್ಚೆ ನಡೆಸಲಾಯಿತು. [illegible]

## ಭಾರತವು ಸಾಮ್ರಾಜ್ಯ ಷಾಹಿ ರಾಜ್ಯವೆಂದು ಫಾತಿಮಾ ಜಿನ್ನಾ

ಭಾರತದ ದಾಸ್ಯದಿಂದ ಕಾಶ್ಮೀರದ ೪೦ ಲಕ್ಷ ಜನರನ್ನು ವಿಮೋಚನೆ ಮಾಡುವವರೆಗೆ ಪಾಕಿಸ್ತಾನದ ಸ್ವಾತಂತ್ರ್ಯವು ಪೂರ್ಣವಾಗುವುದಿಲ್ಲವೆಂದೂ ಭಾರತವು ಹೊಸ ಸಾಮ್ರಾಜ್ಯಶಾಹಿ ರಾಜ್ಯವಾಗುತ್ತಿರುವುದೆಂದೂ [illegible] ಅಲಿ ಜಿನ್ನಾರವರು ಹೇಳಿದರೆಂದೂ [illegible] ಜಿನ್ನಾರವರ [illegible] ಮಾತನಾಡುತ್ತಾ ತಿಳಿಸಿದರು

### ಕಿಲ್ಲೆ ಮೊಹಲ್ಲಾ ಶ್ರೀ ವಿದ್ಯಾಗಣಪತಿ ಮಂಡಲಿ

ಮೇಲ್ಕಂಡ ಮಂಡಲಿಯ ಆಶ್ರಯದಲ್ಲಿ ಕಳೆದ ಶನಿವಾರ ಸಂಜೆ ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಸಿದ್ಧಲಿಂಗಸ್ವಾಮಿಗಳವರ ಗುರುಕುಲಾಶ್ರಮದಲ್ಲಿ ಶ್ರೀ ಗಣೇಶೋತ್ಸವವನ್ನು ಆಚರಿಸಲಾಯಿತು [illegible] ಶ್ರೀ ಚಂದ್ರಶೇಖರ ಭಟ್ಟರು [illegible] ರಾಷ್ಟ್ರೀಯ ಕಲ್ಪನೆಯನ್ನುಂಟು ಮಾಡಲು ಗಣೇಶೋತ್ಸವವನ್ನು ಆಗತ್ಯವಾಗಿ ಆಚರಿಸಬೇಕೆಂದರು [illegible] ಸಂಗೀತ [illegible] ವಾದ್ಯಗಳೊಡನೆ ನಡೆಯಿತು

[illegible] ಶ್ರೀ ಜನಾರ್ದನ [illegible] ಜೊತೆ ಗಣೇಶನನ್ನು ವಿಸರ್ಜಿಸಲಾಯಿತು

### ಕುಶಲ ಕಲಾ ಸಂಘ

[illegible] ಕಲಾ ಸಂಘದ ಆಶ್ರಯದಲ್ಲಿ [illegible] ಶ್ರೀ ಬಿ ಬಸವೇಗೌಡರವರು [illegible] ನಟರಾಜ [illegible] ಚುನಾಯಿತರಾಗಿರುತ್ತಾರೆ

### ಪ್ರಥಮ ದರ್ಜೆ ಕಾಲೇಜು ಪ್ರಕೃತಿ ವಿಜ್ಞಾನ ಸಂಘ

ಮೇಲ್ಕಂಡ ಸಂಘದ ಆರಂಭ ಸಮಾರಂಭವನ್ನು ಮೈಸೂರು ಸಂಸ್ಥಾನದ ಗೃಹ ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರು ನಾಳಿದ್ದು ಸಂಜೆ [illegible] ಗಂಟೆಗೆ ಕಾಲೇಜು ಆವರಣದಲ್ಲಿ ನೆರವೇರಿಸುವರು [illegible] ಸಂಘಕ್ಕೆ ಶ್ರೀ ಎಂ ಆರ್ ರಂಗಸ್ವಾಮಿ [illegible] ಸದಸ್ಯರಾಗಿ ಆರಿಸಲ್ಪಟ್ಟಿರುವರು

## ತರುಣನ ತಪ್ಪಿಗಾಗಿ ಅವನ ಸಹೋದರಿಯ ಮಾನ ಭಂಗ

ಪಾಕಿಸ್ತಾನದ ಸಿಂಧ್ ಪ್ರಾಂತದ ಹಳ್ಳಿಯೊಂದರ ಜಮೀನುದಾರನ ವಿಚಿತ್ರ [illegible] ನ್ಯಾಯ ನಿರ್ವಹಣೆ ಮಾಡಿದ ಸಂಗತಿ ವರದಿಯಾಗಿದೆ ಯೌವನ ತಪ್ಪಿನ ತನ್ನ ಪತ್ನಿಯು ಅನ್ಯ ಮಾರ್ಗದಲ್ಲಿ ಪ್ರವೇಶಿಸಲು ಕಾರಣನಾದ ಒಬ್ಬ ಯುವಕನ ಮೇಲೆ ಆಕೆಯ [illegible] ಗಂಡನು ನ್ಯಾಯಾಸ್ಥಾನಕ್ಕೆ ದೂರು ಕೊಂಡೊಯ್ದಿದ್ದ ಆಗ್ಗೆ ಜಮೀನುದಾರನ [illegible] ತನ್ನ [illegible] ಹೇಳಿಕೊಳ್ಳಲಾಗಿ ಜಮೀನ [illegible] ಯುವಕನ ತಪ್ಪಿಗಾಗಿ [illegible] ಸಹೋದರಿ [illegible] ಬಾಲಕಿಗೆ ಶಿಕ್ಷೆ ವಿಧಿಸಿದನೆಂದೂ, ಜಮೀನ ದಾರನ [illegible] ಜನ ಅಟ್ಟಹಾಸ [illegible] ಬಾಲಕಿಯ ಮೇಲೆ ಒಬ್ಬರಾದ ಮೇಲೊಬ್ಬರು ಅತ್ಯಾಚಾರ ನಡೆಸಿದರೆಂದೂ ವರದಿಯಾಗಿದೆ ಅವನ ಮನೆಯನ್ನೂ ಸಹ ಲೂಟಿ ಮಾಡಲಾಯಿತೆಂದು ಹೇಳಲಾಗಿದೆ

### ಉಪನ್ಯಾಸ

ರಾಜಧಾನಿಯ [illegible] ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿದ್ಯಾಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ [illegible] ಗಂಟೆಗೆ ಮಹಾರಾಜಾ ಕಾಲೇಜಿನ ಸಂಸ್ಕೃತ ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ [illegible] ವಿಷಯವಾಗಿ ಉಪನ್ಯಾಸ ಮಾಡುವರು

### ಗಣಪತಿ ಉತ್ಸವ

[illegible] ರಾಜಧಾನಿಯ [illegible] ಶ್ರೀ ವಿದ್ಯಾಗಣಪತಿ ಮಂದಿರದಲ್ಲಿ [illegible] ಗಂಟೆಗೆ ಗಣಪತಿ ಉತ್ಸವದ ಅಂಗವಾಗಿ ಕಾರ್ಯಕ್ರಮ [illegible] ಶ್ರೀ [illegible] ವೆಂಕಟರಮಣಯ್ಯನವರು [illegible] ರಿಂದ ಸಂಗೀತ ಕಛೇರಿಯೂ ಇದೆ

### ಆಕಾಶವಾಣಿ ನಿಲಯ ಕಾರ್ಯಕ್ರಮ

[illegible] ಸಂಗೀತ [illegible] ಕಾರ್ಯಕ್ರಮಗಳು [illegible] ಕನ್ನಡ ನಾಟಕ [illegible]

### ಕಸ್ತೂರಿ ಬಾ ವಿದ್ಯಾ ಮಂದಿರ

[illegible] ಮೈಸೂರು

ಸಂಚಾಲಕಿ ಶ್ರೀಮತಿ ಪದ್ಮಮಣಿ ಶ್ರೀನಿವಾಸ್, ಎಂ ಎ

ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂದರ್ಭಕ್ಕೆ ಪ್ರೈವೇಟ್ ಸ್ಕೂಲಿನ ವೀ ಕಾಲೇಜು ವರೆಗಿನ ವಿದ್ಯಾರ್ಥಿನಿಯರಿಗೆ ಪಾಠಗಳನ್ನು ಹೇಳಿ ಕೊಡಲಾಗುತ್ತದೆ ಪ್ರೈವೇಟ್ ಮತ್ತು ಮಿಡ್ಲ್ ಸ್ಕೂಲ್ ವರೆಗಿನ ವಿದ್ಯಾರ್ಥಿಗಳಿಗೂ ಪ್ರವೇಶ ಉಂಟು

[illegible]

### ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 63 ಮಾದರಿ ಮನೆ ಕಾಂಪೌಂಡು, ನಲ್ಲಿ, ಲೀಕ್ ಲೈಟಿಂಗ್ ಇವೆ “ಸಾಧ್ವಿ” ಪತ್ರಿಕಾ ಲಯದಲ್ಲಿ ವಿಚಾರಿಸಿರಿ

## ಮಗಳಿಗೆ ಇಸ್ಲಾಂ ಧರ್ಮ ಬೋಧನೆ ಕೊಡಲು ರೀಟಾ ನಿರಾಕರಣೆ

ಆಗಾಖಾನರ ಮಗ ಅಲಿಖಾನರ ಮಗಳು ಯಾಸ್ಮಿನ್ನಳ ಹೆಸರಿನಲ್ಲಿ ೧೦ ಲಕ್ಷ ಡಾಲರಿನ ನಿಧಿಯೊಂದನ್ನು ಏರ್ಪಡಿಸುವುದಕ್ಕೆ ತಾಯಿ ರೀಟಾ ಹೇವರ್ತ್ ರವರು ತಿರಸ್ಕರಿಸಿರುತ್ತಾಳೆ ಆವರಿಬ್ಬರೂ ಕಳೆದ ಜನವರಿಯಲ್ಲಿ ದಾಂಪತ್ಯ ವಿಚ್ಛೇದನವಾಯಿತು ಆಕೆಯು ತನ್ನ ಮಗಳಿಗೆ ಇಸ್ಲಾಂ ಧರ್ಮ ಬೋಧನೆಯ ವ್ಯವಸ್ಥೆಯನ್ನು ಏರ್ಪಡಿಸುವುದನ್ನು ಒಪ್ಪಲಿಲ್ಲ

### ಚಾಮುಂಡಿಪುರದ ವಿನಾಯಕ ಮಂಡಲಿ

ಮೇಲ್ಕಂಡ ಮಂಡಲಿಯ ಆಶ್ರಯದಲ್ಲಿ ಕಳೆದ ಶನಿವಾರ ಭಾನುವಾರಗಳಲ್ಲಿ ಗಣೇಶೋತ್ಸವವು ಸಂಭ್ರಮದಿಂದ ಆಚರಿಸಲ್ಪಟ್ಟಿತು [illegible] ನೇ ತಾರೀಖು ಮಾಜಿ ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೈಸೂರು ಸಂಸ್ಥಾನ ಪ್ರಚಾರಕರಾದ ಮಾನ್ಯ ಶ್ರೀ [illegible] ಸೂರ್ಯನಾರಾಯಣರಾಯರು ಧಾರ್ಮಿಕ ಜಾಗೃತಿಯೇ ಭಾರತೀಯ ರಾಷ್ಟ್ರದ ಐಕ್ಯದ ಅಡಿಗಲ್ಲು ಎಂಬ ವಿಷಯವಾಗಿ ಭಾಷಣ ಮಾಡಿದರು [illegible] ಶ್ರೀ [illegible] ರವರಿಂದ ಸಂಗೀತವೂ ನಡೆಯಿತು [illegible] ನೇ ತಾರೀಖು [illegible] ಗೀತಾ ಸ್ಪರ್ಧೆಯೂ ಮತ್ತು ಸಾಯಂಕಾಲ ಕ್ರೀಡಾ ಸ್ಪರ್ಧೆ ಹಾಗೂ ಗೀತಾ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿನಿಯೋಗವೂ ಶ್ರೀಮತಿ ಲೀಲಾ ಮತ್ತು ಪಾರ್ಟಿಯವರಿಂದ ಸಂಗೀತ ಶ್ರೀ ಎ ಎನ್ ನಾರಾಯಣಪ್ಪನವರಿಂದ ನಾಗಸ್ವರವೂ ಏರ್ಪಟ್ಟಿದ್ದವು ಸಂಜೆ ಚಾಮುಂಡಿಪುರದ ಬಡಾವಣೆಯಲ್ಲಿ [illegible] ನಾಯಕರ ಚಿತ್ರಗಳಿಂದ ಅಲಂಕೃತವಾದ ರಥದಲ್ಲಿ ಗಣೇಶನ ಮೆರವಣಿಗೆಯೂ ಮತ್ತು [illegible] ವಿಸರ್ಜನೆಯೂ ಮತ್ತು ಪ್ರಸಾದ ವಿನಿಯೋಗವೂ ಇದ್ದವು

### ಮನೆ ಬಿಕರಿಗಿದೆ

Building bearing No 1598-1599 in Chamal Mutt Street (Kabir Road)

ಕಬೀರ್ ರಸ್ತೆಯಲ್ಲಿ 1598 1599 ನೇ ನಂಬರು ಮನೆ ಬಿಕರಿಗಿದೆ ಇಷ್ಟವುಳ್ಳವರು ಕೆಳಗೆ ಕಂಡವರಲ್ಲಿ ವಿಚಾರಿಸಬಹುದು

ಪಿ ಎನ್ ಸಂಗಪ್ಪ,
ಸಂತೇಪೇಟೆ ಮೈಸೂರು

## ನ್ಯಾಯಸ್ಥಾನದಲ್ಲಿ ಸಾಕ್ಷಿ ಮೇಲೆ ಪಾದರಕ್ಷೆ ಪ್ರಯೋಗ

ಬೆಂಗಳೂರು ನಗರ ನ್ಯಾಯಸ್ಥಾನದಲ್ಲಿ ಶ್ರೀರಾಮಪುರದ ನಾಗಪ್ಪ ಎಂಬುವನ ವಿರುದ್ಧ ಮೊಕದ್ದಮೆ ನಡೆಯುತ್ತಿದ್ದು, ಶ್ರೀ ನಾರಾಯಣಸ್ವಾಮಿ ಎಂಬ ಪ್ರಾಸಿಕ್ಯೂಷನ್ ಸಾಕ್ಷಿ ಕಳೆದ [illegible] ನೇ ತಾ॥ ಉತ್ತರ ಹೇಳುತ್ತಿದ್ದಾಗ ಕೋರ್ಟ್ ಎಕ್ಸಿಬಿಟ್ಟಾಗಿ ಇಡಲ್ಪಟ್ಟಿದ್ದ ವಸ್ತುಗಳ ಪೈಕಿ ಒಂದು ಜೊತೆ ಚಪ್ಪಲಿಯನ್ನು ಆರೋಪಿ ತೆಗೆದುಕೊಂಡು ಸಾಕ್ಷಿಯ ಮೇಲೆ ಎಸೆದನೆಂದೂ, ಸಾಕ್ಷಿಯ ಬಲಗೆನ್ನೆಗೆ ಪೆಟ್ಟು ಬಿದ್ದು ಗಾಯವಾಯಿತೆಂದೂ ವರದಿಯಾಗಿದೆ ಪೊಲೀಸರು ಆಪಾದಿತನ ಮೇಲೆ ಮತ್ತೊಂದು ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ

## ವಿಶ್ವ ಸಂಸ್ಥೆ ಕಲಹಕ್ಕೆ ಉತ್ತರ ಕೊರಿಯಾ ತಿರಸ್ಕಾರ

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸುವ ರಾಷ್ಟ್ರಗಳ ಸಂಬಂಧವಾಗಿ ವಿಶ್ವ ಸಂಸ್ಥೆಯ ಸಾಧಾರಣ ಸಭೆಯು ಅಂಗೀಕರಿಸಿದ ನಿರ್ಣಯವನ್ನು ಉತ್ತರ ಕೊರಿಯಾದ ಕಮ್ಯೂನಿಸ್ಟ್ ಚೀಣದ [illegible] ತಿರಸ್ಕರಿಸಿರುವುದಾಗಿ ವರದಿಯಾಗಿದೆ.

### ಮೈಸೂರು ಪೇಟೆ ಧಾರಣೆ

[illegible]


## ಒಲಂಪಿಯಾ ಟಾಕೀಸ್

ಅಮೋಘ ಪ್ರಾರಂಭ 17 9-53 ರಿಂದ

ಪ್ರತಿ ದಿನ ಮೂರು ಆಟಗಳು

ಪ್ರೀತಿಯೊಂದು ಸಂಸಾರವೂ ತಪ್ಪಿದರೆ ಸೋಲು [illegible] ಕಥೆ

ಅಲ್ಹಾದ್ ಚಿತ್ರ ರವರ ಹಿಂದಿ ಚಿತ್ರ ನಮ್ಮೆ ಮುನ್ನೆ

[illegible] ರಾಜಕಪೂರ್ [illegible]

[illegible] ನೌಷದ್ [illegible] ಸಂಗೀತ [illegible]

3 ರೀಲನ್ನೂ ಪ್ರದರ್ಶಿಸಲಾಗುತ್ತ


Edited, Printed and Published by A R Nagarajan at Sadhvi Press D Subbiah Road, Mysore


## ಪದ್ಮಾ ಟ್ಯುಟೋರಿಯಲ್ ಕಾಲೇಜು, ಮೈಸೂರು

(ತರಗತಿಗಳು ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯುತ್ತವೆ)

[illegible]

ವಿವರಗಳಿಗೆ [illegible] ಸ್ಟಾಂಪಿನೊಂದಿಗೆ ಬರೆಯಿರಿ

ದತ್ತ ನಿವಾಸ 170/3 ರಾಮಾನುಜ ಅಗ್ರಹಾರ ಮೈಸೂರು

## MYSORE DASARA EXHIBITION 1953.

(8th October to 25th October 1953 inclusive)

As the Dasara festivities are as usual celebrated during this year also including the Dasara Raj Sabha and Royal Procession, the Exhibition will be very largely attended by visitors from all over the country.

| | |
|---|---|
| Last date for receipt of applications for stalls has been extended upto | 20th Sept 53 |
| for receipt of exhibits for Fine Arts & Crafts Section | 1st Oct 53 |
| for receipt of exhibits for Ladies Section (From Ladies & Ladies Institutions only) | 1st Oct 53 |
| Last date for receipt of tenders for | |
| 1) Supply of Washington lights, | 21st Sept. 53 |
| 2) Bicycle stand contract | |
| 3) Supply of Rosettes | |
| 4) Loud Speaker arrangements | " |
| 5 Monopoly rights for poster publicity in the Exhibition premises | |
| 6) Opening Restaurants in the Exhibition Main Buildings and Jeevaraj Ankitta grounds | " |
| 7) Opening Milk Bars in the Main Exhibition Buildings and Jeevaraj Ankitta | " |

For any other particulars please apply to —
THE SECRETARY
Mysore Dasara Exhibition Committee, Mysore

Mysore
13 9 1953

K VIJAYAM,
Secretary
*Exhibition Committee*

ಟೆಲಿಫೋನ್ ನಂ 792

|| ವಂದೇ ಮಾತರಂ ||

ಬಿಡಿ ಪ್ರತಿಗೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE . THURSDAY 17-9-1953 ಮೈಸೂರು : ಗುರುವಾರ ೧೭-೯-೧೯೫೩ [ ಸಂಚಿಕೆ ೪೫

# ವಿಶ್ವಶಾಂತಿ ಸಾಧನೆಗೆ ವಿಜಯಲಕ್ಷ್ಮಿಯವರ ಘೋಷಣೆ

## ಡಿಸೆಂಬರ್ ೭ನೇ ತಾ|| ಪೌರಸಭೆಯ ಚುನಾವಣೆ

ಮೈಸೂರು ೧೭

ಬಹು ದಿನ ಜನವರಿಯಿಂದ ಪುನರ್‌ರಚಿತವಾಗಲಿರುವ ನಗರದ ಪೌರಸಭೆಗೆ ಚುನಾವಣೆಯು ಡಿಸೆಂಬರ್ ೭ನೇ ತಾ|| ನಡೆಯುವುದೆಂದು ಗೊತ್ತಾಗಿದೆ

### ಚಂದ್ರಪ್ಪ ಮತ್ತು ಚಂದ್ರಸಿಂಗ್‌ರವರ ಸಂಗೀತ ಕಛೇರಿ

ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ಭಗಿನೀ ಸೇವಾ ಸಮಾಜದಲ್ಲಿ ಶ್ರೀ ಮಹಾಗಣಪತಿ ಮಂಗಳಾರತಿಯ ಸಂಬಂಧವಾಗಿ ನಾಳೆ ಸಂಜೆ ೬ ಘಂಟೆಗೆ ಪಲ್ಲವಿ ಸಂಗೀತ ವಿದ್ವಾಂಸರಾದ ತಿರುಪತಿ ವಿಶ್ವಲ ನರಸಿಹ್ಮಲು ನಾಯ್ಡುರವರ ಶಿಷ್ಯಂದಿರಾದ, ಬೆಂಗಳೂರಿನ, ವಿದ್ವಾಂಸರು ಎಸ್ ಚಂದ್ರಪ್ಪ ಮತ್ತು ಆರ್ ಚಂದ್ರಸಿಂಗ್‌ರವರ ಜಂಟಿ ಗೀತೆ ಸಂಗೀತ ಕಛೇರಿಯು ನಡೆಯುವುದು ಪಿಟೀಲ್ ವಿ|| ಎಚ್ ವಿ ರಾಮರಾಯರ, ಪಿಟೀಲ್ ವಿ|| ವೆಂಕಟೇಶ ದೇವರ ರವರ ಮೃದಂಗ ವಿ|| ನಾಗಭೂಷಣಾಚಾರ್ಯರ ಘೋಲಕ್ ವಿ|| ಕೋಕಿಲೆ ಕೇಶವಗಿರಿದಾಸರ ಖಂಜರಿ ಮತ್ತು ವಿ|| ಬಾಬು ಕೃಷ್ಣರವರ ಮೊರ್ಚಿಂಗ್ ಪಕ್ಕವಾದ್ಯಗಳೂ ಏರ್ಪಾಡಾಗಿವೆ

### ಹರಿಕಥೆ

ಕಾಂತೀವತಿ ಲಾಯದಲ್ಲಿರುವ ಶ್ರೀ ವಿದ್ಯಾಗಣಪತಿ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ನಡಿಂಪುರಂ ಶ್ರೀನಿವಾಸರಂಗಾಚಾರ್ಯರಿಂದ ಭೂ ಕೈಲಾಸ ಎಂಬ ಹರಿಕಥೆಯು ಅರುಣ ಪತ್ರಿಕೆಯ ಸಂಪಾದಕರಾದ ಶ್ರೀ ಎಚ್ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಏರ್ಪಾಡಾಗಿದೆ ಶ್ರೀಮತಿ ಪದ್ಮಮ್ಮನವರು ಸೇವಾರ್ಥ ನಡೆಸುವರು

## ಕೊಠಡಿಯಲ್ಲಿ ಹೊಗೆ ಸುತ್ತಿ ೩ ಜನ ವಿದ್ಯಾರ್ಥಿಗಳ ಮರಣ

ಕೃಷ್ಣರಾಜನಗರಕ್ಕೆ ವ್ಯಾಸಂಗಕ್ಕಾಗಿ ಬಂದಿದ್ದ ಹೊಸಹಳ್ಳಿಯ ನಾಲ್ವರು ವಿದ್ಯಾರ್ಥಿಗಳು ಒಟ್ಟಿಗೆ ಕೊಠಡಿಯೊಂದರಲ್ಲಿದ್ದು, ಕಳೆದ ೧೦ನೆ ತಾ|| ಶಿವರಾತ್ರಿ ಸೋಮವಾರ ರಾತ್ರಿ ಊಟದನಂತರ ಇದ್ದಿಲು ಒಲೆಯನ್ನು ಹತ್ತಿಸಿ ಮಲಗಿಕೊಂಡರೆಂದೂ, ಹೊಗೆಯು ಕೊಠಡಿಯೊಳಗೆ ಸುತ್ತಿಕೊಂಡು, ಒಳಗೆ ಗಾಳಿಯ ಪ್ರವೇಶಕ್ಕೆ ಅವಕಾಶವಿಲ್ಲದುದರಿಂದ ಬೆಳಗಾಗುವುದರೊಳಗೆ ಇಬ್ಬರು ಬಾಲಕರು ಮೃತಪಟ್ಟರೆಂದೂ ವರದಿಯಾಗಿದೆ ಇನ್ನಿಬ್ಬರ ಸ್ಥಿತಿ ಚಿಂತಾಜನಕವಾಗಿ ಒಬ್ಬನು ೧೩ನೇ ತಾ|| ಆಸ್ಪತ್ರೆಯಲ್ಲಿ ಮೃತಪಟ್ಟನೆಂದೂ, ಮತ್ತೊಬ್ಬನಿಗೆ ಚಿಕಿತ್ಸೆ ನಡೆಯುತ್ತಿರುವುದಾಗಿಯೂ ಗೊತ್ತಾಗಿದೆ

## ಅಲಹಾಬಾದು ವಿದ್ಯಾರ್ಥಿಗಳ ಚಳುವಳಿ ಮುಕ್ತಾಯ

ಅಲಹಾಬಾದು ವಿಶ್ವವಿದ್ಯಾಲಯ ಸಂಘದ ಸದಸ್ಯತ್ವದ ಸಂಬಂಧವಾಗಿ ಅಧಿಕಾರ ವರ್ಗದವರಿಗೂ ವಿದ್ಯಾರ್ಥಿಗಳಿಗೂ ಉಂಟಾಗಿದ್ದ ಬಿಕ್ಕಟ್ಟು, ಉಭಯರಿಗೂ ಒಪ್ಪಂದವಾದುದರಿಂದ ಮುಕ್ತಾಯವಾಗುತ್ತದೆ ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರು ಅಂಗೀಕರಿಸಿದ ಹೊಸ ವ್ಯವಸ್ಥೆಯನ್ನು ವಿದ್ಯಾರ್ಥಿಗಳ ಪ್ರತಿನಿಧಿಗಳೂ ಅಂಗೀಕರಿಸಿರುವರು ಆದರಿಂದ ಮೂರು ಜನ ವಿದ್ಯಾರ್ಥಿಗಳು ಮಾಡುತ್ತಿದ್ದ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಲಾಗಿದೆ

ವಿಶ್ವಸಂಸ್ಥೆ ಅಧ್ಯಕ್ಷಿಣಿ ವಿಜಯಲಕ್ಷ್ಮಿ ಪಂಡಿತರು

ಸಂಸ್ಥೆ ಅಧ್ಯಕ್ಷತೆಗೆ ಅವರೇ ಪ್ರಥಮ ಮಹಿಳೆ,
ಅಲ್ಲದೆ ಭಾರತಕ್ಕೆ ಈ ಗೌರವವು ಸಿಕ್ಕಿರುವುದು ಇದೇ ಮೊದಲು

## ಎಂ. ಆರ್. ಶ್ರೀನಿವಾಸಮೂರ್ತಿಯವರ ನಿಧನ

ಸ್ವಂ ಸು ಫೋ] ಬೆಂಗಳೂರು ೧೭

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಸುಪ್ರಸಿದ್ಧ ಸಾಹಿತಿಗಳೂ ಮತ್ತು ಅನೇಕ ಗ್ರಂಥಗಳ ಕರ್ತೃಗಳೂ ಆದ ಶ್ರೀ ಎಂ ಆರ್ ಶ್ರೀನಿವಾಸಮೂರ್ತಿಯವರು ನೆನ್ನೆ ರಾತ್ರಿ ೧೦ ೩೦ ಗಂಟೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೊನ್ನೆ ರಾತ್ರಿ ಊಟವಾದ ನಂತರ ಇದ್ದಕ್ಕಿದ್ದಂತೆ ಅವರಿಗೆ ವಾಂತಿ ಮತ್ತು ಭೇದಿ ಆರಂಭವಾಗಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದರು ಅವರಿಗೆ ೬೦ ವರ್ಷ ವಯಸ್ಸಾಗಿದ್ದಿತು

○ ಸಚಿವರುಗಳಾದ ಶ್ರೀ ಕಡಿದಾಳ್ ಮಂಜಪ್ಪ ಮತ್ತು ಎ ಜಿ ರಾಮಚಂದ್ರರಾಯರು ಈ ದಿನ ದೆಹಲಿಗೆ ಪ್ರಯಾಣ ಬೆಳೆಸಿದರು ತುಂಗಭದ್ರಾ ಯೋಜನೆ ಮತ್ತು ವಾರ್ತಾ ಸರ್ವೀಸ್ ಸಭೆಗಳಲ್ಲಿ ಅವರು ಭಾಗವಹಿಸುವರು

○ ಶ್ರೀ ಕೆ ಹನುಮಂತಯ್ಯನವರು ನಾಳೆ ಹಿಂದಿರುಗುವರು

○ ಭದ್ರಾವತಿಯಲ್ಲಿ ಎರಡು ಕಾಡು ಹಂದಿಗಳು ಎರಡು ಚಿಕ್ಕ ನಾಯಿ ಮರಿಗಳನ್ನು ನುಂಗಿದುದಾಗಿ ವರದಿಯಾಗಿದೆ ಜನರು ಮರಿಗಳನ್ನು ಬದುಕಿಸಲು ಪ್ರಯತ್ನಪಟ್ಟರೂ ಸಫಲವಾಗಲಿಲ್ಲ

## ಬಳ್ಳಾರಿಯ ಆಂಧ್ರರಿಂದ ಕಪ್ಪು ಬಾವುಟದ ಪ್ರದರ್ಶನ

ಕಳೆದ ಭಾನುವಾರ ಬಳ್ಳಾರಿಯ ಕಾಂಟನ್‌ಮೆಂಟ್ ಮೈದಾನದಲ್ಲಿ ಅಲ್ಲಿನ ಆಂಧ್ರರು ಸಭೆ ಸೇರಿ, ಬರುವ ತಿಂಗಳು ಒಂದನೇ ತಾರೀಕು ಮೈಸೂರಿನೊಡನೆ ಬಳ್ಳಾರಿಯ ಸೇರ್ಪಡೆಗಾಗಿ ನಡೆಯುವ ಸಮಾರಂಭದಲ್ಲಿ ಭಾಗವಹಿಸಬಾರದೆಂದು ಹಲವರು ಭಾಷಣ ಮಾಡಿದರು ಆ ದಿನ ಬಳ್ಳಾರಿಯ ಎಲ್ಲ ಆಂಧ್ರರೂ ಹರತಾಳವನ್ನಾಚರಿಸಿ, ಮನೆಗಳ ಮೇಲೆ ಕಪ್ಪು ಬಾವುಟಗಳನ್ನು ಹಾರಿಸಿ, ಕಪ್ಪು ಬಿಲ್ಲೆಗಳನ್ನು ಧರಿಸಬೇಕೆಂದೂ ನಿರ್ಣಯ ಮಾಡಲಾಯಿತು

### ಚಿಲ್ಲರೆ ವ್ಯಾಪಾರದ ವ್ಯಾಜ್ಯದಲ್ಲಿ ದವಡೆ ಹಲ್ಲು ಮುರಿದುದಕ್ಕಾಗಿ ಬಂಧನ

ಬೆಂಗಳೂರು ಕುಣಿಗಲ್ ಪೇಟೆಯಲ್ಲಿ ಮಿಠಾಯಿ ಅಂಗಡಿಯೊಂದರ ನೌಕರ ವೆಂಕಟೇಶ್ ಎಂಬುವನು ಕಳೆದ ೧೧ ನೇ ತಾ|| ಅಲ್ಲಿಗೆ ಬಂದ ದಾಸಿ ಎಂಬ ಗಿರಾಕಿಗೆ ಒಂದು ಆಣೆಗೆ ೧ ಜಿಲೇಬಿಯನ್ನು ಕೊಟ್ಟಾಗ ಎರಡನ್ನು ಕೊಡುವಂತೆ ಗಿರಾಕಿಯು ಕೇಳಲಾಗಿ, ಅಂಗಡಿಯವನು ಕೊಡದಿದ್ದುದಕ್ಕೆ ರೇಗಿ ಗಿರಾಕಿಯು ಜಿಲೇಬಿ ತಟ್ಟೆಯನ್ನು ಒದೆದು ಕೆಲಸಗಾರನ ಮುಖದ ಮೇಲೆ ಅಪ್ಪಳಿಸಿದನೆಂದೂ, ಪರಿಣಾಮವಾಗಿ ನೌಕರನ ದವಡೆ ಹಲ್ಲು ಮುರಿಯಿತೆಂದೂ ವರದಿಯಾಗಿದೆ ದಾಸಿಯ ಮೇಲೆ ...

## ಕೊರಿಯಾ ಶಾಂತಿಯನ್ನು ವಿಶ್ವಸಂಸ್ಥೆ ಭದ್ರಗೊಳಿಸಬೇಕು

### ವಿಜಯಲಕ್ಷ್ಮಿ ಪಂಡಿತರ ಭಾಷಣ

ವಿಶ್ವಸಂಸ್ಥೆಯ ಇತಿಹಾಸದಲ್ಲೇ ಇದೇ ಮೊದಲಾಗಿ, ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಟ್ಟಿರುವ ಮಹಿಳೆಯಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಭಾಷಣ ಮಾಡಿ, ಕೊರಿಯಾ ಯುದ್ಧವು ಈಗ ನಿಂತುಹೋಗಿ ಆ ಮೂಲಕ ವಿಶ್ವದ ಶಾಂತಿಯನ್ನು ಸ್ಥಾಪಿಸಲು ಮಾರ್ಗವು ಸುಗಮವಾಗಿರುವುದೆಂದೂ ಶಾಂತಿಗೆ ಭಂಗವಾದರೆ ಅದನ್ನು ಪುನಃ ಸ್ಥಾಪಿಸುವುದಲ್ಲದೆ, ಶಾಂತಿ ಸ್ಥಾಪನೆ ಬಗ್ಗೆ ಬರುವ ಆತಂಕಗಳನ್ನು ನಿವಾರಿಸುವುದು ಸಂಸ್ಥೆಯ ಕರ್ತವ್ಯವೆಂದೂ ಹೇಳಿದರು ಪ್ರಪಂಚದ ಭದ್ರತೆಗೆ ಧಕ್ಕೆ ತರುವ ಅಪಾಯಗಳನ್ನು ಎದುರಿಸಬೇಕೆಂದೂ, ಹೋರಾಟಗಳು ಪುನಃ ಆರಂಭಿಸಲು ಸಾಧಕವಾಗುವ ಕ್ರಮಗಳನ್ನೂ ಕೈಗೊಳ್ಳಬಾರದೆಂದೂ ತಿಳಿಸಿದರು ಪ್ರಜಾ ಕೋಟಿಯನ್ನು ನಾಶಪಡಿಸುವ ಶಸ್ತ್ರಗಳನ್ನು ಕೊನೆಗಾಣಿಸಬೇಕೆಂದು ಅವರು ಸೂಚಿಸಿದರು

## ಕೆಂಪು ಚೀಣಾ ಸದಸ್ಯತ್ವದ ಪರಿಶೀಲನೆ ಮುಂದೆ ಹೋಯಿತು

ವಿಶ್ವಸಂಸ್ಥೆಯಲ್ಲಿ ಕಮ್ಯೂನಿಸ್ಟ್ ಚೀಣಾಕ್ಕೆ ಪ್ರಾತಿನಿಧ್ಯ ಕೊಡುವ ಪ್ರಶ್ನೆಯ ಪರಿಶೀಲನೆಯನ್ನು ೧ ವರ್ಷ ಮುಂದೆ ಹಾಕಬೇಕೆಂದು ಮೊನ್ನೆ ವಿಶ್ವಸಂಸ್ಥೆ ಸಭೆಯಲ್ಲಿ ಆದ ನಿರ್ಣಯಕ್ಕೆ ೪೪-೧೦ ಓಟುಗಳು ದೊರೆತು ಅದು ಮಂಜೂರಾಯಿತು ರಾಷ್ಟ್ರೀಯ ಚೀಣಾದ ಬದಲು ಕಮ್ಯೂನಿಸ್ಟ್ ಚೀಣಾಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ರಷ್ಯದ ಪ್ರತಿನಿಧಿ ವಿಷಿನ್ಸ್ಕಿಯವರು ಸೂಚಿಸಿದಾಗ ಅಮೆರಿಕದ ಪ್ರತಿನಿಧಿ ಮೇಲ್ಕಂಡ ನಿರ್ಣಯವನ್ನು ಮಂಡಿಸಿದರು

## ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಚುನಾವಣೆ

ಮೈಸೂರು ೧೬

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲಿಯ ಚುನಾವಣಾ ಕಾರ್ಯಕ್ರಮದ ವೇಳಾ ಪಟ್ಟಿಯು ಈ ಕೆಳಗೆ ಕಂಡಂತಿರುವುದಾಗಿ ಚುನಾವಣಾಧಿಕಾರಿಗಳಾಗಿರುವ ಶ್ರೀ ಅಗರಂ ರಂಗಯ್ಯನವರು ಪ್ರಕಟಿಸಿದ್ದಾರೆ :

೧) ಮತದಾರರ ಪಟ್ಟಿ ಪ್ರಕಟಣೆ ೨೦-೯-೫೩ ೨) ನಾಮಪತ್ರದ ಸ್ವೀಕಾರ ತಾ|| ೨೪ ಮತ್ತು ೨೫ ಬೆಳಗ್ಗೆ ೧೦ ಗಂಟೆಯಿಂದ ೧ ಗಂಟೆ, ನಾಮಪತ್ರಗಳ ಪ್ರಕಟಣೆ ತಾ|| ೨೫ ಮಧ್ಯಾಹ್ನ ೩ ಗಂಟೆ; ೪) ನಾಮಪತ್ರಗಳ ಪರಿಶೀಲನೆ ೨೬ ನೇ ತಾ|| ಬೆಳಗ್ಗೆ ೧೦ ಗಂಟೆ ೫) ಉಮೇದುವಾರರ ಅಭ್ಯರ್ಥಿ ಪಟ್ಟಿ ಪ್ರಕಟಣೆ ೨೬ ನೇ ತಾ|| ಮಧ್ಯಾಹ್ನ ೩ ಗಂಟೆ, ೬ ಉಮೇದುವಾರಿಕೆ ವಾಪಸು ೨೭ ನೇ ತಾ|| ಸಂಜೆ ೫ ಗಂಟೆಗೆ ಉಮೇದುವಾರರ ಅಭ್ಯರ್ಥಿ ಪಟ್ಟಿ ಪ್ರಕಟಣೆ ೨೭ ನೇ ತಾ|| ಸಂಜೆ ೬ ಗಂಟೆಗೆ, ೮ ಚುನಾವಣೆ ೩೦ ನೇ ತಾ|| ಬೆಳಗ್ಗೆ ೯ ರಿಂದ ೧ ಗಂಟೆ ಮತ್ತು ಮಧ್ಯಾಹ್ನ ೨ ರಿಂದ ೫ ಗಂಟೆ, ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ ೩೦ ನೇ ತಾ|| ಸಂಜೆ ೫ ೩೦ ಉಮೇದುವಾರರಾಗುವವರು ಸಕ್ರಿಯ ಸದಸ್ಯರಾಗಿರಬೇಕು ಹಾಗೂ ರುಸುಮು ...

## ಬ್ರಿಟಿಷ್ ರಾಣಿಯ ನೆಂಟನೊಡನೆ ಪತ್ನಿಯ ದಾಂಪತ್ಯ ವಿಚ್ಛೇದನ

ಬ್ರಿಟಿಷ್ ರಾಣಿ ಎಲಿಜಬೆತ್ತರ ತಂದೆ ಜಾರ್ಜರ ದಾಯಾದಿಯ ವರಾದ ಮಾರ್ಕ್ವಿಸ್ ಆಫ್ ಮಿಲ್‌ಫರ್ಡ್‌ಹೇವನ್ [illegible] ದಾಂಪತ್ಯ [illegible] ನ್ಯೂಯಾರ್ಕ್ ನ್ಯಾಯಾಲಯದಲ್ಲಿ ವ್ಯವಹಾರ ಹೂಡಲಿರುವಳು [illegible] ಮಾರ್ಕ್ವಿಸ್ಸರು [illegible] ಪೌಂಡು ಜೀವನಾಂಶ [illegible] ೨೦೦ ಪೌಂಡು ಪ್ರಯಾಣದ ವೆಚ್ಚ ಇವುಗಳನ್ನು ಮಾರ್ಕ್ವಿಸ್ಸರು ತಮಗೆ ಕೊಡಬೇಕೆಂದು ಅವಳು ಕೇಳಲಿರುವಳು [illegible] ೧೦,೦೦೦ ಪೌಂಡು [illegible] ಪೌಂಡುಗಳನ್ನು ಮಾತ್ರ ಅವರ [illegible] ಎರಡನೆ ವಿವಾಹ [illegible] ದಾಂಪತ್ಯ ವಿಚ್ಛೇದನವಾಗಿದ್ದಿತು

## ಇಂಗ್ಲೆಂಡಿನಲ್ಲಿ ಗಾಂಧಿ-ಜಿನ್ನಾ ಸ್ಮಾರಕ ಬೋರ್ಡುಗಳು

[illegible]

## ಓಡುತ್ತಿದ್ದ ರೈಲಿನಲ್ಲಿ ದರೋಡೆ

[illegible]

## ನಾಗನಗೌಡರು ಮೈಸೂರು ಸಚಿವರಾಗಲೆಂದು ರಾಜಾಜಿ

ಬಳ್ಳಾರಿ ಜಿಲ್ಲೆ ಹೊಸಪೇಟೆಯ [illegible] ನಾಗನಗೌಡರನ್ನ ಮೈಸೂರಿನ ಮಂತ್ರಿಯಾಗಿ [illegible] ಮುಖ್ಯಮಂತ್ರಿ [illegible] ತಿಳಿಸಿದ್ದಾರೆ.

[illegible] ನಾಳೆ ಕಾರ್ಯಕ್ರಮ

[illegible]

## ಪ್ರಾದೇಶಿಕ ಭಾಷೆಯಲ್ಲಿ ಸರ್ಕಾರಿ ವ್ಯವಹಾರ

[illegible] ಪೂರ್ವ ಗೋದಾವರಿ ಜಿಲ್ಲೆಗಳಲ್ಲಿ ಸರ್ಕಾರದ [illegible] ಪ್ರಾದೇಶಿಕ ಭಾಷೆಯಲ್ಲಿ [illegible] ಸರ್ಕಾರದವರು ಆಜ್ಞೆ ಮಾಡಿರುವರು. ಈ ವ್ಯವಸ್ಥೆಯು [illegible] ಪ್ರಯೋಗಾರ್ಥವಾಗಿ ನಡೆಯುವುದು

## ಬಳ್ಳಾರಿ ಕನ್ಯಾದಾನದ ಬಗ್ಗೆ ಹನುಮಂತಯ್ಯನವರ ಟೀಕೆ

[illegible] ಕನ್ಯಾದಾನವೆಂದು [illegible] ಮೈಸೂರ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು [illegible] ಶ್ರೀ [illegible] ತಿಳಿಸಿರುವರು

## ರೀಟಾ ಹೇವರ್ತಳಿಗೆ ಕೊಲೆಯ ಬೆದರಿಕೆ

[illegible]

## ಕೇಸು ಕೆಟ್ಟ ಬಗ್ಗೆ ಕಕ್ಷಿಗಾರನಿಂದ ವಕೀಲರಿಗೆ ಏಟು

[illegible]

## ಮೈಸೂರು ಪೇಟೆ ಧಾರಣೆ

| | | |
|---|---|---|
| ಪದಾರ್ಥ | ರೂ ಇಂದ | ರೂ ಗೆ |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |

## ಮನೆ ಬಾಡಿಗೆಗಿದೆ

Building bearing No 1598-1599 Chamundi Mutt Street (Kabir Road)

ಕಬೀರ್ ರಸ್ತೆಯಲ್ಲಿ 1598 1599 ನೇ ನಂಬರ [illegible] ಬಾಡಿಗೆಗಿದೆ [illegible]

ಪಿ ಎನ್ [illegible]

[illegible] ಮೈಸೂರು

Edited, Printed and Published by A R Nagarajan at Sadhvi Press D Subbiah Road Mysore

## ಗಣಪತಿ ಉತ್ಸವ

ಮೈಸೂರು [illegible]

ಶ್ರೀ ವಿದ್ಯಾ ಗಣಪತಿ ಉತ್ಸವದ ಅಂಗವಾಗಿ ರಾಜಧಾನಿಯ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ [illegible] ಕಾಲೇಜಿನ [illegible] ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಎಂ. ಯಾಮುನಾಚಾರ್ಯ [illegible] ಸನಾತನ ಧರ್ಮ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

[illegible] ರಸ್ತೆಯಲ್ಲಿರುವ [illegible] ಛತ್ರದಲ್ಲಿರುವ [illegible] ಗಣಪತಿ ಮಂಗಳಾರತಿಯನ್ನು [illegible] ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯ ಅಧ್ಯಕ್ಷರಾದ ಶ್ರೀ ಎ. ಎಲ್. ಸುಂದರನಾರಾಯಣ ಶ್ರೇಷ್ಠಿಯವರು ಅಧ್ಯಕ್ಷತೆ ವಹಿಸುವರು. ವರ್ತಮಾನ್ ಪತ್ರಿಕೆ ಸಂಪಾದಕ ಶ್ರೀ ಎಂ. [illegible] ಭಾಷಣ ಮಾಡುವರು [illegible] ಇದೆ

[illegible] ಅಗ್ರಹಾರದಲ್ಲಿರುವ ಶ್ರೀ ಯಾಜ್ಞವಲ್ಕ್ಯ ಸೇವಾ ಸಂಘದಲ್ಲಿ ಗಣಪತಿ ಪೂಜೆಯನ್ನು [illegible] ನೆರವೇರಿಸಿದರು

[illegible]

## ವ್ಯವಸಾಯ ಶಿಕ್ಷಣಕ್ಕೆ ಮಹಿಳೆಯರು

ಪಶ್ಚಿಮ ಬಂಗಾಳದಲ್ಲಿ ಸ್ಥಾಪಿತವಾಗಿರುವ ವ್ಯವಸಾಯ ಕಾಲೇಜಿನಲ್ಲಿ ಶಿಕ್ಷಣ ಪಡೆಯಲು ಇಂಟರ್‌ಮೀಡಿಯೆಟ್ ಸೈನ್ಸ್ ವಿಭಾಗದಲ್ಲಿ ಉತ್ತೀರ್ಣರಾದ ಹಲವು ಮಹಿಳೆಯರು [illegible] ಎರಡು ವರ್ಷಗಳ ಕೆಳಗೆ ಆರಂಭವಾದ [illegible] ಕಾಲೇಜಿಗೆ ಮಹಿಳೆಯರನ್ನು ಸೇರಿಸಿಕೊಳ್ಳುತ್ತಿರುವುದು [illegible] ಮೊದಲೆಂದು ಹೇಳಲಾಗಿದೆ

## ದೊಡ್ಡಬಳ್ಳಾಪುರದ ಕಲಾ ಸಾಹಿತ್ಯ ಬಳಗ

[illegible] ಬಳಗದ ಕಛೇರಿಯಲ್ಲಿ ಶ್ರೀ [illegible] ಗಣಪತಿಯ ಮಂಗಳಾರತಿಯನ್ನು [illegible] ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಭಾಗವಹಿಸಿ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ ಎಲ್ಲಾ ಮಹನೀಯರಿಗೂ ಕಾರ್ಯದರ್ಶಿಯವರು ವಂದನೆಯನ್ನು ಸಲ್ಲಿಸಿರುತ್ತಾರೆ


## ಒಲಂಪಿಯಾ ಟಾಕೀಸ

ಅಪೂರ್ವ ಪ್ರಾರಂಭ 17-9-53 ರಿಂದ

ಪ್ರತಿ ದಿನ ಎರಡು ಆಟಗಳು

[illegible]

ಅಲೆಗ್ಸಾಂಡರ್ ಚಿತ್ರ **ನನ್ನ ಮುನ್ನೆ**

[illegible]

## ಪ್ರಭಾ

ಅಪೂರ್ವ ಪ್ರಾರಂಭ 18 9 53 ರಿಂದ

ದಿನವಹಿ ಮೂರು ಪ್ರದರ್ಶನಗಳು

ದೇವಕಿ ಬೋಸ್‌ರವರ ತಮಿಳು ಚಿತ್ರ

★ **ರತ್ನದೀಪಂ** ★

[illegible]

ಕೊನೆಯ ದಿನ [illegible]

Morning Shows From 18 9 53 For 3 Days

Laurel and Hardy in SAPS AT SEA and JUNGLE HERO (Double Programme)

## ರಾಜಕಮಲ್, ಮೈಸೂರು

18-9-53 ರಿಂದ ಅಪೂರ್ವ ಪ್ರಾರಂಭ

[illegible] ಚಿತ್ರ

**ಆತ್ಮೈ ಮಗನ್**

ಭೂಮಿಕೆ [illegible] ಬಿ ಎಸ್ ಸರೋಜಾ, [illegible] ಬಿ ಆರ್ ಪಂತುಲು

## ಜೀವವಿಮೆ

ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ, ಮಗುವಿನ ಅವಶ್ಯಕತೆಯೂ ಆಗಿದೆ . .

**ಮೈಸೂರು ಸರ್ಕಾರದ ವಿಮಾ ಇಲಾಖೆ**

ಅನೇಕ ವರುಷಗಳ ನಂಬಿಕೆ ಸೇವೆ ಸಹಕಾರ ಸಲ್ಲಿಸಿದೆ

ಪೂರ್ಣ ಭದ್ರತೆ—[illegible] ಧಾರಕ

ರಲ್ಲಿ ಅತ್ಯಧಿಕ ಬೋನಸ್ಸು [illegible]

ಕಾಲವಾದ ಪ್ರೀಮಿಯಂ ದರ ಸುಲಭ ಸಾಲ

ಸೌಕರ್ಯ, ತಡವಿಲ್ಲದ ವಿಮಾ ಬಟವಾಡೆ

ಪಾವತಿ ಪ್ರಜೆಗಳ ಹಾನಿಯಲ್ಲಿ ವಿಮೆ

ಮಾಡಲು ಇಂದೇ ನಿರ್ಧರಿಸಿರಿ

★

**ಮೈಸೂರು ಸರ್ಕಾರದ ವಿಮಾ ಇಲಾಖೆ, ಬೆಂಗಳೂರು**

## ವಿದ್ಯಾ ಟ್ಯುಟೋರಿಯಲ್ ಕಾಲೇಜು, ಮೈಸೂರು

(ತರಗತಿಗಳು ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯುತ್ತವೆ)

[illegible] ಎಸ್ ಎಲ್ ಸಿ, ಮುಖ್ಯವಾಗಿ ಮೆಟ್ರಿಕ್ ಇಂಟರ್‌ಮೀಡಿಯೆಟ್, [illegible] ಬಿ ಮತ್ತು ಎಲ್ [illegible] ಪರೀಕ್ಷೆಗಳಿಗೆ [illegible]

[illegible] "ಪ್ರಯೋಗ ಶಾಲೆಯು"

[illegible]

[illegible] 0 2 0 [illegible]

ದತ್ತ ನಿವಾಸ 1701 ರಮಾವಿಲಾಸ ಅಗ್ರಹಾರ, ಮೈಸೂರು

ಟೆಲಿಫೋನ್ ನಂ 792

|| ವಂದೇ ಮಾತರಂ ||

ಸಂಪುಟದ ಪತ್ರಿಕೆ 3 ಕಾಸು


ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ವರಗಳಿಗೆ ಬರೆಯಿರಿ


# ಸಾಧ್ವಿ

ಚಂದಾ ದರ

ವಿಜಂಚೆಯವರುಗಳಿಗೆ ವರ್ಷಕ್ಕೆ ತಿಂಗಳಿಗೆ ಎಂಟಾಣೆ

ಊರಿನ ವರ್ತಕರಿಗೆ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE FRIDAY 18-9-1953 • ಮೈಸೂರು : ಶುಕ್ರವಾರ ೧೮-೯-೧೯೫೩ [ ಸಂಚಿಕೆ ೭೬


# ಬರ್ಮದಿಂದ ಚೀಣರ ವಾಪಸಿಗಾಗಿ ನಡೆದ ಸಂಧಾನ ವಿಫಲ

## ಎಂ ಆರ್. ಶ್ರೀನಿವಾಸ ಮೂರ್ತಿಯವರಿಗೆ ಶ್ರದ್ಧಾಂಜಲಿ

ಮೈಸೂರು ೧೮

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಪ್ರಸಿದ್ಧ ವಿದ್ವಾಂಸರೂ ಗ್ರಂಥಕರ್ತರೂ, ವಾಗ್ಮಿಗಳೂ ಆದ ಶ್ರೀ ಎಂ ಆರ್ ಶ್ರೀನಿವಾಸ ಮೂರ್ತಿಯವರ ನಿಧನದ ಸಂಬಂಧವಾಗಿ ಇಲ್ಲಿನ ಮಹಾರಾಜಾ ಕಾಲೇಜಿನಲ್ಲಿ [illegible] ಸಭೆಯನ್ನು ನೆನ್ನೆ ಏರ್ಪಡಿಸಲಾಗಿತ್ತು. ಶ್ರೀ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಡಾ ಲ ನರಸಿಂಹಾಚಾರ್ಯರು ದಿವಂಗತರ ಗುಣಗಾನ ಮಾಡಿ ಅವರ ಮರಣದಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆ [illegible] ನಷ್ಟವಾಗಿರುವುದೆಂದು ಹೇಳಿದರು. ಸಂತಾಪ ಸೂಚಕ ನಿರ್ಣಯವೊಂದನ್ನು ಸಭಿಕರು ಎದ್ದುನಿಂತು ಅಂಗೀಕರಿಸಿದರು.

### ಸಂತಾಪ ಸೂಚಕ ಸಭೆ

ದಿವಂಗತ ಶ್ರೀ ಎಂ ಆರ್ ಶ್ರೀನಿವಾಸ ಮೂರ್ತಿಯವರ ಆತ್ಮಕ್ಕೆ ಶಾಂತಿಯನ್ನು ಕೋರಿ ರಾಜಧಾನಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಸಂತಾಪ ಸೂಚಕ ಸಭೆಯನ್ನು ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಏರ್ಪಡಿಸಲಾಗಿದೆ. ಪುರಾತತ್ವಶಾಸ್ತ್ರಜ್ಞರಾದ ಶ್ರೀ [illegible] ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀ ಕೆ ವಿ ರಾಘವಾಚಾರ್ ಮೊದಲಾದವರು ಮಾತನಾಡುವರು.

## ಚೀಣಕ್ಕೆ ರಷ್ಯದ ದೀರ್ಘಾವಧಿ ಸಹಾಯ

ಚೀಣದಲ್ಲಿ ೯೧ ಹೊಸ ಉದ್ಯಮಗಳನ್ನು ಕಟ್ಟಲು ಶೀಘ್ರದಲ್ಲೇ ನೆರವು ನೀಡುವ ಸಂಬಂಧವಾಗಿ ರಷ್ಯವು ಆ ದೇಶಕ್ಕೆ ದೀರ್ಘಾವಧಿಯ ಸಹಾಯವನ್ನು ಒದಗಿಸುವ ಬಗ್ಗೆ ಎರಡು ದೇಶಗಳಿಗೂ ಒಪ್ಪಂದವಾಗಿರುವುದಾಗಿ ವರದಿಯಾಗಿದೆ.

## ಮಣಿಲಾಲ್ ಗಾಂಧಿ ಜುಲ್ಮಾನೆ ಕೊಡದೆ ಜೈಲಿಗೆ ಹೋದರು

ದಕ್ಷಿಣ ಆಫ್ರಿಕದ ವರ್ಣಭೇದ ಶಾಸನವನ್ನು ಮೀರಿದ ಮಹಾತ್ಮಾ ಗಾಂಧಿಯವರ ಪುತ್ರ ಮಣಿಲಾಲ್ ಗಾಂಧಿಯವರು, ಕಳೆದ ವರ್ಷ [illegible] ಎಂಬ ಪ್ರದೇಶವನ್ನು ಪ್ರವೇಶಿಸಿದ್ದಕ್ಕಾಗಿ ಜುಲ್ಮಾನೆ ತಪ್ಪಿದರೆ [illegible] ದಿನಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಈ ತೀರ್ಪಿನ ಬಗ್ಗೆ ಅವರು ಅಪೀಲು ಹೋಗಿ ಅದನ್ನು ಸ್ಥಿರಗೊಳಿಸಿದ್ದು ಈಗ ಅದನ್ನು ಪಾವತಿಸದೆ ನೆನ್ನೆ ಪೋಲೀಸರ ವಶವಾಗಿ ಶಿಕ್ಷೆಯನ್ನು ಸ್ವೀಕರಿಸಿದರು.

## [illegible] ದ್ವೀಪದಲ್ಲಿ ಭೂಕಂಪದಿಂದ ಊರಿನೊಳಕ್ಕೆ ಸಮುದ್ರದ ನೀರು

ಪೆಸಿಫಿಕ್ ಸಾಗರದಲ್ಲಿರುವ ಫಿಜಿ ದ್ವೀಪಗಳ ರಾಜಧಾನಿ ಸೂವಾದಲ್ಲಿ ಭೂಕಂಪವಾಗಿ ಸುವಾ ಎಂಬ ನಗರಕ್ಕೆ ಸಮುದ್ರದ ನೀರು ನುಗ್ಗಿ ಬಂದಿತೆಂದು ವರದಿಯಾಗಿದೆ. ದ್ವೀಪವೇ ಪೂರ್ತಿ ಮುಳುಗಿ ಹೋಗುವ [illegible] ವರದಿಯಾಗಿದೆ. ಸುವಾ ನಗರದ ಅನೇಕ ಕಟ್ಟಡಗಳಿಗೆ ನಷ್ಟ ಸಂಭವಿಸಿದೆ. ಭಾರತೀಯ ಹುಡುಗಿಯೂ ಸೇರಿ ಆರು ಜನ ಮರಣ ಹೊಂದಿರುವರು.

## ಎಂ. ಪಿ ಸಿ ಸಿ ಅಧಿವೇಶನ

ಬೆಂಗಳೂರು ೧೮

ಅಕ್ಟೋಬರ್ ೩ ಮತ್ತು ೪ನೇ ತಾ|| ಕೋಲಾರ ಜಿಲ್ಲೆ [illegible] ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧಿವೇಶನವು ನಡೆಯುವುದು. ಅದೇ ಸಮಯ ಸಂಸ್ಥಾನದ [illegible] ನೆಯ ತಾ|| ನಡೆಯುವುದು. ಶ್ರೀ ಎಸ್ ನಿಜಲಿಂಗಪ್ಪನವರು [illegible] ಶ್ರೀ [illegible] ವೀರಣ್ಣಗೌಡರ ಅಧ್ಯಕ್ಷತೆ ವಹಿಸುವರು. [illegible] ಶ್ರೀ ಕೆ [illegible] ರೆಡ್ಡಿಯವರು [illegible] ಉದ್ಘಾಟನ ಭಾಷಣ ಮಾಡುವರು. [illegible] ಶ್ರೀ [illegible] ಸನ್ಮಾನಿಸುವರು. ಶ್ರೀ [illegible] ಅಧ್ಯಕ್ಷತೆ ವಹಿಸುವರು. ಶ್ರೀ [illegible] ಪ್ಪನವರು ಭಾಷಣ ಮಾಡುವರು. [illegible] ಕಾಂಗ್ರೆಸ್ [illegible] ಕೋರಲಾಗಿದೆ.

### ಜವಾನಿಗೆ ಇ ವಿ ಗಣಪತಿ ಅಯ್ಯರ್

ಸಂಸ್ಥಾನದ [illegible] ಡೈರೆಕ್ಟರ್ ಶ್ರೀ ಇ ವಿ ಗಣಪತಿ ಅಯ್ಯರ್‌ರವರು ಶೀಘ್ರದಲ್ಲೇ ಜವಾನಿಗೆ ತೆರಳಿ ಅಲ್ಲಿನ ದೊಡ್ಡ ಮತ್ತು ಚಿಕ್ಕ ಕೈಗಾರಿಕೆಗಳಲ್ಲಿ ನಡೆಯುತ್ತಿರುವ ಕೆಲಸದ ವಿಧಾನವನ್ನು ಪರಿಶೀಲಿಸುವರೆಂದು ತಿಳಿದುಬಂದಿದೆ.

## ಖಾಸಿಂ ರಜ್ವಿಗೆ ಸಕತ್ ಕಾಯಿಲೆ

ಹೈದರಾಬಾದಿನ ಮಾಜಿ ರಜಾಕಾರರ ನಾಯಕ ಸೈಯದ್ ಖಾಸಿಂ ರಜ್ವಿಯು ಜೈಲಿನಲ್ಲಿ ತೀವ್ರವಾಗಿ ರೋಗಪೀಡಿತನಾಗಿರುವನೆಂದು ಪಾಕಿಸ್ತಾನದ ಪತ್ರಿಕೆಗಳು ತಿಳಿಸಿ [illegible] ವರದಿಯಾಗಿದೆ. ಅವನ ತೂಕವು [illegible] ಪೌಂಡಿಗೆ ಇಳಿದಿರುವುದೆಂದೂ, ಅವನಿಗೆ [illegible] ಬರುತ್ತಿರುವುದೆಂದೂ ಹೇಳಲಾಗಿದೆ.

## ಮುದರಾಸು ಸರ್ಕಾರೀ ಇಲಾಖೆಗಳಲ್ಲಿ ಖೋತಾ

ಬರುವ ತಿಂಗಳ ಆದಿಯಿಂದ ಆಂಧ್ರ ಪ್ರಾಂತ್ಯದ ರಚನೆಯಾಗಲಿರುವುದರಿಂದ ಮುದರಾಸಿನ [illegible] ಇಲಾಖೆಗಳನ್ನು ಕಡಿಮೆ ಮಾಡಲು ಅಲ್ಲಿನ ಸರ್ಕಾರದವರು ಪರ್ಯಾಲೋಚಿಸುತ್ತಿರುವರು. ಹಲವು ಇಲಾಖೆಗಳನ್ನು ಒಟ್ಟುಗೂಡಿಸಲಾಗುವುದೆಂದು ಹೇಳಲಾಗಿದೆ.

### ಹರಿಕಥೆ

ಮೈಸೂರು ಮಂಡಿ ಪೋಲೀಸ್ ಸ್ಟೇಷನ್ ಬಳಿ ಇರುವ ಚಟ್ನಿ [illegible] ರಾಮೋತ್ಸವ ಪ್ರಸಂಗದ ಭಕ್ತರಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಅಲಸಾಪುರ ಮಾಯಿಗೌಡರಿಂದ ವಾಗ್ದೇವಿನ್ನೂ, ಶ್ರೀ ಹಿರಣ್ಯಯ್ಯನವರ ವ್ಯಾಖ್ಯಾನವೂ, ೯ ಘಂಟೆಗೆ ಶ್ರೀ ಪಿ ರಾಮಸ್ವಾಮಿ ನಾಯ್ಡುರವರಿಂದ '[illegible] ವಿಜಯ' ಎಂಬ ಹರಿಕಥೆಯೂ, ಕ್ಷತ್ರಿಯ [illegible] ಸಂಘದ ಆಶ್ರಯದಲ್ಲಿ ಏರ್ಪಾಡಾಗಿದೆ. ವೇ|| ಬ್ರ|| ಶ್ರೀ ಅರುಣಾಚಲಶ್ಯಾಮ ಭಾರತೀಯವರು ಅಧ್ಯಕ್ಷತೆ ವಹಿಸುವರು.

## ರಾಷ್ಟ್ರೀಯ ಚೀಣರ ವಾಪಸಿಗಾಗಿ ನಡೆಯುತ್ತಿದ್ದ ಸಂಧಾನ ವಿಫಲ

ಬರ್ಮದ ರಾಷ್ಟ್ರೀಯ ಚೀಣಾ ಸೈನ್ಯವನ್ನು ಫಾರ್ಮೋಸಕ್ಕೆ ಹಿಂತಿರುಗಿ ಕಳುಹಿಸುವ [illegible] ದಿನಗಳಿಂದ ನಡೆಯುತ್ತಿದ್ದ ಸಂಧಾನ ವಿಫಲವಾಗಿರುವುದಾಗಿ ಬರ್ಮಾ ಸರ್ಕಾರದ ವರ್ತುಲಗಳಲ್ಲಿ [illegible] ಸೂಚಿಸಿರುವರೆಂದು ಹೇಳಲಾಗಿದೆ.

## ದೊಡ್ಡ ರಾಷ್ಟ್ರಗಳ ಚದುರಂಗದ ಆಟಕ್ಕೆ ಕಾಶ್ಮೀರ ಸಿಗಕೂಡದು

ಪಾರ್ಲಿಮೆಂಟಿನಲ್ಲಿ ನೆಹರೂರವರ ಸ್ಪಷ್ಟನುಡಿ

ದೆಹಲಿ ೧೮

ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ಭಾರತ [illegible] ಕಾಶ್ಮೀರ [illegible] ವಿಷಯವನ್ನು ಪ್ರಸ್ತಾಪಿಸಿದರು. ಕಾಶ್ಮೀರದ ವಿಷಯವಾಗಿ [illegible] ಮಾತನಾಡಿ ಪಾಕಿಸ್ತಾನದ ಪ್ರಧಾನಿಯೊಡನೆ ನಡೆದ ಮಾತುಕತೆಯ ವಿಷಯ ತಿಳಿಸಿ, [illegible] ಬಿಡಿಸಬೇಕಾದರೆ ಅದನ್ನು ದೊಡ್ಡ ರಾಷ್ಟ್ರಗಳ ರಾಜಕೀಯ ಚದುರಂಗದ ಆಟದಿಂದ ತಪ್ಪಿಸಬೇಕು ಎಂಬ ಅವಶ್ಯಕತೆಯೆಂದು ಸ್ಪಷ್ಟಪಡಿಸಿದರು. [illegible] ನಿಂದ ಕಾಶ್ಮೀರದಲ್ಲಿ ಜನಮತ ಗಣನೆಗಾಗಿ ಹೊರಗಿನ ರಾಷ್ಟ್ರಗಳಿಗೆ ಸೇರಿದ ಒಬ್ಬ ಅಧಿಕಾರಿಯನ್ನು ನೇಮಿಸುವುದು ತಪ್ಪಲ್ಲವೆಂದೂ ನೆಹರೂರವರು ತಿಳಿಸಿ, ಯೂರೋಪಿನ ಅಥವಾ ಏಷ್ಯದ ಒಂದು ಚಿಕ್ಕ ರಾಷ್ಟ್ರದಿಂದ ಈ ಕೆಲಸಕ್ಕೆ ಅಧಿಕಾರಿಯನ್ನು ಆರಿಸಿಕೊಳ್ಳಬಹುದೆಂದು ಅಭಿಪ್ರಾಯ ಪಟ್ಟರು. ನೆಹರೂರವರ ಸಲಹೆಗೆ ಸಭಿಕರು ಒಪ್ಪಿಗೆಯನ್ನು ಕೊಟ್ಟರು.

## ಭಾರತ ಮತ್ತು ರಷ್ಯಾಗಳಿಗೆ ವ್ಯಾಪಾರಿ ಒಪ್ಪಂದ

ಭಾರತ ಮತ್ತು ರಷ್ಯಾಗಳಿಗೆ ವ್ಯಾಪಾರಿ ಒಪ್ಪಂದಕ್ಕಾಗಿ ಮಾತುಕತೆಗಳು ನಡೆಯುತ್ತಿರುವುದಾಗಿ ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿದ್ದಾರೆ.

### ಅಮೆರಿಕದಲ್ಲಿ ಎ ಸಿ ದೇವೇಗೌಡರ ಪ್ರವಾಸ

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ ಸಿ ದೇವೇಗೌಡರವರು ತಿಂಗಳ ಕಾಲ ಅಮೆರಿಕದಲ್ಲಿ ಪ್ರವಾಸ ಮಾಡಿ ಅಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಪರಿಶೀಲಿಸುವರೆಂದು ಗೊತ್ತಾಗಿದೆ. ಅವರು ನಾಳಿದ್ದು ಬೊಂಬಾಯಿನಿಂದ ಪ್ರಯಾಣ ಬೆಳೆಸುವರು. [illegible] ನೇ ತಾ|| ಅಮೆರಿಕಕ್ಕೆ ವಿಮಾನದಲ್ಲಿ ತೆರಳುವರು. ಅವರಿಗೆ ಫುಲ್‌ಬ್ರೈಟ್ ನಿಧಿಯಿಂದ ಪ್ರಯಾಣ ವೆಚ್ಚ ಸಹಾಯವು ದೊರೆತಿದೆ.

### ಲಾರಿ ಅಪಘಾತ

ಮೊನ್ನೆ ಪೆರಿಯಾಪಟ್ಟಣದ ಕಡೆಯಿಂದ ಜಲ್ಲಿಯನ್ನು ತುಂಬಿಕೊಂಡ ಬರುತ್ತಿದ್ದ ಲಾರಿಯೊಂದು ಹುಣಸೂರು ಬಳಿ ಕಾಲುವೆಗೆ ನುಗ್ಗಿ ಅಪಘಾತಕ್ಕೀಡಾಯಿತು. ಕಂಡಕ್ಟರಿಗೆ ಸ್ವಲ್ಪ ಗಾಯವಾಗಿದೆ ಮತ್ತು ಲಾರಿಯು ಎಂಜಿನ್ನಿಗೆ ಧಕ್ಕೆ ಆಗಿರುತ್ತದೆ.

## ಸಕಲೇಶಪುರ ನ್ಯಾಯ್ಯದಲ್ಲಿ ಕೈಕಾಲು, ಹೆಬ್ಬೆರಳು ಕತ್ತರಿಸಿದ ಪ್ರಸಂಗ

### ಹಾಸನದ ಹೊಲದಲ್ಲಿ ನಡೆದ ಘಟನೆ

ಹಾಸನ ತಾಲ್ಲೂಕಿನ ಕಟ್ಟಾಯದ ಹೋಬಳಿ [illegible] ಹಳ್ಳಿಯಲ್ಲಿ ಮೊನ್ನೆ ಸಬ್ ಇನ್‌ಸ್ಪೆಕ್ಟರ್ ಕಛೇರಿಯ ಗುಮಾಸ್ತೆ ಮಂಜೇಗೌಡ ಎಂಬುವನನ್ನು ಅದೇ ಹಳ್ಳಿ ಮತ್ತು ಕಾಳೇನಹಳ್ಳಿ, [illegible] ಅಂಕಪುರ ಗ್ರಾಮಗಳ ರೈತರು ಹಿಡಿದು ಕೊಲೆ ಮಾಡಲೆತ್ನಿಸಿದ್ದರೆಂದೂ, ಮಂಜೇಗೌಡರನ್ನು ಅಜ್ಞಾನಾವಸ್ಥೆಯಲ್ಲಿ ಹಾಸನದ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ. ಗುಮಾಸ್ತರು ಹಲವರು ರೈತರೊಡನೆ ಆಲೂಗೆಡ್ಡೆ ಫಸಲನ್ನು ಕಯ್ಯುವುದಕ್ಕಾಗಿ ತಮ್ಮ ಹಳ್ಳಿಗೆ ಹೊಗಲು [illegible] ಹಳ್ಳಿಗೆ ಹಿಂದಿದ್ದರೆಂದೂ ರೈತರು ಅವರ ತೋಟದಿಂದ ಟ್ರೈರುಗಳನ್ನು ಕುಯ್ದು, ಇಂಜಿನ್ನನ್ನು ಕೆಡಿಸಿ, ಮಂಜೇಗೌಡನ್ನು ಅಟ್ಟಿಸಿಕೊಂಡುಹೋದರೆಂದೂ, ಅವರು ತಮ್ಮ ಮನೆಗೆ ಓಡಿಹೋಗಿ, ಬಾಗಿಲನ್ನು ಹಾಕಿಕೊಳ್ಳಲು, ಮನೆ ಮೇಲೆ ರೈತರು ಹತ್ತಿ ಹೆಂಚು ತೆಗೆದು ಒಳಗಿಳಿದು ಅವರನ್ನು ಹೊಲಕ್ಕೆ ಎಳೆದುಕೊಂಡುಹೋಗಿ, ಬಲಗಾಲು, ಎಡಕೋಲು ಮತ್ತು ಬಲಗೈ ಹೆಬ್ಬೆರಳನ್ನು ಕತ್ತರಿಸಿ ಹಾಕಿ, ಅವರನ್ನು ಅಜ್ಞಾನಾವಸ್ಥೆಯಲ್ಲಿ ಬಿಟ್ಟು ಹೋದರೆಂದೂ ತಿಳಿದುಬಂದಿದೆ. ಹಾಸನದ ಪೋಲೀಸರು ತನಿಖೆ ನಡೆಸುತ್ತಿರುವರು.

## ವಿಮಾನಗಳಿಗಿಂತಲೂ ಹೆಚ್ಚು ಸಂಖ್ಯೆಯ ಅಣುಬಾಂಬು

ಅಮೆರಿಕದಲ್ಲಿರುವ ವಿಮಾನಗಳು ಮತ್ತು ಆಟಂಬಾಂಬಿನ ಸಂಖ್ಯೆಗಿಂತಲೂ ಹೆಚ್ಚಾಗಿ ಅಣುಬಾಂಬುಗಳಿರುವುದಾಗಿ ಅಲ್ಲಿನ ಪ್ರಮುಖ ಸೆನೆಟರಾದ ರಿಚರ್ಡ್ ರಸ್ಸೆಲ್‌ರವರು ಹೇಳಿರುತ್ತಾರೆ. ಕಳೆದ ವರ್ಷ ಮಾಜಿ ಅಧ್ಯಕ್ಷ ಟ್ರೂಮನ್ನರು ಅಮೆರಿಕದ ವಿಮಾನ ಬಲದಲ್ಲೇ [illegible] ಕ್ಕಿಂತಲೂ ಹೆಚ್ಚು ವಿಮಾನಗಳಿರುವುದಾಗಿ ನುಡಿದಿದ್ದರು.

### ಹೋಟೇಲು ಕೆಲಸಗಾರರ ಪ್ರತಿಭಟನಾ ಮೆರವಣಿಗೆ

ರಾಜಧಾನಿಯ ಹೊಸ ಹೋಟೇಲು ಕೆಲಸಗಾರರ ಸಂಘದ ಸುಮಾರು ನೂರು ಸದಸ್ಯರು ನೆನ್ನೆ ನಗರದ ನಾನಾ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. [illegible] ಹೋಟೇಲಿನಲ್ಲಿ ಕೆಲಸಕ್ಕಿದ್ದ ಒಬ್ಬ ನೌಕರನನ್ನು ಕಾರಣವಿಲ್ಲದೆ ತೆಗೆದು ಹಾಕಿದ ಬಗ್ಗೆ ಪ್ರತಿಭಟನೆಯನ್ನು ಸೂಚಿಸಿದರು. ಮೆರವಣಿಗೆಯನಂತರ ಸಭೆಯೊಂದು ನಡೆದು, ಹೋಟೇಲು ಮಾಲೀಕರ ವರ್ತನೆಯನ್ನು ಟೀಕಿಸಲಾಯಿತಲ್ಲದೆ, ಸದರಿ ಕೆಲಸಗಾರನನ್ನು ಪುನಃ ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಲಾಯಿತು.

### ಉಪನ್ಯಾಸ

ರಾಜಧಾನಿಯ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿದ್ಯಾ ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಅಂಗುಲೀಯಕ ಪ್ರೇಷಣಂ ಎಂಬ ವಿಷಯವಾಗಿ ಪಾಠಶಾಲೆಯ ವಿವಾಮಾಂಸ ವಿಭಾಗದ ಪ್ರಧಾನೋಪಾಧ್ಯಾಯರಾದ ಬ್ರ|| ಶ್ರೀ ಸಿ ರಾಮಚಂದ್ರಾಚಾರ್ಯರು ಉಪನ್ಯಾಸ ಮಾಡುವರು.

## ಪ್ರಕಾಶಂರವರಿಗೆ ಕೇಂದ್ರ ಪ್ರಜಾ ಪಕ್ಷದಿಂದ ಅನುಮತಿ ಇಲ್ಲ

ಆಂಧ್ರ ಪ್ರಾಂತದಲ್ಲಿ ಸುಭದ್ರವಾದ ಮಂತ್ರಿ ಮಂಡಲವನ್ನು ರಚಿಸುವ ಸಂಬಂಧವಾಗಿ ಆಂಧ್ರದ ಪ್ರಜಾ ಸಮಾಜವಾದಿ ಪಕ್ಷದವರು ಪ್ರಕಾಶಂರವರಿಗೆ ಸರ್ಕಾರ ರಚಿಸಲು ಪಕ್ಷದ ಪ್ರಾರ್ಥನೆಯ ಬಗ್ಗೆ ಅವರನ್ನು ಬಿಟ್ಟುಕೊಡಲು ನಿರ್ಧರಿಸಿರುವುದನ್ನು ಈಗ ಪಕ್ಷದ ಕೇಂದ್ರ ಸಮಿತಿಯವರು ಪರಿಶೀಲಿಸಿ ಪ್ರಕಾಶಂರವರನ್ನು [illegible] ಮಾಡುವ ವಿಷಯವನ್ನು [illegible] ಪರಿಶೀಲಿಸುವುದಾಗಿ ಪಕ್ಷದವರು [illegible] ತೆಗೆದುಕೊಳ್ಳಲು [illegible] ಆದರೆ ಆಂಧ್ರದಲ್ಲಿ ಸರ್ಕಾರ ರಚನೆ ಬಗ್ಗೆ [illegible]ರವನ್ನು ಕೈಗೊಳ್ಳಲು ಪ್ರಕಾಶಂರವರಿಗೆ ಸಂಪೂರ್ಣ ಅಧಿಕಾರವನ್ನು ಕೇಂದ್ರ ಪಕ್ಷದವರು ಕೊಟ್ಟಿರುವರು

ಎಳೆಯುವ ರಿಕ್ಷಾ ಬದಲು ಸೈಕಲ್ ರಿಕ್ಷಾ

[illegible]

### ಸಂಸ್ಕೃತ ಮಹಾ ಪಾಠಶಾಲೆ ವಿದ್ಯಾರ್ಥಿ ಸಂಘ

[illegible]

## ಹೆಂಗಸನ್ನು ಹೊಡೆದ ಪೈಲ್ವಾನನ ದಸ್ತಗಿರಿ

ದಾವಣಗೆರೆಯಲ್ಲಿ [illegible]

### ವಯಸ್ಕರ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಪಾತ್ರ

[illegible]

### ಪ್ರೋಷಕ ಬೋಧಕರ ಸಮ್ಮೇಳನ

[illegible] ಶ್ರೀ ಎಲ್. [illegible] ಅಧ್ಯಕ್ಷತೆ ವಹಿಸುವರು

## ಚಿಕ್ಕಮಗಳೂರು ಹಳ್ಳಿ ಅಂಚೆ ಕಛೇರಿಯಲ್ಲಿ ೫೦೦ ರೂ. ಮಾಯ

[illegible]

### ಶಿವರಾತ್ರೀಶ್ವರ ಆಶ್ರಮದ ವಿದ್ಯಾರ್ಥಿ ಸಂಘ

[illegible]

### ವಯಸ್ಕರ ಶಿಕ್ಷಣ ಸಮಿತಿ ಕಛೇರಿಗೆ ಕಿರುವಿಕಾಹಳ್ಳಿ ವಿದ್ಯಾರ್ಥಿಗಳ ಭೇಟಿ

[illegible]

### ಅನಾಥಾಲಯ ಚಿಕಿತ್ಸಾಲಯ

[illegible]

### ಅಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಗಣಪತಿ ಉತ್ಸವ

ಮೈಸೂರು ೧೭

ರಾಜಧಾನಿಯ ನಾರಾಯಣ ರಸ್ತೆಯಲ್ಲಿರುವ ಶ್ರೀ ಕೋದಂಡರಾಮ ಪಾರ್ಕಿಂಗ್ ಶೆಡ್ ನಲ್ಲಿ ಶ್ರೀ ಸತ್ಯ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಮ್ಯಾಜಿಸ್ಟ್ರೇಟ್ [illegible] ವಿವಿಧ ಸಂಗೀತವೂ, ರಾತ್ರಿ ೧೦ ಗಂಟೆಗೆ ಶ್ರೀ ಕೆ [illegible] ಶ್ರೀರಾಮ ಪರೀಕ್ಷೆ ಎಂಬ ಹರಿಕಥೆಯೂ ನಡೆಯುವುವು

[illegible] ಶ್ರೀ ವಿದ್ಯಾಗಣಪತಿ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ [illegible] ಮಂಡಲಿಯವರಿಂದ ಭಜನೆಯು [illegible] ಪತ್ರಿಕೆ ಸಂಪಾದಕ ಶ್ರೀ ಎಂ ಎಸ್ [illegible] ನೇತೃತ್ವದಲ್ಲಿ ನೆರವೇರುವುದು

ಕೃಷ್ಣರಾಜ ಮೊಹಲ್ಲಾ ಶ್ರೀ ಮಹಾ ಗಣಪತಿ [illegible] ಗಾಂಧಿ ಸೇವಾ ಸಂಘದಲ್ಲಿ ಗಣೇಶೋತ್ಸವವು [illegible]

### ವಿಶ್ವಸಂಸ್ಥೆ ಅಧ್ಯಕ್ಷತೆ ಬಗ್ಗೆ ವಿಜಯಲಕ್ಷ್ಮಿಯವರ ಹೇಳಿಕೆ

[illegible]

### ಮೈಸೂರು ಪೇಟೆ ಧಾರಣೆ

| | | |
|---|---|---|
| [illegible] | [illegible] | [illegible] |

ಚಾಮುಂಡೇಶ್ವರಿ ಟಾಕೀಸ್

19-9-53 ರಿಂದ [illegible] ನೇ ವಾರ

ಅನಾರ್ಕಲಿ

[illegible]

### ಮನೆ ಬಿಕರಿಗಿದೆ

Building bearing No. 1598-1599 in Chamal Mutt Street (Kabir Road)

[illegible] 1598-1599 [illegible]

ಪಿ. ಎಸ್. [illegible]

Edited, Printed and Published by A. R. Nagarajan at Sadhvi Press, D. Subbiah Road, Mysore

ಪ್ರಭುದೇವಾ ಥಿಯೇಟರ್

ಸದ್ಯ ಟಾಕೀಸ್

19-9-53 ರಿಂದ :: ಅಮೋಘ 6ನೇ ವಾರ

ಮೈಯಾರ್

[illegible]

SREE GANESHA TALKIES

From 19-9-53 : For 4 days only

Columbia's Technicolor Adventure Masterpiece

CAPTAIN PIRATE

Featuring:- Louis Hayward, Patricia Medina & John Sutton

## MYSORE DASARA EXHIBITION 1953.

## 'FLOOD-LIGHT' TOURNAMENTS

Commencing from 8-10-1953 (Everyday after 6-30 P. M.)

Last Day For Entry : 5-10-1953 till 5 P.M.

MEN'S EVENTS :-

*( Open only to all Colleges, Schools and Institutions )*

1. Basket Ball,
2. Volley Ball,
3. Kho-Kho,

} Entrance Fee : Rs. 5 per team, per event.

4. Amateur Wrestling : (Matting) — Entrance Fee : Re. 1 per head per event and Rs. 3 per Institution

WOMEN'S EVENTS :-

*( Open only to all Colleges, Schools and Institutions )*

1. Throw Ball,
2. Basket Ball,

} Entrance Fee : Rs. 3 per team, per event.

3. Competitions Entrance Fee : Re. 0-4-0 per team, per event.

For more details, write to :—

THE SPORTS SECRETARY,

*Dasara Exhibition, Mysore.*

ಟೆಲಿಫೋನ್ ನಂ. 792

|| ವಂದೇ ಮಾತರಂ ||

ಬಿಡಿ ಪತ್ರಿಕೆ 3 ಕಾಸು

# ಸಾಧ್ವಿ

SADHVI : LEADING NATIONALIST DAILY OF MYSORE

ಸಂಪುಟ ೧೨ ] MYSORE : SATURDAY 19-9-1953 :: ಮೈಸೂರು : ಶನಿವಾರ ೧೯-೯-೧೯೫೩ [ ಸಂಚಿಕೆ ೪೭

ಮೈಸೂರು ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ನಾಗಪುರ, ಆರ್ಟ್ ಸೀರೆಗಳು ಮುಸ್ತು ತರಹ ನೂಲಿನ ಸೀರೆಗಳಿಗೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು : ಫೋನ್ 446

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

# ರಾಷ್ಟ್ರಾಧ್ಯಕ್ಷರ ಆಳ್ವಿಕೆಯಿಂದ ಆಂಧ್ರ ಪ್ರಾಂತ ಪ್ರಾರಂಭ ?

## ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಅಧ್ಯಯನವು ಹೆಚ್ಚಬೇಕು

### ಪ್ರಕೃತಿ ವಿಜ್ಞಾನ ಸಂಘದಲ್ಲಿ ಗೃಹ ಮಂತ್ರಿಗಳ ಭಾಷಣ

ಮೈಸೂರು ೧೯

ಇಲ್ಲಿನ ಪ್ರಥಮ ದರ್ಜೆ ಕಾಲೇಜು ಸಂಘದ ಆರಂಭ ಭಾಷಣವನ್ನು ಮೊನ್ನೆ ಗೃಹ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಮಾಡಿ, ಈಗಿನ ವಿಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ಅದಕ್ಕೆ ಸಂಬಂಧಿಸಿದ ವಿದ್ಯೆಯನ್ನು ಕಲಿಯುವುದರಿಂದ ಪ್ರಗತಿ ಸಾಧಿಸಲು ಸಾಧ್ಯವಾಗಿ ತಿಳಿಸಿದರು. ಈಗ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ನಿಕಟ ಸಂಬಂಧವಿದ್ದಿತೆಂದೂ, ಅದು ಇನ್ನು ಮುಂದೆ ಹೆಚ್ಚಬೇಕೆಂದೂ ಅವರ ಹೇಳಿದರು. ಸ್ವಾತಂತ್ರ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕಾದರೆ ಪ್ರತಿಯೊಬ್ಬರೂ ಅವರವರ ಜವಾಬ್ದಾರಿಯನ್ನು ಅರಿಯುವುದು ಅಗತ್ಯವೆಂದು ಸಚಿವರು ಅಭಿಪ್ರಾಯಪಟ್ಟರು.

ಪ್ರೊಫೆಸರ್ ನಾರಾಯಣರಾಯರಿಂದ ಸ್ವಾಗತ ಭಾಷಣ, ಕಾರ್ಯದರ್ಶಿ ಶ್ರೀ ಹೆಚ್. ಸಿ. ನಂಜೇಗೌಡರವರಿಂದ ವಂದನಾರ್ಪಣೆಗಳಾದುವು.

### ಪೂನಾ ಆರ್ಟ್ಸ್ ನಾಟಕ ಸಂಘ

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದಲ್ಲಿರುವ ಪೂನಾ ಆರ್ಟ್ಸ್ ನಾಟಕ ಸಂಘದ ಪ್ರಥಮ ವಾರ್ಷಿಕ ಸಭೆಯು ನೆನ್ನೆ ಸಂಜೆ ಸಂಘದ ಕಟ್ಟಡದಲ್ಲಿ ನಡೆದು ಶ್ರೀ ಟಿ. ಕೆ. ತ್ರಿಲೋಕಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಸಿಂಗಯ್ಯನವರು ಕಾರ್ಯದರ್ಶಿಯವರಾಗಿಯೂ, ಶ್ರೀ ಆರ್. ಎಸ್. ರಾಮುರವರು ಖಜಾಂಚಿಯಾಗಿಯೂ ಚುನಾಯಿತರಾದರು. ಸಂಸ್ಥೆಯ ವಾರ್ಷಿಕೋತ್ಸವವನ್ನು ಶೀಘ್ರದಲ್ಲೇ ನಡೆಸಬೇಕೆಂದೂ ನಿರ್ಧರಿಸಲಾಯಿತು.

## ನಾನಾ ರಾಷ್ಟ್ರಗಳಲ್ಲಿ ಭೂಕಂಪದ ಬಗ್ಗೆ ಭವಿಷ್ಯ

ರಂಗೂನಿನಲ್ಲಿರುವ ಭಾರತೀಯ ಜ್ಯೋತಿಷ ಶಾಸ್ತ್ರಜ್ಞ, ಡಿ. ಆರ್. ನಾಯ್ಡುರವರು ಹೇಳಿರುವ ಪ್ರಕಾರ ಬರುವ ಮೂರು ತಿಂಗಳಲ್ಲಿ ಪ್ರಪಂಚದಲ್ಲೆಲ್ಲಾ ಭೂಕಂಪಗಳಾಗುವುವು. ಇಂದು, ನಾಳೆ ಮತ್ತು ೨೯ ನೇ ತಾ|| ಹಲವು ಕಡೆಗಳಲ್ಲಾಗುವುವೆಂದೂ, ಮುಂದಿನ ತಿಂಗಳು ೭ ಕಡೆಯೂ, ನವೆಂಬರಿನಲ್ಲಿ ಎರಡು, ಡಿಸೆಂಬರಿನಲ್ಲಿ ಮೂರೂ ಆಗುವುವು. ಗ್ರೀಸ್, ಟರ್ಕಿ ಮತ್ತು ಇಟಲಿ ಬಳಿ ಇರುವ ದ್ವೀಪಗಳಲ್ಲಿ ಭಾರಿ ನಷ್ಟವಾಗುವುದೆಂದೂ, ಚಿಲಿ, ಟಿಬೆಟ್, ಉತ್ತರ ಭಾರತ ಮತ್ತು ಉತ್ತರ ಬರ್ಮಗಳಲ್ಲಿ ಅಲ್ಪ ಸ್ವಲ್ಪ ತೊಂದರೆಯಾಗುವುವೆಂದೂ ಅವರು ತಿಳಿಸಿರುವರು.

## ಭಾರತ ಸರ್ಕಾರದ ಅಧಿಕಾರಿ ವೆಂಕಟರಾಮನ್‌ರವರ ವಜಾ

ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮಾಜಿ ಕಾರ್ಯದರ್ಶಿ ಎಸ್. ಎ. ವೆಂಕಟರಾಮನ್‌ರವರನ್ನು ನೌಕರಿಯಿಂದ ವಜಾ ಮಾಡಲಾಗಿರುವುದಾಗಿ ವರದಿಯಾಗಿದೆ. ಇವರ ಮೇಲೆ ಲಂಚ ಮೊಕದ್ದಮೆಗಳ ಆಪಾದನೆ ಬಂದು ವಿಚಾರಣೆ ನಡೆದಿತ್ತು.

## ಟಿ. ಎಸ್. ರಾಜಗೋಪಾಲಯ್ಯಂಗಾರ್ಯರಿಗೆ ಪುನಃ ಸದಸ್ಯತ್ವ

### ಸಿಟಿ ಕೋಆಪರೇಟಿವ್ ಸೊಸೈಟಿ ವ್ಯವಹಾರದಲ್ಲಿ ತೀರ್ಪು

ಮೈಸೂರು ೧೯

ಮೈಸೂರಿನ ವಕೀಲರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರನ್ನು ಸಿಟಿ ಕೋಆಪರೇಟಿವ್ ಸೊಸೈಟಿಯ ಸದಸ್ಯತ್ವದಿಂದ ತೆಗೆದು ಹಾಕಿದ್ದ ಬಗ್ಗೆ ಅವರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಕೋರ್ಟಿನಲ್ಲಿ ವ್ಯವಹಾರಹೂಡಿದ್ದ ಸಂಬಂಧವಲ್ಲಿ ನೆನ್ನೆ ತೀರ್ಪು ಕೊಡಲಾಯಿತು. ಶ್ರೀ ರಾಜಗೋಪಾಲಯ್ಯಂಗಾರ್ಯರನ್ನು ಸದಸ್ಯತ್ವದಿಂದ ತೆಗೆದುದು ಅಕ್ರಮ ಮತ್ತು ಕಾನೂನು ಬಾಹಿರವೆಂದೂ, ಸಂಘದ ನಿಬಂಧನೆ ಮತ್ತು ಉಪನಿಧಿಗಳಿಗೂ ವಿರುದ್ಧವೆಂದೂ, ಕೂಡಲೇ ಅವರಿಗೆ ಸದಸ್ಯತ್ವವನ್ನು ಪುನಃ ಕೊಡಬೇಕೆಂದೂ ಅಸಿಸ್ಟೆಂಟ್ ರಿಜಿಸ್ಟ್ರಾರು ಆಜ್ಞೆ ಮಾಡಿದರು.

ಹಾಗೆಯೇ ಶ್ರೀ ಜಿ. ವಿ. ನರಸಿಂಹಯ್ಯಂಗಾರ್ಯರ ಸದಸ್ಯತ್ವವನ್ನು ತೆಗೆದು ಹಾಕಿದ್ದ ಅವರ ವ್ಯವಹಾರ ಹೂಡಿದ ಬಗ್ಗೆಯೂ ಅಸಿಸ್ಟೆಂಟ್ ರಿಜಿಸ್ಟ್ರಾರು ಅದೇ ರೀತಿ ತೀರ್ಮಾನವಿತ್ತಿರುವರು.

## ಬಡತನದಿಂದ ಐದು ಮಕ್ಕಳನ್ನೂ ಕೊಂದು ತಾಯಿಯ ಆತ್ಮಹತ್ಯೆ

ಬಡತನದ ಬೇಗೆಯಿಂದ ಬಳಲಿದ ತುಮಕೂರು ಜಿಲ್ಲೆಯ ಪಿಣ್ಣೇನಹಳ್ಳಿಯ ೩೦ ವರ್ಷದ ಅಕ್ಕಮ್ಮ ಎಂಬಾಕೆಯು ಮೊನ್ನೆ ತನ್ನ ಎರಡು ಗಂಡು, ಮೂರು ಹೆಣ್ಣು ಮಕ್ಕಳನ್ನು ಅವು ಮಲಗಿ ನಿದ್ರಿಸುತ್ತಿದ್ದಾಗ ಒಂದಾದ ಮೇಲೊಂದರಂತೆ ಕತ್ತಿಗೆ ಹಗ್ಗವನ್ನು ಬಿಗಿದು ಕೊಂದು, ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ. ಆಕೆಯ ಗಂಡ ಬೋರಯ್ಯನು ಸ್ವತ್ತುಗಳೆಲ್ಲವನ್ನೂ ಕಳೆದುಕೊಂಡುದರಿಂದ ಆ ಸಂಸಾರವು ಬಡತನಕ್ಕೆ ಗುರಿಯಾಗಿ ಕೊನೆಗೆ ದುರಂತದಲ್ಲಿ ಪರ್ಯವಸಾನವಾಯಿತು.

## ಕೊರಿಯದಲ್ಲಿ ಪುನಃ ಯುದ್ಧವೇ?

ಕೊರಿಯಾ ಶಾಂತಿ ಸಮ್ಮೇಳನವು ಸೇರುವುದಕ್ಕೆ ಮುಂಚಿತವಾಗಿಯೇ ಕೊರಿಯದಲ್ಲಿ ಕದನವು ಪ್ರಾರಂಭವಾಗಲಿರುವುದಾಗಿ ಅಮೆರಿಕದಲ್ಲಿರುವ ದಕ್ಷಿಣ ಕೊರಿಯಾ ರಾಯಭಾರಿ ಡಾ|| ಯೌಚಾಂ ಯಾಂಗ್‌ರವರು ನುಡಿದಿರುತ್ತಾರೆ.

### ನೇಣು ಹಾಕಿಕೊಂಡು ಮರಣ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯ ಶಾಪ್ಪಿನಲ್ಲಿ ಕೆಂಪಯ್ಯನವರ ಮನೆಯಲ್ಲಿದ್ದ ಬಸವಯ್ಯ ಎಂಬ ಸುಮಾರು ೩೫ ವರ್ಷದ ಯುವಕನು ನೆನ್ನೆ ರಾತ್ರಿ ಕೊಠಡಿಯೊಳಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಮನೆಯಲ್ಲಿ ಒಡವೆಗಳು ಕಳುವಾದ ಬಗ್ಗೆ ವೈಮನಸ್ಯವುಂಟಾಗಿದ್ದಿತೆಂದು ಹೇಳಲಾಗಿದೆ.

### ಮೈಸೂರು ನ್ಯಾಯಾಧೀಶರು ಬಳ್ಳಾರಿಗೆ

ಮೈಸೂರಿನ ಎರಡನೇ ಮುನ್ಸೀಫರಾದ ಶ್ರೀ ಡಿ. ಆರ್. ನರಸಿಂಗರಾಯರನ್ನು ಬಳ್ಳಾರಿಯ ಜಿಲ್ಲಾ ಮುನ್ಸೀಫರಾಗಿಯೂ, ಡಿವಿಜನಲ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗಾಯಿಸಲಾಗಿದೆ.

## ಆಂಧ್ರ ಸಂಸ್ಥಾನದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವೇ ?

### ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಸಮಾಲೋಚನೆ

ದೆಹಲಿಯಲ್ಲಿ ಇಂದು ಮತ್ತು ನಾಳೆ ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಆಂಧ್ರ ಮತ್ತು ತಿರುವಾಂಕೂರು ಸಂಸ್ಥಾನಗಳ ಪರಿಸ್ಥಿತಿಯನ್ನು ತೀವ್ರವಾಗಿ ಪರಿಶೀಲಿಸಲಾಗುವುದೆಂದು ವರದಿಯಾಗಿದೆ. ಆಂಧ್ರದಲ್ಲಿ ಕಾಂಗ್ರೆಸ್ಸಿನವರು ಈಗ ಏರ್ಪಡಿಸಿಕೊಂಡಿರುವ ಮಂತ್ರಿಮಂಡಲದ ರಚನೆಯನ್ನು ಕಾಂಗ್ರೆಸ್ಸಿನಲ್ಲಿ ಪ್ರಭಾವಶಾಲಿಯಾಗಿರುವ ಗುಂಪಿನವರು ಒಪ್ಪುತ್ತಿಲ್ಲವೆಂದೂ, ಮಂತ್ರಿಮಂಡಲದ ನಾಯಕರು ಕಾಂಗ್ರೆಸ್ಸಿನ ಪಕ್ಷೋದ್ದೇಶಕ್ಕೆ ಅಸಹ್ಯರಾಗಿದ್ದಾರೆಂಬುದು ಅವರ ಅಭಿಪ್ರಾಯವೆಂದೂ ಹೇಳಲಾಗಿದೆ. ಪ್ರಕಾಶಂರವರನ್ನು ಪ್ರಜಾ ಸಮಾಜವಾದಿ ಪಕ್ಷದಿಂದ ಬಿಟ್ಟುಕೊಡುವುದಿಲ್ಲವೆಂದು ನಿರ್ಧಾರವಾಗಿರುವುದರಿಂದ, ಆಂಧ್ರದಲ್ಲಿ ಬೇರಾವ ಮಾರ್ಗವೂ ಕಾಣದೇ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ವಿಧಿಯಿಲ್ಲದೆ ಏರ್ಪಡಿಸಬೇಕಾಗುವ ಸ್ಥಿತಿಯು ಬರಬಹುದೆಂದು ಹೇಳಲಾಗಿದೆ.

## ಆಂಧ್ರದ ಗೌರ್ನರಾಗಿ ತ್ರಿವೇದಿಯವರ ನೇಮಕ

ಆಂಧ್ರ ಪ್ರಾಂತದ ಗೌರ್ನರಾಗಿ ಚಂದೂಲಾಲ್ ತ್ರಿವೇದಿಯವರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿರುತ್ತಾರೆ. ಈಗ ಅವರು ಆಂಧ್ರ ವ್ಯವಹಾರಗಳ ವಿಶೇಷಾಧಿಕಾರಿಗಳಾಗಿರುವರು.

## ಗೋವಾಕ್ಕೆ ಪಶ್ಚಿಮ ಆಫ್ರಿಕದ ಸೈನ್ಯ

ಪೋರ್ಚುಗೀಸರ ಪಶ್ಚಿಮ ಆಫ್ರಿಕದ ೬೦೦ ಜನ ಸೈನಿಕರನ್ನು ಮುಂದಿನ ವಾರ ಗೋವಾಕ್ಕೆ ರವಾನಿಸಲಾಗುವುದೆಂದು ತಿಳಿದುಬಂದಿದೆ. ಇನ್ನೂ ಹೆಚ್ಚಿನ ಸೈನ್ಯಗಳನ್ನು ಅಲ್ಲಿಗೆ ಕರೆಸಲಾಗುವುದೆಂದೂ ಹೇಳಲಾಗುತ್ತಿದೆ.

## ಇಟಲಿಯಲ್ಲಿ ೪೦ ಲಕ್ಷ ಕಾರ್ಮಿಕರ ಮಹಾ ಮುಷ್ಕರ ?

ಇಟಲಿಯ ಕಮ್ಯೂನಿಸ್ಟ್ ಮತ್ತು ಸೋಷಿಯಲ್ ಡೆಮೊಕ್ರಾಟಿಕ್ ಕಾರ್ಮಿಕ ಸಂಘಗಳವರು ಒಟ್ಟಾಗಿ ಸೇರಿ ಕಾರ್ಮಿಕರಿಗೆ ಹೆಚ್ಚಿನ ಸಂಬಳವನ್ನು ಕೊಡಬೇಕೆಂದೂ ಮತ್ತು ಕಾರ್ಮಿಕರನ್ನು ಕೆಲಸದಿಂದ ತೆಗೆಯುವುದನ್ನು ನಿಲ್ಲಿಸಬೇಕೆಂದೂ ಬೇಡಿಕೆಗಳನ್ನಿಟ್ಟು, ಅವುಗಳನ್ನು ಈಡೇರಿಸದಿದ್ದರೆ ಬರುವ ಗುರುವಾರ ಎಲ್ಲ ಕಾರ್ಮಿಕರೂ ಮುಷ್ಕರ ಹೂಡಬೇಕೆಂದು ಸೂಚಿಸಿರುವರು. ಮುಷ್ಕರವು ನಡೆದರೆ ಅದರಲ್ಲಿ ಸುಮಾರು ೪೦ ಲಕ್ಷ ಕಾರ್ಮಿಕರು ಭಾಗವಹಿಸಿ, ತಮ್ಮ ಗುರಿಯು ಸಾಧನೆಯಾಗದಿದ್ದಲ್ಲಿ ಚಳುವಳಿಯನ್ನು ಮುಂದುವರಿಸುವರೆಂದೂ ತಿಳಿಸಲಾಗಿದೆ.

### ಉಪನ್ಯಾಸ

ರಾಜಧಾನಿಯ ಶ್ರೀಮದ್ ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ವಿದ್ಯಾಗಣಪತಿ ಉತ್ಸವದ ಅಂಗವಾಗಿ ಈ ಸಂಜೆ ೬ ಗಂಟೆಗೆ ಬ್ರಂ|| ಶ್ರೀ ನವೀನಂ ವೆಂಕಟೇಶ ಶಾಸ್ತ್ರಿಗಳು ವೇದಾಂತ ಮತ್ತು ಪ್ರಪಂಚ ಶಾಂತಿ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

## ಡಿಸೆಂಬರ್ ೭ ನೇ ತಾ|| ಪೌರಸಭಾ ಚುನಾವಣೆ

### ವೇಳಾ ಪಟ್ಟಿಯ ಪ್ರಕಟಣೆ

ಮೈಸೂರು ೧೯

ಮುಂದಿನ ಜನವರಿ ೧ ನೇ ತಾರೀಖಿನಿಂದ ಪುನಃ ರಚಿತವಾಗಲಿರುವ ನಗರದ ಪೌರಸಭೆಯ ಚುನಾವಣೆ ಸಂಬಂಧವಾಗಿ ಚುನಾವಣಾಧಿಕಾರಿಗಳಾಗಿರುವ ಪೌರಸಭಾ ಕಮಿಷನರರು ಈ ಕೆಳಗೆ ಕಂಡ ವೇಳಾ ಪಟ್ಟಿಯನ್ನು ಪ್ರಕಟಿಸಿರುತ್ತಾರೆ :—

ಓಟರು ಪಟ್ಟಿ ಪ್ರಕಟಣೆ—ಅಕ್ಟೋಬರ್ ೮ ನೇ ತಾ|| ; ಆಕ್ಷೇಪಣೆ ಮುಂತಾದುವುಗಳ ಬಗ್ಗೆ ಲಿಖಿತ ಅರ್ಜಿ ಸಲ್ಲಿಸುವುದು—೩೧ನೇ ತಾ|| ಮಧ್ಯಾಹ್ನ ೩ ಗಂಟೆಯೊಳಗೆ; ಅಖೈರು ಪಟ್ಟಿ ಪ್ರಕಟಣೆ ೩೧ ನೇ ತಾ|| ಶನಿವಾರ; ಚುನಾವಣಾ ವೇಳಾ ಪಟ್ಟಿಯ ಘೋಷಣೆ-ನವೆಂಬರ್ ೩ ನೇ ತಾ|| ; ಉಮೇದುವಾರಿಕೆ ನಾಮ ಪತ್ರಗಳ ಸಮರ್ಪಣೆಗೆ ಕಡೇ ದಿನ—ನವೆಂಬರ್ ೧೭ ನೇ ತಾ|| ಸೋಮವಾರ ೧೧ ಗಂಟೆಯಿಂದ ಮಧ್ಯಾಹ್ನ ೩ ಗಂಟೆ; ನಾಮ ಪತ್ರಗಳ ಪರಿಶೀಲನೆ—೧೯ ನೇ ತಾ|| ಬೆಳಗ್ಗೆ ೧೧ ರಿಂದ ಮಧ್ಯಾಹ್ನ ೩ ರ ವರೆಗೆ; ನಾಮ ಪತ್ರಗಳ ವಾಪಸಾತಿಗೆ—೨೦ನೇ ತಾ|| ಮಧ್ಯಾಹ್ನ ೩ ಗಂಟೆಯೊಳಗೆ; ವಾಪಸಾದ ಅರ್ಜಿಗಳ ಪ್ರಕಟಣೆ—೨೦ ನೇ ತಾ|| ಸಂಜೆ ೫ ಗಂಟೆಗೆ; ಉಮೇದುವಾರರ ಪಟ್ಟಿ ಪ್ರಕಟಣೆ ೨೧ ನೇ ತಾ|| ಸಂಜೆ ೫ ಗಂಟೆಗೆ; ಚುನಾವಣೆ—ಡಿಸೆಂಬರ್ ೭ ನೇ ತಾ|| ; ಎಣಿಕೆ—ಮತ್ತು ಫಲಿತಾಂಶ ಪ್ರಕಟಣೆ ೮ ನೇ ತಾ||

## ತಿರುವಾಂಕೂರು ಸರ್ಕಾರದಿಂದ ವಿಶ್ವಾಸದ ಓಟಿನ ಬೇಡಿಕೆ

ತಿರುವಾಂಕೂರು-ಕೊಚ್ಚಿ ಶಾಸನ ಸಭೆಯು ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿ ಎ. ಜೆ. ಜಾನ್‌ರವರ ಮಂತ್ರಿ ಮಂಡಲದಲ್ಲಿ ವಿಶ್ವಾಸ ವ್ಯಕ್ತಪಡಿಸುವ ಬಗ್ಗೆ ಅಭಿಮತವನ್ನು ತಿಳಿದುಕೊಳ್ಳಲು ಕಾಂಗ್ರೆಸ್ ಪಕ್ಷದವರು ಸೂಚನೆಯೊಂದನ್ನು ಕೊಡಲು ನಿರ್ಧರಿಸಿರುತ್ತಾರೆ. ಎಡಪಂಥ್ಯ ವಾಮ ಪಕ್ಷಗಳು ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಮಂಡಿಸಲಿರುವುದಾಗಿ ಹೇಳಲಾಗಿದೆ. ೧೧೮ ಜನ ಸದಸ್ಯರಿರುವ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿಗೆ ೫ ಜನ ಸ್ವತಂತ್ರರ ಬೆಂಬಲವಲ್ಲದೆ ೫೧ ಓಟುಗಳು ಸಿಗುವುವು. ವಾಮ ಪಕ್ಷಗಳ ಸದಸ್ಯರು ೩೨ ಮಂದಿ ಇರುವರು. ಪ್ರಜಾಸಮಾಜವಾದಿಗಳು ೧೧ ಮತ್ತು ತಮಿಳುನಾಡು ಸದಸ್ಯರು ೯ ಮಂದಿ ಇರುವರು.

## ಮುಂದಿನ ತಿಂಗಳಲ್ಲಿ ಹಾಸನ-ಮಂಗಳೂರು ರೈಲ್ವೆ ರಸ್ತೆ ಸರ್ವೆ

ಮುಂದಿನ ತಿಂಗಳಲ್ಲಿ ಹಾಸನ-ಮಂಗಳೂರುಗಳಿಗೆ ರೈಲು ರಸ್ತೆ ಹಾಕುವ ಪೂರ್ವಭಾವಿಯಾದ ಇಂಜಿನಿಯರಿಂಗ್ ಮತ್ತು ಸಂಚಾರದ ಸರ್ವೆಯನ್ನು ನಡೆಸಲಾಗುವುದೆಂದು ಕೇಂದ್ರ ರೈಲ್ವೆ ಉಪ ಮಂತ್ರಿ ಅಲಗೇಶನ್‌ರವರು ತಿಳಿಸಿರುತ್ತಾರೆ. ವಿಮಾನದ ಮೂಲಕವೂ ಸರ್ವೆ ನಡೆಸುವ ವಿಷಯವನ್ನು ಯೋಚಿಸಲಾಗುತ್ತಿರುವುದೆಂದು ಅವರು ಹೇಳಿರುವರು.

## ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ವಾರ್ಷಿಕೋತ್ಸವ

ಮೈಸೂರು ೧೯

ರಾಜಧಾನಿಯ ಶ್ರೀ ವರಲಕ್ಷ್ಮಿ ಲಲಿತಕಲಾ ಶಾ[illegible] ವಾರ್ಷಿಕೋತ್ಸವವು ಸಹಕ ರ[illegible] ಕಳೆದ ಮಂಗಳವಾರ ಸಂಸ್ಥೆ ಯ ವಿದ್ಯಾರ್ಥಿನಿಯರ [illegible] ರಾಷ್ಟ್ರಗೀತ [illegible] ಪ್ರಾರಂಭವಾಯಿತು [illegible] ಸಂಸ್ಥೆಯ ಅಧ್ಯಕ್ಷರು ಶ್ರೀ ಎಂ ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ವರಲಕ್ಷ್ಮಿ ಅರ್ಕೇಸ್ಟ್ರಾರವರ ವಾದ್ಯಗೋಷ್ಠಿಯಾದ ನಂತರ ಮೈಸೂರು ಸಹೋದರ ಪ್ರೈಸ್ ಲ್ಯಾಂಡ್ ಶ್ರೀ ಆರ್ [illegible] ವರದಿಯನ್ನು ಮಂಡಿಸಿ ಸಂಸ್ಥೆಯು ಕೈಗೊಂಡಿರುವ ಕಾರ್ಯಗಳೊಡನೆ ಅನುಕೂಲ ದೊರಕಿದರೆ ನೃತ್ಯ [illegible] ಪುದಾಗಿ ಹೇಳಿದರು ಸಂಸ್ಥೆಗೆ [illegible] ಸರ್ಕಾರದ ಒತ್ತಾಸೆಯನ್ನು ಕೋರಿದರು [illegible] ವರ್ಷಾಂತ್ಯದ ನಡೆಯುವ [illegible] ಬಹುಮಾನ [illegible] ಪ್ರಶಸ್ತಿ ಪತ್ರಗಳನ್ನು ನೀಡಿದ [illegible]

[illegible] ಸಂಗೀತಕ್ಕೆ [illegible] ಮಾಡಿದ [illegible] ಸಂಸ್ಥೆಗೆ ಮಾಡಿದರು.

[illegible]

### ಹರಿಕಥೆ

ರಾಜಧಾನಿಯ [illegible] ಗಂಟೆಗೆ ಶ್ರೀ ನದೀಪುರ ಶ್ರೀನಿವಾಸರಂಗಾ[illegible]ರಿಂದ [illegible] ಎಂಬ ಹರಿಕಥೆಯು ನಡೆಯುವುದು

### ಇಟ್ಟಿಗೆಗೂಡು ಯುವಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಇಟ್ಟಿಗೆಗೂಡು ಯುವಕರ ಸಂಘದ [illegible] ವಾರ್ಷಿಕೋತ್ಸವವು ನಾಳೆ ಸಂಜೆ [illegible] ಗಂಟೆಗೆ ಶ್ರೀ ವಿ ಡಿ ಎಸ್ ನಾಯ್ಡುರವರ ವ್ಯಾಯಾಮ ಶಾಲೆಯಲ್ಲಿ ನೆರವೇರುವುದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ [illegible] ಕೆಂಚೇಗೌಡರು ಅಧ್ಯಕ್ಷಸ್ಥಾನ ವಹಿಸುವರು

### ಗಣಪತಿ ಉತ್ಸವ

[illegible] ಗಣಪತಿ [illegible] ವ್ಯವಸ್ಥೆಯನ್ನು [illegible] ಏರ್ಪಡಿಸಲಾಗಿದೆ [illegible] ಅವರ ಗಾನಗೋಷ್ಠಿಯು [illegible]

### [illegible] ವಿದ್ಯಾರ್ಥಿ ನಿಲಯ ಸಂಘದ ಚುನಾವಣೆ

[illegible] ವಿದ್ಯಾರ್ಥಿ ನಿಲಯ ಸಂಘದ ಕಾರ್ಯಕಾರಿ ಸಮಿತಿಯ ಚು[illegible] ರಸಾಯನ ಶಾಸ್ತ್ರದ [illegible] ಸ್ವಾಮಿಯವ[illegible] ನಡೆದು ಶ್ರೀ ಹೆಚ್ ಪಿ [illegible] ಉಪಾಧ್ಯಕ್ಷರಾಗಿಯೂ ಶ್ರೀ ಎಲ್ [illegible] ವ್ಯವಸ್ಥಾಪಕರಾಗಿಯೂ [illegible] ಕಾರ್ಯದರ್ಶಿಗಳಾಗಿಯೂ [illegible] ಶ್ರೀಗಳಾದ ಜಿ ಎಸ್ ಚಿಕ್ಕ ಸದಾಶಿವಂ, [illegible] ಗಯ್ಯ ಹೆಚ್ ಸಿ [illegible] ಬಿ ದೊರೆಸ್ವಾಮಿ, ಓ ಎಸ್ ಲಿಂಗಯ್ಯ ಮತ್ತು ಟಿ ಆರ್ ಗೋ[illegible] ಸ್ವಾಮಿಯವರು ಸದಸ್ಯರಾಗಿ [illegible]

## ವಿಶ್ವೇಶ್ವರಯ್ಯನವರ ಜನ್ಮದಿನೋತ್ಸವ

ನಂಜನಗೂಡು ೧೯

ಇಲ್ಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಿಂಗಳ [illegible] ಗಂಟೆಗೆ ಕನ್ನಡ [illegible] ವಿದ್ಯಾರ್ಥಿ ನಿಲಯದ [illegible] ಲ್ಲಿ ವಿಶ್ವವಿಖ್ಯಾತ ಇಂಜನಿಯರೂ ಮೈಸೂರಿನ ಮಾಜಿ ದಿವಾನರೂ ಆದ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ [illegible] ನೇ ವರ್ಷದ ಜನ್ಮದಿನೋತ್ಸವವನ್ನು ನೆರವೇರಿಸಲಾಗುವುದು ಮಾಜಿ ಕೈಗಾರಿಕಾ ಮಂತ್ರಿ ಶ್ರೀ ಓ [illegible] ಲಿಂಗಯ್ಯನವರ ಅಧ್ಯಕ್ಷತೆ ವಹಿಸುವರು [illegible] ಪತ್ರಿಕಾ ಸಂಪಾದಕರಾದ ಶ್ರೀ ಎಂ [illegible] ಶಾಸ್ತ್ರಿಯವರು [illegible] ಭಾಷಣ ಮಾಡುವರು [illegible] ಶ್ರೀ [illegible] ಶ್ರೀನಿವಾಸ ಅಯ್ಯಂಗಾರ್‌ರವರ ಸಂಘಕ್ಕೆ ಕೊಟ್ಟಿರುವ ವಿಶ್ವೇಶ್ವರಯ್ಯನವರ ಭಾವಚಿತ್ರದ ಅನಾವರಣವನ್ನೂ [illegible] ವಿದ್ಯಾ[illegible] ಏರ್ಪಡಿಸಲಾಗಿದೆ

### ಎಂ ಆರ್ ಶ್ರೀನಿವಾಸಮೂರ್ತಿಯವರ ನಿಧನಕ್ಕಾಗಿ ಸಂತಾಪ

ನಂಜನಗೂಡಿನ ಕರ್ನಾಟಕ ಸಂಘದವರ [illegible] ಕನ್ನಡ [illegible] ಶ್ರೀ ಎಂ ಆರ್ ಶ್ರೀನಿವಾಸಮೂರ್ತಿಯವರ ನಿಧನಕ್ಕಾಗಿ [illegible] ಸಭೆ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಅಧ್ಯಕ್ಷರೂ ಮತ್ತು ಶ್ರೀ [illegible] ರವರೂ [illegible] ಗುಣಗಾನ ಮಾಡಿದ[illegible] ಸಂಘದ ಕಾರ್ಯದರ್ಶಿ ಶ್ರೀ ಎಂ [illegible] ನವರು [illegible] ಸಭಿಕರ [illegible] ಗಳ ಮೌನವನ್ನಾಚರಿಸಿ ನಿರ್ಣಯವನ್ನು ಅನುಮೋದಿಸಿದರು

## ಅರಬ್ಬೀ ಭಾಷೆಯಲ್ಲಿ ಕಾಳಿದಾಸನ ಶಾಕುಂತಲಾ

ಮಹಾಕವಿ ಕಾಳಿದಾಸನ [illegible] ಶಾಕುಂತಲಾ ನಾಟಕವನ್ನು ಅರಬ್ಬೀ ಭಾಷೆಗೆ ಭಾಷಾಂತರ ಮಾಡಲು [illegible] ಸರ್ಕಾರದವರು ನಿರ್ಧರಿಸಿದ್ದಾರೆ [illegible] ಎಂಬ [illegible] ಕೆಲಸವನ್ನು ಕೈಗೊಳ್ಳುವರು ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಈ ಗ್ರಂಥವನ್ನು ಪ್ರಚಾರ ಮಾಡಲಾಗುವುದು

## ರಾಜಕೀಯ ಚಟುವಟಿಕೆಗಾಗಿ ವಿದೇಶೀ ಪಾದ್ರಿಗಳ ಉಚ್ಚಾಟನೆ

ಭಾರತದ ಗುಡ್ಡಗಾಡಿನ ಜನರಲ್ಲಿ ವಿರೋಧ ಪ್ರಚಾರ ನಡೆಸುತ್ತಿದ್ದರೆಂದು ಹೇಳಲಾದ ಮೂವರು ವಿದೇಶಿ ಪಾದ್ರಿಗಳನ್ನು ಭಾರತ ಸ್ವತಂತ್ರವಾದಂದಿನಿಂದ ದೇಶದಿಂದ ಹೊರಕ್ಕೆ ಕಳುಹಲಾಗಿದೆಯೆಂದು [illegible] ಉಪಸ್ವರಾಷ್ಟ್ರ[illegible] ಮಂತ್ರಿ [illegible] ತಿಳಿಸಿರುವರು

### "ಪತ್ರಿಕೋದ್ಯಮ"ದ ಪ್ರಾರಂಭ

ರಾಜಧಾನಿಯ ಮಹಾರಾಜಾ ಕಾಲೇಜಿನ [illegible] ಪತ್ರಿಕೋದ್ಯಮ ಸಂಘದ ವರು [illegible] ಪತ್ರಿಕೋದ್ಯಮ ಎಂಬ ಪತ್ರಿಕೆಯ ಪ್ರಾರಂಭೋತ್ಸವವು ಇದೇ [illegible] ನೇ ತಾ॥ [illegible] ಕಾಲೇಜಿನಲ್ಲಿ ನೆರವೇರುವುದು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರೊಫೆಸರರಾದ ಶ್ರೀ ಎಸ್ ವಿ ರಂಗಣ್ಣನವರ ಅಧ್ಯಕ್ಷತೆ ವಹಿಸುವರು. ಕನ್ನಡ ಪ್ರೊ॥ ಶ್ರೀ [illegible] ನವರ ಆರಂಭೋತ್ಸವ ನಡೆಸುವರು

## ರೂಪಾಯಿಗೆ ಹತ್ತು ಆಣೆಯಂತೆ ವಿಧಾಯಕ ಮಾಡುವ ಶಾಸನ

ರೂಪಾಯಿಗೆ ಹತ್ತು ಆಣೆಯನ್ನು [illegible] ಮಾಡುವ ಪದ್ಧತಿಯನ್ನು ಜಾರಿಗೆ ತರತಕ್ಕಂತೆ ಕೇಂದ್ರ [illegible] ಶಾಸನ [illegible] ಗೆ [illegible] ವರು [illegible] ದಶಮಾಂಶ [illegible] ಮೂಲಕ ಲೆಕ್ಕವು ಸುಲಭವಾಗಿ [illegible] ಪದ್ಧತಿಯನ್ನು ಜಾರಿಗೆ ತರಲು ಸೂಚಿಸಿ [illegible] ಆಣೆಯನ್ನು [illegible] ಬೇಕೆಂದೂ ಕೇಳಿರುವರು [illegible] ಉಪಯೋಗಿಸಬೇಕೆಂದೂ ಸೂಚಿಸಲಾಗಿದೆ

## ೧೪೦ ಗಂಟೆಗಳ ಸೈಕಲ್ ಸವಾರಿ ಅರ್ಧಕ್ಕೇ ನಿಂತಿತು

೧೪೦ ಗಂಟೆಗಳ ಕಾಲ ಸತತ ಸೈಕಲ್ ಸವಾರಿ ಮಾಡಿ ರಿಕಾರ್ಡ್ [illegible] ಕಳೆದ [illegible] ವಾರ [illegible] ಮಾಡ [illegible] ಅನಾರೋಗ್ಯದ [illegible] ಬೇಗ್ [illegible] ಕೆಳಗೆ [illegible] ರೆ ಸೈಕಲ್ಲಿನಿಂದ [illegible] ಅವನು ೪೯ ಘಂಟೆ ಕಾಲ ಸವಾರಿ ಮಾಡಿದ್ದನೆಂದು ಗೊತ್ತಾಗಿದೆ

## ಗುಜರಾತ್ ಸತ್ಯಾಗ್ರಹದಲ್ಲಿ ೧೦೭ ಜನರ ದಸ್ತಗಿರಿ

ಸೂರತ್ ಜಿಲ್ಲೆ [illegible] ಭೂ ಸತ್ಯಾಗ್ರಹ ಸಂಬಂಧವಾಗಿ ಮತ್ತೆ ೧೦೭ ಜನರನ್ನು ದಸ್ತಗಿರಿ [illegible] ಗಳ [illegible] ಅನೇಕ [illegible] ಹುಲ್ಲಿನ ಭೂಮಿಯನ್ನು [illegible] ರೆಂದು ಹೇಳಲಾಗಿದೆ [illegible] ಜನ [illegible] ೧೫ ಸಾವಿರ ಜನರು ಸತ್ಯಾಗ್ರಹವನ್ನು [illegible] ದರು

### ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಈ ತಿಂಗಳು [illegible] ನೇ ತಾ॥ ಬೆಂಗಳೂರಿನಲ್ಲಿ ಸೇರುವುದು [illegible] ರ [illegible] ವಿಷಯವನ್ನೂ ಜಿಲ್ಲಾ ಬೋರ್ಡ್ ಕಾನೂನಿನ ಬಗ್ಗೆ ಪಕ್ಷದ [illegible] ವನ್ನೂ ಕುರಿತ ಪರಿಶೀಲನೆ ನಡೆಸಲಾಗುವುದು

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಜಲತರಂಗ [illegible] ಸಂಗೀತ [illegible] ಮತ್ತು [illegible] ಮೊಳ್ಳನ ಗೀತೆಗಳು ಸಂಜೆ [illegible] ಮತ್ತು [illegible] ಸೀತಾರಾಂ ಸಂಗೀತ [illegible] ವಿಚಾರ [illegible] ಮತ್ತು [illegible] ಮತ್ತು [illegible] ಸಂಗೀತ [illegible] ಮಂಗಳ— ಕತೆಯ ನಾಟಕ

## ಶ್ರೀರಂಗಪಟ್ಟಣದಲ್ಲಿ ಸಾಧ್ವಿ ಪತ್ರಿಕೆ ಏಜೆಂಟರು

ಹಿಂದೂ ಪತ್ರಿಕೆಯ ಏಜೆಂಟರಾದ ಶ್ರೀ ಎಸ್ ಎಸ್ ಶ್ರೀಕಂಠಯ್ಯನವರನ್ನು ಶ್ರೀರಂಗಪಟ್ಟಣದಲ್ಲಿ ಸಾಧ್ವಿ ಪತ್ರಿಕೆಯ ಏಜೆಂಟರನ್ನಾಗಿ ಇಂದಿನಿಂದ ನೇಮಿಸಲಾಗಿದೆ ವಾಚಕ ಮಹಾಶಯರುಗಳು ಅವರಿಂದ ಪತ್ರಿಕೆಯನ್ನು ಪಡೆದು ಚಂದಾ ಹಣವ ಪಾವತಿ ಮಾಡಿ ರಸೀತಿಯನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ

—ವ್ಯವಸ್ಥಾಪಕ

Edited Printed and Published by A R Nagarajan at Sadhvi Press, D. Subbiah Road, Mysore

## ನ್ಯಾಯಾಧೀಶರ ಮೇಲೆ ಅಪರಾಧಿ ಕುರ್ಚಿ ಎಸೆದು ಗಾಯ

ಕಡಲೂರು ಬಳಿ ಉಳುಂದರಪೇಟೆಯಲ್ಲಿ ಡೆಪ್ಯೂಟಿ ಮ್ಯಾಜಿಸ್ಟ್ರೇಟರೊಬ್ಬರು ಕಳುವಿನ ಸಂಬಂಧವಾಗಿ ಕಟ್ಟ[illegible] ಪದಯಾಚಿ ಎಂಬಾತನಿಗೆ ೯ ತಿಂಗಳು ಸಜಾ ವಿಧಿಸಲಾಗಿ, ಅವನು ತೀರ್ಪನ್ನು ಕೇಳುತ್ತಲೇ ರೇಗಿ, ಹತ್ತಿರವಿದ್ದ ಕುರ್ಚಿಯನ್ನು ಎತ್ತಿ ಎಸೆದನೆಂದೂ, ನ್ಯಾಯಾಧೀಶರಿಗೆ ಅದು ತಗಲಿ ರಕ್ತ ಸುರಿಯಿತೆಂದೂ ವರದಿಯಾಗಿದೆ

## ಭಾರತ-ದಕ್ಷಿಣ ಆಫ್ರಿಕಾ ಸಂಧಾನ ಸಮಿತಿ ಕಾರ್ಯ ನಡೆಸದು

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಬಗ್ಗೆ ನಡೆಯುತ್ತಿರುವ ಅವಹೇಳನವನ್ನು ಕುರಿತು ಭಾರತ ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಗಳ ನಡುವೆ ಮಾತುಕತೆ ನಡೆಸಲು ಏರ್ಪಾಡಾಗಿದ್ದ ವಿಶ್ವಸಂಸ್ಥೆಯ ಸಮಿತಿಯು ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲವೆಂದು ಸಂಯುಕ್ತ ರಾಷ್ಟ್ರ ಸಂಸ್ಥೆ ಕಛೇರಿಯು ಈಗ ಪ್ರಕಟಪಡಿಸಿರುವುದಾಗಿ ಗೊತ್ತಾಗಿದೆ

## ಕೃತಕ ಹೃದಯದ ನಿರ್ಮಾಣ

ಪಶ್ಚಿಮ ಜರ್ಮನಿಯ ಕಲೋನ್ ನಗರದ ಪ್ರದರ್ಶನಾಲಯದಲ್ಲಿ ಇದೇ ಮೊದಲಿಗೆ ಮನುಷ್ಯನ ಹೃದಯಕ್ಕಿಂತ ೫೦೦ ರಷ್ಟು ದೊಡ್ಡದಾಗಿರುವ ಹೃದಯವನ್ನು ತಯಾರಿಸಿ ಇಡಲಾಗಿದೆ ವಿದ್ಯುಚ್ಛಕ್ತಿಯ ಸಹಾಯದಿಂದ ಅದರ ಚಲನವಾಗುವುದ[illegible] ಹೃದಯ ಪಕ್ಕ[illegible] ಗಳ ನಡುವೆ ವಿಧಾನವು ಕಣ್ಣಿಗೆ ಕಾಣುವುದು

### "ನಾಗಚಂದ್ರ"

ಮಲ್ಯಂತ ಶಿರೋನಾಮೆಯುಳ್ಳ ಕನ್ನಡ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯ ಪತ್ರಿಕೆಯೊಂದನ್ನು ನಮಗೆ ಕಳುಹಿಸಲಾಗಿದೆ ಕನ್ನಡ ನಾಡಿನಲ್ಲಿ ಕಲಾಸೇವೆಗಾಗಿ ಈಗಾಗಲೇ ಅನೇಕ ಪತ್ರಿಕೆಗಳು ಹೊರಟಿರುವುದಾಗಿಯೂ, ಕನ್ನಡ ತಾಯಿಯ ಸೇವೆಗಾಗಿ ತಾವೂ ಸಹ ಸಂಕಲ್ಪಿಸಿರುವುದಾಗಿಯೂ ಸಂಪಾದಕರಾದ ಶ್ರೀ ಎಸ್ ನಾರಾಯಣರಾಜು ಮತ್ತು ಶ್ರೀ ಬಿ ಡಿ ಲಕ್ಷ್ಮೀನರಸು ತಿಳಿಸಿರುತ್ತಾರೆ ಹಲವಾರು ಕತೆಗಳೂ ಕೊಡಲ್ಪಟ್ಟಿವೆ ಕನ್ನಡ ಭಾಷಾಭಿಮಾನಿಗಳೂ ಕಲಾ ಪ್ರೇಮಿಗಳೂ ಅವಶ್ಯಕವಾಗಿ ಓದಬೇಕಾದ ಪತ್ರಿಕೆಯಾಗಿದೆ ಬೆಲೆ ೫ ಆಣೆ

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | ೧೦ ೨ ೦ | ೨೫ ೧೦ ೦ |
| ಎಳ್ಳು | ೬೯ ೧೪ ೦ | ೯೦ ೨ ೦ |
| ಹುರುಳಿ | ೪೫ ೮ ೦ | ೪೯ ೮ ೦ |
| ಹಲಸಂದೆ | ೫೨ ೦ ೦ | ೬೧ ೧೦ ೦ |
| ಬೆಲ್ಲ | ೮ ೦ ೦ | |
| ಕೆಂಗಿಸಕಾಯಿ ೧೧೦೦೦ಕ್ಕೆ | ೩೧೨ ೦ ೦ | ೨೮೬ ೦ ೦ |


## ಇದು ನಿಮಗೆ ಗೊತ್ತೇ ?

ಬಳಗಿನ ತಿಂಡಿಗೂ ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಪುಷ್ಟಿದಾಯಕ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪವಿತ್ರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಪ್ಪ ಮಹೇಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ ಮೈಸೂರು


## ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಹಣಗಳನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,

ಸಾಧ್ವಿ ಏಜೆಂಟರು, ಮೈಸೂರು


## ಮನೆ ಕ್ರಯಕ್ಕಿದೆ

ನಂ. ೭೭೭ ಹಳೇ ಬಂಡಿಕೇರಿ, ಕೃಷ್ಣರಾಜ ಮೊಹಲ್ಲಾ- ಮಹಡಿ ಮನೆ- ನಲ್ಲಿ, ದೀಪ ಇರತಕ್ಕ ಕೂಡಲೆ ಸ್ವಾಧೀನಕ್ಕೆ ಕೊಡಲಾಗುತ್ತೆ ವಿವರಗಳಿಗೆ—

ಜಯ ಆಂಡ್ ಕಂಪೆನಿ,

ಮನೆ, ಗದ್ದೆ, ಹಣಕಾಸಿನ ವ್ಯವಹಾರಗಳ ಏಜೆಂಟರು.

ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು ಫೋನ್ ನಂ 520

ರಿಜಿಸ್ಟರ್ ನಂ. 792 || ವಂದೇ ಮಾತರಂ || ಬಿಡಿ ಪತ್ರಿಕೆ ೮ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೩ ] MYSORE SUNDAY 20-9-1953 : ಮೈಸೂರು : ಭಾನುವಾರ ೨೦-೯-೧೯೫೩ [ ಸಂಚಿಕೆ ೪೮

# ವಿನೋಬಾ ಭಾವೆ ಮತ್ತಿತರರಿಗೆ ಅರ್ಚಕರಿಂದ ಪ್ರಹಾರ

## ಸಕ್ಕರೆ ಕಾರ್ಖಾನೆ ನೌಕರರಿಗೆ ಹೆಚ್ಚಿನ ತುಟ್ಟಿ ಭತ್ಯ

ಮಂಡ್ಯದ ಸಕ್ಕರೆ ಕಾರ್ಖಾನೆಯ ನೌಕರರಿಗೆ ಕೊಡಲಾಗುತ್ತಿರುವ ತುಟ್ಟಿ ಭತ್ಯವನ್ನು ೨೫ ರೂ ಗಳಿಂದ ೨೮ಕ್ಕೆ ಹೆಚ್ಚಿಸುವಂತೆ ಕೈಗಾರಿಕಾ ನ್ಯಾಯಸ್ಥಾನದವರು ತೀರ್ಪಿತ್ತಿರುವರು. ಈ ವ್ಯವಹಾರವು ಕೋರ್ಟಿನಲ್ಲಿ ೧|| ವರ್ಷ ಕಾಲ ನಡೆಯಿತು. ಕಂಪೆನಿಯವರು ಕೊಡುತ್ತಿರುವ ಪ್ರಾವಿಡೆಂಟ್ ನಿಧಿಯನ್ನು ತಲಾ ೧ ಆಣೆ ಯಿಂದ ೧ ಆಣೆಗೆ ಹೆಚ್ಚಿಸಲೂ ಆಜ್ಞೆಯಾಗಿದೆ

## ಅಂಚೆ ಕವರಿನ ಮೇಲೆ ಟೇಗಸಿಂಗ್ ಚಿತ್ರ

ಗಾಂಧಿ ಜಯಂತಿ ದಿನವಾದ ಅಕ್ಟೋಬರ್ ೨ ನೇ ತಾ|| ಅಂಚೆ ಇಲಾಖೆಯವರು ಕೊಡಲಿರುವ ಅಂಚೆ ಕವರುಗಳ ಮೇಲೆ ಹಿಮಾಲಯದ ಗೌರೀಶಂಕರವನ್ನೇರಿದ ಟೇನ್ಸಿಂಗ್‌ರವರ ಚಿತ್ರವನ್ನು ಮುದ್ರಿಸಲಾಗುವುದು. ಪರ್ವತದ ಮೇಲೆ ಟೇನ್ಸಿಂಗ್ ನಿಂತಿರುವ ಚಿತ್ರವು ಕವರಿನಲ್ಲಿರುವುದು. ಅದನ್ನು ಒಂದು ಆಣೆಗೆ ಇದೇ ೨೮ ನೇ ತಾ|| ನಿಂದ ಮಾರಲಾಗುವುದು

### ಬಳ್ಳಾರಿಗೆ ನ್ಯಾಯಾಧೀಶರ ವರ್ಗ

ಬಳ್ಳಾರಿ ಜಿಲ್ಲೆಗೆ ತೆಲಗು ನ್ಯಾಯಾಧೀಶರನ್ನು ಮೈಸೂರು ಹೈಕೋರ್ಟಿನವರು ವರ್ಗಾಯಿಸುತ್ತಾರೆ. ಅವರು ಅಕ್ಟೋಬರ್ ೧ ರಿಂದ ಅಧಿಕಾರ ವಹಿಸುವರು. ಹಾಸನದ ಸಬಾರ್ಡಿನೇಟ್ ಜಡ್ಜ್ ಶ್ರೀ ಎನ್ ಎಸ್. ಕೃಷ್ಣಮೂರ್ತಿ ಬಳ್ಳಾರಿ ಸಬ್ ಜಡ್ಜರಾಗಿ, ದಾವಣಗೆರೆ ಮುನ್ಸೀಫ್ ಶ್ರೀ ಎ ಪಂಚಾಕ್ಷರಯ್ಯ ಹೊಸಪೇಟೆಯ ಜಿಲ್ಲಾ ಮುನ್ಸೀಫ್ ಮತ್ತು ಸಬ್ ಡಿವಿಜನಲ್ ಮಾಜಿಸ್ಟ್ರೇಟರಾಗಿ, ಪರಶುರಾಮಪುರದ ಮುನ್ಸೀಫ್ ಮ್ಯಾಜಿಸ್ಟ್ರೇಟರಾದ ಶ್ರೀ ಬಿ ಗೋಪಾಲಯ್ಯನವರು ಬಳ್ಳಾರಿಯ ಅಡಿಷನಲ್ ಜಿಲ್ಲಾ ಮುನ್ಸೀಫರಾಗಿ, ದೊಡ್ಡಬಳ್ಳಾಪುರದ ಶ್ರೀ ಸಿ ಗೋವಿಂದರಾಜುರವರು ಹೊಸಪೇಟೆಯ ಅಡಿಷನಲ್ ಡಿಸ್ಟ್ರಿಕ್ಟ್ ಮುನ್ಸೀಫರಾಗಿ

### ನಗರ ಕಾಂಗ್ರೆಸ್ ಸಮಿತಿ ಚುನಾವಣಾ ವೇಳಾ ಪಟ್ಟಿ

ಮೈಸೂರು ನಗರ ಕಾಂಗ್ರೆಸ್ (ಜಿಲ್ಲಾ) ಸಮಿತಿಯ ಕಾರ್ಯಕಾರಿ ಮಂಡಳಿಯ ಚುನಾವಣೆಯ ಸಂಬಂಧವಾಗಿ ಚುನಾವಣಾಧಿಕಾರಿಗಳಾಗಿರುವ ಶ್ರೀ ಕೆ ಪುಟ್ಟಸ್ವಾಮಿಯವರು ವೇಳಾ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಅದರ ಪ್ರಕಾರ, ಈ ದಿನ ಓಟರು ಪಟ್ಟಿ ಪ್ರಕಟಣೆ, ೨೪ ಮತ್ತು ೨೫ ನೇ ತಾ|| ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೧ ರೊಳಗೆ ಉಮೇದುವಾರಿಕೆ ಅರ್ಜಿಗಳ ಸ್ವೀಕಾರ, ೨೫ ನೇ ತಾ|| ಮಧ್ಯಾಹ್ನ ೩ ಗಂಟೆಗೆ ಹೆಸರುಗಳ ಪ್ರಕಟಣೆ, ೨೬ರ ಬೆಳಗ್ಗೆ ೧೧ಕ್ಕೆ ಪರಿಶೀಲನೆ, ೨೭ನೇ ತಾ|| ಸಂಜೆ ೫ರ ವರೆಗೆ ವಾಪಸಾತಿ, ೨೮ ನೇ ತಾ|| ಸಂಜೆ ೬ಕ್ಕೆ ಅಭ್ಯರ್ಥಿಗಳಾಗಿ ಉಮೇದುವಾರರ ಹೆಸರುಗಳ ಪ್ರಕಟಣೆ, ೩೦ ನೇ ತಾ|| ಬೆಳಗ್ಗೆ ೯ ರಿಂದ ೧ ಗಂಟೆ ಮತ್ತು ಮಧ್ಯಾಹ್ನ ೨ ರಿಂದ ೫ರ ವರೆಗೆ ಮತದಾನ, ಅದೇ ಸಂಜೆ ೬||ಗೆ ಎಣಿಕೆ ಮತ್ತು ಫಲಿತಾಂಶಗಳ ಪ್ರಕಟಣೆ- ಈ ಕಾರ್ಯಕ್ರಮಗಳಿವೆ.

## ಆಜಾದ್ ಕಾಶ್ಮೀರದ ಆರ್ಥಿಕ ಮಂತ್ರಿಯ ವಜಾ

ಕಾಶ್ಮೀರದಲ್ಲಿ ಭಾಗದ ಸೀಸ್ ಫೈರ್ ಒಪ್ಪಂದವನ್ನು ಉಲ್ಲಂಘಿಸುವಂತೆ ಪ್ರೇರೇಪಿಸಿದರೆಂದು ಆಜಾದ್ ಕಾಶ್ಮೀರದ ಹಣಕಾಸಿನ ಮಂತ್ರಿ ಚೌಧುರಿ ಹಮಿದುಲ್ಲಾರವರನ್ನು ಅಲ್ಲಿನ ಸರ್ಕಾರದ ಮುಖಂಡರಾದ ಶೇಕ್ ಅಹಮುದ್‌ರವರು ವಜಾ ಮಾಡಿರುತ್ತಾರೆ. ಮಂತ್ರಿಮಂಡಲದ ಸಂಯುಕ್ತ ಜವಾಬ್ದಾರಿಯನ್ನು ಅವರು ನಿರ್ಲಕ್ಷಿಸಿದರೆಂದು ಆಪಾದಿಸಲಾಗಿದೆ

### ಮುಖರ್ಜಿ ನಿಧನದ ಬಗ್ಗೆ ತನಿಖೆಯಿಲ್ಲ

ಶ್ರೀನಗರದಲ್ಲಿ ಬಂಧನದಲ್ಲಿಡಲ್ಪಟ್ಟು, ಮೃತರಾದ ಭಾರತೀಯ ಜನಸಂಘದ ಅಧ್ಯಕ್ಷ ಡಾ|| ಶ್ಯಾಮಪ್ರಸಾದ ಮುಖರ್ಜಿಯವರ ಮರಣದ ಬಗ್ಗೆ ತನಿಖೆ ನಡೆಸಬೇಕೆಂಬ ಸಲಹೆಯನ್ನು ಕೇಂದ್ರ ಗೃಹ ಮಂತ್ರಿಯವರು ನಿರಾಕರಿಸಿರುತ್ತಾರೆ. ಮುಖರ್ಜಿಯವರ ದೇಹಾಲಸ್ಯದ ವಿಷಯವು ಎಲ್ಲರಿಗೂ ತಿಳಿದ ಅಂಶವೇ ಆಗಿದ್ದಿತೆಂದು ಅವರು ಹೇಳಿರುವರು

### ಖೈದಿಗಳನ್ನೊಪ್ಪಿಸುವುದಿಲ್ಲವೆಂದು ದಕ್ಷಿಣ ಕೊರಿಯಾ ಬೆದರಿಕೆ

ಕೊರಿಯಾ ಕಮ್ಯೂನಿಸ್ಟರು ಒತ್ತಾಯ ಮತ್ತು ಬೆದರಿಕೆಯ ನೀತಿಯನ್ನು ಬಿಡದಿದ್ದರೆ, ವಿಶ್ವ ಸಂಸ್ಥೆಯವರ ವಶದಲ್ಲಿ ಇನ್ನೂ ಇರುವ ೩,೬೦೦ ಖೈದಿಗಳನ್ನು ಭಾರತದ ಸೈನ್ಯಗಳಿಗೆ ಒಪ್ಪಿಸುವುದಿಲ್ಲವೆಂದು ದಕ್ಷಿಣ ಕೊರಿಯಾ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ. ಬಂಧನದಲ್ಲಿರುವ ಖೈದಿಗಳ ಹೆಸರುಗಳನ್ನು ಕಮ್ಯೂನಿಸ್ಟರು ತಿಳಿದುಕೊಂಡು ಅವರು ತಮ್ಮ ದೇಶಕ್ಕೆ ಹಿಂತಿರುಗದಿದ್ದರೆ ಅವರ ಸಂಸಾರವನ್ನು ಸಂಹಾರ ಮಾಡುವುದಾಗಿ ಹೆದರಿಸುತ್ತಿರುವರೆಂದ ಅವರು ತಿಳಿಸಿರುವರು

### ಶಿಶುವೊಂದರ ಕೊಲೆಗಾಗಿ ೪೪ ಜನ ಆಫ್ರಿಕದವರಿಗೆ ಗಲ್ಲು

ಕಳೆದ ವರ್ಷ ಮಾರ್ಚಿಯಲ್ಲಿ ಕೆನ್ಯಾದ ಲಾರಿ ಎಂಬಲ್ಲಿ ಕಿಕುಯು ಆಫ್ರಿಕನ್ ಜನರು ನಡೆಸಿದ ಸಂಹಾರ ಕಾರ್ಯದ ಅಂಗವಾಗಿ ಒಂದು ವರ್ಷದ ಮಗುವನ್ನು ಕೊಲೆ ಮಾಡಿದರೆಂದು ೪೪ ಜನರಿಗೆ ಘಾಸಿ ಶಿಕ್ಷೆಯನ್ನು ಅಲ್ಲಿನ ಸುಪ್ರೀಂ ಕೋರ್ಟಿನವರು ವಿಧಿಸಿರುತ್ತಾರೆ. ಹಿಂದೆ ಒಬ್ಬ ಹೆಂಗಸಿನ ಕೊಲೆಗಾಗಿ ೧೭ ಜನರಿಗೆ ಗಲ್ಲು ಶಿಕ್ಷೆ ವಿಧಿಸಿದ್ದಿತು. ಕಿಕುಯುಗಳ ದಂಗೆಯನ್ನು ಅಡಗಿಸಲು ಇದುವರೆಗೆ ೧೫೦ ಮಂದಿಗೆ ಗಲ್ಲು ಶಿಕ್ಷೆ ಕೊಡಲಾಗಿದೆ

### ನಿಧನ

ರಾಜಧಾನಿಯ ಕಡ್ಡಾಡಿಪುರ ಅಗ್ರಹಾರದ ಬಕ್ಷಿ ಬಸಪ್ಪಾಜಿಯವರ ಛಾಯದಲ್ಲಿರುವ ವರ್ತಕರೂ ಮತ್ತು ಕಮಿಷನ್ ಏಜೆಂಟರೂ ಆದ ಶ್ರೀ ಚಿಕ್ಕೇರಿ ನರಸಿಂಹಯ್ಯನವರ ಪತ್ನಿ ಶ್ರೀಮತಿ ನಾಗಮ್ಮನವರು ಮೊನ್ನೆ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಬಹು ದಿನಗಳಿಂದಲೂ ರೋಗ ಪೀಡಿತರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧುವರ್ಗದವರಿಗೆ ನಮ್ಮ ಅನುಕಂಪವನ್ನು ಸೂಚಿಸುತ್ತೇವೆ

## ವಿನೋಬಾಭಾವೆ ಮತ್ತು ೩ ಜನ ಹರಿಜನರಿಗೆ ಪಂಡಾಗಳ ಪೆಟ್ಟು

### ದೇವಾಲಯ ಪ್ರವೇಶದ ಸಂಬಂಧದಲ್ಲಿ ಘಟನೆ

ಪಾಟ್ನಾ, ಬಿಹಾರ ದೇವಘಡದಲ್ಲಿರುವ ಶಿವನ ವೈದ್ಯನಾಥ ದೇವಾಲಯಕ್ಕೆ ಅನೇಕ ಹರಿಜನರೊಡನೆ ನೆನ್ನೆ ಪ್ರವೇಶಿಸಲು ಆಚಾರ್ಯ ವಿನೋಬಾ ಭಾವೆಯವರು ಹೋದಾಗ ದೇವಸ್ಥಾನದ ಮೆಟ್ಟಿಲುಗಳಲ್ಲಿ ಗಡಿಯ ನೂರಾರು ಜನ ಮಂದಿರ ಪೂಜಾರಿಗಳಾದ ಪಂಡಾಗಳು, ವಿನೋಬಾ ಮತ್ತು ಇತರ ಪರಿವಾರದ ಮೇಲೆ ಬಿದ್ದು ಹೊಡೆದರೆಂದೂ, ಇದರಿಂದ ವಿನೋಬಾಭಾವೆ ಮತ್ತು ಇತರ ಮೂವರಿಗೂ ಗಾಯಗಳಾದುವೆಂದೂ ವರದಿಯಾಗಿದೆ. ಪಂಡಾಗಳು ಮುಷ್ಟಿಗಳಿಂದಲೂ ಲಾಠಿ ಮತ್ತು ಗದೆಗಳನ್ನು ಉಪಯೋಗಿಸಿಯೂ ಹೊಡೆದರೆಂದು ಹೇಳಲಾಗಿದೆ. ಪೆಟ್ಟು ತಿಂದ ಒಬ್ಬನಿಗೆ ಪ್ರಜ್ಞೆ ತಪ್ಪಿತೆಂದು ಗೊತ್ತಾಗಿದೆ. ವಿನೋಬಾರವರ ಪರಿವಾರದಲ್ಲಿ ಮೂವರು ಮಹಿಳೆಯರು ಇದ್ದರು. ದೇವರ ದರ್ಶನ ಪಡೆಯಲು ವಿನೋಬಾಜಿಯವರು ದೇವಸ್ಥಾನಕ್ಕೆ ಹೋಗಲೆಳಸಿದ್ದರು

### ೨|| ವರ್ಷದ ಹೆಣ್ಣು ಮಗು ಗಂಡಾಯಿತು

ಅಹಮದಾಬಾದು ಬಳಿ ರಾಯಪುರದಲ್ಲಿ ಹರಿಜನ ಮತಕ್ಕೆ ಸೇರಿದ ೨|| ವರ್ಷದ ಒಂದು ಹೆಣ್ಣು ಮಗುವು ಗಂಡಾಗಿ ಪರಿವರ್ತಿತವಾಗಿರುವುದೆಂದು ವರದಿಯಾಗಿದೆ. ಈ ವೈಚಿತ್ರ್ಯವನ್ನು ಅನೇಕರು ಬಂದು ನೋಡಿಕೊಂಡು ಹೋಗುತ್ತಿರುವರು.

### ನಿಟ್ಟೂರು ಮತ್ತು ಸಂಪಿಗೆ ಮಧ್ಯೆ ಗೂಡ್ಸ್ ಗಾಡಿ ಕಂಬಿ ತಪ್ಪಿತು

ಬೆಂಗಳೂರಿನಿಂದ ಅರಸೀಕೆರೆಗೆ ನೆನ್ನೆ ರಾತ್ರಿ ಹೊರಟ ಗೂಡ್ಸ್ ರೈಲೊಂದು ನಿಟ್ಟೂರು ಮತ್ತು ಸಂಪಿಗೆ ಮಧ್ಯೆ ನಡುವೆ ಕಂಬಿ ತಪ್ಪಿದುದಾಗಿ ವರದಿಯಾಗಿದೆ. ಅನೇಕ ವ್ಯಾಗನ್ನು ಚಕ್ರಗಳು ರೈಲು ಕಂಬಿಯಿಂದ ಕಳಚಿಕೊಂಡವು. ಆದಕಾರಣ ಬೆಂಗಳೂರು ಮತ್ತು ಪೂನಾದ ಎರಡು ಮೇಲ್ ರೈಲುಗಳು ಮೈಸೂರು ಮೂಲಕ ಓಡಾಡುವಂತೆ ವ್ಯವಸ್ಥೆಯಾಗಿದೆ. ಕಂಬಿ ತಪ್ಪಿದ ಭಾಗದಲ್ಲಿ ಭಾರಿ ಮಳೆ ಬಂದಿತ್ತು.

### ಚೀಣದ ಹಣಕಾಸಿನ ಮಂತ್ರಿಯ ವಜಾ

ಕಮ್ಯೂನಿಸ್ಟ್ ಚೀಣಾದ ಹಣಕಾಸಿನ ಮಂತ್ರಿ ಪೊ ಇಪೊ ಮತ್ತು ಚೀಣಾ ಆರ್ಥಿಕ ಮಂಡಲಿಯ ಪ್ರಧಾನ ಕಾರ್ಯದರ್ಶಿ ಲಿ ವೈ ಹಾನ್‌ರವರನ್ನು ವಜಾ ಮಾಡಲಾಗಿರುವುದೆಂದೂ, ಅಲ್ಲಿನ ಮಂತ್ರಿಮಂಡಲದಲ್ಲಿ ಭಾರಿ ಬದಲಾವಣೆಯಾಗಿರುವುದೆಂದೂ ವರದಿಯಾಗಿದೆ. ಹಣಕಾಸಿನ ಮಂತ್ರಿಯ ಸ್ಥಾನಕ್ಕೆ ಟೆಂಗ್ ಷ್ಯಾಯೊ ಪಿಂಗ್‌ರವರನ್ನು ನೇಮಿಸಲಾಗಿದೆ

### ವಿಶ್ವಸಂಸ್ಥೆ ಕಛೇರಿಯಲ್ಲಿ ಗಾಂಧೀಜಿಯವರ ಚಿತ್ರ

ವಿಶ್ವ ಸಂಸ್ಥೆಯ ಅಧ್ಯಕ್ಷಿಣಿಯವರ ಕೊಠಡಿಯಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರಗಳನ್ನು ವಿಜಯಲಕ್ಷ್ಮಿ ಪಂಡಿತರು ಕಾಣುವಂತೆ ಬುದ್ಧಿನಿಂದ ಹಾಕಿಸಿರುತ್ತಾರೆ

## ರಾಜಪ್ರಮುಖ ಪದ್ಧತಿ ರದ್ದಾಗಬೇಕೆಂದು ಸಲಹೆ

ದೆಹಲಿಯಲ್ಲಿ ಸೇರಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ 'ಬಿ' ಸಂಸ್ಥಾನಗಳಲ್ಲಿ ರಾಜಪ್ರಮುಖರ ಆಳ್ವಿಕೆಯನ್ನು ಪದ್ಧತಿಯ ಸ್ಥಿರವ ಹಲವು ನ್ಯೂನತೆಗಳ ಬಗ್ಗೆ ಬಂದಿರುವ ದೂರುಗಳನ್ನು ಪರಿಶೀಲಿಸಲಾಯಿತೆಂದು ಹೇಳಲಾಗಿದೆ. ಹಲವು ರಾಜಪ್ರಮುಖರುಗಳು ರಾಜಕೀಯ ಕಾರ್ಯ ಚಟುವಟಿಕೆಗಳಲ್ಲಿ ಪಾತ್ರವಹಿಸಿದ್ದರೆಂದು ಹೇಳಲಾಗಿದೆ. ಆದಕಾರಣ ರಾಜಪ್ರಮುಖರನ್ನು ತೆಗೆದು ಹಾಕಬೇಕೆಂದು ಕೋರಲಾಗಿದ್ದಿತೆಂದೂ, ಆದರೆ ಈ ವಿಷಯವಾಗಿ ಬರುವ ರಾಜ್ಯಾಂಗ ತೊಡಕುಗಳು ಅನೇಕವಿರುವುದರಿಂದ ಈ ವಿಷಯವನ್ನು ಪುನಃ ಪರಿಶೀಲಿಸಲಾಗುವುದೆಂದೂ ಗೊತ್ತಾಗಿದೆ

### ತಿರುವಾಂಕೂರಿನಲ್ಲಿ ವರ್ಷಾಂತ್ಯ ಪುನಃ ಚುನಾವಣೆಯೇ ?

ನಾಳಿದ್ದು ಸೇರುವ ತಿರುವಾಂಕೂರು-ಕೊಚ್ಚಿ ಶಾಸನ ಸಭೆಯಲ್ಲಿ ಈಗಿನ ಮಂತ್ರಿ ಮಂಡಲದ ಬಗ್ಗೆ ಅವಿಶ್ವಾಸ ಸೂಚನೆ ಮಾಡುವ ನಿರ್ಣಯವು ಬಿದ್ದು ಹೋದರೆ, ಅಲ್ಲಿನ ಕಾಂಗ್ರೆಸ್ ಪಕ್ಷದವರು ಮತದಾರರ ಬೆಂಬಲವನ್ನು ಕೇಳಲು ನಿಶ್ಚಯಿಸುವುದಾಗಿಯೂ, ಸಾರ್ವತ್ರಿಕ ಚುನಾವಣೆಯು ಅಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆಯಬಹುದೆಂದೂ ತಿಳಿದು ಬಂದಿದೆ. ಮುಖ್ಯಮಂತ್ರಿಯವರಿಗೆ ಸಭೆಯಲ್ಲಿ ಬೆಂಬಲ ದೊರೆಯದಿದ್ದರೆ, ಸಭೆಯನ್ನು ರದ್ದುಗೊಳಿಸಲು ರಾಜಪ್ರಮುಖರನ್ನು ಅವರು ಕೇಳುವುದು ನ್ಯಾಯ ಸಮ್ಮತವಾಗಿರುವುದೆಂದು ಅಲ್ಲಿನ ಹಣಕಾಸಿನ ಮಂತ್ರಿ ಗೋವಿಂದ ಮೆನನ್ನರು ಹೇಳಿರುವರು.

### ಮೈಸೂರು ರೋವರ್ಸ್‌ಗೆ ಕೈಟ್ಟದಲ್ಲಿ ಪರಾಜಯ

ಬಲೂಚಿಸ್ತಾನದ ರಾಜಧಾನಿ ಕ್ವೆಟ್ಟಾದಲ್ಲಿ ಅಖಿಲ ಪಾಕಿಸ್ತಾನ ಫುಟ್‌ಬಾಲ್ ಪಂದ್ಯವು ಮೊನ್ನೆ ನಡೆದು ಮೈಸೂರು ರೋವರ್ಸ್ ಟೀಮು ಕರಾಚಿ ಪೋರ್ಟ್ ಟ್ರಸ್ಟಿನ ಟೀಮು ೩-೧ ಗೋಲುಗಳಿಂದ ಸೋಲಿಸಿದರು.

### ಜೂಜಾಟಗಾರರಿಗೆ ಪೊಲೀಸರ ಬಂಧನ

ರಾಜಧಾನಿಯ ವಿವೇಕಾನಂದ ರಸ್ತೆಯಲ್ಲಿರುವ ಶೇಷಾದ್ರಿ ಭವನದ ಹಿಂಭಾಗದ ಕಾಂಪೌಂಡಿನಲ್ಲಿ ಈ ಮಹಾತ್ಮ ಜೂಜಾಡುತ್ತಿದ್ದರೆಂದು ಕೃಷ್ಣಪ್ಪ ಮತ್ತು ಇತರ ಮೂವರನ್ನು ದೇವರಾಜ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಅವರ ಬಳಿ ೫ ಚಿಲ್ಲರೆ ರೂಪಾಯಿಗಳು ಸಿಕ್ಕಿದುವೆಂದು ಹೇಳಲಾಗಿದೆ

### ಗಣಪತಿ ಮಂಗಳಾರತಿ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಹಿಂದಿ ಪ್ರಚಾರ ಸಭೆ ಕೇಂದ್ರದಲ್ಲಿ ನೆನ್ನೆ ವಿದ್ಯಾರ್ಥಿಗಳು ಶ್ರೀ ವಿದ್ಯಾಗಣಪತಿ ಮಂಗಳಾರತಿಯನ್ನು ನಡೆಸಿದರು. ಶ್ರೀ ಮತಿಗಳಾದ ಎಂ ಎಗ ಮಂಜುಳ, ರಾಜೇಶ್ವರಿ, ಎಸ್ ಆರ್ ಪದ್ಮರವರಿಂದ ಸುಶ್ರಾವ್ಯ ಗಾಯನವೂ, ಶ್ರೀ ಎಸ್ ವಿ ವೆಂಕಟಾಚಲರವರಿಂದ ಕನ್ನಡ ಕವಿತೆ ಮತ್ತು ದಿನಕರದ ಸಾಹಿತ್ಯದ ಪಠಣವೂ ನಡೆಯಿತು

# ವಾರ ಭವಿಷ್ಯ

ತಾ|| ೨೦-೯-೫೩ ರಿಂದ ೨೬-೯-೫೩ ರವರೆಗೆ

ಮೇಷ—ಆರೋಗ್ಯ ಉತ್ತಮ, ಖರ್ಚು ಹೆಚ್ಚು, ನೌಕರಿಯಲ್ಲಿ ತೊಂದರೆ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಕುಟುಂಬದ ಬೇಸಾಯ ಕ್ಕೆ ... ಖರ್ಚು ಚಿಂತೆ

ವೃಷಭ ಆರೋಗ್ಯ ಉತ್ತಮ, ಹೊಸ ಉದ್ಯಮಗಳಲ್ಲಿ ಯಶಸ್ಸು ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ ಸಂಭವ ತಾ|| ೨೩, ೨೪ ಧನಾಗಮ ಮನರಂಜನೆ

ಮಿಥುನ— ಆರೋಗ್ಯ ಉತ್ತಮ, ಕೈಗೊಂಡ ಕಾರ್ಯಗಳಲ್ಲಿ ಜಯ, ನೌಕರಿಯಲ್ಲಿ ಉನ್ನತಿ, ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು ತಾ|| ೨೧, ೨೨ ಮಿತ್ರರ ಭೇಟಿ, ಖರ್ಚು

ಕರ್ಕಾಟಕ — ಆರೋಗ್ಯ ಸಾಧಾರಣ, ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು, ವ್ಯವಹಾರಗಳಲ್ಲಿ ಪ್ರಗತಿ, ತಾ|| ೨೩ ೨೪ ಖರ್ಚು ಹೆಚ್ಚು, ಚಿಂತೆ

ಸಿಂಹ — ಆರೋಗ್ಯ ಚೆನ್ನಾಗಿರಲಾರದು ವ್ಯಾಪಾರ, ವ್ಯವಹಾರಗಳಲ್ಲಿ ತೊಂದರೆ, ಹಣಕಾಸಿನ ಪರಿಸ್ಥಿತಿಯಲ್ಲಿ ಏರುಪೇರು ತಾ|| ೨೧, ೨೫ ಧನಾಗಮ, ಚಿಂತಾನಾಶ

ಕನ್ಯಾ — ಆರೋಗ್ಯ ಉತ್ತಮ ವಿರಲಾರದು, ಕೈಗೊಂಡ ಕೆಲಸಗಳು ವಿಳಂಬದಲ್ಲಿ ... ತಾ|| ೨೩, ೨೪ ಪ್ರವಾಸ ಸಂಭವ

ತುಲಾ—ಆರೋಗ್ಯ ಉತ್ತಮ ... ಕಲಹಗಳು ಹೆಚ್ಚು ಸಹವರ್ತಿಗಳ ಸಂ... ವ್ಯಾಪಾರಗಳಿಗೆ ಉತ್ತಮ, ತಾ|| ೨೪, ೨೫ ಧನಹಾನಿ, ಚಿಂತೆ

ವೃಶ್ಚಿಕ — ಆರೋಗ್ಯ ಚೆನ್ನಾಗಿರುವ ... ಕೈಗೊಂಡ ಕಾರ್ಯ ಸಿದ್ಧಿ, ಹೊಸ ಉದ್ಯಮಗಳ ... ನೌಕರಿಯಲ್ಲಿ ಜವಾಬ್ದಾರಿ ... ೨೩, ೨೫ ಧನಾಗಮ ಮನರಂಜನೆ

ಧನು ಆರೋಗ್ಯ ಉತ್ತಮ ವ್ಯವಹಾರಗಳಲ್ಲಿ ... , ನೌಕರಿಯಲ್ಲಿ ಉನ್ನತಿ, ಆರ್ಥಿಕ ಸ್ಥಿತಿ ... ತಾ|| ೨೪ ೨೫ ಮಿತ್ರರ ಭೇಟಿ

ಮಕರ ಆರೋಗ್ಯ ಚೆನ್ನಾಗಿರಲಾರದು ಕೈಗೊಂಡ ಕಾರ್ಯ ವಿಫಲ, ಹಣಕಾಸಿನ ವಿಕ್ಕಟ್ಟು, ನೌಕರಿಯಲ್ಲಿ ತೊಂದರೆ ತಾ|| ೨೩, ೨೫ ಜೋಗ್ಯ ಭೋಜನ, ಮನರಂಜನೆ

ಕುಂಭ — ಆರೋಗ್ಯ ಉತ್ತಮ, ಶತ್ರುಗಳ ಪರಾಭವ, ವ್ಯವಹಾರಗಳಲ್ಲಿ ಜಯ, ಸಹವರ್ತಿಗಳ ಸಹಕಾರ, ತಾ|| ೨೧, ೨೫ ಅಲಸ್ಯ ಸಂಭವ

ಮೀನ — ಆರೋಗ್ಯ ಸಾಧಾರಣ, ವ್ಯವಹಾರಗಳಲ್ಲಿ ಎಚ್ಚರಿಕೆಯಿರಲಿ, ಸೇವಕರಿಂದ ಮೋಸದ ಸಂಭವ, ಧನಾಗಮಕ್ಕಿಂತ ಖರ್ಚು ಹೆಚ್ಚು, ತಾ|| ೨೪, ೨೫ ಅಸ್ವಸ್ಥ ಆಗಮನ, ಚಿಂತಾನಾಶ

## ವಿಜಯಲಕ್ಷ್ಮಿ ಪಂಡಿತರ ಹೊಸ ವೇಷ ಭೂಷಣ

ವಿಶ್ವಸಂಸ್ಥೆ ಅಧ್ಯಕ್ಷಿಣಿಯಾಗಿರುವ ವಿಜಯಲಕ್ಷ್ಮಿ ಪಂಡಿತರ ಸಾಮಾನ್ಯವಾಗಿ ತೊಡುತ್ತಿದ್ದ ಸೀರೆಯನ್ನು ಬಿಟ್ಟು, ಈಗ ಬಿಳಿಯ ಕುಪ್ಪಸ ಮೇಲೆ ಅಚ್ಚುಕಟ್ಟಾಗಿ ಹೊಲೆದಿರುವ ಸೂಟನ್ನು ಧರಿಸುವರು

## ದಕ್ಷಿಣ ಆಫ್ರಿಕದಲ್ಲಿ ಹೆಚ್ಚು ಛಡಿ ಏಟಿನ ಶಿಕ್ಷೆಗಳು

ದಕ್ಷಿಣ ಆಫ್ರಿಕದಲ್ಲಿ ಛಡಿ ಏಟಿನ ಶಿಕ್ಷೆಗಳು ಕಳೆದ ೫೧-೫೨ನೇ ಸಾಲಿನಲ್ಲಿ ದ್ವಿಗುಣವಾಗಿರುವುದಲ್ಲದೆ, ೫೧ರಲ್ಲಿ ೨೩ ಗಾಬು ಏಟುಗಳನ್ನು, ... ೫೦,೦೨೨ ಏಟುಗಳನ್ನು ಕೊಡಲಾಯಿತು ... ವರದಿಯಾಗಿದೆ.

### ಸಂಗೀತ ಕಛೇರಿ

ರಾಜಧಾನಿಯ ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ ವಿ ರಾಮರತ್ನಂ ಮತ್ತು ಪಾರ್ಟಿಯವರ ಸಂಗೀತ ಕಛೇರಿಯು, ಮಾಜಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು ಸರ್ವರಿಗೂ ಆಹ್ವಾನವಿದೆ

## ಕೊರಿಯಾ ಸಮ್ಮೇಳನಕ್ಕೆ ಬರಲು ಕಮ್ಯೂನಿಸ್ಟರಿಗೆ ಪುನಃ ಆಹ್ವಾನ

ಕೊರಿಯಾ ರಾಜಕೀಯ ಸಮ್ಮೇಳನವನ್ನು ನಡೆಸಬಹುದಾದ ದಿನ ಮತ್ತು ಸ್ಥಳ ಇವುಗಳ ಬಗ್ಗೆ ಸಮ್ಮತಿಯನ್ನು ಸೂಚಿಸಬೇಕೆಂದು ವಿಶ್ವಸಂಸ್ಥೆ ಪರವಾಗಿ ಯುದ್ಧ ಭಾಗಿಗಳಾಗಿರುವ ೧೬ ರಾಷ್ಟ್ರಗಳು ಕಮ್ಯೂನಿಸ್ಟರನ್ನು ಕೋರಿರುತ್ತವೆ ಭಾರತ ... ತಟಸ್ಥ ರಾಷ್ಟ್ರಗಳು ಸಮ್ಮೇಳನದಲ್ಲಿ ಭಾಗವಹಿಸುವಂತೆ ಅವಕಾಶವಾಗಬೇಕೆಂದು ಚೀನಾ ಮಾಡಿರುವ ಸೂಚನೆಯನ್ನು ಆ ರಾಷ್ಟ್ರಗಳು ನಿರಾಕರಿಸಿ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಲು ಕಮ್ಯೂನಿಸ್ಟರಿ ಇಷ್ಟವಿರುವುದೇ ... ದನ್ನು ತಿಳಿಸಬೇಕೆಂದು ಕೋರಿರುತ್ತವೆ

## ಯುಗೊಸ್ಲೇವಿಯದ ಮಾಜಿ ದೊರೆ ದಾಂಪತ್ಯ ವಿಚ್ಛೇದನ

ಯುಗೊಸ್ಲೇವಿಯದ ಮಾಜಿ ದೊರೆ ಪೀಟರ್‌ರವರ ತಮ್ಮ ರಾಣಿ ಅಲೆಕ್ಸಾಂಡ್ರಾರವರೊಡನೆ ವಿವಾಹ ವಿಚ್ಛೇದನ ಮಾಡಿಕೊಳ್ಳಲು ಆಲೋಚಿಸುತ್ತಿರುವರೆಂದು ವರದಿಯಾಗಿದೆ ... ರ ಈಗ ಅತ್ಯ ... ಸ್ಥಿತಿ ... ಸ್ಥಿರಕರಾಗಿರುವರು ಅದಕ್ಕೆ ಅವರೀರ್ವರು ... ಲಕ್ಷ ... ಗಳನ್ನು ಕೊಟ್ಟು ಕೊಳ್ಳಲಿರುವುದಾಗಿ ವರದಿಯಾಗಿದೆ

## ಬಡತನದ ಬೇಗೆಯಿಂದ ಮಾಜಿ ಈಜಿಪ್ಟ್ ರಾಣಿ ಮನೆ ಬಾಡಿಗೆಗೆ

ಕೈರೋವಿನಲ್ಲಿರುವ ಈಜಿಪ್ಟಿನ ಮಾಜಿ ರಾಣಿ ನರಿಮನ್ನರು ಬಡತನದ ಕಷ್ಟವನ್ನು ತಾಳಲಾರದೆ ತಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ತಮ್ಮ ಗಂಡ ಫರೂಕರಿಂದ ಅಳಿಯ ... ತಿಂಗಳಿಗೆ ೩|| ಸಾವಿರ ಪೌಂಡಿನ ಜೀವನಾಂಶವನ್ನು ಕೇಳಲಿರುವರು ತಾವು ಹಡೆದ ಫೌಡ್ ರಾಜಕುಮಾರನನ್ನು ತಮ್ಮ ವಶಕ್ಕೆ ಮಾಜಿ ದೊರೆಯು ಕೊಡದಿರುವುದರಿಂದ ಆಕೆಯು ದಾಂಪತ್ಯ ವಿಚ್ಛೇದನ ಮಾಡಿಕೊಳ್ಳಲು ಅರ್ಜಿ ದಾಖಲ್ಮಾಡಿರುವರು

## ಲೂಟಿ, ಬೆಂಕಿ ಪ್ರಕರಣದಲ್ಲಿ ಸುಬೇದಾರರಿಗೆ ಮರಣ ದಂಡನೆ

ಹೈದರಾಬಾದಿನಲ್ಲಿ ಪೋಲೀಸು ಕಾರ್ಯಾಚರಣೆ ನಡೆದ ಸಂಬಂಧವಾಗಿ ವಾರಂಗಲ್ಲಿನ ಸುಬೇದಾರ್ ಹಬೀಬ ಮಹಮದ್ ಎಂಬಾತನ ಇತ್ತೆಹಾದ್ ಮುಸಲ್ಮೀನ್ ಸಂಸ್ಥೆಗೆ ಸಹಾಯ ಮಾಡಲುದ್ದೇಶಿಸಿ, ಹಳ್ಳಿಗರ ಮೇಲೆ ದೌರ್ಜನ್ಯ ನಡೆಸಿ, ಗುಂಡು ಹಾರಿಸಲು ಆಜ್ಞೆ ಮಾಡಿ, ಗ್ರಾಮಸ್ಥರ ಲೂಟಿ, ಬೆಂಕಿ ಮತ್ತು ೮ ಜನರ ಕೊಲೆ ಮಾಡಲು ಕಾರಣನಾದುದಕ್ಕಾಗಿ ಅವನಿಗೆ ವಿಧಿಸಲಾದ ಮರಣ ದಂಡನೆಯನ್ನು ಸುಪ್ರೀಂ ಕೋರ್ಟಿನವರು ಖಾಯಂಗೊಳಿಸಿರುವರು

### ಶ್ರೀ ಅನಂತ ಸ್ವಾಮಿಯವರ ಜನ್ಮೋತ್ಸವ

ರಾಜಧಾನಿಯ ಪಡುವಾರಹಳ್ಳಿ ಬಳಿ ಜಯಲಕ್ಷ್ಮೀಪುರದಲ್ಲಿರುವ ಶ್ರೀ ಅನಂತಾಶ್ರಮದಲ್ಲಿ ... ದಿನದಿಂದ ೨೨ನೇ ತಾ|| ವರೆಗೆ ಶ್ರೀ ಅನಂತ ಸ್ವಾಮಿಯವರ ಜನ್ಮದಿನೋತ್ಸವವನ್ನು ನೆರವೇರಿಸಲಾಗುವುದು. ಪ್ರತಿದಿನ ಬೆಳಗ್ಗೆ ೭ ರಿಂದ ... ವರೆಗೆ ಅಖಂಡ ಭಜನೆ, ವಸ್ತ್ರ ಗೀತಾ ಪಾರಾಯಣ, ಆ ಸಂಜೆ ೫ ರಿಂದ ೬|| ವರೆಗೆ ಶ್ರೀ ... ಸ್ವಾಮಿಯವರ ... ನೆರವೇರಿಸಲಾಗುವುದು ... ಮತ್ತು ... ದಿಂದ ಸಂಗೀತ ಇವೂ ನಡೆಯುವುವು. ನಾಳೆ ಬೆಳಗ್ಗೆ ಅಭಿಷೇಕ, ಪಾರಾಯಣ, ವಿದ್ವಾನ್ ... ಯ ನಾಗಸ್ವರ, ಮಂಗಳಾರತಿ, ಸಂಜೆ ... ಶ್ರೀ ... ಭಾರತಿ ಸ್ವಾಮಿಯವರಿಂದ ಹರಿಕಥೆ ಏರ್ಪಾಡಾಗಿವೆ

## ಮಾರ್ಕೆಟ್ಟಿನ ಸುಧಾರಣೆ ಅಗತ್ಯ

ಸ್ವಂತ ವರದಿಗಾರರಿಂದ] ಶ್ರೀರಂಗಪಟ್ಟಣ ...

ಶ್ರೀರಂಗಪಟ್ಟಣದಲ್ಲಿ ತರಕಾರಿ ಹಣ್ಣು ವಗೈರೆ ಸಾಮಾನುಗಳನ್ನು ಮಾರುತ್ತಲಿರುವ ಮಾರ್ಕೆಟ್ಟಿನ ಸ್ಥಳವು ಸುವ್ಯವಸ್ಥೆಯಿಂದ ಇಲ್ಲದಿರುವುದು ... ಮಾರಾಟಗಾರರಿಗೆ ಪೌರಸಭೆಯವರು ಯಾವ ವಿಧವಾದ ... ಕರ್ಯವನ್ನೂ ಕಲ್ಪಿಸಿ ... ಮಳೆಗಾಲದಲ್ಲಿಯೂ ... ಕಾಲದಲ್ಲಿಯೂ ಸಹ ವ್ಯಾಪಾರ ಮಾಡತಕ್ಕವರಿಗೆ ... ಅನಾನುಕೂಲವಾಗುತ್ತಿದೆ. ಮಾರ್ಕೆಟ್ಟು ಈಗಿರುವ ಸ್ಥಳದಲ್ಲಿಯೇ ಪೌರಸಭೆಯವರು ಸರಿಯಾದ ಸ್ಟಾಲುಗಳನ್ನು ಕಟ್ಟಿಸಿ, ವ್ಯಾಪಾರಸ್ಥರಿಂದ ಬಾಡಿಗೆ ವಸೂಲು ಮಾಡಿಕೊಂಡು ತಕ್ಕ ಅನುಕೂಲಗಳನ್ನು ಏರ್ಪಡಿಸಿದಲ್ಲಿ ಪೌರಸಭೆಗೆ ಹೆಚ್ಚಿನ ಆದಾಯವೂ, ಜನರಿಗೆ ಸೌಕರ್ಯವೂ ಸಹ ಉಂಟಾಗುತ್ತದೆ ಕೂಡಲೇ ಈ ಬಗ್ಗೆ ಸಿಗಾ ತೆಗೆದುಕೊಳ್ಳುವರೆಂದು ನಿರೀಕ್ಷಿಸಲಾಗಿದೆ

## ಈಗಲೇ ಷೇಕ್ ಅಬ್ದುಲ್ಲಾರವರ ಖುಲಾಸೆಯಿಲ್ಲ

ಕಾಶ್ಮೀರದ ಮಾಜಿ ಪ್ರಧಾನ ಮಂತ್ರಿ ಷೇಕ್ ಅಬ್ದುಲ್ಲಾರವರನ್ನು ಈಗ ಬಿಡುಗಡೆ ಮಾಡುವುದರಿಂದ ಸಂಸ್ಥಾನದ ಹಿತಕ್ಕೆ ಧಕ್ಕೆಯಾಗುವುದೆಂದೂ ಪರಿಸ್ಥಿತಿಯು ಬದಲಾಗುವವರೆಗೂ ಅವರು ಸೆರೆಯಲ್ಲಿಯೇ ಇರುವರೆಂದೂ ಈಗಿನ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರು ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ, ಹೇಳಿರುವರು ಷೇಕ್ ಅಬ್ದುಲ್ಲಾರವರ ರಾಜಕೀಯ ಕಾರ್ಯಕ್ರಮ ಅಪಾಯಕರವಾಗಿದ್ದಿತೆಂದು ಅವರು ತಿಳಿಸಿರುವರು

## ಜಾಮೀನುದಾರರು ದೊರೆಯದೆ ಖೈದಿಯ ಆತ್ಮಹತ್ಯ

ಬೊಂಬಾಯಿಯಲ್ಲಿ ಖೈದಿಯೊಬ್ಬನನ್ನು ಜಾಮೀನು ಮೇಲೆ ಬಿಡಲು ನ್ಯಾಯಾಧೀಶರು ಆಜ್ಞೆ ಮಾಡಿದ್ದರೂ ಆತನ ಬಿಡುಗಡೆ ಹೊಂದಲು ಸಾಧ್ಯವಿಲ್ಲದಿದ್ದುದರಿಂದ ಅವನು ತನ್ನ ಬಟ್ಟೆಗಳಿಗೆ ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯ ಮಾಡಿಕೊಂಡುದಾಗಿ ವರದಿಯಾಗಿದೆ ಜಾಮೀನು ಹಣವನ್ನು ಕಟ್ಟಬೇಕೆಂದು ಆತನು ತಂದೆಯನ್ನು ಕೇಳಿಕಳುಹಿಸಲು, ಅವರು ನಿರಾಕರಿಸಿದುದರಿಂದ ಅವನು ಆತ್ಮಹತ್ಯ ಮಾಡಿಕೊಂಡುದಾಗಿ ಹೇಳಲಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಸಂಗೀತ ೭ ೩೦ ಎಸ್ ... ಚೆಲುವರಯ್ಯ, ನಾಗಸ್ವರ ಮಧ್ಯಾಹ್ನ ೧ ೩೦ ಲಘು ಸಂಗೀತ ೧ ೩೦ ... ವಾದ್ಯ ... ಎಸ್ ಶ್ರೀನಿವಾಸಯ್ಯಂಗಾರ್ ಸಂಗೀತ ಸಂಜೆ ... ೩೦ ಎಸ್ ... ಚೆಲುವರಯ್ಯ, ನಾಗಸ್ವರ ... ವಿಹಾರ ... ಮೋಹನ್ ಕುಮಾರಿ ಹಿಂದೀ ಗೀತೆ ... ಎಸ್ ಶ್ರೀನಿವಾಸಯ್ಯಂಗಾರ್, ಸಂಗೀತ ... ೩೦ ನಾಟಿಗೇರ ಕೃಷ್ಣರಾವ್ ಸಂಸ್ಕೃತ ... ರ ... ವಾರ್ತೆಗಳು ... ಸಂಗೀತ ... ಗ್ರಾಮಾಭಿವೃದ್ಧಿ ಕಾರ್ಯಕ್ರಮ

## ರಾಜಕಮಲ್,

**18 9 53 ರಿಂದ :: ಅನೋಘ ಪ್ರಾರಂಭ**

ಅಸೋಸಿಯೇಟೆಡ್ ಪ್ರೊಡ್ಯೂಸರ್‌ರವರ

# ಆಸೈ ಮಗನ್ (ತಮಿಳು)

ಭೂಮಿಕೆ. ಪದ್ಮಿನಿ ಬಿ ಎಸ್ ಸರೋಜಾ ಗಿರಿಜಾ, ಟಿ ಎಸ್ ಬಾಲಯ್ಯ, ಗಣೇಶ ಮತ್ತು ಬಿ ಆರ್. ಪಂತುಲು

## ಖಾದಿ ಧರಿಸಲು ನೆಹರೂ ಮನವಿ

ಸಮಾಜದಲ್ಲಿರುವ ಅಡ್ಡಿಗಳನ್ನು ನೀಗಿಸಿ ಹಾಕಿ, ಸಕಲರೂ ಪರಸ್ಪರ ಸಮಾನರಾಗುವಂತೆ ಮಾಡಲು ಅಧಿಕಾರಿಗಳೂ, ಖಾಸಗಿ ಜನರೂ ಖಾದಿ ಬಟ್ಟೆಗಳನ್ನು ತೊಡಬೇಕೆಂದು ಪ್ರಧಾನಿ ನೆಹರೂರವರು ಹೇಳಿರುತ್ತಾರೆ ಖಾದಿಯು ಸ್ವಾತಂತ್ರ್ಯದ ಚಿಹ್ನೆ ಮಾತ್ರವಲ್ಲದೆ, ನಮ್ಮ ಜನರಲ್ಲಿ ಬಾಂಧವ್ಯವನ್ನು ಉಂಟುಮಾಡುವ ಸಾಧನವಾಗಿರುವುದೆಂದು ಅವರು ತಿಳಿಸಿರುವರು ಗಾಂಧಿ ಜಯಂತಿ ದಿನದಿಂದ ಖಾದಿಯನ್ನು ಧರಿಸಿ, ಗೃಹ ಕೈಗಾರಿಕೆಯನ್ನು ಪ್ರೋತ್ಸಾಹಿಸಬೇಕೆಂದು ಅವರು ನುಡಿದಿರುವರು

## ರಷ್ಯದಲ್ಲಿ ಅಣು ಬಾಂಬುಗಳ ಪರೀಕ್ಷಾರ್ಥ ಸಿಡಿತಗಳು

ರಷ್ಯದಲ್ಲಿ ಇತ್ತೀಚಿನ ವಾರಗಳಲ್ಲಿ ಹಲವಾರು ಅಣು ಬಾಂಬುಗಳನ್ನು ಪರೀಕ್ಷಾರ್ಥವಾಗಿ ಸಿಡಿಸಲಾಗಿದೆಯೆಂದು ರಷ್ಯಾ ಪತ್ರಿಕೆಗಳು ಪ್ರಕಟಿಸಿವೆ ಅಣು ಶಸ್ತ್ರಾಸ್ತ್ರಗಳ ನಿಷೇಧಕ್ಕೆ ಅಮೆರಿಕವು ಒಪ್ಪುತ್ತಿಲ್ಲವಾದ್ದರಿಂದ ರಷ್ಯವು ಅವುಗಳನ್ನು ನಿರ್ಮಿಸುತ್ತಿರುವುದಾಗಿ ಹೇಳಲಾಗಿದೆ

## ಕಟ್ಟಡದ ಮೇಲೆ ಓಡುವ ಮೈದಾನ

ಆಕ್ಸ್‌ಫರ್ಡಿನ ವಿಶ್ವವಿದ್ಯಾಲಯದ ಶಾರೀರಿಕ ವಿಜ್ಞಾನ ಶಾಸ್ತ್ರದ ಪ್ರಯೋಗ ಶಾಲಾ ಕಟ್ಟಡದ ಮೇಲೆ ಓಡುವ ಮೈದಾನವನ್ನು ನಿರ್ಮಿಸಲಾಗಿದೆ ತೀವ್ರವಾದ ಅಂಗಸಾಧನೆಯನ್ನು ಮಾಡುವುದರಿಂದ ಶರೀರದ ಮೇಲೆ ಆಗುವ ಪರಿಣಾಮಗಳನ್ನು ಅಳತೆ ಮಾಡುವ ಅಂಗವಾಗಿ ಮೈದಾನವನ್ನು ನಿರ್ಮಿಸಲಾಗಿರುವುದು

### ಅರಸು ಬೋರ್ಡಿಂಗ್ ಶಾಲೆಯ ವಿದ್ಯಾರ್ಥಿ ಸಂಘ

ರಾಜಧಾನಿಯ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಶಾಲೆಯ ವಿದ್ಯಾರ್ಥಿಗಳಸಂಘದ ಪ್ರಾರಂಭೋತ್ಸವವೂ ಮತ್ತು ವಿದ್ಯಾ ಗಣಪತಿ ಮಂಗಳಾರತಿಯೂ ನಾಳೆ ಸಂಜೆ ೬ ಗಂಟೆಗೆ ಸಂಘದ ಕಟ್ಟಡದಲ್ಲಿ ನೆರವೇರುವುವು ಡಾ|| ಕೆ ಬಸವರಾಜೆ ಅರಸಿನವರು ಅಧ್ಯಕ್ಷತೆ ವಹಿಸುವರು


ಪ್ರಭಾ ★ 21-9-53 ರಿಂದ 4 ದಿನಗಳು ಮಾತ್ರ

ಪ್ರತಿ ದಿನ ಮೂರು ಆಟಗಳು

ಫಿಲ್ಮಿಸ್ತಾನರವರ ಅತ್ಯುತ್ತಮ ಹಿಂದಿ ಚಿತ್ರ

# ಮೋತಿ ಮಹಲ್

ಪಾತ್ರ – ಸುರೈಯಾ, ಅಜಿತ್, ಹೀರಾ ಮತ್ತು ಬೇಬಿ ತಬಸುಂ

25-9-53 ರಿಂದ

ಆನ್ ದಿ ಸರ್ಕಸ್ ಎರೀನ

## ಇದು ನಿಮಗೆ ಗೊತ್ತೇ?

ಮಕ್ಕಳಿಗೆ ತಿಂಡಿಗೂ, ರೋಗಿಗಳ ಆರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಶುಚಿರುಚಿಯಾದ ನಾನಾ ತರಹದ

## ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪರಿಶುದ್ಧ ಸ್ಥಳವೆಂದರೆ

## ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಾಮುಂಡೇಶ್ವರಿ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ, ಮೈಸೂರು


## ಶ್ರೀರಂಗಪಟ್ಟಣದಲ್ಲಿ ಸಾಧ್ವಿ ಪತ್ರಿಕೆ ಏಜೆಂಟರು

ಈ ದಿನ ಪತ್ರಿಕೆಯ ಏಜೆಂಟರಾದ ಶ್ರೀ ಎಸ್ ಎನ್. ಶ್ರೀಕಂಠಯ್ಯನವರನ್ನು ಶ್ರೀರಂಗಪಟ್ಟಣದಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಲಾಗಿದೆ ವಾಚಕ ಮಹಾಶಯರುಗಳು ಅವರಿಂದ ಪತ್ರಿಕೆಯನ್ನು ಪಡೆದು ಚಂದಾ ಪಾವತಿ ಮಾಡಿ ರಸೀತಿಯನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ

—ವ್ಯವಸ್ಥಾಪಕ


# ಮನೆ ಕ್ರಯಕ್ಕಿದೆ

ನಂ 332 ಹಳೇ ಬಂಡಿಕೇರಿ, ಕೃಷ್ಣರಾಜ ಮೊಹಲ್ಲಾ ಮಹಡಿ ಮನೆ- ನಲ್ಲಿ, ದೀಪ ಇರುತ್ತೆ ಕೂಡಲೆ ಸ್ವಾಧೀನಕ್ಕೆ ಕೊಡಲಾಗುತ್ತೆ ವಿವರಗಳಿಗೆ —

**ಜಯ ಅಂಡ್ ಕಂಪೆನಿ,**

ಮನೆ, ಗದ್ದೆ, ಹಣಕಾಸಿನ ವ್ಯವಹಾರಗಳ ಏಜೆಂಟರು.

ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು ಫೋನ್ ನಂ 520


Edited, Printed and Published by A R Nagarajan at Sadhvi Press, D.Subbiah Road, Mysore

ರಿಜಿಸ್ಟರ್ ನಂ. 792

|| ಶಂಕರೀ ಸಹಕರಂ ||

ಬಿಡಿ ಪ್ರತಿಗೆ 6 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಒಂದುವರೆ
ಅಂಚೆ ಮೂಲಕ ತಿಂಗಳಿಗೆ ಎರಡು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೨ ] MYSORE : MONDAY 21-9-1953 :: ಮೈಸೂರು : ಸೋಮವಾರ ೨೧-೯-೧೯೫೩ [ ಸಂಚಿಕೆ ೮೯

# ರಾಜಪ್ರಮುಖರ ನಿಧಿ ಖೋತಾಕ್ಕೆ ನೆಹರೂರವರ ಮನವಿ

## ವರ್ತಕರಲ್ಲಿ ಪ್ರಾಮಾಣಿಕತೆ ಇರಬೇಕು

### ಕಾಂಗ್ರೆಸ್ ಅಧ್ಯಕ್ಷರ ಹಿತನುಡಿ

ಮೈಸೂರು ೨೦

ನಗರದ ತಮಿಳುನಾಡು ಬಟ್ಟೆ ವರ್ತಕರ ಸಂಘದ ೯ ನೇ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿ ನೆನ್ನೆ ಚಾಮುಂಡೇಶ್ವರಿ ಭವನದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ ವೀರಣ್ಣಗೌಡರು, ವರ್ತಕರು ಪ್ರಾಮಾಣಿಕತೆಯಿಂದ ವ್ಯಾಪಾರ ನಡೆಸಬೇಕೆಂದು ಸೂಚಿಸಿದರು ಕಾಲ್ನಾಲಿಕವಾಗಿ ಅದರಿಂದ ಅನಾನುಕೂಲವಾಗುವಂತೆ ಕಂಡುಬಂದರೂ ಉತ್ತರೋತ್ತರ ಒಳ್ಳೆಯದೇ ಆಗುವದೆಂದು ತಿಳಿಸಿದರು ಮೈಸೂರು ಸಂಸ್ಥಾನದಲ್ಲಿರುವ ತಮಿಳರು ಭಾಷೆ, ಕೋಮು ಮುಂತಾದ ಭೇದಗಳನ್ನು ಇಟ್ಟುಕೊಳ್ಳದೆ ಇಲ್ಲಿನವರೊಡನೆ ಸ್ನೇಹಸೌಹಾರ್ದದಿಂದ ಬೆರೆತು, ಅಭಿವೃದ್ಧಿಹೊಂದುತ್ತಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು ಹಿಮಾಚಲದಿಂದ ಕನ್ಯಾಕುಮಾರಿಯವರೆಗೆ ಇರುವ ಸಕಲರೂ ಭಾರತ ಮಾತೆಯ ಮಕ್ಕಳೆಂಬ ಒಂದೇ ಭಾವನೆಯು ಬೆಳೆಯಬೇಕೆಂದು ಆಶಿಸಿದರು

ಪ್ರಾಂತಗಳ ಪುನರ್ವಿಂಗಡಣೆಗೆ ಭಾಷೆಯು ಒಂದು ಮುಖ್ಯವಾದ ಸಾಧನವಾದರೂ, ಆಡಳಿತದ ಸೌಕರ್ಯದ ದೃಷ್ಟಿಯಿಂದ ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಅಭಿಪ್ರಾಯಪಟ್ಟರು

ಕೈ ಮಗ್ಗದ ಕಸಬಿಗೆ ನೆರವು ನೀಡಲು ಮಿಲ್ಲು ಬಟ್ಟೆಗಳ ಮೇಲೆ ತೆರಿಗೆ ಹಾಕುವ ನೀತಿಯನ್ನು ಸರ್ಕಾರದವರು ಅನುಸರಿಸುವರೆಂದೂ, ಮುಖ್ಯವಾಗಿ ಈ ಕೈಗಾರಿಕೆಗೆ ಬಂದಿರುವ ತೊಂದರೆಯನ್ನು ತಪ್ಪಿಸುವುದು ಎಲ್ಲರ ಕರ್ತವ್ಯವೆಂದೂ ನುಡಿದರು

ಕಾಂಗ್ರೆಸ್ ಸಂಸ್ಥೆಗೆ ಸೇರಲು ಒಂದು ಕಾಲದಲ್ಲಿ ಜನರು ಹಿಂದುಮುಂದು ನೋಡುತ್ತಿದ್ದರು. ಈಗ ನಾನು ತಾನೆಂದು ಬರುತ್ತಿರುವರು ಅಧಿಕಾರ ಲಾಲಸೆ ಮುಂತಾದ ಕಾರಣಗಳಿಂದ ಉಂಟಾಗಿರುವ ಅತಿಸ್ಥಿತಿಯನ್ನು ಕ್ರಮಪಡಿಸಲು ನಾನು ತಕ್ಕಮಟ್ಟಿಗೆ ಪ್ರಯತ್ನಿಸಿದ್ದೇನೆ ನನ್ನ ಉದ್ದೇಶವು ಇನ್ನೂ ಪೂರ್ಣವಾಗಿ ಈಡೇರಿಲ್ಲ ಆದ್ದರಿಂದ ಈ ಕಾರ್ಯವನ್ನು ನಿದಾಕ್ಷಿಣ್ಯವಾಗಿ ಮುಂದುವರಿಸಿ, ಸಂಸ್ಥೆಯ ಶುದ್ಧೀಕರಣ ಮಾಡಬೇಕಾಗಿದೆ—ಎಂದು ಅವರು ತಿಳಿಸಿದರು.

ಬಾಲಕಿಯರಿಂದ ಪ್ರಾರ್ಥನೆಯಾದ ನಂತರ ಸಂಘದ ಪರವಾಗಿ ಕಾಂಗ್ರೆಸ್ ಅಧ್ಯಕ್ಷರಿಗೆ ಮಾನಪತ್ರವೊಂದನ್ನು ಅರ್ಪಿಸಲಾಯಿತು ಅಕ್ಟ್ರಾಯ್ ಸುಂಕ ಮತ್ತು ಮಾರಾಟದ ತೆರಿಗೆ ಇವೆರಡರಿಂದ ಬಟ್ಟೆ ವ್ಯಾಪಾರಸ್ಥರಿಗೆ ಬಹಳ ತೊಂದರೆಯಾಗಿರುವುದೆಂದು ಅದರಲ್ಲಿ ಸೂಚಿಸಲಾಗಿದ್ದಿತು ಕಾರ್ಯದರ್ಶಿಗಳು ವರದಿಯನ್ನು ಓದಿ ಒಪ್ಪಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

## ಬಳ್ಳಾರಿ ಜಿಲ್ಲಾ ಪೋಲೀಸು ಅಧಿಕಾರಿಯಾಗಿ ಹೆಬ್ಳೀಕರ್

ಬೆಂಗಳೂರು ನಗರದ ಡಿ. ಎಸ್ ಪಿ ಆಗಿರುವ ಶ್ರೀ ಹೆಬ್ಳೀಕರ್‌ರವರನ್ನು ಬಳ್ಳಾರಿ ಜಿಲ್ಲಾ ಪೋಲೀಸು ಅಧಿಕಾರಿಯಾಗಿ ವರ್ಗಾಯಿಸಲಾಗಿದೆ.

## ಚಾಮರಾಜನಗರದಲ್ಲಿ ಡಾ|| ಮೋದಿಯವರಿಗೆ ಅದ್ಭುತಸ್ವಾಗತ

ಚಾಮರಾಜನಗರ ೧೮

ಯಳಂದೂರಿನಲ್ಲಿ ಕಣ್ಣಿನ ಚಿಕಿತ್ಸೆಯನ್ನು ಮುಗಿಸಿಕೊಂಡು ಇಲ್ಲಿಗೆ ನೆನ್ನೆ ಆಗಮಿಸಿದ ನೇತ್ರದಾನಿ ಡಾ|| ಮೋದಿಯವರಿಗೆ ಪುರಪ್ರಮುಖರು ಅದ್ಭುತ ಸ್ವಾಗತವನ್ನು ನೀಡಿ, ವಾಲಗದೊಡನೆ ಮೋಟಾರಿನಲ್ಲಿ ಮೆರವಣಿಗೆ ನಡೆಸಿದರು ಊರೆಲ್ಲಾ ತೇರು ತೋರಣಗಳಿಂದ ಅಲಂಕೃತವಾಗಿದ್ದಿತು. ಇದೇ ತಾಲ್ಲೂಕಿನ ಗ್ರಾಮಾಂತರಗಳಿಂದ ಸಾವಿರಾರು ಮಂದಿ ನೇತ್ರರೋಗಿಗಳು ಮತ್ತು ಇತರರು ಬಂದಿದ್ದರು ೧,೬೫೦ ಮಂದಿಯನ್ನು ಡಾ|| ಮೋದಿಯವರು ಪರೀಕ್ಷಿಸಿ, ೫೧೦ ಜನರಿಗೆ ಉಚಿತ ಔಷಧಿಯನ್ನು ಕೊಟ್ಟರು ೩೭೫ ಜನರಿಗೆ ಶಸ್ತ್ರ ಚಿಕಿತ್ಸೆ ನಡೆಸಬೇಕೆಂದು ಸೂಚಿಸಿದರು.

ಸಂಜೆ ೭ ಗಂಟೆಗೆ ಪ್ರೌಢಶಾಲಾ ಮೈದಾನದಲ್ಲಿ ಭಾರಿ ಬಹಿರಂಗ ಸಭೆ ನಡೆದು ಡಾ|| ಮೋದಿಯವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು ಪೌರಸಭೆಯ ಉಪಾಧ್ಯಕ್ಷರಾದ ಸಿ. ವಿ. ವೆಂಕಟೇಶ್‌ರವರು ಅಧ್ಯಕ್ಷತೆ ವಹಿಸಿದ್ದರು ತಾಲ್ಲೂಕು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ ಎಸ್ ಕುಮಾರಸ್ವಾಮಿಯವರು ಸ್ವಾಗತವನ್ನು ಬಯಸಿದರು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪುಟ್ಟಸಂಜಪ್ಪನವರು ಬಿನ್ನವತ್ತಳೆಯನ್ನು ಅರ್ಪಿಸಿದರು

ತಾಲ್ಲೂಕು ನಿವಾಸಿಗಳ ಪರವಾಗಿ ಶ್ರೀ ಎಂ. ಮಾದಪ್ಪನವರು ಮಾನಪತ್ರವನ್ನು ಸಮರ್ಪಿಸಿದರು ಹಿರಿಯ ಶಾಸನ ಸಭಾ ಸದಸ್ಯರಾದ ಶ್ರೀ ಆರ್ ಪಿ ರೇವಣ್ಣನವರು ಡಾ|| ಮೋದಿಯವರ ಸೇವೆಯನ್ನು ಪ್ರಶಂಸಿಸಿ ಭಾಷಣ ಮಾಡಿದರು. ಕಣ್ಣಿನ ರೋಗಿಗಳ ಚಿಕಿತ್ಸೆಯೊಡನೆ ಸಂಸ್ಥಾನದ ರಚನಾತ್ಮಕ ಕಾರ್ಯಕರ್ತರ ಸಂಘಟನೆಯೂ ಜರುಗುತ್ತಿರುವುದಾಗಿ ಶ್ರೀ ಮುಮ್ಮಡಿ ಚನ್ನಬಸವಯ್ಯನವರು ತಮ್ಮ ಭಾಷಣದಲ್ಲಿ ತಿಳಿಸಿದರು ಕಣ್ಣಿನ ರೋಗಿಗಳ ಬಗ್ಗೆ ಡಾ|| ಮೋದಿಯವರು ಸುಮಾರು ೧ ಗಂಟೆಕಾಲ ದೀರ್ಘವಾದ ಭಾಷಣವನ್ನು ಮಾಡಿದರು ಒಟ್ಟು ೪೦ ಲಕ್ಷ ಶಸ್ತ್ರ ಚಿಕಿತ್ಸೆಗಳನ್ನು ನಾವು ಮಾಡಲು ಭಗವಂತನು ಅನುಗ್ರಹಿಸಿರುವುದಾಗಿ ಅವರು ಹೇಳಿದರು.

## ಭಾವೆ ಮತ್ತಿತರರ ಮೇಲೆ ಕೈಮಾಡಿದ್ದಕ್ಕೆ ೬ ಜನರ ಬಂಧನ

ಪಾಟ್ನಾ ಬಳಿ ದೇವಘರದ ದೇವಾಲಯದಲ್ಲಿ ಮೊನ್ನೆ ಆಚಾರ್ಯ ವಿನೋಬಾ ಭಾವೆ ಮತ್ತು ಇತರರನ್ನು ಹೊಡೆದ ಸಂಬಂಧವಲ್ಲಿ ಪೋಲೀಸರು ಇದುವರೆಗೆ ಆರು ಜನ ಪಂಡಾಗಳನ್ನು ದಸ್ತಗಿರಿ ಮಾಡಿರುತ್ತಾರೆ ಗಲಭೆ, ಅಲ್ಪ ಗಾಯ, ಹರಿಜನರು ದೇವಾಲಯ ಪ್ರವೇಶಕ್ಕೆ ಅಡ್ಡಿ ಮುಂತಾದ ಅಪರಾಧಗಳ ಬಗ್ಗೆ ಮೊಕದ್ದಮೆಯನ್ನು ಹೂಡಲಾಗಿದೆ ಇನ್ನೂ ಅನೇಕರ ದಸ್ತಗಿರಿಯಾಗಲಿದೆ ಬಿಹಾರಿನ ಮುಖ್ಯ ಮಂತ್ರಿ ಶ್ರೀ ಕೃಷ್ಣಸಿನ್ಹಾರವರು ಆಚಾರ್ಯರ ಮೇಲೆ ಕೈ ಮಾಡಿದುದನ್ನು ಖಂಡಿಸಿರುತ್ತಾರೆ ಇದು ಹಿಂದೂಗಳಿಗೂ ಪೆಟ್ಟು ಬಿದ್ದಿರುವುದು ಮತ್ತು ಅನ್ಯಾಯವೆಂದು ಅವರು ಹೇಳಿರುವರು.

## ರಾಜಧನ ಕಡಿಮೆ ಮಾಡಿಕೊಳ್ಳಲು ರಾಜಪ್ರಮುಖರಿಗೆ ಮನವಿ

ತಮಗೆ ಕೊಡಲಾಗುತ್ತಿರುವ ರಾಜಧನವನ್ನು ಸ್ವಯಂಪ್ರೇರಣೆಯಿಂದಲೇ ಖೋತಾ ಮಾಡಿಕೊಳ್ಳುವಂತೆ ರಾಜಪ್ರಮುಖರುಗಳಿಗೆ ಪ್ರಧಾನಿ ನೆಹರೂರವರು ಈಚೆಗೆ ಪತ್ರ ಬರೆದು ಸೂಚಿಸಿರುವರೆಂದು ತಿಳಿದುಬಂದಿದೆ ರಾಜರು ಮತ್ತು ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖೆಯ ನಡುವೆ ಆದ ಒಪ್ಪಂದದ ಪ್ರಕಾರ ರಾಜರುಗಳಿಗೆ ಒಟ್ಟುಗೂಡಿಸಲ್ಪಟ್ಟ ನಿಧಿಯಿಂದ ಧನವನ್ನು ಕೊಡಲಾಗುತ್ತಿದೆ ನಿಜಾಮರಿಗೆ ರಾಜಧನವಾಗಿ ೫೦ ಲಕ್ಷ ಸರ್‌ಫಿಖಾಸ್ ಬಾಬು ೫೦ ಲಕ್ಷ ರೂ ಗಳನ್ನು ವರ್ಷಂಪ್ರತಿ ದೊರೆಯುತ್ತಿದೆ

## ರಷ್ಯದಿಂದ ಬೆರಿಯಾ ಪರಾರಿಯಾಗಿರುವರೇ ?

ರಷ್ಯದ ಒಳಾಡಳಿತ ಮಂತ್ರಿಯಾಗಿದ್ದು, ಮಾಲೆಂಕಾವ್‌ರವರಿಂದ ಪದಚ್ಯುತರಾದ ಪ್ರಭಾವಶಾಲಿಯಾದ ಲಾವ್ರೆಂಟಿ ಬೆರಿಯಾರವರು ಈಗ ತಾಟಸ್ಥ್ಯ ದೇಶವೊಂದರಲ್ಲಿ ಆಶ್ರಯ ಪಡೆದಿರುವರೆಂದೂ, ಅಮೆರಿಕದಲ್ಲಿ ನೆಲೆಸಲು ಅವರು ಅವಕಾಶವನ್ನು ಕೋರಿರುವರೆಂದೂ ವರದಿಯಾಗಿದೆ

## ಡರ್ಬಾನಿನಲ್ಲಿ ಭಾರತೀಯರ ಅಂಗಡಿ ಲೂಟಿ

ದಕ್ಷಿಣ ಆಫ್ರಿಕದ ಡರ್ಬನ್ ನಗರದಲ್ಲಿ ನೆನ್ನೆ ಭಾರತೀಯನೊಬ್ಬನಿಗೆ ಸೇರಿದ ಬಸ್ಸೊಂದು ಒಬ್ಬ ಆಫ್ರಿಕನನ ಮೇಲೆ ಹರಿದು, ಅವನು ಮೃತಪಟ್ಟ ಸಂಬಂಧದಲ್ಲಿ ಭಾರತೀಯನೊಬ್ಬನ ಅಂಗಡಿಯನ್ನು ಲೂಟಿ ಮಾಡಲಾಯಿತೆಂದೂ, ಭಾರತೀಯರ ಒಂದು ಬಸ್ಸನ್ನು ಸುಟ್ಟು ಹಾಕಲಾಯಿತೆಂದೂ ವರದಿಯಾಗಿದೆ ಇತರ ಬಸ್ಸುಗಳಿಗೆ ಕಲ್ಲು ಬೀರಲಾಗಿದೆ

## ಬಳ್ಳಾರಿ ಸೇರ್ಪಡೆ ವಿರುದ್ಧವಾಗಿ ಮದ್ರಾಸು ಹೈಕೋರ್ಟಿನಲ್ಲಿ ಅರ್ಜಿ

ಬಳ್ಳಾರಿ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವ ಕೆ ಭಾರತ ಸರ್ಕಾರದವರು ಮಾಡಿರುವ ಆಜ್ಞೆಯನ್ನು ಪ್ರಶ್ನಿಸಿ, ಮದ್ರಾಸು ಹೈ ಕೋರ್ಟಿನಲ್ಲಿ ಅರ್ಜಿಯನ್ನು ಸಲ್ಲಿಸಲಾಗುವುದೆಂದೂ, ತಾಲ್ಲೂಕಿನ ಸೇರ್ಪಡೆಗೆ ತಡೆ ಆಜ್ಞೆ ಕೊಡಬೇಕೆಂದು ಕೋರಲಾಗುವುದೆಂದೂ ಬಳ್ಳಾರಿಯ ಆಂಧ್ರ ಸಮಿತಿಯವರು ತಿಳಿಸಿರುತ್ತಾರೆ

### ಗಣಪತಿ ಮಂಗಳಾರತಿ

ರಾಜಧಾನಿಯ ಕಾಲೇಜು ರಸ್ತೆಯಲ್ಲಿರುವ ಹರಿಕಥಾ ವಿದ್ವಾನ್ ಶ್ರೀ ಎಚ್. ಟಿ ರಾಮಣ್ಣನವರು ಮೊನ್ನೆ ದಿನ ತಮ್ಮ ಗೃಹದಲ್ಲಿ ಗಣಪತಿ ಮಂಗಳಾರತಿಯನ್ನು ನೆರವೇರಿಸಿದರು ವಿ|| ವಿ ರಾಮರತ್ನಂರವರ ಸಂಗೀತ ಕಛೇರಿಯು ಸೂಕ್ತ ಪಕ್ಕವಾದ್ಯಗಳೊಡನೆ ಸುಶ್ರಾವ್ಯವಾಗಿ ಜರುಗಿತು.

### ಸಂಗೀತ

ರಾಜಧಾನಿಯ ಕಾಶೀಪತಿ ಲಾಯದಲ್ಲಿರುವ ಶ್ರೀ ವಿದ್ಯಾಗಣಪತಿ ಮಂದಿರದಲ್ಲಿ ಈ ರಾತ್ರಿ ೭|| ಗಂಟೆಗೆ ಶ್ರೀಮತಿ ಗಿರಿಜಮ್ಮ ಮತ್ತು ಪಾರ್ಟಿಯವರಿಂದ ಸಂಗೀತವು ನಡೆಯುವುದು. ಪೌರಸಭಾ ಸದಸ್ಯರಾದ ಶ್ರೀ ಟಿ. ಜಿ. ದಾಸ್‌ರವರು ಅಧ್ಯಕ್ಷತೆ ವಹಿಸುವರು.

## ಮೈಸೂರು ಮಂತ್ರಿಮಂಡಲದ ವಿಸ್ತರಣೆ ಪ್ರಶ್ನೆ

### ಕೇಂದ್ರ ಕಾಂಗ್ರೆಸ್ ಸಮಿತಿಯ ಪರ್ಯಾಲೋಚನೆ

ಹೈದರಾಬಾದು, ಮೈಸೂರು, ರಾಜಾಸ್ಥಾನ ಮತ್ತು ಪಂಜಾಬುಗಳಲ್ಲಿರುವ ಕಾಂಗ್ರೆಸ್ ಪಕ್ಷಗಳ ಸ್ಥಿತಿಗತಿಗಳನ್ನು ಮುಂದಿನ ನೆನ್ನೆ ದೆಹಲಿಯಲ್ಲಿ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಪರಿಶೀಲಿಸಿರುವುದಾಗಿಯೂ, ಬಳ್ಳಾರಿಯು ಮೈಸೂರು ಸಂಸ್ಥಾನಕ್ಕೆ ಸೇರಲಿರುವುದರಿಂದ ಮೈಸೂರಿನ ಮಂತ್ರಿಮಂಡಲದ ವಿಸ್ತರಣೆಗೆ ಅವಕಾಶಕ್ಕಾಗಿ ಕೇಂದ್ರದಲ್ಲಿ ಮನವಿ ಮಾಡಿಕೊಳ್ಳಲಾಗಿರುವುದೆಂದೂ ತಿಳಿದುಬಂದಿದೆ

## ಸಿಂಹಳದ ಪ್ರಧಾನಿಯ ರಾಜೀನಾಮೆಯೇ ?

ಸಿಂಹಳದ ಪ್ರಧಾನಿ ಡಡ್ಲಿ ಸೇನಾನಾಯಕೆಯವರು ರಾಜೀನಾಮೆ ಕೊಡಲು ಆಲೋಚಿಸುತ್ತಿರುವುದಾಗಿಯೂ, ಅಲ್ಲಿನ ಹಣಕಾಸಿನ ಮಂತ್ರಿ ಜಯವರ್ಧನೆ ಮತ್ತು ಸಂಚಾರ ಮಂತ್ರಿ ಸರ್ ಕೊಟೇಲ್ವಾಲಾರವರಿಗೆ ಪ್ರಧಾನಿಗಿರಿ ಬಗ್ಗೆ ತೀವ್ರ ಸ್ಪರ್ಧೆ ಬಿದ್ದಿರುವುದಾಗಿಯೂ ಅಂಗ ಸಾಮ ಸಮಾಜವಾದಿ ಪಕ್ಷದವರು ಹೇಳುತ್ತಾರೆ

## ವಿದ್ಯುಚ್ಛಕ್ತಿ ತಂತಿ ಮೇಲೆ ಬಿದ್ದ ತೆಂಗಿನಮರದಿಂದ ೩ ಮರಣ

ತಿರುಚಿರಾಪಳ್ಳಿ ಬಳಿ ತಿರುವಾನೈಕ್ಯಾವಿಲ್ ಎಂಬಲ್ಲಿ ಕಳೆದ ಶುಕ್ರವಾರ ರಾತ್ರಿ ಭಾರಿ ಬಿರುಗಾಳಿ ಬೀಸಿ, ಒಂದು ತೆಂಗಿನ ಮರವು ತಂತಿಯನ್ನು ಕಡಿದು ಉರುಳಿದಾಗ, ಅದರಲ್ಲಿದ್ದ ಕಾಯಿಗಳನ್ನು ಕುಯ್ಯಲು ಹೋದ ಒಬ್ಬನಿಗೆ ವಿದ್ಯುತ್ ತಂತಿಯು ತಗುಲಿ ಮೃತಪಟ್ಟನೆಂದೂ, ಅವನ ಸಹಾಯಕ್ಕೆ ಬಂದ ಹೆಂಡತಿಯೂ ಮತ್ತು ಮಗನೂ ಅವನನ್ನು ಮುಟ್ಟಿ ಪ್ರಾಣಬಿಟ್ಟರೆಂದೂ ವರದಿಯಾಗಿದೆ.

## ಕೈಲಾಸಂ ಬಗ್ಗೆ ವಿಶೇಷ ಆಕಾಶವಾಣಿ ಕಾರ್ಯಕ್ರಮ

ಮೈಸೂರಿನ ಎಲ್ ಇಂಡಿಯಾ ರೇಡಿಯೋ ನಿಲಯದವರು ನಾಳೆ ರಾತ್ರಿ ೮ ಗಂಟೆಗೆ ಶ್ರೀಕೃಷ್ಣ ಕವಿಗಳಾದ ಟಿ ಪಿ ಕೈಲಾಸಂರವರ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿರುವರು. ಗ್ರಂಥಕರ್ತ, ನಾಟ್ಯಕಾರ, ವಿದೂಷಕ, ವ್ಯಂಗ್ಯಕಾರ, ನಟ ಮತ್ತು ಮಾನವ ಈ ಎಲ್ಲ ದೃಷ್ಟಿಗಳಿಂದಲೂ ಅವರ ಬಗ್ಗೆ ವಿಮರ್ಶೆ ಮಾಡಲಾಗುವುದು ಅವರ ಆಪ್ತ ಸ್ನೇಹಿತರಾದ ಶ್ರೀ ಬಿ ಎಸ್ ರಾಮರಾಯರು ಅವರ ಕೃತಿಗಳನ್ನೂ, ಶ್ರೀ ಜಿ ಪಿ ರಾಜರತ್ನಂರವರು ಹಲವು ಹಿಂದಿನ ನೆನಪುಗಳನ್ನೂ, ಶ್ರೀ ಎಂ. ಜಿ. ಮರಿರಾಯರು ಅವರ ಹಾಸ್ಯಾಭಿರುಚಿಯನ್ನೂ, ಪ್ರೊ|| ಕೆ.ವಿ. ಅಯ್ಯರ್‌ರವರು "ಸುಂದರ ಕರ್ನೋರ್" ರಚನೆ ಬಗ್ಗೆ ಅವರು ಹೊಂದಿದ್ದ ಅಭಿಪ್ರಾಯವನ್ನೂ, ನಟ ಶ್ರೀಮತಿ ಪಿ ಕಾಮಾಕ್ಷಿ ಭವನದಾಸಿಯವರು ಪರ್ಪಂಚಸೇನೆ ನಾಟಕದಲ್ಲಿ ಅವರು ಮಾಡಿದ್ದ ಕಲಾವಿದ ಪಾತ್ರವನ್ನೂ, ಶ್ರೀ ಎಂ. ಶಿವರಾಂರವರು ಅವರ ಸ್ನೇಹ ಗುಣವನ್ನೂ ಕುರಿತು ತಿಳಿಸಿರುವ ವಿಷಯಗಳನ್ನು ಪ್ರಸಾರ ಮಾಡಲಾಗುವುದು ಇದಲ್ಲದೆ ಪಾಕು ತೌರುಮನೆ ನಾಟಕದ ಒಂದು ಭಾಗವನ್ನೂ ಅಭಿನಯಿಸಲಾಗುವುದು

## ಮದ್ರಾಸು ಗಡಿಯಲ್ಲಿ ಮೈಸೂರು ವರ್ತಕರ ಬಂಧನ

ಕೋಲಾರ ಜಿಲ್ಲೆ ನಂಗಲಿ [illegible] ದಸ್ತಗಿರಿ ಮಾಡಿದುದ [illegible] ಪೊಲೀಸರು [illegible] ಬಂಧಿಸಿ [illegible] ಹೇಳಲಾಗಿದೆ

## ಜಪಾನಿನಿಗೆ ಅಣು ತೋಪು

ಜಪಾನಿಗೆ [illegible] ಅಣು ತೋಪುಗಳನ್ನು ಕಳುಹಿಸಿ ಅಮೆರಿಕವು ದೂರ ಪ್ರಾಚ್ಯ ರಕ್ಷಣೆ ಪ್ರದೇಶಗಳನ್ನು ಬಲಪಡಿಸುವುದಾಗಿ ವರದಿಯಾಗಿದೆ [illegible] ಜಪಾನಿಗೆ ಹೋಗಿದಲೂ ಸಾಧ್ಯವೆಂಬ [illegible] ಭಾರಿ ಪ್ರಮಾಣದ ಸಿಡಿತದ ಗುಂಡುಗಳನ್ನೂ ಅಣು [illegible] ಗಳನ್ನೂ [illegible] ಹಾರಿಸಬಲ್ಲವೆಂದು ಹೇಳಲಾಗಿದೆ

## ಕೊರಿಯಾ ರಾಜಕೀಯ ಸಮ್ಮೇಳನದ ಬಗ್ಗೆ ಮತ್ತೆ [illegible]

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ [illegible] ಸದಸ್ಯರು ಇರಬೇಕೆ [illegible] ವಿಶ್ವಸಂಸ್ಥೆಗೆ [illegible]

## ನಾಸಿ ಶಿಕ್ಷೆಯಾಗುವ ಭೀತಿಯಿಂದ ಹೆಂಡತಿ ಮಕ್ಕಳ ಕೊಲೆ

[illegible] ತನ್ನ [illegible] ಭವಿಷ್ಯದ ಬಗ್ಗೆ [illegible] ಪೊಲೀಸರು ತನ್ನನ್ನು [illegible] ಗಲ್ಲು ಶಿಕ್ಷೆ ವಿಧಿಸಲಾಗುತ್ತದೆ [illegible] ತನ್ನ [illegible] ಭವಿಷ್ಯವನ್ನು [illegible] ಮಗ ಎಲ್ಲಿಯಾದರೂ ಮುಂದೆ ಜೀವನ ನಿರ್ವಹಿಸಬಲ್ಲನೆ ಬ [illegible] ಅವನನ್ನು [illegible] ಮನೆಗೆ ಕಳುಹಿಸಿಕೊಟ್ಟನೆಂದೂ [illegible] ಜೀವನದ ಬಗ್ಗೆ [illegible] ನಿರಾಶೆಯಾಗಿದ್ದಿತೆಂದೂ ಹೇಳಲಾಗಿದೆ

### ಯುವತಿಯ ಮೇಲೆ ಕೈ ಮಾಡಿದುದಕ್ಕಾಗಿ ಮೊಕದ್ದಮೆ

ರಾಜಧಾನಿಯ ಪೌರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ [illegible] ಎಂಬುವರ [illegible] ಮೇಲೆ ನಗರದ [illegible] ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಲಾಗಿದೆ ಮುಂದಿನ ತಿಂಗಳು [illegible] ಕಳೆದ ತಿಂಗಳು [illegible] ತನ್ನ ಸ್ನೇಹಿತರ ಮನೆಗೆ ಹೋಗುತ್ತಿ [illegible] ಅವರು ತಮ್ಮ ಮನೆಗೆ [illegible] ಹೋಗಿ [illegible] ವರದಿಯಾಗಿದೆ

### [illegible] ಕಾರ್ಯಕ್ರಮ

[illegible]

## ನೆಹರೂ ಭವನದ ಮುಂದೆ ಹತ್ತಾರಿಗಳ ಪ್ರದರ್ಶನ

ಉತ್ತರ ಪ್ರದೇಶದ [illegible] ಜನ ನಿರಾಶ್ರಿತರು ಮೊನ್ನೆ ದೆಹಲಿಯಲ್ಲಿ ಪ್ರಧಾನಿ ನೆಹರೂರವರ ಭವನದ ಮುಂದೆ ಪ್ರದರ್ಶನ ನಡೆಸಿದರು ತಮ್ಮ [illegible] ಅವರು [illegible] ಮೈಲಿಯಿಂದ [illegible] ನಡೆದುಕೊಂಡು [illegible]

## ಸಾವಿ ಅರೇಬಿಯದ ಮೇಲೆ ಬ್ರಿಟಿಷರ ಧಾಳಿಯೇ?

[illegible] ಪ್ರದೇಶಕ್ಕೆ [illegible] ಬ್ರಿಟಿಷ್ ಸೈನ್ಯ [illegible] ಅಧಿಕಾರಿಗಳ [illegible] ಬ್ರಿಟನ್ನಿಗೆ ಪ್ರತಿಭಟನೆ ಸೂಚಿಸಿದ್ದಾರೆ [illegible] ಧಾಳಿಯಲಾಯಿತೆಂದು ಹೇಳಲಾಗಿದೆ

## ರಮ್ಮೇನಿಯ ಉಪ ಪ್ರಧಾನಿಯ ವಜಾ

[illegible] ಮಂತ್ರಿಮಂಡಲದಲ್ಲಿ [illegible] ಅಧಿಕಾರದಿಂದ ತೆಗೆದುಹಾಕಲಾಗಿದೆ [illegible]

## ತಿರುವಾಂಕೂರು ಸರ್ಕಾರದಲ್ಲಿ ಅವಿಶ್ವಾಸ ಸೂಚನೆ

ತಿರುವಾಂಕೂರು ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ಸೂಚಿಸಲು [illegible]

ಪಿ. ಪಿ. ಸಿ ನೌಕರರ ಸಂಸ್ಥೆಯಲ್ಲಿ

### ಗಣಪತಿ ಪೂಜೆ

[illegible] ಗಣಪತಿ ಪೂಜೆಯನ್ನು [illegible] ನಡೆಯಿತು [illegible]

### ರಾಘವೇಂದ್ರ ಟ್ಯುಟೋರಿಯಲ್ ಇನ್ಸ್‌ಟಿಟ್ಯೂಟ್

[illegible] ಬಜಾರ್ [illegible] ಶಾರದಾ ಪೂಜೆಯನ್ನು ನಡೆಸಿ [illegible] ಸತ್ಕರಿಸಲಾಯಿತು

### ಸತ್ಯನಾರಾಯಣ ಪೂಜೆ

[illegible] ಸತ್ಯನಾರಾಯಣ ಪೂಜೆಯನ್ನು [illegible]

### ಕಪಿಗಳ ಹಾವಳಿ

ಶ್ರೀರಂಗಪಟ್ಟಣದ [illegible] ಕಪಿಗಳ [illegible] ಜನರಿಗೆ [illegible] ಅವುಗಳನ್ನು ಹಿಡಿಸಿ [illegible] ಪೌರಸಭೆಯವರು [illegible] ಕಪಿಗಳನ್ನು ಹಿಡಿಸಲು [illegible] ಪೌರಸಭೆಯವರು [illegible]

Edited, Printed and Published by A. R. Nagarajan at Sadhvi Press, D. Subbiah Road, Mysore

## ಕೊರಿಯಕ್ಕೆ ಹೋಗುತ್ತಿದ್ದ ಭಾರತೀಯ ಸೈನ್ಯದಲ್ಲಿ ದುರಂತ

ಕೊರಿಯಕ್ಕೆ ಹೋಗುತ್ತಿದ್ದ ಭಾರತೀಯ ಸೈನ್ಯದ ಮೂರನೇ ತಂಡದಲ್ಲಿ [illegible] ಜನ ಸಿಪಾಯಿಗಳು ಮೊನ್ನೆ ಸಮುದ್ರದ ಅಲೆಗಳ ಬಡಿತಕ್ಕೆ ಸಿಕ್ಕಿ ಸೀರಿನ ಪಾಲಾದರೆಂದು ವರದಿಯಾಗಿದೆ ಹಾಂಕಾಂಗಿಗೆ ಸ್ವಲ್ಪ ದೂರದಲ್ಲಿ ಭಾರತದ ಹಡಗು ಹೋಗುತ್ತಿದ್ದಾಗ ಸಮುದ್ರವು [illegible] ಹಡಗಿನ ಮೇಲ್ಭಾಗದ ಡೆಕ್ಕಿಗೆ ಅಲೆಗಳು ಅಪ್ಪಳಿಸಿದಾಗ ಮೇಲ್ಕಂಡ ದುರಂತವು ನಡೆಯಿತೆಂದು ಹೇಳಲಾಗಿದೆ

## ಪಾಕಿಸ್ತಾನದ ಗುಪ್ತಚಾರರಿಬ್ಬರಿಗೆ ಶಿಕ್ಷೆ

ಪಶ್ಚಿಮ ಬಂಗಾಳದಲ್ಲಿ ನೆಮ್ಮದಿ ಮತ್ತು [illegible] ಭದ್ರತೆಯು ಕುಸಿಯುವಂತೆ ಮಾಡುವ ಕಾರ್ಯದಲ್ಲಿ ತೊಡಗಿದ್ದರೆಂದು ಪಾಕಿಸ್ತಾನದ ಇಬ್ಬರು ಗುಪ್ತಚಾರರನ್ನೂ, ನಾಲ್ಕು ಜನ [illegible] ಬಸಿರ್‌ಹಾತ್ ನ್ಯಾಯಾಧೀಶರು [illegible] ಕಠಿಣ ಶಿಕ್ಷೆಗೆ ಗುರಿಪಡಿಸಿದುದಾಗಿ ವರದಿಯಾಗಿದೆ

## ಅಂತರಿಕ್ಷದಲ್ಲಿ ಬ್ರಿಟಿಷ್ ವಿಮಾನದ ಸಿಡಿತ

ಬ್ರಿಟನ್ನಿನ [illegible] ಫಾರ್ನ್‌ಬರೋ ಪ್ರದರ್ಶನವು ಮೊನ್ನೆ [illegible] ನಡೆಯುತ್ತಿದ್ದಾಗ ಒಂದು ಸೈನಿಕ ವಿಮಾನವು [illegible] ಸಿಡಿದು ಹೋಯಿತು

## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರ್ ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ [illegible] ನಲ್ಲಿ, ದೀಪ ಪ್ಲಷಿಂಗ್ ಇವೆ "ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿರಿ

## ಶ್ರೀರಂಗಪಟ್ಟಣದಲ್ಲಿ ಸಾಧ್ವಿ ಪತ್ರಿಕೆ ಏಜೆಂಟರು

ಹಿಂದೂ ಪತ್ರಿಕೆಯ ಏಜೆಂಟರಾದ ಶ್ರೀ ಎಸ್ ಎನ್ ಶ್ರೀಕಂಠಯ್ಯನವರನ್ನು ಶ್ರೀರಂಗಪಟ್ಟಣದಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಲಾಗಿದೆ. ವಾಚಕ ಮಹನೀಯರುಗಳು ಅವರಿಂದ ಪತ್ರಿಕೆಯನ್ನು ಪಡೆದು ಚಂದಾ ಹಣ ಸಂದಾಯ ಮಾಡಿ ರಸೀತಿಯನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ

ವ್ಯವಸ್ಥಾಪಕ

## ಯುವಕರು ನಾಡಿನ ಸೇವೆಗೆ ಸಿದ್ಧತೆ ಮಾಡಿಕೊಳ್ಳಬೇಕು

### ಇಟ್ಟಿಗೆಗೂಡು ಯುವಕರ ಸಂಘದಲ್ಲಿ ವೀರಣ್ಣಗೌಡರ ಹಿತೋಕ್ತಿ

ಮೈಸೂರು [illegible]

ದೇಶ ಸೇವೆಯನ್ನು ಮಾಡಲು ಯುವಕರು ತಕ್ಕ ಸಿದ್ಧತೆಯನ್ನು ಮಾಡಿಕೊಳ್ಳಬೇಕು [illegible] ಈ ಪ್ರಪಂಚಕ್ಕೆ ಬಂದಂದಿನಿಂದ ಇದನ್ನು ಬಿಟ್ಟುಹೋಗುವ ಕಾಲಕ್ಕೆ ತಮ್ಮ ಮೂಲಕ [illegible] ಕಿಂಚಿತ್ತಾದರೂ ಸೇವೆಯು ಸಲ್ಲಿಸಲ್ಪಟ್ಟು ದೇಶವು ಸ್ವಲ್ಪವಾದರೂ ಅಭ್ಯುದಯ ಮಾರ್ಗದಲ್ಲಿ ಮುನ್ನಡಿ ಇಟ್ಟರೆ ಅದೇ ತಮ್ಮ ಜೀವನ ಸಾರ್ಥಕ್ಯವೆಂಬುದನ್ನು ಅವರು ಭಾವಿಸಬೇಕು ಎಂಬುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ಕೆ ವೀರಣ್ಣಗೌಡರು [illegible] ಇಟ್ಟಿಗೆಗೂಡ ಯುವಕರ ಸಂಘದ [illegible] ನೇ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿ [illegible] ಷಣ ಮಾಡುತ್ತಾ ತಿಳಿಸಿದರು

ಪ್ರಾರ್ಥನೆಯಾದನಂತರ ಶ್ರೀ ಎಸ್ [illegible] ರವರು ಸ್ವಾಗತ ಭಾಷಣ ಮಾಡಿ ಶ್ರೀ ವೀರಣ್ಣಗೌಡರ ಪರಿಚಯ ಮಾಡಿಕೊಟ್ಟರು [illegible] ಕಾರ್ಯದರ್ಶಿಗಳು ವರದಿಯನ್ನೊಪ್ಪಿಸಿ ಸಂಘವು ನಡೆಸುತ್ತಿರುವ ಕೆಲಸಕಾರ್ಯಗಳನ್ನು ತಿಳಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಜಯಶಾಲಿಗಳು, ವಹಿಸಿ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

## ಕಸ್ತೂರಿ ಬಾ ವಿದ್ಯಾಮಂದಿರ

26 [illegible] ಸೋಮವಾರ ಪೇಟೆ, ಮೈಸೂರು

ಸಂಚಾಲಕಿ - ಶ್ರೀಮತಿ ಪದ್ಮಮಣಿ ಶ್ರೀನಿವಾಸ್, ಎಂ. ಎ.

ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸದವಕಾಶ

ಪ್ರೈಮರಿ ಸ್ಕೂಲಿನಿಂದ ಕಾಲೇಜು ವರೆಗಿನ ವಿದ್ಯಾರ್ಥಿನಿಯರಿಗೆ ಪಾಠಗಳನ್ನು ಹೇಳಿಕೊಡಲಾಗುತ್ತದೆ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್ ವರೆಗಿನ ವಿದ್ಯಾರ್ಥಿಗಳಿಗೂ ಪ್ರವೇಶ ಉಂಟು

ಫೀಜು ಅತ್ಯಂತ ಕಮ್ಮಿ

## ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಮೊಬಲಗನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್, ಸಾಧ್ವಿ ಏಜೆಂಟರು, ಮೈಸೂರು


## ಮನೆ ಕ್ರಯಕ್ಕಿದೆ

ನಂ. 332 ಹಳೇ ಬಂಡಿಕೇರಿ ಕೃಷ್ಣರಾಜ ಮೊಹಲ್ಲಾ- ಮಹಡಿ ಮನೆ- ನಲ್ಲಿ, ದೀಪ ಇರತಕ್ಕ ಕೂಡಲೆ ಸ್ವಾಧೀನಕ್ಕೆ ಕೊಡಲಾಗುತ್ತೆ, ವಿವರಗಳಿಗೆ —

ಜಯ ಅಂಡ್ ಕಂಪೆನಿ,

ಮನೆ, ಗದ್ದೆ, ಹಣಕಾಸಿನ ವ್ಯವಹಾರಗಳ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು ಫೋನ್ ನಂ 520

## ಮೈಸೂರು ದಸರಾ ವಸ್ತು ಪ್ರದರ್ಶನ 1953

(ತಾ|| 8-10-53 ರಿಂದ ತಾ|| 25-10-53 ರ ವರೆಗೆ)

### ಕಲಾಭಿಮಾನಿಗಳಲ್ಲಿ ವಿನಂತಿ:-

ಈ ವರ್ಷದ ದಸರಾ ವಸ್ತು ಪ್ರದರ್ಶನದ ಅಂಗವಾಗಿ ಎಂದಿನಂತೆ

1) ದೇವರ ನಾಮ
2) (1) ಹಾಡುಗಾರಿಕೆ (ಜೂನಿಯರ್)
 (11) ಹಾಡುಗಾರಿಕೆ (ಸೀನಿಯರ್)
3) ಆಧುನಿಕ ಗೀತೆಗಳು
4) ಸಿನಿಮಾ ಹಾಡುಗಳು
5) ನೃತ್ಯ (ಜೂನಿಯರ್, ಸೀನಿಯರ್)
6) ಲಾವಣಿ
7) ಭಾರತ ವಾಚನ

ಮೇಲ್ಕಂಡ ಸ್ಪರ್ಧೆಗಳನ್ನು ಈ ವರ್ಷವೂ ಏರ್ಪಡಿಸಲಾಗಿದೆ ಸ್ಪರ್ಧಿಸಲು ಇಚ್ಛೆಯುಳ್ಳವರು ತಾ|| 28-9-53ರ ಒಳಗಾಗಿ ದಸರಾ ವಸ್ತು ಪ್ರದರ್ಶನದ ಕಾರ್ಯದರ್ಶಿಯವರ ಕಛೇರಿಗೆ ತಾವು ಸೇರಬಯಸುವ ಪ್ರತಿ ಸ್ಪರ್ಧೆಗೂ ಬೇರೆ ಬೇರೆ ಅರ್ಜಿಗಳನ್ನು ಕಳುಹಿಸಬೇಕಾಗಿ ವಿನಂತಿ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ವಿನಿಯೋಗಿಸಲಾಗುವುದು

ಕಾರ್ಯದರ್ಶಿ,
ದಸರಾ ವಸ್ತು ಪ್ರದರ್ಶನ

ರಿಜಿಸ್ಟರ್ ನಂ. 792

ಇಂದಿನ ಪತ್ರಿಕೆ 3 ಕಾಸು

ಮೈಸೂರು ಗ್ರಾ|| ಸಿಲ್ಕ್
ಸೀರೆಗಳು
ಧರ್ಮಾವರಂ, ಪೂನಾ, ನಾಗಪುರ,
ಆರ್ಟ್ ಸೀರೆಗಳು ಮತ್ತು ತರಹ
ವಾರಿ ಸೂಟಿನ ಸೀರೆಗಳಿಗೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೩ ] MYSORE : TUESDAY 22-9-1953 ಮೈಸೂರು : ಮಂಗಳವಾರ ೨೨-೯-೧೯೫೩ [ ಸಂಚಿಕೆ ೨೦

# ನೇಪಾಳದ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಪ್ರತಿಬಂಧಕಾಜ್ಞೆ

## 'ಪತ್ರಿಕೋದ್ಯಮಿಯ' ಪ್ರಾರಂಭೋತ್ಸವ

### ಕಾಲೇಜು ಸಂಘದಲ್ಲಿ ಸಮಾರಂಭ

ಮೈಸೂರು ೨೨

ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಸಂಘದವರು ಹೊರಡಿಸಿರುವ ಕರ್ನಾಟಕಾಂಗ್ಲ ಪತ್ರಿಕೆಯಾದ "ಪತ್ರಿಕೋದ್ಯಮಿ"ಯ ಆರಂಭೋತ್ಸವವನ್ನು ಕನ್ನಡ ಕವಿ ಶ್ರೀ ಕೆ ವಿ ಪುಟ್ಟಪ್ಪನವರು ನೆನ್ನೆ ನೆರವೇರಿಸಿದರು. ಇಂಗ್ಲಿಷ್ ಪ್ರಾಧ್ಯಾಪಕರಾದ ಶ್ರೀ ಎಸ್ ವಿ ರಂಗಣ್ಣನವರ ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆಯಾದನಂತರ ಕಾರ್ಯದರ್ಶಿಗಳಾದ ಶ್ರೀ ಚೌಡಪ್ಪನವರು ಅತಿಥಿಗಳನ್ನು ಸ್ವಾಗತಿಸಿದರು. ಮೊಳೆ ಜೋಡಿಸುವ ಕೊಠಡಿಯಲ್ಲಿ ತಮ್ಮ ಅನುಭವಗಳನ್ನು ನುಡಿದ ಪ್ರಬಲ ವಿದ್ಯಾರ್ಥಿಯು ವಿವರಿಸಿದರು. ಪಾಶ್ಚಾತ್ಯ ದೇಶಗಳಲ್ಲಿ ಪತ್ರಿಕೆಗಳ ಮುದ್ರಣದ ... ಮತ್ತು ಸೌಲಭ್ಯಗಳನ್ನು ಹೋಲಿಸಿ ನಮ್ಮ ದೇಶವು ಎಷ್ಟು ಹಿಂದೆ ಬಿದ್ದಿದೆಯೆಂಬುದನ್ನು ಅವರು ತಿಳಿಸಿದರು. ಅಚ್ಚಿನ ಮುದ್ರಣದಲ್ಲಿ, ಮೊಳೆಗಳ ನ್ಯೂನತೆ ಕುಟಿಗಳನ್ನು ಜೋಡಿಸುವಾಗಿನ ತಪ್ಪುನೆಪ್ಪುಗಳ ಬಗ್ಗೆ ಅವರ ಹಾಸ್ಯೋಕ್ತಿಗಳು ಉತ್ಪ್ರೇಕ್ಷೆಯಿಂದ ಕೂಡಿದುದಾಗಿ ಭಾಸವಾಗುತ್ತಿತ್ತು

ಮಹಮದ್ ಹುಸೇನ್ ಎಂಬ ಮತ್ತೊಬ್ಬ ವಿದ್ಯಾರ್ಥಿಯು ತಾನು ಸುದ್ದಿ ಪಡೆದ ವಿಧಾನವನ್ನು ಆಂಗ್ಲ ಭಾಷೆಯಲ್ಲಿ ವಿವರಿಸಿದ ವಿಧಾನವು ಸ್ವಾರಸ್ಯವಾಗಿತ್ತು

ಶ್ರೀ ಪುಟ್ಟಪ್ಪನವರು ತಮ್ಮ ಭಾಷಣದಲ್ಲಿ ಪತ್ರಿಕೆಗಳು ವಿಶೇಷವಾಗಿ ಅಸ್ವಾಭಾವಿಕ ವ್ಯಾಪಾರಗಳನ್ನೇ ಪ್ರಕಟಿಸುತ್ತಿರುವುದರಿಂದ ನಮ್ಮ ದೇಶದಲ್ಲಿ ಈ ಬಗೆಯ ದುಷ್ಕೃತ್ಯಗಳಿಂದಲೇ ... ದೆಯೆಂಬ ಭಾವನೆಗೆ ಅವಕಾಶವಾಗುವುದೆಂದು ಹೇಳಿ, ಅಂತಹ ವಿದ್ಯಮಾನಗಳಿಗೆ ಸ್ವಲ್ಪಮಾತ್ರ ಸ್ಥಳವನ್ನು ಕೊಟ್ಟು ಪ್ರಕೃತಿ ಸೌಂದರ್ಯವನ್ನೂ, ಜೀವನದ ಸೊಬಗನ್ನೂ ... ತ ವಿಚಾರಗಳಿಗೆ ಹೆಚ್ಚು ಅವಕಾಶ ಕಲ್ಪಿಸಬೇಕೆಂದು ಸೂಚಿಸಿದರು. ಪತ್ರಿಕೆಗಳ ಸ್ವರೂಪದ ಬಗ್ಗೆ ಅವರು ಬಣ್ಣಿಸಿದ ಚಿತ್ರವು ಬಹಳ ಹೃದಯಂಗಮವಾಗಿದ್ದಿತು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕನ್ನಡ ಭಾಷೆಯ ... ವ್ಯವಿಶಿಷ್ಟತೆಯನ್ನೂ ಆಂಗ್ಲಭಾಷೆಯ ಆವಶ್ಯಕತೆಯನ್ನೂ ಒತ್ತಿ ಹೇಳಿದರು. ದೇಶಾಭಿಮಾನವು ಎಲ್ಲರಲ್ಲೂ ಬೇರೂರಬೇಕೆಂಬ ಬಗ್ಗೆ ಮಾರ್ಷಲ್ ಟಿಟೋ? ... ನಿದರ್ಶನವೊಂದನ್ನು ಹೃದಯಂಗಮವಾಗಿ ನಿರೂಪಿಸಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

### ಭಾರತ ವಾಚನ

ಅರಮನೆಯ ದೇವಸ್ಥಾನದಲ್ಲಿ ನಾಳೆ ಸಂಜೆ ... ಗಂಟೆಗೆ ಗಮಕ ಸೋದರರಾದ ಶ್ರೀಗಳು ... ಮತ್ತು ವೆಂಕಟಸುಬ್ಬಯ್ಯನವರುಗಳಿಂದ ಭಾರತ ವಾಚನದ ಅಂಗವಾಗಿ 'ದ್ರೌಪದಿ ಸ್ವಯಂವರ' ಎಂಬ ಕಥಾಭಾಗವು ನಡೆಯುವುದು

ಹಿಮಾಲಯದ ಮಂದಾಕಿನಿ ಕಣಿವೆಯಲ್ಲಿ ೨೦೦ ಕುರಿ ಮತ್ತು ಮೇಕೆಗಳು ಕಳೆದ ವಾರ ಹಿಮಪಾತದಿಂದ ಮಡಿದುವೆಂದು ವರದಿಯಾಗಿದೆ

## ರಾಗಿ, ಜೋಳದ ಬದಲು ಅಕ್ಕಿಯ ಸರಬರಾಜು

### ಪತ್ರಿಕಾ ಸಮ್ಮೇಳನದಲ್ಲಿ ಗೃಹ ಸಚಿವರ ವಿವರಣೆ

ಬೆಂಗಳೂರು ೨೨

ಸಂಸ್ಥಾನದ ಆಹಾರ ಸಚಿವ ಶ್ರೀ ಎಚ್ ಸಿ ದಾಸಪ್ಪನವರು ನೆನ್ನೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ಸ್ಥಳೀಯ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ರಾಗಿ, ಜೋಳಗಳ ದಾಸ್ತಾನು ತೀವ್ರ ಕಡಿಮೆಯಾಗಿರುವುದರಿಂದ ಜನರಿಗೆ ಅವನ್ನು ಒದಗಿಸಲು ತೊಂದರೆಯಾಗಿರುವುದೆಂದೂ ಅಕ್ಕಿಯು ಸಾಕಷ್ಟು ಇರುವುದರಿಂದ ರಾಗಿ ಜೋಳಗಳಿಗೆ ಬದಲು ಅಕ್ಕಿಯನ್ನೇ ಕಡಿತರದ ಪೂರ್ಣ ಪ್ರಮಾಣದಲ್ಲಿ ಒದಗಿಸಲು ಸಾಧ್ಯವೆಂದೂ ಅವರು ನುಡಿದರು. ಈ ತಿಂಗಳ ಮಳೆಯು ಚೆನ್ನಾಗಿ ಬಂದು ಮುಂದಿನ ಬೆಳೆಯು ಬರುವ ಬಗ್ಗೆ ತೃಪ್ತಿಕರವಾಗಿ ಆಗುವ ನಿರೀಕ್ಷೆಯಿರುವುದಾಗಿಯೂ, ಈ ಮಳೆಯು ಇನ್ನು ಸ್ವಲ್ಪ ಕಾಲ ಮುಂಚೆಯೇ ಬಂದಿದ್ದರೆ ರಾಗಿ, ಜೋಳಗಳ ಫಸಲು ಚೆನ್ನಾಗಿ ಬರುತ್ತಿದ್ದಿತೆಂದೂ, ಆದರೆ ಈಗ ೮-೧೦ ಆಣೆ ಬೆಳೆ ಬರುವ ಭರವಸೆಯಿರುವುದಾಗಿಯೂ ಅವರು ತಿಳಿಸಿದರು. ಸಂಸ್ಥಾನದಲ್ಲಿ ಈಗಿರುವ ಆಹಾರದ ದಾಸ್ತಾನಿನ ವಿವರಗಳನ್ನಿತ್ತರು

ಆಹಾರ ಶಾಖಾ ಡೈರೆಕ್ಟರರಾದ ಶ್ರೀ ಕೆ ಪಿ ರಾಮನಾಥಯ್ಯನವರು ಮಾತನಾಡಿ, ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಕೈಗೊಳ್ಳಲಾಗಿರುವ ಪರಿಹಾರ ಕಾರ್ಯಗಳನ್ನು ಕುರಿತು ವಿವರಣೆಯನ್ನಿತ್ತರು. ದಾವಣಗೆರೆ ತಾಲ್ಲೂಕಿನ ಗ್ರಾಮ ಪ್ರದೇಶಗಳಲ್ಲಿ ಶ್ರೀ ಚಿಗಟೇರಿ ಮುರಿಗಪ್ಪ ಮೊದಲಾದವರು ದಿನವಹಿ ಹತ್ತುಸಾವಿರ ಜನರಿಗೆ ಆಹಾರವನ್ನೊದಗಿಸುತ್ತಿರುವುದಕ್ಕಾಗಿ ಸರ್ಕಾರದವರು ಅವರಿಗೆ ಕೃತಜ್ಞರಾಗಿರುವರೆಂದೂ ಅವರು ತಿಳಿಸಿದರು. ಮುಂದಿನ ವರ್ಷ ಸರ್ಕಾರದ ಧಾನ್ಯ ಸಂಗ್ರಹಣೆ ನೀತಿಯು ಹೇಗಿರುವುದೆಂಬುದನ್ನು ತಿಳಿಸಲು ಈಗಲೇ ಸಾಧ್ಯವಿಲ್ಲವೆಂದೂ, ಕೇಂದ್ರ ಸರ್ಕಾರದ ಸ್ಥಿತಿಗತಿ ಮತ್ತು ಆಹಾರ ನೀತಿಗಳನ್ನು ಪರಿಶೀಲಿಸಿ, ಇಲ್ಲಿಯೂ ತೀರ್ಮಾನ ಕೈಗೊಳ್ಳಲಾಗುವುದೆಂದೂ ಆಹಾರ ಡೈರೆಕ್ಟರರು ತಿಳಿಸಿದರು.

## ದಕ್ಷಿಣ ಆಫ್ರಿಕದ ನಗರದಲ್ಲಿ ಭಾರತೀಯರ ಅಂಗಡಿ ಲೂಟಿ

ದಕ್ಷಿಣ ಆಫ್ರಿಕದ ಡರ್ಬಾನ್ ಬಳಿ ಕಾಟೊ ಮನೋರ್ ಎಂಬಲ್ಲಿ ಕೆಲವು ದಿವಸಗಳ ಕೆಳಗೆ ಭಾರತೀಯರ ಬಸ್ಸೊಂದನ್ನು ಹತ್ತಲು ಹೋದ ಆಫ್ರಿಕದ ಬಾಲಕನೊಬ್ಬನು ಮಡಿದ ಬಗ್ಗೆ ನಡೆದ ಗಲಭೆಯು ಮೊನ್ನೆ ರಾತ್ರಿ ಉಲ್ಬಣಿಸಿ ತೀವ್ರ ದಾಂಧಲೆ, ಲೂಟಿಗಳು ಜರುಗಿ ಭಾರತೀಯರ ಅನೇಕ ಅಂಗಡಿಗಳು ಮತ್ತು ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಗಲಭೆಯಲ್ಲಿ ಇಬ್ಬರು ಮಡಿದು, ನೂರಾರು ಜನರು ಗಾಯಗೊಂಡರು. ಈಗ ಬಲವಾದ ಪೋಲೀಸು ಬಂದೋಬಸ್ತನ್ನು ಹಾಕಿ, ಕಾಟೊ ಮನೋರ್ ನಗರಕ್ಕೆ ಬರುವ ಎಲ್ಲ ಕಾರುಗಳನ್ನೂ ಶೋಧಿಸಲಾಗುತ್ತಿದೆ. ಐದು ಮಂದಿ ಆಫ್ರಿಕನವರನ್ನು ದಸ್ತಗಿರಿ ಮಾಡಲಾಗಿದೆ.

## ಸಂಸ್ಥಾನಕ್ಕೆ ೨೦ ಸಾವಿರ ಟನ್ ರಾಗಿ ಮತ್ತು ಜೋಳ

ಬೆಂಗಳೂರು ೨೨

ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳ ಸರ್ಕಾರಗಳವರು ಮೈಸೂರ ಸಂಸ್ಥಾನಕ್ಕೆ ಕಳುಹಿಸಲು ೨೦ ಸಾವಿರ ಟನ್ ರಾಗಿ ಮತ್ತು ಜೋಳಗಳನ್ನು ಒದಗಿಸಲು ಒಪ್ಪಿರುವರೆಂದೂ, ಅದನ್ನು ಇಲ್ಲಿಗೆ ತರಲು ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಹೋಗಿರುವರೆಂದೂ ಗೊತ್ತಾಗಿದೆ. ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಕೇಂದ್ರದ ಆಹಾರ ಸಚಿವ ಕಿದ್ವಾಯಿಗೆ ತಂತಿಯನ್ನು ಕಳುಹಿಸಿ ಸಂಸ್ಥಾನದಲ್ಲಿ ರಾಗಿ ಜೋಳಗಳ ಪರಿಸ್ಥಿತಿಯು ವಿಷಮವಾಗಿರುವುದೆಂದೂ, ಬರುವ ತಿಂಗಳು ಮಧ್ಯಭಾಗದೊಳಗೆ ಅವನ್ನು ಒದಗಿಸದಿದ್ದಲ್ಲಿ ಪರಿಸ್ಥಿತಿಯು ಮತ್ತಷ್ಟು ಕೆಡುವುದೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ. ಈ ಸಂಬಂಧವಾಗಿ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಸಲು ಆಹಾರ ಡೈರೆಕ್ಟರರಾದ ಶ್ರೀ ಕೆ ಪಿ ರಾಮನಾಥಯ್ಯನವರು ನೆನ್ನೆ ರಾತ್ರಿ ದೆಹಲಿಗೆ ತೆರಳಿದರು

## ನೇಪಾಳದ ಕಾಂಗ್ರೆಸ್ ಅಧ್ಯಕ್ಷರಿಗೆ ದಿಗ್ಬಂಧನ

ನೇಪಾಳದ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಮಾಜಿ ಸಚಿವರೂ ಆದ ಶ್ರೀ ಬಿ ಪಿ ಕೊಯಿರಾಲಾರವರು ಸಂಸ್ಥಾನದ ನೌಕರರಲ್ಲಿ ಅಸಮಾಧಾನ ಮತ್ತು ಅವಿಧೇಯತೆಯನ್ನುಂಟುಮಾಡುವ ರೀತಿಯಲ್ಲಿ ವರ್ತಿಸಿರುವರೆಂದು ಆಪಾದಿಸಿ ಅವರು ಖಟ್ಮಂಡು ಕಣಿವೆಯ ಗಡಿಯನ್ನು ಬಿಟ್ಟುಹೋಗಬಾರದೆಂದು ನಿರ್ಬಂಧಾಜ್ಞೆಯನ್ನು ಜಾರಿ ಮಾಡಿ, ಇನ್ನು ಒಂದು ವಾರದೊಳಗೆ ಅವರು ಖಟ್ಮಂಡುವಿನ ನಗರ ನ್ಯಾಯಾಧೀಶರ ಮುಂದೆ, ಮೇಲ್ಕಂಡ ಆಪಾದನೆ ಸಂಬಂಧದಲ್ಲಿ ವಿಚಾರಣೆಗೆ ಹಾಜರಾಗಬೇಕೆಂದು ತಿಳಿಸಲಾಗಿದೆ

## ಮಾಲೆಂಕಾವ್‌ರಿಂದ ಅಮೆರಿಕಾ ನೀತಿ ಖಂಡನೆ

ಕೊರಿಯಾ ಶಾಂತಿಯು ಏರ್ಪಟ್ಟಂದಿನಿಂದ ಅಲ್ಲಿ ಶಾಂತಿ ಒಪ್ಪಂದ? ... ಅಮೆರಿಕವು ಮುಂದುವರಿಯುತ್ತಿಲ್ಲವೆಂದು ರಷ್ಯದ ಪ್ರಧಾನ ಮಾಲೆಂಕಾವ್‌ರವರು ಹೇಳಿರುತ್ತಾರೆ. ಭಾರತ ಮುಂತಾದ ಪೂರ್ವ ರಾಷ್ಟ್ರಗಳನ್ನು ಕೊರಿಯಾ ರಾಜಕೀಯ ಸಮ್ಮೇಳನಕ್ಕೆ ಸೇರಿಸಲು ಅಮೆರಿಕವು ಮಾಡಿರುವ ವಿರೋಧವನ್ನು ಅವರು ಖಂಡಿಸಿ, ದಕ್ಷಿಣ ಕೊರಿಯವನ್ನು ಸೈನಿಕ ಕಾರ್ಯಾಚರಣೆ ಸ್ಥಾನದ ನೆಲೆಯಾಗಿ ಅಮೆರಿಕವು ಉಪಯೋಗಿಸಿಕೊಳ್ಳುತ್ತಿರುವುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಉತ್ತರ ಕೊರಿಯಕ್ಕೆ ಸಂಪೂರ್ಣ ಸಹಾಯ ಒದಗಿಸುವುದಾಗಿಯೂ ಅವರು ಆಶ್ವಾಸನೆಯಿತ್ತಿರುವರು

## ಎ ಮುನಿಸ್ವಾಮಿಗೌಡರು ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳು

ಕೋಲಾರದ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಎ ಮುನಿಸ್ವಾಮಿಗೌಡರನ್ನು ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ.

## ತಿರುವಾಂಕೂರು-ಕೊಚ್ಚಿಯಲ್ಲಿ ಕಾಮರಾಜನಾಡಾರರ ಸಂಧಾನ

ತಿರುವಾಂಕೂರು ತಮಿಳ್‌ನಾಡು ಕಾಂಗ್ರೆಸ್ ಮತ್ತು ತಿರುವಾಂಕೂರು ಕೊಚ್ಚಿ ಕಾಂಗ್ರೆಸ್ ಪಕ್ಷಗಳ ನಡುವೆ ಐಕ್ಯತೆಯನ್ನು ಸಾಧಿಸುವುದಕ್ಕಾಗಿ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕಾಮರಾಜನಾಡಾರ್‌ರವರು ನೆನ್ನೆ ವಿಮಾನದಲ್ಲಿ ತಿರುವನಂತಪುರಕ್ಕೆ ಪ್ರಯಾಣ ಮಾಡಿರುತ್ತಾರೆ

## ಈಜಿಪ್ಟಿನ ೧೧ ಮಂದಿ ಮಾಜಿ ಅಧಿಕಾರಿಗಳ ಬಂಧನ

ಈಜಿಪ್ಟಿನಲ್ಲಿ ಜನರಲ್ ನಗೀಬರ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಸರ್ಕಾರವನ್ನು ಉರುಳಿಸಿ ಪತ್ರಿ ರಾಜಪ್ರಭುತ್ವವನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನ ನಡೆಸಿದರೆಂಬ ಆಪಾದನೆ ಮೇಲೆ ಅಲ್ಲಿನ ಮಾಜಿ ಸರ್ಕಾರದ ೧೧ ಮಂದಿ ಪ್ರಮುಖ ಅಧಿಕಾರಿಗಳನ್ನು ಮೊನ್ನೆ ಮಧ್ಯರಾತ್ರಿಯಲ್ಲಿ ಬಂದೂಕಗಳಿಂದ ಸಜ್ಜಿತರಾದ ಮಿಲಿಟರಿ ಪೋಲೀಸರು ದಸ್ತಗಿರಿ ಮಾಡಿದರೆಂದು ವರದಿಯಾಗಿದೆ. ಈಜಿಪ್ಟಿನ ಮಾಜಿ ಪ್ರಧಾನಿ ನಹಾಸ್ ಪಾಷಾ, ಅವರ ಪತ್ನಿ ಮೊದಲಾದ ಇತರ ಮೂವರನ್ನು ಅವರವರ ಭವನಗಳಲ್ಲೇ ಬಂಧನದಲ್ಲಿಡಲಾಗಿದೆ. ಶೀಘ್ರದಲ್ಲೇ ಅವರೆಲ್ಲರನ್ನು ವಿಚಾರಣೆಗೆ ಗುರಿಪಡಿಸಲಾಗುವುದು

## ಕಾಳ ಸಂತೆಗಾಗಿ ಸಜಾ ಮತ್ತು ೨೫ ಸಾವಿರ ರೂ. ಜುಲ್ಮಾನೆ

ಕೊಯಮುತ್ತೂರಿನ ಪಂಕಜ ಮಿಲ್ಸ್ ಗಿರಣಿಯವರು ನೂಲಿನ ಕಾಳಸಂತೆ ವ್ಯಾಪಾರ ನಡೆಸಿದರೆಂಬ ಆಪಾದನೆ ಮೇಲೆ ಕಳೆದ ಸೆಪ್ಟೆಂಬರಿನಲ್ಲಿ ಅದರ ಮ್ಯಾನೇಜಿಂಗ್ ಏಜೆಂಟರನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿತ್ತು. ನೆನ್ನೆ ಅಲ್ಲಿನ ಜಿಲ್ಲಾ ನ್ಯಾಯಾಧೀಶರು ತೀರ್ಪಿತ್ತು ಗಿರಣಿಗೆ ೨೫,೦೦೦ ರೂ ದಂಡವನ್ನೂ, ಅದರ ಮ್ಯಾನೇಜಿಂಗ್ ಏಜೆಂಟರುಗಳಿಗೆ ಒಂದು ವರ್ಷ ಕಠಿಣ ಸಜಾ ಮತ್ತು ೧೦ ರೂ ದಂಡ, ದಂಡ ಕೊಡತಪ್ಪಿದ್ದರೆ ಮತ್ತೆ ೩ ತಿಂಗಳ ಸಾದಾ ಸಜವನ್ನೂ ಮತ್ತು ಗಿರಣಿಯ ಅಕೌಂಟೆಂಟರಿಗೆ ೨೦೦ ರೂ ದಂಡವನ್ನೂ ವಿಧಿಸಿದರು

### ಹರಿಕಥೆ

ರಾಜಧಾನಿಯ ನೂರಡಿ ರಸ್ತೆಯ ರಾಣೀಪೇಟೆಯಲ್ಲಿರುವ ವಿದ್ಯಾ ಗಣಪತಿ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ಆ|| ವಿ|| ಚನ್ನಕೇಶವಯ್ಯನವರ ನೇತೃತ್ವದಲ್ಲಿ ವಿ|| ಗಮಕಿ ರಾಮಕೃಷ್ಣಶಾಸ್ತ್ರಿಗಳವರಿಂದ ದಾಸಪೂರ ಚರಿತ್ರೆ ಎಂಬ ಹರಿಕಥೆಯು ನಡೆಯಲೇರ್ಪಾಡಾಗಿದೆ

### ಬಳ್ಳಾರಿಗೆ ಎಲ್. ನರಸಿಂಹರಾಯರ ವರ್ಗ

ನಂಜನಗೂಡಿನ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಎಲ್ ನರಸಿಂಹರಾಯರನ್ನು ಬರುವ ತಿಂಗಳು ೧ ನೇ ತಾರೀಕಿನಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆಗೆ ರೆವಿನ್ಯೂ ಡಿವಿಜನಲ್ ಅಧಿಕಾರಿಯಾಗಿ ವಿಶೇಷ ಕೆಲಸದ ಮೇಲೆ ನೇಮಿಸಲಾಗಿದೆ

★ ಪಾಕಿಸ್ತಾನದಲ್ಲಿ ಭಾರತದ ಚಲನಚಿತ್ರಗಳನ್ನು ಪ್ರದರ್ಶಿಸಬಾರದೆಂದು ಅಲ್ಲಿನ ಸರ್ಕಾರದವರು ವಿಧಿಸಿದ್ದ ಬಗ್ಗೆ ಅಲ್ಲಿನ ಸಿನಿಮಾ ಮಂದಿರಗಳವರು ನೆನ್ನೆಯಿಂದ ಅನಿರ್ದಿಷ್ಟಕಾಲದ ಮುಷ್ಕರವನ್ನು ಹೂಡಲು ನಿರ್ಧರಿಸಿದ್ದರಿಂದ ನಿಷೇಧ ಆಜ್ಞೆಯನ್ನು ರದ್ದು ಮಾಡಲಾಯಿತು

## ...ರಾಜ್ಯ ಶಾಸನ ಸಭೆಗಳ ಭವಿಷ್ಯ

ಸಂಸ್ಥಾನಗಳಲ್ಲಿರುವ ಹಿಂದಿನ ... ಸಭೆಗಳ ಭವಿಷ್ಯ ನಿರ್ಧಾರವನ್ನು ... ಪ್ರದೇಶಗಳ ... ಕಾಂಗ್ರೆಸ್ ... [illegible]

## ಮೊಹರಂ ದಿನ ಪೂನಾದಲ್ಲಿ ಲಾರಿ ಪ್ರಹಾರ

... ದಿನ ಬೀದಿಗಳಲ್ಲಿ ಅವ್ಯವಸ್ಥೆಯನ್ನು ... ಪ್ರಹಾರ ಮಾಡಿದುದಾಗಿ ವರದಿಯಾಗಿದೆ. ... ಮೆರವಣಿಗೆಗಳನ್ನು ... ಸಂಬಂಧದಲ್ಲಿ ... ವರದಿಯಾಗಿದೆ.

## ಜಿಬ್ರಾಲ್ಟರ್ ಜಲಸಂಧಿಯನ್ನು ಈಜಿ ದಾಟಿದ ಮುದುಕಿ

[illegible]

ಗಣಪತಿ ಮಂಗಳ ... ಶ್ರೀ ... [illegible]

... ಶ್ರೀ ಗಣೇಶ ... ಶ್ರೀ ರಾಮಾ... ಗಣಪತಿ ಪೂಜೆಯನ್ನು ... ಮತ್ತು ಸಂಗೀತಗಳು ಏರ್ಪಾಡಾಗಿದ್ದುವು.

## ಚರಂಡಿ ಮತ್ತು ರಸ್ತೆಗಳ ಸುವ್ಯವಸ್ಥೆ ಆಗಬೇಕು

ಸ್ವಂ ಪು] ಶ್ರೀರಂಗಪಟ್ಟಣ ...

ಈ ಊರಿನ ಮಧ್ಯ ಭಾಗದಲ್ಲಿ ... ರಸ್ತೆಗಳು ... ಚರಂಡಿಗಳು ... ಜನರ ... ಅಸಹ್ಯಕರವಾಗಿ ... ಚರಂಡಿಗಳನ್ನು ... ಮಾಡಬೇಕೆಂದು ಕೋರಲಾಗಿದೆ.

## ಹೊಸ ಸಂಸ್ಥಾನಗಳ ನಿರ್ಮಾಣಕ್ಕೆ ಚಳುವಳಿ ಕೂಡದು

... ಸಂಸ್ಥಾನಗಳ ಗಡಿಗಳ ... ಭಾರತ ಸರ್ಕಾರ ... ಹೊಸ ಸಂಸ್ಥಾನ ... ಕಾಂಗ್ರೆಸ್ ... [illegible]

## ಜಿಲ್ಲಾ ಕೇಂದ್ರಗಳಲ್ಲಿ ಚಳಿ ಪ್ರೋಗ್ರಾಮುಗಳು

[illegible]

ಹಿಂದೂಸ್ತಾನಿ ಸಂಗೀತ

[illegible]

### ಆಕಾಶವಾಣಿ ನ ... ಕಾರ್ಯಕ್ರಮ

[illegible]

### ಮೈಸೂರು ಪೇಟೆ ಧಾರಣೆ

| | | |
|---|---|---|
| ಕಟ್ಟೆ | ...ಂದ | ರೂ |
| ರಾಗಿ — | ... | ... |
| ... | ... | ... |
| ... | ... | ... |
| ... | ... | ... |
| ಕೊಂಗಿನಕಾಯಿ ಗಂಧಂಕ್ಕೆ ... | ... | ... |

## ಅಮೋಘವಾದ ಸಂಗೀತ ಕಛೇರಿ

ಮೈಸೂರ ಮಾದರಿ ಶಾಲೆಯ ವಿದ್ಯಾಗಣಪತಿ ಉತ್ಸವದ ಸಂದರ್ಭದಲ್ಲಿ ಕಳೆದ ಮಂಗಳವಾರ ... ಘಂಟೆವರೆಗೆ ಜರಗಿದ ಬೆಂಗಳೂರಿನ ... ಚಂದ್ರಪ್ಪ ಮತ್ತು ... ಅವರ ಸಂಗೀತ ಕಛೇರಿ ಅತ್ಯಂತ ಅಮೋಘವಾಗಿದ್ದಿತು ... ಸಂಗೀತ ... ನಾದ ... ವೆಂಕಟೇಶದೇವರ ... ಕರ್ಣಾನಂದ ... [illegible] ... ಆನಂದ ... ಮಾಡಿತು.

... ಸಮಾಜದಲ್ಲಿ ಕಳೆದ ... [illegible]

— ಓದ ಕಲಾಭಿಮಾನಿ

SREE GANESHA
TALKIES
From 2? 9 53 for 2 days only
MA & PA KETTLE
GO TO TOWN
With Marjorie Main
Percy Kilbride
...
NEXT CHANCE
YOU NEVER CAN TELL

Edited Printed and Published by A R Nagarajan at Sadhvi Press D Subbiah Road, Mysore

## ಗೃಹಕೃತ್ಯದ ನೋಟೀಸು

ಹುಣಸೂರು ತಾ|| ಕರಿಮುದ್ದನಹಳ್ಳಿ ... ಮದ ಶಿವಾರ್ಚಕರ ... ಸ್ಕೂಲ್ ಮಾಸ್ಟರ್ ಎಸ್ ಎಲ್ ಗಣಪತಿಯವರ ಹೆಂಡತಿ ... ಈ ಮೂಲಕ ಪ್ರಸಿದ್ಧಪಡಿಸುವುದೇನೆಂದರೆ —

ನನ್ನ ಅಕ್ಕನವರು, ಅಂದರೆ ನಮ್ಮ ... ಮಾನರ ಮೊದಲನೇ ಹೆಂಡತಿಯವರು ... ಸುಮಾರು ... ವರ್ಷಗಳಾಯ್ತು ... ಸುಮಾರು ... ವರ್ಷದ ಕಮಲಮ್ಮನೆಂಬ ... ಮೈನರ್ ಮಗುವಿನ ... ಕಾಲವಾಗಿ ಸುಮಾರು ... ವರ್ಷಗಳಾಯಿತು. ಅವರಿಗೆ ಮೈನರ್ ... ಗೌರಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ... ಈಗ ಗೌರಮ್ಮ ... ಕುಟ್ಟವಾಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ ... ಕರಿಮುದ್ದನಹಳ್ಳಿಗೆ ಸೇರಿದ ಸರ್ವೆ ... ಎಕರೆ ... ಜಮೀನುಗಳು ...

ಪುಟ್ಟಸ್ವಾಮಿ ... ಕಮಲಮ್ಮನಿಗೂ (ದೊಡ್ಡ) ಗೌರಮ್ಮನಿಗೂ ಹಕ್ಕಿದೆ ... ಮೈನರ್ ಮಕ್ಕಳಿರುವುದರಿಂದ ... ಕಮಲಮ್ಮನ ಮೈನರ್ ಆಗಿರುವುದರಿಂದ ... ಗೌರಮ್ಮನ ... ಮಾತುಗಳಿಂದಲೂ ... ಕರಾರು ಮಾಡುತ್ತಾಳೆಂದು ತಿಳಿದುಬಂದಿದೆ ... ಯಾರಾದರೂ ... ಭೋಗ್ಯ ಅಧಾರ ಇತ್ಯಾದಿ ಯಾವ ರೀತಿ ... ಅವರುಗಳಿಗೆ ... ಈ ಬಗ್ಗೆ ... ಅವರೇ ಜವಾಬ್ದಾರರೆಂದು ಈ ಮೂಲಕ ... ರಂಗಪಡಿಸಿರುತ್ತೆ.

... ಬಸಮ್ಮನ ಎಡಗೈ ಹೆಬ್ಬೆಟ್ಟಿನ ಗುರುತಿನ ರುಜು

## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ ... ದೀಪ ಫ್ಲಷಿಂಗ್ ಇವೆ. "ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿ!

MYSORE TRANSIT SERVICE (Regd)
169 Ramvilas Road Mysore Phone ...

BUSINESS MEN SAVE TROUBLE ! SAVE TIME !

Please send your R. Rs to us for clearing your goods from Our ... Goods Office and to deliver the same at your place.

We undertake to forward your goods to any destination by Rail or Road.

Charges are very reasonable. Soliciting your kind patronage.

At Your Service
V K SREENIVASAN
Managing Partner

## ಮನೆ ಕ್ರಯಕ್ಕಿದೆ

ನಂ 332 ಹಳೇ ... ಮನೆ ... ದೀಪ ... ಕೊಡಲಾಗುತ್ತೆ. ವಿಚಾರಿಸಿ
ಜಯ ಅಂಡ್ ಕಂಪೆನಿ,
ಮನೆ, ... ವ್ಯವಹಾರಗಳ ಏಜೆಂಟರು
ಹಳೇ ಮೈಸೂರು ಬ್ಯಾಂಕ್ ಕಟ್ಟಡ ಮೈಸೂರು ಫೋನ್ ನಂ 520

## ...ಟ್ಯುಟೋರಿಯಲ್ ಕಾಲೇಜು,
ಮೈಸೂರು
[illegible]
ವಿವರಗಳಿಗೆ ... ಬರೆಯಿರಿ
... 170/3 ... ಅಗ್ರಹಾರ ಮೈಸೂರು

## ಸಿಟಿ ಮುನಿಸಿಪಲ್ ಆಫೀಸು,

ಮೈಸೂರು, ತಾ|| 21 9-1953

## ಟೆಂಡರು ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನ ... ಹೊಸದಾಗಿ ಕಟ್ಟಿರುವ ಕಟ್ಟಡದಲ್ಲಿ ಫಲಹಾರ ... ಕ್ಯಾಂಟೀನನ್ನು ನಡೆಸಿಕೊಂಡು ಹೋಗುವ ಹಕ್ಕನ್ನು ಟೆಂಡರ ಮೂಲಕ ವಿಲೆಪಡಿಸಲಾಗುತ್ತೆ. ಇಷ್ಟವುಳ್ಳವರು ಮಾಡಬೇಕಾದ ... ಸೀಲ್ಡು ಟೆಂಡರುಗಳನ್ನು 25 9 53ನೇ ಮಧ್ಯಾಹ್ನ 4 ಘಂಟೆ ... ಮುನಿಸಿಪಲ್ ಕಮೀಷನರವರಲ್ಲಿ ... ಪ್ರತಿ ಟೆಂಡರ ಜೊತೆಗೆ ಮುನಿಸಿಪಲ್ ಖಜಾನೆಯಲ್ಲಿ ಡಿಪಾಜಿಟ್ ಎಗೈ 50 ರೂಪಾಯಿ ಜಮಾ ಮಾಡಿಸಿದ ರಸೀದಿಯನ್ನು ಲಗತ್ತಿಸಬೇಕು. ಕಾಲಾತೀತವಾದ ಮತ್ತು ಡಿಪಾಜಿಟ್ಟಿಲ್ಲದ ಟೆಂಡರನ್ನು ಅಂಗೀಕರಿಸಲಾಗುವುದಿಲ್ಲ. ಇತರ ವಿವರಗಳನ್ನು ಆಫೀಸಿನಲ್ಲಿ ಕೆಲಸದ ಕಾಲದಲ್ಲಿ ತಿಳಿಯಬಹುದು.

ಎನ್ ಲಕ್ಷ್ಮಣರಾವ್,
ಮುನಿಸಿಪಲ್ ಕಮೀಷನರ್

ರಿಜಿಸ್ಟರ್ ನಂ 792

[ ಸಂಜೆ ಪತ್ರಿಕೆ ]

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE WEDNESDAY 23-9-1953 ಮೈಸೂರು ಬುಧವಾರ ೨೩-೯-೧೯೫೩ [ ಸಂಚಿಕೆ ೫೦

# ನಾಳಿದ್ದಿನೊಳಗೆ ಸಿಂಹಳದ ಪ್ರಧಾನಿಯ ರಾಜೀನಾಮೆ

## ಸಂಸ್ಥಾನದ ಹೈಕೋರ್ಟಿಗೆ ಆರನೇ ಜಡ್ಜರ ನೇಮಕ

ಬೆಂಗಳೂರು ೨೨

ಮೈಸೂರು ಸಂಸ್ಥಾನದೊಡನೆ ಬಳ್ಳಾರಿಯು ಸೇರಲಿರುವುದರಿಂದ ಸಂಸ್ಥಾನದ ಶ್ರೇಷ್ಠ ನ್ಯಾಯಾಲಯದ ಜಡ್ಜಿಗಳ ಸ್ಥಾನಕ್ಕೆ ಮತ್ತೊಬ್ಬ ಆರನೇ ಜಡ್ಜರನ್ನು ನೇಮಿಸಬೇಕೆಂದು ಕೋರ್ಟಿನವರು ಕೇಳಿರುವರೆಂದೂ ಇದಕ್ಕೆ ರಾಷ್ಟ್ರಾಧ್ಯಕ್ಷರ ಅನುಮತಿಯಿರುವುದರಿಂದ ಸಂಸ್ಥಾನ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸುತ್ತಿರುವರೆಂದೂ ತಿಳಿದುಬಂದಿದೆ

### ಕಿಡಿ ಪತ್ರಿಕೆ ಮೇಲೆ ಕಂಟೆಂಪ್ಟ್ ಮೊಕದ್ದಮೆ

ಬೆಂಗಳೂರಿನ "ಕಿಡಿ" ವಾರಪತ್ರಿಕೆಯ ಸಂಪಾದಕ ಶ್ರೀ ಪಿ ಶೇಷಪ್ಪ ಮತ್ತು ಮುದ್ರಕ ಎಂ ಎಸ್ ಚಂದ್ರಾಮಣಿಯವರ ಮೇಲೆ ಪತ್ರಿಕಾ ಶಾಸನದ ರೀತ್ಯಾ ಮೊಕದ್ದಮೆಯೊಂದು ನಡೆಯುತ್ತಿದ್ದಾಗಲೇ ಅವರು ತಮ್ಮ ಪತ್ರಿಕೆಯ ೫ ೯ ೫೩ ನೇ ತಾರೀಖಿನ ಸಂಚಿಕೆಯಲ್ಲಿ "ಕಿಡಿ ಮೇಲೆ ಕೆಂಗಲ್ಲರ ದ್ವಿತೀಯ ಧಾಳಿ" ಎಂಬ ಶಿರೋನಾಮೆಯಲ್ಲಿ ಬರೆದ ಲೇಖನವು ಕೋರ್ಟಿಗೆ ಅವಮಾನ ಮಾಡುವ ರೀತಿಯಲ್ಲಿರುವುದೆಂದೂ ಅದರ ಪ್ರಕಾರ ಅವರ ಮೇಲೆ ಕ್ರಮ ಜರುಗಿಸಬೇಕೆಂದೂ ಕೋರಿ ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಅಲ್ಲಿನ ಸೆಷನ್ಸ್ ಜಡ್ಜರ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಎ ಪದ್ಮನಾಭಯ್ಯನವರು ಅರ್ಜಿಯನ್ನು ಪುರಸ್ಕರಿಸಿ, ಹೈಕೋರ್ಟಿನವರು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿರುವರು

## ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಯಜ್ಞ ಚಳುವಳಿ

ಮೈಸೂರು ಜಿಲ್ಲಾ ಭೂದಾನ ಯಜ್ಞ ವ್ಯವಸ್ಥಾಪಕರಾದ ಶ್ರೀ ಎಸ್ ವಿ ಮಂಜುನಾಥರವರು ಈ ರೀತಿ ಮನವಿ ಮಾಡಿರುತ್ತಾರೆ –

ಬರುವ ಅಕ್ಟೋಬರ್ ೨ ನೇ ತಾ|| ಗಾಂಧಿ ಜಯಂತಿಯ ದಿನ ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಯಜ್ಞ ಚಳವಳಿ ಪ್ರಾರಂಭವಾಗಲಿದೆ ಅಂದಿನಿಂದ ಎರಡು ವಾರ ಪರ್ಯಂತ ಸದರಿ ತಾಲ್ಲೂಕಿನಲ್ಲಿ ಭೂದಾನ ಕಾರ್ಯಕರ್ತರ ಅನೇಕ ತಂಡಗಳು ಪಾದಯಾತ್ರೆ ಕೈಗೊಂಡು ಭೂದಾನ ಪ್ರಚಾರ ಮತ್ತು ಸ್ವೀಕರಣೆಗೆ ಹೊರಡಲಿವೆ ಈ ಅವಧಿಯ ಮೊದಲನೆಯ ವಾರ ಕೆಲವು ತಂಡಗಳೂ, ಎರಡನೆಯ ವಾರ ಇನ್ನು ಕೆಲವು ತಂಡಗಳೂ ಪ್ರವಾಸ ಹೊರಡುವುವು ಪಾದಯಾತ್ರೆಯಲ್ಲಿ ಭಾಗವಹಿಸಲು ಅಪೇಕ್ಷಿಸುವ ಉತ್ಸಾಹಿಗಳೆಲ್ಲರೂ ದಯಮಾಡಿ ತಮ್ಮ ಹೆಸರು ವಿಳಾಸ ಇತ್ಯಾದಿ ವಿವರಗಳನ್ನು ಮೈಸೂರು ದಿವಾನ್ಸ್ ರಸ್ತೆ ಡೋರ್ ನಂ ೨೦೫ರಲ್ಲಿರುವ ಜಿಲ್ಲಾ ಭೂದಾನ ಕಾರ್ಯಾಲಯದ ಬ್ಲಾಗಲೀ ಲಕ್ಷ್ಮೀ ವಿಲಾಸ ಅಗ್ರಹಾರದಲ್ಲಿರುವ ಚೇತನ ಪುಸ್ತಕಾಲಯದಲ್ಲಾಗಲೀ, ನಂಜನಗೂಡು ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಎಂ ಕೃಷ್ಣಯ್ಯನವರಿಗಾಗಲೀ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥಿಸಲಾಗಿದೆ

ಭೂಮಿ ಇಲ್ಲದವರಿಗೆ ಭೂಮಿ ಕೊಡಿಸಿ, ಅಹಿಂಸಾತ್ಮಕವಾಗಿ ದೇಶದ ಭೂ ಸಮಸ್ಯೆಯನ್ನು ಬಿಡಿಸಲು ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯ ಪೂಜ್ಯ ವಿನೋಬಾರವರು ಪ್ರಾರಂಭಿಸಿರುವ ಈ ಮಹಾ ಆಂದೋಳನದಲ್ಲಿ ಸರ್ವರೂ ಭಾಗವಹಿಸಬೇಕಾಗಿ ವಿನಂತಿ

## ಅರಮನೆ ಆನೆಯು ಮಾವಟಿಗನನ್ನು ಕಡವಿ ಗಾಯ

ಮೈಸೂರು ೨೨

ಅರಮನೆಗೆ ಸೇರಿದ ಆನೆಯೊಂದನ್ನು ಈ ದಿನ ಮಾವಟಿಗನು ದೇವರಾಜ ಮಾರ್ಕೆಟ್ ಬಳಿ ಧನ್ವಂತರಿ ರಸ್ತೆಯಲ್ಲಿ ಕೊಂಡೊಯ್ಯುತ್ತಿದ್ದಾಗ ಅದು ಅವನನ್ನು ಕೆಳಕ್ಕೆ ಕೆಡವಿ ತಿವರಿ ಹಾಕಿತು. ಆತನಿಗೆ ಹೊರಟಿತು ಮಾವಟಿಗನಿಗೆ ಗಾಯವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಯಿತು ಅನಂತರ ಗಜಶಾಲೆಯ ಮಿತ್ರರೂ ಆನೆಗಳು ಬಂದು ಅದನ್ನು ಹಿಡಿದು ವಾಪಸು ಕರೆದುಕೊಂಡುಹೋದವು

### ಸಂಗೀತ ಕಛೇರಿ

ಶಾಸ್ತ್ರೀ ಅಗ್ರಹಾರದಲ್ಲಿರುವ ವಿದ್ಯಾಗಣಪತಿ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ವಿ|| ಸ್ವರಮೂರ್ತಿಯವರ ಸಂಗೀತ ಕಛೇರಿಯನ್ನು ನಗರ ಕಾಂಗ್ರೆಸ್ ಸಮಿತಿ ಸದಸ್ಯರಾದ ಶ್ರೀ ಬಿ ಎನ್ ಕೆಂಗೇಗೌಡರ ನೇತೃತ್ವದಲ್ಲಿ ಏರ್ಪಡಿಸಿರುತ್ತಿ ಸಂಸ್ಥಾಪಿಸಿಯು ಗ ಥವಕಡ್ಡಿ ಶಾಖಾನೆ ಮಾಲಿಕರಾದ ಶ್ರೀ ಎಂ ಯೂಸುಫ್ ಸಾಹೇಬರು ಸನ್ಮಾನ ನಡೆಸುವರು

### ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾವಣೆಗಾಗಿ ಶಿಫಾರಸು

ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಶ್ರೀ ಎಚ್ ಕೆ ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಸೇರಿ ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆ ವಿಧಾನದ ಬಗ್ಗೆ ಪರಿಶೀಲಿಸಿ ಮುಂದೆ ಬರಲಿರುವ ಚುನಾವಣೆಗಳು ನೇರವಾಗಿ ನಡೆಯುವಂತಾಗಬೇಕೆಂದು ಸಲಹೆ ಮಾಡಲಾಯಿತು

## ಜಾರ್ಜಿಯಾ ಪ್ರಾಂತದ ಮುಖ್ಯ ಮಂತ್ರಿಯ ವಜಾ

ಮಾರ್ಷಲ್ ಸ್ಟಾಲಿನ್ನರ ಸ್ವಂತ ಪ್ರಾಂತವಾದ ಜಾರ್ಜಿಯದ ಮಂತ್ರಿಮಂಡಲದಲ್ಲಿ ತೀವ್ರ ಬದಲಾವಣೆಗಳಾಗಿ ಮುಖ್ಯ ಮಂತ್ರಿಯನ್ನು ತೆಗೆದುಹಾಕಿ ಬೇರೆಯವರನ್ನು ನೇಮಿಸಲಾಗಿದೆಯೆಂದೂ, ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಕಾರ್ಯದರ್ಶಿಯನ್ನೂ ಬದಲಾಯಿಸಲಾಗಿರುವುದೆಂದೂ ಗೊತ್ತಾಗಿದೆ

## ನಿರುದ್ಯೋಗಿಗಳಿಗೆ ಭೂಪಾಲ್ ನವಾಬರ ನೆರವು

ಭೂಪಾಲ್ ಸಂಸ್ಥಾನದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಅಲ್ಲಿನ ನವಾಬರು ತಮ್ಮ ಸ್ವಂತ ಧನದಿಂದ ಒಂದು ಲಕ್ಷ ರೂ ಗಳನ್ನು ಬಡ್ಡಿಯಿಲ್ಲದೆ ಸಾಲವಾಗಿ ಕೊಡಲು ಮುಂದೆ ಬಂದಿರುವರು

★ ತಿರುವಾಂಕೂರು ಕೊಚ್ಚಿಯಲ್ಲಿ ಭಾರತದ ದ್ವಿತೀಯ ಡಿ ಡಿ ಟಿ ಕಾರ್ಖಾನೆಯನ್ನು ಸ್ಥಾಪಿಸುವ ಅಂಶವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಉತ್ಪನ್ನ ಖಾತಾ ಸಚಿವ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುವರು

## ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಮೇಲೆ ದೂರು

### ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡಲಿಲ್ಲವೆಂದು ಆಪಾದನೆ

ಚಿಕ್ಕಮಗಳೂರಿನಲ್ಲಿ ನಡೆಯುತ್ತಿರುವ ಫೈರ್ ಸರ್ವೀಸ್ ಸಂಸ್ಥೆಯು ಪ್ರದರ್ಶನದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದೆಂದೂ ಅದನ್ನು ತಪ್ಪಿಸಬೇಕೆಂದೂ ಅಲ್ಲಿನ ಕಾಂಗ್ರೆಸ್ಸಿನವರೂ ಮತ್ತು ಹಲವು ಶಾಸನ ಸಭಾ ಸದಸ್ಯರೂ ಕಳೆದ ಭಾನುವಾರ ಜಿಲ್ಲಾಧಿಕಾರಿ ಶ್ರೀ ಎಂ ಎಸ್ ಶಂಕರರಾಯರ ಬಳಿ ನಿಯೋಗ ಹೋಗಿ ಪ್ರಾರ್ಥಿಸಿದರೆಂದೂ ಜಿಲ್ಲಾಧಿಕಾರಿಗಳು ತಮಗೆ ಪ್ರೊಲೀಸರಿಂದ ವರದಿ ಬಂದಿಲ್ಲವೆಂದೂ, ಅದರ ಬಗ್ಗೆ ವಿಚಾರಣೆ ನಡೆಸುವುದಾಗಿಯೂ ತಿಳಿಸಲು ನಿಯೋಗದವರು ತಮ್ಮ ಅಹವಾಲಿಗೆ ಮನ್ನಣೆ ದೊರೆಯದಿದ್ದುದಕ್ಕೆ ಅಸಮಾಧಾನಗೊಂಡು ಕಾಂಗ್ರೆಸ್ ಕಛೇರಿಯಲ್ಲಿ ಸಭೆ ಸೇರಿ ಜಿಲ್ಲಾಧಿಕಾರಿಗಳ ವರ್ತನೆ ಬಗ್ಗೆ ವಿಷಾದ ಸೂಚಿಸುವ ನಿರ್ಣಯ ಮಾಡಿದರೆಂದೂ ಗೊತ್ತಾಗಿದೆ ಸದರಿ ನಿರ್ಣಯ ಈ ವಿಷಯವನ್ನು ಕುರಿತು ಮುಖ್ಯ ಮಂತ್ರಿಗಳಿಗೂ ಗೃಹ ಸಚಿವರು ಮತ್ತು ಕಾಂಗ್ರೆಸ್ ಅಧ್ಯಕ್ಷರಿಗೂ ತಂತಿ ಮೂಲಕ ತಿಳಿಸಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ದೊರೆಯದ ಅಂಶವನ್ನು ಗಮನಕ್ಕೆ ತರಲಾಯಿತು ಅಲ್ಲಿನ ಜನ ಕಾಂಗ್ರೆಸ್ ಪ್ರಮುಖರು ಸರ್ಕಾರದವರೊಡನೆ ಈ ವಿಷಯವಾಗಿ ಮಾತುಕತೆ ನಡೆಸಲು ಬೆಂಗಳೂರಿಗೆ ತೆರಳುವರೆಂದೂ ಗೊತ್ತಾಗಿದೆ

## ಪ್ರಜೆಗಳ ಇಷ್ಟಕ್ಕೆ ವಿರುದ್ಧವಾಗಿ ರಾಜಪ್ರಮುಖರಿರಬಾರದು

### ನೆಹರೂರವರ ಸೂಚನೆ

ಸಂಸ್ಥಾನಗಳ ಪ್ರಜೆಗಳು ಅಪೇಕ್ಷೆ ಪಡದಿದ್ದರೆ ರಾಜಪ್ರಮುಖರುಗಳು ಆ ಸ್ಥಾನಗಳಲ್ಲಿ ಇರಬಾರದೆಂದೂ, ಅವರುಗಳು ಕಾಲ, ದೇಶ ವರ್ತಮಾನಗಳನ್ನರಿತು ನಡೆಯಬೇಕೆಂದೂ ತಿಳಿಸಿ ಪ್ರಧಾನಿ ನೆಹರೂರವರು ರಾಜಪ್ರಮುಖರುಗಳಿಗೆ ಪತ್ರ ಬರೆದಿರುವುದಾಗಿ ವರದಿಯಾಗಿದೆ

## ತಿರುವಾಂಕೂರು ತಮಿಳು ನಾಡು ಕಾಂ॥ಗೆ ಹೈಕಮ್ಯಾಂಡಿನ ಪತ್ರ ?

ತಿರುವಾಂಕೂರು ಕೊಚ್ಚಿ ಸಂಸ್ಥಾನದ ತಮಿಳುನಾಡು ಕಾಂಗ್ರೆಸ್ಸಿನವರು, ಸಂಸ್ಥಾನದಲ್ಲಿ ತಮಿಳು ಮಾತನಾಡುವ ಪ್ರದೇಶಗಳಿಗೆ ಪ್ರತ್ಯೇಕವಾದ ಒಂದು ಜಿಲ್ಲಾ ಕಾಂಗ್ರೆಸ್ಸನ್ನು ಸ್ಥಾಪಿಸಬೇಕೆಂದು ಸೂಚಿಸಿ ಅದು ನಿರಾಕರಿಸಲ್ಪಟ್ಟುದರಿಂದ ಸರ್ಕಾರಕ್ಕೆ ತಮ್ಮ ಬೆಂಬಲವನ್ನು ವಾಪಸು ಪಡೆದರಷ್ಟೆ ಈ ಬಗ್ಗೆ ಸಂಧಾನ ನಡೆಸಲು ಅಲ್ಲಿಗೆ ಆಗಮಿಸಿರುವ ತಮಿಳುನಾಡು ಕಾಂಗ್ರೆಸ್ಸಿನ ಅಧ್ಯಕ್ಷ ಕಾಮರಾಜ ನಾಡಾರ್‌ರವರು ಭಾರತ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿಯಿಂದ, ತಿರುವಾಂಕೂರು ತಮಿಳುನಾಡು ಕಾಂಗ್ರೆಸ್ಸಿನವರ ಬೇಡಿಕೆಯನ್ನು ಹೈಕಮ್ಯಾಂಡಿನವರು ಪರಿಶೀಲಿಸುವರೆಂದೂ, ಅವರು ಸಂಸ್ಥಾನದ ಕಾಂಗ್ರೆಸ್ಸಿನೊಡನೆ ಸಹಕರಿಸಬೇಕೆಂದೂ ಸೂಚಿಸುವ ಪತ್ರವೊಂದನ್ನು ತಂದಿರುವರೆಂದು ಹೇಳಲಾಗಿದೆ

## ತಿರುವಾಂಕೂರು-ಕೊಚ್ಚಿ ಸರ್ಕಾರದ ಬಿಕ್ಕಟ್ಟು

### ವಿಶ್ವಾಸ, ಅವಿಶ್ವಾಸ ನಿರ್ಣಯಗಳನ್ನು ಏಕಕಾಲದಲ್ಲಿ ಚರ್ಚಿಸಲು ಕ್ರಿಯಾಲೋಪ

ತಿರುವಾಂಕೂರು ಕೊಚ್ಚಿ ಸಂಸ್ಥಾನದ ಶಾಸನ ಸಭೆಯು ನೆನ್ನೆ ಸೇರಿದಾಗ ಅಲ್ಲಿನ ಮುಖ್ಯ ಮಂತ್ರಿ ಶ್ರೀ ಎ ಜೆ ಜಾನರವರು ಸರ್ಕಾರದಲ್ಲಿ ವಿಶ್ವಾಸವನ್ನು ಕೋರುವ ನಿರ್ಣಯವನ್ನು ಮಂಡಿಸಿದರು ಅಧ್ಯಕ್ಷರು ಅದನ್ನು ಪುರಸ್ಕರಿಸಿ, ಈ ದಿನ ಅದನ್ನು ಚರ್ಚಿಸಬಹುದೆಂದು ಗೊತ್ತುಪಡಿಸಿದರು ವಿರೋಧ ಪಕ್ಷದ ನಾಯಕರಾದ ಶ್ರೀ ಥಾಮಸ್‌ರವರು, ನಿರ್ಣಯವು ಕ್ರಮಬದ್ಧವಾಗಿಲ್ಲವೆಂದು ತಿಳಿಸಿ, ಅದನ್ನು ಮಂಡಿಸಬಹುದೇ ಎಂಬ ಬಗ್ಗೆ ಅಧ್ಯಕ್ಷರು ರೂಲಿಂಗನ್ನು ಕೊಡಬೇಕೆಂದು ಕೇಳಿದರು ಅದು ಕ್ರಮವಾಗಿರವುದಾಗಿ ಅಧ್ಯಕ್ಷರು ತಿಳಿಸಿದರು

ಶ್ರೀ ಥಾಮಸ್‌ರವರು ಒಂದು ಕ್ರಿಯಾ ಲೋಪವನ್ನೆತ್ತಿ ತಾವು ಅವಿಶ್ವಾಸ ನಿರ್ಣಯದ ಬಗ್ಗೆ ಒಂದು ನೋಟೀಸು ಕೊಟ್ಟಿರುವುದಾಗಿಯೂ, ಎರಡನ್ನೂ ಒಟ್ಟಿಗೇ ಚರ್ಚಿಸಬೇಕೆಂದೂ ಸಲಹೆ ಮಾಡಿದರು ಮುಖ್ಯ ಮಂತ್ರಿಗಳ ನಿರ್ಣಯವನ್ನು ಮೊದಲು ಚರ್ಚಿಸಲು ಅವಕಾಶ ಕೊಟ್ಟರೆ ಅದರಿಂದ ವಿರೋಧ ಪಕ್ಷದ ಹಿತಕ್ಕೆ ಧಕ್ಕೆ ತಗಲುವುದೆಂದೂ ಈಗಿನ ಮಂತ್ರಿ ಮಂಡಲವು ಪರಾಜಿತವಾದರೆ ಹೊಸ ಸರ್ಕಾರವನ್ನು ರಚಿಸಲು ತಾವು ಸಿದ್ಧತೆಗಳನ್ನು ಮಾಡಿಕೊಂಡಿರುವುದಾಗಿಯೂ ಶ್ರೀ ಥಾಮಸ್‌ರವರು ತಿಳಿಸಿದರು ಅಧ್ಯಕ್ಷರು ಕ್ರಿಯಾ ಲೋಪವನ್ನು ತಳ್ಳಿಹಾಕಿ ಅವಿಶ್ವಾಸ ನಿರ್ಣಯಕ್ಕೆ ಅವಕಾಶ ಕೊಡುವ ಬಗ್ಗೆ ತಾವು ಯಾವ ನಿರ್ಧಾರಕ್ಕೂ ಬಂದಿಲ್ಲವೆಂದು ತಿಳಿಸಿ ವಿಶ್ವಾಸ ಅವಿಶ್ವಾಸ ನಿರ್ಣಯಗಳೆರಡನ್ನೂ ಏಕಕಾಲದಲ್ಲಿ ಮಂಡಿಸಲು ಸಾಧ್ಯವಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು

## ಶುಕ್ರವಾರದೊಳಗೆ ಸಿಂಹಳದ ಮುಖ್ಯಮಂತ್ರಿಯ ರಾಜೀನಾಮೆ

ಸಿಂಹಳದ ಪ್ರಧಾನಿ ಸೇನಾನಾಯಕೆಯವರು ಬರುವ ಶುಕ್ರವಾರದೊಳಗೆ ರಾಜೀನಾಮೆ ಕೊಡುವುದು ಖಚಿತವೆಂದೂ, ಈಚೀಚೆಗೆ ದೇಶದಲ್ಲಿ ನಡೆದ ಬಹುದಾದ ಘಟನೆಗಳಿಂದ ಮಾತ್ರ ಮೇಲ್ಕಂಡ ನಿರ್ಧಾರವು ಬದಲಾಗಬಹುದೆಂದೂ ಅಲ್ಲಿನ ರಾಜಕೀಯ ವಲಯಗಳಲ್ಲಿ ಭಾವಿಸಲಾಗಿದೆ ಅಲ್ಲಿನ ಸಂಚಾರ ಖಾತಾ ಸಚಿವ ಸರ್ ಜಾನ್ ಕೊಟಲ್‌ವಾಲಾರವರನ್ನು ಹೊಸ ಸರ್ಕಾರ ರಚಿಸಲು ಗವರ್ನರ್ ಜನರಲ್ಲರು ಆಹ್ವಾನಿಸುವರೆಂದೂ ಹೇಳಲಾಗುತ್ತಿದೆ

## ಕೊಳದ ಬಳ್ಳಿಗಳು ಕಾಲಿಗೆ ಸುತ್ತಿಕೊಂಡು ೩ ಮಕ್ಕಳ ಮರಣ

ಕಟಕ್ಕಿನ ಒಂದು ಕೊಳದಲ್ಲಿ ಬೆಳೆದಿದ್ದ ನೈದಿಲೆ ಹೂವನ್ನು ಕಿತ್ತು ತರಲು ಹೋದ ಒಬ್ಬ ಹುಡುಗಿಯು ನೆನ್ನೆ ಬಳ್ಳಿಗಳು ಕಾಲಿಗೆ ಸುತ್ತಿಕೊಂಡು ನೀರಿನಲ್ಲಿ ಮುಳುಗಿ ಸತ್ತಳೆಂದೂ, ಅವಳನ್ನು ರಕ್ಷಿಸಲು ಹೋದ ಅವಳ ಇಬ್ಬರು ತಮ್ಮಂದಿರೂ ಇದೇ ರೀತಿ ಮುಳುಗಿ ಪ್ರಾಣ ಬಿಟ್ಟರೆಂದೂ

## ಬೆಲ್ಲದ ಬೆಲೆ ಹತೋಟಿ ಜಾರಿ?

ಬೆಂಗಳೂರು ೨೩

ಸಂಸ್ಥಾನದ ಆಹಾರ ಸಚಿವ ಶ್ರೀ ಎಚ್. ಸಿದ್ಧವೀರಪ್ಪನವರು ನೆನ್ನೆ ಇಲ್ಲಿ ಪತ್ರಿಕಾ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಾ, ಕೆಲವು ತಿಂಗಳ ಹಿಂದೆ ಬೆಲ್ಲದ ಬೆಲೆಯು ಮಣಿಗೆ ೧-೩ ಆಣೆಯಿಷ್ಟು ಇತ್ತೀಚೆಗೆ ವಿಶೇಷವಾಗಿ ಏರಿ ೨-೪-೦ ರೂ ಗಳಿಗೆ ಏರಲ್ಪಡುತ್ತಿರುವುದರಿಂದಲೂ, ಆದ್ದರಿಂದ ಅದರ ಬೆಲೆಯನ್ನು ನಿಗದಿ ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆಯೆಂದೂ ತಿಳಿಸಿ, ಅವರು ಈ ವಿಷಯವನ್ನು ಪರ್ಯಾಲೋಚಿಸುತ್ತಿರುವರೆಂದೂ ಹೇಳಿದರು

## ಭೂಕಂಪದಿಂದ ಬೆಟ್ಟದಲ್ಲಿ ಬಿರುಕು

ಕಳೆದ ವಾರ ಸೈಪ್ರಸ್ ದ್ವೀಪದಲ್ಲಿ ಸಂಭವಿಸಿದ ಭೂಕಂಪದಿಂದ ಒಲಿಂಪಸ್ ಪರ್ವತದ ಒಂದು ಬೆಟ್ಟವು ಬಿರಿದು ಕುಸಿದು ಬಿದ್ದು ಪಕ್ಕದ ಗ್ರಾಮಗಳ ಮನೆಗಳು ನಾಶವಾಗುತ್ತಿರುವುವೆಂದು ವರದಿಯಾಗಿದೆ. ಕಳೆದ ಶುಕ್ರವಾರ ಬೆಟ್ಟದ ಭಾಗವು ಇತ್ತ ಕುಸಿದ ದರಿಂದ ಅದರ ತಪ್ಪಲಿನಲ್ಲಿದ್ದ ೫೦೦ ವರ್ಷಗಳ ಹಿಂದಿನ ಕಟ್ಟಡವೊಂದು ಬಿರುಕು ಬಿಟ್ಟಿದಾಗಿ ಗೊತ್ತಾಗಿದೆ. ಭೂಕಂಪವಾದ ದಿನದಿಂದ ಈಚೆಗೆ ಅಲ್ಲಿನ "ನೀ" ನದಿಗಳಲ್ಲಿ ಪ್ರವಾಹ ಹೆಚ್ಚಿ ಅದರಿಂದಲೂ ಕಷ್ಟ ನಷ್ಟಗಳು ಸಂಭವಿಸಿವೆ

### ಎರಡು ತಲೆಗಳ ಶಿಶು

ಪಶ್ಚಿಮ ಬಂಗಾಳದ ಡಿಕಲ್ ಕಾಲೆ ಜು ಆಸ್ಪತ್ರೆಯಲ್ಲಿ ಗ ಪ್ಪಗಾಣದ ಮಹಿಳೆಯೊಬ್ಬಳು ಎರಡು ತಲೆಯ ಮಗುವನ್ನು ಪ್ರಸವಿಸಿರುತ್ತಾಳೆ. ಈ ಮಗುವಿನ ತೂಕ ೧೧ ಪೌಂಡು. ಮಗು ಮತ್ತು ತಾಯಿ ಆರೋಗ್ಯವಾಗಿರುವರೆಂದೂ, ಈ ಸೃಷ್ಟಿವೈಚಿತ್ರ್ಯವನ್ನು ನೋಡಲು ಜನರು ಹಿಂಡು ಹಿಂಡಾಗಿ ಬರುತ್ತಿರುವರೆಂದೂ ವರದಿಯಾಗಿದೆ

### ವಿಶ್ವದ ರಾಶಿಯಲ್ಲಿ ಹೊಸದೊಂದು ನಕ್ಷತ್ರ

ಬ್ರಸಲ್ಸಿನ ... ಖಗೋಳಜ್ಞರ ಅಂತರಿಕ್ಷದಲ್ಲಿ ... ಹೊಸದೊಂದು ನಕ್ಷತ್ರವನ್ನು ಕಂಡುಹಿಡಿದಿರುವರೆಂದು ತಿಳಿದುಬಂದಿದೆ. ಈ ನಕ್ಷತ್ರವು ಭೂಮಿಗೆ ಸುಮಾರು ಎರಡು ಕೋಟಿ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿರುವುದು, ಕೆಲವು ಮೈಲಿಗಳ ಅಗಲವಿರುವುದೆಂದು ಹೇಳಲಾಗಿದೆ. ಅದರ ಶೋಧನೆ ಬಗ್ಗೆ ಇತರ ದೇಶಗಳ ಖಗೋಳ ಶಾಸ್ತ್ರಜ್ಞರೂ ಪ್ರಯತ್ನ ನಡೆಸಬೇಕೆಂದು ಬ್ರಸಲ್ಸಿನ ವಿಜ್ಞಾನಿಗಳು ಮನವಿ ಮಾಡಿಕೊಂಡಿರುವರು

### ಸಂಗೀತ ಸ್ಪರ್ಧೆ

ಮೈಸೂರು ಮಹಾರಾಜಾ ಕಾಲೇಜು ಮಿತ್ರ ಸಂಘದ ಆಶ್ರಯದಲ್ಲಿ ಮೈಸೂರು ನಗರದ ಎಲ್ಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಅಕ್ಟೋಬರ್ ೫ ರಂದು ವಿವಿಧ ಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಭಾಗವಹಿಸಲಿಚ್ಛಿಸುವವರು ಇದೆ ೩೦ ನೇ ತಾ|| ಸೊಳಗಾಗಿ ಶ್ರೀ ... ರವರಲ್ಲಿ ಪ್ರವೇಶ ಪಡೆಯಬಹುದೆಂದು ... ಮಹಾರಾಜಾ ಕಾಲೇಜು ... ವ್ಯವಹಾರಸಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

### ದೊಡ್ಡಬಳ್ಳಾಪುರದಲ್ಲಿ ವಿದ್ಯಾ ಗಣಪತಿ ಪೂಜೆ

ದೊಡ್ಡಬಳ್ಳಾಪುರ ತಾಲ್ಲೂಕು ದೊಡ್ಡಬೆಳವಂಗಲ ಗ್ರಾಮದ ವಿದ್ಯಾ ಮಂಡಲಿಯ ಆಶ್ರಯದಲ್ಲಿ ಕಳೆದ ಗುರುವಾರ ಸರಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರಾದ ಶ್ರೀ ಎಚ್. ಎಲ್. ವೆಂಕಟನಾರಾಯಣ ... ಅಧ್ಯಕ್ಷತೆಯಲ್ಲಿ ವಿದ್ಯಾಗಣಪತಿ ಪೂಜೆಯು ಜರುಗಿತು. ಪ್ರಾರ್ಥನೆಯಾದ ನಂತರ ... ಸಭಿಕರು ... ಭಾಷಣ ಮಾಡಿ ... ಸಂಗೀತಗಳಾದನಂತರ ಶ್ರೀ ... ರಾಯರು ವಿದ್ಯಾ ಗಣಪತಿಯ ವಿಚಾರವಾಗಿ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಎಚ್. ಜಿ. ವೆಂಕಣ್ಣನವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

## ಪ್ರಜಾ ಸೋಷಲಿಸ್ಟ್ ಪಕ್ಷಕ್ಕೆ ೫೦ ಪ್ರಮುಖರ ರಾಜೀನಾಮೆ

ಪ್ರಜಾ ಸೋಷಲಿಸ್ಟ್ ಪಕ್ಷಕ್ಕೆ ಸೇರಿದ, ದೆಹಲಿಯ ಟ್ರೇಡ್ ಯೂನಿಯನ್ನಿನ ೫೦ ಮಂದಿ ಪ್ರಮುಖ ಸದಸ್ಯರು ನೆನ್ನೆ ಸಭೆ ಸೇರಿ ಪ್ರಜಾ ಸೋಷಲಿಸ್ಟ್ ಪಕ್ಷಕ್ಕೆ ರಾಜೀನಾಮೆ ಕೊಡಲು ತೀರ್ಮಾನಿಸಿದರು. ಸಭೆಯಲ್ಲಿ, ಪ್ರಜಾ ಸೋಷಲಿಸ್ಟ್ ಪಕ್ಷದ ಗುರಿಯ ಸಾಧನೆಗಾಗಿ ಟ್ರೇಡ್ ಯೂನಿಯನ್ನಿನವರನ್ನೂ ಮತ್ತು ಕಾರ್ಮಿಕರನ್ನೂ ಪಕ್ಷದ ಅಧೀನಕ್ಕೊಳಪಡಿಸಲಾಗುತ್ತಿರುವುದೆಂದೂ, ಈ ನೀತಿಯು ತಪ್ಪುವವರಿಗೆ ನಿಷ್ಪಕ್ಷಪಾತವಾದ ಸಮಾಜವಾದಿಗೆ ಪಕ್ಷದಲ್ಲಿ ಸ್ಥಾನವಿಲ್ಲವೆಂದೆಂದೂ ಅವರು ನಿರ್ಣಯ ಮಾಡಿದರು

## ದಕ್ಷಿಣ ಭಾರತದಲ್ಲಿ ಉಪ್ಪಿನ ಕಾರ್ಖಾನೆ

ತಿರುವಾಂಕೂರಿನ ಬಳಿ ಇರುವ ಎನಾಕುಲಂ ಅಥವಾ ಕನ್ಯಾಕುಮಾರಿಯಲ್ಲಿ ಶೀಘ್ರದಲ್ಲೇ ಒಂದು ಉಪ್ಪಿನ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಕೇಂದ್ರ ಸರ್ಕಾರದ ಉತ್ಪನ್ನ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುವರು

## ೩೭ ವರ್ಷಗಳ ನಂತರ ಹೆಂಗಸಾದ ಗಂಡಸು

ಆಸ್ಟ್ರಿಯದ ಒಬ್ಬನು ತನ್ನನ್ನು ಗಂಡಸೆಂದು ಕರೆಯಿಸಿಕೊಳ್ಳಲು ಎಷ್ಟೊಂದು ಪ್ರಯತ್ನ ಪಟ್ಟರೂ ವಿಫಲವಾಗಿ ಕೊನೆಗೆ ಫ್ರಾನ್ಸಿಸ್ಕೊ ಎಂಬ ಮಹಿಳೆಯಾದ ವಿಷಯವು ವರದಿಯಾಗಿದೆ. ೩೭ ವರ್ಷಗಳ ಹಿಂದೆ ಅವನು ಹುಟ್ಟಿದಾಗ ಮಾತಾಪಿತೃಗಳು ಗಂಡು ಶಿಶುವನ್ನೇ ಬಯಸಿ ಆ ವ್ಯಕ್ತಿಗೆ ಗಂಡಸಿನ ಹೆಸರನ್ನು ಇಟ್ಟು ಅದೇ ರೀತಿ ಉಡಿಗೆತೊಡಿಗೆಗಳನ್ನು ಹಾಕುತ್ತಿದ್ದರೆಂದೂ, ಅವನಲ್ಲಿ ಕಾಣುತ್ತಿದ್ದ ಸ್ತ್ರೀತ್ವದ ಲಕ್ಷಣಗಳನ್ನು ತೆಗೆಯಲು ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಗಿದ್ದಿತೆಂದೂ, ಆದರೆ ಈಚೆಗೆ ಸ್ತ್ರೀ ಲಕ್ಷಣಗಳೇ ಹೆಚ್ಚಾಗಿ ಪುನಃ ಶಸ್ತ್ರ ಚಿಕಿತ್ಸೆ ನಡೆದು ಈಗ ವ್ಯಕ್ತಿಯು ಪೂರ್ಣವಾಗಿ ಸ್ತ್ರೀಯೇ ಆಗಿರುವನೆಂದೂ ತಿಳಿದುಬಂದಿದೆ.

### ವೇದಾಂತ ದೇಶಿಕರ್ ತಿರು ನಕ್ಷತ್ರ

ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ವೇದಾಂತ ದೇಶಿಕರ್ ತಿರು ನಕ್ಷತ್ರವು ನೆನ್ನೆ ಅಮಲ್ದಾರರಾದ ಶ್ರೀ ಟಿ. ಎಲ್. ಕಣ್ಣನ್, ಹೊಸ ಪೇಷ್ಕಾರ್ ಶ್ರೀ ಎಂ. ಎ. ಕೃಷ್ಣಯ್ಯಂಗಾರ್ ಮತ್ತು ಕಾರ್ಯದರ್ಶಿ ಶ್ರೀ ಕೃಷ್ಣಯ್ಯಂಗಾರ್ಯರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು. ದಿವಂಗತ ರೈಲ್ವೆ ಚೀಫ್ ಇಂಜಿನಿಯರ್ ಶ್ರೀ ಶ್ರೀನಿವಾಸಯ್ಯಂಗಾರ್ಯರ ಪುದುವಟ್ಟಿನಿಂದ ಕೈಂಕರ್ಯವೂ ಕಾರ್ಯದರ್ಶಿಯವರ ಖರ್ಚಿನಿಂದ ಸಂತರ್ಪಣೆಯೂ ನಡೆದುವು. ಸುಮಾರು ೫೦೦ ಮಂದಿ ಭಕ್ತಾದಿಗಳೂ, ಮೈಸೂರಿನ ನಾಗರಿಕರೂ ಬಂದಿದ್ದರು.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೩೦ ರಿ ... ಸಂಗೀತ ಮಧ್ಯಾಹ್ನ ... ಎಂ ಎಸ್ ಕೃಷ್ಣಪ್ಪ ... ಭಾರತ ಪಾಠನ ... ಸಂಜೆ ... ವಾಚನ, ಶಿವಪ್ರಸಾದ್ ... ಸಂಗೀತ ... ಗೀತೆಗಳು, ... ಗಿಟಾರ್ ಮತ್ತು ... ವೈಶ್ಯನ ಗೀತೆಗಳು

ಪ್ರಭಾ ★ 23-9-53 ರಿಂದ 4 ದಿನಗಳು ಮಾತ್ರ
ಪ್ರತಿ ದಿನ 4 ಆಟಗಳು
ಬಾಂಬೆ ಟಾಕೀಸ್‌ರವರ ★ ಮಹಲ್ ★
ಪಾತ್ರ ಅಶೋಕ್ ಕುಮಾರ್, ಕುಮಿತ್ರ
ನಿರ್ದೇಶನ ... ಬೋಸ್
ಸಂಗೀತ ಎಸ್ ಡಿ ಬರ್ಮನ್
25-9-53ರಿಂದ ಆರ್ ಡಿ ಸರ್ಕಾರ್ ಎರಿನ
[ ... ]
ಬೆಳಗಿನ ಪ್ರದರ್ಶನ 25-9-53 ರಿಂದ 3 ದಿನಗಳು
ನರ್ಗೀಸ್, ಶ್ಯಾಂ ನಟಿಸಿರುವ
"ಛೋಟಿ ಭಾಬಿ"

## ಕಾಡುಗಳಿಗೆ ಹೆಣ್ಣು ಕಪಿಗಳ ರವಾನೆ

ಜಮೀನುಗಳ ಫಸಲನ್ನು ತಿಂದು ನಷ್ಟಪಡಿಸುತ್ತಿರುವ ಕಪಿಗಳ ದಾಂಧಲೆಯನ್ನು ತಡೆಗಟ್ಟಲು ಹೆಣ್ಣು ಕಪಿಗಳನ್ನು ಹಿಡಿದು ಕಾಡಿಗೆ ಕೊಂಡುಹೋಗಿ ಬಿಟ್ಟು ಬರುವ ಯೋಜನೆಯನ್ನು ಮದರಾಸು ಸರ್ಕಾರದವರು ಮಾಡಿ ಕಲೆಕ್ಟರುಗಳಿಗೆ ಆ ರೀತಿ ಸಲಹೆ ಕೊಟ್ಟಿರುತ್ತಾರೆ. ಹೆಣ್ಣು ಕಪಿಗಳಿಲ್ಲದಿದ್ದರೆ ಅವುಗಳ ಸಂತಾನಾಭಿವೃದ್ಧಿಗೆ ಅವಕಾಶವಿರುವುದಿಲ್ಲವೆಂದೂ, ಗಂಡು ಕಪಿಗಳೂ ಸಹ ಕ್ರಮೇಣ ಅವುಗಳನ್ನು ಹಿಂಬಾಲಿಸಿ ಅರಣ್ಯಗಳಿಗೆ ಹೋಗುವುವೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ

### ಜಿನ ಮಂದಿರಕ್ಕೆ ಹಾನಿ ತಪ್ಪಿಸಬೇಕು

ರಾಜಧಾನಿಯ ದರ್ಯಾಗಂಜ್ ರಸ್ತೆಯಲ್ಲಿರುವ ಜೈನ ಬಸದಿ ಶ್ರೀ ಶಾಂತಿನಾಥ ಬಸದಿಗೆ ಸಂಬಂಧಪಟ್ಟ ಜಾಗದಲ್ಲಿ ಪಕ್ಕದಲ್ಲಿರುವ ಡಿ. ಬನಾರಸ್ ಯಾ ವಿದ್ಯಾ ಸಂಸ್ಥೆಯವರು ತಮ್ಮ ತಮ್ಮ ವಿದ್ಯಾನಿಲಯಕ್ಕಾಗಿ ಹೊಟೇಲ್ ಮುಂತಾದ ಕಟ್ಟಡಗಳನ್ನು ಕಟ್ಟಲು ಆರಂಭಿಸಿರುತ್ತಾರೆ. ಇವರ ದೇವಾಲಯಕ್ಕೆ ಸೇರಿದ ಜಾಗದಲ್ಲಿ ತಮ್ಮ ವಿದ್ಯಾಲಯಕ್ಕಾಗಿ ಗೇಟನ್ನಿಡುವುದು ಮತ್ತು ಹಳ್ಳ ತೆಗೆಯುವುದು ಮುಂತಾದ ಕೆಲಸಗಳನ್ನು ನಡೆಸಿ ದೇವಾಲಯಕ್ಕೆ ಸೇರಿರುವ ಜಾಗವನ್ನು ಹೊಂದಲು ಆರಂಭಿಸಿರುತ್ತಾರೆ. ಜಿನಾಲಯಕ್ಕೆ ಈ ವಿದ್ಯಾಲಯದವರಿಂದ ಉಂಟಾಗುವ ತೊಂದರೆಯನ್ನು ತಪ್ಪಿಸಲು ಸರ್ಕಾರೀ ಅಧಿಕಾರಿಗಳೂ ಮತ್ತು ಜೈನ ಬಾಂಧವರೂ ಗಮನಕೊಟ್ಟು ಮುಜರಾಯಿ ಇಲಾಖೆಗೆ ಸೇರಿದ ಜಿನ ಮಂದಿರದ ರಕ್ಷಣೆಯ ಬಗ್ಗೆ ಸಹಕಾರ ನೀಡಬೇಕೆಂದು ೩೭ ಮಂದಿ ಜೈನ ಮಹಿಳೆಯರು ನಮಗೆ ಪತ್ರ ಬರೆದು ಪ್ರಾರ್ಥಿಸಿರುತ್ತಾರೆ

### ಕೆಲಸದಿಂದ ತೆಗೆಯಲ್ಪಟ್ಟ ಹೋಟೇಲು ಕೆಲಸಗಾರನಿಗೆ ಪರಿಹಾರ

ಮೈಸೂರು ನಗರದ ಗಾಂಧಿ ಚೌಕದಲ್ಲಿರುವ ವೆಲ್‌ಕಂ ಹೋಟೇಲಿನ ಮಾಲೀಕರು ಕಳೆದ ೧೭ ನೇ ತಾ|| ವಿನಾಕಾರಣವಾಗಿ ಬಾಸ ಎಂಬ ಕೆಲಸಗಾರನನ್ನು ತೆಗೆದು ಹಾಕಿದ್ದರು. ಈ ವಿಷಯದಲ್ಲಿ ನೆನ್ನೆ ೧೧ ಗಂಟೆಗೆ ಮೈಸೂರು ನಗರದ ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ಸ್ ಇನ್ಸ್‌ಪೆಕ್ಟರ್ ಶ್ರೀ ಎಂ. ಎಸ್. ಭಾಸ್ಕರ್‌ರವರ ಸಮಕ್ಷದಲ್ಲಿ ಮಾಲೀಕರಿಗೂ ನೈಯೋ ಹೋಟೇಲು ಕೆಲಸಗಾರರ ಸಂಘದವರಿಗೂ ತೀರ್ಮಾನವಾಗಿ ಮಾಲೀಕರು ಅಲ್ಲೇ ಪರಿಹಾರವನ್ನು ಪಾವತಿ ಮಾಡಿದರು

### ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಹಣಗಳನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ. ರಶೀತಿ ಇಲ್ಲದೆ ಪಾವತಿ ಮಾಡುವ ಹಣಗಳಿಗೆ ನಾವು ಜವಾಬ್ದಾರರಲ್ಲ

**ನ್ಯೂಸ್ ಪೇಪರ್ ಹೌಸ್,**
ಸಾಧ್ವಿ ಬಿಲ್ಡಿಂಗ್ಸ್, ಮೈಸೂರು

## ಭೂಪಾಲ್ ನವಾಬರ ಅರಮನೆಗೆ ಖಾದಿ

ಭೂಪಾಲ್ ಸಂಸ್ಥಾನದಲ್ಲಿ ನಿರುದ್ಯೋಗ ನಿವಾರಣಾ ಕಾರ್ಯಕ್ರಮದ ಅಂಗವಾಗಿ ಸರ್ಕಾರದವರು ಖಾದಿ ಕೈಗಾರಿಕೆಗೆ ಉತ್ತೇಜನ ಕೊಡಲು ಸರ್ಕಾರೀ ನೌಕರರೆಲ್ಲರೂ ಆ ಬಟ್ಟೆಯನ್ನೇ ಕೊಂಡುಕೊಳ್ಳಬೇಕೆಂದು ಕೋರಿರುತ್ತಾರೆ. ಅಲ್ಲಿನ ನವಾಬರೂ ಸಹ ಅರಮನೆಯ ಉಪಯೋಗಕ್ಕಾಗಿ ಪ್ರತಿ ವರ್ಷವೂ ಹತ್ತು ಸಾವಿರ ರೂಪಾಯಿ ಖಾದಿ ಬಟ್ಟೆಯನ್ನು ಕೊಂಡುಕೊಳ್ಳುವುದಾಗಿ ಹೇಳಿರುತ್ತಾರೆ

## ಎಲೆಕ್ಟ್ರಾನಿಕ್ಸ್ ಸಂಶೋಧನಾ ಕೇಂದ್ರ

ರಾಜಸ್ಥಾನದ ಪಿಲಾನಿ ಎಂಬಲ್ಲಿ ಪ್ರಧಾನಿ ಜವಹರಲಾಲ್ ನೆಹರೂರವರು ನೆನ್ನೆ ಎಲೆಕ್ಟ್ರಾನಿಕ್ಸ್ ಇಂಜನಿಯರಿಂಗ್ ಸಂಶೋಧನಾ ಶಾಲೆಯ ಅಸ್ತಿಭಾರ ಶಿಲಾ ಸ್ಥಾಪನೋತ್ಸವವನ್ನು ನೆರವೇರಿಸಿದರು. ಆ ಸಂದರ್ಭದಲ್ಲಿ ಅವರು ಭಾಷಣ ಮಾಡಿ, ಯಾವ ರಾಷ್ಟ್ರವೇ ಆದರೂ ವಿಜ್ಞಾನವನ್ನು ಉಪೇಕ್ಷಿಸಬಾರದೆಂದೂ, ಹಾಗೆ ಮಾಡಿದರೆ ಪರಾವಲಂಬನೆಯುಂಟಾಗಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗುವುದೆಂದೂ ಎಚ್ಚರಿಸಿದರು

### ಏಳು ಬಾರಿ ಅವಳಿ ಮಕ್ಕಳನ್ನು ಹೆತ್ತ ಮಹಿಳೆ

ಕೇಪ್‌ಟೌನಿನ ಮಹಿಳೆಯೊಬ್ಬಳು, ತಾನು ವಿವಾಹವಾದಂದಿನಿಂದೀಚೆಗೆ ಏಳು ಬಾರಿ ಅವಳಿ ಮಕ್ಕಳನ್ನು ಪ್ರಸವಿಸಿದಳೆಂದೂ, ಅವುಗಳ ಪೈಕಿ ಒಂದು ಮಡಿದು, ಉಳಿದ ೧೩ ಮಕ್ಕಳೂ ಸೌಖ್ಯವಾಗಿರುವುವೆಂದೂ ಗೊತ್ತಾಗಿದೆ

### ಗಣಪತಿ ಮಂಗಳಾರತಿ

ರಾಜಧಾನಿಯ ಫ್ರೆಂಡ್ಸ್ ಯೂನಿಯನ್ ಸ್ಪೋರ್ಟ್ಸ್ ಕ್ಲಬ್ ಸಭಾಂಗಣದಲ್ಲಿ ಶ್ರೀ ವಿಘ್ನೇಶ್ವರಸ್ವಾಮಿಯವರ ಮಹಾ ಮಂಗಳಾರತಿಯನ್ನು ಈ ಸಂಜೆ ೮ ಗಂಟೆಗೆ ಏರ್ಪಡಿಸಲಾಗಿದೆ. ಸದಸ್ಯರೆಲ್ಲರೂ ಭಾಗಿಗಳಾಗಬೇಕಾಗಿ ಕೋರಲಾಗಿದೆ

### ಮೈಸೂರು ಪೇಟೆ ಧಾರಣೆ

| ಪಳ್ಳಿ | ರೂ. ಆಣೆ | ರೂ. ಗ |
|---|---|---|
| ಕಡಲೆಕಾಯಿ | ೧೪ ೦ ೦ | ೨೨ ೦ ೦ |
| ಎಳ್ಳು | ೩೩ ೦ ೦ | ೫೩ ೦ ೦ |
| ಹುರುಳಿ | ೪೭ ೬ ೦ | ೪೭ ೧೪ ೦ |
| ಹಲಸಂದೆ | ೭೩ ೩ ೦ | ೭೭ ೧೦ ೦ |
| ದುಂಡುಕೊಬ್ಬರಿ | ೬ ೧ ೭ | ೫ ೧೦ ೦ |
| ತೆಂಗಿನಕಾಯಿ ೧೧೦೦ಕ್ಕೆ | ೩೩೧ ೦ ೦ | ೩೬೫ ೦ ೦ |

### ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ ಕಾಂಪೌಂಡು, ನಲ್ಲಿ, ದೀಪ, ಫ್ಲಷಿಂಗ್ ಇದೆ "ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿ

Edited, Printed and Published by A. R Nagarajan at Sadhvi Press D.Subbiah Road, Mysore

## ಸಿಟಿ ಮುನಿಸಿಪಲ್ ಆಫೀಸು,

ಮೈಸೂರು, ತಾ|| 21-9-1953

## ಟೆಂಡರು ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನ ಆವರಣದಲ್ಲಿ ಹೊಸದಾಗಿ ಕಟ್ಟಿರುವ ಕಟ್ಟಡದಲ್ಲಿ ಫಲಹಾರ ಮಂದಿರ, ಟೀ ಕ್ಯಾಂಟೀನನ್ನು ನಡೆಸಿಕೊಂಡುಹೋಗುವ ಹಕ್ಕನ್ನು ಟೆಂಡರು ಮೂಲಕ ವಿಲೆ ಮಾಡಲಾಗುತ್ತೆ. ಇಷ್ಟಪಟ್ಟವರು ನಾಹೆಯಾನ ಕೊಡಲು ಒಪ್ಪುವ ಬಾಡಿಗೆಯನ್ನು ನಮೂದು ಮಾಡಿ, ಸೀಲ್ಡ್ ಟೆಂಡರುಗಳನ್ನು 25-9-53ನೇ ಮಧ್ಯಾಹ್ನ 4 ಘಂಟೆಗಳ ಒಳಗೆ, ಮುನಿಸಿಪಲ್ ಕಮೀಷನರವರಲ್ಲಿ ಹಾಜರ್ಪಡಿಸಬಹುದು. ಪ್ರತಿ ಟೆಂಡರ ಜೊತೆಗೆ ಮುನಿಸಿಪಲ್ ಖಜಾನೆಯಲ್ಲಿ ಡಿಪಾಜಿಟ್ ಬಗ್ಗೆ 50 ರೂಪಾಯಿ ಜಮಾ ಮಾಡಿರುವ ರಶೀತಿಯನ್ನು ಲಗತ್ತಿಸಬೇಕು. ಕಾಲಾತೀತವಾದ ಮತ್ತು ಠೇವಣಿಯಿಲ್ಲದ ಟೆಂಡರನ್ನು ಅಂಗೀಕರಿಸಲಾಗುವುದಿಲ್ಲ. ಇತರ ವಿವರಗಳನ್ನು ಆಫೀಸಿನಲ್ಲಿ ಕೆಲಸದ ಕಾಲದಲ್ಲಿ ತಿಳಿಯಬಹುದು.

**ಎಂ. ಲಕ್ಷ್ಮಣರಾವ್,**
ಮುನಿಸಿಪಲ್ ಕಮೀಷನರ್.

ಟೆಲಿಫೋನ್ ನಂ. 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 3 ಕಾಸು

ಮೈಸೂರು ಗೌ|| ಸಿಲ್ಕ್ ಸೀರೆಗಳು

ಧರ್ಮಾವರಂ, ಪೂನಾ, ನಾಗಪುರ, ... ಸೀರೆಗಳು ಮತ್ತು ತರಹೆ ವಾರಿ ನೂಲಿನ ಸೀರೆಗಳಿಗೆ

M. V. ಭೋಜಯ್ಯ

ಬಿ.ಎ.

ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು ಫೋನ್ 446

# ಸಾಧ್ವಿ

SADHVI . LEADING NATIONALIST DAILY OF MYSORE

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ ೧೨ ] MYSORE : FRIDAY 25-9-1953 :: ಮೈಸೂರು : ಶುಕ್ರವಾರ ೨೫-೯-೧೯೫೩ [ ಸಂಚಿಕೆ ೩೩

# ಪ್ರಕಾಶಂರವರ ನಾಯಕತ್ವದಲ್ಲಿ ಆಂಧ್ರ ಸಮ್ಮಿಶ್ರ ಸರ್ಕಾರ

## ಕೋರ್ಟ್ ಮತ್ತು ಪ್ರೋಸೆಸ್ ರುಸುಂ ಹೆಚ್ಚಿಸಲು ವಿರೋಧ

### ಮೈಸೂರು ವಕೀಲರ ಸಂಘದ ನಿರ್ಣಯ

ಮೈಸೂರು ೨೪

ರಾಜಧಾನಿಯ ವಕೀಲರ ಗಳ ಸಂಘದ ಸಾಮಾನ್ಯ ಸಭೆಯು ನೆನ್ನೆ ನಡೆದು ಕಾರ್ಯಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವುದನ್ನು ಅನುಮೋದಿಸಿ ನಿರ್ಣಯ ಮಾಡಿತು. ಎಲ್ಲ ಜಿಲ್ಲೆ ... ಅಡಿಷನಲ್ ಜಿಲ್ಲಾ ನ್ಯಾಯಾಧೀಶರ ... ಕಡೆಯಿಂದ ಹೆಚ್ಚು ವೆಚ್ಚವಾಗುವುದರಿಂದ ... ಅಗತ್ಯವಿಲ್ಲವೆಂದು ಸಭೆಯು ಅಭಿಪ್ರಾಯಪಟ್ಟು, ಜಿಲ್ಲೆಗಳಲ್ಲಿರುವ ಸಬಾರ್ಡಿನೇಟು ... ನ್ಯಾಯಾಧೀಶರಿಗೇ ಜಿಲ್ಲಾ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಕೊಟ್ಟು ಸಬಾರ್ಡಿನೇಟು ಜಡ್ಜುಗಳು ಕ್ರಿಮಿನಲ್ ಮೊಕದ್ದಮೆಗಳನ್ನು ನಡೆಸುವ ಅಧಿಕಾರವನ್ನು ಮ್ಯಾಜಿಸ್ಟ್ರೇಟರುಗಳಿಗೆ ವಹಿಸಬೇಕೆಂದು ಸಲಹೆ ಮಾಡಲಾಯಿತು.

ಕೋರ್ಟ್ ಮತ್ತು ಪ್ರೋಸೆಸ್ ರುಸುಂಗಳನ್ನು ಹೆಚ್ಚಿಸಲು ಸರ್ಕಾರಕ್ಕೆ ಮಾಡಲಾಗಿರುವ ಸಲಹೆಯನ್ನು ಸಭೆಯು ತೀವ್ರವಾಗಿ ವಿರೋಧಿಸಿತು. ಈಗಾಗಲೇ ದಾವಾ ವಗೈರೆ ಖರ್ಚುಗಳು ... ವಿಪರೀತವಾಗಿ ಹೊರಲು ಸಾಧ್ಯವಿಲ್ಲದಾಗಿ ಹೊರಟಾಗಿ ಹೆಚ್ಚು ರುಸುಂ ವಿಧಿಸುವುದು ಅನಾವಶ್ಯಕವೂ ಮತ್ತು ಸರಿಯಲ್ಲದುದೂ ಆಗಿರುವುದೆಂದೂ ಅಭಿಪ್ರಾಯಪಡಲಾಯಿತು.

### ಗರಡಿ ಸಂಘದ ಸದಸ್ಯರ ಸಭೆ

ರಾಜಧಾನಿಯ ನಗರ ಕಾಂಗ್ರೆಸ್ ಸಮಿತಿಯ ... ಲ್ಲಿ ನಾಳೆ ಸಂಜೆ ೬ ಘಂಟೆಗೆ ಗರಡಿ ಸಂಘದ ಸಭೆಯನ್ನು ಕರೆಯಲಾಗಿದೆ. ಉಸ್ತಾದರು ಮತ್ತು ಶಿಷ್ಯರು ಬರಬೇಕೆಂದು ಸಂಘದ ಅಧ್ಯಕ್ಷರು ಪ್ರಾರ್ಥಿಸುತ್ತಾರೆ.

### ಆರಂಭ ಭಾಷಣ

ಮೈಸೂರು ವಿಶ್ವವಿದ್ಯಾಲಯದ ಹಿಂದೀ ... ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ ... ಕಾಲೇಜಿನಲ್ಲಿ ಹೈದರಾಬಾದಿನ ... ವಿಶ್ವವಿದ್ಯಾಲಯದ ಹಿಂದಿ ಪ್ರೊಫೆಸರರಾದ ಶ್ರೀ ವನ ಶ್ರೀಧರಜಿ ವಿದ್ಯಾಲಂಕಾರರವರು ಸಂಘದ ಆರಂಭ ಭಾಷಣವನ್ನು ಮಾಡುವರು. ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎ. ಎಲ್. ಶ್ರೀನಿವಾಸರವರು ಅಧ್ಯಕ್ಷತೆ ವಹಿಸುವರು. ಮದ್ರಾಸಿನ ... ಕ್ರಿಶ್ಚಿಯನ್ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ಎಸ್. ಆರ್. ಶಾಸ್ತ್ರಿಯವರು ದಕ್ಷಿಣ ಭಾರತದ ವಿಶ್ವವಿದ್ಯಾಲಯಗಳಲ್ಲಿ ಹಿಂದಿ ... ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

### ರಾಮ ಭಜನೆ

ತಾ|| 13–10–53 ರ ಮೂರು ಗಂಟೆಗೆ ಸ್ಪರ್ಧೆ ಮಹಿಳಾ ವಿಭಾಗದಲ್ಲಿ ನಡೆಸಲಾಗುವುದು

3) ಜಡೆ ಶೃಂಗಾರದ ಸ್ಪರ್ಧೆ – (a) ಹೂವಿನಿಂದ ಕೂಡಿದ ಜಡೆ ಶೃಂಗಾರ (b) ಹೂವಿಲ್ಲದ ಜಡೆ ಶೃಂಗಾರ ತಾ|| 13–10–53 ರ ಮೂರು ಘಂಟೆಗೆ ಸ್ಪರ್ಧೆ ಮಹಿಳಾ ವಿಭಾಗದಲ್ಲಿ ನಡೆಸಲಾಗುವುದು.

ಕಾರ್ಯದರ್ಶಿ,

ದಸರಾ ವಸ್ತು ಪ್ರದರ್ಶನ 1953,

ಮೈಸೂರು.

ರಿಜಿಸ್ಟ್ರೇ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಮೈಸೂರು ಗೌ|| ಸಿಲ್ಕ್ ಸೀರೆಗಳು
ಅಸ್ಲಿ ಸೀರೆಗಳು ಮತ್ತು ಜರತಾರಿ ಸೀರೆಗಳಿಗೆ
ಧರ್ಮಾವರಂ, ಪೂನಾ, ನಾಗಪುರ,
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು ಫೋನ್ 448

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೨ ] MYSORE : WEDNESDAY 30-9-1953 :: ಮೈಸೂರು : ಬುಧವಾರ ೩೦-೯-೧೯೫೩ [ ಸಂಚಿಕೆ ೫೮

# - ಇಸ್ರೇಲಿಗೆ ಈಜಿಪ್ಟಿನ ಯುದ್ಧದ ಬೆದರಿಕೆ -

## ನಗರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಅವಿರೋಧ ಆಯ್ಕೆ

ಮೈಸೂರು ೩೦

ನಗರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಉತ್ತರ ಮತ್ತು ದಕ್ಷಿಣ ಪ್ರತ್ಯೇಕ ಭಾಗಗಳಿಂದ ಇಂದು ನಡೆಯಬೇಕಾಗಿದ್ದ ಚುನಾವಣೆಗಳು, ಹಲವು ಸ್ಪರ್ಧಿಗಳು ತಮ್ಮ ಉಮೇದುವಾರಿಕೆಗಳನ್ನು ಕಡೇ ಘಳಿಗೆಯಲ್ಲಿ ವಾಪಸು ಪಡೆದುದರಿಂದ ನಡೆಯಲಿಲ್ಲ. ಉತ್ತರ ಪ್ರದೇಶದಿಂದ ಶ್ರೀ ಎ. ಈಶ್ವರರಾಯರು ವಾಪಸು ಪಡೆದುದರಿಂದ ಶ್ರೀಗಳಾದ ಟಿ. ವೆಂಕಟರಮಣಯ್ಯ, ಜಿ. ಜನಾರ್ಧನ ಶಾಯ್ಯ, ಮತ್ತು ಎ ಶಿವಣ್ಣ ಇವರುಗಳು ಅವಿರೋಧವಾಗಿ ಆರಿಸಲ್ಪಟ್ಟಿರುವರು. ದಕ್ಷಿಣ ಪ್ರದೇಶದಿಂದ ಸ್ಪರ್ಧಿಸಿದ್ದ ಶ್ರೀ ಎ ಕೃಷ್ಣಮೂರ್ತಿರಾವ್ ಮತ್ತು ಟಿ. ನರಸಿಂಹಯ್ಯಂಗಾರ್ಯರು ಸ್ಪರ್ಧೆಯಿಂದ ವಾಪಸಾದುದರಿಂದ ಶ್ರೀಗಳಾದ ಕೆ ಎಸ್ ಸತ್ಯನಾರಾಯಣರಾವ್, ಬಿ ಎ ಕೆಂಗೇಗೌಡ ಮತ್ತು ಎ ಗೋಪಾಲರಾವ್ ರವರು ಚುನಾಯಿತರಾಗಿರುವರು.

### ಮಹಾರಾಣಿ ಕಾಲೇಜಿನಲ್ಲಿ ಪ್ರೊ. ಸಾಂಬಮೂರ್ತಿ ಭಾಷಣ

ರಾಜಧಾನಿಯ ಮಹಾರಾಣಿ ಕಾಲೇಜಿನಲ್ಲಿ ಮದ್ರಾಸಿನ ವಿಶ್ವವಿದ್ಯಾಲಯದ ಸಂಗೀತ ಶಾಖಾ ಅಧ್ಯಕ್ಷರಾದ ಪ್ರೊಫೆಸರ್ ಸಾಂಬಮೂರ್ತಿಯವರು ನೆನ್ನೆ ಸಂಜೆ ಕರ್ನಾಟಕ ಸಂಗೀತದಲ್ಲಿ ಗೀತಾ ನಾಟಕಗಳು ಎಂಬ ವಿಷಯವಾಗಿ ಭಾಷಣ ಮಾಡಿದರು. ಗೀತಾ ನಾಟಕಗಳಾದ ಕೃಷ್ಣಲೀಲಾ ತರಂಗಿಣಿ, ತ್ಯಾಗರಾಜರ ಪ್ರಹ್ಲಾದ ವಿಜಯ, ನೌಕಾ ಚರಿತ್ರ, ಗೋಪಾಲಕೃಷ್ಣ ಭಾರತೀಯರ ನಂದನಾರ್ ಚರಿತೆ ಮುಂತಾದುವನ್ನು ಅವರು ವಿಮರ್ಶೆ ಮಾಡಿ, ಅವುಗಳಲ್ಲಿ ಅಡಗಿರುವ ಸಂಗೀತದ ಮಾಧುರ್ಯವನ್ನು ಹಾಡಿ ತೋರಿಸಿದರು. ಕರ್ನಾಟಕ ಸಂಗೀತದಲ್ಲಿ ಮೈಸೂರಿನ ಪ್ರತಿಭೆಯನ್ನು ಅವರು ಮೆಚ್ಚಿ, ವಿದ್ಯಾರ್ಥಿನಿಯರು ಈ ಸಂಗೀತವನ್ನು ಹೆಚ್ಚು ಹೆಚ್ಚಾಗಿ ಅಭ್ಯಸಿಸಿ, ಮೈಸೂರಿನ ಕೀರ್ತಿಯನ್ನು ಉಳಿಸಿಕೊಂಡು ಬರಬೇಕೆಂದು ಕೋರಿದರು. ಮದ್ರಾಸಿನ ಪ್ರಸಿದ್ಧ ಸಂಗೀತ ವಿಮರ್ಶಕರಾದ ಶ್ರೀ ಟಿ ವಿ ಸುಬ್ಬರಾಯರು ಅಧ್ಯಕ್ಷ ಭಾಷಣದಲ್ಲಿ ಸಂಗೀತವು ದೈವದತ್ತ ಕಲೆಯೆಂದೂ, ಅದನ್ನು ಚೆನ್ನಾಗಿ ಅಭ್ಯಸಿಸಿ, ನಾದೋಪಾಸನೆ ಮಾಡಬೇಕೆಂದೂ ತಿಳಿಸಿದರು.

### ಬಳ್ಳಾರಿ ಸೇರ್ಪಡೆಯ ಉತ್ಸವ

ನಾಳೆ ದಿನ ಬಳ್ಳಾರಿಯ ಏಳು ತಾಲ್ಲೂಕುಗಳ ಮೈಸೂರು ಸಂಸ್ಥಾನಕ್ಕೆ ಸೇರುವ ಸಂಭ್ರಮಕ್ಕಾಗಿ ಇಲ್ಲಿನ ಕರ್ನಾಟಕ ಸಂಘದವರು ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಸಮಾರಂಭವೊಂದನ್ನು ಏರ್ಪಡಿಸಿರುತ್ತಾರೆ. ಉಪಾಧ್ಯಾಯರುಗಳ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಡಾ|| ಎಂ ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು. ಮಹಾರಾಜಾ ಕಾಲೇಜಿನ ಶ್ರೀ ಎಸ್ ವಿ ಪರಮೇಶ್ವರ ಭಟ್ಟರು ಉಪನ್ಯಾಸ ಮಾಡುವರು. ಸಂಗೀತ, ನಾಟಕ ಮುಂತಾದ ಮನರಂಜನೆಯ ಕಾರ್ಯಕ್ರಮಗಳಿವೆ. ಸರ್ವರಿಗೂ ಸ್ವಾಗತವಿರುವುದಾಗಿ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

## ಡಾ|| ರಾಜಣ್ಣನವರು ಬಳ್ಳಾರಿಗೆ

ಮೈಸೂರು ೩೦

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರರಾದ ಡಾ|| ರಾಜಣ್ಣನವರು ಬಳ್ಳಾರಿಯ ಜಿಲ್ಲಾ ಆಸ್ಪತ್ರೆ ವೈದ್ಯಾಧಿಕಾರಿಗಳಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಅವರು ಈ ರಾತ್ರಿ ಬಳ್ಳಾರಿಗೆ ತೆರಳುವರು. ಶ್ರೀಯುತರು ಇಲ್ಲಿನ ಮೆಡಿಕಲ್ ಕಾಲೇಜಿನ ಶಸ್ತ್ರ ಚಿಕಿತ್ಸಾ ವಿಭಾಗದ ಪ್ರೊಫೆಸರರಾಗಿಯೂ ಇದ್ದರು.

### ಬಳ್ಳಾರಿಯಲ್ಲೂ ಮೈಸೂರಿನಂತೆ ಒಬ್ಬರೇ ಜಿಲ್ಲಾ ಮ್ಯಾಜಿಸ್ಟ್ರೇಟರು

ಬಳ್ಳಾರಿಯಲ್ಲಿ ಇದುವರೆಗೆ ಮದ್ರಾಸು ಶಾಸನದಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಜಿಲ್ಲಾ ಕಲೆಕ್ಟರರೆಂಬ ಪ್ರತ್ಯೇಕ ಅಧಿಕಾರಿಗಳಿದ್ದರು. ಈಗ ಆ ಜಿಲ್ಲೆಯು ಮೈಸೂರಿಗೆ ಸೇರಲಿರುವುದರಿಂದ ಎರಡು ಸ್ಥಾನಗಳಿಗೂ ಒಬ್ಬರೇ ಅಧಿಕಾರಿಯಿರುವರು. ಮೈಸೂರು ಸಂಸ್ಥಾನದಲ್ಲಿ ಇನ್ನೂ ನ್ಯಾಯಾಂಗವು ಕಾರ್ಯಾಂಗದಿಂದ ಪ್ರತ್ಯೇಕವಾಗಿಲ್ಲದಿರುವುದೇ ಇದಕ್ಕೆ ಕಾರಣ.

### ರಾಜಧಾನಿಯಲ್ಲಿ ೧ ೮೫ ಅಂಗುಲ ಮಳೆ

ರಾಜಧಾನಿಯಲ್ಲಿ ನೆನ್ನೆ ೧ ೮೫ ಅಂಗುಲ ಮಳೆ ಬಂದಿರುತ್ತದೆ. ನೆನ್ನೆ ಹಗಲು ಮೋಡವಾಗಿದ್ದು, ರಾತ್ರಿ ಜೋರಾಗಿಯೂ ಮಳೆ ಬಂದಿತು.

## ಮೈಸೂರಿನಲ್ಲಿ ಬಳ್ಳಾರಿ ಸೇರ್ಪಡೆ ಕ್ರಮಬದ್ಧವೆಂದು ತೀರ್ಪು

ಮೈಸೂರಿಗೆ ಬಳ್ಳಾರಿ ಸೇರ್ಪಡೆಯು ನ್ಯಾಯಬದ್ಧವಲ್ಲವೆಂದು ಸಾರುವಂತೆ ಕೋರಿ ಬಳ್ಳಾರಿಯ ಪೌರಸಭಾಧ್ಯಕ್ಷ ಶ್ರೀ ವೆಂಕಲಿಂಗಿ ದೊಡ್ಡಬಸಪ್ಪನವರು ಮದ್ರಾಸು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಜಸ್ಟಿಸ್ ಗೋವಿಂದ ಮೆನನ್ ರವರು ವಜಾ ಮಾಡಿರುತ್ತಾರೆ. ಈ ವರ್ಗಾವಣೆಯು ರಾಜ್ಯಾಂಗದ ೩ ನೇ ನಿಬಂಧನೆಗೆ ವಿರೋಧವಾಗುವುದೆಂದೂ, ಸೇರ್ಪಡೆ ಮಾಡಲು ಆಂಧ್ರ ಮಸೂದೆಯಲ್ಲಿ ಅವಕಾಶ ಕಲ್ಪಿಸಿರುವುದು ನ್ಯಾಯವಲ್ಲವೆಂದೂ ಅರ್ಜಿದಾರರು ಕೇಳಿ ಈ ಬಗ್ಗೆ ಕೋರ್ಟಿನ ಘೋಷಣೆಯಾಗಬೇಕೆಂದು ಕೋರಿದ್ದರು.

## ಮದ್ರಾಸಿನಲ್ಲಿ ಕೃಷ್ಣ ವಿಗ್ರಹಗಳ ಭೇದನ ಚಳುವಳಿ

ಭಗವಾನ್ ಶ್ರೀ ಕೃಷ್ಣನ ವಿಗ್ರಹಗಳನ್ನು ಒಡೆಯುವ ಚಳುವಳಿಯನ್ನು ಶೀಘ್ರದಲ್ಲೇ ದ್ರಾವಿಡ ಸಂಘದವರು ನಡೆಸುವುದಾಗಿ ಇ ವಿ ರಾಮಸ್ವಾಮಿ ನಾಯಕರ್ ರವರು ತಿಳಿಸಿರುತ್ತಾರೆ. ಇದಲ್ಲದೆ ಮತ್ತೊಂದು ಚಳುವಳಿಯನ್ನು ಹೂಡಿ, ಭಾರತದ ರಾಜ್ಯಾಂಗವನ್ನು ಪ್ರಕಟಿಸಲಾಗಿರುವ ಪುಸ್ತಕಗಳನ್ನು ಸುಡಲಾಗುವುದೆಂದೂ ಅವರು ಹೇಳುತ್ತಾರೆ.

## ಗುರಿ ಮುಟ್ಟಿ ವಾಪಸು ಬರುವ ರಾಕೆಟ್ಟಿನ ನಿರ್ಮಾಣ

ಗುರಿಯನ್ನು ಮುಟ್ಟಿ ಪುನಃ ಮೊದಲಿನ ಸ್ಥಳಕ್ಕೆ ಹಿಂದಿರುಗಬಲ್ಲ ರಾಕೆಟ್ಟನ್ನು ಬ್ರಿಟನ್ನು ತಯಾರಿಸುತ್ತಿದೆ. ಅದು ತನ್ನ ಗುರಿಯನ್ನು ಮುಟ್ಟುವುದಲ್ಲದೆ ವಿನಾಶ ಕೃತ್ಯವನ್ನು ನಡೆಸಿ ವಾಪಸು ಬರಬಲ್ಲದೆಂದೂ ಹೇಳಲಾಗುತ್ತಿದೆ.

## ದಿ|| ಬಿ. ಎಂ. ಶ್ರೀನಿವಾಸಯ್ಯನವರಿಗೆ ಪುರ ಜನರ ಶ್ರದ್ಧಾಂಜಲಿ

ಮೈಸೂರು ೩೦

ಬೆಂಗಳೂರಿನ ಧರ್ಮಪ್ರಕಾಶ ಬಿ ಎಂ ಶ್ರೀನಿವಾಸಯ್ಯನವರ ನಿಧನಕ್ಕಾಗಿ ಸಂತಾಪ ಸೂಚಿಸಲು ನಗರದ ಟೌನ್ ಹಾಲಿನಲ್ಲಿ ನೆನ್ನೆ ಸಂಜೆ ಪುರನಿವಾಸಿಗಳ ಸಭೆಯೊಂದು ನಡೆಯಿತು. ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಅಗ್ರಾಸನವನ್ನು ವಹಿಸಿದ್ದರು.

ಶ್ರೀಗಳಾದ ಆಗರಂ ರಂಗಯ್ಯ, ವೈ ಜಿ ಕೃಷ್ಣಮೂರ್ತಿ ಮತ್ತು ಅಬ್ದುರ್ ರಹಮಾನ್ ರವರು ಮಾತನಾಡಿ ದಿವಂಗತರ ಗುಣಾತಿಶಯಗಳನ್ನು ಪ್ರಶಂಸಿಸಿದರು. ಅವರು ಬಿಟ್ಟುಹೋಗಿರುವ ಧರ್ಮ ಸಂಸ್ಥೆಗಳು ಅವರ ಹೆಸರನ್ನು ಸದಾ ಬೆಳಗಲೆಂದು ಭಾಷಣಕಾರರು ಆಶಿಸಿದರು.

ಅಧ್ಯಕ್ಷರು ಭಾಷಣ ಮಾಡಿ ಬಿ ಎಂ ಶ್ರೀನಿವಾಸಯ್ಯನವರು ಧನವನ್ನು ಅರ್ಜಿಸಿದರೂ ಸಹ, ಅದನ್ನು ಸಾರ್ವಜನಿಕರ ಹಿತಕ್ಕಾಗಿ ವಿನಿಯೋಗಿಸಿದ ಮಹಾ ಪುರುಷ ವ್ಯಕ್ತಿ ಒಬ್ಬರೆಂದೂ, ಅವರು ಸದಾ ಬಹುಜನರ ಪುರೋಭಿವೃದ್ಧಿಯನ್ನೇ ಚಿಂತಿಸುತ್ತಿದ್ದರೆಂದೂ, ರಾಜಕೀಯ ವಿರೋಧಿಗಳನ್ನು ಪರಸ್ಪರ ಒಂದುಗೂಡಿಸಿ ದೇಶದಲ್ಲಿ ಸೌಹಾರ್ದ ವಾತಾವರಣವಿರಲು ಅವರು ಬಹುವಾಗಿ ಶ್ರಮಿಸುತ್ತಿದ್ದರೆಂದೂ ತಿಳಿಸಿದರು.

ಅವರ ನಿಧನಕ್ಕಾಗಿ ಅಪಾರ ವ್ಯಸನವನ್ನು ವ್ಯಕ್ತಪಡಿಸಿ, ಬಂಧುಗಳಿಗೆ ಅನುತಾಪವನ್ನು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ನಾಡಿನ ಹಣಕಾಸಿನ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರು ಅವರ ಉದಾತ್ತ ಗುಣಗಳನ್ನು ಪ್ರಶಂಸಿಸಿ ಸಭೆಗೆ ಸಂದೇಶ ಕಳುಹಿಸಿದ್ದರು.

### ಸಂಗೀತ ಕಛೇರಿ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ದೇವಾಂಗ ಸಂಘದ ಕಟ್ಟಡದಲ್ಲಿ ಶ್ರೀ ಮಹಾ ಗಣಪತಿ ಪೂಜೆ ಅಂಗವಾಗಿ ಈ ರಾತ್ರಿ ೮ ಗಂಟೆಗೆ ಆಸ್ಥಾನ ಸಂಗೀತ ವಿದ್ವಾನ್ ಬಿ ಎಂ ಶಿವಣ್ಣನವರ ಹಾಡುಗಾರಿಕೆಯು ಆ|| ಸಂ|| ವಿದ್ವಾನ್ ಶಿವರುದ್ರಪ್ಪನವರ ಪಿಟೀಲು, ವಿದ್ವಾನ್ ಬಾಲು ಕೈ ರವರ ಮೃದಂಗದೊಡನೆ ಏರ್ಪಾಡಾಗಿರುತ್ತದೆ.

## ಮದ್ರಾಸಿನಲ್ಲಿ ಹೆಚ್ಚು ಸಚಿವರು

ಆಂಧ್ರ ಪ್ರಾಂತ್ಯವು ಪ್ರತ್ಯೇಕವಾದನಂತರ ಉಳಿಯುವ ಮದ್ರಾಸು ಪ್ರಾಂತದ ಸಚಿವ ಸಂಪುಟಕ್ಕೆ ರಾಜಾಜಿಯವರು ಹೆಚ್ಚು ಜನ ಮಂತ್ರಿಗಳನ್ನು ತೆಗೆದುಕೊಳ್ಳಲಿರುವರೆಂದು ವರದಿಯಾಗಿದೆ.

### ಮೈಸೂರಿನ ಹೊಸ ಮಂತ್ರಿ

ಮೈಸೂರು ಮಂತ್ರಿಮಂಡಲದ ವಿಸ್ತರಣೆಯ ವಿಷಯವಾಗಿ ಈಗಾಗಲೇ ನಿರ್ಧಾರಕ್ಕೆ ಬರಲಾಗಿರುವುದೆಂದೂ, ಬಳ್ಳಾರಿಯ ಸಮಾರಂಭವನ್ನು ಪೂರೈಸಿಕೊಂಡು ಬಂದನಂತರ ತಾವು ಪ್ರಕಟಣೆ ಕೊಡುವುದಾಗಿಯೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸುತ್ತಾರೆ. ನಾಗನಗೌಡರು ಮಂತ್ರಿಗಳಾಗುವುದು ಖಚಿತವೆಂದು ಹೇಳಲಾಗಿದೆ.

## ಗಡಿ ಉಲ್ಲಂಘನೆ ಬಗ್ಗೆ ಇಸ್ರೇಲಿಗೆ ಈಜಿಪ್ಟಿನ ಬೆದರಿಕೆ

ಪ್ಯಾಲಸ್ಟೈನಿನಲ್ಲಿ ಶಾಂತಿ ಸ್ಥಾಪನೆಯ ರೇಖೆಯನ್ನು ಇಸ್ರೇಲಿನವರು ಉಲ್ಲಂಘಿಸಿರುವುದಾಗಿಯೂ, ಅದನ್ನು ಬಲ ಪ್ರಯೋಗದಿಂದ ಎದುರಿಸಲಾಗುವುದೆಂದೂ ಈಜಿಪ್ಟು ತಿಳಿಸುತ್ತದೆ. ಗಡಿ ಉಲ್ಲಂಘನೆಯಿಂದ ಈಜಿಪ್ಟಿನ ಅಸ್ತಿತ್ವದ ಮೇಲೆ ಧಾಳಿ ಮಾಡಿದಂತೆ ಈಜಿಪ್ಟು ಸರ್ಕಾರವು ಭಾವಿಸಿರುವುದಾಗಿ ಹೇಳಲಾಗಿದೆ. ಈಜಿಪ್ಟು ಮತ್ತು ಇಸ್ರೇಲ್ ಶಾಂತಿ ಸಮಿತಿಯ ಕೇಂದ್ರಸ್ಥಾನ ಎಲ್ ಆಹುಜಾ ಎಂಬ ಹಳ್ಳಿಯನ್ನು ಇಸ್ರೇಲಿನವರು ಆಕ್ರಮಿಸಿಕೊಂಡಿರುವ ಬಗ್ಗೆ ಮೇಲ್ಕಂಡ ಬೆದರಿಕೆಯನ್ನು ಈಜಿಪ್ಟಿನ ಮಂತ್ರಿ ಮೇಜರ್ ಸಲಾಹ್ ಸಲೀಂರವರು ಹಾಕಿರುವರು.

## ತಿರುವಾಂಕೂರು-ಕೊಚ್ಚಿಯಲ್ಲಿ ಫೆಬ್ರವರಿಯಲ್ಲಿ ಚುನಾವಣೆ

ತಿರುವಾಂಕೂರಿನಲ್ಲಿ ಬರುವ ಫೆಬ್ರವರಿ ತಿಂಗಳು ಮಹಾ ಚುನಾವಣೆಗಳು ನಡೆಯುವುವೆಂದೂ ಈ ವರ್ಷದ ಅಕ್ಟೋಬರಿನೊಳಗೆ ಮತದಾರರ ಪಟ್ಟಿಯು ಸಿದ್ಧವಾಗುವುದೆಂದೂ ಗೊತ್ತಾಗಿದೆ.

## ಕಾರವಾರದಲ್ಲಿ ಮ್ಯಾಂಗನೀಸ್ ಗಣಿ ?

ಕಾರವಾರ ಜಿಲ್ಲೆಯ ಗುಡ್ಡ ಪ್ರದೇಶದಲ್ಲಿ ೫ ಲಕ್ಷ ಟನ್ ಆಗುವಷ್ಟು ಮ್ಯಾಂಗನೀಸ್ ಲೋಹದ ಗಣಿಯು ಇರುವುದೆಂದು ಗೊತ್ತಾಗಿದೆ.

## ವಿಮಾನ ಬಿದ್ದು ೨೧ ಜನರ ಮರಣ

ಅಮೆರಿಕದ ಲೂಯಿ ವಿಲ್ಲೆಯಲ್ಲಿ [illegible] ಹೊಸದಾಗಿ ಸೇರಿದವರನ್ನು ಸಾಗಿಸುತ್ತಿದ್ದ ವಿಮಾನವೊಂದು ಮೊನ್ನೆ ರಾತ್ರಿ ಕೆಳಗೆ ಬಿದ್ದು ಉರಿದುಹೋದ ಪರಿಣಾಮವಾಗಿ ೨೧ ಜನರು ಮಡಿದು, ೨೧ ಮಂದಿಗೆ ಗಾಯವಾಗಿದೆ.

## ಅಕಾಲಿ ಪಕ್ಷಕ್ಕೆ ೯೦೦ ಸದಸ್ಯರ ರಾಜೀನಾಮೆ

ದೆಹಲಿಯಲ್ಲಿರುವ ಸಿಖ್ಖರ ಅಕಾಲಿ ಪಕ್ಷದ ಶಾಖೆಯ ೯೦೦ ಸದಸ್ಯರು ಪಕ್ಷಕ್ಕೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ.

### ಕೇಂದ್ರ ಮಂತ್ರಿ ಗುಲ್ಜಾರಿಲಾಲ್ ನಂದಾ ಆಗಮನ

ಕೇಂದ್ರ ಯೋಜನಾ ಮಂತ್ರಿ ಗುಲ್ಜಾರಿಲಾಲ್ ನಂದಾರವರು ನಾಳೆ ದಿನ ಬೆಂಗಳೂರಿಗೆ ಆಗಮಿಸಿ, ನಾಳಿದ್ದು ವಾಪಸು ದೆಹಲಿಗೆ ತೆರಳುವರು.

### ಇಂಡಾಲಜಿ ಅಸಿಸ್ಟೆಂಟ್ ಪ್ರೊಫೆಸರ್.

ಮಹಾರಾಜಾ ಕಾಲೇಜಿನ ಇತಿಹಾಸ ವಿಭಾಗದ ಅಧ್ಯಾಪಕರಾದ ಡಾ|| ಎಂ ಶೇಷಾದ್ರಿಯವರನ್ನು ಖಾಯಂ ಆಗಿ ಇಂಡಾಲಜಿಯ ಅಸಿಸ್ಟೆಂಟ್ ಪ್ರೊಫೆಸರರಾಗಿ ಕಳೆದ ಜೂನ್ ೨೪ ರಿಂದ ನೇಮಿಸಲಾಗಿದೆ.

## ಹನುಮಂತಯ್ಯನವರ ಹೆಸರಿನಲ್ಲೊಂದು ರಸ್ತೆ

ಬೆಂಗಳೂರಿನ ಮಂಡಿ ತೋಪಿನಲ್ಲಿರುವ ಒಂದು ರಸ್ತೆಗೆ ಕೆಂಗಲ್ ಹನುಮಂತಯ್ಯ ರಸ್ತೆಯೆಂದು ಹೆಸರಿಡಬೇಕೆಂದು ಅಲ್ಲಿನ ಪೌರಸಭೆಯವರು ನಿರ್ಧರಿಸಿರುತ್ತಾರೆ.

## ಗೋವಧೆ ನಿಲ್ಲಿಸಲು ಸರ್ಕಾರದ ಕಾರ್ಯಕ್ರಮ ಅಗತ್ಯ

### ಪೌರಸಭೆಯಲ್ಲಿ ನಿರ್ಣಯ

ಮೈಸೂರು ೩೦

ರಾಜಧಾನಿಯಲ್ಲಿ ದಿನೇದಿನೇ ಗೋವಧೆಯ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಇದನ್ನು ತಡೆಯಲು ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಂಡು ಗೋವಧೆ ಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಕೋರುವ ನಿರ್ಣಯವನ್ನು ನೆನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಶ್ರೀ ಚೌಡಯ್ಯನವರು ಮಂಡಿಸಿದ ನಿರ್ಣಯಕ್ಕೆ ಶ್ರೀ ಎ. ವಿ. ಕಟೀಸಯ್ಯನವರು ತಿದ್ದುಪಡಿಯನ್ನು ಸೂಚಿಸಿ, ಗೋವಧೆ ಮಾಡುವುದನ್ನು ತಪ್ಪಿಸಲು ಆ ಕಾರ್ಯದಲ್ಲಿ ನಿರತರಾಗಿರುವವರನ್ನು ಬಹಿಷ್ಕರಿಸಬೇಕೆಂದು ಕೋರಿದರು. ತಿದ್ದುಪಡಿಯನ್ನು ಶ್ರೀ ಚೌಡಯ್ಯನವರು ವಿರೋಧಿಸಿದ ನಂತರ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ನಗರದಲ್ಲಿ ಭಿಕ್ಷುಕರ ಸಮಸ್ಯೆಯು ಉಲ್ಬಣಿಸಿ ಸಾರ್ವಜನಿಕರಿಗೆ ಅಗತ್ಯರವ ತೊಂದರೆಯನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕೆಂದು [illegible] ಶ್ರೀಗಳ ಪಿ. ಸೀತಾರಾಮಯ್ಯ, ನರಸಿಂಹಯ್ಯಂಗಾರ್, ಎ. ಕೃಷ್ಣಮೂರ್ತಿ, [illegible] ಪದ್ಮಯ್ಯ, ಕೆ. ಪುಟ್ಟಸ್ವಾಮಿ ಮುಂತಾದವರು ಮಾತನಾಡಿ ಸೂಕ್ತ ಕ್ರಮ ಕೈಗೊ[illegible] [illegible] ಭಿಕ್ಷುಕರಿಂದ ಜನಗಳ [illegible] ಸಾಧ್ಯವಾದಷ್ಟು [illegible] ಪ್ರಯತ್ನ ಪಡುವುದಾಗಿ ಅಧ್ಯಕ್ಷರು [illegible].

[illegible] ನೀರಿನ [illegible] ಹಿಂದಿನ [illegible] ಶ್ರೀ ಹೆಚ್ [illegible] ರವರ [illegible] ಈ ವಿಷಯ ಸರ್ಕಾರಕ್ಕೆ ಸಂಬಂಧಪಟ್ಟಿದ್ದು [illegible].

ಮೈಸೂರು ನಗರದಲ್ಲಿ ಗೋಮಾಂಸ ಮಾರಾಟದ [illegible] ಬೆಂಗಳೂರಿನಿಂದ ಅವರು ಗೋಮಾಂಸವನ್ನು ನಗರಕ್ಕೆ ಆಮದು ಮಾಡಿಕೊಂಡು ಮಾರುವರೆಂದೂ ಗೋಮಾಂಸದ ಆಮದಿಗೆ ಸರ್ಕಾರದ ನಿಷೇಧವಿಲ್ಲವೆಂದೂ ಅಧ್ಯಕ್ಷರು ಶ್ರೀ ಚೌಡಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

### ಹರಿಕಥೆ

ರಾಜಧಾನಿಯ ನೂರಡಿ ರಸ್ತೆ, ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವಿದ್ಯಾಗಣಪತಿ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ವಿ| ಕೊಣನೂರು ಸೀತಾರಾಮ ಶಾಸ್ತ್ರಿಗಳವರಿಂದ ಕಥೆ [illegible] ಹರಿಕಥೆ [illegible] ವಿ| ಮೈ. ಎ[illegible] [illegible] ಶ್ರೀನಿವಾಸ ಅಯ್ಯಂಗಾರ್ [illegible] ಲಕ್ಷ್ಮೀನಾರಾಯಣ [illegible] ಪಿಟೀಲು ಮತ್ತು ವಿ| ಎಂ. [illegible] ಶೇಷಪ್ಪನವರ ಮೃದಂಗದೊಡನೆ, ಶ್ರೀ [illegible] ಪುಟ್ಟಪ್ಪ [illegible] ನೆರವೇರುತ್ತದೆ.

[illegible] ನಾಯಿಕೆಮ್ಮಿಗೆ

ನಿಂತರಿಯುವ ಔಷಧಿ

[illegible] ಭಾವಿ, [illegible], ಪಾರಿ [illegible] ನೀರ್ [illegible] ಸಕಲ ಪಾಲಿಗಳ ಸಂಬಂಧ [illegible]

Whooping Cough Remedy

[illegible] ಕೆಮ್ಮಿಗೆ ಸಿಂತರಿಯುವ ಔಷಧಿ [illegible] ಸರ್ವಜನ [illegible]

ಬೆಲೆ ರೂ 2 8—0

[illegible]

ಜಿ. ಎಸ್. ಪಂಡಿತರು,

[illegible] ಸುಬ್ಬರಾಯನಕೆರೆ [illegible]

[illegible] ಮೈಸೂರು

Printed and Published [illegible] K. Nagarajan at Sadhvi Press, D. Subbiah Road Mysore

## ತುಂಗಭದ್ರಾ ಯೋಜನೆ ಆಡಳಿತದ ಬಗ್ಗೆ ರಾಷ್ಟ್ರಾಧ್ಯಕ್ಷರ ಘೋಷಣೆ

ಬೆಂಗಳೂರು ೩೦

ತುಂಗಭದ್ರಾ ಯೋಜನೆಯ ಆಡಳಿತ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಜವಾಬ್ದಾರಿ [illegible] ನಿರ್ವಹಣೆ ಬಗ್ಗೆ ನೆನ್ನೆ ಮೈಸೂರು ಸರ್ಕಾರದವರೊಡನೆ ಕೇಂದ್ರ ನೀರಾವರಿ ಕಾರ್ಯದರ್ಶಿ ಶ್ರೀ ಶಿವಶಂಕರ್‌ರವರು ಮಾತುಕತೆಗಳನ್ನು ಮುಂದುವರಿಸಿದರು. ಯೋಜನೆ ಸಂಬಂಧವಾಗಿ ರಾಷ್ಟ್ರಾಧ್ಯಕ್ಷರ ಘೋಷಣೆಯು ಹೊರಬಿದ್ದು, ಮೈಸೂರು ಮತ್ತು ಆಂಧ್ರ ಸಂಸ್ಥಾನಗಳ ಜವಾಬ್ದಾರಿಯನ್ನು ಗೊತ್ತುಪಡಿಸಲಾಗುವುದೆಂದು ತಿಳಿದುಬಂದಿದೆ.

### ಕಾಮನಬಿಲ್ಲು ಪತ್ರಿಕೆ ಸಂಪಾದಕರಿಂದ ಶಿಕ್ಷೆ ವಿರುದ್ಧವಾಗಿ ಅಪೀಲು

ಬೆಂಗಳೂರಿನ ಕಾಮನಬಿಲ್ಲು ಮಾಸ ಪತ್ರಿಕೆಯಲ್ಲಿ ಅಶ್ಲೀಲವಾದ ಲೇಖನಗಳು ಬಂದುವೆಂದು ಸಂಪಾದಕರಾದ ಶ್ರೀ ಎಂ. ರಾಮಮೂರ್ತಿಯವರಿಗೆ ವಿಧಿಸಲಾಗಿದ್ದ ಶಿಕ್ಷೆ ಮತ್ತು ದಂಡದ ವಿರುದ್ಧವಾಗಿ ಅವರು ಹೈಕೋರ್ಟಿನಲ್ಲಿ ಅಪೀಲು ಮಾಡಿರುತ್ತಾರೆ. ಜಸ್ಟಿಸ್ ಶ್ರೀ ಬಾಲಕೃಷ್ಣಯ್ಯನವರು ಅರ್ಜಿಯನ್ನು ಪರಿಶೀಲನೆಗೆ ತೆಗೆದುಕೊಂಡಿರುತ್ತಾರೆ.

### ಮಿಸ್ಟರ್ ಲಕ್ಷ್ಮೀನಾರಾಯಣಪ್ಪನವರು ರೇಸ್ ಕ್ಲಬ್ ಅಧಿಕಾರಿ

ಬೆಂಗಳೂರಿನ ಪ್ರಮುಖ ಅಡ್ವೊಕೇಟ್ ಜನರಲ್ [illegible] ಶ್ರೀ ಎಲ್. ಲಕ್ಷ್ಮೀನಾರಾಯಣಪ್ಪನವರನ್ನು ಸರ್ಕಾರದವರು ಬೆಂಗಳೂರು ರೇಸ್ ಕ್ಲಬ್ಬಿನ ಸ್ಟುವರ್ಡ್ ಆಗಿ ನೇಮಿಸಿದ್ದಾರೆ. [illegible] ಸ್ಥಾನದಲ್ಲಿದ್ದರು.

## ಗಂಗಾ ನದಿಯಲ್ಲಿ ದೋಣಿ ಮುಳುಗಿ ೨೦ ಮರಣ

ಭಾಗಲ್ಪುರದ ಬಳಿ ಒಂದು ಕಡೆ ಗಂಗಾ ನದಿಯಲ್ಲಿ [illegible] ದೋಣಿಯು ಮುಳುಗಿ [illegible] ೨೦ ಜನರು ನೀರಿನಲ್ಲಿ ಮುಳುಗಿಹೋಗಿರುತ್ತಾರೆ.

## ಮಧ್ಯಪ್ರದೇಶದ ಸರ್ಕಾರದಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸೋಲು

ಮಧ್ಯಪ್ರದೇಶದ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸಿ ನೆನ್ನೆ ತರಲಾಗಿದ್ದ ನಿರ್ಣಯ [illegible] ಓಟುಗಳಿಂದ ಬಿದ್ದುಹೋಯಿತು. [illegible] ಆಪಾದನೆಗಳು ನಿರಾಧಾರವಾದುವೆಂದು ಮುಖ್ಯಮಂತ್ರಿಯವರು [illegible].

## ಟ್ರಿಯೆಸ್ಟೆ ಬಗ್ಗೆ ಜನಮತಗಣನೆಗೆ ಟಿಟೋ ವಿರೋಧ

ಟ್ರಿಯೆಸ್ಟೆ ನಗರದ ಭವಿಷ್ಯವನ್ನು ತೀರ್ಮಾನಿಸಲು ಜನಮತಗಣನೆಯನ್ನು ಏರ್ಪಡಿಸಬೇಕೆಂಬ [illegible] ಸಲಹೆಯನ್ನು ಯುಗೋಸ್ಲಾವಿಯಾದ ಅಧ್ಯಕ್ಷ ಟಿಟೋರವರು ಒಪ್ಪಿಗೆ ಕೊಡಲು ನಿರಾಕರಿಸಿದ್ದಾರೆ.

### ಜನತಾ ಬೀದಿ ಸಮಾರೋಹ

### ನಾಳೆ ಕೋಲಾಟ ಉತ್ಸವ

ಜನತಾ ಬೀದಿ [illegible] ನಾಳೆ ಸಂಜೆ [illegible] ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ [illegible] ಕೋಲಾಟ ಉತ್ಸವ ನಡೆಯಲಿದೆ. [illegible] ಜನರು [illegible] ವಿ. ಪಿ. ಕೃಷ್ಣನವರು [illegible] ಪ್ರಸಿದ್ಧ ಚಿತ್ರಕಲಾವಿದ್ಯಾರ್ಥಿಗಳಿಗೂ [illegible] ಶ್ರೀ ಬಿ. [illegible] ಕೆಂಚೆ ಗೌಡರು [illegible] ಪ್ರಧಾನರು [illegible] ಅಧ್ಯಕ್ಷತೆ [illegible].

## ಕೃಷ್ಣರಾಜನಗರದ ಖೂನಿ ಮೊಕದ್ದಮೆ

### ಅಪರಾಧಿ ಸಣ್ಣಪ್ಪನ ಅಪೀಲು ಹೈಕೋರ್ಟಿನಿಂದ ವಜಾ

ಬೆಂಗಳೂರು ೨೯

ಕೃಷ್ಣರಾಜನಗರದ ಸ್ಟೇಷನ್ ಸ್ಟ್ಯಾಂಡಿನಲ್ಲಿ [illegible] ಗಳ [illegible] ಹಲವರನ್ನು ಕೊಂದ [illegible] ಇತರರನ್ನು ಗಾಯಗೊಳಿಸಿದ ಸಂಬಂಧವಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಸಣ್ಣಪ್ಪ ಎಂಬುವನು ಮೈಸೂರು ಜಿಲ್ಲಾ ನ್ಯಾಯಾಧೀಶರ ತೀರ್ಪಿನ ವಿರುದ್ಧವಾಗಿ ಹೈಕೋರ್ಟಿಗೆ ಸಲ್ಲಿಸಿದ್ದ ಅಪೀಲನ್ನು ವಜಾ ಮಾಡಲಾಗಿದೆ. ನ್ಯಾಯಾಧೀಶರಾದ ಶ್ರೀ ವೆಂಕಟರಾಮಯ್ಯ ಮತ್ತು ಶ್ರೀ ಬಾಲಕೃಷ್ಣಯ್ಯನವರು ತಮ್ಮ ತೀರ್ಪಿನಲ್ಲಿ ಅಪರಾಧಿಯು ಮಾಡಿರುವ ಕೃತ್ಯದ [illegible] ಕಠಿಣವಾಗಿ ವರ್ತಿಸಿದ ಸನ್ನಿವೇಶವೂ ಅವನ ನಡತೆ [illegible] ಕೋಪವನ್ನು ಪ್ರಕಟಿಸಿ [illegible], ಅವನಿಗೆ ಹೆಚ್ಚಿನ ಶಿಕ್ಷೆಯಾಗದಿರುವುದಕ್ಕೆ ಅವನು ಸಂತೋಷಪಡಬೇಕಾಗಿದೆ ಎಂದೂ ಹೇಳಿದ್ದಾರೆ. ಅವನಿಗೆ ಕೊಟ್ಟ ಶಿಕ್ಷೆಯ ಬಗ್ಗೆ ತೀರ್ಮಾನವನ್ನು ಪುನರ್ ಪರಿಶೀಲನೆ ಮಾಡಲು ಕಾರಣವಿಲ್ಲವೆಂದು ನ್ಯಾಯಾಧೀಶರು ಹೇಳಿದ್ದಾರೆ.

## ರೈಲ್ವೆ ನೌಕರರಿಂದ 'ವಿನಯ ಸಪ್ತಾಹ'

ಅಕ್ಟೋಬರ್ ೭ನೇ ತಾರೀಖಿನಿಂದ ೧೪ನೇ ತಾರೀಖಿನವರೆಗೆ ಭಾರತದಲ್ಲೆಲ್ಲಾ ರೈಲ್ವೆ ನೌಕರರು ಪ್ರಯಾಣಿಕರ ಬಗ್ಗೆ ವಿನಯವಾಗಿ ನಡೆದುಕೊಳ್ಳುವ [illegible] 'ವಿನಯ ಸಪ್ತಾಹ' ನಡೆಸಲಿರುವರು. [illegible] ಅಧಿಕಾರಿಗಳೂ ನೌಕರರೂ ಸಾರ್ವಜನಿಕರಿಗೆ ವಿನಯ ಮತ್ತು ಸೌಜನ್ಯದಿಂದ ವರ್ತಿಸುವಂತೆ [illegible] ಕೇಳಿದ ಕೂಡಲೇ ಅವರು ಮಾಡುವ ಸಹಾಯ [illegible] ಸಪ್ತಾಹದ ದಿನಗಳಲ್ಲಿ ಪ್ರಯಾಣಿಕರು ತಮ್ಮ ತೊಂದರೆಗಳನ್ನು ತಿಳಿಸಬೇಕೆಂದೂ [illegible] ಮಾಡಬೇಕೆಂದೂ ಸಾರ್ವಜನಿಕರ ಸಹಕಾರ ಅಪೇಕ್ಷಿಸಲಾಗಿದೆ. [illegible] ಮೂರನೇ ತರಗತಿ ಪ್ರಯಾಣಿಕರ ಬಗ್ಗೆ ವಿಶೇಷವಾಗಿ ಸೌಜನ್ಯವನ್ನು ತೋರಿಸಲಾಗುತ್ತದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಲಘುಸಂಗೀತ [illegible] ಮತ್ತು [illegible] ಸಂಗೀತ [illegible] ಬಾಳೆ [illegible] ಶೀರ್ಷಿಕೆ [illegible] ಭಕ್ತಿ [illegible] ಸಂಗೀತ [illegible] ವಿದ್ವಾನ್ [illegible] ಸುಬ್ರಹ್ಮಣ್ಯಂ [illegible] ಗೀತೆಗಳು.

## ಮನೆ ಮಾರಾಟಕ್ಕಿದೆ

963. ಕಬೀರ್ ರೋಡು

ಒಳ್ಳೆಯ ಜಾಗದಲ್ಲಿರುವ ಅಚ್ಚುಕಟ್ಟಾದ ಮಹಡಿ ಮನೆ

ವಿವರಗಳಿಗೆ:

ಜಯ ಅಂಡ್ ಕೋ.,

ಮನೆ, ಜಮೀನು ಮತ್ತು [illegible] ಏಜೆಂಟ್, [illegible] ಮೈಸೂರು [illegible] ಮೈಸೂರು ಫೋನ್ 330

## ಶ್ರೀ ಚಾಮುಂಡೇಶ್ವರಿ ಟಾಕೀಸ್

ದಸರಾ ಮಹೋತ್ಸವದ ವಿಶೇಷ [illegible]

2-10-53 ನೇ ಶುಕ್ರವಾರದಿಂದ [illegible] ಪ್ರತಿ ದಿನ [illegible]

ವಿನೋದಾರವರ ತಮಿಳು ಚಿತ್ರ * ದೇವದಾಸ್ *

(ಸುಪ್ರಸಿದ್ಧ ಬಂಗಾಳಿ ಲೇಖಕ ಶರತ್‌ಬಾಬುರವರ ಅಮೋಘ ಕಲಾಕೃತಿಯ ಅನುವಾದ)

ಪಾತ್ರವರ್ಗ – ಸಾವಿತ್ರಿ, ಲಲಿತ, ನಾಗೇಶ್ವರರಾವ್, ನಂಬಿಯಾರ್ ಮೊದಲಾದವರು

## ವಿಯಟ್ನಾಂನಲ್ಲಿ ಪ್ರವಾಹದಿಂದ ೨೦೦ ಜನರ ಮರಣ

ಮಧ್ಯ ಇಂಡೋಚೀನ (ವಿಯಟ್ನಾಂ) ದಲ್ಲಿ ಬಿರುಗಾಳಿಯ ದೆಸೆಯಿಂದ ಉಂಟಾದ ಪ್ರವಾಹದ ಪರಿಣಾಮವಾಗಿ ೨೦೦ ಜನರು ಮೃತಿ ಹೊಂದಿರುತ್ತಾರೆ.

## ಸೆಣಬು ಮಾರಾಟದಲ್ಲಿ ಪಾಕಿಸ್ತಾನಕ್ಕೆ ೯ ಕೋಟಿ ನಷ್ಟ

ಕಳೆದ ವರ್ಷ ಪಾಕಿಸ್ತಾನವು ಹತ್ತಿ ಮತ್ತು ಸೆಣಬನ್ನು ಕೊಂಡ ಸಂಬಂಧವಾಗಿ ಆ ದೇಶಕ್ಕೆ ೯ ಕೋಟಿ ರೂಗಳ ನಷ್ಟವಾಗಿರುವುದೆಂದೂ ಈ ಬಗ್ಗೆ ಒಂದು ತನಿಖೆ ಸಮಿತಿ ನೇಮಿಸಲಾಗುವುದೆಂದೂ ಪಾಕಿಸ್ತಾನದ ಪ್ರಧಾನಿ ಮಹಮ್ಮದ್ ಅಲಿಯವರು ತಿಳಿಸಿರುತ್ತಾರೆ.

## ಮೈಸೂರು ಪೇಟೆ ಧಾರಣೆ

| | | |
|---|---|---|
| ವಸ್ತು | ರೂ ಆಣೆ | [illegible] |
| ಕಡಲೆಕಾಯಿ | ೯ ೨ ೦ | ೨೦ [illegible] |
| ಎಳ್ಳು | ೬೮ ೨ ೦ | [illegible] |
| ಹುರುಳಿ | ೪೫ ೦ ೦ | |
| ಹುಣಸೆ ಹಣ್ಣು | ೬ ೦ ೦ | ೯ ೯ |
| ಕೆಂಗಿನಕಾಯಿ ನೂರಕ್ಕೆ | ೩೩ ೦ ೦ | [illegible] |

## ಅ| ಮೈ| ಹಿಂದಿ ಪ್ರಚಾರ ಸ್ಪರ್ಧೆ ಮತ್ತು ಪ್ರಮಾಣ ಪತ್ರ ವಿನಿಯೋಗ

ಮೈಸೂರು ರಿಯಾಸತ್ ಹಿಂದಿ ಪ್ರಚಾರ ಸಮಿತಿಯವರು ಗಾಂಧಿ ಜಯಂತಿ ಉತ್ಸವದ ಅಂಗವಾಗಿ ಅಕ್ಟೋಬರ್ ೨ ನೇ ತಾ|| ಬೆಳಗ್ಗೆ [illegible] ಗಂಟೆಗೆ ಅಖಿಲ ಮೈಸೂರು ಹಿಂದಿ ಚರ್ಚಾಸ್ಪರ್ಧೆಯನ್ನೂ, ಸಂಜೆ [illegible] ಗಂಟೆಗೆ ಹಿಂದಿ ಪ್ರಮಾಣ ಪತ್ರ ವಿತರಣೋತ್ಸವವನ್ನೂ ಬೆಂಗಳೂರಿನ [illegible] ಭವನದಲ್ಲಿ ಏರ್ಪಡಿಸಿದ್ದಾರೆ. [illegible] ಉತ್ಸವ [illegible] ಶ್ರೀ [illegible] ರವರು ಅಧ್ಯಕ್ಷತೆ ವಹಿಸುವರು. [illegible] ಶ್ರೀ ಹೆಚ್. ಕೆ. ವೀರಣ್ಣಗೌಡರು [illegible] ಭಾಷಣ ಮಾಡುವರು. ದಿ|| ಟಿ. ಪಿ. ಕೈಲಾಸಂರವರ ಗಂಡಸ್ಕತ್ರಿ ನಾಟಕವನ್ನು ಅಭಿನಯಿಸಲಾಗುವುದು.

### ನಂಜನಗೂಡಿನಲ್ಲಿ ಗಾಂಧಿ ಜಯಂತಿ ಕಾರ್ಯಕ್ರಮ

ನಂಜನಗೂಡಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಗಾಂಧಿ ಜಯಂತಿಯನ್ನು ಆಚರಿಸಲಾಗುವುದು. ಅಂದು ಬೆಳಗ್ಗೆ [illegible] ಗಂಟೆಯಿಂದ [illegible] ಶ್ರೀ ಕೃಷ್ಣ [illegible] ರವರು [illegible] ಭೂದಾನ ಯಜ್ಞ [illegible] ಗಂಟೆಗೆ ಸಾರ್ವಜನಿಕ ಸಭೆ [illegible] ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ [illegible] ಕೃಷ್ಣರವರು [illegible] ಉತ್ಸವದಲ್ಲಿ [illegible] ವಿದ್ಯಾರ್ಥಿನಿಯರೂ, ಪುರಜನರೂ [illegible] ಕಾರ್ಯಕ್ರಮ [illegible] ಶ್ರೀ [illegible] ವಿದ್ಯಾರ್ಥಿ ನಿಲಯದಲ್ಲಿ ನಡೆಯುವುದೆಂದೂ ಕಾರ್ಯದರ್ಶಿಯವರಾದ ಶ್ರೀ ಎಂ. ಕೃಷ್ಣಯ್ಯನವರು ತಿಳಿಸಿರುತ್ತಾರೆ.

## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ [illegible] ಪೌಂಡು, ನಲ್ಲಿ, ದೀಪ, ಫ್ಲಷಿಂಗ್ ಇವೆ

"ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿ

## ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರೆಲ್ಲರೂ ದಯವಿಟ್ಟು ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಚಂದಾ ಮೊಬಲಗನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕೆಂದು ಕೋರಲಾಗಿದೆ. ರಶೀತಿ ಇಲ್ಲದೆ ಪಾವತಿಮಾಡುವ ಮೊಬಲಗಿಗೆ ನಾವು ಜವಾಬ್ದಾರರಲ್ಲ.

ನ್ಯೂಸ್‌ಪೇಪರ್ ಹೌಸ್,

ಸಾಧ್ವಿ ಏಜೆಂಟರು, ಮೈಸೂರು

ಟೆಲಿಫೋನ್ ನಂ 792

|| [illegible] ||

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
**ಸಾಧ್ವಿ ದಿನ ಪತ್ರಿಕೆಗೆ**
ನಿಮ್ಮ ಜಾಹಿರಾತುಗಳನ್ನು ಕಳುಹಿ ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

**ಚಂದಾ ದರ**
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE : THURSDAY 1-10-1953 :: ಮೈಸೂರು : ಗುರುವಾರ ೧-೧೦-೧೯೫೩ [ ಸಂಚಿಕೆ ೫೯

# ಇಂದು ನೆಹರೂರಿಂದ ಆಂಧ್ರ ಪ್ರಾಂತ್ಯದ ಆರಂಭೋತ್ಸವ

## ಗಾಂಧಿ ಜಯಂತಿ ಕಾರ್ಯಕ್ರಮ

ಮೈಸೂರು ೧

ಗಾಂಧಿ ಜಯಂತಿಯ ಅಂಗವಾಗಿ ನಾಳೆ ರಾಜಧಾನಿಯ ಟೌನ್ ಹಾಲಿನಲ್ಲಿ ಕೆಳಗೆ ಕಂಡ ಕಾರ್ಯಕ್ರಮಗಳು ಏರ್ಪಾಡಾಗಿವೆ: ಬೆಳಗ್ಗೆ ೬ ಘಂಟೆಗೆ ಪ್ರಾರ್ಥನೆ, ಸೂತ್ರಯಜ್ಞ, ಗೀತಾ ಪ್ರವಚನ, ಸರ್ವೋದಯ ಸಾಹಿತ್ಯ ವಾಚನ, ೯ ಘಂಟೆಗೆ ಸಾಮೂಹಿಕ ಸಾರ್ವಜನಿಕ ಸೂತ್ರ ಯಜ್ಞ, ಸಂಜೆ ೫ ರಿಂದ ೫-೪೦ ಸಾಮೂಹಿಕ ಸೂತ್ರ ಯಜ್ಞ, ೬ ಘಂಟೆಗೆ ಪ್ರಾರ್ಥನಾ ಸಭೆ. ಬೆಳಗ್ಗೆ ೬ ರಿಂದ ಸಂಜೆ ೬ರ ವರೆಗೆ ಸೂತ್ರ ಯಜ್ಞವು ಜರುಗುವುದು. ಸರ್ವರೂ ಭಾಗವಹಿಸ ಬೇಕೆಂದು ಕೋರಲಾಗಿದೆ.

### ಸ್ವಂತ ಕಾರನ್ನು ಬಾಡಿಗೆಗೆ ಓಡಿಸಿದುದಕ್ಕೆ ಜುಲ್ಮಾನೆ

ರಾಜಧಾನಿಯ ಶ್ರೀ ಶ್ರೀನಿವಾಸಾಚಾರ್ ಎಂಬುವರು ಎಂ ವೈ ೭೦೩೫ ಎಸ್ಸ್ ನ ತಮ್ಮ ಸ್ವಂತ ಮೋಟಾರನ್ನು ಬಾಡಿಗೆಗೆ ಓಡಿಸಿದರೆಂದು ಎ' ಡಿವಿಜನ್ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಮೊನ್ನೆ ನಗರ ನ್ಯಾಯಾಧೀಶರ ಕೋರ್ಟು, ಆಪಾದಿತರಿಗೆ ೧೦೦ ರೂ ಜುಲ್ಮಾನೆ ವಿಧಿಸಿರುತ್ತಾರೆ.

### ನೀರಿನ ಕೆಲಸಗಾರರ ಸಂಘದ ಸಮಿತಿಗೆ ಚುನಾವಣೆ

ರಾಜಧಾನಿಯ ನೀರಿನ ಕೆಲಸಗಾರರ ಸಂಘದ ಅಧಿಕಾರಿ ವರ್ಗದ ಚುನಾವಣೆಯು ನೆನ್ನೆ ನಡೆದು, ಶ್ರೀ ಪಿರಾನ್ ನೂರ್ ಮುಸೇಲವರು ಅಧ್ಯಕ್ಷರಾಗಿಯೂ, ಶ್ರೀ ಬಿ ಎಸ್ ಚಂದ್ರಶೇಖರಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ವಿಶ್ವನಾಥ್ ಮತ್ತು ಟಿ ಪಿ ರಾಮಾಶಾಸ್ತ್ರಿಯವರು ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿಗಳಾಗಿಯೂ, ಶ್ರೀ ಕರೀಂ ಖಾನರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

### ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಚುನಾಯಿತರಾದವರು

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನೆನ್ನೆ ನಡೆದ ಚುನಾವಣೆಯಲ್ಲಿ ಮೈಸೂರು ತಾಲ್ಲೂಕಿನಿಂದ ಶ್ರೀಗಳಾದ ಕೆ ಕೆಂಪೇಗೌಡ ಮತ್ತು ವಿ ಚನ್ನಸ್ವಾಮಿಯವರೂ, ಕೃಷ್ಣರಾಜನಗರ ತಾಲ್ಲೂಕಿನಿಂದ ಶ್ರೀಗಳಾದ ಹೆಚ್ ಎಸ್ ಶ್ರೀಕಂಠಶೆಟ್ಟಿ ಮತ್ತು ವೈ ಎಸ್ ಜುಂಡಪ್ಪನವರೂ, ನಂಜನಗೂಡು ತಾಲ್ಲೂಕಿನಿಂದ ಶ್ರೀಗಳಾದ ಕೆ ನರಸೇಗೌಡ ಮತ್ತು ವೆಂಕಟರಮಣರವರೂ ಆರಿಸಿ ಬಂದಿರುವರು.

### ಸಂತಾಪ ಸೂಚಕ ಸಭೆ

ಧರ್ಮಪ್ರಕಾಶ ಬಿ ಎಂ ಶ್ರೀನಿವಾಸಯ್ಯನವರ ನಿಧನದ ಬಗ್ಗೆ ಸಂತಾಪ ಸೂಚನೆ ಮಾಡಲು ಈ ಸಂಜೆ ೬|| ಗಂಟೆಗೆ ಒಂಟಿಕೊಪ್ಪಲಿನ ಲಿರುವ ಚೆಲುವಾಂಬಾ ಪಾರ್ಕಿನಲ್ಲಿ ಸಭೆಯೊಂದು ನಡೆಯುವುದು. ದರ್ಬಾರ್ ಭಕ್ಷಿಯವರಾದ ಶ್ರೀ ಹೆಚ್ ಎಲ್ ದೇವರಾಜೇ ಅರಸಿನವರು ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವರಾದ ಶ್ರೀ ಹೆಚ್ ಸಿ. ದಾಸಪ್ಪ ಮತ್ತು ಶ್ರೀ ನ್ಯಾ. ಜ ಕೃಷ್ಣಮೂರ್ತಿ ಯವರು ಭಾಷಣ ಮಾಡುವರು. ಶ್ರೀಮತಿ ಎಸ್. ಲಕ್ಷ್ಮಮ್ಮನವರು ಮತ್ತು ಬಾಲಕಿಯರು ಭಜನೆಮಾಡುವರು.

## ಇಂಟರ್ ಕಾಲೇಜುಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಿಲ್ಲ

### ವಿಶ್ವವಿದ್ಯಾಲಯದ ಅಕ್ಯಾಡಮಿಕ್ ಕೌನ್ಸಿಲ್ ಸಭೆಯ ನಿರ್ಣಯ

ಮೈಸೂರು ೧

ವಿಶ್ವ ವಿದ್ಯಾಲಯ ದ ಅಕ್ಯಾಡಮಿಕ್ ಕೌನ್ಸಿಲ್ ಸಭೆಯು ನೆನ್ನೆ ಉಪಕುಲಪತಿಗಳಾದ ಶ್ರೀ ಬಿ ಎಲ್ ಮಂಜನಾಥ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಧರ್ಮಪ್ರಕಾಶ ಬಿ ಎಂ ಶ್ರೀನಿವಾಸಯ್ಯನವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಬೆಂಗಳೂರು ಮಹಿಳಾ ಸೇವಾ ಸಮಾಜದಲ್ಲಿ ವ್ಯಾಸಂಗ ಮಾಡಿ, ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಪದವಿ ಪರೀಕ್ಷೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯೊಬ್ಬರಿಗೆ ವೇತನ ಕೊಡುವುದಕ್ಕಾಗಿ ನಿವೃತ್ತ ಶ್ರೇಷ್ಠ ನ್ಯಾಯಾಧೀಶ ರಾಜಧರ್ಮಪ್ರಸಕ್ತ ದಿವಾನ್ ಬಹದ್ದೂರ್ ಶ್ರೀ ಚಂದ್ರಶೇಖರ ಅಯ್ಯರ್‌ರವರು ಕೊಟ್ಟಿರುವ ಧನ ಪಟ್ಟಿಯನ್ನೂ ಕ್ಯಾಟಗರಿ ಬಡಳತ ನಿರ್ಧಿಷ್ಟ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆದು ಮೊದಲನೇ ದರ್ಜೆಗೆ ಬಿ ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗೆ ದಿವಂಗತ ಪ್ರೊ|| ಕೆ ಆರ್ ಕೆ ಅನಂತರಾವರ ಹೆಸರಿನಲ್ಲಿ ಬಹುಮಾನ ಕೊಡಬೇಕೆಂದು ಶ್ರೀಮತಿ ಎ ಶಾರದಾರವರು ಕೊಟ್ಟಿರುವ ೨,೦೦೦ ರೂ ಗಳನ್ನೂ ಅಂಗೀಕರಿಸಲಾಯಿತು.

ಬಿ ಎ ತರಗತಿಯಲ್ಲಿ ನ್ಯಾಯ ಶಾಸ್ತ್ರ, ಅರ್ಥ ಶಾಸ್ತ್ರ, ಮತ್ತು ಅಡ್ಮಿನಿಸ್ಟ್ರೇಷನ್, ರಾಜ್ಯ ಶಾಸ್ತ್ರ, ಸಮಾಜ ಶಾಸ್ತ್ರ, ಮತ್ತು ಇಂಗ್ಲಿಷ್‌ಗಳನ್ನು ವ್ಯಾಸಂಗ ವಿಷಯವಾಗಿಡಲು ಅನುಮತಿಯಾಯಿತು.

ಮೈಸೂರು ಶಿಕ್ಷಣ ಸುಧಾರಣಾ ಸಮಿತಿಯ ಸಲಹೆಗಳನ್ನು ಒಂದೊಂದಾಗಿ ಚರ್ಚಿಸಲಾಯಿತು. ಇಂಟರ್ ಕಾಲೇಜುಗಳನ್ನು ವಿದ್ಯಾಶಾಲೆಗಳಿಗೆ ಸೇರಿಸಬೇಕೆಂಬ ಸಲಹೆಗೆ ಬಹುಮತ ದೊರೆಯದೆ ಬಿದ್ದುಹೋಯಿತು. ಇಂಟರ್ ಕಾಲೇಜುಗಳಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಿರಬೇಕೆಂಬ ಸಲಹೆಯೂ ತಿರಸ್ಕೃತವಾಯಿತು.

ವಿಶ್ವವಿದ್ಯಾಲಯದ ಅಧ್ಯಾಪಕರ ಸಂಬಳ ಶ್ರೇಣಿಗಳ ಸ್ಕೇಲು-ಕ್ರಮಗಳನ್ನು ಪುನರ್ವಿಮರ್ಶಿಸಬೇಕೆಂಬ ನಿರ್ಣಯವು ಅಂಗೀಕೃತವಾಯಿತು.

### ನಾಳೆ ಡಿಪೋಗಳಿಗೆ ರಜಾ

ಮಹಾತ್ಮಾ ಗಾಂಧಿಜಿಯವರ ಜಯಂತಿ ದಿನವಾದುದರಿಂದ ನಾಳೆ ನಗರದಲ್ಲಿರುವ ಎಲ್ಲಾ ರೇಷನ್ ಡಿಪೋಗಳಿಗೂ ರಜಾ ಕೊಡಲಾಗಿದೆ. ಮಹಾಲಯ ಅಮಾವಾಸ್ಯೆ ಪ್ರಯುಕ್ತ ೭ನೇ ತಾರೀಖೂ ಮತ್ತು ವಿಜಯದಶಮಿ ಪ್ರಯುಕ್ತ ೧೮ನೇ ತಾ|| ಡಿಪೋಗಳಿಗೆ ರಜಾವಿರುವುದು. ೧೯ನೇ ತಾ|| ಬೆಳಗ್ಗೆ ಅವುಗಳು ತೆರೆದಿರುವುವು.

### ವೇದ ಪಾರಾಯಣ

ರಾಜಧಾನಿಯ ಶಾಸ್ತ್ರೀಶ್ರೀ ಅಗ್ರಹಾರದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ಈ ರಾತ್ರಿ ೭|| ಘಂಟೆಗೆ ವೇದ ಪಾರಾಯಣವನ್ನು ಶ್ರೀ ಜಿ ಆರ್ ಜೋಯಿಸ್‌ರವರ ನೇತೃತ್ವದಲ್ಲಿ ಏರ್ಪಡಿಸಲಾಗಿದೆ.

## ಬಳ್ಳಾರಿಯ ಸೇರ್ಪಡೆಯಿಂದ ಅಪಾರ ಆನಂದ

### ಶ್ರೀಮನ್ಮಹಾರಾಜರ ಸಂದೇಶ

ಮೈಸೂರಿನಲ್ಲಿ ಬಳ್ಳಾರಿಯ ಸೇರ್ಪಡೆ ಬಗ್ಗೆ ಶ್ರೀಮನ್ಮಹಾರಾಜರು ಇತ್ತಿರುವ ಸಂದೇಶದಲ್ಲಿ ತಮ್ಮ ಅಪಾರ ಹರ್ಷವನ್ನು ವ್ಯಕ್ತಪಡಿಸಿರುತ್ತಾರೆ. ೧೫೦ ವರ್ಷಗಳ ಹಿಂದೆ ಬಳ್ಳಾರಿ ಮತ್ತು ಮೈಸೂರು ಪ್ರದೇಶಗಳು ಒಂದೇ ಆಡಳಿತದಲ್ಲಿದ್ದು ಕಾರಣಾಂತರದಿಂದ ಬೇರ್ಪಟ್ಟ ವಿಷಯವು ಎಲ್ಲರಿಗೂ ತಿಳಿದಿದ್ದಾಗಿರುವುದೆಂದೂ, ಆದರೂ ಎರಡು ಪ್ರದೇಶಗಳ ಬಾಂಧವ್ಯವೂ ಸಹೋದರ ಭಾವವೂ ಅವಿಚ್ಛಿನ್ನವಾಗಿ ಬೆಳೆದು ಬಂದಿರುವುದೆಂದೂ, ಈಗ ಆಗಲಿರುವ ಪ್ರಾಂತೀಯ ಪಾಲನದ ಜವಾಬ್ದಾರಿಯನ್ನು ತಮ್ಮ ಸರ್ಕಾರದವರು ವಿಶೇಷ ಆಸಕ್ತಿಯಿಂದ ಸಲ್ಲಿಸುತ್ತಾರೆಂದೂ ಹೇಳಿರುತ್ತಾರೆ.

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರು ಹೇಳಿಕೆಯಲ್ಲಿ ಮೈಸೂರು ಸರ್ಕಾರದವರು ಬಳ್ಳಾರಿಯ ಎಲ್ಲ ಜನರನ್ನೂ ಸಮಾನತೆಯಿಂದ ಕಾಣುವುದರಲ್ಲಿ ಸಂಶಯವಿಲ್ಲವೆಂದಿರುತ್ತಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಇತ್ತಿರುವ ಸಂದೇಶದಲ್ಲಿ ಕನ್ನಡ ಪ್ರಾಂತ ರಚನೆಗೆ ಬಳ್ಳಾರಿ ಸೇರ್ಪಡೆಯು ನಾಂದಿಯಾಗಲಿರುವುದೆಂದೂ ತಿಳಿಸಿರುತ್ತಾರೆ.

## ನಾಯಿಯನ್ನು ಹಾವು ನುಂಗಿದ ಪ್ರಸಂಗ

ಗುಂಡ್ಲುಪೇಟೆ ಬಳಿ ಜೋಡಿ ಕೃಷ್ಣಾಪುರಕ್ಕೆ ಸೇರಿದ ಕಾಡಿನಲ್ಲಿ ಮಂಡಲದ ಹಾವೊಂದು ಒಂದು ದೊಡ್ಡ ನಾಯಿ ಯನ್ನು ನುಂಗಿದ ವಿಷಯವು ವರದಿಯಾಗಿದೆ. ದನ ಮೇಯಿಸುತ್ತಿದ್ದವರು ಕಾಡಿನಿಂದ ಮೊನ್ನೆ ಪಶುಗಳನ್ನು ವಾಪಸು ಹೊಡೆದುಕೊಂಡು ಹೋಗುತ್ತಿದ್ದಾಗ, ಅವುಗಳ ಜೊತೆಯಲ್ಲಿ ಬರುತ್ತಿದ್ದ ನಾಯಿಯು ಹತ್ತಿರದ ಪೊದೆಯಲ್ಲಿ ಶಬ್ದವಾದುದನ್ನು ಕೇಳಿ, ಅಲ್ಲಿಗೆ ಹೋಗಲು ಅದರ ತಲೆಯನ್ನು ಒಳಗಿದ್ದ ಹಾವು ಅನಾಮತ್ತು ನುಂಗಿತೆಂದೂ, ಎಷ್ಟು ಹೊತ್ತಾದರೂ ನಾಯಿಯು ಬಾರದಿರಲು ದನ ಕಾಯುವ ಹುಡುಗರು ಹಿಂದಕ್ಕೆ ಬಂದು ನೋಡಲಾಗಿ, ಹಾವು ಅದನ್ನು ಪೂರ್ತಿಯಾಗಿ ನುಂಗುತ್ತಿದ್ದುದು ಕಾಣಿಸಿತೆಂದೂ, ಅನಂತರ ಸಮಾಚಾರ ತಿಳಿದ ಕೂಡಲೆ ಗ್ರಾಮಸ್ಥರು ಹಾವನ್ನು ಆಯುಧಗಳಿಂದ ತಿವಿಯಲು ನಾಯಿಯನ್ನು ಅದು ಕಕ್ಕಿತೆಂದೂ, ಹಾವನ್ನು ಸಾಯಿಸಲಾಯಿತೆಂದೂ ವರದಿಯಾಗಿದೆ.

### ಸಂಗೀತ ಕಛೇರಿ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ಶ್ರೀ ದೇವಾಂಗ ಸಂಘದಲ್ಲಿ ಈ ರಾತ್ರಿ ೮ ಘಂಟೆಗೆ ಬ|| ವಿ|| ಎಸ್ ಎಂ ಮರಿಯಪ್ಪನವರ ಸಂಗೀತವು ವಿ|| ಶಿವರಾಮಯ್ಯನವರ ಪಿಟೀಲು ಮತ್ತು ವಿ|| ಬಾಬು ಕೈ ರತಂ ಮೃದಂಗಸೊಂದಣೆ ಏರ್ಪಾಡಾಗಿದೆ. ನಾಳೆ ಸಂಜೆ ೭ ಘಂಟೆಗೆ ಶ್ರೀ ಮಹಾ ಗಣಪತಿಯನ್ನು ಉತ್ಸವದಲ್ಲಿ ಕೊಂಡೊಯ್ದು ಕುಕ್ಕರಹಳ್ಳಿ ಕೆರೆಯ ಕೋಟೆಯ ಕೊಳದಲ್ಲಿ ಬಿಡಲಾಗುವುದು.

## ಆಂಧ್ರ ಪ್ರಾಂತದ ಆರಂಭೋತ್ಸವ

### ಕರ್ನೂಲಿಗೆ ಪ್ರಧಾನಿ ನೆಹರೂ ಆಗಮನ

ಪ್ರಧಾನಿ ನೆಹರೂರವರು ಆಂಧ್ರ ಪ್ರಾಂತದ ಪ್ರಾರಂಭೋತ್ಸವವನ್ನು ಇಂದು ಕರ್ನೂಲಿನಲ್ಲಿ ನೆರವೇರಿಸಿದರು. ಅವರು ಹೊಸ ಪ್ರಾಂತದ ರಾಜಧಾನಿಗೆ ನೆನ್ನೆ ಆಗಮಿಸಿದಾಗ ಪ್ರಚಂಡ ಜನ ಸ್ತೋಮವು ಅವರನ್ನು ಸ್ವಾಗತಿಸಿತು. ಅವರೊಡನೆ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್, ಕೇಂದ್ರ ಮಂತ್ರಿ ಕಟ್ಜು, ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿ ಮತ್ತು ಹೈದರಾಬಾದು ಮುಖ್ಯ ಮಂತ್ರಿ ಬಿ. ರಾಮಕೃಷ್ಣ ರಾಯರೂ ಬಂದರು. ನೆಹರೂರವರು ಹೊಸ ಪ್ರಾಂತಕ್ಕೆ ಶುಭವನ್ನು ಕೋರಿ ಇತ್ತಿರುವ ಸಂದೇಶದಲ್ಲಿ ಆಂಧ್ರದ ನಿರ್ಮಾಣದಿಂದ ಮತ್ತು ಭಾರತದ ಆಡಳಿತ ಯಂತ್ರವನ್ನು ಪುನರ್ವ್ಯವಸ್ಥೆಗೊಳಿಸುವುದರಿಂದ ಭಾರತದ ನಿಜವಾದ ಐಕ್ಯತೆಗೆ ಯಾವ ಧಕ್ಕೆಯೂ ಬರುವುದಿಲ್ಲವೆಂದು ಆಶಿಸಿದರು. ತಾವು ಪ್ರಾಂತ ವಾದವನ್ನು ಎತ್ತಿ ಹಿಡಿಯುವವರಲ್ಲವೆಂದೂ, ಆದರೆ ಸ್ಥಳೀಯ ಸ್ವಾತಂತ್ರ್ಯವು ಅವಶ್ಯಕವೆಂದೂ ಅವರು ತಿಳಿಸಿದರು. ಆಂಧ್ರವು ಪ್ರತ್ಯೇಕಿಸಲ್ಪಟ್ಟು ಉಳಿದಿರುವ ಮದ್ರಾಸಿನ ವಿಭಾಗಕ್ಕೂ ಅವರು ಶುಭಂಕರವನ್ನು ಕೋರಿದರು.

## ತುಂಗಭದ್ರಾ ಆಡಳಿತದ ಬಗ್ಗೆ ಅಧ್ಯಕ್ಷರ ನಿರೂಪ

ತುಂಗಭದ್ರಾ ಯೋಜನೆಯ ಜವಾಬ್ದಾರಿ ಮತ್ತು ಪೂರ್ತಿಕೆಗಳ ಸಂಬಂಧವಾಗಿ ರಾಷ್ಟ್ರಾಧ್ಯಕ್ಷರು ನಿರೂಪಣೆಯನ್ನು ಹೊರಡಿಸಿರುತ್ತಾರೆ. ಯೋಜನೆಯ ಪೂರ್ತಿಕೆಗಾಗಿ ಒಂದು ಬೋರ್ಡನ್ನು ನಿರ್ಮಾಣ ಮಾಡಲಾಗಿದೆ. ಅದರಲ್ಲಿ ಮೈಸೂರಿನ ಪರವಾಗಿ ಚೀಫ್ ಇಂಜಿನಿಯರರಾದ ಶ್ರೀ ಕೆ ಎಸ್ ಗಂಗಾಧರ್ ಮತ್ತು ವಿದ್ಯುಚ್ಛಕ್ತಿ ಇಲಾಖಾ ಮುಖ್ಯಾಧಿಕಾರಿ ಶ್ರೀ ಜ ಚಾಂಡಿಯವರು ಇರುವರು. ಆಂಧ್ರ ಮತ್ತು ಹೈದರಾಬಾದಿನ ಇಂಜಿನಿಯರುಗಳೂ ಬೋರ್ಡಿನಲ್ಲಿರುವರು. ಸಮಿತಿಯ ಅಧ್ಯಕ್ಷರನ್ನು ಭಾರತ ಸರ್ಕಾರದವರು ನೇಮಿಸುವರು.

## ಕಲ್ಕತ್ತಾ ವಾಹನ ಸಂಚಾರ ಕೆಲಸಗಾರರ ಮುಷ್ಕರ

ಕಾರ್ಮಿಕರುಗಳಿಗೆ ನವರಾತ್ರಿ ಕಾಲದ ಬೋನಸ್, ಸಿಬ್ಬಂದಿ ಹೋಬಳಿದ ನಿಲುಗಡೆ ಮತ್ತು ನಿರುದ್ಯೋಗ ನಿವಾರಣೆ ಇವೇ ಮುಂತಾದ ಬೇಡಿಕೆಗಳನ್ನು ಬಂಗಾಳದ ಎರಡು ಕಾರ್ಮಿಕ ಸಂಸ್ಥೆಗಳು ಇಟ್ಟು, ಸಾರ್ವತ್ರಿಕ ಮುಷ್ಕರ ಹೂಡುವಂತೆ ಕೊಟ್ಟ ಸೂಚನೆಯ ಮೇರೆ ನೆನ್ನೆ ಕಲ್ಕತ್ತಾ ನಗರದಲ್ಲಿ ವಾಹನ ಸಂಚಾರದ ಕಾರ್ಮಿಕರು ಮುಷ್ಕರ ಹೂಡಿದರು. ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಾಹನಗಳ ಓಡಾಟವೇ ನಿಂತುಹೋಗಿದ್ದಿತು.

### ಸೂಚನೆ

ಮಹಾತ್ಮಾ ಗಾಂಧಿಜಿಯವರ ಜಯಂತಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

## ಮದ್ರಾಸಿನ ಟ್ರಾಂ ಸಂಸ್ಥೆಯ ರಹದಾರಿ ರದ್ದು

ಮದ್ರಾಸಿನ ಟ್ರಾಂ ಕಂಪೆನಿಯ ಓಡಾಟದ ರಹದಾರಿಯನ್ನು ರದ್ದುಗೊಳಿಸಲು ಮದ್ರಾಸ್ ಸರ್ಕಾರದವರು ನಿರ್ಧರಿಸಿರುವುದಾಗಿ ವರದಿಯಾಗಿದೆ

## ಕಾಲಿನಿಂದ ಒದೆದು ೧॥ ವರ್ಷದ ಮಗುವಿನ ಕೊಲೆ

ವಿಶ್ವಪುರದ ಬಳಿ ತ್ರಿಟ್ಟಿ ಎಂಬಲ್ಲಿಯ ವೆಂಕಟಸ್ವಾಮಿ ಗೌಂಡರ್ ಎಂಬುವನು ಕಳೆದ ಆಗಸ್ಟ್ -ನೇ ತಾ॥ ತನ್ನ ೧॥ ತಿಂಗಳ ಮಗುವನ್ನು ಒದೆದ [illegible] ಸಂಬಂಧವಾಗಿ ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದೆ ಮಗುವು ಈ ಏಟಿನಿಂದ ಸತ್ತಿತೆಂದು ಅವನು ತಿಳಿಸಿದ್ದಾನೆ

### ನೀರು ಸರಬರಾಜು ಅಧಿಕಾರಿಗಳೊಡನೆ ಕೆಲಸಗಾರರ ಭೇಟಿ

ರಾಜಧಾನಿಯ ನೀರಿನ ಕೆಲಸಗಾರರು ನೆನ್ನೆ ಶ್ರೀ [illegible] ನೇತೃತ್ವದಲ್ಲಿ ಅಸಿಸ್ಟೆಂಟ್ ಲೇಬರ್ ಕಮಿಷನರರು [illegible] ವೆಂಕಟೇಶ [illegible] ಭೇಟಿ ಮಾಡಿದ್ದರು [illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

3-10-53

[illegible]


## ಪರಿಣಾಮ ಶೂಲೆಗೆ ಖಾತರಿಯಾದ ಔಷಧಿ

[illegible] ಕೆಮ್ಮು, ಛಾತಿ, ಕೊಳ, [illegible]

ಔಷಧಿ ಮೊದಲು [illegible] ಆರೋಗ್ಯ [illegible]

Whooping Cough Remedy

[illegible] ಖಾತರಿಯಾದ ಔಷಧಿ [illegible] ವೈದ್ಯ ಸಾರ್ವಭೌಮ [illegible]

ಬೆಲೆ ರೂ 2-8-0

[illegible]

ಆರ್. ಎಸ್. ಪಂಡಿತರು,

[illegible] ಸುಬ್ಬರಾಯನಕೆರೆ [illegible]

ಗೊಲ್ಲಗೇರಿ ಮೈಸೂರು

## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ ಕಾಂಪೌಂಡ, ನಲ್ಲಿ, ದೀಪ, ಫ್ಲಷಿಂಗ್ ಇವೆ

"ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿ


## ಅತ್ಯಾಚಾರ ಮಾಡಿದ ನಂತರ ಸ್ತ್ರೀಯ ಕೊಲೆ

ಬೊಂಬಾಯಿಯ ಒಂದು ಹತ್ತಿ [illegible]ಗಿನಲ್ಲಿ ಬಿದ್ದಿದ್ದ ಒಂದು ಸ್ತ್ರೀ ಶವವನ್ನು ಗೋದಾಮಿನ ಕಾವಲುಗಾರನು ಪತ್ತೆ ಹಚ್ಚಿದ್ದಾನೆ [illegible] ಸ್ತ್ರೀಯೊಬ್ಬಳ ಮೇಲೆ ಅತ್ಯಾಚಾರ ನಡೆಸಿ [illegible] ಕತ್ತನ್ನು ಹಿಸುಕಿ ಕೊಂದು ಹಾಕಲಾಗಿರುವುದೆಂದು ಹೇಳಲಾಗಿದೆ ಕಾವಲುಗಾರನು ಬಾಗಿಲನ್ನು ತೆರೆದು ಹತ್ತಿ ರಾಶಿಯ ಮೇಲೆ ಹೋದಾಗ ಅಲ್ಲಿಗೆ ಸ್ತ್ರೀ ಶವವೊಂದು ಸಿಕ್ಕಿತೆಂದೂ, ಅದರ ನಾಲಿಗೆಯು ಹೊರಚಾಚಿತ್ತೆಂದೂ, ಕತ್ತಿನ ಮೇಲೆ ಉಗುರಿನ ಗಾಯಗಳಿದ್ದುವೆಂದೂ ಹೇಳಲಾಗಿದೆ.

### ಬೆಂಗಳೂರಿಗೆ ವಲ್ಲಭಸ್ವಾಮಿಯವರ ಭೇಟಿ

ಭಾರತ ಸರ್ವ ಸೇವಾ ಸಂಘದ ಸಹ ಕಾರ್ಯದರ್ಶಿಗಳಾದ ಶ್ರೀ ವಲ್ಲಭಸ್ವಾಮಿಯವರು ಸಂಸ್ಥಾನದಲ್ಲಿ ಸ್ಥಾಯಿಯಾದ ಭೂದಾನ ಯಜ್ಞ ಸಮಿತಿಯೊಂದನ್ನು ರಚಿಸುವ ಸಂಬಂಧವಾಗಿ ನಾಳೆ ಬೆಂಗಳೂರಿಗೆ ಆಗಮಿಸುವರು [illegible] ನೇ ತಾ॥ ಸಾಯಂಕಾಲ [illegible] ಗಂಟೆಗೆ ಭೂದಾನ ಯಜ್ಞ ಕಾರ್ಯದಲ್ಲಿ ನಿರತರಾಗಿರುವವರ ಮತ್ತು [illegible]ಗಳ ಸಭೆಯು ನಡೆಯುವುದು ಎಲ್ಲಾ ಕಾರ್ಯಕರ್ತರೂ ಮತ್ತು ಇತರರೂ ಸಭೆಗೆ ಬರುವಂತೆ [illegible] ಸಂಯೋಜಕರಾದ [illegible] ನಾರಾಯಣಪ್ಪನವರು ಕೋರಿರುತ್ತಾರೆ

### ಮೋಟಾರು ಕೆಲಸಗಾರರಿಗೆ ಕಿರುಕುಳ ತಪ್ಪಿಸಲು ಬೇಡಿಕೆ

[illegible] ಕೆಲಸಗಾರರ [illegible] ಸಭೆಯು [illegible] ನಡೆಯಿತು [illegible] ಪೊಲೀಸರು [illegible] ಕೆಲಸಗಾರರಿಗೆ ಕಿರುಕುಳಗಳನ್ನು [illegible] ಮಾಡಲಾಯಿತು [illegible] ವರ್ಷ ಕೆಲಸ ಮಾಡಿರುವವರನ್ನು ತೆಗೆದುಹಾಕಲಿರುವುದಾಗಿಯೂ, ಹೀಗೆ ನೀತಿಯನ್ನು ಅವರು ಬಿಟ್ಟುಬಿಡಬೇಕೆಂದೂ ಒತ್ತಾಯಪಡಿಸಲಾಯಿತು [illegible] ಕಾರಣವಿಲ್ಲದೆ ಪೊಲೀಸರು ರಹದಾರಿಗಳನ್ನು ಕಿತ್ತುಕೊಂಡು ಮನಸ್ವಿಯಾಗಿ [illegible] ಕೆಲಸಗಾರರಿಗೆ ಕಿರುಕುಳ ಕೊಡುತ್ತಿರುವುದನ್ನು ಸಭೆಯು ಖಂಡಿಸಿತು


SREE GANESHA TALKIES

Gal Kukas On 2-10-53

Columbia's Latest

AFFAIR IN TRINIDAD

With Rita Hayworth Glenford


### ರೇಷ್ಮೆ ಬಟ್ಟೆಗಳ ರಫ್ತು [illegible]

[illegible] ರಫ್ತು ಮಾಡುವವರಿಗೆ [illegible] ಪ್ರಕಟಿಸಿದೆ –

[illegible] ರೇಷ್ಮೆ ಬಟ್ಟೆಗಳು [illegible] ರೇಷ್ಮೆ [illegible] ವಿಷಯ [illegible] ಬೆಂಗಳೂರು [illegible] ಕೌನ್ಸಿಲ್ [illegible] ಕಾಣಿಸಿ

ಜಿ. ಆರ್. ಷಣ್ಮುಖಂ [illegible]


Edited, Printed and Published by A. R. Nagarajan at Sadhvi Press, D. Subbiah Road Mysore


## ಬಸ್ಸು ತಡೆದು ದರೋಡೆ ಮಾಡಿದವರಿಗೆ ೧೦ ವರ್ಷ ಸಜಾ

ಮದ್ರಾಸಿನ ಸುತ್ತಮುತ್ತಲೂ ಬಸ್ಸುಗಳನ್ನು ತಡೆದು ಪ್ರಯಾಣಿಕರಿಂದ ಹಣವನ್ನು ಸುಲಿಗೆ ಮಾಡುತ್ತಿದ್ದರೆಂದು [illegible] ಮತ್ತು ಇತರ ಆರು ಜನ ಉತ್ತರ ಆರ್ಕಾಟಿನ ಕೊರವರನ್ನು ತಲಾ ಹತ್ತು ವರ್ಷಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಗಿದೆ ಅವರು ಕಳೆದ ಸಾಲಿನ ಅಕ್ಟೋಬರಿನಿಂದ ಜೂನ್ ವರೆಗೆ ಅನೇಕ ದರೋಡೆಗಳನ್ನು ನಡೆಸಿದ್ದರೆಂದು ಹೇಳಲಾಗಿದೆ

## ಹಿಂದೂ ಯುವಕನೊಡನೆ ಕ್ರಿಸ್ತ ತರುಣಿ ವಿವಾಹ ರದ್ದು

ತಿರುಚಂದೂರಿನ ವೇಲಾಯುಧಪುರದ [illegible] ನಾಡಾರ್ ಮತ್ತು ಸುಬ್ರಹ್ಮಣ್ಯ ನಾದರ್‌ರವರಿಗೆ ಆಗಿದ್ದ ವಿವಾಹವನ್ನು ತಿರುನಲ್ವೇಲಿಯ ಮುನ್ಸೀಫರು ರದ್ದುಗೊಳಿಸಿರುತ್ತಾರೆ ಯುವತಿಯು ೧೮ ವರ್ಷಕ್ಕೆ ಕಡಿಮೆಯಾಗಿದ್ದು, ಕ್ರಿಸ್ತ ಜಾತಿಗೆ ಸೇರಿದವಳೆಂದೂ, ಯುವಕನು ಹಿಂದುವಾಗಿದ್ದು ಕ್ರಿಸ್ತನ ಮುಂದೆ ವಿವಾಹವಾಗಿದ್ದನೆಂದೂ ದೂರು ಕೊಡಲಾಗಿದ್ದಿತು ಯುವತಿಯು ಇನ್ನೂ ವಯಸ್ಸಿಗೆ ಬಂದಿಲ್ಲದವಳಾದುದರಿಂದಲೂ [illegible] ಹಿಂದೂ ಮತ್ತು ಕ್ರಿಸ್ತರ ವಿವಾಹಕ್ಕೆ ಬದ್ಧ ಕಾನೂನು ಇಲ್ಲದುದರಿಂದಲೂ ಮುನ್ಸೀಫರು ವಿವಾಹವನ್ನು ರದ್ದು ಮಾಡಿರುವರು

### ಸಿಮೆಂಟಿನ ಬೆಲೆ

ಸಂಸ್ಥಾನದಲ್ಲಿ ಸಿಮೆಂಟಿನ ಬೆಲೆಯನ್ನು ಸರ್ಕಾರದವರು ಗೊತ್ತುಪಡಿಸಿದ್ದಾರೆ ಟನ್ನಿಗೆ [illegible] ರೂ ಬೆಲೆ ಮತ್ತು ಹೊರ ಜಿಲ್ಲೆಗಳಲ್ಲಿ [illegible] ಮಾಡಿದ್ದರೆ [illegible] ಒಕ್ಕೆ [illegible] ದರವನ್ನು ಗೊತ್ತುಪಡಿಸಲಾಗಿದೆ ಹಳೆಯ ಬೆಲೆಯಲ್ಲಿ ಸ್ಟಾಕ್ ಆಗಿದ್ದರೆ ವ್ಯಾಪಾರಗಾರರಿಗೂ ಕೊಳ್ಳುವವರಿಗೂ ಒಪ್ಪಂದದ ದರವನ್ನು ನಿಗದಿ ಮಾಡಬಹುದಾಗಿದೆ

## ಬಳ್ಳಾರಿಯ ಜನರಿಗೆ ಮೈಸೂರು ಸಂಸ್ಥಾನದ ಸುಸ್ವಾಗತ

### ಮುಖ್ಯಮಂತ್ರಿ ಹನುಮಂತಯ್ಯನವರ ಸಂದೇಶ

ಬಳ್ಳಾರಿಯ ಏಳು ತಾಲ್ಲೂಕುಗಳು ಇಂದು ಮೈಸೂರು ಸಂಸ್ಥಾನಕ್ಕೆ ಸೇರುವ ಸಂಬಂಧವಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ರೀತಿ ಸಂದೇಶವನ್ನಿತ್ತಿರುವರು

ಬಳ್ಳಾರಿ ಜಿಲ್ಲೆಯ ಹಡಗಲಿ, ಹರಪನಹಳ್ಳಿ, ಹೊಸಪೇಟೆ, ಕೂಡ್ಲಿಗಿ ಸೊಂಡೂರು, ಸಿರುಗುಪ್ಪ ಮತ್ತು ಬಳ್ಳಾರಿ ಈ ಏಳು ತಾಲ್ಲೂಕುಗಳು ಇಂದು ಮೈಸೂರು ಸಂಸ್ಥಾನಕ್ಕೆ ಸೇರುತ್ತವೆ ನಮ್ಮೆಲ್ಲರಿಗೂ ಸಂತೋಷದಾಯಕವಾದ ಶುಭ ದಿನವಿದು ಮೈಸೂರಿನವರಿಗೆ ತಮ್ಮ ಸಂಸ್ಥಾನವನ್ನು ವಿಸ್ತರಿಸಬೇಕೆಂಬ ಹಂಬಲವೊಂದೂ ಇಲ್ಲ ಬಹುಕಾಲದಿಂದ ಬಯಸುತ್ತಿದ್ದ ಅವರ ಸೌಕರ್ಯ ಸಿದ್ಧಿಸಿತೆಂಬುದೇ ಸಂತೋಷಕ್ಕೆ ಮುಖ್ಯ ಕಾರಣ ಬಳ್ಳಾರಿಯೂ ಸೇರಿದ ಮೈಸೂರು ಸಂಸ್ಥಾನವು ಬಾಳಿ, ಬೆಳಗಲಿ ಎಂದೇ ನಮ್ಮ ಪ್ರಾರ್ಥನೆ

### ಪಂಚ ರಾಷ್ಟ್ರ ಸಮ್ಮೇಳನ ಬೇಕು

ಚತುರ್ರಾಷ್ಟ್ರಗಳ ಸಮ್ಮೇಳನವು ಲುಗಾನೋದಲ್ಲಿ ನಡೆಯಬೇಕೆಂಬ ಸಲಹೆಯನ್ನೂ, ಆ ಬಗ್ಗೆ ಬಂದಿದ್ದ ಆಹ್ವಾನವನ್ನೂ ರಷ್ಯವು ತಿರಸ್ಕರಿಸಿ ಕಮ್ಯೂನಿಸ್ಟ್ ಚೀನಾವೂ ಸೇರಿದ ಪಂಚರಾಷ್ಟ್ರಗಳ ಸಮ್ಮೇಳನವು ನಡೆಯಬೇಕೆಂದು ತಿಳಿಸಿರುತ್ತದೆ

### ನಂಜನಗೂಡಿನಲ್ಲಿ ಗಾಂಧಿ ಜಯಂತಿ

ನಂಜನಗೂಡಿನ ವಿವಿಧ ಸಂಘಗಳ ಆಶ್ರಯದಲ್ಲಿ ನಾಳೆ ಗಾಂಧಿ ಜಯಂತಿ ಉತ್ಸವವನ್ನು ನೆರವೇರಿಸಲಾಗುವುದು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಶ್ರೀ [illegible] ಕೃಷ್ಣಸ್ವಾಮಿ ಮತ್ತು ನಾಡಿಗ ಕೃಷ್ಣಮೂರ್ತಿಯವರು ಭಾಷಣ ಮಾಡುವರು


## ಸರ್ವೋದಯ ಸಾಹಿತ್ಯ

| | | | | | |
|---|---|---|---|---|---|
| Autobiography | – Gandhiji | Rs | 7 | 0 | 0 |
| Rebuilding our Villages | ” | | 1 | 8 | 0 |
| Gandhi and Marx | | | 1 | 8 | 0 |
| ಸರ್ವೋದಯ ವಿಚಾರ | ವಿನೋಬಾ | | 1 | 4 | 0 |
| ಸರ್ವೋದಯ ದೃಷ್ಟಿ | ” | | 0 | 2 | 0 |
| ಗೀತಾ ಪ್ರವಚನ | ” | | 2 | 8 | 0 |
| ಭೂದಾನ ಯಜ್ಞ | ” | | 0 | 8 | 0 |

(ವಿವರವಾದ ಪುಸ್ತಕ ಪಟ್ಟಿಗಾಗಿ ವಿಚಾರಿಸಿರಿ)

ಚೇತನ ಪುಸ್ತಕಾಲಯ, ಮೈಸೂರು

## ಶ್ರೀ ಚಾಮುಂಡೇಶ್ವರಿ ಟಾಕೀಸ್

ದಸರಾ ಮಹೋತ್ಸವದ ವಿಶೇಷ ಆಕರ್ಷಣೆ

2-10-53 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ವಿನೋದಾರವರ ತಮಿಳು ಚಿತ್ರ

* ದೇವದಾಸ್ *

(ಸುಪ್ರಸಿದ್ಧ ಬಂಗಾಳಿ ಲೇಖಕ ಶರತ್‌ಬಾಬುರವರ ಅಮೋಘ ಕಾದಂಬರಿಯ ಅನುವಾದ)

ಪಾತ್ರವರ್ಗ – ಸಾವಿತ್ರಿ, ಲಲಿತ ನಾಗೇಶ್ವರರಾವ್, ನಂಬಿಯಾರ್ ಮೊದಲಾದವರು

## ಪ್ರಭಾ ★

ಅಮೋಘ ಪ್ರಾರಂಭ 2 10 53 ರಿಂದ ದಿನ 3 ಆಟಗಳು

ಚಂದೂ ಸ್ಟುಡಿಯೋದವರ ಇಂಪಾದ ಸಂಗೀತದಿಂದ ಕೂಡಿದ ಅತ್ಯುತ್ತಮ ಹಿಂದಿ ಚಿತ್ರ

★ ನಯನಾ ★

ಪಾತ್ರ:– [illegible] ಗೀತಾಬಾಲಿ, ಮಂಜೂ, ಲೀಲಾಮಿಶ್ರ ಮತ್ತು ರವೀಂದ್ರ ಸಿಂಹ

ಸಂಗೀತ ಮನ್ನಾಡೆ — ನಿರ್ದೇಶನ - ರವೀಂದ್ರ

ಬೆಳಗಿನ ಪ್ರದರ್ಶನ 1-10-53 ರಿಂದ 4 ದಿನಗಳು

[illegible] ಗೀತಾಬಾಲಿ ನಟಿಸಿರುವ ನವಕೇತನರವರ "ಬಾಜಿ"

## ಮೋತಿಲಾಲ್ ಟಾಕೀಸ್

(ಚಾಮುಂಡಿ ಮೊಹಲ್ಲಾ, ಮೈಸೂರು)

2-10-53 ರಿಂದ :: ಪ್ರತಿ ದಿನ 3 ಆಟಗಳು

[illegible]ರವರ ವರ್ಣರಂಜಿತ ಹಿಂದಿ ಚಿತ್ರ

* ಆನ್ *

ಪಾತ್ರ:- ದಿಲೀಪ್‌ಕುಮಾರ್, ಪ್ರೇಂನಾಥ್, ನಿಮ್ಮಿ, ನಾದಿರ

ಬೆಳಗಿನ ಪ್ರದರ್ಶನ — ಕಾಲಿಘಾಟ

ರಿಜಿಸ್ಟರ್ ನಂ. 792

[ ಸಂಜೆ ಪತ್ರಿಕೆ ]

ಬಿಡಿ ಪತ್ರಿಕೆ 3 ಕಾಸು

ಮೈಸೂರು ಗ॥ ಸಿಲ್ಕ್
ಸೀರೆಗಳು
ಆರ್ಟ್ ಸೀರೆಗಳು ಮತ್ತು ತರಹೆ
ವಾರಿ ಮೂಲಿನ ಸೀರೆಗಳಿಗೆ
ಧರ್ಮಾವರಂ, ಪೂನಾ, ನಾಗಪುರ,
M. V. ಭೋಜಯ್ಯ
ಡಿ. ಪಿ.
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು : ಫೋನ್ 446

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೩ ] MYSORE : SATURDAY 3-10-1953 :- ಮೈಸೂರು : ಶನಿವಾರ ೩-೧೦-೧೯೫೩ [ ಸಂಚಿಕೆ ೬೦

# ಇದೇ ೧೫ರಿಂದ ನಗರದ ನೀರಿನ ಕೆಲಸಗಾರರ ಮುಷ್ಕರ

## ಬಳ್ಳಾರಿ ಸೇರ್ಪಡೆ ಉತ್ಸವದ ಸಮಾರಂಭ

ಮೈಸೂರು ೩.

ಬಳ್ಳಾರಿಯ ಏಳು ತಾಲ್ಲೂಕುಗಳು ಮೈಸೂರಿಗೆ ಸೇರಿದ ಸಂಬಂಧವಾಗಿ ಇಲ್ಲಿನ ಕರ್ನಾಟಕ ಸಂಘ ಮತ್ತು ಬಳ್ಳಾರಿ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಸಂತೋಷ ಸಮಾರಂಭವನ್ನು ಸದ್ವಿದ್ಯಾ ಪಾಠಶಾಲೆಯಲ್ಲಿ ಮೊನ್ನೆ ನರವೇರಿಸಲಾಯಿತು. ಉಪಾಧ್ಯಾಯರುಗಳ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಡಾ॥ ಎಂ. ಸಿದ್ಧಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಚಲಪಾವತಿಯವರಿಂದ ಪ್ರಾರ್ಥನೆ ಮತ್ತು ಶ್ರೀ ಕೃ. ರಾಮಸ್ವಾಮಿಯವರಿಂದ ಸ್ವಾಗತ ಭಾಷಣವಾದನಂತರ, ಶ್ರೀ ಡಿ. ಎಸ್. ಸಿದ್ದಣ್ಣಗೌಡರು ಬಳ್ಳಾರಿ ಜಿಲ್ಲೆಯ ಬಗ್ಗೆ ಹಲವು ವಿವರಗಳನ್ನು ತಿಳಿಸಿದರು. ಶ್ರೀ ಎ. ಕೋದಂಡರಾಮಯ್ಯ ಮತ್ತು ಮಿತ್ರರಿಂದ ಸುಶ್ರಾವ್ಯವಾದ ಗಾಯನವೂ, ಶ್ರೀಗಳಾದ ರಾಘವೇಂದ್ರ ಇಟಗಿ ಮತ್ತು ಸೋಮಸುಂದರ ಇವರುಗಳಿಂದ ಕಾವ್ಯ ವಾಚನವೂ, ಶ್ರೀ ವೀರಪ್ಪ ಶೆಟ್ಟರಿಂದ ಬುಲ್‌ಬುಲ್ ತರಂಗ್ ವಾದನವೂ ನಡೆದನಂತರ ಮಹಾರಾಜಾ ಕಾಲೇಜಿನ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಭಾಷಣ ಮಾಡಿ, ಇಂತಹ ಸಂತೋಷ ಸಮಯದಲ್ಲಿ ಕನ್ನಡ ಪ್ರಾಂತಕ್ಕಾಗಿ ದುಡಿದ ಮತ್ತು ತ್ಯಾಗ ಮಾಡಿದ ಮಹನೀಯರುಗಳನ್ನು ಸ್ಮರಿಸಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷರು ಮಾತನಾಡಿ, ಕನ್ನಡಿಗರು ಇತರ ಭಾಷೆಗಳನ್ನಾಡುವವರನ್ನು ಭ್ರಾತೃ ವಾತ್ಸಲ್ಯದಿಂದ ನೋಡಬೇಕೆಂದೂ, ಬಳ್ಳಾರಿಯ ಸೇರ್ಪಡೆಯಿಂದ ಅಖಂಡ ಕರ್ನಾಟಕ ಪ್ರಾಂತದ ಸ್ಥಾಪನಾ ಕಾಲವೂ ಸಮೀಪವಾಗಿರುವುದೆಂದೂ, ಅಲ್ಲಿಯವರೆಗೆ ಕನ್ನಡ ಜನರು ಶಾಂತಿ ಮತ್ತು ಸಹನೆಯನ್ನು ಹೊಂದಬೇಕೆಂದೂ ತಿಳಿಸಿದರು.

ಆಂಧ್ರ ಪ್ರಾಂತ ನಿರ್ಮಾಣವಾಗಲು ಕಾರಣಕರ್ತರಾದವರನ್ನು ಅಭಿನಂದಿಸುವ ಮತ್ತು ನೂತನ ಆಂಧ್ರ ಪ್ರಾಂತ್ಯವು ಸರ್ವತೋಮುಖವಾದ ಯಶಸ್ಸನ್ನು ಹೊಂದಲೆಂದು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಶ್ರೀ ಮುದ್ದು ಒಡೆಯನವರು ವಿವಿಧ ಕನ್ನಡ ಪ್ರದೇಶಗಳಲ್ಲಿ ಆ ಭಾಷೆಯನ್ನು ಆಡುವ ರೀತಿಯ ವಿಚಾರವಾಗಿ ಉದಾಹರಣೆಗಳಿಂದ ವಿವರಣೆ ಇತ್ತನಂತರ ವಂದನಾರ್ಪಣೆ, ಪ್ರಸಾದ ವಿನಿಯೋಗ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

## ವಿಶಾಲಾಂಧ್ರದ ಸ್ಥಾಪನೆಗೆ ಆಂಧ್ರ ಕಾಂಗ್ರೆಸ್ಸಿನ ಕರೆ

ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಹೈದರಾಬಾದು ರಾಜ್ಯದ ತೆಲಂಗಾಣವುಳ್ಳ ವಿಶಾಲಾಂಧ್ರ ಸಂಸ್ಥಾನವನ್ನು ಏರ್ಪಡಿಸುವಂತೆ ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸಿರುತ್ತದೆ.

○ಅಮೆರಿಕದ ಸಹಾಯವನ್ನು ಪಡೆದು ಇರಾನಿನ ಎಣ್ಣೆ ಗಣಿಗಳಲ್ಲಿ ಪುನಃ ಎಣ್ಣೆಯನ್ನು ತೆಗೆಯಲಾಗುವುದೆಂದು ಇರಾನಿನ ಪ್ರಧಾನಿ ಜ. ಜಹೇದಿಯವರು ಹೊರಡಿಸಿರುವ ಪ್ರಕಟಣೆಯೊಂದು ತಿಳಿಸುತ್ತದೆ.

## ಬಳ್ಳಾರಿಯಲ್ಲಿ ಅಶ್ರು ವಾಯು ಪ್ರಯೋಗ

ಬಳ್ಳಾರಿಯು ಮೈಸೂರಿಗೆ ಸೇರಿದ ಸಂಭ್ರಮದ ಅಂಗವಾಗಿ ಭುವನೇಶ್ವರಿ ದೇವಿಯ ಉತ್ಸವವನ್ನು ನೆನ್ನೆ ಸುಮಾರು ೩,೦೦೦ ಕನ್ನಡಿಗರು ನಡೆಸುತ್ತಿದ್ದಾಗ, ಹಲವರು ಮೆರವಣಿಗೆ ಮೇಲೆ ಕಲ್ಲು ಬೀರಿದರೆಂದೂ, ಮೈಸೂರು ಪೋಲೀಸರು ಅಶ್ರು ವಾಯು ಪ್ರಯೋಗಿಸಿ ಕಲ್ಲೆಸೆದವರನ್ನು ಚದುರಿಸಬೇಕಾಯಿತೆಂದೂ ವರದಿಯಾಗಿದೆ. ಇಬ್ಬರು ಪೋಲೀಸರಿಗೆ ಗಾಯವಾಗಿದೆ. ಈ ಸಂಬಂಧವಾಗಿ ಆಂಧ್ರ ಯುವಕರಿಬ್ಬರನ್ನು ದಸ್ತಗಿರಿ ಮಾಡಲಾಗಿದೆ. ಅಲ್ಲಿನ 'ರೈತ' ಪತ್ರಿಕೆಯ ಸಂಪಾದಕ ಶ್ರೀ ಕೆ. ಚನ್ನಬಸಪ್ಪನವರ ಮನೆ ಮುಂದೆ ಪುಂಡರ ಗುಂಪೆ ಮಾಡಲೆಳಸಿದರೆಂದೂ, ಕಾಂಗ್ರೆಸ್ ಪ್ರತಿನಿಧಿಯಾಗಲಿರುವ ಶ್ರೀ ಟಿ. ಬಿ. ಕೇಶವರಾವ್ ರವರ ಮನೆ ಮುಂದಿರುವ ಕನ್ನಡ ಬಾವುಟವನ್ನು ಕಿತ್ತು ಹಾಕಲೂ ಪ್ರಯತ್ನ ನಡೆಯಿತೆಂದೂ ಹೇಳಲಾಗಿದೆ.

## ಬಳ್ಳಾರಿಯಲ್ಲಿ ಚಪ್ಪರಕ್ಕೆ ಬೆಂಕಿ ಇಡುವ ಪ್ರಯತ್ನ

### ಆಸ್ಪತ್ರೆಯಲ್ಲಿ ಕಾವಲುಗಾರನ ಮರಣ

ಬಳ್ಳಾರಿಯು ಮೈಸೂರಿಗೆ ಸೇರಿದ ಸಂಬಂಧವಾಗಿ ಏರ್ಪಾಡಾಗಿದ್ದ ಉತ್ಸವದ ಚಪ್ಪರಕ್ಕೆ ಮೊನ್ನೆ ಬೆಂಕಿ ಹಚ್ಚುವ ಪ್ರಯತ್ನವೊಂದು ಇಬ್ಬರು ಪುಂಡರಿಂದ ನಡೆಯಿತೆಂದು ಹೇಳಲಾಗಿದೆ. ಪೆಟ್ರೋಲ್ ತುಂಬಿದ ವಿದ್ಯುಚ್ಛಕ್ತಿ ಬಲ್ಬನ್ನು ಎಸೆದಾಗ ಅದು ಚಪ್ಪರಕ್ಕೆ ತಗುಲದೆ ಹತ್ತಿರದಲ್ಲಿ ಕಾವಲಿದ್ದ ರಂಗಾರೆಡ್ಡಿ ಎಂಬಾತನಿಗೆ ತಗುಲಿ ಅವನಿಗೆ ಸುಟ್ಟಗಾಯಗಳಾದುವು. ಆತನನ್ನು ಆಸ್ಪತ್ರೆಗೆ ಸೇರಿಸಲಾಗಿ ಅಲ್ಲಿ ಅವನು ಮೃತಪಟ್ಟನೆಂದು ವರದಿಯಾಗಿದೆ.

### ಸಂಗೀತ

ರಾಜಧಾನಿಯ ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ಈ ರಾತ್ರಿ ೭॥ ಗಂಟೆಗೆ ವಿದ್ವಾನ್ ಬಿ. ಎಂ. ಮುನಿವೆಂಕಟಪ್ಪನವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು. ನಗರ ನ್ಯಾಯಾಧೀಶರಾದ ಶ್ರೀ ಎಂ. ಡಿ. ಶಿವನಂಜಪ್ಪನವರು ಅಧ್ಯಕ್ಷತೆ ವಹಿಸುವರು.

### ಪೌರಸಭಾ ಚುನಾವಣೆ ಬಗ್ಗೆ ರಾಜಕೀಯ ಪಕ್ಷಗಳ ಸಭೆ

ಬರುವ ಡಿಸೆಂಬರ್ ತಿಂಗಳು ನಡೆಯುವ ಪೌರಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛೆ ಹೊಂದಿರುವ ರಾಜಕೀಯ ಪಕ್ಷಗಳ ಪ್ರಮುಖರೂ, ಸ್ವತಂತ್ರಾಭಿಪ್ರಾಯದ ಜನರೂ ನಾಳೆ ಮಧ್ಯಾಹ್ನ ೪ ಗಂಟೆಗೆ ಹಳ್ಳದಕೇರಿ ಶ್ರೀ ಜನಾನಂದಾ ಪವರ್ ಪ್ರೆಸ್ ಕಟ್ಟಡದಲ್ಲಿ ಸೇರುವ ಸಂಯುಕ್ತ ಪ್ರತಿ ಪಕ್ಷ ಸಂಘದ ಸಭೆಗೆ ದಯಮಾಡಿಸುವಂತೆ ಸಭೆಯ ಸಂಚಾಲಕರಾದ ಶ್ರೀ ಎ. ವೆಂಕಟೇಶಯ್ಯ, ಎಂ. ಎಸ್. ಚಂದ್ರಶೇಖರ ಜೋಯಿಸ್ ಮತ್ತು ಬಿ. ಲಕ್ಷ್ಮೀನಾರಣಪ್ಪನವರು ಕೋರಿರುತ್ತಾರೆ.

### ಗಣಪತಿ ಮಂಗಳಾರತಿ

ರಾಜಧಾನಿಯ ಹಳೇ ಅಗ್ರಹಾರದ ಕಿರಿಯರ ತಂಡದ ಆಶ್ರಯದಲ್ಲಿ ಈ ರಾತ್ರಿ ೭ ಗಂಟೆಗೆ ಗಣಪತಿ ಮಂಗಳಾರತಿಯು ನಡೆಯುವುದು.

## ಇದೇ ೧೫ನೇ ತಾರೀಖಿನಿಂದ ನೀರಿನ ಕೆಲಸಗಾರರ ಮುಷ್ಕರ

### ಎಕ್ಸಿಕ್ಯುಟಿವ್ ಇಂಜನಿಯರೊಡನೆ ಸಂಧಾನ ಮುರಿದುಬಿದ್ದಿತು

ಮೈಸೂರು ೧

ರಾಜಧಾನಿಯ ನೀರಿನ ಕೆಲಸಗಾರರು ತಮ್ಮ ಸಂಬಳ ಸಾರಿಗೆ ಮತ್ತು ವಿರಾಮ ವೇತನಗಳ ಬಗ್ಗೆ ಸರ್ಕಾರದವರಿತ್ತ ಭರವಸೆಯನ್ನು ಈಡೇರಿಸದಿದ್ದ ಸಂಬಂಧವಾಗಿ ನೆನ್ನೆಯ ದಿನ ಎಕ್ಸಿಕ್ಯೂಟಿವ್ ಇಂಜನಿಯರ್, ಶ್ರೀ ಎಚ್. ಎಸ್. ನರಸಿಂಹ ಅಯ್ಯಂಗಾರ್, ಅಸಿಸ್ಟೆಂಟ್ ಲೇಬರ್ ಕಮಿಷನರ್ ಶ್ರೀ ಗೊ. ಬಾಲರಾಜ ಅರಸ್ ಮತ್ತು ವಾಣೀವಿಲಾಸ ವಾಟರ್ ವರ್ಕ್ಸಿನ ಸೂಪರಿಂಟೆಂಡೆಂಟರಾದ ಶ್ರೀ ಎ. ವಿ. ಅಂಬರ್‌ಕರ್‌ರವರ ಸಮಕ್ಷಮದಲ್ಲಿ ಮಾತುಕತೆ ನಡೆಸಿದರು. ಕಾರ್ಮಿಕರ ಸಂಘದ ಅಧ್ಯಕ್ಷ ಶ್ರೀ ಮಿರ್ ನೂರ್ ಹುಸೇನ್, ಉಪಾಧ್ಯಕ್ಷ ಶ್ರೀ ಚಂದ್ರಶೇಖರಯ್ಯ ಮತ್ತು ಕಾರ್ಯದರ್ಶಿ ಶ್ರೀ ವಿಶ್ವನಾಥ್‌ರವರು ಅದರಲ್ಲಿ ಭಾಗವಹಿಸಿದ್ದರು.

ಕೆಲಸಗಾರರ ಬೇಡಿಕೆಗಳನ್ನು ಕೂಡಲೇ ಈಡೇರಿಸಲು ಸಾಧ್ಯವಿಲ್ಲವೆಂದೂ, ಸ್ವಲ್ಪ ತಡವಾಗಬಹುದೆಂದೂ ಎಕ್ಸಿಕ್ಯೂಟಿವ್ ಇಂಜನಿಯರು ತಿಳಿಸಲು, ಆರು ವರ್ಷದಿಂದ ಇತ್ಯರ್ಥವಾಗದೆ ಉಳಿದಿರುವ ವಿರಾಮ ವೇತನವನ್ನಾದರೂ ಕೂಡಲೇ ಕೊಡಬೇಕೆಂದು ಕಾರ್ಮಿಕರ ಕೇಳಲಾಗಿ, ಎಕ್ಸಿಕ್ಯೂಟಿವ್ ಇಂಜನಿಯರು ಅದು ಸಾಧ್ಯವಿಲ್ಲವೆಂದು ತಿಳಿಸಿದ್ದರಿಂದ ಸಂಧಾನವು ಮುರಿದುಬಿದ್ದಿತು.

ತರುವಾಯ ಕಾರ್ಮಿಕರು ಲೇಬರ್ ಕಮಿಷನರರ ಕಛೇರಿಯಿಂದ ಮೆರವಣಿಗೆ ಹೊರಟು ಪ್ರಮುಖ ರಸ್ತೆಗಳಲ್ಲಿ ಸಾಗಿ, ಶ್ರೀ ಮಿರ್ ನೂರ್ ಹುಸೇನರವರ ಕಛೇರಿಯಲ್ಲಿ ಸಭೆ ಸೇರಿ ಇದೇ ೧೫ನೇ ತಾರೀಖಿನಿಂದ ತಮ್ಮ ಬೇಡಿಕೆಗಳು ಪೂರೈಸುವವರೆಗೆ ಮುಷ್ಕರ ಹೂಡಲು ನಿರ್ಧರಿಸಿದರು.

ಸಾರ್ವಜನಿಕರು ತಮ್ಮ ಬಗ್ಗೆ ಸಹಾನುಭೂತಿ ತೋರಬೇಕೆಂದು ಕೋರುವ ಬ್ಯಾಡ್ಜುಗಳನ್ನು ಕೆಲಸಗಾರರೆಲ್ಲರೂ ಧರಿಸಿರುವರು.

### ಗಾಯನ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನೀ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪॥ ಗಂಟೆಗೆ ಸಂಗೀತ ವಿದುಷಿ ಎಲ್. ಲೀಲಾವತಿಯವರ ಗಾಯನವು ವಿದ್ವಾನ್ ಬಿ. ಕೆ. ಮೂರ್ತಿಯವರ ಪಿಟೀಲು ಮತ್ತು ವಿ॥ ಹೆಚ್. ಟಿ. ನಾಗಣ್ಣನವರ ಮೃದಂಗದೊಡನೆ ನಡೆಯುವುದು.

### ನಾಳೆ ನೀರು ನಿಲ್ಲುವುದು

ನಗರದಲ್ಲಿ ವಿದ್ಯುಚ್ಛಕ್ತಿಯನ್ನು ನಾಳೆ ಬೆಳಿಗ್ಗೆ ೮ರಿಂದ ಸಂಜೆ ೬ರ ವರೆಗೆ ನಿಲ್ಲಿಸಲಾಗುವುದರಿಂದ ಆ ಕಾಲದಲ್ಲಿ ನೀರಿನ ಸರಬರಾಜೂ ನಿಲ್ಲುವುದೆಂದೂ, ಪುರನಿವಾಸಿಗಳು ಈ ದಿನವೇ ನೀರನ್ನು ಶೇಖರಿಸಿಟ್ಟುಕೊಳ್ಳಬೇಕೆಂದೂ ಪುರಸಭೆಯವರು ತಿಳಿಯಪಡಿಸಿರುತ್ತಾರೆ.

## ಹನುಮಂತಯ್ಯನವರಿಂದ ಗಾಂಧಿಜಿ ಪ್ರತಿಮೆ ಅನಾವರಣ

ಬಳ್ಳಾರಿಗೆ ೧೧ ಮೈಲಿ ದೂರವಿರುವ ಕುಡತಿನಿ ಎಂಬಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಗಾಂಧೀಜಿಯವರ ಶಿಲಾಪ್ರತಿಮೆಯ ಅನಾವರಣ ಮಾಡಿದರು.

## ಗಾಂಧಿ ಜಯಂತಿ ಉತ್ಸವ

ಮೈಸೂರು ೩.

ಮಹಾತ್ಮ ಗಾಂಧಿಯವರ ಜಯಂತ್ಯುತ್ಸವವು ನೆನ್ನೆ ನಗರ ಕಾಂಗ್ರೆಸ್, [illegible] ಸಮಾಜ ಮುಂತಾದ ಸಂಸ್ಥೆಗಳವರಿಂದ ಆಚರಿಸಲ್ಪಟ್ಟಿತು. ಟೌನ್‌ಹಾಲಿನೊಳಗೆ ವೇದಿಕೆಯ ಮೇಲೆ ಕುಂದಗಳಿಂದ ಅಲಂಕರಿಸಲ್ಪಟ್ಟು ಮಧ್ಯೆ ಇಡಲಾಗಿದ್ದ ಗಾಂಧೀಜಿಯವರ ಭಾವಚಿತ್ರದ ಬಳಿ ಬೆಳಿಗ್ಗೆ ಪ್ರಾರ್ಥನೆ ಮತ್ತು ಸೂತ್ರಯಜ್ಞಗಳು ನಡೆದುವು. ನಂತರ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ರಾಷ್ಟ್ರಧ್ವಜಾರೋಹಣ ಮಾಡಿದರು. ಸಂಜೆಯಾಗಲು ನಗರ ಸಂಕೀರ್ತನಯಜ್ಞವು ನಡೆದ ಮೇಲೆ ಸಾಮೂಹಿಕ ನೂಲುವಿಕೆಯು ನಡೆಯಿತು. ಆಶ್ರಮ ಪ್ರಾರ್ಥನೆಯಾದನಂತರ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಸರ್ವೋದಯ ಸಮಾಜದ ಧ್ಯೇಯಗಳನ್ನು ವಿವರಿಸಿ, ಗಾಂಧಿ ಜಯಂತಿಯ ಮಹತ್ವವನ್ನು ತಿಳಿಸಿದರು. ನಂತರ ಗೀತಾ ಅರ್ಕೆಸ್ಟ್ರಾದವರಿಂದ ಗಾಂಧಿ ಗೀತೆಗಳು ಹಾಡಲ್ಪಟ್ಟುವು.

## ಮೈಸೂರು ಅಧಿಕಾರಿಗಳಿಂದ ಬಳ್ಳಾರಿ ಆಡಳಿತದ ಸ್ವೀಕಾರ

ಬಳ್ಳಾರಿಯ ಏಳು ತಾಲ್ಲೂಕುಗಳು ಮೈಸೂರು ಸಂಸ್ಥಾನಕ್ಕೆ ಸೇರಿದ ಅಧಿಕೃತ ಘೋಷಣೆಯು ಮೊನ್ನೆ ದಿನ ಅಲ್ಲಿನ ದೇವಾಲಯ, ಮಸೀದಿ ಪವಿತ್ರ ಮಂದಿರಗಳಲ್ಲಿ ಪೂಜೆ ಪ್ರಾರ್ಥನೆಗಳು ನಡೆಯುತ್ತಿದ್ದಾಗ ಮೈಸೂರಿನ ಅಧಿಕಾರಿಗಳು ಜಿಲ್ಲೆಯ ಆಡಳಿತಾಧಿಕಾರವನ್ನು ವಹಿಸಿಕೊಂಡರು.

ಈ ಸಂಬಂಧವಾಗಿ ನೆನ್ನೆ ಅಲ್ಲಿನ ಉತ್ಸವ ಸಮಿತಿಯವರು ಏರ್ಪಡಿಸಿದ್ದ ಸಮಾರಂಭದ ಅಂಗವಾಗಿ ಬೆಳಿಗ್ಗೆ ಅಲ್ಲಿನ ಪೆರೇಡು ಮೈದಾನದಲ್ಲಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ರಾಷ್ಟ್ರಧ್ವಜಾರೋಹಣ ಮಾಡಿದರು. ಮದ್ರಾಸಿನ ಮಾಜಿ ಸ್ಥಳೀಯ ಸ್ವಯಂ ಆಡಳಿತ ಮಂತ್ರಿ ಶ್ರೀ ನಾಗನಗೌಡ ಮೂಗನೂರು, ಬಳ್ಳಾರಿಯು ಮೈಸೂರಿಗೆ ಸೇರಿದ ಬಗ್ಗೆ ಒಂದು ಹಾರ ಹಾಕುವ ಹೃತ್ಪೂರ್ವಕ ಸ್ವಾಗತ. ಶ್ರೀ ಜಯಚಾಮರಾಜರು ಶುಭ ಸಂದೇಶವನ್ನು ಕಳುಹಿಸಿ ಬಳ್ಳಾರಿ ಜನತೆಗೆ ಸ್ವಾಗತವನ್ನು ಬಯಸಿದರು.

## ಆಂಧ್ರ ಪ್ರಾಂತದ ಮಂತ್ರಿ ವರ್ಗ

ಆಂಧ್ರ ಪ್ರಾಂತಕ್ಕೆ ಪ್ರಕಾಶಂರವರು ಮುಖ್ಯ ಮಂತ್ರಿಗಳಾಗಿಯೂ ಎನ್. ಸಂಜೀವ ರೆಡ್ಡಿಯವರು ಉಪ ಮುಖ್ಯ ಮಂತ್ರಿಗಳಾಗಿಯೂ ಇರುವರು. ಕೆ. ಕೋಟಿರೆಡ್ಡಿಯವರು ಮರಾವತ್ತು, ಟಿ. ವಿಶ್ವನಾಥಂ ಹಣಕಾಸು ಮತ್ತು ಡಿ. ಸಂಜೀವಯ್ಯ ವಿದ್ಯಾ ಮಂತ್ರಿಗಳಾಗಿರುವರು. ಕ್ರಮೇಣ ಇನ್ನಿಬ್ಬರು ಮಂತ್ರಿಗಳನ್ನು ತೆಗೆದುಕೊಳ್ಳಲಾಗುವುದು.

### ರಾಜ್ಯಾದ ಶ್ರೀ ವೈಷ್ಣವ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ರಾಮಾನುಜ ಶ್ರೀ ವೈಷ್ಣವ ಯುವಕರ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಮಧ್ಯಾಹ್ನ ೩॥ ಗಂಟೆಗೆ ನಿಲಯದ ಪ್ರಥಮ ವಾರ್ಷಿಕೋತ್ಸವವು ಪೌರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

## ಮಹಿಳೆಯರ ಆರ್ಥಿಕ ಉಳಿತಾಯದ ಯೋಜನೆ

**[illegible] ಮಹಾರಾಣಿಯವರಿಂದ ಆರಂಭ**

ಮೈಸೂರ ೩

ಸೂರು ಸಂಸ್ಥಾನದ ಮಹಾರಾಣಿ ಶ್ರೀ [illegible] ರವರು ಮೈಸೂರ [illegible] ಉಳಿತಾಯದ ಯೋಜನೆಯ [illegible] ಮಹೋತ್ಸವದಲ್ಲಿ ಮೊನ್ನೆ ಜಗನ್ಮೋಹನ ಭವನದಲ್ಲಿ ನಡೆದ ಸಮಾರಂಭದಲ್ಲಿ ಈ ರೀತಿ ಅಪ್ಪಣೆ ಕೊಡಿಸಿದರು —

ಈ ಸಮಿತಿಯ ಸ್ಥಾಪನೆಯ ಉದ್ದೇಶವು ಸ [illegible] ಹೋರಾಡಿ, ಸ್ವಾತಂತ್ರ್ಯವನ್ನು ಗಳಿಸಿದರು ನಮಗೆ ಅವರು ತೋರಿಸಿದ ಮಾರ್ಗದಿಂದ ಒಂದು ಸ್ಫೂರ್ತಿ ದೊರೆತು ನವ ಚೈತನ್ಯ ಉದಯಿಸಿದೆ ಈ ಸ್ವಾತಂತ್ರ್ಯವನ್ನು ಉಳಿಸಿಕೊಂಡು ರಾಷ್ಟ್ರವನ್ನು ಸ್ವಾವಲಂಬಿಯಾಗ ಮಾಡುವುದು ದೇಶದ ಎಲ್ಲಾ ಪ್ರಜೆಗಳೂ ಅದರಲ್ಲೂ ಮಹಿಳೆಯರು ನೆರವಾಗಬೇಕಾದುದು ಅತ್ಯವಶ್ಯಕ ರಾಷ್ಟ್ರದಲ್ಲಿ ಶಾಂತಿ ನೆಲೆಸಿ [illegible] ಕಾರ್ಯಗಳು ಹೆಚ್ಚಿದಹೊರತು ರಾಷ್ಟ್ರಕ್ಕೆ ಗೌರವ ದೊರೆಯುವುದು ಮಾತ್ರವಲ್ಲದೆ ಆ ರಾಷ್ಟ್ರದ ಪ್ರಜೆಗಳಿಗೆ ಸುಖ ವೃದ್ಧಿಗಳೂ [illegible]

[illegible]

ಮಹಿಳೆಯರ [illegible] ಮತ್ತು ಸಾಮಾಜಿಕ ಅಭಿವೃದ್ಧಿ

[illegible]

## ಆಂಧ್ರದ ಜನತೆಗೆ ರಾಷ್ಟ್ರಾಧ್ಯಕ್ಷರ ಸಂದೇಶ

ಆಂಧ್ರ ಪ್ರಾಂತದ ಸ್ಥಾಪನೆ ಸಂಬಂಧವಾಗಿ ರಾಷ್ಟ್ರಾಧ್ಯಕ್ಷರು ಆ ಪ್ರಾಂತಕ್ಕೆ ಸಂದೇಶವನ್ನಿತ್ತು, ಅಲ್ಲಿನ ಜನರು ತಮ್ಮ ಚಿರಕಾಲದ ಆಶೆಯನ್ನು ನೆರವೇರಿಸಿಕೊಂಡಿರುವ ಬಗ್ಗೆ ಅಭಿನಂದಿಸಿರುತ್ತಾರೆ ಪ್ರತಿಯೊಂದರ ಹುಟ್ಟು ಬಹು ವೇದನೆಯುಳ್ಳದ್ದಾಗಿರುವುದೆಂದೂ, ಅದ್ದರಿಂದಲೇ ಹುಟ್ಟಿದುದನ್ನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿರುವುದೆಂದೂ, ಈ ಸಾಮಾನ್ಯ ಭಾವನೆಗೆ ಆಂಧ್ರ ಸಂಸ್ಥಾನದ ಸ್ಥಾಪನೆಯು ಅತೀತವಾಗಿಲ್ಲವೆಂದೂ ಅವರು ಹೇಳಿ, ಹೊಸ ಪ್ರಾಂತಕ್ಕೆ ಪ್ರತಿಯೊಬ್ಬರ ನೆರವೂ ಬೇಕೆಂದು ತಿಳಿಸಿರುತ್ತಾರೆ ಆಂಧ್ರರೆಲ್ಲರೂ ಒಟ್ಟುಗೂಡಿ ಕಾರ್ಯ ಸಾಧಿಸಬೇಕೆಂದೂ, ಅಲ್ಲಿನ ಜನರು ಸುಖಿಗಳಾಗುವಂತೆ ಮಾಡಬೇಕೆಂದೂ ತಿಳಿಸಿರುತ್ತಾರೆ

ಗೆ ಸಕಲ ಸನ್ಮಂಗಳಗಳನ್ನು ದಯಪಾಲಿಸಲೆಂದೂ ಹಾರೈಸುತ್ತೇವೆ

ಶ್ರೀಮತಿ ಪಿ ಎಸ್ ಪಾರ್ವತಮ್ಮನವರಿಂದ ಪ್ರಾರ್ಥನೆ ಶ್ರೀಮತಿ ರಾಜಮ್ಮ [illegible] ಮರದವರಿಂದ ಸ್ವಾಗತ ಗೀತಾ ಪಠಣವಾದ ನಂತರ, ಮಹಿಳಾ ಸಮ್ಮೇಳನದ ಅಧ್ಯಕ್ಷಿಣಿ ಶ್ರೀಮತಿ [illegible] ರುಕ್ಮಿಣಿಯಮ್ಮನವರು ಸ್ವಾಗತ ಭಾಷಣ ಮಾಡಿದರು ಗೋಪಾಲ ಸ್ವಾಮಿ [illegible] ಮಕ್ಕಳಿಂದ ನೃತ್ಯವು ಜರುಗಿತು

ಅನಂತರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀವಿ [illegible] ರಾಜಕುಮಾರಿ ಲೀಲಾವತಿ ದೇವಿಯವರು ಶ್ರೀ [illegible] ಮಹಾರಾಣಿಯವರಿಗೆ ಅಭಿನಂದನಾ ಪತ್ರವೊಂದನ್ನು ಅರ್ಪಿಸಿದರು [illegible] ಮಕ್ಕಳಿಂದ [illegible] ಅನಂತರ ಶ್ರೀ [illegible] ಮಹಾರಾಣಿಯವರು ಆರಂಭ ಭಾಷಣ ಮಾಡಿ ಉಳಿತಾಯದ ಯೋಜನೆಯನ್ನು ಉದ್ಘಾಟನೆ ಮಾಡಿದರು

ಸಮ್ಮೇಳನದ ಕಾರ್ಯದರ್ಶಿಯವರಾದ ಶ್ರೀಮತಿ ಎ ಟಿ ಲಕ್ಷ್ಮಮ್ಮನವರು ತಮ್ಮ ಭಾಷಣದಲ್ಲಿ ಯೋಜನಾ ಸಮ್ಮೇಳನದ [illegible] ಗಳ ವರದಿಯನ್ನೊಪ್ಪಿಸಿದರು

ಶ್ರೀಮತಿ ವೆಂಕಮ್ಮ ಸೀತಾರಾಮಯ್ಯನವರು ವಂದನಾರ್ಪಣೆ ಮಾಡಿದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

## ಕವಿ - ಶಿವ

ನಂಜನಗೂಡಿನ ಹೆಜ್ಜಿಗೆಯ ಶ್ರೀ ಎಂ. ಲಿಂಗಣ್ಣನವರು ಹಲವು ಕನ್ನಡ ಕವನಗಳನ್ನು ರಚಿಸಿ ಅವುಗಳನ್ನು ಮೇಲ್ಮಂತ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ ಇದು ಶ್ರೀ ಲಿಂಗಣ್ಣನವರ ಮೊದಲನೆಯ ಕವನ ಸಂಗ್ರಹ. ಅವುಗಳನ್ನು ಅನೇಕ ಮಾಸ ಪತ್ರಿಕೆಗಳ ಮೂಲಕ ಪ್ರಕಟಪಡಿಸಲಾಗಿದ್ದಿತು ರವೀಂದ್ರ ಕವಿಗಳ ಭಾವಾನುವಾದವು ಈ ಗ್ರಂಥದಲ್ಲಿ ಸೇರಿರುವುದಾಗಿ ಗ್ರಂಥಕರ್ತರು ತಿಳಿಸಿರುವರು ಇದೊಂದು 'ಕಾಡು ಹೂ' ವೆಂದು ಅವರು ಹೇಳಿ [illegible] ವ್ಯಕ್ತ ಮಾಡಿರುತ್ತಾರೆ [illegible] ಗಿ ಮಡಿದ, ಮಡಿವ, ದುಡಿದು, ದುಡಿವ [illegible] ಪುತ್ರ ಪುತ್ರಿಯರಿಗಾಗಿ ಗ್ರಂಥವನ್ನು ವಿನಾ [illegible] ಮಾಡಲಾಗಿದೆ. ಬೆಲೆ ೧ ರೂಪಾಯಿ ಮೈಸೂರು ಚೇತನಾ ಪುಸ್ತಕಾಲಯದಲ್ಲಿ ಅದು ದೊರೆಯುವುದು

## 'ವಿ ಜ ಯ ಮಾ ಲ'

ಬೆಂಗಳೂರು ನಗರದಲ್ಲಿ ಮೇಲ್ಮಂತ ಕೀರ್ತಿ [illegible] ನಾಮೆಯಲ್ಲಿ ಹೊರಡುತ್ತಿರುವ ಕನ್ನಡ ಮಾಸ ಪತ್ರಿಕೆಯು ದ್ವಿತೀಯ ವಾರ್ಷಿಕ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸುತ್ತೇವೆ [illegible] ಪತ್ರದಲ್ಲಿ ಶ್ರೀ ಕೃಷ್ಣಾ [illegible] ಚಿತ್ರವು [illegible] ಕಥೆ ಮುಂತಾದುವುಗಳನ್ನು ಪತ್ರಿಕೆಯು ಒಳಗೊಂಡಿದೆ ಶ್ರೀ [illegible]

## ಕ ಥಾ ಲೋ ಕ

ರಾಜಧಾನಿಯ [illegible] ಪ್ರಕಟಿಸುತ್ತಿರುವ ಕಥಾ ಲೋಕ ಕನ್ನಡ ಮಾಸ ಪತ್ರಿಕೆಯ [illegible] ಸಂಚಿಕೆಯು ನಮ್ಮ ಕೈ ಸೇರಿದೆ ಎಂದಿನಂತೆ ಪುಸ್ತಕವು ಕಥೆ, ಭವಿಷ್ಯ ಮುಂತಾದವುಗಳನ್ನೊಳಗೊಂಡಿದೆ ಬೆಲೆ [illegible]

**ಆಕಾಶವಾಣಿ ನಾಳೆ ಕಾರ್ಯಕ್ರಮ**

[illegible]

[illegible] ಗೆ ಸಹಕಾರಿಗಳಾಗುವುದು ಈ ಮಹಾ ಕಾರ್ಯಗಳು [illegible] ಮುಂದುವರಿಯಲು [illegible]

[illegible]

ಕುಟುಂಬಿಯು ಆಯಾ ತಿಂಗಳಿನ ಸಂಪಾದನೆಗೂ, ವೆಚ್ಚಕ್ಕೂ ಸರಿಹೊಂದಿಸಿದ ಮಾತ್ರಕ್ಕೆ [illegible]

ಇಂಥ [illegible] ಮಹಿಳೆಯರ [illegible] ಜಗದಂಬೆಯಾದ ಶ್ರೀ ಚಾಮುಂಡೇಶ್ವರಿಯು ಈ ನಿಮ್ಮ ಉದ್ಯಮ [illegible]

## ಇದು ನಿಮಗೆ ಗೊತ್ತೇ?

[illegible]

**ಬಿ ಸ್ಕ ತ್ತು ಗ ಳೂ, ಬ ನ್ನು ಮ ತ್ತು ಬ್ರೆ ಡ್ಡು ಗ ಳೂ**

[illegible]

**ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,**

(ಚಂದ್ರ [illegible])

[illegible]

Edited, Printed and Published by A R Nagarajan at Sadhvi Press, D.Subbiah Road, Mysore


**TENDER NOTIFICATION**

Tenders for running a Canteen during the Exhibition in the Eastern Wing of the Exhibition Building are invited with a deposit of Rs 100 Last date for receipt of tenders 5th OCTOBER 1953 AT 3 P M

For further particulars contact –

THE GENERAL SECRETARY,
*Dasara Exhibition Mysore.*

**ಮೋತಿಲಾಲ್ ಟಾಕೀಸ್**

(ಮಂಡಿ ಮೊಹಲ್ಲಾ, ಮೈಸೂರು)

2-10-53 ರಿಂದ :: ಪ್ರತಿ ದಿನ 3 ಆಟಗಳು

ಮೆಹಬೂಬ್‌ರವರ ವರ್ಣರಂಜಿತ ಹಿಂದಿ ಚಿತ್ರ

★ **ಆನ್** ★

ಪಾತ್ರ: ದಿಲೀಪ್‌ಕುಮಾರ್, ಪ್ರೇಮ್‌ನಾಥ್, ನಿಮ್ಮಿ, ನಾದಿರ

ಬೆಳಗಿನ ಪ್ರದರ್ಶನ — ಕಾಲಿ ಘಟ

**ಪ್ರಭುದೇವಾ ಥಿಯೇಟರ್**

ಪದ್ಮಾ ಟಾಕೀಸ್

3 10 53 ನೇ ಶನಿವಾರದಿಂದ ★ ಅನೋಖ ಬಾದ 8 ನೇಯ ವಾರ ★ ದಿನ ವಹಿ 3 ಆಟಗಳು

★ **ಅವ್ವೈಯಾರ್** ★

ಕೆ. ಬಿ. ಸುಂದರಾಂಬಾಳ್ ಪಾತ್ರವಹಿಸಿರುವ ಜೆಮಿನಿಯವರ ತಮಿಳು ಚಿತ್ರ

ರಿಜಿಸ್ಟರ್ಡ್ ನಂ. 792

|| ವಂದೇ ಮಾತರಂ ||

ಇಂದಿನ ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
**ಸಾಧ್ವಿ ದಿನ ಪತ್ರಿಕೆಗೆ**
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

**ಚಂದಾ ದರ**
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೨ ] MYSORE : SUNDAY 4-10-1953 :. ಮೈಸೂರು : ಭಾನುವಾರ ೪-೧೦-೧೯೫೩ [ ಸಂಚಿಕೆ ೬೦

# – ವಕೀಲರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ ನಿಧನ –

## ಮದ್ರಾಸಿನಲ್ಲಿ ನೆಹರೂರವರಿಗೆ ಕಪ್ಪು ಬಾವುಟ ಪ್ರದರ್ಶನ

ಮದರಾಸಿನ ಮೌಂಟ್ ರೋಡಿನಲ್ಲಿ ಮೊನ್ನೆ ದ್ರಾವಿಡ ಸಂಘದವರು ಪ್ರಧಾನಿ ನೆಹರೂರವರಿಗೆ ಕಪ್ಪು ಬಾವುಟದ ಪ್ರದರ್ಶನ ಮಾಡಲು ಪ್ರಯತ್ನಿಸಿದಾಗ ಆ ಸಂಘದ ಮತ್ತು ಕಾಂಗ್ರೆಸ್ಸಿನ ಸ್ವಯಂಸೇವಕರುಗಳಿಗೆ ಘರ್ಷಣೆಯಾಗಿ ಹಲವರಿಗೆ ಗಾಯಗಳಾದುವೆಂದು ವರದಿಯಾಗಿದೆ ಹಲವರನ್ನು ದಸ್ತಗಿರಿ ಮಾಡಲಾಗಿದೆ

## ಈಜಿಪ್ಟಿನ ಮಾಜಿ ಪ್ರಧಾನಿಗೆ ಫಾಸಿ ಶಿಕ್ಷೆ

ಈಜಿಪ್ಟಿನ ಮಾಜಿ ಪ್ರಧಾನಿಗಳಲ್ಲೊಬ್ಬರಾದ ಇಬ್ರಾಹಿಂ ಅಬ್ದುಲ್ ಹಾದಿಯವರಿಗೆ ದೇಶದ್ರೋಹಕ್ಕಾಗಿ ಮರಣ ದಂಡನೆ ಶಿಕ್ಷೆಯನ್ನು ವಿಧಿಸಲಾಗಿದೆ ಅವರಿಗಿರುವ ಎಲ್ಲಾ ಆಸ್ತಿಗಳನ್ನೂ ವಶಪಡಿಸಿಕೊಳ್ಳಲು ಆಜ್ಞೆಯಾಗಿದೆ ಸಾವಿರಾರು ದಸ್ತಗಿರಿಗಳನ್ನು ಮಾಡಿ ಜನರಲ್ಲಿ ಭಯೋತ್ಪಾದನೆ ಮಾಡುತ್ತಿದ್ದರೆಂದೂ, ಮಾಜಿ ದೊರೆ ಫರೂಕರ ವಿಶ್ವಾಸಗಳಿಸಲು ಅವರ ಖಜಾನೆಗೆ ಅನಾವಶ್ಯಕವಾಗಿ ದುಬಾರಿಯಾದ ವೆಚ್ಚವನ್ನು ಅವರು ಮಾಡಿದ್ದರೆಂದೂ ಆಪಾದಿಸಲಾಗಿದೆ

## ಪಶ್ಚಿಮ ಬಂಗಾಳದಲ್ಲಿ ಭತ್ತದ ಸಂಗ್ರಹಣೆ ರದ್ದು

ಪಶ್ಚಿಮ ಬಂಗಾಳದಲ್ಲಿ ಇದೇ ೧ನೇ ತಾರೀಕಿನಿಂದ ಭತ್ತದ ಸಂಗ್ರಹಣೆಯನ್ನು ನಿಲ್ಲಿಸಿ ಅಲ್ಲಿನ ಸರ್ಕಾರದವರು ಬಹಿರಂಗ ಪೇಟೆಯಲ್ಲಿ ಅದನ್ನು ಕೊಳ್ಳಲು ನಿರ್ಧರಿಸಿರುವರು. ಡಾರ್ಜಿಲಿಂಗ್, ಕಲ್ಕತ್ತಾ ಮತ್ತಿತರ ಕಡೆಗಳಲ್ಲಿ ಪಡಿತರವನ್ನು ಜಾರಿಗೆ ತಂದ, ಫೇರ್ ಪ್ರೈಸ್ ಅಂಗಡಿಗಳಲ್ಲಿ ಅಕ್ಕಿಯ ಮಾರಾಟದ ವ್ಯವಸ್ಥೆ ಮಾಡಲಾಗುವುದು

## ಮೈಸೂರು ಕಾಂಗ್ರೆಸ್ ಭಿನ್ನತೆ ಬಗ್ಗೆ ಕೇಂದ್ರದ ತೀರ್ಮಾನವಿಲ್ಲ

ಮೈಸೂರು ಕಾಂಗ್ರೆಸ್ ಪಕ್ಷದಲ್ಲಿ ಆಡಳಿತದವರಿಗೂ, ಪ್ರದೇಶ ಕಾಂಗ್ರೆಸ್ಸಿನವರಿಗೂ ಉಂಟಾಗಿರುವ ಭಿನ್ನಾಭಿಪ್ರಾಯದ ಬಗ್ಗೆ ತೀರ್ಮಾನವಾಗಿಲ್ಲವೆಂದೂ, ಮೈಸೂರಿನ ಪರಿಸ್ಥಿತಿಯನ್ನು ವಿಚಾರಿಸಲು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ಪರಿಶೀಲನೆ ನಡೆಸಿ ತಮ್ಮ ತೀರ್ಮಾನವನ್ನು ಕೊಡಲಿರುವರೆಂದೂ, ಈ ಮೇಲೆ ಕಾಂಗ್ರೆಸ್ ಅಧ್ಯಕ್ಷರ ಆರೋಪಣೆಗಳು ಪರಿಶೀಲನೆಯಲ್ಲಿರುವುದಾಗಿಯೂ ವರದಿಯಾಗಿದೆ ಬಳ್ಳಾರಿ ಸೇರ್ಪಡೆಯಿಂದ ಒಬ್ಬರ ಹೆಚ್ಚಿನ ಮಂತ್ರಿಗಳನ್ನು ತೆಗೆದುಕೊಳ್ಳಲು ಶ್ರೀ ಕೆ ಹನುಮಂತಯ್ಯನವರಿಗೆ ಅವಕಾಶವಿಲ್ಲವೆಂದೂ ಹೇಳಲಾಗಿದೆ.

## ಸಂಸ್ಥಾನಗಳ ಶ್ರೇಷ್ಠ ನ್ಯಾಯಾಧೀಶರುಗಳ ಸಭೆ

ನವೆಂಬರ್ ತಿಂಗಳು ೧೬ ಮತ್ತು ೧೭ ರಲ್ಲಿ ಎ ಮತ್ತು ಬಿ ಸಂಸ್ಥಾನಗಳ ಶ್ರೇಷ್ಠ ನ್ಯಾಯಾಧೀಶರುಗಳ ಸಮ್ಮೇಳನವು ಇದೇ ಮೊದಲಿಗೆ ದೆಹಲಿಯಲ್ಲಿ ಸೇರುವುದು ಭಾರತದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಪತಂಜಲಿ ಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು

## ವಿವಾಹವಾಗಲಿಲ್ಲವೆಂದು ೩ ಸಹೋದರಿಯರ ಆತ್ಮಹತ್ಯ

ನಾಗರಕೋಯಿಲ್ಲಿಗೆ ಆರು ಮೈಲಿ ದೂರವಿರುವ ಪಿಳ್ಳೆ ಪಾರ್ವಿಳ್ಳ ಗ್ರಾಮದಲ್ಲಿ ತೆಂಗಿನ ಕಾಯಿ ವರ್ತಕರೊಬ್ಬರಾದ ವೈದ್ಯಲಿಂಗರವರ ೨೩, ೨೧ ಮತ್ತು ೧೯ ವರ್ಷಗಳ ಮೂವರು ಹೆಣ್ಣು ಮಕ್ಕಳು ತಮಗೆ ವಿವಾಹವಾಗಲಿಲ್ಲವೆಂಬ ಕಾರಣಕ್ಕಾಗಿ ಆತ್ಮಹತ್ಯ ಮಾಡಿಕೊಂಡಿರುತ್ತಾರೆಂದು ವರದಿಯಾಗಿದೆ

## ಪಂಚಾಪಕೇಶ ಶಾಸ್ತ್ರಿಯವರ ನಿಧನ

ಮದ್ರಾಸು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಎಸ್ ಪಂಚಾಪಕೇಶ ಶಾಸ್ತ್ರಿಯವರು ನೆನ್ನೆ ತಮ್ಮ ೬೦ನೇ ವಯಸ್ಸಿನಲ್ಲಿ ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ ನಿಧನರಾದರು ಅವರಿಗೆ ಮೂತ್ರಕೋಶ ಸಂಬಂಧವಾಗಿ ಶಸ್ತ್ರ ಚಿಕಿತ್ಸೆಯು ನಡೆದಿತ್ತು

**ಮಹಾರಾಜರಿಂದ ಭಾರಿ ಸಲಗನ ಶಿಕಾರಿ**

ಶ್ರೀಮನ್ ಮಹಾರಾಜರು ಬಿಳಿಗಿರಿರಂಗನ ಬೆಟ್ಟದ ಕಾಡಿನಲ್ಲಿದ್ದ ಭಾರಿ ಸಲಗವೊಂದನ್ನು ಶಿಕಾರಿ ಮಾಡಿರುತ್ತಾರೆ ಇದು ಕೆಲವು ದಿನಗಳ ಹಿಂದೆ ಬೆಟ್ಟದ ರಸ್ತೆಯಲ್ಲಿ ಹೋಗುತ್ತ ಕೊರಕಲಿನಲ್ಲಿ ದಾರಿ ಬಿದ್ದಿತ್ತೆಂದು ಹೇಳಲಾಗಿದೆ ಅನೇಕರಿಗೆ ಇದು ತೊಂದರೆ ಕೊಡುತ್ತಿತ್ತೆಂದು ಹೇಳಲಾಗಿದೆ

**ಮಾರ್ಕೆಟ್ ಪ್ರದರ್ಶನಕ್ಕಾಗಿ ದರ್ಬಾರ್ ಭಕ್ಷಿಯವರ ಬಹುಮಾನ**

ರಾಜಧಾನಿಯ ಪುರಸಭೆಯವರು ಇದೇ ೧೫ನೇ ತಾರೀಕು ನಡೆಸಲಿರುವ ಮಾರ್ಕೆಟ್ ಪ್ರದರ್ಶನದಲ್ಲಿ ಬಹುಮಾನವಾಗಿ ಕೊಡಲು ದರ್ಬಾರ್ ಭಕ್ಷಿ ಶ್ರೀ ಹೆಚ್ ಎಲ್ ದೇವರಾಜ ಅರಸಿನವರು ಬೆಳ್ಳಿಯ ಬಟ್ಟಲೊಂದನ್ನು ಕೊಟ್ಟಿರುವರೆಂದು ಗೊತ್ತಾಗಿದೆ

**ಬಳ್ಳಾರಿ ವಿಲೀನೀಕರಣ ಸಮಾರಂಭ**

ರಾಜಧಾನಿಯ ಹಳೇ ಎನ್ನಿಮಂಟಪದ ಬಳಿ ಇರುವ ಶ್ರೀ ಶಿವರಾತ್ರೀಶ್ವರ ಆಶ್ರಮದ ವಿದ್ಯಾರ್ಥಿ ಸಂಘದಲ್ಲಿ ಮೊನ್ನೆ ದಿನ ಗಾಂಧಿ ಜಯಂತಿ ಮತ್ತು ಬಳ್ಳಾರಿ ವಿಲೀನೀಕರಣ ಸಮಾರಂಭಗಳು ಜರುಗಿದುವು ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕರಾದ ಶ್ರೀ ಟಿ ಬಿ ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿದ್ದರು ನಿಲಯದ ಸೆಕ್ರೆಟರಿ ಶ್ರೀ ಎಂ ವಿ ಶ್ರೀನಿವಾಸರವರು ಮತ್ತು ಶಿವರುದ್ರಪ್ಪನವರು ಭಾಷಣ ಮಾಡಿ, ಗಾಂಧೀಜಿಯವರ ತತ್ವಗಳನ್ನು ಜನರು ಅನುಷ್ಠಾನಕ್ಕೆ ತರಬೇಕೆಂದು ತಿಳಿಸಿದರು ಶ್ರೀ ಬಿ ನಾಗಪ್ಪನವರು ಮಾತನಾಡಿ ಬಳ್ಳಾರಿ ವಿಲೀನೀಕರಣದ ಮಹತ್ವವನ್ನು ವಿವರಿಸಿದರು ಅಧ್ಯಕ್ಷರು ಮಾತನಾಡಿ, ಬಳ್ಳಾರಿ ಸೇರ್ಪಡೆಯಿಂದ ಮೈಸೂರಿನ ಆರ್ಥಿಕ ಸ್ಥಿತಿಗೆ ಕುಂದು ಬರುವುದಿಲ್ಲವೆಂದು ತಿಳಿಸಿದರು ಕರ್ನಾಟಕ ಪ್ರಾಂತವು ಶೀಘ್ರವೇ ಆಗಲೆಂದೂ ಅವರು ಹಾರೈಸಿದರು

**ಮನರಂಜನೆ ತೆರಿಗೆ ದರ**

ಪ್ರತಿ ೧|| ಆಣೆಯಿಂದ ೮ ಆಣೆವರೆಗೆ ೮ ಕಾಸುಗಳಂತೆಯೂ, ೮ ಆಣೆಗೆ ಮೇಲ್ಪಟ್ಟು ರೂ|| ೧||| ಆಣೆಯೂ ಮನರಂಜನೆ ತೆರಿಗೆಯನ್ನು ಸಂಸ್ಥಾನ ಸರ್ಕಾರದವರು ನಿಗದಿಮಾಡಿರುತ್ತಾರೆ

## ರಾಜಕೀಯ ಹೋರಾಟಗಳಲ್ಲಿ ನೊಂದವರಿಗೆ ಪರಿಹಾರ

### ಸಂಸ್ಥಾನದ ಕಾರ್ಯಕರ್ತರ ಸಮ್ಮೇಳನದಲ್ಲಿ ನಿರ್ಣಯ

ರಾಬರ್ಟ್‌ಸನ್‌ಪೇಟೆ, ೩

ಮೈಸೂರು ಸಂಸ್ಥಾನದ ರಾಜಕೀಯ ಚಳುವಳಿಗಳಲ್ಲಿ ಭಂಗ ಸಹಿಸಿ, ನೊಂದವರ ಪ್ರಥಮ ಸಮ್ಮೇಳನವು ಈ ದಿನ ಇಲ್ಲಿ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ, ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಕೇಂದ್ರ ಶಾಸನ ಸಭಾಧ್ಯಕ್ಷ ಶ್ರೀ ಎಚ್ ಸಿದ್ದಯ್ಯನವರು ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀ ಸಿದ್ದಯ್ಯನವರು ಭಾಷಣ ಮಾಡಿ, ಕಳೆದ ಹನ್ನೆರಡು ವರ್ಷಗಳಲ್ಲಿ ಸರ್ಕಾರದವರು ೧೧೦೬ ಜನರಿಗೆ ಜಮೀನುಗಳನ್ನು ಕೊಟ್ಟಿರುವುದಾಗಿ ಹಾಗೂ ೯೬ ಜನರಿಗೆ ಬಸ್ಸು ಮತ್ತು ಸಿಮೆಂಟ್ ಪರ್ಮಿಟ್ಟುಗಳು ದೊರಕಿದುವೆಂದೂ, ೩|| ಲಕ್ಷ ರೂ ಗಳಷ್ಟು ಜನೋನ್ನತಿ ಅಭಿವೃದ್ಧಿ ಸಾಲವನ್ನು ಕೊಡಲಾಯಿತೆಂದೂ ತಿಳಿಸಿದರು.

ರಾಜಕೀಯದಲ್ಲಿ ನೊಂದವರಿಗೆ ಪರಿಹಾರ ಒದಗಿಸಲು ಕಾಂಗ್ರೆಸ್ಸು ಮತ್ತು ಸರ್ಕಾರವೂ ಹೊಸ ಕ್ರಮವನ್ನು ಕೈಗೊಳ್ಳುವಂತೆ ಕೋರುವ ನಿರ್ಣಯವನ್ನು ಶ್ರೀ ಎಚ್ ಸಿ ಲಿಂಗಾರೆಡ್ಡಿಯವರು ಮಂಡಿಸಿದರು ಅದು ಅಂಗೀಕೃತವಾಯಿತು

**ಭಾರತದ ಆಡಳಿತ ಸರ್ವಿಸ್ಸಿನ ಪ್ರೊಬೇಷನರಾಗಿ ನೇಮಕ**

ಶ್ರೀಗಳಾದ ಎಂ ವೀರರಾಜ ಅರಸ್, ಸಿ ಎಸ್ ಶೇಷಾದ್ರಿ, ಆರ್ ಅನಂತಕೃಷ್ಣ, ಎಸ್ ನರಸಿಂಹರಾವ್, ವಿ ಬೈರಪ್ಪ, ಕೆ ಮಹಮದ್ ಅಹಮದ್, ಎಂ ಎಸ್ ಶಂಕರರಾವ್, ಎಂ ಡಿ. ಶಿವನಂಜಪ್ಪ, ಟಿ ವೆಂಕಟಶಿವರೆಡ್ಡಿ ಎಲ್ ಮುನಿಸ್ವಾಮಿ ಮತ್ತು ಆರ್. ಜೆ ರೇಗೋರವರನ್ನು ಆಡಳಿತ ಸರ್ವಿಸ್ಸಿಗೆ ಪ್ರೊಬೇಷನ್ ಮೇಲೆ ನೇಮಿಸಲಾಗಿದೆ

**ದಸರಾ ವಿಶೇಷಾಧಿಕಾರಿ**

ದಸರಾ ಮಹೋತ್ಸವದ ಸಂಬಂಧವಾಗಿ ರಾಜಧಾನಿಗೆ ಬರುವ ಅತಿಥಿಗಳ ಸ್ವಾಗತ, ಮುಂತಾದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ರೆವಿನ್ಯೂ ಸೆಕ್ರೆಟರಿಯೆಟ್ಟಿನ ಶ್ರೀ ವಿ ವೇಣುಗೋಪಾಲ ನಾಯ್ಡುರವರನ್ನು ವಿಶೇಷಾಧಿಕಾರಿಗಳಾಗಿ ನೇಮಿಸಲಾಗಿದೆ

**ಆರಂಭ ಭಾಷಣ**

ರಾಜಧಾನಿಯ ಶಾರದಾ ವಿಲಾಸ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಪ್ರಸಕ್ತ ಸಾಲಿನ ಆರಂಭ ಭಾಷಣವನ್ನು ಮಹಾರಾಜಾ ಕಾಲೇಜಿನ ಡಾ|| ಎಂ ವಿ ಕೃಷ್ಣರಾಯರು ನಾಳಿದ್ದು ಸಂಜೆ ೫|| ಗಂಟೆಗೆ ಶಾರದಾ ವಿಲಾಸ ಕಾಲೇಜಿನಲ್ಲಿ ಮಾಡುವರು ಪ್ರಿನ್ಸಿಪಾಲರಾದ ಶ್ರೀ ಎಂ ಎಸ್ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸುವರು ಕಾಲೇಜು ಉಪಾಧ್ಯಾಯರಿಂದ ಕಾಡು ಮೃಗ ಮತ್ತು ಜಾಲಿ ಅಮೆಚ್ಯೂರ್ಸ್‌ರವರಿಂದ ಸೌಭಾಗ್ಯ ಎಂಬ ನಾಟಕಗಳು ಪ್ರದರ್ಶನವಾಗುವುವು ಸಂಘದ ಸದಸ್ಯರಾಗಿದ್ದು ಈ ವರ್ಷದ ಚಂದಾವನ್ನು ಕೊಡದಿರುವವರು ಅದನ್ನು ಪಾವತಿ ಮಾಡಬೇಕೆಂದು ಕೋರಲಾಗಿದೆ.

## ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರ ನಿಧನ

**ಭಾರತದ ರಾಜ್ಯಾಂಗವನ್ನು ಬರೆದವರು**

ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ಮದ್ರಾಸು ಪ್ರಾಂತ್ಯದಿಂದ ಆರಿಸಿಬಂದಿರುವ ಡಾ|| ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರು ನೆನ್ನೆ ರಾತ್ರಿ ಮದ್ರಾಸಿನ ತಮ್ಮ ಮನೆಯಲ್ಲಿ ನಿಧನ ಹೊಂದಿದರು. ಅವರಿಗೆ ೭೧ ವರ್ಷ ವಯಸ್ಸಾಗಿದ್ದಿತು. ಹಲವು ದಿನಗಳಿಂದಲೂ ರೋಗಪೀಡಿತರಾಗಿದ್ದು, ನೆನ್ನೆ ಹೃದಯವೇದನೆಯಿಂದ ಹಠಾತ್ತನೆ ಅವರಿಗೆ ಮರಣವು ಸಂಭವಿಸಿತು. ಅವರು ೧೯೦೭ ರಲ್ಲಿ ಮದ್ರಾಸಿನಲ್ಲಿ ವಕೀಲರಾಗಿ, ಅಗಾಧ ಪಾಂಡಿತ್ಯ ಪಡೆದಿದ್ದರು ಭಾರತದ ರಾಜ್ಯಾಂಗ ರಚನಾ ಸಮಿತಿಯ ಸದಸ್ಯರಾಗಿ, ಅದರ ತಯಾರಿಕೆಯಲ್ಲಿ ತಮ್ಮ ಬುದ್ಧಿ ವಿವೇಚನೆಯನ್ನು ಪೂರ್ಣವಾಗಿ ಉಪಯೋಗಿಸಿದ್ದರು ಅವರು ೧೯೨೯ ರಿಂದ ೧೯೪೪ ರ ವರೆಗೆ ಮದ್ರಾಸಿನ ಅಡ್ವೊಕೇಟ್ ಜನರಲ್ಲರಾಗಿಯೂ ಇದ್ದರು ಅಲ್ಲದೆ ವಿಶ್ವವಿದ್ಯಾಲಯ, ಮುಂತಾದ ಹಲವಾರು ವಿದ್ಯಾ ಸಂಸ್ಥೆಗಳಲ್ಲೂ ಇದ್ದರು. ಅವರಿಗೆ ಪತ್ನಿಯೂ, ಮೂವರು ಗಂಡು ಮಕ್ಕಳೂ ಮತ್ತು ನಾಲ್ವರು ಪುತ್ರಿಯರೂ ಇರುವರು

## ನಾಗನಗೌಡರು ಮೈಸೂರಿನ ಮಂತ್ರಿಗಳು

ಬಳ್ಳಾರಿ ಜಿಲ್ಲೆಯ ಮುಖಂಡರೂ, ಮದ್ರಾಸಿನ ಮಾಜಿ ವ್ಯವಸಾಯ ಮಂತ್ರಿಯೂ ಆದ ಡಾ|| ಆರ್. ನಾಗನಗೌಡರು ಮೈಸೂರು ಮಂತ್ರಿಮಂಡಲದ ಸದಸ್ಯರಾಗಿ ನೇಮಕವಾಗುವರೆಂದೂ, ಮುಖ್ಯ ಮಂತ್ರಿ ಹನುಮಂತಯ್ಯನವರು ಅವರನ್ನು ಸಚಿವರಾಗಿ ನೇಮಿಸಲು ರಾಜಪ್ರಮುಖರಿಗೆ ಸಲಹೆ ಮಾಡಲಿರುವರೆಂದೂ, ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯಿಂದ ಅವರ ನೇಮಕಕ್ಕೆ ಒಪ್ಪಿಗೆ ದೊರೆಯುವುದೆಂದೂ ವರದಿಯಾಗಿದೆ ಮದ್ರಾಸು ಶಾಸನ ಸಭೆಗೆ ಹೊಸಪೇಟೆ ತಾಲ್ಲೂಕಿನಿಂದ ಅವರು ಆರಿಸಿಬಂದರು, ಆಂಧ್ರ ಪ್ರಾಂತದ ಶಾಸನದ ಪ್ರಕಾರ ಅವರ ಸದಸ್ಯತ್ವವು ಮೈಸೂರು ಶಾಸನ ಸಭೆಗೆ ವರ್ಗಾಯಿಸಲ್ಪಟ್ಟಿರುವುದು

**ಮೆಡಿಕಲ್ ಕಾಲೇಜಿಗೆ ಪ್ರವೇಶಕ್ಕಾಗಿ ವಿದ್ಯಾರ್ಥಿನಿಯಿಂದ ಹೈಕೋರ್ಟಿಗೆ ಅರ್ಜಿ**

ಬೇಲೂರು ತಾಲ್ಲೂಕಿನ ಕಾಫಿ ತೋಟಗಾರರಾದ ಶ್ರೀ ಅಬ್ದುಲ್ ರಹೀಂರವರ ಪುತ್ರಿ ಅಸ್ಮದ್ ಉನ್ನಿಸಾ ಎಂಬ ವಿದ್ಯಾರ್ಥಿನಿಯು ತನಗೆ ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶದ ಅವಕಾಶವನ್ನು ಕೊಡುವಂತೆ ಆಜ್ಞೆಯಾಗಬೇಕೆಂದು ಹೈಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾಳೆ ಇತರ ವಿದ್ಯಾರ್ಥಿನಿಯರಿಗಿಂತಲೂ ತಾನು ಹೆಚ್ಚು ಅರ್ಹತೆಯನ್ನು ಪಡೆದಿರುವುದಾಗಿಯೂ ಆಕೆಯು ತಿಳಿಸಿರುತ್ತಾಳೆ

**ಪ್ಯಾಡರ್ ಟೆನಿಸ್ ಕ್ಲಬ್**

ರಾಜಧಾನಿಯ ಕೃಷ್ಣಮೂರ್ತಿಪುರದ ಪ್ಯಾಡರ್ ಟೆನಿಸ್ ಕ್ಲಬ್ಬು ಕಳೆದ ೧ನೇ ತಾರೀಕಿನಿಂದ ಆರಂಭವಾಗಿರುತ್ತದೆ ಶ್ರೀ ಬಿ ಎಲ್ ಸತ್ಯನಾರಾಯಣರವರು ಕ್ಲಬ್ಬಿನ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟಿರುತ್ತಾರೆ

# ವಾರ ಭವಿಷ್ಯ

೪–೧೦–೫೩ ರಿಂದ ೧೧–೧೦–೫೩ರ ವರೆಗೆ

ಮೇಷ—ಕಾರ್ಯಗಳಿಗೆ ಅಡ್ಡಿ, ಸಹೋದ್ಯೋಗಿಗಳು ಮತ್ತು ಮೇಲ್ಪಟ್ಟವರೊಡನೆ ವಿರಸ, ದೂರದ ವಿಶ್ವಾಸಪಾತ್ರರ ಭೇಟಿಗೆ ಸಮಯ, ತಾ|| ೬, ೭ ಅನಿರೀಕ್ಷಿತವಾಗಿ ಲಾಭ, ಸಂತಸ ಸಮಯಗಳ ವೆಚ್ಚ

ವೃಷಭ—ಹಣಕಾಸಿನ ಅಡಚಣೆ, ಯೋಜನೆಗಳ ಬದಲಾವಣೆ, ಮನೆ ನಿರ್ಮಾಣ ಕಾರ್ಯಕ್ಕೆ ಪುದು, ಪ್ರವಾಸ ಒಳ್ಳೆ, ನೌಕರರಿಗೆ ತೊಂದರೆ, ಪತ್ನಿ ಪುತ್ರರ ಆರೋಗ್ಯಕ್ಕೆ ಕ್ಲೇಶ ತಾ|| ೬, ೭ ಹಣಕಾಸಿನ ಅದಾಯ, ಅನಿರೀಕ್ಷಿತ ಸಂಭಾವನೆ

ಮಿಥುನ—ಪ್ರಗತಿ ಮತ್ತು ಸಂತೃಪ್ತಿ, ಬಾಳ್ವೆಗೆ ಸಕಾಲ, ಸಣ್ಣಪುಟ್ಟ ವ್ಯವಹಾರಕ್ಕೂ ಭಾರಿ ಲಾಭ ದೊರೆಯುವುದು, ಹೆಚ್ಚಿನ ಪ್ರತಿಷ್ಠೆ, ಭವಿಷ್ಯ ಉತ್ತಮಪಡಿಸಲು ಮಿತ್ರ ಸಹಾಯ, ನೌಕರರಿಗೆ ಬಡ್ತಿ, ವ್ಯಾಪಾರಿಗಳಿಗೆ ಅನುಕೂಲ ತಾ|| ೫, ೬ ದುಷ್ಟ ಸಹವಾಸದಿಂದ ಮಾನ ಹಾನಿ, ಶತ್ರು ಬಾಧೆ

ಕಟಕ—ಪತ್ನಿಯೊಡನೆ ಕಲಹ, ಅಲ್ಪ ಲಾಭ, ಮೇಲಧಿಕಾರಿಗಳಲ್ಲಿ ತೊಂದರೆ, ನೌಕರರಿಗೆ ಉತ್ತಮ, ಸಟ್ಟಾ ವ್ಯಾಪಾರದಲ್ಲಿ ಲಾಭ, ಗೃಹ ಶುಭ ಕಾರ್ಯ ವಾತಾವರಣದಲ್ಲಿ ಸ್ಥಿತಿ ಸೆ...

ಸಿಂಹ—ಮಾನ ಹಾನಿ, ಪ್ರಯಾಸದ ಪ್ರವಾಯಿ ಕೆ, ಮಿತ್ರರಿಂದ ಅಸಂತೋಷ, ಜಾತಕ ಸ್ವಪ್ನಗಳ ಕಂಟಕ ಅನಾವಶ್ಯಕ ಖ... ನೌಕರಿಯಲ್ಲಿ ಕಲಹ ... ರಕ್ಷಿ... ಮ...

ಕನ್ಯಾ—ಹಣಕಾಸಿನ ಅಡಚಣೆ, ಮಾನಸ ಕಲಹ, ಮನಸ್ತಾಪ, ಶತ್ರು ಭಯ, ವಿ... ತಾಕ ಬಂಧುವರ್ಗದ ನಾರಿ ಭೂಮಿ ... ೬ ತೆ ... ಪಾರವನ್ನು ತೋರಿದರೆ ತಾ|| ೬ ... ಸಹಾಯ ವಿಯೋಗ ವಾರ್ತೆ

ತುಲಾ—ಮೋಸ, ಕ್ಲೇಶ, ಕಾತರ, ಪ್ರಯೋಜನವಿಲ್ಲದ ಕಾರ್ಯ, ಪ್ರತಿಷ್ಠೆ ಹಾನಿ, ಒಂದು ವಿರೋಧ ಹಣಕಾಸಿನ ಅಡಚಣೆ, ಪತ್ನಿ ಪುತ್ರರಿಗೆ ಕ್ಲೇಶ, ನೌಕರರಿಗೆ ತೊಂದರೆ ತಾ|| ೪, ೫ ತೊಂದರೆ ನಷ್ಟ

ವೃಶ್ಚಿಕ—ಶತ್ರು ಜಯ, ಜನ ಪ್ರಿಯತೆ, ಸ್ನೇಹಿತರಿಂದ ಲಾಭ, ಸಂತೋಷ ಕಾರ್ಯ ಜಯ, ನೌಕರಿಯಲ್ಲಿ ಬಡ್ತಿ ತಾ|| ೭ ... ಪತ್ನಿಗೆ ಅನಾರೋಗ್ಯ, ವಿಶೇಷ ಖರ್ಚು

ಧನು—ಮಾನ ಹಾನಿ, ಪ್ರವಾಸ ಕಷ್ಟ, ಆರೋಗ್ಯಕ್ಕೆ ಕ್ಲೇಶ, ಭೂ ವ್ಯವಹಾರದಲ್ಲಿ ಚಿಂತೆ, ಪಾಲುಗಾರರೊಡನೆ ಕಲಹ ತಾ|| ೭, ೮ ವ್ಯಾಪಾರಿಗಳಿಗೆ ಕ್ಲೇಶ, ಆರೋಗ್ಯ ಸಾಧಾರಣ

ಮಕರ—ಕೋರ್ಟು ಕೆಲಸ ವಿಪರೀತ, ಅ...ರದ ನಷ್ಟ ವಿಲ್ಲ, ಹೆಚ್ಚು ಖರ್ಚು, ಪತ್ನಿ ಮತ್ತು ಪುತ್ರರಿಂದ ತಾತ್ಕಾಲಿಕ ಬೇಸರಿಕೆ ತಾ|| ೮, ೯ ಉತ್ತಮ, ಆರೋಗ್ಯ

ಕುಂಭ—ಉತ್ತಮ ವ್ಯವಹಾರ, ಋಣ ವಿಮೋಚನೆ, ಆರೋಗ್ಯ ನೆಟ್ಟಗೆ, ಮನೆಯಲ್ಲಿ ಸುಖ ಶಾಂತಿ ಸಮೃದ್ಧಿ, ನೌಕರರಿಗೆ ಲಾಭ ತಾ|| ೯, ೧೦ ಪತ್ನಿಗೆ ಆಯಾಸ, ಮಕ್ಕಳ ... ತಾಪ

ಮೀನ—ಆರೋಗ್ಯಕ್ಕೆ ಕ್ಲೇಶ, ನಿಗ್ರಹ ... ಪ್ರತಿಭಟನೆ, ನೌಕರರಿಗೆ ... ಜೀವನ ... ತಾ|| ೮, ೯ ಹಿರಿಯರಿಂದ ಲಾ...

## ಪಶ್ಚಿಮ ರಾಷ್ಟ್ರಗಳ ಪ್ರಭಾವದ ಬಗ್ಗೆ ನೆಹರೂ ಹೇಳಿಕೆ

ಆ... ಬಾಂಬು ಅಥವಾ ಜಲಜನಕ ಬಾಂಬುಗಳನ್ನು ಪಶ್ಚಿಮ ರಾಷ್ಟ್ರಗಳು ಹೊಂದಿಲ್ಲವಾದ... ಆ ರಾಷ್ಟ್ರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತಳ್ಳುವುದನ್ನು ಪ್ರತಿಭಟಿಸುವ ಸಾಧಾರಣ ಶಕ್ತಿಯನ್ನು ಅವು ಹೊಂದಿರುವುದಾಗಿ ಪ್ರಧಾನಿ ನೆಹರೂರವರು ಮದ್ರಾಸಿನಲ್ಲಿ ಭಾಷಣ ಮಾಡುತ್ತಾ ತಿಳಿಸಿರುವರು. ಏಷ್ಯಾದವರನ್ನು ಬಲವಂತಪಡಿಸುವ ಕಾಲವಿದವೆಂದು ಅವರು ಹೇಳಿರುತ್ತಾರೆ.

## ಜನತಾ ಚೀಣದ ನಾಲ್ಕನೇ ವಾರ್ಷಿಕೋತ್ಸವ

ಮೈಸೂರು ೩

ಜನತಾ ಚೀಣದ ಸ್ಥಾಪನೆಯ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಮೊನ್ನೆ ಇಲ್ಲಿನ ಇಂಡಿಯಾ ಚೀಣಾ ಸ್ನೇಹ ಸಂಘದವರು ಬಹಿರಂಗ ಸಭೆಯೊಂದನ್ನು ಟೌನ್ ಹಾಲಿನಲ್ಲಿ ಶ್ರೀ ತಗಡೂರು ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು

ಶ್ರೀ ಡಿ ಆರ್ ಕೃಷ್ಣಮೂರ್ತಿಯವರಿಂದ ಸ್ವಾಗತ ಭಾಷಣವಾದನಂತರ ಇತ್ತೀಚೆಗೆ ಚೀಣಾದಲ್ಲಿ ಪ್ರವಾಸ ಮಾಡಿ ಬಂದ ಡಾ|| ವಿ|| ಬಿ. ದ ವೇಂಕಟಪ್ಪನವರು ತಮ್ಮ ಪ್ರವಾಸಾನುಭವಗಳನ್ನೂ ಚೀಣವು ಸಾಧಿಸಿರುವ ಅದ್ಭುತವಾದ ಪ್ರಗತಿಯನ್ನೂ ಹೃದಯಂಗಮವಾಗಿ ವಿವರಿಸಿದರು ಪತ್ರಿಕೋದ್ಯೋಗಿಗಳಾದ ಶ್ರೀ ಬಿ ಕೆಂಚೇಗೌಡರ ನವ ಚೀಣದ ಆರ್ಥಿಕ ಪ್ರಗತಿಯ ಬಗ್ಗೆಯೂ ಶ್ರೀ ಸೋಮಸುಂದರ ಶರ್ಮರವರು ಭಾರತ–ಚೀಣಗಳ ಸ್ನೇಹದ ಅವಶ್ಯಕತೆಯ ಬಗ್ಗೆಯೂ ಭಾಷಣ ಮಾಡಿದರು

### ಕೆ ಆರ್ ಪ್ರಸಾದ್‌ರವರ ಉಪವಾಸ

ರಾಜಧಾನಿಯ ಸರ್ಕಾರಿ ರೇಷ್ಮೆ ಕಾರ್ಖಾನೆಯ ಕಾರ್ಮಿಕರ ಸಂಘದ ಅಧ್ಯಕ್ಷ ಶ್ರೀ ಕೆ ಆರ್ ಪ್ರಸಾದ್‌ರವರು ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾರೆ ಅವರ ಬಗ್ಗೆ ಸಹಾನುಭೂತಿ ತೋರಿಸಲೂ ಮತ್ತು ಕಾರ್ಖಾನೆಯ ಆಡಳಿತ ವರ್ಗದವರ ವರ್ತನೆಯನ್ನು ಖಂಡಿಸಲೂ ಬಹಿರಂಗ ಸಭೆಯು ಗುರುವಾರ ಸಂಜೆ ರೈಲ್ವೆ ವರ್ಕ್‌ಷಾಪಿನ ಕಾರ್ಮಿಕರ ಸಂಘದ ಮಾಜಿ ಅಧ್ಯಕ್ಷ ಜ|| ಗುಲಾಂ ಖಾದರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ರಾಮಲಿಂಗಯ್ಯ, ಮಹಮದ್ ಪೀರ್, ದೊಡ್ಡ ಸಿದ್ದಯ್ಯ ಮುಂತಾದವರು ಮಾತನಾಡಿ, ಕಾರ್ಖಾನೆಯ ಜನರಲ್ ಮ್ಯಾನೇಜರು ಮತ್ತು ಇತರ ಅಧಿಕಾರಿಗಳ ವರ್ತನೆಯನ್ನು ಟೀಕಿಸಿದರು. ರೇಷ್ಮೆ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಕೂಡಲೇ ಒಂದು ಸಮಿತಿಯನ್ನು ಏರ್ಪಡಿಸಿ ಆ ಮೂಲಕ ಶ್ರೀ ಕೆ ಆರ್ ಪ್ರಸಾದ್‌ರವರ ಜೀವವನ್ನು ಉಳಿಸಬೇಕೆಂದು ಸರ್ಕಾರವನ್ನು ಕೋರಲಾಯಿತು. ಸಾರ್ವಜನಿಕರು ಮತ್ತು ಇತರ ಕಾರ್ಮಿಕರುಗಳ ಬೆಂಬಲವನ್ನು ಸಭೆಯು ಕೋರಿತು ಉಪವಾಸ ಮಾಡುತ್ತಿರುವ ಸ್ಥಳದಲ್ಲಿ ಪ್ರತಿ ದಿನವೂ ಸಂಕಟ ಭಜನೆ ಮುಂತಾದುವನ್ನು ಏರ್ಪಡಿಸಲಾಗಿದೆ

### "ಕರ್ನಾಟಕವನ್ನೊಳಗೊಂಡ ಮೈಸೂರಿನ ರಚನೆಗಾಗಿ ನಿರ್ಣಯ

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಪಂಚಾಯಿತಿ ಸಭೆಯು ಕಳೆದ ಗುರುವಾರ ಶ್ರೀ ಹೆಚ್ ಜೆ ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆದ, ಬಳ್ಳಾರಿಯ ಸೇರ್ಪಡೆಯು, ಕರ್ನಾಟಕವನ್ನೊಳಗೊಂಡ ಮೈಸೂರಿನ ರಚನೆಗೆ ನಾಂದಿಯಾಗಲೆಂದ ಆಶಿಸುವ ನಿರ್ಣಯವನ್ನು ಮಾಡಿ, ರಾಜಪ್ರಮುಖರಿಗೂ, ಸರ್ಕಾರಕ್ಕೂ ಕಳುಹಲಾಯಿತು

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭–೫ ಸಂಗೀತ ೭ ೫೦ ಎ ವಿ ನಾರಾಯಣಪ್ಪನ ಗಸ್ತರ ಮಧ್ಯಾಹ್ನ ೧ ೪೦ ರೆಕಾರ್ಡು ಸಂಗೀತ ... ರೆಕಾರ್ಡು ವಾದ್ಯ ೨ ಮತ್ತು ಸಂಜೆ ... ಕ್ರೀಡಾ ಸಂಗೀತ ಸಂಜೆ ೩೦ ಎ ವಿ ನಾರಾಯಣಪ್ಪ ನಾಗಸ್ವರ ... ಗಾನ ... ಬಿಂದಿ ಗೀತೆ ೭ ೪೦ ... ಪ್ರಗತಿ–ಎಗ್ ಎಸ್ ರಾಮಚಂದ್ರರವರ ಭಾಷಣ ... ಮತ್ತು ೯–೪೦ ಎಂ ಎಸ್ ಗೋವಿಂದಸ್ವಾಮಿ ಗಾಯನ ೯–೧೫ ಇಂಗ್ಲಿಷ್ ಭಾಷಣ

### ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
| --- | --- | --- |
| ಕಡಲೆಕಾಯಿ | ೧೩ ೪ ೦ | ೧೯ ೦ ೦ |
| ಎಳ್ಳು | ೩೦ ೦ ೦ | ೭೮ ೮ ೦ |
| ಹುರುಳಿ | ೨೮ ೩ ೦ | ೪೦ ೮ ೦ |
| ಹುಣಸೆ | ೫೦ ೧೧ ೦ | ೫೩ ೮ ೦ |
| ಹುರುಳೀಕಾಯಿ | ೫ ೦ | ೬ ೫ ೦ |
| ರಾಗಿ | ೩ ೧೫ ೦ | |
| ತೆಂಗಿನಕಾಯಿ ೧೧೦೦ಕ್ಕೆ | ೧೪೪ ೦ ೦ | ೨೬೮ ೦ ೦ |

## ರಾಷ್ಟ್ರಾಭಿವೃದ್ಧಿ ಯೋಜನಾ ವಿಸ್ತರಣೆಯ ಪ್ರಾರಂಭ

ಗುಂಡ್ಲುಪೇಟೆ ೩

ಸರ್ಕಾರದವರು ಕೈಗೊಂಡಿರುವ ರಾಷ್ಟ್ರಾಭಿವೃದ್ಧಿ ಕಾರ್ಯಗಳ ವಿಸ್ತರಣಾ ಯೋಜನೆಯ ಅಂಗವಾಗಿ ನೆನ್ನೆ ಇಲ್ಲಿನ ಶ್ರೀ ತಮ್ಮಣ್ಣಗೌಡರ ಸಿನಿಮಾ ಮಂದಿರದಲ್ಲಿ ಯೋಜನೆಯ ಪ್ರಾರಂಭೋತ್ಸವವನ್ನು ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್ ಸ್ವಾಮಿ ನಾಥರರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಶಾಸನ ಸಭೆಯ ಸದಸ್ಯರಾದ ಶ್ರೀ ಹೆಚ್ ಕೆ ಶಿವರುದ್ರಪ್ಪನವರು ಆರಂಭೋತ್ಸವವನ್ನು ನೆರವೇರಿಸಿ, ವಿಸ್ತರಣಾ ಕಾರ್ಯದ ಅಂಗವಾಗಿ ಹಳ್ಳಿಗಳಲ್ಲಿ ನಡೆಯುವ ಕಾರ್ಯಕ್ರಮವನ್ನು ವಿವರಿಸಿದರು ಅದರಿಂದ ಗ್ರಾಮ ನಿವಾಸಿಗಳಿಗಾಗುವ ಪ್ರಯೋಜನವನ್ನು ಅವರು ತಿಳಿಸಿದರು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಹೆಚ್ ಎಲ್ ನಾಗೇಗೌಡರು ಸ್ವಾಗತ ಭಾಷಣ ಮಾಡಿದರು ಗ್ರಾಮಾಭಿವೃದ್ಧಿ ವಿಚಾರವಾಗಿ ಶ್ರೀಗಳಾದ ಎ ಕೆ ನಂಜುಂಡಯ್ಯ ಮತ್ತು ಕೆ ಪಚ್ಚೇಗೌಡರು ಮಾತನಾಡಿದವೇಲೆ ಶ್ರೀ ಜಿ ಎ ಅಬ್ದುಲ್ ಗಫೂರ್‌ರವರು ವಂದನಾರ್ಪಣೆ ಮಾಡಿದನಂತರ ಸಮಾರಂಭವು ಮುಕ್ತಾಯವಾಯಿತು

ಮಧ್ಯಾಹ್ನ ಹೊಸೂರು ಗ್ರಾಮದಲ್ಲಿ ಹೊಸ ರಸ್ತೆಯ ನಿರ್ಮಾಣ, ಸಸಿ ನೆಡುವುದು, ಬನ್ನಿತಾಳಪುರ ಮತ್ತು ಕೋಡಿಹಳ್ಳಿ, ಗ್ರಾಮಸ್ಥರಿಂದ ಹಳ್ಳಿ ಬಾಣಿಕ ಶ್ರೀ ಮಾಯಿಗೌಡರಿಂದ ಭಾರತ ವಾಚನ ಮತ್ತು ವಯಸ್ಕರ ಶಿಕ್ಷಣ ಸಮಿತಿಯವರಿಂದ ಚಲನಚಿತ್ರ ಪ್ರದರ್ಶನದ ಕಾರ್ಯಕ್ರಮಗಳು ಏರ್ಪಾಡಾಗಿದ್ದುವು

## ಕೊರಿಯಾ ಯುದ್ಧ ಬಂದಿ ಶಿಬಿರದಲ್ಲಿ ಚೀಣೀ ಖೈದಿಗಳದಂಗೆ

ಪಾನ್‌ಮುನ್‌ಜಾನಿನ ಬಳಿ ಇರುವ ಕೊರಿಯಾ ಯುದ್ಧ ಖೈದಿಗಳ ಶಿಬಿರದಲ್ಲಿ ಮೊನ್ನೆ ಬೆಳಿಗ್ಗೆ ಹಲವು ಚೀಣೀ ಖೈದಿಗಳು ದಂಗೆಯೆಳಲು ಪ್ರಯತ್ನಿಸಿದಾಗ, ಭಾರತದ ಮೇಲ್ವಿಚಾರಕ ಪಡೆಯವರು ಗುಂಡು ಹಾರಿಸಿದ ಪರಿಣಾಮವಾಗಿ ಇಬ್ಬರು ಮಡಿದರೆಂದು ವರದಿಯಾಗಿದೆ

### ಬಾಲಕಿಯನ್ನು ಎತ್ತಿಕೊಂಡುಹೋಗಿ ಒಡವೆ ಕಳವು

ಕೃಷ್ಣರಾಜ ಮೊಹಲ್ಲೆಯಲ್ಲಿರುವ ಶ್ರೀ ವಿಜಯೇಂದ್ರ ಹಿಟ್ಟಿನ ಗಿರಣಿ ಮಾಲೀಕರ ಪುತ್ರಿ ೧೦ ವರ್ಷ ವಯಸ್ಸಿನ ಸರೋಜಾ ಎಂಬ ಬಾಲಕಿಯು ನೆನ್ನೆ ಶಾಲೆಗೆ ಹೋಗಿದ್ದಾಗ ಹೊರಗೆ ನಿಂತಿದ್ದ ಸೈಕಲ್ ಸವಾರನೊಬ್ಬನು ಹುಡುಗಿಯನ್ನು ಬೈಸಿಕಲ್ಲಿನ ಮೇಲೆ ಕೂಡಿಸಿಕೊಂಡು ಚಾಮುಂಡಿ ಬೆಟ್ಟದ ತಪ್ಪಲಿಗೆ ಹೋಗಿ ಅಲ್ಲಿ ಚಾಕು ತೋರಿಸಿ, ಅವಳ ಕಿವಿಯಲ್ಲಿದ್ದ ಆಭರಣವನ್ನು ಅಪಹರಿಸಿದನೆಂದೂ, ಈ ಸಂದರ್ಭದಲ್ಲಿ ಹುಡುಗಿಯು ಕೊಚ್ಚೆಯಲ್ಲಿ ಬಿದ್ದು ಅವನಿಂದ ತುಳಿಯಲ್ಪಟ್ಟಳೆಂದೂ ವರದಿಯಾಗಿದೆ ಹತ್ತಿರವೇ ಹೋಗುತ್ತಿದ್ದ ಹಳ್ಳಿಯ ಜನರನ್ನು ಕಂಡಕೂಡಲೇ ದುಷ್ಕೃತ್ಯಕಾರನು ಪರಾರಿಯಾದನೆಂದೂ ಹೇಳಲಾಗಿದೆ ಬಾಲಕಿಯನ್ನು ಪೋಲೀಸರ ವಶಕ್ಕೊಪ್ಪಿಸಲಾಗಿದೆ ಆಕೆಯ ಕತ್ತಿನಲ್ಲಿ ಸ್ವಲ್ಪ ಗಾಯವಾಗಿದೆ


### ಇದು ನಿಮಗೆ ಗೊತ್ತೇ ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಶುಚಿರುಚಿಯಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಹತ್ತಿರದ ಸ್ಥಳವೊಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರ ಮೌಳೇಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ, ಮೈಸೂರು


Edited, Printed and Published by A R Nagarajan at Sadhvi Press, D.Subbiah Road Mysore

## ಆಂಧ್ರ ಪ್ರಾಂತದ ಸ್ಥಾಪನಾ ದಿನೋತ್ಸವ

ಮೈಸೂರು ೪

ಕಳೆದ ಗುರುವಾರ ವಾಣೀವಿಲಾಸ ರಸ್ತೆಯಲ್ಲಿರುವ ಆಂಧ್ರ ಸಂಘದವರು ಆಂಧ್ರ ರಾಜ್ಯಾವತರಣ ದಿನೋತ್ಸವವನ್ನು ನೆರವೇರಿಸಿದರು ಮಹಾರಾಜಾ ಕಾಲೇಜಿನ ತೆಲುಗು ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಕೆ ಸುಬ್ಬರಾಮಪ್ಪನವರು ಉತ್ಸವದ ಆರಂಭೋತ್ಸವವನ್ನು ನೆರವೇರಿಸಿ, ಆಂಧ್ರ ರಾಜ್ಯ ಸ್ಥಾಪನೆಗಾಗಿ ನಡೆದ ಹೋರಾಟವನ್ನು ವಿವರಿಸಿದರು ಆಂಧ್ರ ಜನತೆಗೆ ಮೈಸೂರಿನ ಮುಖ್ಯ ಮಂತ್ರಿಯವರು ಇತ್ತಿರುವ ಸಂದೇಶವನ್ನು ಅವರು ವಿವರಿಸಿ, ಆಂಧ್ರರು ಮತ್ತು ಕನ್ನಡಿಗರಲ್ಲಿ ಸೌಹಾರ್ದವು ಹೆಚ್ಚಲೆಂದು ಆಶಿಸಿದರು

ಶ್ರೀಮತಿ ಕೆ ಬಿ ಕೃಷ್ಣವೇಣಿಯವರಿಂದ ಪ್ರಾರ್ಥನೆ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಶ್ರೀ ಡಿ ವಿ ನರಸಿಂಹ ರಾಯರ ಮತ್ತು ಶ್ರೀ ಹನುಮಂತಪ್ಪನವರಿಂದ ಭಾಷಣಗಳಾದುವು. ಸುಶ್ರಾವ್ಯವಾದ ಆರ್ಕೆಸ್ಟ್ರಾ ವಾದನ ಮತ್ತು ಬಾಣಬಿರುಸುಗಳು ವಿಶಿಷ್ಟವಾದುವು

## ಬಳ್ಳಾರಿ ಸೇರ್ಪಡೆ ಕರ್ನಾಟಕ ಪ್ರಾಂತ ರಚನೆಗೆ ಪ್ರಥಮ ಹೆಜ್ಜೆ

### ಕೆ. ಹನುಮಂತಯ್ಯನವರ ಭಾಷಣ

ಮೊನ್ನೆ ಬಳ್ಳಾರಿಯಲ್ಲಿ ನಡೆದ ೭ ತಾಲ್ಲೂಕುಗಳ ಸೇರ್ಪಡೆ ಸಮಾರಂಭದಲ್ಲಿ ಭಾಗವಹಿಸಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡಿ ಮೈಸೂರಿನಲ್ಲಿ ಬಳ್ಳಾರಿಯ ವಿಲೀನವಾದದ್ದು ಕರ್ನಾಟಕ ಪ್ರಾಂತ ಸ್ಥಾಪನೆಗೆ ಪ್ರಥಮ ಹೆಜ್ಜೆಯಾಗಿರುವುದೆಂದು ತಿಳಿಸಿದರು ಇದು ಯಾವುದೇ ವ್ಯಕ್ತಿ, ಅಥವಾ ಪ್ರಜಾಸ್ತೋಮದ ಶ್ರಮದಿಂದಲ್ಲವೆಂದೂ, ದೇವರ ಕೃಪೆ ಅಥವಾ ಆಕಸ್ಮಿಕ ಘಟನೆಯಿಂದ ಆದುದಾಗಿಯೂ ಅವರು ಹೇಳಿದರು

## ಇನ್ನೆರಡು ವರ್ಷಗಳಲ್ಲಿ ಎರಡನೇ ಪಂಚ ವಾರ್ಷಿಕ ಯೋಜನೆ

ಭಾರತದ ಎರಡನೇ ಪಂಚ ವಾರ್ಷಿಕ ಯೋಜನೆಯನ್ನು ಇನ್ನೆರಡು ವರ್ಷಗಳಲ್ಲಿ ಕೈಗೊಳ್ಳಲಾಗುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ತಿಳಿಸಿರುತ್ತಾರೆ ದೇಶದಲ್ಲಿ ನಿರುದ್ಯೋಗ ಸಮಸ್ಯೆಯು ಭಾರಿ ರೂಪವನ್ನು ತಾಳಿರುವುದೆಂದೂ, ಪಶ್ಚಿಮ ಬಂಗಾಳದಲ್ಲಿ ಅದು ವಿಪರೀತವಾಗಿರುವುದೆಂದೂ ಅವರು ಹೇಳಿರುವರು

### ಸಂಗೀತ

ಮೈಸೂರು ಶಾನೀಪತಿ ಲಾಯದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ಈ ರಾತ್ರಿ ೭|| ಗಂಟೆಗೆ ಸಂ|| ವಿ|| ಟಿ ಪುಟ್ಟಸ್ವಾಮಯ್ಯನವರ ಗಾಯನವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಅಧ್ಯಕ್ಷತೆ ವಹಿಸುವರು


## ಬಸ್ಸು ಖರೀದಿಗಿದೆ

ಉತ್ತಮ ಸ್ಥಿತಿಯಲ್ಲಿರುವ ಮತ್ತು ಓಡುತ್ತಿರುವ ಫೋರ್ಡ್ ಬಸ್ಸು ಖರೀದಿಗಿದೆ, ಮಧುರಿ ಬಾಡಿ ಮತ್ತು ಹೊಸ ಟೈರು

ದಸರಾದಲ್ಲಿ ಓಡಿಸಲು ಆರ್ಡರ್ ಕೊಟ್ಟು ಮಾಡಿಸಿದಂತಿದೆ

ವಿಳಾಸ.—

**ಶಾರದಾ ಮೋಟಾರ್ ಸರ್ವಿಸ್,**

ನ್ಯೂ ಸಯ್ಯಾಜಿರಾವ್ ರೋಡು, ಮೈಸೂರು

## ರಾಜಕಮಲ್,

1 10 53 ರಿಂದ : ಅಮೋಘ 3ನೇ ವಾರ

ಅಸೋಸಿಯೇಟೆಡ್ ಪ್ರೊಡ್ಯೂಸರ್ಸ್‌ರವರ

## ಆತ್ಮ ಮಗನ್ (ತಮಿಳು)

ಭೂಮಿಕೆ ಪದ್ಮಿನಿ ಬಿ ಎಸ್. ಸರೋಜಾ, ಗಿರಿಜಾ, ಟಿ ಎಸ್. ಬಾಲಯ್ಯ, ಗಣೇಶ ಮತ್ತು ಬಿ ಆರ್. ಪಂತುಲು

ರಿಜಿಸ್ಟರ್ ನಂ. 792

|| ವಂದೇ ಮಾತರಂ ||

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE MONDAY 5-10-1953 :: ಮೈಸೂರು : ಸೋಮವಾರ ೫-೧೦-೧೯೫೩ [ ಸಂಚಿಕೆ ೭೬

# ರಂಗೂನ್ ವಿದ್ಯಾರ್ಥಿಗಳ ಮೇಲೆ ಗುಂಡು, ಐವರಿಗೆ ಪೆಟ್ಟು

## ಸೂತ್ರದ ಬೊಂಬೆ ಆಟದ ಪ್ರದರ್ಶನ

ಮೈಸೂರು ೫

ಜೋಧಪುರದಿಂದ ಇಲ್ಲಿಗೆ ಬಂದಿರುವ ಸೂ. ಬೊಂಬೆ ಆಟಗಾರರಾದ ಶ್ರೀ ಸಾಮಲ್ ರಾಮ್ ಮತ್ತು ಅವರ ಮಿತ್ರರು ಅಕ್ಬರ್ ಬೀರಬಲ್ ದರ್ಬಾರ್ ಎಂಬ ಪುತ್ತಳಿ ಕಥೆ ಚಿತ್ರವನ್ನು ನಾಳೆ ಸಂಜೆ ೭ ಗಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ "ಸಾಧ್ವಿ" ಪತ್ರಿಕಾ ಕಚೇರಿಯಲ್ಲಿ ಪ್ರದರ್ಶಿಸುವರು ಸರ್ವರಿಗೂ ಆಹ್ವಾನವಿದೆ

### ಪಾಂಚರಾತ್ರಾಗಮಿಕ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಮೈಸೂರ ಸಂಸ್ಥಾನದ ಪಾಂಚರಾತ್ರಾಗಮ ವಿದ್ಯಾರ್ಥಿ ಸಂಘದ ೨ನೇ ವಾರ್ಷಿಕ ಸಭೆ ... ಕಳೆದ ಶುಕ್ರವಾರ ಕೇಶವ ಜಾಂಬಾ ... ರವ ದಯಾನಿಧಿ ಎಂಬ ಗೃಹದಲ್ಲಿ ನ... ಮೈಸೂರು ಟ್ರೈನಿಂಗ್ ಕಾಲೇಜಿನ ... ಸ್ಕೃತ ಪಂಡಿತರಾದ ಶ್ರೀ ಎಸ್ ರಾ... ವ್ಯಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಶ್ರೀನಿವಾಸ ನರಸಿಂಹಭಟ್ಟರಿಂದ ಪ್ರಾರ್ಥನೆ ಶ್ರೀ ಎಸ್ ಆರ್ ಶ್ರೀನಿವಾಸ ಭಟ್ಟಾಚಾರ್ಯ... ರಿಂದ ವೀಣಾ ವಾದನ ಸಂಘದ ಕಾರ್ಯದರ್ಶಿಯವರಿಂದ ವರದಿಗಳಾದನಂತರ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ನ್ಯಾಯ ವ್ಯಾಕರಣ ವಿದ್ವಾಂಸರಾದ ಶ್ರೀ ಕೆ ರಘುನಾಥ ಚಕ್ರವರ್ತಿಗಳಿಂದ ಆಗಮಗಳ ವಿಷಯವಾಗಿ ಉಪನ್ಯಾಸವೂ, ಉಪಾಧ್ಯಕ್ಷರಾದ ಶ್ರೀ ಪಂಡಿತ ಶ್ರೀನಿವಾಸ ಕೃಷ್ಣ ಭಟ್ಟರಿಂದ ಸಂಘದ ಉದ್ದೇಶ ಮತ್ತು ಪ್ರಗತಿ ಸಾಧನ ಮಾರ್ಗಗಳ ಬಗ್ಗೆ ವಿವರಣೆಯೂ ಕೊಡಲ್ಪಟ್ಟವು ಬಳ್ಳಾರಿಯು ಮೈಸೂರಿಗೆ ಸೇರಿದ ಪ್ರಯುಕ್ತ ಸಂತೋಷವನ್ನು ವ್ಯಕ್ತಪಡಿಸಲಾಯಿತು ಅಧ್ಯಕ್ಷರು ಮಾತನಾಡಿ ಪಾಂಚರಾತ್ರಾಗಮಿಕರ ಪಾಠಪ್ರವಚನಗಳು ನಡೆಯಬೇಕಾದುದು ಅಗತ್ಯವೆಂದು ಹೇಳಿದರು ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ತತ್ವಗಳ ... ಭೇದವನ್ನು ಅವರು ವಿವರಿಸಿದರು ... ಅಧ್ಯಕ್ಷರು ವಂದನಾರ್ಪಣೆ ಮಾಡಿದ ... ಸಮಾರಂಭವು ಮುಕ್ತಾಯವಾಯಿತು

### ಹ ರಿ ಕ ಥೆ

... ಕಾಶೀಪತಿ ಲಾಯದ ಶ್ರೀ ವಿ... ಣಪತಿ ಮಂದಿರದಲ್ಲಿ ಈ ರಾತ್ರಿ ೮ ಘಂಟೆಗೆ ವಿದ್ಯಾರ್ಥಿ ಸಂಘದವರ ಏರ್ಪಾಟಿನಂತೆ ಭಾಗವತರಿಂದ "ಭದ್ರಾಚಲ ರಾಮದಾಸ್" ಎಂಬ ಹರಿಕಥೆ ... ಲೋಕ ಸಭೆಯ ಸದಸ್ಯರಾದ ಶ್ರೀ ಎನ್ ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ

### ಉ ಪ ನ್ಯಾ ಸ

... ಜಧಾನಿಯ ಕೌಟಿಲ್ಯ ಮಂಡಲಿಯು ... ನಾಳೆ ಸಂಜೆ ೫|| ಘಂಟೆಗೆ ಮಹಾರಾಜಾ ಕಾಲೇಜಿನಲ್ಲಿ ತರ್ಕ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರರಾದ ಶ್ರೀ ಎಂ ಯಾಮುನಾಚಾರ್ಯರಿಂದ 'ಭಾರತೀಯ ನಾಗರಿಕತೆ ಟಾಯಿನ್‌ಬಿಯವರ ಅಭಿಪ್ರಾಯ' ಎಂಬ ವಿಷಯವಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿದೆ

## ನೀರಿನ ಕೊಳಾಯಿಯ ರೋಡ್ ಬಾಕ್ಸ್ ಎಡವಿ ಬಿದ್ದು ಮರಣ

ಮೈಸೂರು ೫

ರಾಜಧಾನಿಯ ವೈಸರಾಯ್ ರಸ್ತೆಯಲ್ಲಿ ಈ ದಿನ ಬೆಳಗ್ಗೆ ಬರುತ್ತಿದ್ದ ಶ್ರೀ ಲಕ್ಷ್ಮಣ ಚಾರ್ ಎಂಬ ವೃದ್ಧರೊಬ್ಬರು ಪೇಪ ಡಿಪ್ಟ್ ಮಿಷನ್ ಹೈಸ್ಕೂಲಿನ ಉತ್ತರದ ಕೊನೆ ಗೇಟಿನ ಬಳಿ ನೀರಿನ ಕೊಳಾಯಿಯ ರೋಡ್ ಬಾಕ್ಸನ್ನು ಎಡವಿ ಬಿದ್ದು ಸ್ಥಳದಲ್ಲೇ ಮೃತಪಟ್ಟರು ಅವರಿಗೆ ಪೂರ್ವ ರೋಗ ಬರುತ್ತಿತ್ತೆಂದು ಹೇಳಲಾಗಿದೆ ಮೇಲ್ಭಾಗದ ರೋಡ್ ಬಾಕ್ಸು ನೆಲದ ಮಟ್ಟದಿಂದ ಬಹಳ ಎತ್ತರದಲ್ಲಿ ಇರುವುದರಿಂದ ಅದನ್ನು ಅನೇಕರು ಎಡವುತ್ತಿರುವರೆಂದೂ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ನೆಲ ಮಟ್ಟದಲ್ಲಿ ನಡಿಸಿ ಇಂತಹ ದುರ್ಘಟನೆಗಳು ಸಂಭವಿಸದಂತೆಮಾಡಬೇಕೆಂದೂ ಕೋರಲಾಗಿದೆ

### ಬ್ರಹ್ಮಾನಂದ ಗುರುಗಳ ಆರಾಧನೆ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಶ್ರೀ ಶಂಕರನಾರಾಯಣ ಸ್ವಾಮಿ ದೇವಾಲಯದ ಆವರಣದಲ್ಲಿ ನೂತನವಾಗಿ ಕಟ್ಟಿಸಿರುವ ಶ್ರೀ ವಿಠ್ಠಲ ಚೈತನ್ಯ ಮಂದಿರದಲ್ಲಿ ಇಂದು, ನಾಳೆ ಮತ್ತು ನಾಡಿದ್ದು ಶ್ರೀ ಬ್ರಹ್ಮಾನಂದ ಗುರುಗಳ ಆರಾಧನೆಯು ನಡೆಯುತ್ತದೆ ಪ್ರತಿ ದಿನ ಬೆಳಗ್ಗೆ ನಾಮಘೋಷ, ಭಜನೆ ಮಂಗಳಾರತಿ ಮತ್ತು ಸಂಜೆ ಸಂಗೀತ ನಡೆಯುವುವು ೭ನೇ ತಾ|| ರಾತ್ರಿ ಅಖಂಡ ಭಜನೆ ಮತ್ತು ಹರಿಕಥೆಯೂ ಏರ್ಪಾಡಾಗಿವೆ ಸರ್ವರಿಗೂ ಸ್ವಾಗತವಿದೆ

### ರೇಡಿಯೊ ನಾಟಕ

ಮೈಸೂರಿನ ರೇಡಿಯೊವಿನಲ್ಲಿ ನಾಳೆ ಸಂಜೆ ೬| ಘಂಟೆಯಿಂದ ೭|| ಘಂಟೆವರೆಗೆ ನಗರದ ಶ್ರೀ ಜಯಲಕ್ಷ್ಮಿ ವಿಲಾಸ ಆರ್ಯ ಬಾಲಿಕಾ ಪಾಠಶಾಲೆಯ ಹೆಣ್ಣು ಮಕ್ಕಳಿಂದ ಯಾರಿಗೆ ಯಾರೋ ಪುಚ್ಚಪ್ಪ ಎಂಬ ಕಿರು ನಾಟಕವನ್ನು ಏರ್ಪಡಿಸಲಾಗಿದೆ

### ಕೆ ಟಿ ಭಾಷ್ಯಂರವರಿಂದ ದಸರಾ ವಸ್ತು ಪ್ರದರ್ಶನಾರಂಭ

ಮೈಸೂರಿನ ಹಿರಿಯ ಶಾಸನ ಸಭಾಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂರವರು ಆನೇ ತಾ|| ಸಂಜೆ ೫ ಘಂಟೆಗೆ ಇಲ್ಲಿನ ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು

## ಭಾರತದ ಸೈನ್ಯಗಳಿಗೆ ದಕ್ಷಿಣ ಕೊರಿಯಾ ಮಂತ್ರಿಯ ಬೆದರಿಕೆ

ಸ್ವದೇಶಕ್ಕೆ ಹಿಂತಿರುಗಲು ಇಚ್ಛಿಸದ ಬಾರತೀಯ ಶಿಬಿರಗಳಲ್ಲಿರುವ ಯುದ್ಧ ಬಂದಿಗಳ ಮೇಲೆ ಭಾರತೀಯ ಸೈನಿಕರು ಅತ್ಯಾಚಾರಗಳನ್ನು ನಡೆಸುತ್ತಿರುವರೆಂದೂ ಅವುಗಳನ್ನು ನಿಲ್ಲಿಸದಿದ್ದರೆ ಅವುಗಳ ವಿರುದ್ಧವಾಗಿ ಕ್ರಮ ಕೈಗೊಳ್ಳಬೇಕಾಗುವುದೆಂದೂ ದಕ್ಷಿಣ ಕೊರಿಯದ ವಿದೇಶಾಂಗ ಮಂತ್ರಿ ಚೊಚುಂಗ್ ಹುವಾನರವರು ಹೇಳುತ್ತಾರೆ ಕಮ್ಯೂನಿಸ್ಟರಲ್ಲದ ಬಂದಿಗಳನ್ನು ಕೊಂದುಹಾಕಿರುವುದಲ್ಲದೆ ಇನ್ನೂ ಕೊಲ್ಲಲಾಗುತ್ತಿರುವುದೆಂದು ಅವರು ಆಪಾದಿಸಿರುತ್ತಾರೆ

## ಮುಖ್ಯ ಮಂತ್ರಿ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಟೀಕೆಗಳು

### ವಿಶೇಷ ರಹಸ್ಯ ಸಭೆಯಲ್ಲಿ ಚರ್ಚೆಗಾಗಿ ಠರಾವು

### ಎಂ ಪಿ ಸಿ ಸಿ ಅಧಿವೇಶನ

ಬಂಗಾರಪೇಟೆ ೫

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ನೆನ್ನೆ ಇಲ್ಲಿ ಸೇರಿ, ಒಂದು ದಿನದಲ್ಲೇ ಮುಕ್ತಾಯವಾಯಿತು ಶ್ರೀ ಹೆಚ್ ಕೆ ವೀರಣ್ಣಗೌಡರು ಅಧ್ಯಕ್ಷತೆ ವಹಿಸಿದ್ದರು

ಸಭೆಯು ನಡೆಯಬೇಕಾದ ಮಂಟಪವನ್ನು ಶಿವರಾತ್ರಿ ದಿವಸಕ್ಕೆ ಗಾಲಿ ಕಟ್ಟಿ ಪ್ರಾಣ ಪ್ರತಿಷ್ಠೆ ಆಗದ ಹುತಾತ್ಮರ ಹೆಸರನ್ನು ಇಡಲಾಗಿದ್ದಿತು

ಅಧ್ಯಕ್ಷರು ಮಾತನಾಡಿ ಆಂಧ್ರ ಪ್ರಾಂತದ ನಿರ್ಮಾಣ, ಮೈಸೂರಿಗೆ ಬಳ್ಳಾರಿ ಸೇರ್ಪಡೆ ಈ ವಿಷಯಗಳು ಚರಿತ್ರಾರ್ಹ ಘಟನೆಗಳೆಂದು ತಿಳಿಸಿದರು ಕೇಂದ್ರ ಸರ್ಕಾರದವರು ಸಂಸ್ಥಾನದ ಪುನರ್ವ್ಯವಸ್ಥೆಗಾಗಿ ಪ್ರಭಾವ ಶಾಲಿಯಾದ ಸಮಿತಿಯೊಂದನ್ನು ನೇಮಿಸಲಿರುವುದರಿಂದ ಭಾಷಾ ಪ್ರಾಂತರಚನೆ ಬಗ್ಗೆ ಜನರು ಧಾವಂತಪಡುವುದನ್ನು ಬಿಡಬೇಕೆಂದು ತಿಳಿಸಿದರು ಶ್ರೀ ಲಿಂಗಾರೆಡ್ಡಿಯವರ ಸ್ವಾಗತ ಭಾಷಣ ಮಾಡಿದರು

ಶ್ರೀಗಳಾದ ಬಿ ಎಂ ಶ್ರೀನಿವಾಸಯ್ಯ ಮತ್ತು ಎಂ ಆರ್ ಶ್ರೀನಿವಾಸಮೂರ್ತಿಯವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು ವಿಶ್ವ ಸಂಸ್ಥೆ ಅಧ್ಯಕ್ಷ ಸ್ಥಾನಕ್ಕೆ ಆರಿಸಿ ಬಂದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಅಭಿನಂದಿಸಲಾಯಿತು

ಮುಖ್ಯ ಮಂತ್ರಿಯವರು ಕಾಂಗ್ರೆಸ್ ಸಂಸ್ಥೆಯನ್ನು ಬಹಿರಂಗವಾಗಿ ಟೀಕಿಸಿರುವ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಪತ್ರಿಕಾ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳನ್ನು ನಿಂದಿಸಿರುವ ಬಗ್ಗೆ ಬಂದಿದ್ದ ನಿರ್ಣಯಗಳನ್ನು ಬೆಂಗಳೂರಿನಲ್ಲಿ ಇದೇ ೩|| ಮತ್ತು ೧೧ನೇ ತಾ|| ಸೇರುವ ವಿಶೇಷ ರಹಸ್ಯ ಸಮಿತಿ ಸಭೆಯಲ್ಲಿ ಚರ್ಚಿಸ ಪುದಕ್ಕೆ ಸಮಿತಿಯು ಒಪ್ಪಿತು

ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಿರ್ಣಯವೊಂದನ್ನು ಮಂಡಿಸಿ ದೇಶದಲ್ಲಿ ನಿರುದ್ಯೋಗ ಪರಿಹರಿಸಲು ಕೇಂದ್ರ ಮತ್ತು ಸಂಸ್ಥಾನದ ಸರ್ಕಾರಗಳು ಕ್ರಮ ಕೈಗೊಳ್ಳುವಂತೆ ಒತ್ತಾಯ ಪಡಿಸಿದರು ಶ್ರೀ ಹೆಚ್ ಸಿ ದಾಸಪ್ಪನವರು ಅನುಮೋದಿಸಿದರು ಶ್ರೀ ರೆಡ್ಡಿಯವರು ಮಾತನಾಡಿ ನಿರುದ್ಯೋಗವು ಹರಡದಂತೆ ಜನ ಸಂಖ್ಯೆಯ ಹೆಚ್ಚಳವನ್ನು ತಡೆಗಟ್ಟಬೇಕೆಂದು ತಿಳಿಸಿದರು ನಿರ್ಣಯವು ಅಂಗೀಕೃತವಾಯಿತು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಆಂಧ್ರ ಪ್ರಾಂತ್ಯ ರಚನೆಗಾಗಿ ಆಂಧ್ರರನ್ನು ಅಭಿನಂದಿಸುವ ನಿರ್ಣಯವನ್ನು ಮಂಡಿಸಿದರು ಅದು ಅಂಗೀಕರಿಸಲ್ಪಟ್ಟಿತು

ಬಳ್ಳಾರಿ ಜನರಿಗೆ ಸ್ವಾಗತ ಬಯಸುವ ನಿರ್ಣಯವು ಶ್ರೀ ಟಿ ಸುಬ್ರಹ್ಮಣ್ಯರವರಿಂದ ಮಂಡಿಸಲ್ಪಟ್ಟು, ಅಂಗೀಕೃತವಾಯಿತು

ಸಂಸ್ಥಾನಕ್ಕೆಲ್ಲಾ ಪಾನ ನಿರೋಧವನ್ನು ಅನ್ವಯಿಸುವಂತೆ ಕಳೆದ ಬಂದ ನಿರ್ಣಯದ ಬ...

## ರಂಗೂನ್ ವಿದ್ಯಾರ್ಥಿಗಳ ಮೇಲೆ ಪೊಲೀಸರ ಗುಂಡು

ರಂಗೂನಿನ ವಿಶ್ವವಿದ್ಯಾಲಯದ ಪ್ರವೇಶದ್ವಾರದ ಬಳಿಗೆ ವಿದ್ಯಾರ್ಥಿಗಳು ನೆನ್ನೆ ಪ್ರದರ್ಶನ ನಡೆಸಿದ ಸಂಬಂಧವಾಗಿ ಪೊಲೀಸರು ಗುಂಡು ಹಾರಿಸಿದರೆಂದೂ, ೫ ಜನರಿಗೆ ಗಾಯಗಳಾದುವೆಂದೂ ವರದಿಯಾಗಿದೆ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಮೂವರು ಪೊಲೀಸರಿಗೆ ವಿದ್ಯಾರ್ಥಿಗಳಿಂದ ಪೆಟ್ಟು ಬಿದ್ದಿದೆ ಕಲ್ಲುಗಳನ್ನೆಸೆದ ವಿದ್ಯಾರ್ಥಿಗಳ ಮೇಲೆ ಮೊದಲು ಪೊಲೀಸರು ಅಶ್ರುವಾಯು ಬಾಂಬುಗಳನ್ನೆಸೆದು, ಬೆಂಕಿಯನ್ನು ಆರಿಸುವ ಕೊಳವೆಗಳಿಂದ ಚೆದರಿಸಿದರು ಕಮ್ಯೂನಿಸ್ಟರಿಂದ ಪ್ರೇರಿತರಾದ ವಿದ್ಯಾರ್ಥಿಗಳು ಈ ತಿಂಗಳು ಪೂರ್ತಿ ರಜಾ ಕೊಡುವಂತೆ ಅಧಿಕಾರಿಗಳನ್ನು ಪ್ರಾರ್ಥಿಸಿ, ಕಾಲೇಜುಗಳಿಗೆ ಹೋಗುವವರನ್ನು ತಡೆದರೆಂದು ಹೇಳಲಾಗಿದೆ ವಿದ್ಯಾರ್ಥಿಗಳು ಬೆಂಕಿ ಆರಿಸುವ ಯಂತ್ರಕ್ಕೆ ಮುತ್ತಿಗೆ ಹಾಕಿ, ಪೊಲೀಸು ವ್ಯಾನಿಗೆ ಬೆಂಕಿ ಹಚ್ಚಿಸಿದರು.

## ಪೊಲೀಸು ಮುಖ್ಯಾಧಿಕಾರಿ ಮೇಲೆ ದರೋಡೆಕಾರನ ಗುಂಡು

ಹಿಮಾಚಲ ಪ್ರದೇಶದ ಪೊಲೀಸು ಇನ್ಸ್‌ಪೆಕ್ಟರ್ ಜನರಲ್ಲರಾದ ಅಶ್ವಿನಿ ಕುಮಾರ್‌ರವರು ನೆನ್ನೆ ನಲ್ದೆರಾದಲ್ಲಿ ಗಾಲ್ಫ್ ಆಟವನ್ನು ಮುಗಿಸಿಕೊಂಡು ಸಿಮ್ಲಾಕ್ಕೆ ಹಿಂತಿರುಗುತ್ತಿದ್ದಾಗ, ಪಕ್ಕದ ಹಳ್ಳಿಯೊಂದರಲ್ಲಿ ಒಬ್ಬ ದರೋಡೆಕಾರನು ಗುಂಡು ಹಾರಿಸಿದನೆಂದೂ, ಅದು ಸ್ವಲ್ಪದರಲ್ಲಿ ಗುರಿ ತಪ್ಪಿತೆಂದೂ ವರದಿಯಾಗಿದೆ ಅಧಿಕಾರಿಯು ಕಾರಿನಿಂದ ಹಾರಿ ದುಷ್ಕೃತ್ಯಕಾರನನ್ನು ಹಿಡಿದು ತನ್ನ ರಿವಾಲ್ವರಿನಿಂದ ಅವನನ್ನು ಕಟ್ಟಿಹಾಕಿ ಕಾರಿನಲ್ಲಿ ಸಿಮ್ಲಾಕ್ಕೆ ಕರೆತಂದರು. ಹತ್ತಿರದ ಪೊದೆಯಿಂದ ಅವರ ಮೇಲೆ ಗುಂಡು ಹಾರಿಸಿದನೆಂದೂ, ಕಾರು ನಿಧಾನವಾಗಿ ಬರತೊಡಗಲು ಒಳಗಿದ್ದವರಿಂದ ಬೆಲೆಯುಳ್ಳ ಪದಾರ್ಥಗಳನ್ನು ಕೊಡಬೇಕೆಂದು ಕೇಳಿ ಅನಂತರ ತನ್ನ ಗುಂಡು ಹಾರಿಸಿದನೆಂದೂ, ಕಾರಿನಲ್ಲಿದ್ದ ಮತ್ತೊಬ್ಬ ಮಹಿಳೆಯು ಬಂದೂಕನ್ನು ಕಿತ್ತುಕೊಂಡಳೆಂದೂ ಹೇಳಲಾಗಿದೆ

---

...ಗ್ಯ ರಿವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ ಪಾನ ನಿರೋಧದ ಬಗ್ಗೆ ತನಿಖೆ ಸಮಿತಿಯನ್ನು ರಚಿಸಲಾಗುವುದೆಂದು ತಿಳಿಸಿದರು ನಿರ್ಣಯವು ವಾಪಸಾಯಿತು

SREE GANESHA
TALKIES
Extended by One day
i e 6—10—53 also
at the request of the public
Columbia's Latest
AFFAIR IN TRINIDAD
With Rita Hayworth Glenford
Republic Day's Celebrations of
1953 at Delhi also being
shown in brilliant color

## ಹಳ್ಳಿ ಜನರ ಸಂಪರ್ಕ ಪಡೆಯುವಂತೆ ನೆಹರೂ ಸಲಹೆ

ಹಳ್ಳಿಗಳ ಅಸಂಖ್ಯಾತ ಜನರೊಡನೆ ನಿಕಟ ಸಂಪರ್ಕವನ್ನು ಬೆಳೆಸಿಕೊಂಡು ಕಾಂಗ್ರೆಸ್ಸಿನವರು ತಮ್ಮ ಸಂಸ್ಥೆಗೆ ನವ ಚೈತನ್ಯವನ್ನು ತಂದುಕೊಡಬೇಕೆಂದು ಪ್ರಧಾನಿ ನೆಹರೂರವರು ತಮಿಳು ನಾಡು ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ. [illegible] ಕಾಂಗ್ರೆಸ್ಸಿನ ಉನ್ನತ ಆದರ್ಶಗಳಿಗೆ ಅನುಗುಣವಾಗಿ ಅವರು ನಡೆದುಕೊಳ್ಳಬೇಕೆಂದು ನೆಹರೂರವರು ಹೇಳಿರುತ್ತಾರೆ.

## ಗಂಟೆಗೆ ೭೩೭ ಮೈಲಿ ವೇಗದಲ್ಲಿ ಹಾರಾಟ

ಬ್ರಿಟನ್ನಿನ ವಿಕರ್ಸ್ ವಿಮಾನ ಕಂಪೆನಿಯಲ್ಲಿ ತಯಾರಾಗಿರುವ ಸೂಪರ್ ಮೆರೀನ್ ಸ್ವಿಫ್ಟ್ ಜೆಟ್ ವಿಮಾನವು ಗಂಟೆಗೆ ೭೩೭ ಮೈಲಿ ವೇಗವಾಗಿ ಹೋಗಿ ಹಿಂದಿನ ವೇಗದಲ್ಲಿ ಇದು ಪ್ರಪಂಚದ ರೆಕಾರ್ಡೆಂದೂ ಹೇಳಲಾಗಿದೆ.

## ಎರಡು ಕೈಗಳಿಂದ ಏಕಕಾಲದಲ್ಲಿ ಬರೆಯುವ ಮಹಿಳೆ

ದಕ್ಷಿಣ ಆಸ್ಟ್ರೇಲಿಯದ ಫೋರ್ಟ್ ಪಿರ್ಲೀ ಎಂಬಲ್ಲಿ [illegible] ಮಹಿಳೆ ವೀರಾ ಫ್ಲಿಂಡರ್ಸ್ ಎಂಬಾಕೆಯು [illegible] ಎರಡು ಕೈಗಳಲ್ಲೂ ಒಂದೇ ಕಾಲದಲ್ಲಿ [illegible] ಬರೆಯುವವಳಾಗಿರುತ್ತಾಳೆ. ಆಕೆಗೆ ತಲೆಯ [illegible] ತರಬೇತಿ ಕೊಟ್ಟಿದ್ದ ಡೇನಿಸ್ ಪ್ರಿಜೆಯೊ [illegible] ಫ್ರೆಂಚ್ ಭಾಷೆಯಲ್ಲಿ ಎಡಗೈಯಿಂದಲೂ ಮತ್ತು ಇಂಗ್ಲಿಷಿನಲ್ಲಿ ಬಲಗೈಯಿಂದಲೂ ಬರೆಯುವಳು.

### ಚಾಂಪಿಯನ್ ನ್ಯೂಟ್ರಾ ಪಾಲಿಟಿ [illegible]

[illegible] ಮೈಸೂರ ಚಾಂಪಿಯನ್ ನ್ಯೂಟ್ರಾ ಪಾಲಿಟಿ [illegible] ಸರ್ಕಾರಿ ಕಾಲೇಜಿನ ಸಭೆಯಲ್ಲಿ [illegible] ಶ್ರೀ [illegible] ಶಾಸ್ತ್ರಿಯವರು [illegible] ಶ್ರೀ ಎಂ. ಎನ್. [illegible] ಮತ್ತು ಶ್ರೀ ಜಿ. ಕೆ. ನಾರಾಯಣಸ್ವಾಮಿಯವರು ಉಪಾಧ್ಯಕ್ಷರುಗಳಾಗಿಯೂ, ಶ್ರೀಗಳಾದ ಎ. ಸಿ. ಬಾಲಸುಂದರಂ [illegible] ಎಸ್. ಅನಂತಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. [illegible] ಶ್ರೀಮತಿ ಎಸ್. ಲಲಿತಮ್ಮನವರೂ ಇತರ ಹಲವರೂ ಸದಸ್ಯರಾಗಿರುವರು.

### ಗೊಂಬೆಯರ ಕೂಟ

ರಾಜಧಾನಿಯ ಚಾಮುಂಡಿ [illegible] ಯಲ್ಲಿ ಸ್ಥಾಪಿತವಾಗಿರುವ ಮಕ್ಕಳ [illegible] ಕೂಟದ ಎರಡನೆಯ ವರ್ಷದ ಉದ್ಘಾಟನಾ ಸಮಾರಂಭವು [illegible] ಶ್ರೀ ಎಂ. [illegible] ರವರ [illegible] ಕೂಟದ [illegible] ಶ್ರೀ [illegible]

[illegible]

## ಸ್ವಾ ... ಜಿಲ್ಲೆಯಲ್ಲಿ ಮುಖ್ಯ ಮಂತ್ರಿಗಳ ಪ್ರವಾಸ

[illegible] ಮಂತ್ರಿ ಶ್ರೀ [illegible] ಯವರು [illegible] ತಿಂಗಳು [illegible] ರಿಂದ [illegible] ರವರೆಗೆ [illegible] ಜಿಲ್ಲೆಯಲ್ಲಿ ಪ್ರವಾಸ ಮಾಡಲಿರುವರೆಂದು ವರದಿಯಾಗಿದೆ.

[illegible]

[illegible]

## ಪ್ರಾಚೀನ ವಿಜಯನಗರದ ಇತಿಹಾಸ

ಪ್ರಾಚೀನ ವಿಜಯನಗರದ ವೈಭವದ ವಿಷಯವನ್ನು ಕೇಳಿದವರು ಆತಿಪವಿತ್ರ ಹಂಪೆಯ ಹಾಳೂರನ್ನು ಪ್ರತ್ಯಕ್ಷ ನೋಡಿ ದುಃಖಿಸದೆ ಬಂದವರು ಇನ್ನೂ ವಿರಳ. ಬಳ್ಳಾರಿ ಜಿಲ್ಲೆಯು ಮೈಸೂರ ಸಂಸ್ಥಾನಕ್ಕೆ ಸೇರಿದ ಕಾರಣ ವಿಜಯನಗರದ ವಿಷಯವಾಗಿ ಮೈಸೂರಿನವರು ಹೆಚ್ಚಿನ ಆಸಕ್ತಿಯನ್ನು ತೋರಿಸಬೇಕಾಗಿದೆ. ವಿಜಯನಗರದ ಚರಿತ್ರೆಯ ವಿಷಯವಾಗಿ ಅನೇಕರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಬರೆಯುತ್ತಲೂ ಇದ್ದಾರೆ. ಆದರೆ ಇತ್ತೀಚೆಗೆ ನಮ್ಮ ಪರಿಷತ್ತಿಗೆ [illegible] ಶ್ರೀ [illegible] ರಾವ್ [illegible] ರು ಬರೆದಿರುವ ಗ್ರಂಥವು ಬಹಳ ಮಹತ್ವವುಳ್ಳದ್ದು. ಇದು ಇನ್ನೂ ಹಸ್ತಲಿಖಿತವಾಗಿಯೇ ಉಳಿದಿದೆ. ಇದಕ್ಕಾಗಿ ಗ್ರಂಥಕರ್ತರು ಇಪ್ಪತ್ತು ವರ್ಷಕ್ಕೆ ಮೇಲ್ಪಟ್ಟು ದುಡಿದಿರುವರು. [illegible] ಸಹಸ್ರಾರು ರೂಗಳನ್ನು ವೆಚ್ಚ ಮಾಡಿರುವರು. ಪುಸ್ತಕವನ್ನು ಇಂಗ್ಲೀಷು ಭಾಷೆಯಲ್ಲಿ ಬರೆದಿರುತ್ತಾರೆ. ಅದು ಸುಮಾರು ಸಾವಿರ ಪುಟಗಳಷ್ಟು [illegible] ದೇಶಭಾಷೆಗಳಲ್ಲಿಯೂ ಭಾಷಾಂತರವಾದರೆ [illegible] ಮಾಡಿಸುವ ಯೋಜನೆ [illegible] ಹೀಗೆ ವಿಶಾಲವಾಗಿ [illegible] ಧನಸಹಾಯದಿಂದ ರಚಿಸಿರುವ ಗ್ರಂಥಕ್ಕೆ ಸರ್ಕಾರವೂ ವಿಶ್ವವಿದ್ಯಾಲಯಗಳೂ ಸಾರ್ವಜನಿಕ ಸಂಸ್ಥೆಗಳೂ ಶ್ರೀಮಂತರೂ ಪ್ರೋತ್ಸಾಹವನ್ನು ತೋರಿಸುವುದು ನ್ಯಾಯವಾಗಿದೆ. ಇದು ನಿಜವಾದ ದೇಶಾಭಿಮಾನದ ಕರ್ತವ್ಯ.

## ಬೊಂಬಾಯಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ ಭಾಷೆಯಿಲ್ಲ

ಬೊಂಬಾಯಿ ಪ್ರಾಥಮಿಕ ಶಾಲೆಗಳ ಐದು ಮತ್ತು ಆರನೇ ತರಗತಿಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಬೋಧಿಸಕೂಡದೆಂದೂ ಎಂಟನೇ ತರಗತಿಯ [illegible] ಭಾಷೆಯನ್ನು ಐಚ್ಛಿಕವಾಗಿ ಮಾಡಬೇಕೆಂದೂ ಅಲ್ಲಿನ ಸರ್ಕಾರಕ್ಕೆ ಶಿಫಾರಸು ಮಾಡುವ ನಿರ್ಣಯವನ್ನು ಬೊಂಬಾಯಿ ಶಾಸನ ಸಭೆಯು ಅಂಗೀಕರಿಸಿರುತ್ತದೆ.

### ಬಳಸುವವರ ಸಹಕಾರ ಸಂಘದ ಡೈರೆಕ್ಟರುಗಳು

[illegible] ಬಳಸುವವರ ಸಹಕಾರ ಸಂಘದ [illegible] ಸಾಧಾರಣ ಸಭೆಯು ಕಳೆದ ೨೭ನೇ ತಾರೀಖು [illegible] ಎಂ. [illegible] ರವರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಡೈರೆಕ್ಟರುಗಳು ಚುನಾಯಿಸಲ್ಪಟ್ಟರು. ಶ್ರೀಗಳಾದ [illegible] ಎಂ. ರಾಮಸ್ವಾಮಿ [illegible] ಶ್ರೀ [illegible] ಎಂ. [illegible] ಎಸ್. [illegible], ಬಿ. [illegible] ಮತ್ತು ಎಸ್. ವೆಂಕಟನಾರಣಪ್ಪ

### ಗಾಂಧಿ ಜಯಂತಿ ಉತ್ಸವ

ಮೈಸೂರ ಹಿಂದೀ ಪ್ರಚಾರ ಸಭೆಯ [illegible] ವಿದ್ಯಾರ್ಥಿಗಳು [illegible] ಎಂ. ಕೆ. [illegible] ರವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯನ್ನು ಆಚರಿಸಿದರು. ಶ್ರೀಮತಿಗಳಾದ ಆರ್. [illegible] ಎಸ್. ಆರ್. [illegible], ಎಸ್. ಆರ್. [illegible] ಮತ್ತು ಶ್ರೀ ಎಸ್. ವಿ. ವೆಂಕಟಾಚಲಂರವರು ಗೀತೆಗಳನ್ನು ಹಾಡಿದರು. ಶಿವಮೊಗ್ಗದ [illegible] ಶ್ರೀ ವೈ. [illegible] ಸ್ವಾಮಿಯವರು ಗಾಂಧೀಜಿಯವರ ಜೀವನ ಮತ್ತು ಸಾಧನೆಗಳ ವಿಚಾರವಾಗಿ ಹಿಂದಿಯಲ್ಲಿ ಭಾಷಣ ಮಾಡಿದರು.



## ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ ಕಾಂಪೌಂಡು, ತಳ್ಳಿ, ದೀಪ, ಫ್ಲಶಿಂಗ್ ಇವೆ "ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿರಿ



## ಇಟಲಿ ಪಾರ್ಲಿಮೆಂಟಿನ ಹೊಡೆದಾಟದಲ್ಲಿ ಮಹಿಳೆಯರ ಪಾತ್ರ

ಇಟಲಿಯ ಪಾರ್ಲಿಮೆಂಟಿನ ಸಭೆಯಲ್ಲಿ ಕಳೆದ ಶುಕ್ರವಾರ ಸದಸ್ಯರಲ್ಲಿ ಗುದ್ದಾಟವಾಗಿ [illegible] ದಿನಗಳೇ ಆದುವೆಂದೂ ಅದರಲ್ಲಿ ಇಬ್ಬರು ಮಹಿಳೆಯರೂ ಭಾಗವಹಿಸಿದ್ದರೆಂದೂ ಹೇಳಲಾಗಿದೆ. ವಿದೇಶಾಂಗ ನೀತಿಯ ಮೇಲೆ ಚರ್ಚೆ ಯಾಗುತ್ತಿದ್ದಾಗ ಕಮ್ಯೂನಿಸ್ಟ್ ಸದಸ್ಯರೊಬ್ಬರು ವಿರೋಧ ಗುಂಪಿನ ಸದಸ್ಯರೊಬ್ಬರನ್ನು ಫ್ಯಾಸಿಸ್ಟ್ ಕಳ್ಳನೆಂದು ಹೇಳಿದಾಗ ಆ ಪಂಗಡದವರೊಬ್ಬರು ಎದ್ದು ನಿಂತು [illegible] ಪಕ್ಷದ ಸದಸ್ಯರನ್ನು ಕುರಿತು ಅವರು [illegible] ಗುಲಾಮರೆಂದು ಹೇಳಲು ಗಲಾಟೆ ಗಳು ಆರಂಭವಾದುವೆಂದು ವರದಿಯಾಗಿದೆ. ಹೊಡೆದಾಟದಲ್ಲಿ ಸದಸ್ಯರ ಬಟ್ಟೆಬರೆಗಳನ್ನು ಹರಿದು ಹಾಕಲಾಯಿತಲ್ಲದೆ ಬಟ್ಟೆಯನ್ನೂ ಸಹಾ ತೆಗೆಯಲಾಯಿತೆಂತ ಹೇಳಲಾಗಿದೆ. ಒಂದು ಘಂಟೆ ಕಾಲ ಕಾರ್ಯಕಲಾಪಗಳನ್ನು ನಿಲ್ಲಿಸಿ ಪುನಹ ಆರಂಭಿಸಿದಾಗ ಮತ್ತೆ ಮುಷ್ಟಿ [illegible] ಗಳು ಜರುಗಿ [illegible] ಜನರನ್ನು ಪ್ರಥಮ ಚಿಕಿತ್ಸೆಗಾಗಿ [illegible] ಕಳುಹಿಸಲಾಯಿತೆಂದು ಗೊತ್ತಾಗಿದೆ.

## ಪದವಿಗಳ ವ್ಯಾಮೋಹವನ್ನು ತ್ಯಜಿಸಲು ಅಜಾದರ ಕರೆ

ಕೇಂದ್ರ ವಿದ್ಯಾ ಮಂತ್ರಿ ಮೌಲಾನಾ ಅಜಾದರು ದೆಹಲಿಯ ರೇಡಿಯೋವಿನಲ್ಲಿ ಪ್ರಸಾರ ಭಾಷಣ ಮಾಡಿ ಈಗಿನ ವಿದ್ಯಾಭ್ಯಾಸ ಪದ್ಧತಿಯ [illegible] ಗಳಿಗಿಂತ ಹೆಚ್ಚಿನ ಸಂಖ್ಯೆಯ ಜನರು [illegible] ಸಾಮಾನ್ಯ ಜನರಿಗೆ ದೊರೆಯ [illegible] ಸಾಧಾರಣ ವಿದ್ಯಾಭ್ಯಾಸವು [illegible] ಲದೆಂದೂ [illegible] ವಿದ್ಯಾಭ್ಯಾಸವಿನ [illegible] ಕೆಲಸ [illegible] ಪದವೀಧರರ ನಿರಾಶರಾಗುವರೆಂದೂ ಕೇವಲ ಪದವಿಗಳ [illegible] ವಿಶ್ವವಿದ್ಯಾಲಯದ ಶಿಕ್ಷಣಕ್ಕಾಗಿ [illegible] ತೂರಿಬರಕೂಡದೆಂದೂ ತಿಳಿಸಿರುತ್ತಾರೆ.

## ಕರಾಚಿ ಸಿನಿಮಾ ಮುಷ್ಕರದ ಮುಕ್ತಾಯ

ಭಾರತದಿಂದ ಸಿನಿಮಾ ಫಿಲಂಗಳನ್ನು ತರಿಸಿ ಪ್ರದರ್ಶಿಸಲು ಅವಕಾಶವಿಲ್ಲವಾಗಿ ಕಳೆದ [illegible] ದಿನಗಳಿಂದ ಕರಾಚಿಯಲ್ಲಿ ನಡೆಯುತ್ತಿದ್ದ ಸಿನಿಮಾ ಮಂದಿರಗಳ ಮುಷ್ಕರವು ಈಗ ಕೊನೆಗೊಂಡಿರುತ್ತದೆ. ಭಾರತೀಯ ಫಿಲಂಗಳನ್ನು ತರಿಸಲು ಸರ್ಕಾರದವರು ಅನುಮತಿಯಿತ್ತಿರುವರು.

## ಎರಡು ಕೈಗಳಲ್ಲೂ ಕ್ಷೌರ ಮಾಡಿಕೊಳ್ಳುವವ

ಅಮೆರಿಕದ ಮಿನಿಯಾಪೊಲಿಸ್ ನಗರದ ಕೈಗಾರಿಕಾ ಸಂಶೋಧನಾಲಯದ ಡಾ. [illegible] ಎಂಬಾತನು ತನ್ನ ಎರಡು ಕೈಗಳಲ್ಲೂ ಕತ್ತಿಗಳನ್ನು ಹಿಡಿದು ಕ್ಷೌರ ಮಾಡಿಕೊಳ್ಳುವನೆಂದು ಹೇಳಲಾಗಿದೆ. ಸಾಮಾನ್ಯವಾಗಿ ಕ್ಷೌರಕ್ಕೆ ಬೇಕಾಗುವ ಕಾಲದ ಅರ್ಧದಲ್ಲಿ ಅವನು ಈ ಕಾರ್ಯವನ್ನು ಮುಗಿಸುವನು.



## ಕರಿ ಕೆಮ್ಮಲೆಗೆ ಖಾತರಿಯಾದ ಔಷಧಿ

ಕರಿ ಕೆಮ್ಮು [illegible] ಮಕ್ಕಳು [illegible] ನಮ್ಮಲ್ಲಿ [illegible] ಔಷಧಿ ದೊರೆಯುತ್ತದೆ [illegible] ಗುಣಪಡಿಸಲಾಗುತ್ತದೆ

Whooping Cough Remedy

ನಾಯಿಕೆಮ್ಮಿಗೆ [illegible] ದೊರೆಯುತ್ತದೆ

[illegible]

[illegible] ರೋಗಕ್ಕೆ [illegible] ದೊರೆಯುತ್ತವೆ [illegible]

ಆರ್ ಎಸ್ ಪಂಡಿತರು,

ದಿವಾನ್ಸ್ ರೋಡು ಸುಬ್ಬರಾಯನಕೆರೆ ಬಳಿ

ಗೊಬ್ಬಗೇರಿ ಮೈಸೂರು



## ಉಚಿತ ವಕೀಲೀ ಸೌಲಭ್ಯಕ್ಕೆ ಕಾನೂನು ಬೇಕು

### ಸಂಸ್ಥಾನದ ಪ್ರಮುಖರಿಗೆ ಕಗಡೂರು ರಾಮಚಂದ್ರರಾಯರ ಬಹಿರಂಗ ಪತ್ರ

ಶ್ರೀ ಕಗಡೂರು ರಾಮಚಂದ್ರರಾಯರು ಒಂದು ಹಸ್ತ ಪತ್ರಿಕೆಯನ್ನು ಪ್ರಕಟಿಸಿ ಅದರಲ್ಲಿ ಸಂಸ್ಥಾನದ ಮುಖ್ಯ ಮಂತ್ರಿ, ಶ್ರೇಷ್ಠ ನ್ಯಾಯಾಧೀಶರು, ಸಚಿವರುಗಳು ಮತ್ತು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಬರೆದಿರುವ ಬಹಿರಂಗ ಪತ್ರವೊಂದನ್ನು ಕೊಟ್ಟಿರುತ್ತಾರೆ. ಸಮಾಜದ ಮತ್ತು ರಾಜ್ಯಾಂಗದ ಸೇವೆಗಾಗಿ ವಕೀಲರ ಉಚಿತ ಸಹಾಯದ ಕಾನೂನು ಆಗಬೇಕೆಂದೂ ರಾಜ್ಯಾಂಗದಲ್ಲಿ ಕಾಣುವ ಪ್ರಜಾ ಹಕ್ಕುಗಳನ್ನು ಬಡ ಜನರು, ದೀನರು, ಅಶಕ್ತರು ಸಂಪಾದಿಸಿಕೊಳ್ಳಲು ಕಾನೂನಿನ ಬೆಂಬಲವು ಅಗತ್ಯವೆಂದೂ ಅವರು ಹೇಳಿ ಇಂಗ್ಲೆಂಡ್ ಅಮೆರಿಕಾ ಮುಂತಾದ ಪ್ರಜಾ ಪ್ರಭುತ್ವ ರಾಜ್ಯಗಳಲ್ಲಿ ಇಂತಹ ಶಾಸನವು ಆಗಿರುವುದೆಂದೂ ತಿಳಿಸಿರುತ್ತಾರೆ. ಮೈಸೂರು ಶ್ರೇಷ್ಠ ನ್ಯಾಯಾಧೀಶರು ಇಂತಹ ವ್ಯವಸ್ಥೆ ಆಗಬೇಕೆಂದು ಹೇಳಿರುವುದಾಗಿಯೂ, ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರೂ ಒಂದು ತೀರ್ಮಾನದಲ್ಲಿ ಈ ಕಾನೂನು ಜಾರಿಗೆ ಆಗಬೇಕೆಂದು ಒತ್ತಾಯ ಮಾಡಿರುವರೆಂದೂ ತಿಳಿಸಿರುತ್ತಾರೆ.

## ನ್ಯಾಯಾಂಗ ಸುಧಾರಣೆ ಮಸೂದೆ

ಪಾರ್ಲಿಮೆಂಟಿನ ಮುಂದಿನ ಅಧಿವೇಶನದಲ್ಲಿ ನ್ಯಾಯಾಂಗ ಸುಧಾರಣೆಗಾಗಿ ಮಸೂದೆಯೊಂದನ್ನು ತಂದು ಮೊಕದ್ದಮೆಗಳು ನಿಧಾನವಾಗುವುದು, ಹೆಚ್ಚು ಖರ್ಚು ಮತ್ತು ಅನಾವಶ್ಯಕವಾಗಿ ಬೆಳೆಯುವುದನ್ನು ತಪ್ಪಿಸಲು ಪ್ರಯತ್ನ ಕೈಗೊಳ್ಳಲಾಗುವುದೆಂದು ಕೇಂದ್ರ ಮಂತ್ರಿ [illegible] ರವರು ತಿಳಿಸಿರುತ್ತಾರೆ. ಸ್ಮಾಲ್ ಕಾಸ್ ಕೋರ್ಟಿನ ತೀರ್ಮಾನದ ಮೇಲೆ ಅಪೀಲಿಗೆ ಅವಕಾಶ ಕೊಡುವ ಆಲೋಚನೆ ಇರುವುದಾಗಿಯೂ ಅವರು ಹೇಳಿರುತ್ತಾರೆ. ಜೂರಿಗಳಿಂದ ವಿಚಾರಣೆ ಅಗತ್ಯದ ಬಗ್ಗೆ ವಕೀಲರ ಅಭಿಪ್ರಾಯವನ್ನು ಅವರು ಕೇಳಿರುತ್ತಾರೆ.

## ವರ್ಷಕ್ಕೆ ೨೫ ಕೋಟಿ ರೂ. ಖಾದಿ ಉತ್ಪತ್ತಿಗಾಗಿ ಕ್ರಮ

ಭಾರತ ಸರ್ಕಾರದವರು ನೇಮಿಸಿರುವ ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡಿನವರು ಖಾದಿಯ ಉತ್ಪತ್ತಿಯನ್ನು ವರ್ಷಕ್ಕೆ ೨೫ ಕೋಟಿ ರೂ ಗಳಿಗೆ ಮೂರು ನಾಲ್ಕು ವರ್ಷಗಳಲ್ಲಿ ಹೆಚ್ಚಿಸಲು ಕ್ರಮ ಕೈಗೊಳ್ಳಲಿರುವರೆಂದು ವರದಿಯಾಗಿದೆ.

### ಮಳಲವಾಡಿಯಲ್ಲಿ ಗಾಂಧಿ ಜಯಂತಿ ಮತ್ತು ಶಾಲೆಯ ಆರಂಭೋತ್ಸವ

ರಾಜಧಾನಿಯ ಹರಿಜನ ಸೇವಕ ಸಂಘದವರು ಮಳಲವಾಡಿ ಗ್ರಾಮದಲ್ಲಿ ಮೊನ್ನೆ ಗಾಂಧಿ ಜಯಂತಿಯನ್ನು ಸಂಘದ ಅಧ್ಯಕ್ಷರಾದ ಶ್ರೀ ಎನ್. ಶ್ರೀನಿವಾಸಯ್ಯಂಗಾರಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧಿ ಹರಿಜನ ಪಾಠಶಾಲೆಯ ಆರಂಭೋತ್ಸವವನ್ನು ಅಧ್ಯಕ್ಷರು ನೆರವೇರಿಸಿದರು.



## ಬಸ್ಸು ಖರೀದಿಗಿದೆ

ಉತ್ತಮ ರೀತಿಯಲ್ಲಿರುವ ಮತ್ತು ಓಡುತ್ತಿರುವ ಫೋರ್ಡ್ ಬಸ್ಸು ಖರೀದಿಗಿದೆ ಮಧುರೆ ಬಾಡಿ ಮತ್ತು ಹೊಸ ಟೈರು

ದಿನಾ ಲೈನಿನಲ್ಲಿ ಓಡಿಸಲು ಆರ್ಡರ್ ಕೊಟ್ಟು ಮಾಡಿಸಿದಂತಿದೆ

ವಿಳಾಸ —

**ಶಾರದಾ ಮೋಟಾರ್ ಸರ್ವಿಸ್,**

ನ್ಯೂ ಸಯ್ಯಾಜಿರಾವ್ ರೋಡು, ಮೈಸೂರು



Edited, Printed and Published by A R Nagarajan at Sadhvi Press, D. Subbiah Road Mysore

ರಿಜಿಸ್ಟರ್ ನಂ. 792

[illegible]

ಬಿಡಿ ಪ್ರತಿ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨ ] MYSORE THURSDAY 8-10-1953 : ಮೈಸೂರು : ಗುರುವಾರ ೮-೧೦-೧೯೫೩ [ ಸಂಚಿಕೆ [illegible]

# ಅರಮನೆ ಅಖಾಡಾ ಹಕ್ಕಿನ ಬಗ್ಗೆ ಪ್ರತಿಭಟನಾ ಪ್ರದರ್ಶನ

## ಪೌರಸಭಾ ಚುನಾವಣೆ ಬಗ್ಗೆ ಪ್ರತಿಪಕ್ಷದ ಸಿದ್ಧತೆ

ಮೈಸೂರು ೮

ರಾಜಧಾನಿಯ ಹಳ್ಳದಕೇರಿಯಲ್ಲಿರುವ ಆನಂದಾ ಹಿಂದ್ ಪ್ರೆಸ್ಸಿನಲ್ಲಿ ಕಳೆದ ಸೋಮವಾರ ನಗರದ ನಾನಾ ಪ್ರತಿಪಕ್ಷಗಳ ಸಂಯುಕ್ತ ಸಭೆಯು ನಡೆಯಿತು. ಪೌರಸಭಾ ಸದಸ್ಯರಾದ ಶ್ರೀ ವೆಂಕಟೇಶಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಕಳೆದ ಮೂರು ವರ್ಷಗಳಲ್ಲಿ ಪೌರಸಭೆಯಲ್ಲಿ ನಡೆದ ಕೆಲಸ ಕಾರ್ಯಗಳನ್ನು ಅವರು ವಿವರಿಸಿದನಂತರ ಶ್ರೀ ಮಹಮುದ್ ಶೇರ್‌ರವರು ಪೌರಸಭೆಯಲ್ಲಿರುವ ಅಧಿಕಾರೀ ಪಕ್ಷ ಮತ್ತು ಅದರ ಪ್ರತಿಪಕ್ಷಗಳೆರಡರ ಆಡಳಿತ ರೀತಿಯನ್ನು ಖಂಡಿಸಿ ಮಾತನಾಡಿದರು. ಸಂಯುಕ್ತ ಪ್ರತಿ ಪಕ್ಷವು ಮುಂದೆ ನಡೆಯಬೇಕಾದ ವಿಧಾನದ ಬಗ್ಗೆ ಅವರು ಹಲವು ಸಲಹೆಗಳಿತ್ತರು. ಲೋಕ ಸಭಾ ಸದಸ್ಯರಾದ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಪ್ರತಿಪಕ್ಷದವರು ಸಂಘಟನೆ ಮಾಡಿಕೊಂಡು ಪೌರ ಆಡಳಿತವನ್ನು ಉತ್ತಮಗೊಳಿಸಲು ಶ್ರಮಿಸಬೇಕೆಂದು ತಿಳಿಸಿದರು. ನಂತರ ಶ್ರೀಗಳಾದ ಎ ವೆಂಕಟೇಶಯ್ಯ ಅಧ್ಯಕ್ಷರು, ಜ|| ಮಹಮುದ್ ಶೇರ್ ಉಪಾಧ್ಯಕ್ಷರು, ಶ್ರೀ ಬಿ ಲಕ್ಷ್ಮೀನರಸಪ್ಪ ಮತ್ತು ಶ್ರೀ ಜಿ ಸ್ವಾಮಿದಾಸ್‌ರವರು ಕಾರ್ಯದರ್ಶಿಗಳಾಗುಳ್ಳ ಒಂದು ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀಗಳಾದ ಎಂ ಎಸ್ ಗುರುಪಾದಸ್ವಾಮಿ, ಎಂ ಆರ್ ಶ್ರೀನಿವಾಸಯ್ಯಂಗಾರ್, ಡಾ|| ಬಿ ಜಿ ದಾಸ್, ಎಂ ಎಸ್ ಚಂದ್ರಶೇಖರ ಜೋಯಿಸ್ ಮತ್ತು ಎಂ ಎಲ್ ತಿಮ್ಮಯ್ಯನವರು ಸದಸ್ಯರಾಗಿರುವರು.

## ಮಂತ್ರಿ ಇಲಾಖೆಗಳ ಪುನರ್ವಿಂಗಡನೆ

ಬೆಂಗಳೂರು ೮

ಡಾ|| ನಾಗನಗೌಡರನ್ನು ವ್ಯವಸಾಯ ಮಂತ್ರಿಗಳಾಗಿ ನೇಮಿಸಿಕೊಂಡುದರ ಪರಿಣಾಮವಾಗಿ ಮಂತ್ರಿ ಇಲಾಖೆಗಳ ಪುನರ್ವಿಂಗಡನೆ ಈ ರೀತಿ ಆಗಿದೆ.—

ಶ್ರೀ ಕೆ. ಹನುಮಂತಯ್ಯ—ಅರಮನೆ, ಹೈಕೋರ್ಟು, ರಾಜಕೀಯ, ಸಿವಿಲ್ ಸರ್ವೀಸ್ ಸೆಕ್ರೆಟೇರಿಯಟ್, ಹಣಕಾಸು, ಆರ್ಥಿಕ ಸಮ್ಮೇಳನ ಮತ್ತು ಯೋಜನೆ, ಹಿಂದುಳಿದ ವರ್ಗದವರ ಅಭಿವೃದ್ಧಿ, ಯುದ್ಧ ಸಂಬಂಧದ ವಿಷಯ

ಶ್ರೀ ಎ ಜಿ ರಾಮಚಂದ್ರರಾಯರು—ನ್ಯಾಯಾಂಗ, ಶಾಸನ ಸಭೆಗಳು, ಸ್ಕೂಲು, ವಿದ್ಯಾಭ್ಯಾಸ, ವಿಶ್ವವಿದ್ಯಾಲಯ, ಕಾರ್ಮಿಕರು, ಪಾರ್ಕ್, ಚುನಾವಣೆ ಮತ್ತು ಕೋರ್ಟುಗಳು

ಟಿ ಚನ್ನಯ್ಯ—ವೈದ್ಯ, ಸಾರ್ವಜನಿಕ ಆರೋಗ್ಯ, ಜಿಲ್ಲಾ ಬೋರ್ಡುಗಳು ಮತ್ತು ಪೌರಸಭೆಗಳು, ಅಬ್ಕಾರಿ

ಶ್ರೀ ಕಡಿದಾಳ ಮಂಜಪ್ಪ ರೆವಿನ್ಯೂ, ಮುಜರಾಯಿ, ಮುಂಗಾಮತ್ತು, ಮಾರಾಟ ತೆರಿಗೆ, ಲಂಚ ನಿರೋಧ ಮತ್ತು ದಕ್ಷತೆ ಶಾಖೆ

ಶ್ರೀ ಸಿದ್ದವೀರಪ್ಪ— ಪೋಲೀಸು, ಆಹಾರ, ಸಿವಿಲ್ ಸರಬರಾಜು, ರೈಲ್ವೆ, ಬಸ್ಸು ಸಂಚಾರ, ಕೈಗಾರಿಕೆ ಮತ್ತು ವಾಣಿಜ್ಯ

ಡಾ|| ನಾಗನಗೌಡರು— ವ್ಯವಸಾಯ, ಸಹಕಾರ, ವಿದ್ಯುಚ್ಛಕ್ತಿ, ಅರಣ್ಯ, ಜಾನುವಾರು ಸಂಪತ್ತು, ಪಶು ವೈದ್ಯ, ನಿರಾಶ್ರಿತರ ಆಸ್ತಿ, ಪುನರ್ವಸತಿ

## ಶ್ರೀಮನ್ಮಹಾರಾಜರ ಸಿಂಹಾಸನಾರೋಹಣ

### ಶ್ರೇಷ್ಠಾಧಿಕಾರಿಗಳಿಂದ ನಜರು

ಮೈಸೂರು ೮

ರಾಜಧಾನಿಯಲ್ಲಿ ದಸರಾ ಮಹೋತ್ಸವವು ಇಂದು ಪ್ರಾರಂಭವಾಯಿತು. ಅರಮನೆಯಲ್ಲಿ ಸಮಾರಂಭವು ವಿಜೃಂಭಣೆಯಿಂದ ನೆರವೇರಿತು. ಶ್ರೀಮನ್ಮಹಾರಾಜರು ಪ್ರಾತಃಕಾಲ ಮಂಗಳ ಸ್ನಾನಾದಿಗಳನ್ನು ಮುಗಿಸಿ, [illegible] ಮನೆಗೆ ದಯಮಾಡಿಸಿದ ರಾಜಗುರುಗಳಿಂದ ಪರಮಹಂಸ ಸ್ವಾಮಿಯವರಿಗೆ ನಮಸ್ಕರಿಸಿ ಅವರ ಆಶೀರ್ವಾದ ಪಡೆದ ನಂತರ ೮-೩೦ಕ್ಕೆ ಸರಿಯಾಗಿ ಸಜ್ಜೆಗೆ ದಯಮಾಡಿಸಿದರು. ಸಿಂಹಾಸನಕ್ಕೆ ಪೂಜೆ ಮತ್ತು ಮಂಗಳಾರತಿಯನ್ನೂ, ಅದರ ಸುತ್ತಲೂ ಪ್ರದಕ್ಷಿಣೆಯನ್ನೂ ಮಾಡಿ ೯-೪ ಗಂಟೆಗೆ ಸಿಂಹಾಸನಾರೋಹಣ ಮಾಡಿದರು. ಒಡನೆಯೇ ಅರಮನೆ ಬತ್ತೇರಿಯಿಂದ ೨೧ ಕುಶಾಲ ತೋಪುಗಳಾದುವು. ಅರಮನೆ ಮುಂದೆ ಅಂಗಳದಲ್ಲಿ ಗಾರ್ಡ್‌ಗಳು ಮತ್ತು ಆರ್ಕಿಡ್ ರಿಸರ್ವ್ ದಳಗಳಿಂದ ಫ್ಯೂಡಿ ಜಾಯ್ ಎಂಬ ಸಂತೋಷ ಸೂಚಕ ರೌಂಡ್‌ಗಳೂ ಹಾರಿಸಲ್ಪಟ್ಟುವು. ನಂತರ ಪ್ರಭುಗಳಿಗೆ [illegible] ಗಳನ್ನು ಒಪ್ಪಿಸಲಾಯಿತು. ವೈದಿಕರುಗಳು ಫಲ ಮಂತ್ರಾಕ್ಷತೆಗಳನ್ನು ಸಮರ್ಪಿಸಿದರು.

ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ ಮೇದಪ್ಪ, ಹಿರಿಯ ಶಾಸನ ಸಭೆಯ ಅಧ್ಯಕ್ಷ ಶ್ರೀ ಕೆ ಟಿ ಭಾಷ್ಯಂ, ಕಿರಿಯ ಸಭಾಧ್ಯಕ್ಷ ಶ್ರೀ ಹೆಚ್ ಸಿದ್ದಯ್ಯ ಮತ್ತು ಸರದಾರರುಗಳು ಮಹಾರಾಜರಿಗೆ ನಜರು ಒಪ್ಪಿಸಿದರು.

ದರ್ಬಾರಿಗೆ ಮುಖ್ಯ ಮಂತ್ರಿಯವರು ವಿನಹ ಉಳಿದ ಮಂತ್ರಿಗಳೆಲ್ಲರೂ, ಇಲಾಖಾಧಿಕಾರಿಗಳೂ, ಅನೇಕ ಆಹ್ವಾನಿತರೂ ದಯಮಾಡಿಸಿದ್ದರು. ಎಲ್ಲರನ್ನೂ ಗಂಧ ಪುಷ್ಪತಾಂಬೂಲಗಳಿಂದ ಸತ್ಕರಿಸಿ ಬೀಳ್ಕೊಡಲಾಯಿತು. ಆಸನಗಳನ್ನು ಮಾಮೂಲಿನಂತೆಯೇ ವಿಂಗಡಿಸಲಾಗಿದ್ದಿತು.

### ಪುನಃ ಕೆ. ಆರ್ ಪ್ರಸಾದರ ಉಪವಾಸವೇ ?

ರಾಜಧಾನಿಯ ಸರ್ಕಾರಿ ರೇಷ್ಮೆ ಕಾರ್ಖಾನೆ ಕಾರ್ಮಿಕರುಗಳ ಸಂಘದ ಅಧ್ಯಕ್ಷರಾದ ಶ್ರೀ ಕೆ. ಆರ್ ಪ್ರಸಾದ್‌ರವರು ಕಳೆದ ೫ ನೇ ತಾ|| ಉಪವಾಸವನ್ನು ನಿಲ್ಲಿಸಿದರಷ್ಟೆ. ಕಾರ್ಖಾನೆಯ ಆಡಳಿತ ಮಂಡಲಿಯವರ ಬಗ್ಗೆ ಮಾಡಲಾಗಿರುವ ಆರೋಪಣೆಗಳನ್ನು ಕುರಿತು ವಿಚಾರಣೆ ನಡೆಸುವುದಾಗಿ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಜಿಲ್ಲಾಧಿಕಾರಿಗಳ ಮೂಲಕ ಭರವಸೆಯಿತ್ತುದಾಗಿಯೂ, ಆದ್ದರಿಂದ ಉಪವಾಸವನ್ನು ಅವರು ಮುಕ್ತಾಯ ಮಾಡಿದರೆಂದೂ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಇದೇ ೧೫ ನೇ ತಾ|| ನ ಒಳಗಾಗಿ ನಿಷ್ಪಕ್ಷಪಾತವಾದ ವಿಚಾರಣೆಯು ನಡೆಯದಿದ್ದರೆ ಶ್ರೀ ಕೆ ಆರ್ ಪ್ರಸಾದ್‌ರವರು ಪುನಃ ಉಪವಾಸವನ್ನು ಆರಂಭಿಸುವರೆಂದು ತಿಳಿದುಬಂದಿದೆ.

## ನಿವೃತ್ತ ನೀರಿನ ಕೆಲಸಗಾರರಿಂದ ಭಿಕ್ಷಾಟನಾ ಸತ್ಯಾಗ್ರಹ

ಮೈಸೂರು ೮

ನಗರದ ನೀರು ಸರಬರಾಜು ಇಲಾಖೆಯಲ್ಲಿದ್ದು ನಿವೃತ್ತರಾದ ೧೨ ಜನ ಮಾಜಿ ನೌಕರರು ನೆನ್ನೆ ಸಯ್ಯಾಜಿರಾವ್ ರಸ್ತೆ ಮುಂತಾದ ಕಡೆ ಭಿಕ್ಷಾಟನಾ ಸತ್ಯಾಗ್ರಹವನ್ನು ನಡೆಸಿದರು. ಅವರುಗಳ ಮುಖಂಡತ್ವವನ್ನು ಪೌರಸಭಾ ಸದಸ್ಯರೂ, ಸಂಘದ ಅಧ್ಯಕ್ಷರೂ ಆದ ಜ|| ಮಿರ್ ನೂರ್ ಹುಸೇನ್‌ರವರು ವಹಿಸಿದ್ದರು. ಅವರುಗಳು ಮೆರವಣಿಗೆಯಲ್ಲಿ ಹೊರಟು ಹಲವು ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು. ಭಿಕ್ಷಾಟನೆಯಿಂದ ಸುಮಾರು ೪೬ ರೂ ಗಳು ವಸೂಲಾದವೆಂದು ಗೊತ್ತಾಗಿದೆ. ಮೆರವಣಿಗೆಯಲ್ಲಿ ನೀರಿನ ಕೆಲಸಗಾರರ ಸಂಘದ ಸದಸ್ಯರು, ಹೋಟೆಲು ಕೆಲಸಗಾರರು ಮುಂತಾಗಿ ೧೫೦ ಮಂದಿ ಇದ್ದರು. ಮೆರವಣಿಗೆಯವರು ಪ್ರಭುದೇವಾ ಟಾಕೀಸ್ ಎದುರಿನ ಮೈದಾನದಲ್ಲಿ ಸಭೆ ನಡೆಸಿದರು. ಶ್ರೀಗಳಾದ ಮಿರ್ ನೂರ್ ಹುಸೇನ್, ಕೆ ವಿಶ್ವನಾಥ್, ವೇದಾಂತಂ ಹೆಮ್ಮಿಗೆ ಮತ್ತು ಟಿ ವಿ ಶ್ರೀನಿವಾಸರಾಯರು ಮಾತನಾಡಿ, ಕೆಲಸಗಾರರಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಪೌರಸಭೆಯವರ ತಾತ್ಸಾರ ಭಾವನೆಯನ್ನು ಖಂಡಿಸಲಾಯಿತು.

### ಸಂಗೀತ ಶಾಲೆಯ ಆರಂಭ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯವರು ಮಹಿಳೆಯರಿಗಾಗಿ ತಮ್ಮ ಎರಡನೇ ಶಾಖೆಯನ್ನು ನಾಳೆ ಸಂಜೆ ೫ ಗಂಟೆಗೆ ಚಾಮರಾಜ ಅಗ್ರಹಾರದ ೧೧೮೩ ನೇ ನಂಬರು ಮನೆಯಲ್ಲಿ ತೆರೆಯುವವರು. ವರ್ತಮಾನ ಪತ್ರಿಕೆ ಸಂಪಾದಕರಾದ ಶ್ರೀ ಎಂ ಎಲ್ ತಿಮ್ಮಯ್ಯನವರು ಅಧ್ಯಕ್ಷತೆ ವಹಿಸುವರು. ಗಾಯಕ ಎಸ್ ವಿ ಅಶ್ರಫ್‌ರವರಿಂದ ಹಿಂದೂಸ್ತಾನಿ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು.

## ರೆಡ್ಡಿ ಪಾರ್ಟಿ ಎಂದು ಕರೆಯಲು ಕೆ. ಸಿ. ರೆಡ್ಡಿಯವರ ಪ್ರತಿಭಟನೆ

ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಭದ್ರಾವತಿ ತಾಲ್ಲೂಕು ಕಾಂಗ್ರೆಸ್ ಕಛೇರಿಯಲ್ಲಿ ಮಾತನಾಡಿ, ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನವರು ರೆಡ್ಡಿ ಪಾರ್ಟಿ ಎನ್ನುವುದೆಂದು ಹೇಳುವುದನ್ನು ಖಂಡಿಸಿದರು. ಅಂತಹ ಪಕ್ಷವಾವುದೂ ಇಲ್ಲವೆಂದು ಅವರು ಹೇಳಿ, ತಾವು ಕಾಂಗ್ರೆಸ್ಸಿಗೆ ಸೇರಿದವರೆಂದೂ, ತಮ್ಮ ನಿಷ್ಠೆ ಆ ಸಂಸ್ಥೆಗೆ ಮಾತ್ರವಿರುವುದೆಂದು ಅವರು ತಿಳಿಸಿದರು.

## ಕೋರ್ಟು ರಿಕಾರ್ಡುಗಳು ಇಲಿ ಪಾಲಾಗದಿರಲು ಬೆಕ್ಕಿಗೆ ನೌಕರಿ!

ಪಾಕಿಸ್ತಾನ ಪಂಜಾಬಿನ ಒಂದು ಜಿಲ್ಲಾ ಕೋರ್ಟಿನಲ್ಲಿ ರಿಕಾರ್ಡುಗಳನ್ನು ಇಲಿಗಳ ಹಾವಳಿಯಿಂದ ತಪ್ಪಿಸಲು, ತಿಂಗಳಿಗೆ ೪ ರೂ. ಸಂಬಳದ ಮೇಲೆ ಬೆಕ್ಕೊಂದನ್ನು ಸಾಕುವುದಕ್ಕಾಗಿ ಕೋರ್ಟಿನ ಅಧಿಕಾರಿಯೊಬ್ಬರು ಸರ್ಕಾರದ ಅನುಮತಿ ಬೇಡಿರುವರೆಂದು ವರದಿಯಾಗಿದೆ.

## ನಗರದಲ್ಲಿ ಪೈಲ್ವಾನರು ಮತ್ತು ಕುಸ್ತಿ ಬೆಂಬಲಗಾರರ ಮೆರವಣಿಗೆ

### ಎಸ್. ಚನ್ನಯ್ಯ ಮತ್ತು ಇನ್ನಿಬ್ಬರಿಗೆ ಪೆಟ್ಟು

### ಅರಮನೆ ಮುಂದೆ [illegible] ಕುಸ್ತಿಗೆ ಅವಕಾಶವಿತ್ತ ಬಗ್ಗೆ ಪ್ರತಿಭಟನೆ

ಮೈಸೂರು ೮

ನಗರದ ಮತ್ತು ಸುತ್ತಮುತ್ತಲ ಪ್ರದೇಶಗಳ ಹಲವು ಪೈಲ್ವಾನರು ಮತ್ತು ಕುಸ್ತಿಯಲ್ಲಿ ಆಸಕ್ತಿಯುಳ್ಳ ಸುಮಾರು ೩೦೦ ಜನರು ಈ ದಿನ ಮೆರವಣಿಗೆಯೊಂದನ್ನು ನಡೆಸಿದಾಗ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ, ಕುಸ್ತಿ ಸಂಘದ ಅಧ್ಯಕ್ಷರೂ, ಆದ ಶ್ರೀ ಎಸ್ ಚನ್ನಯ್ಯ, ಕುಸ್ತಿ ಸಂಘದ ಕಾರ್ಯದರ್ಶಿ ಶ್ರೀ ಎ. ಶಿವಣ್ಣ ಮತ್ತು ಶ್ರೀ ಎಲ್ ಗೋಪಾಲರಾಯರಿಗೆ ಕಾಂಗ್ರೆಸ್ ಕಛೇರಿ ಬಳಿ ಏಟು ಬಿದ್ದಿತೆಂದು ವರದಿಯಾಗಿದೆ. ಶ್ರೀ ಚನ್ನಯ್ಯನವರಿಗೆ ತಲೆಮೇಲೆ ಸ್ವಲ್ಪ ಗಾಯವಾಗಿದೆ. ಶ್ರೀ ಶಿವಣ್ಣ ಮತ್ತು ಗೋಪಾಲರಾಯರಿಗೆ ಸ್ವಲ್ಪ ಪೆಟ್ಟು ತಗುಲಿದೆ.

ಮೆರವಣಿಗೆಯವರು ಈ ಬೆಳಿಗ್ಗೆ ೧೧ ಗಂಟೆಗೆ ಅಠಾರಾ ಕಛೇರಿ ಮೈದಾನದ ಕಡೆಯಿಂದ ಹೊರಟು ರಸ್ತೆಗಳಲ್ಲಿ ಬರುತ್ತಿದ್ದಾಗ ಅಂಗಡಿಗಳನ್ನು ಮುಚ್ಚಿಸಲಾಯಿತೆಂದೂ, ಸಯ್ಯಾಜಿರಾವ್ ರಸ್ತೆಗೆ ಬಂದಾಗ ಶ್ರೀಯುತ ಎಲ್ ರಾಮಚಂದ್ರರಾಯರ ಅಂಗಡಿಗೆ ಹೋಗಿ ಅವರು ಧರಿಸಿದ್ದ ಖಾದಿ ಟೋಪಿಯನ್ನು ಕಿತ್ತು ಹಾಕಲಾಯಿತೆಂದೂ, ಕಾಂಗ್ರೆಸ್ ಕಛೇರಿಯಲ್ಲಿದ್ದ ಶ್ರೀ ಚನ್ನಯ್ಯನವರು ಉಳಿದವರೊಬ್ಬರೊಡನೆ ಅಲ್ಲಿಗೆ ಬಂದು, ಗುಂಪಿನವರನ್ನು ಸಂತೈಸಲು ಹಲವರು ಉದ್ರೇಕಗೊಂಡು ಅವರನ್ನು ಹೊಡೆದರೆಂದೂ ತಿಳಿದುಬಂದಿದೆ.

ಗಲಭೆಯ ಸುದ್ದಿಯನ್ನು ತಿಳಿದು, ಜಿಲ್ಲಾಧಿಕಾರಿಗಳೂ, ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರೂ, ನಗರದ ನ್ಯಾಯಾಧೀಶರೂ ಮತ್ತು ಇತರ ಪೋಲೀಸರೂ ಸ್ಥಳಕ್ಕೆ ಧಾವಿಸಿ ಬಂದರೆಂದೂ, ಅನಂತರ ಮೆರವಣಿಗೆಯವರು ಅಲ್ಲಿಂದ ಹೊರಟುಹೋದರೆಂದೂ ಹೇಳಲಾಗಿದೆ. ಟೌನ್‌ಹಾಲ್ ಮೈದಾನದಲ್ಲಿ ಅವರು ಸೇರಿ ಸಭೆ ನಡೆಸಿದರು. ಶ್ರೀಮನ್ಮಹಾರಾಜರ ಭಾವಚಿತ್ರವನ್ನು ಅಲ್ಲಿರುವ ಧ್ವಜ ಸ್ತಂಭಕ್ಕೆ ಎತ್ತರದಲ್ಲಿ ಕಟ್ಟಿ ಅದಕ್ಕೆ ಹೂ ಮಾಲೆಯನ್ನು ಹಾಕಿ ಕೆಳಗಡೆ ಭಾಷಣಗಳನ್ನು ಮಾಡಲಾಯಿತು. ಶ್ರೀ ಎ ಎಸ್ ವೆಂಕಟಸುಬ್ಬಯ್ಯ ಶರ್ಮರವರು ಮತ್ತು ಇತರರು ಮಾತನಾಡಿದರು.

ಅರಮನೆ ಮುಂದೆ ದಸರಾ ಮಹೋತ್ಸವಕಾಲದಲ್ಲಿ ನಡೆಯುವ ಕುಸ್ತಿ ಪಂದ್ಯಗಳಲ್ಲಿ ಹೊರಗಿನವರೊಡನೆ ಕುಸ್ತಿ ಮಾಡುವುದಕ್ಕೆ ಪೈಲ್ವಾನರು ನಿರಾಕರಿಸಿ, ಬಹು ಕಾಲದಿಂದಲೂ ತಾವೇ ಆ ಸ್ಥಳದಲ್ಲಿ ಕುಸ್ತಿ ಮಾಡುತ್ತಿರುವುದರಿಂದ ಅಲ್ಲಿ ಬೇರೆಯವರಿಗೆ ಅವಕಾಶವೀಯಕೂಡದೆಂಬುದೇ ಮೆರವಣಿಗೆಯವರ ಪ್ರತಿಭಟನೆಗೆ ಮುಖ್ಯ ಕಾರಣವಾಗಿದ್ದಿತೆಂದು ಹೇಳಲಾಗಿದೆ. ಇದೇ ರೀತಿ ಘೋಷಣೆಗಳನ್ನು ಅವರು ಮೆರವಣಿಗೆ ಸಮಯದಲ್ಲಿ ಮಾಡುತ್ತಿದ್ದರು.

## ಐಕ್ಯ ಕೇರಳಕ್ಕಿಂತ ಐಕ್ಯ ಭಾರತ ಮುಖ್ಯ

ಪಾಲಘಾಟಿನಲ್ಲಿ ಪ್ರಧಾನಿ ನೆಹರೂರವರು ಮಾತನಾಡಿ ಐಕ್ಯ ಕೇರಳ ಪ್ರಾಂತದ ಸ್ಥಾಪನೆ ವಿಷಯವು ಅತ್ಯಲ್ಪವಾದದೆಂದೂ, ತಮ್ಮ ಮನಸ್ಸು ಈಗ ಐಕ್ಯ ಭಾರತದ ಕಡೆಗೆ ಹರಿಯುತ್ತಿರುವುದೆಂದೂ ತಿಳಿಸಿರುತ್ತಾರೆ. ಐಕ್ಯ ಕೇರಳದ ವಿಷಯವು ಸಂಸ್ಥಾನಗಳ ಪುನರ್ವ್ಯವಸ್ಥಾ ಸಮಿತಿಯ ಮುಂದೆ ಬರಲಿರುವುದಾಗಿಯೂ ಅವರು ಹೇಳಿರುವರು.

## ಆಂಧ್ರ ಭಾಷೆಯನ್ನು ಬಳಸಲು ಸ್ವಾಮಿ ಸೀತಾರಾಂರ ಉಪವಾಸ

ಆಂಧ್ರ ಸಂಸ್ಥಾನದ ಪ್ರಾರಂಭೋತ್ಸವದ ಸಂಬಂಧವಾಗಿ ಸ್ವಾಮಿ ಸೀತಾರಾಂರವರು ತೆನಾಲಿಯಲ್ಲಿರುವ ತಮ್ಮ ವಿನಯಾಶ್ರಮದಲ್ಲಿ ಕಳೆದ ಗನೇ ತಾ|| ನಿಂದ ಉಪವಾಸವನ್ನು ಈ ಮೊದಲೇ ಸೂಚಿಸಿದ್ದಂತೆ ಆರಂಭ ಮಾಡಿರುತ್ತಾರೆ. ಅವರು ಈ ದಿನ ಉಪವಾಸವನ್ನು ಮುಕ್ತಾಯ ಮಾಡುವರು. [illegible]

### ಸಂಗೀತ

ರಾಜಧಾನಿಯ ವಾಣಿವಿಲಾಸ ಮಾರ್ಕೆಟ್ಟಿನ [illegible] ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ [illegible] ಗಂಟೆಗೆ ಶ್ರೀ ಎಂ. ವಿ. ರಾಘವನ್ ಮತ್ತು ಶ್ರೀ ಪಿ. ನಾಗರಾಜುರವರ ಸಂಗೀತವನ್ನು ಏರ್ಪಡಿಸಲಾಗಿದೆ.

### ಪ್ರಜಾ ಸಂಘದ ಸದಸ್ಯತ್ವಕ್ಕೆ ರಾಜೀನಾಮೆ

ರಾಜಧಾನಿಯ ಪ್ರಜಾ ಸಂಘದ ಸದಸ್ಯತ್ವಕ್ಕೆ ಸಂಘದ ಮಾಜಿ ಕಾರ್ಯದರ್ಶಿ ಶ್ರೀ ಎಂ. ಕೆ. ನರಸಿಂಹಯ್ಯನವರು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಪಕ್ಷದ ಮುಖಂಡರಾದ ಶ್ರೀ ಎ. ವೆಂಕಟೇಶಯ್ಯನವರಿಗೆ ಅವರು [illegible] ಪತ್ರ ಬರೆದು, [illegible] ಸಂಘದ ಹಲವು ಮುಖಂಡರಿಂದಲೇ ಅದರ ಭವಿಷ್ಯಕ್ಕೆ ಕುಂದು ಬರುತ್ತಿರುವುದಾಗಿಯೂ ತಿಳಿಸಿರುತ್ತಾರೆ.

### ಬಾಯಿಲರುಗಳ ಇನ್‌ಸ್ಪೆಕ್ಟರ್

ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಿಗೆ ಶ್ರೀ ಎ. ಎಸ್. ವರದರಾಜ ಉರವರನ್ನು ಬಾಯಿಲರುಗಳ ಇನ್‌ಸ್ಪೆಕ್ಟರಾಗಿ ನೇಮಿಸಲಾಗಿದೆ.

### ಹಿಂದಿ ಪ್ರಚಾರ ಸಭೆಯ ಅಧಿಕಾರ ವರ್ಗ

[illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಜಿಬ್ರಾಲ್ಟರನ್ನು ಸ್ಪೇನಿಗೆ ವಾಪಸು ಮಾಡಲು ಪ್ರದರ್ಶನ

ಸ್ಪೇನಿಗೆ ಜಿಬ್ರಾಲ್ಟರ್ ರೇವು ನಗರವನ್ನು ವಾಪಸು ಕೊಡುವಂತೆ ಒತ್ತಾಯಪಡಿಸಲು [illegible] ಲಕ್ಷ ಸ್ಪಾನಿಷ್ ಜನರು ಅಲ್ಲಿನ ರಾಜಧಾನಿ ಮ್ಯಾಡ್ರಿಡ್ಡಿನಲ್ಲಿ ಹೋದ ವಾರ ಪ್ರದರ್ಶನ ನಡೆಸಿದರು. ಜನರಲ್ ಫ್ರಾಂಕೋರವರು ಅಧಿಕಾರಕ್ಕೆ [illegible] ಸಂಬಂಧವಾಗಿ ಅವರು ಅಲ್ಲಿನ [illegible] ಮುಂದೆ ಹರ್ಷ ವ್ಯಕ್ತಪಡಿಸಲು ಸೇರಿದ್ದಾಗ [illegible] ಘೋಷಣೆಗಳನ್ನು ಮಾಡಲಾಯಿತು.

## ದತ್ತೂರಿ ಬೀಜ ಮಿಶ್ರಿತ ಆಸ್ಟ್ರೇಲಿಯಾ ಜೋಳ

ಇತ್ತೀಚೆಗೆ ಆಸ್ಟ್ರೇಲಿಯಾದಿಂದ ಭಾರತಕ್ಕೆ [illegible] ಜೋಳವನ್ನು [illegible] ಅಲ್ಲಿನ ಬಂದರಿನಲ್ಲಿ [illegible] ಇಳಿಸಲಾಗುತ್ತಿರುವುದೆಂದೂ, ಆ ಜೋಳದ ಮೂಟೆಗಳಲ್ಲಿ ವಿಷಪೂರಿತ ದತ್ತೂರಿ ಬೀಜಗಳಿರುವುದ [illegible] ಗೊತ್ತಾಗಿದೆ. [illegible] ಎಂದು ಹೇಳಲಾಗಿದೆ.

## ಯುವಕರ ಸಮ್ಮೇಳನ

ರಾಬರ್ಟ್‌ಸನ್‌ಪೇಟೆಯಲ್ಲಿ [illegible] ಯುವಕರ ಸಮ್ಮೇಳನವು ಶ್ರೀ ಹೆಚ್. ಕೆ. ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಸಚಿವ ಶ್ರೀ ಕೆ. ಸಿ. ರೆಡ್ಡಿಯವರು [illegible]

### ಕುರುಡ ಮೂಗರ ಶಾಲೆಗೆ ಪಿಟೀಲುಗಳ ದಾನ

ಸರ್ದಾರ್ [illegible] ಅರಸಿನವರು ರಾಜಧಾನಿಯ ಕಿವುಡ ಮೂಗರ ಶಾಲೆಗೆ [illegible] ಅವರುಗಳನ್ನು ಸತ್ಕರಿಸಿದ್ದಲ್ಲದೆ, [illegible] ಶಾಲೆಗೆ [illegible] ಪಿಟೀಲುಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ.


## ಅಮೋಘ ಪ್ರಾರಂಭ

ನಾಟಕರತ್ನ ಜಿ. ಎಚ್. ವೀರಣ್ಣನವರ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ
**ಗುಬ್ಬಿ ಥಿಯೇಟ್ರಿಕಲ್ ಕಂಪೆನಿ,**
ತಾ. 9-10-53ರಂದ ರಾತ್ರಿ 10 ಘಂಟೆಗೆ ಶಿವರಾಂಪೇಟೆ [illegible] ಥಿಯೇಟರಿನಲ್ಲಿ
ಅಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯನವರ
**ಸಾಹುಕಾರ್**
ಎಂಬ ನಾಟಕವನ್ನು [illegible]

## ಬೇಕಾಗಿದ್ದಾರೆ

ಒಳ್ಳೆಯ ಅನುಭವಸ್ಥರಾದ ಒಬ್ಬ ರೈಸ್ ಮಿಲ್ ಡ್ರೈವರ್ ಮತ್ತು ಒಬ್ಬ ಬಾಯ್ಲರ್ ಮ್ಯಾನ್ ಬೇಕಾಗಿದ್ದಾರೆ. ಅನುಭವಸ್ಥರು ತಮ್ಮ ಸರ್ಟಿಫಿಕೇಟುಗಳೊಂದಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —
**ಶ್ರೀ ಗಜಾನನ ರೈಸ್ ಅಂಡ್ ಆಯಿಲ್ ಮಿಲ್ಸ್, ಲಿಮಿಟೆಡ್,**
ಮೈಸೂರು


## ಭಾರತೀಯ ಸೈನಿಕರನ್ನಟ್ಟಲು ಕೊರಿಯಾ ಸ್ವಯಂ ಸೇವಕರು

ಕೊರಿಯಾ ಯುದ್ಧ ಬಂದಿಗಳ ಶಿಬಿರದಲ್ಲಿ, ಸ್ವದೇಶಕ್ಕೆ ಹೋಗಲಿಚ್ಛಿಸದ ಬಂದಿಗಳ ಮೇಲ್ವಿಚಾರಣೆಯಲ್ಲಿರುವ ಭಾರತದ ಸೈನಿಕರು ಬಂದಿಗಳ ಬಗ್ಗೆ ತೃಪ್ತಿಕರವಾಗಿ ವರ್ತಿಸುತ್ತಿಲ್ಲವೆಂದು ಆಕ್ಷೇಪಿಸಿ ದಕ್ಷಿಣ ಕೊರಿಯಾ ಸರ್ಕಾರದವರು ತಟಸ್ಥ ರಾಷ್ಟ್ರಗಳ ಸಮಿತಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ. [illegible] ಭಾರತೀಯ ಸೈನ್ಯಗಳನ್ನು ಹೊರದೂಡಲು ದಕ್ಷಿಣ ಕೊರಿಯದ ಸ್ವಯಂ ಸೇವಕ ಪಡೆ [illegible] ದಕ್ಷಿಣ ಕೊರಿಯದ ಶಾಸನ ಸಭೆಯಲ್ಲಿ [illegible] ಪ್ರಧಾನಿ [illegible] ತಿಳಿಸಿರುವರು.

### ಗರಡಿ ಉಸ್ತಾದರುಗಳ ಸಭೆ

ರಾಜಧಾನಿಯ ದಸರಾ ವಸ್ತು ಪ್ರದರ್ಶನದಲ್ಲಿ [illegible] ಗರಡಿಗಳ ಉಸ್ತಾದರು ಮತ್ತು [illegible] ಸಭೆಯು [illegible] ಗಂಟೆಗೆ ನಗರ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದು. [illegible] ಕೋರಿದ್ದಾರೆ.

### ಗಣಪತಿ ವಿಸರ್ಜನೋತ್ಸವ

ರಾಜಧಾನಿಯ [illegible] ಶ್ರೀ ವಿದ್ಯಾ ಗಣಪತಿ [illegible] ಶ್ರೀ ಗಣಪತಿ ಉತ್ಸವವು [illegible] ನಡೆದು [illegible] ಗಂಟೆಗೆ [illegible] ದೇವರ ಮೆರವಣಿಗೆಯಾದ ನಂತರ ಶ್ರೀ [illegible] ವಿಸರ್ಜಿಸಲಾಗುವುದು. ಸಾರ್ವಜನಿಕರು ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರಲಾಗಿದೆ.


ಬೆಂಗಾಲ್ ಲ್ಯಾಂಪ್ಸ್
ದೇಶದ ಅತ್ಯುತ್ತಮ ಲ್ಯಾಂಪ್ಸ್
Bengal
Please visit our stall
No 13-14 E BLOCK
MYSORE DASARA EXHIBITION


Edited, Printed and Published by A R Nagarajan at Sadhvi Press D Subbiah Road Mysore

## ವಿಮಾನದಲ್ಲಿ ನಾಗರಹಾವು

ಕಳೆದ ೩ನೇ ತಾರೀಖು ಸಿಂಹಳದ [illegible] ಎಂಬ ನಿಲ್ದಾಣದಿಂದ ಹೊರಟಲಿದ್ದ ಬ್ರಿಟಿಷ್ ಕಾಮೆಟ್ ವಿಮಾನವೊಂದರಲ್ಲಿ ಕುಳಿತಿದ್ದ ಪ್ರಯಾಣಿಕರೊಬ್ಬರು ಅದರೊಳಗಿದ್ದ ಒಂದು ನಾಗರಹಾವನ್ನು ಕಂಡು ಕೂಗಿಕೊಂಡರೆಂದೂ, ಒಡನೆಯೇ [illegible] ಯನ್ನು ಹುಡುಕಿ ಸರ್ಪವನ್ನು ಕೊಲ್ಲಲಾಯಿತೆಂದೂ ವರದಿಯಾಗಿದೆ.

### ನೀರಿನ ಕೆಲಸಗಾರರ ಮುಷ್ಕರಕ್ಕೆ ಸಹಾನುಭೂತಿ

ರಾಜಧಾನಿಯ ನಿಯೋ ಹೋಟೇಲ್ ಕೆಲಸಗಾರರ ಸಂಘದ ಸಭೆಯು ಶ್ರೀ [illegible] ರಂಗಣ್ಣರವರ ಅಧ್ಯಕ್ಷತೆಯಲ್ಲಿ ಸೇರಿ [illegible] ತಾರೀಕಿನಿಂದ ನಡೆಯುತ್ತಿರುವ ನೀರಿನ ಕೆಲಸಗಾರರ ಮುಷ್ಕರಕ್ಕಾಗಿ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು. [illegible] ಹೋಟೇಲುಗಳ ಮಾಲೀಕರು ಕೆಲಸಗಾರರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿದರು.

[illegible] ಶ್ರೀ [illegible] ಹೊಸ್ಮನೆ [illegible] ಹೊನ್ನಗುಡಿಯ ಈಶ್ವರಪ್ಪ ಎಂಬುವರು ಪತ್ರ ಬರೆದು, ಕರ್ನಾಟಕ ಏಕೀಕರಣದ ಬಗ್ಗೆ ಮುಖಂಡರ ತಾತ್ಸಾರಕ್ಕಾಗಿ ಪ್ರತಿಭಟಿಸಲು ಶ್ರೀ [illegible] ಮನೆ ಮುಂದೆ ಉಪವಾಸ ಮಾಡುವುದಾಗಿ ತಿಳಿಸಿರುತ್ತಾರೆ.


ಅಮೋಘ ಪ್ರಾರಂಭ
**ಶ್ರೀ ರಾಜರಾಜೇಶ್ವರಿ ನಾಟಕ ಮಂಡಲಿ,**
[illegible]
ಮೈಸೂರು ಟೌನ್‌ಹಾಲಿನಲ್ಲಿ
10-10-53 ನೇ ರಾತ್ರಿ 10 ಘಂಟೆಗೆ
ಗೌರವಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ ಸಹರ [illegible] ಅಧ್ಯಕ್ಷತೆಯಲ್ಲಿ
**ತಾರಾಶಶಾಂಕ**
ಎಂಬ ತೆಲುಗು ನಾಟಕವನ್ನು [illegible]

**ಒಲಂಪಿಯಾ ಟಾಕೀಸ್**
9-10-53 ರಂದ [illegible] ಶುಕ್ರವಾರ
ಅಲ್ಲಾದ್ ಚಿತ್ರ ದವರ ಹಿಂದಿ ಚಿತ್ರ **ನನ್ನೆಮುನ್ನೆ**
[illegible]
3 ದಿನಗಳು ಪ್ರದರ್ಶಿಸಲಾಗುತ್ತ
ದಿನಗಳ ಪ್ರದರ್ಶನ ಪ್ರತಿ ದಿನ 10-30
[illegible]

**ಶ್ರೀ ಚಾಮುಂಡೇಶ್ವರಿ ಟಾಕೀಸ್**
ದಸರಾ ಮಹೋತ್ಸವದ ವಿಶೇಷ ಆಕರ್ಷಣೆ
9-10-53 ರಂದ : ಶುಕ್ರವಾರ
ವಿನೋದಾರವರ ತಮಿಳು ಚಿತ್ರ * **ದೇವದಾಸ್** *
(ಸುಪ್ರಸಿದ್ಧ ಬಂಗಾಳಿ ಲೇಖಕ ಶರತ್‌ಬಾಬುರವರ ಅಮೋಘ ಕಲಾಕೃತಿಯ ಅನುವಾದ)
ಪಾತ್ರ ವರ್ಗ — ಸಾವಿತ್ರಿ, ಲಲಿತ, ನಾಗೇಶ್ವರರಾವ್ [illegible] ಮೊದಲಾದವರು

**SREE GANESHA TALKIES**
Gala Release On 7-10-53 Daily 3 Shows
The Real 3 DIMENSIONS Full Length [illegible] Picture
**BWANA DEVIL**
Along with the above Walcott and Marciano BOXING DUEL also in 3 DIMENSIONS is being shown
As an additional attraction 1953 Republic Day Celebrations at Delhi also in colour is being shown Every Patriot must and should see

ರಿಜಿಸ್ಟರ್ಡ್ ನಂ. 798

ಮೈಸೂರು ಸಾ|| ಸಿಲ್ಕ್ ಸೀರೆಗಳು
ಅಸ್ಲಿ ಸೀರೆಗಳು ಮತ್ತು ಜರತಾರಿ ಕೆಲಸದ ಸೀರೆಗಳಿಗೆ
ಧರ್ಮಾವರಂ, ಬೆಂಗಳೂರು, ನಾಗಪುರ,
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು. ಪೋನ್ 446

|| ಸಂಸ್ಥಾಪಕ ||

# ಸಾಧ್ವಿ

SADHVI : LEADING NATIONALIST DAILY OF MYSORE

ಸಂಪುಟ ೨೨ ] MYSORE FRIDAY 9-10-1953 : ಮೈಸೂರು : ಶುಕ್ರವಾರ ೯-೧೦-೧೯೫೩ [ ಸಂಚಿಕೆ ೭೩

ಚಂದಾದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

# ಅರಮನೆ ಕೋಟೆ ಬಳಿ ಗುಂಡಿನಿಂದ ನಾಲ್ವರ ಮರಣ

## ಅರಮನೆ ಕೋಟೆ ಬಳಿ ಗುಂಡಿನ ಪ್ರಕರಣ

### ೪ ಜನರ ಮರಣ; ೧೩ ಜನರಿಗೆ ಗಾಯ

ಹರಿಜನರ ಕುಸ್ತಿಗೆ ಅವಕಾಶ ಕೊಟ್ಟುದರ ಬಗ್ಗೆ ಪ್ರತಿಭಟನೆಯ ಪರಿಣಾಮ

ಮೈಸೂರು ೯

ನಗರದ ಹಲವು ಗರಡಿಗಳ ಮತ್ತು ಹಳ್ಳಿಗಳ ಪೈಲ್ವಾನರು ಮತ್ತು ಕುಸ್ತಿ ಪ್ರೇಮಿಗಳ ನೆನ್ನೆಯ ಪ್ರದರ್ಶನವು ಸಂಜೆ ಇದ್ದಕ್ಕಿದ್ದಂತೆಯೇ ಉಲ್ಬಣಿಸಿ, ಕೊನೆಗೆ ಅರಮನೆಯ ದಕ್ಷಿಣ ದ್ವಾರದ ಬಳಿ ರಿಸರ್ವ್ ಪೋಲೀಸರು ಗುಂಪಿನ ಮೇಲೆ ಗುಂಡು ಹಾರಿಸಿ ಚದುರಿಸಬೇಕಾಗಿ ಬಂದಿತು. ಗುಂಡಿನ ಪ್ರಕರಣದಲ್ಲಿ ಸ್ಥಳದಲ್ಲೇ ಇಬ್ಬರು ಸತ್ತು, ಆಸ್ಪತ್ರೆಗೆ ಕೊಂಡೊಯ್ಯುವಾಗ ಇನ್ನೊಬ್ಬನು ಮಡಿದನೆಂದೂ, ೧೩ ಮಂದಿಗೆ ಗಾಯವಾದುದಾಗಿಯೂ ವರದಿಯಾಗಿದೆ. ರಾತ್ರಿ ಆಸ್ಪತ್ರೆಯಲ್ಲಿ ಇನ್ನೊಬ್ಬನು ಮಡಿದಿರುವುದಾಗಿಯೂ, ಅವರನ್ನು ಉಳಿಸಲು ಎಷ್ಟು ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲವೆಂದೂ ಹೇಳಲಾಗಿದೆ.

ಸಂಜೆ ಬೌನ್ಹಾಲಿನ ಮೈದಾನದಲ್ಲಿ ಸಭೆಯನ್ನು ಮುಗಿಸಿಕೊಂಡು ಅರಮನೆ ಕೋಟೆಯ ಕಡೆಗೆ ಗುಂಪು ಹೋಯಿತೆಂದೂ, ಜಿಲ್ಲಾಧಿಕಾರಿಗಳೂ, ಪೋಲೀಸು ಸೂಪರಿಂಟೆಂಡೆಂಟರೂ ಮತ್ತು ಇತರ ಅಧಿಕಾರಿಗಳೂ ಅವರುಗಳನ್ನು ಸಂತೈಸಿ, ಸಂಜೆ ಅರಮನೆ ಮುಂದೆ ಕುಸ್ತಿಯ ಕಾರ್ಯಕ್ರಮವನ್ನು ರದ್ದು ಮಾಡಿರುವುದಾಗಿ ತಿಳಿಸಿದರೆಂದೂ, ನಂತರ ಗುಂಪಿನವರು ಅಲ್ಲಿಂದ ಚದುರಿ ದಕ್ಷಿಣದ ಕಡೆಗೆ ಹೊರಟರೆಂದೂ, ಈ ಮಧ್ಯೆ ಉದ್ರೇಕಕಾರಿಗಳ ಗುಂಪು ಮತ್ತೊಂದು ಕಡೆಯಿಂದ ಬಂದಿತೆಂದೂ ಹೇಳಲಾಗಿದೆ. ಅಧಿಕಾರಿಗಳ ಅಪ್ಪಣೆಗೆ ಮೊದಲು ಕಲೆ ಬಾಗಿದ್ದ ಗುಂಪಿನವರು ಏಕಾಏಕಿ ಪುನಃ ಅರಮನೆಯೊಳಗೆ ದಕ್ಷಿಣ ದ್ವಾರದಿಂದ ಪ್ರವೇಶಿಸಲು ಹೋದರೆಂದೂ, ಪೋಲೀಸು ವ್ಯಾನಿಗೂ ಪೋಲೀಸರಿಗೂ ಮರಗಳ ಕೊಂಬೆಗಳಿಂದಲೂ ಮತ್ತು ದೊಣ್ಣೆಗಳಿಂದಲೂ ಹೊಡೆದರೆಂದೂ, ಪುನಃ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಧಾವಿಸಿ ಬಂದು ಬಹುವಾಗಿ ಅವರನ್ನು ಪ್ರಾರ್ಥಿಸಿ, ಚದುರಬೇಕೆಂದು ತಿಳಿಸಿದರೂ ವಿಫಲವಾಗಿ, ಅವರ ಮೇಲೆಯೂ ಅವರಿಗೂ ಪೆಟ್ಟು ತಗುಲಿತೆಂದೂ ಹೇಳಲಾಗಿದೆ. ಪೋಲೀಸರು ಮೊದಲು ಲಾಠಿ ಪ್ರಹಾರವು ವ್ಯರ್ಥವಾಗಲು ಗುಂಡು ಹಾರಿಸಬೇಕಾಗಿ ಬಂದಿತು. ಗಾಯವಾದವರನ್ನು ಕೂಡಲೇ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಯಿತು. ಗುಂಡಿನೇಟು ಬಿದ್ದ ನಂತರ ಗುಂಪು ಚದುರಿತು.

ಈ ಮಧ್ಯೆ ಕನ್ನೇಗೌಡನ ಕೊಪ್ಪಲಿನಲ್ಲಿ ಗಲಭೆ ನಡೆಯುತ್ತಿದೆಯೆಂಬ ವದಂತಿ ಹರಡಿದುದರ ಮೇಲೆ ಗುಂಪಿನವರು ಅತ್ತಕಡೆಗೆ ಓಡಿದರು. ಪೋಲೀಸಿನವರೂ ಸಹ ವ್ಯಾನುಗಳೊಡನೆ ಅಲ್ಲಿಗೆ ಬಂದು ಸೇರಿದರು. ಸ್ವಲ್ಪ ಹೊತ್ತು ಉದ್ರೇಕ ಪರಿಸ್ಥಿತಿಯು ಇದ್ದು ಅನಂತರ ಎಲ್ಲವೂ ಶಾಂತವಾಯಿತು. ಅದರೂ ಅಧಿಕಾರಿಗಳೂ ಮತ್ತು ಕನ್ನೇಗೌಡನ ಕೊಪ್ಪಲಿನಲ್ಲಿ ರಾತ್ರಿಯೆಲ್ಲ ಶಸ್ತ್ರಸಜ್ಜಿತ ಪೋಲೀಸರು ಮೋಟಾರು ವ್ಯಾನುಗಳಲ್ಲಿ ಗಸ್ತು ತಿರುಗುತ್ತಿದ್ದರು.

ಈ ದಿನ ನಗರದಲ್ಲಿ ಪರಿಸ್ಥಿತಿಯು ಶಾಂತವಾಗಿರುತ್ತದೆ. ಗಲಭೆಯ ಪರಿಣಾಮವಾಗಿ ನೆನ್ನೆ ಅರಮನೆ ಮುಂದೆ ಕುಸ್ತಿಗಳು ನಡೆಯಲಿಲ್ಲ. ರಾಜಸಭೆ ಮಾತ್ರ ಮಾಮೂಲಿನಂತೆ ನಡೆಯಿತು. ಆದರೆ ಬಂದಿದ್ದವರ ಸಂಖ್ಯೆ ಬಹಳ ವಿರಳವಾಗಿತ್ತು. ಕೋಟೆಯ ಅಂಗಳದಲ್ಲಿ ಸೂಚಕಾಸಭೆ ಜನಸಂದಣಿ ವಿಶೇಷವಾಗಿರಲಿಲ್ಲ.

ನೆನ್ನೆ ಶ್ರೀ ಗಣಪತಿ ಎಸ್. ಚನ್ನಯ್ಯ, ಎ. ಕಿವಣ್ಣ ಮತ್ತು ಎ. ಗೋಪಾಲರಾಯರುಗಳಲ್ಲದೆ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣ, ಬಟ್ಟೆ ವರ್ತಕರ ಸಂಘದ ಅಧ್ಯಕ್ಷ ಶ್ರೀ ಕೆ. ಎಸ್. ಸತ್ಯನಾರಾಯಣರಾವ್, ಎಂ. ಆರ್. ಸಿ. ಬಸಪ್ಪ, ಯು. ಎಲ್. ರಾಮಚಂದ್ರರಾವ್ ಮುಂತಾದವರಿಗೂ ಪೆಟ್ಟುಗಳು ಬಿದ್ದುದಾಗಿ ಗೊತ್ತಾಗಿದೆ. ಕೋಟೆ ಬಳಿ ಘರ್ಷಣೆಯಲ್ಲಿ ಪೌರ ಸಭಾ ಕಮಿಷನರ್ ಶ್ರೀ ಎ. ಲಕ್ಷ್ಮಣರಾಯರಿಗೂ ಡಿ. ಎಸ್. ಪಿ. ಶ್ರೀ ಎಸ್. ಕೃಷ್ಣಮೂರ್ತಿಯವರಿಗೂ ಸಾಮಾನ್ಯವಾದ ಪೆಟ್ಟುಗಳು ಬಿದ್ದುವೆಂದು ತಿಳಿದು ಬಂದಿದೆ.

ಗಲಭೆಗಾರರು ಕೋಟೆಯ ಬಳಿ ಇರುವ ಅನೇಕ ಗಿಡಗಳ ಕೊಂಬೆಗಳನ್ನು ಮುರಿದುದಲ್ಲದೆ ವಿದ್ಯುಚ್ಛಕ್ತಿ ದೀಪಗಳ ಬಲ್ಬುಗಳನ್ನು ಒಡೆದ ವಿಶೇಷ ನಷ್ಟವುಂಟು ಮಾಡಿದರೆಂದು ಗೊತ್ತಾಗಿದೆ.

ಹರಿಜನರ ಗುಂಪು ಜೊತೆ ಕುಸ್ತಿಗಳನ್ನು ಅರಮನೆ ಮುಂದೆ ಈ ಸಾರಿ ನಡೆಸಲು ಅವಕಾಶ ಕೊಟ್ಟು, ಅಧಿಕಾರಿಗಳು ಅವರುಗಳ ಹೆಸರುಗಳನ್ನೂ ಸಹಾ ಪ್ರಕಟಿಸಿದ್ದರಿಂದ, ಇದಕ್ಕೆ ಸವರ್ಣ ಹಿಂದೂ ಗರಡಿಗಳ ಪೈಲ್ವಾನರುಗಳು ಮಾಡಿದ ಆಕ್ಷೇಪಣೆಯನ್ನು ತಳ್ಳಿಹಾಕಲಾಯಿತೆಂದೂ ಇದರ ಮೇಲೆ ಗರಡಿಗಳವರೆಲ್ಲರೂ ಬಹಿಷ್ಕಾರ ನಡೆಸಲು ನಿರ್ಧರಿಸಿದರೆಂದೂ ಹೇಳಲಾಗಿದೆ.

ಬೆಂಗಳೂರಿನ ಡಿ. ಎಸ್. ಪಿ. ಯವರಾದ ಶ್ರೀ ಎಂ. ಕೆ. ತಿಮ್ಮೇಗೌಡರ ನೇತೃತ್ವದಲ್ಲಿ ಅಲ್ಲಿಂದ ರಿಸರ್ವ್ ಪೋಲೀಸು ದಳವು ಬಂದಿರುತ್ತದೆ. ನಗರದ ಕಡೆಗೆ ಬರುವ ಎಲ್ಲ ರಸ್ತೆಗಳ ಆಯಕಟ್ಟಾದ ಪ್ರದೇಶಗಳಲ್ಲೂ ಪೋಲೀಸು ಕಾವಲು ಹಾಕಲಾಗಿದೆ.

ಪವಿತ್ರವಾದ ನವರಾತ್ರಿ ಉತ್ಸವದಲ್ಲಿ ಈ ಬಗೆಯ ವಿಷಾದ ಪ್ರಕರಣವು ಮೈಸೂರಿನ ಇತಿಹಾಸದಲ್ಲೇ ಹಿಂದೆಂದೂ ಸಂಭವಿಸಿರಲಿಲ್ಲ.

ಜಿಲ್ಲಾಧಿಕಾರಿಗಳೂ, ಡಿ. ಜಿ. ಪಿ. ಯವರೂ ಈ ದಿನ ಬೆಳಿಗ್ಗೆ ಕನ್ನೇಗೌಡನ ಕೊಪ್ಪಲಿನ ಮುಖ್ಯ ಅಧಿಕಾರಿಗಳೊಡನೆ ಯಜಮಾನರುಗಳನ್ನು ಕರೆಸಿಕೊಂಡು ಅವರೊಡನೆ ಮಾತುಕತೆ ನಡೆಸಿ, ಅವರುಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಭಾವ ಬೀರಿ ಶಾಂತಿ ಪಾಲನೆ ಬಗ್ಗೆ ಸಹಕರಿಸುವಂತೆ ಸೂಚಿಸಿದರೆಂದು ತಿಳಿದುಬಂದಿದೆ.

### ತಿರುವಾಂಕೂರು-ಕೊಚ್ಚಿಗೆ ಮೈಸೂರಿನ ಅಕ್ಕಿ

ತಿರುವಾಂಕೂರು ಕೊಚ್ಚಿ ಸಂಸ್ಥಾನಕ್ಕೆ ಮೈಸೂರಿನಿಂದ ಅಕ್ಕಿಯನ್ನು ತರಿಸಿಕೊಳ್ಳುವ ಬಗ್ಗೆ ಆಲ್ಲಿನ ಅಧಿಕಾರಿಗಳನ್ನು ಮೈಸೂರು ಸಂಸ್ಥಾನ ಸರ್ಕಾರ ಕೇಳಿಕೊಂಡಿದೆಯೆಂದು ಅಲ್ಲಿನ ಸಿವಿಲ್ ಸಪ್ಲೈ ಕಮಿಷನರಾದ ಶ್ರೀ ಥಾಮಸ್ ಮಂಜೂರಿಕ್ಕರವರು ತಿಳಿಸಿರುವರು.

## ತೊಣಚಿಕೊಪ್ಪಲಿನ ರಾಗಿಮೆದೆಗೆ ಬೆಂಕಿ

ಮೈಸೂರು ೯

ಇತ್ತೀಚೆಗೆ ಸ್ವಲ್ಪ ದೂರದಲ್ಲಿರುವ ತೊಣಚಿಕೊಪ್ಪಲಿನಲ್ಲಿ ರಾಗಿಯ ಒಂದು ಮೆದೆಗೆ ಈ ದಿನ ಬೆಳಿಗ್ಗೆ ಬೆಂಕಿ ಹತ್ತಿಕೊಂಡಿತು. ನಗರದ ಅಗ್ನಿಶಾಮಕದವರು ಕೂಡಲೇ ಹೋಗಿ ಬೆಂಕಿಯನ್ನು ಆರಿಸಿದರು. ಸ್ವಲ್ಪ ಮಟ್ಟಿಗೆ ನಷ್ಟ ಸಂಭವಿಸಿರುವುದಾಗಿ ಹೇಳಲಾಗಿದೆ. ಸುದ್ದಿಯನ್ನು ತಿಳಿದಕೂಡಲೇ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಎ. ವಿ. ಬಾಬರ್ ಶೆಟ್ಟಿ ಮತ್ತು ನಗರ ನ್ಯಾಯಾಧೀಶರಾದ ಶ್ರೀ ಎಂ. ಡಿ. ಶಿವನಂಜಪ್ಪನವರು ಸ್ಥಳಕ್ಕೆ ತೆರಳಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ಸ್ಥಳದಲ್ಲಿ ಪೋಲೀಸು ಕಾವಲು ಹಾಕಲಾಗಿದೆ.

ಮೈಸೂರು ಸೌತಿನ ಬಳಿ ಒಂದು ಮೆದೆಗೆ ಬೆಂಕಿ ಹಾಕಲಾಗಿದ್ದಿತೆಂದೂ ವಿಶೇಷ ನಷ್ಟ ಸಂಭವಿಸುವುದಕ್ಕೆ ಮುಂಚೆಯೇ ಅದನ್ನು ಆರಿಸಲಾಯಿತೆಂದೂ ತಿಳಿದು ಬಂದಿದೆ.

### ನಾಳೆ ವಸಂತಕುಮಾರಿಯವರ ರೇಡಿಯೋ ಸಂಗೀತ

ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ಭಾರತದ ಎಲ್ಲಾ ರೇಡಿಯೋಗಳಲ್ಲೂ ನಾಳೆ ರಾತ್ರಿ ಗಂಟೆಗೆ ಮದ್ರಾಸಿನ ಶ್ರೀಮತಿ ಎಂ. ಎಲ್. ವಸಂತಕುಮಾರಿಯವರ ಕರ್ನಾಟಕ ಸಂಗೀತವು ಪ್ರಸಾರವಾಗಲಿದೆ.

### ಆಕಾಶವಾಣಿಯಲ್ಲಿ ನವರಾತ್ರಿ ವಿಶೇಷ ಕಾರ್ಯಕ್ರಮ

ನವರಾತ್ರಿ ಸಂಬಂಧವಾಗಿ ಈ ರಾತ್ರಿ ೯|| ಗಂಟೆಗೆ ಮೈಸೂರು ರೇಡಿಯೋ ನಿಲಯದಿಂದ ವಿವಿಧ ಕಾರ್ಯಕ್ರಮಗಳನ್ನೇರ್ಪಡಿಸಲಾಗಿದೆ. ಚಾಮುಂಡೇಶ್ವರಿಯ ಮೇಲೆ ಸಂಗೀತ ಶಾಸ್ತ್ರ ವಿಶಾರದ ವಾಸುದೇವಾಚಾರ್ಯರ ವಿಶೇಷ ಕೃತಿ, ಶ್ರೀ ದೇವೀರಪ್ಪನವರಿಂದ ಭಾಷಣ, ಕರಿವಂಚಿ ಎಂಬ ವಿಷಯವಾಗಿ ಶ್ರೀ ವಿ. ಸುಬ್ಬಣ್ಣನವರಿಂದ ಚಿಕ್ಕ ನಾಟಕ ಮತ್ತು ೧೦ ವರ್ಷದ ಶ್ರೀ ಚಿಕ್ಕ ಚಾಮರಾಜೇಗೌಡ, ೧೦ ವರ್ಷದ ಶ್ರೀ ಸಿ. ಪದ್ಮ ಸಿಂಹಯ್ಯ ಮತ್ತು ೦೦ ವರ್ಷದ ಶ್ರೀಮತಿ ಟಿ. ಲಕ್ಷ್ಮಮ್ಮನವರಿಂದ ದಸರಾ ಬಗ್ಗೆ ಹಿಂದಿನ ಮತ್ತು ಇಂದಿನ ಅಭಿಪ್ರಾಯಗಳ ವಿವರಣೆ-ಇವು ಕಾರ್ಯಕ್ರಮಗಳು.

### ಬೆಂಗಳೂರಿನಲ್ಲಿ ಒಂದೇ ದಿನ ೩|| ಅಂಗುಲ ಮಳೆ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಪ್ರದೇಶದಲ್ಲಿ ನೆನ್ನೆ ರಾತ್ರಿ ಪ್ರಚಂಡ ಮಳೆಯು ಆರಂಭವಾಗಿ ಬಹಳ ಹೊತ್ತು ಬಂದು ೩.೬೬ ಅಂಗುಲಗಳಷ್ಟು ಬಿದ್ದುದಾಗಿಯೂ, ನಗರದ ಇತರ ಕಡೆಗಳಲ್ಲೂ ೩.೩೪ ಅಂಗುಲಗಳಷ್ಟಾಗಿದೆಯೆಂದೂ ಗೊತ್ತಾಗಿದೆ. ಕಳೆದ ೬೦ ವರ್ಷಗಳಿಂದ ಅಲ್ಲಿ ಇಂತಹ ಮಳೆ ಬಂದಿರಲಿಲ್ಲವೆಂದು ಹೇಳಲಾಗಿದೆ. ಮಳೆಯ ಪರಿಣಾಮವಾಗಿ ಒಬ್ಬನು ಸತ್ತು, ಮೂವರು ಗಾಯಗೊಂಡು, ಹಲವು ಗುಡಿಸಲು ಮತ್ತು ಮಣ್ಣಿನ ಮನೆಗಳು ನಾಶವಾಗಿವೆ. ಅನೇಕ ಶಾಂಪೌಂಡುಗಳು ಉರುಳಿವೆ. ಊರಿನ ಕೆಲ ಭಾಗದ ಕಡೆಗಳಲ್ಲಿ ನೀರು ತುಂಬಿ ತಗ್ಗಿನ ಪ್ರದೇಶಗಳಲ್ಲಿ ಜನರು ನಿರಾಶ್ರಿತರಾಗಿರುವರೆಂದು ಗೊತ್ತಾಗಿದೆ.

## ನಷ್ಟ ಕಾಮಗಾರಿ: ಮುಷ್ಕರವಿಲ್ಲ

### ಬೇಡಿಕೆಗಳ ಬಗ್ಗೆ ಒಪ್ಪಂದ

ಮೈಸೂರು ೯

ಸಂಸ್ಥಾನದ ಕಾರ್ಮಿಕ ಕಮಿಷನರಾದ ಶ್ರೀ ವಿ. ಎಸ್. ಕೃಷ್ಣಸ್ವಾಮಿ, ಮೈಸೂರು ಸರ್ಕಾರದ ಸೂಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ಕೆ. ಎಸ್. ಕೃಷ್ಣಸ್ವಾಮಿ ಮತ್ತು ಇತರ ಅಧಿಕಾರಿಗಳೊಡನೆ ನಡೆಸಿದ ಮಾತುಕತೆಯ ಫಲವಾಗಿ ಶ್ರೀ [illegible] ಹುಸೇನ್, ನಿಜಲಿಂಗಪ್ಪ ಮತ್ತು ಇತರರು ಇಂದು ಮುಷ್ಕರ ನಡೆಸದಿರುವ ತೀರ್ಮಾನಕ್ಕೆ ಬಂದರು. ಕಳೆದ ಸತ್ಯಾಗ್ರಹ ನಡೆಸಿದ್ದ ಮುಂದಿನ ಕಾರ್ಯಕ್ರಮ ಕೆಲಸಗಾರರಿಗೆ ತಾತ್ಕಾಲಿಕವಾಗಿ ೧೦೦೦ ರೂ. ಪರಿಹಾರ ಕೊಡಲು ತೀರ್ಮಾನವಾಗಿದ್ದು ಈ ಬಗ್ಗೆ ಕಾರ್ಮಿಕರುಗಳ ಬಗ್ಗೆ ಕೂಡ ಮುಂದಿನ ಬೇಡಿಕೆಗಳ ಬಗ್ಗೆ ಒಂದು ಪರಸ್ಪರ ತೃಪ್ತಿಕರವಾದ ವ್ಯವಸ್ಥೆ ಮಾಡಲಾಗುವುದೆಂದೂ ಹೇಳಲಾಗಿದೆ. ನಿವೃತ್ತ ನ್ಯಾಯಮೂರ್ತಿ ಶ್ರೀ ಚಿಕ್ಕ ಎಂ. ವಿ. ರವರಿಗೆ ಒಂದು ಪತ್ರದ ಮೂಲಕ ವಿವಾದ ದೊರೆತಿದೆ. ಕಾರಾಗೃಹಗಳಿಂದಾಗಿ ಪ್ರಿಂಟಿಂಗ್ ಕೆಲಸಗಾರರ ಮುಷ್ಕರವು ಜರುಗುವ ಸಂಭವವಿಲ್ಲವೆಂದೂ ಗೊತ್ತಾಗಿದೆ.

## ವಾಯು ಹಾವುಗಳಿಗೆ ಕಡವನವಾಗಿ ಎರಡೂ ಮೈ ಕಪಟ್ಟನ್ನು

ತಿರಚನ್ನಾಪಳ್ಳಿ ಬಳಿ ಇರುವ ಅಚಲಪುರ ಎಂಬ ಗ್ರಾಮದ ಸಾಯಂಕಾಲ ಒಬ್ಬ ಯುವಕನು ತನ್ನ ಮನೆ ಕಾಯುತ್ತಿದ್ದಾಗ ಮನೆಯೊಳಕ್ಕೆ ಹಾವು ಪ್ರವೇಶಿಸಿತು. ಮನೆಯೊಳಕ್ಕೆ ಹಾವು ನುಗ್ಗಿದ್ದನ್ನು ಕಂಡು ಅದನ್ನು ಹೊಡೆಯಲು ಹೋದ ಯುವಕನನ್ನು ಹಾವು ಕಚ್ಚಿತೆಂದೂ, ಎರಡು ಕಾಯಿಸಿ, ಸಾವಿನಿಂದ ಪಾರಾಗಲು ತೀವ್ರವಾಗಿ [illegible] ಮೃತಪಟ್ಟನೆಂದೂ ವರದಿಯಾಗಿದೆ.

## ಇನ್ಸ್‌ಪೆಕ್ಟರ್ ಜನರಲ್ ವರ್ಗ - ಸಿಡಿಲಿನ ಬಡಿತಕ್ಕೆ ಬಲಿ

ತಿರುವಾಂಕೂರಿನ ಬಳಿ, ಕೊಟ್ಟಾಯುವಿನ ಸಮೀಪದ ಹಳ್ಳಿಯೊಂದರ ಶಾಲೆಯಲ್ಲಿ ನೆನ್ನೆ ಮಧ್ಯಾಹ್ನ ಶಾಲೆಯ ಇನ್ಸ್‌ಪೆಕ್ಟರ್ ಬರುತ್ತಿದ್ದಾಗ ಸಿಡಿಲು ಬಡಿದು, ಐದು ಜನರು ಸ್ಥಳದಲ್ಲೇ ಮೃತಪಟ್ಟರೆಂದೂ, ಇನ್ನು ಆರು ಜನರು ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟರೆಂದೂ ವರದಿಯಾಗಿದೆ. ಅದೇ ವೇಳೆಯಲ್ಲಿ ಒಂದು ಹೈಸ್ಕೂಲಿನ ಶಾಲೆಗೂ ಸಿಡಿಲು ಬಡಿದು ಒಬ್ಬ ವಿದ್ಯಾರ್ಥಿಯು ಮೃತಪಟ್ಟು, ಇತರ ೧೩ ಜನರು ಗಾಯಗೊಂಡರು.

## ದ. ಕೊರಿಯಕ್ಕೆ ಎಚ್ಚರಿಕೆಗಾಗಿ ಅಮೆರಿಕಾವಿಗೆ ನೆಹರೂ ಸಂದೇಶ

ಕೊರಿಯಾ ಯುದ್ಧಕೈದಿಗಳ ರಕ್ಷಣೆಯಲ್ಲಿರುವ ಭಾರತೀಯ ಸೈನಿಕರ ಮೇಲೆ ಯಾವ ಕ್ರಮವನ್ನಾದರೂ ದಕ್ಷಿಣ ಕೊರಿಯವು ಕೈಗೊಂಡರೆ ಅದನ್ನು ಅಮೆರಿಕವು ವಿರೋಧಿಸುವುದೆಂದು, ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರೀಯವರಿಗೆ ಎಚ್ಚರಿಕೆ ನೀಡಬೇಕೆಂದು ಪ್ರಧಾನಿ ನೆಹರುರವರು ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರಿಗೆ ಸಂದೇಶ ಕಳುಹಿಸಿರುತ್ತಾರೆ.

## [illegible] ಕಾಲದಲ್ಲಿ ಅಂಗಡಿಗಳಿಗೆ ಸಿಬ್ಬಂದಿ ಕಾನೂನು ವಿನಾಯಿತಿ

ಮೈಸೂರು ೯

ದಸರಾ ಕಾಲದಲ್ಲಿ ನಗರದಕ್ಷಿರ ವ ಎಲ್ಲ ಅಂಗಡಿಗಳು ತೆರೆದಿರುವುದಕ್ಕೆ ಜಿಲ್ಲಾಧಿಕಾರಿಗಳು ಅಂಗಡಿ ಮತ್ತು ಸಿಬ್ಬಂದಿ ಕಾನೂನಿನ ವಿನಾಯಿತಿಯನ್ನು, ಹಲವು ಷರತ್ತುಗಳ ಮೇಲೆ ಕೊಟ್ಟಿರುತ್ತಾರೆ. ದಿನಕ್ಕೆ ೧೨ ಗಂಟೆಗಿಂತಲೂ ಹೆಚ್ಚಾಗಿ ಯಾವ ನೌಕರನಿಂದಲೂ ಕೆಲಸವನ್ನು ತೆಗೆದುಕೊಳ್ಳಕೂಡದೆಂದೂ, ಪ್ರತಿ ನಾಲ್ಕು ಗಂಟೆಗೆ ವಿಶ್ರಾಂತಿ ಅರ್ಧ ಗಂಟೆಯ ಹೊತ್ತು ಅವನಿಗೆ ಕೊಡಬೇಕೆಂದೂ, ೧ ದಿನಕ್ಕೆ ಒಟ್ಟು ೧೩ ಗಂಟೆಗಿಂತಲೂ ಹೆಚ್ಚು ಕಾಲ ಅಂಗಡಿಯನ್ನು ತೆರೆದಿರಕೂಡದೆಂದೂ ನೌಕರರು ಮಾಡುವ ಹೆಚ್ಚಿನ ಕಾಲದ ಕೆಲಸಕ್ಕೆ ಸಾಮಾನ್ಯವಾಗಿ ಅವರಿಗೆ ಕೊಡುವುದಕ್ಕಿಂತಲೂ ಎರಡರಷ್ಟು ಭತ್ಯವನ್ನು ಕೊಡಬೇಕೆಂದೂ ಮತ್ತು ರಜದ ಕಾಲದ ರಜಾ ದಿನಗಳಲ್ಲಿ ಕೆಲಸಕ್ಕೆ ಎಷ್ಟು ದಿನಗಳು ಬಂದಿದ್ದರೆ ಮುಂದಿನ ಪರ ತಷ್ಟೇ ದಿನಗಳ ರಜಾವನ್ನು [illegible] ಕೊಡಬೇಕೆಂದೂ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

**ಅನೋಘವಾದ ಪೂರ್ತಿದ ಬೆಂಬಿ ಆಟ**

[illegible] ಶ್ರೀ ಸಾವಲ್ ಬುತ್ರಿ ಮತ್ತು [illegible] ರು ಮಂಗಳವಾರ [illegible] ಕತೃರಾ ಕಥೆ [illegible] ಅಕ್ಬರ್ ಬೀರ್‌ಬಲ [illegible] ನೃತ್ಯ [illegible] ಪ್ರದರ್ಶನವು ಬಹಳ ಆನೇ [illegible] ಗಿದ್ದಿತು. ಪೌರಸಭಾಧ್ಯಕ್ಷ ಶ್ರೀ ಟಿ [illegible] ಪೌರ ಸಭಾಸದರುಗಳು ಮತ್ತು ಅನೇಕ ಗಣ್ಯ ಮಹನೀಯರು [illegible] ಗಳು ಆಗಮಿಸಿ ಪ್ರದರ್ಶನ [illegible] ವನ್ನು ಪ್ರಶಂಸಿಸಿದರು. [illegible] ನಾರ್ ಪತ್ತೆಯಲ್ಲಿರುವ ಡಿಯಸಾಪಿಕಲ್ [illegible] ದಲ್ಲಿ ಶ್ರೀ ಸಾವಲ್ ಬಂ[illegible] ರವರ [illegible] ಆಟವನ್ನು ಪ್ರೆಂಡ್ ಕ್ಲಬ್ ಸಂಘದವರು ಏರ್ಪಡಿಸಿದ್ದರು.

**ಗಾಂಧಿ ಜಯಂತಿ ಉತ್ಸವ**

[illegible] ಜವಾನಿಯ ಮಹಿಳಾ ಸದನದಲ್ಲಿ ಕಳೆದ [illegible] ಗಾಂಧಿ ಜಯಂತಿ ಮತ್ತು [illegible] ಉತ್ಸವಗಳನ್ನು ನೆರವೇರಿಸಲಾಯಿತು. ಶ್ರೀಮತಿ [illegible] ವಿಶಾಲಾ [illegible] ಉತ್ಸವದ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ಸೂತ್ರಯಜ್ಞ ಸಂಗೀತ ಗಾಂಧಿ ಸಾಹಿತ್ಯದ ವಾಚನಗಳೂ ಮತ್ತು [illegible] ನಡೆದುವು. ಅಧ್ಯಕ್ಷರು [illegible] ಗಾಂಧೀಜಿಯವರ [illegible] ವನ್ನು ಆಚರಣೆಯಲ್ಲಿ ತರಲೇಬೇಕೆಂದರು [illegible] ಮತ್ತು ರಾಷ್ಟ್ರಗೀತೆಯೊಡನೆ [illegible] ಮುಕ್ತಾಯವಾಯಿತು.

**ನಗರದಲ್ಲಿ ಡಿಫ್ತೀರಿಯಾದಿಂದ ೬ ಮರಣ**

[illegible]

## [illegible] ಕೂಡನೆ ಪ್ರರಾಷ್ಟ್ರಗಳ [illegible] ಒಪ್ಪಂದ?

[illegible] ಒಪ್ಪಂದ [illegible] ಬ್ರಿಟನ್ ಮತ್ತು [illegible] ನಡೆಸುತ್ತಿ [illegible] ಯ ಭದ್ರತಾ ಸಮಿತಿಗೆ [illegible] ಸದಸ್ಯ [illegible] [illegible]

## ೧೩೦ ದಿನಗಳ ಉಪವಾಸದ ನಂತರ ಜೈನ ಮಹಿಳೆಯ ಮರಣ

[illegible] ಪಾಂಗ್ರೆಸ್ ಎಂಬ ಊರಿನ [illegible] ವರ್ಷದ ಜೈನ ಮಹಿಳೆ [illegible] ಎಂಬುವಳು ೧೩೫ ದಿನಗಳ ಪರ್ಯಂತ ನಿರಶನ ವ್ರತದಿಂದ ಪ್ರಾಯೋಪವೇಶ ಮಾಡಿರುವ [illegible] ವರದಿಯಾಗಿದೆ. ಆಕೆಯು [illegible] ಮಾಡಲು ನಿರ್ಧರಿಸಿದ್ದರಂತೆ. ಈ ಹಿಂದೆ ಅವರು ಅನೇಕ [illegible] ದಿನಗಳವರೆಗೂ [illegible] ದಿನಗಳವರೆಗೂ ನೀರನ್ನು ಮಾತ್ರ ಸೇವಿಸುತ್ತ ಉಪವಾಸ ಮಾಡಿದ್ದರೆಂದೂ ಹೇಳಲಾಗಿದೆ. ಜೈನ ಶಾಸ್ತ್ರದಲ್ಲಿ [illegible] ನೀರನ್ನು ಮಾತ್ರ [illegible] ಅವರ ಕಳೇಬರವನ್ನು ಮೆರವಣಿಗೆಯಲ್ಲಿ [illegible] ಅಂತ್ಯಕ್ರಿಯೆ ನಡೆಸಲಾಯಿತು [illegible] ಸಂಸ್ಕಾರವನ್ನು ನಡೆಸಲಾಯಿತು.

## ನಿರುದ್ಯೋಗ ನಿವಾರಣೆಗೆ ೧೭೫ ಕೋಟಿ ರೂ ಯೋಜನೆ

ಡೆಹಲಿ [illegible] ಅಭಿವೃದ್ಧಿ ಸಮಿತಿಯ ಸಭೆಯು [illegible] ನಿರುದ್ಯೋಗ [illegible] ಕೋಟಿ ರೂ [illegible] ಯೋಜನೆಗೆ [illegible] ಕೋಟಿ ರೂ ಗಳ [illegible]

## ಅಪಾದನೆ ರುಜುವಾತಾದರೆ ಮುಸ್ತಾಫಿಕ್‌ರವರಿಗೆ ಗಲ್ಲು

[illegible] ಮಾಜಿ ಪ್ರಧಾನಿ ಡಾ॥ ಮುಸ್ತಾಫಿಕ್ಕರ [illegible] ವಿಸರ್ಜಿಸಿದ ಮತ್ತು [illegible] ರವರಿಂದ ಯೊಂಟಿ ತನ್ನ ಪದಚ್ಯುತಿ [illegible] ಬಗ್ಗೆ ಅಪಾದನೆಗಳನ್ನು ಹೊರಿಸಲಾಗಿದೆ. ಈ ಅಪಾದನೆಗಳ ರುಜುವಾತಾದರೆ ಮುಸ್ತಾಫಿಕ್ಕರನ್ನು ಗಲ್ಲಿಗೇರಿಸಲಾಗುವುದೆಂದು ವರದಿಯಾಗಿದೆ.

## ಭದ್ರತಾ ಸಮಿತಿಗೆ ತುರ್ಕಿ ಆಯ್ಕೆ

ಭದ್ರತಾ ಸಮಿತಿಯ ಸದಸ್ಯ ಸ್ಥಾನಕ್ಕೆ ತುರ್ಕಿಯನ್ನು [illegible] ರಾಷ್ಟ್ರಗಳ [illegible] ಬಹುಮತದಿಂದ ಆರಿಸಲಾಗಿದೆ. ರಷ್ಯವು ಪೋಲೆಂಡನ್ನು ಆ ಸ್ಥಾನಕ್ಕೆ ಸೂಚಿಸಿದ್ದಿತು. ಅಮೆರಿಕವು [illegible] ಬೆಂಬಲವಿತ್ತಿದ್ದಿತು.

**ನಾಂಟಿನ ಕೊಲೆಗಾರ [illegible] ಜೀವಾವಧಿ ಸಜಾ**

ಕಳೆದ ಜೂನ್ ೧೦ನೇ ತಾ॥ [illegible] ವರ್ಷದ ತನ್ನ [illegible] ದಿನಿಯು ಮಲಗಿದ್ದಾಗ ಸೀಮೆ ಎಣ್ಣೆ [illegible] ಕೊಳ್ಳಲು ಆಕೆಯ ಮೇಲೆ [illegible] ಎತ್ತಿ ಹಾಕಿ [illegible] ಗಾಯಪಡಿಸಿ ಕೊಂದನೆಂದು ಬೆಂಗಳೂರ ಸಿವಿಲ್ ಪ್ರದೇಶದ [illegible] ೨೦ ವರ್ಷದ ಮಹಿಳೆಗೆ ಜೀವಾವಧಿ ಸಜಾ ವಿಧಿಸಲಾಗಿದೆ.


**ಮೋತಿಲಾಲ್ ಟಾಕೀಸ್**

[illegible] ೩ ರಿಂದ ಜಯಭೇರಿ ೨ ನೇ ವಾರ

**ಆನ್ AAN**

[illegible] ೨ ದಿನಗಳು ಮಾತ್ರ

★ ಬಾದಲ್ ★



Edited, Printed and Published by A R Nagarajan at Sadhvi Press D Subbiah Road Mysore


## ದಸರಾ ವಸ್ತು ಪ್ರದರ್ಶನದ ಆರಂಭ

**ಶ್ರೀ ಕೆ ಟಿ ಭಾಷ್ಯಂರವರ ಭಾಷಣ**

ಮೈಸೂರು ೯

ನೆನ್ನೆ ಸಂಜೆ ಮೈಸೂರು ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂರವರು ನೆರವೇರಿಸಿ ರಾಷ್ಟ್ರದ ಅಭ್ಯುದಯಕ್ಕಾಗಿ ಜನರು ಶ್ರಮಿಸಬೇಕೆಂದು ನುಡಿದರು.

ಸಮಾರಂಭಕ್ಕೆ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಮೈಸೂರು ಶಾಸನ ಸಭಾಧ್ಯಕ್ಷ ಶ್ರೀ ಹೆಚ್ ಸಿದ್ದಯ್ಯ ಮತ್ತು ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪ, ಶ್ರೀ ಸಿದ್ಧವೀರಪ್ಪ, ಡಾ॥ ನಾಗನಗೌಡ ಮತ್ತು ಶ್ರೀ ಟಿ ಚನ್ನಯ್ಯನವರುಗಳೂ ಅನೇಕ ಪ್ರಮುಖ ಅಧಿಕಾರಿಗಳೂ ಖಾಸಗಿ ಮಹನೀಯರೂ ಮಹಿಳೆಯರೂ ಬಂದಿದ್ದರು.

ಪ್ರಾರ್ಥನೆ ಮತ್ತು ಸಂಗೀತವಾದನಂತರ ವಸ್ತುಪ್ರದರ್ಶನ ಸಮಿತಿಯ ಉಪಾಧ್ಯಕ್ಷ ಶ್ರೀ [illegible] ಗೋಪಾಲಕೃಷ್ಣ ಶೆಟ್ಟರು ಪ್ರದರ್ಶನದ ವರದಿಯನ್ನು ಓದಿದರು. ಶ್ರೀಗಳಾದ ಎಸ್ ನಿಜಲಿಂಗಪ್ಪ, ಡಿ ಹೆಚ್ ಚಂದ್ರಶೇಖರಯ್ಯ ಮುಂತಾದವರಿಂದ ಬಂದಿದ್ದ ಸಂದೇಶಗಳನ್ನು ಕಾರ್ಯದರ್ಶಿಗಳಾದ ಶ್ರೀ ವಿ ಎಸ್ ಕೃಷ್ಣಯ್ಯರ್‌ರವರು ಓದಿದರು.

ಶ್ರೀ ಕೆ ಟಿ ಭಾಷ್ಯಂರವರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು —

ವಸ್ತುಪ್ರದರ್ಶನವು ನಮ್ಮ ದೇಶದ ಪ್ರಗತಿಯ ಅಳತೆಗೋಲು. ನಮ್ಮಲ್ಲಿ ಹೇರಳವಾದ ಕಚ್ಚಾ ಪದಾರ್ಥಗಳು ಮತ್ತು ಉತ್ತಮವಾಗಿ ತಯಾರಿಸಿದ ಸಿದ್ಧವಸ್ತುಗಳು ಇದ್ದಾಗ್ಯೂ ನಮ್ಮ ಜನರು ಹೊಟ್ಟೆಬಟ್ಟೆಗಳಿಗಿಲ್ಲದೆ ಏಕೆ ನರಳುತ್ತಿದ್ದಾರೆ ಎಂದೆನಿಸುತ್ತದೆ. ನಮ್ಮಲ್ಲಿ ತಕ್ಕ ಶಿಕ್ಷಣ ಮತ್ತು ಹೊಂದಾಣಿಕೆಯುಳ್ಳ ಉತ್ಪಾದನೆ ಮತ್ತು ವ್ಯಾಪಾರಗಳಿಲ್ಲದಿರುವುದೇ ಇದಕ್ಕೆ ಕಾರಣ.

ಪದವಿಗಳಿಗಿಂತ ವೃತ್ತಿ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನೀಯುವುದರಿಂದ ಈಗಿನ ನಿರುದ್ಯೋಗ ಸಮಸ್ಯೆಯು ಬಗೆಹರಿಯುವುದರಲ್ಲಿ ಸಂಶಯವಿಲ್ಲ. ನಿತ್ಯ ಜೀವನಕ್ಕೆ ಅನುಕೂಲವಾದ [illegible] ರೀತಿಯ ಅನೇಕ ಸಣ್ಣ ಉದ್ಯೋಗಗಳಿವೆ. ಇವುಗಳಿಂದ ಬೇರೆ ದೇಶಗಳಲ್ಲಿ ಜನರು ಸಂಪನ್ಮೂಲರಾಗುತ್ತಿದ್ದಾರೆ. ಇಂತಹ ಉದ್ಯೋಗಗಳಿಗೆ ಧನ ಸಹಾಯಕ್ಕಾಗಿ ಒಂದು ಹಣಕಾಸಿನ ಕಾರ್ಪೋರೇಷನ್ನನ್ನು ರಚಿಸಬೇಕು.

ನಮ್ಮಲ್ಲಿ ಸ್ವದೇಶೀ ಭಾವನೆಯು ಬೆಳಗಬೇಕು. ಇದರಿಂದ ನಮ್ಮ ಜನಗಳ ಬಡತನವನ್ನು ನಾವು ಸುಲಭವಾಗಿ ನೀಗಿಸಬಹುದು. ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹವು ಅತ್ಯವಶ್ಯಕ.

ನಮ್ಮ ದೇಶದ ಸಾಧನಸಂಪತ್ತನ್ನು ಚೆನ್ನಾಗಿ ರೂಢಿಸಬೇಕು. ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಇನ್ನೂ ಹೆಚ್ಚಿನ ಅವಕಾಶಗಳಿವೆ. ಅವನ್ನು ಸರಿಯಾಗಿ ಉಪಯೋಗಿ[illegible]

## ಪಂಜಾಬಿನ ರಾಜಧಾನಿಯಾಗಿ ಚಂಡೀಘಡ

ರಾಷ್ಟ್ರಾಧ್ಯಕ್ಷರು ನೆನ್ನೆ ಪೂರ್ವ ಪಂಜಾಬಿನ ಹೊಸ ರಾಜಧಾನಿಯಾದ ಚಂಡೀಘಡದ ಆರಂಭೋತ್ಸವವನ್ನು ನೆರವೇರಿಸಿದರು. ೨೦,೦೦೦ ಜನರು ಸೇರಿದ್ದರು. ಈ ಸಂದರ್ಭದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಾಧ್ಯಕ್ಷರು ಗುಂಡಿಯೊಂದನ್ನು ಒತ್ತಿ, ಹೊಸ ರಾಜಧಾನಿಯ ನಕ್ಷೆಯನ್ನು ಅನಾವರಣ ಮಾಡಿದರು. [illegible] ವಿವಿಧ ವರ್ಣಗಳಿಂದ ಚಿತ್ರಿಸಲ್ಪಟ್ಟಿತ್ತು.

## ಆನೆಗಳ ರಫ್ತಿನ ಹಕ್ಕೋಟೆ ರದ್ದು

ಆನೆಗಳನ್ನು ವಿದೇಶಗಳಿಗೆ ರಫ್ತು ಮಾಡುವ ಬಗ್ಗೆ ಇದ್ದ ಹಕ್ಕೋಟೆಯನ್ನು ಭಾರತ ಸರ್ಕಾರದವರು ರದ್ದುಗೊಳಿಸಿರುತ್ತಾರೆ. ಇನ್ನು ಮುಂದೆ ಆನೆಗಳನ್ನು ಕಳುಹಿಸಲು ರಹದಾರಿಯು ಬೇಕಾಗಿಲ್ಲವೆಂದು ಹೇಳಲಾಗಿದೆ. ಕಳೆದ ಮಾರ್ಚಿಯಲ್ಲಿ ೧೨ [illegible] ಆನೆಗಳ ರಫ್ತಿಗೆ ರಹದಾರಿ ಕೊಡಲಾಗಿತ್ತು.

**ಆಕಾಶವಾಣಿ ನಾಳೆ ಕಾರ್ಯಕ್ರಮ**

[illegible]

**ನಿಕೊಂಡಲ್ಲಿ ಕೈಗಾರಿಕೆಗಳ ಪ್ರಗತಿಯಾಗುವುದರಲ್ಲಿ ಸಂದೇಹವಿಲ್ಲ**

ಉತ್ಪಾದನೆಯನ್ನು ಹೆಚ್ಚಿಸಲು ನಾವು ಹೊಸ ವಿಧಾನಗಳನ್ನು ಅನುಸರಿಸಬೇಕು. ಸ್ವತಃ ಕಾರ್ಯದಲ್ಲಿ [illegible] ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಇದನ್ನು ಯಶಸ್ವಿಗೊಳಿಸಲು ಬೇಸಾಯಗಾರರ ಸಹಕಾರವು ಅಗತ್ಯ. ಇದರಿಂದ ಈಗಾಗಲೇ ಹೆಚ್ಚಿನ ಪ್ರಯೋಜನವನ್ನು ಪಡೆಯಲಾಗಿದೆ. ನಾನೂ ಸಹ ಹೊಂದಿದ್ದೇನೆ. ಎಕರೆಯೊಂದಕ್ಕೆ ೫೦ ರೂ ಹೆಚ್ಚಿಗೆ ಖರ್ಚು ಮಾಡಿದರೆ ಸುಮಾರು ೧೫೦ ರೂ.ಗಳ ಹೆಚ್ಚಿನ ಆದಾಯವು ಬರುತ್ತದೆ.

ನಮ್ಮ ದೇಶದಲ್ಲಿ ಸಂಶೋಧನೆಗಳು ಮತ್ತು ಅಂಕಿ ಅಂಶಗಳನ್ನಿಡುವ ಪದ್ಧತಿಯು ಬೆಳೆಯಬೇಕು. ಈ ರೀತಿ ನಮ್ಮ ದೇಶದ ಅಭ್ಯುದಯಕ್ಕೆ ಇನ್ನೂ ಎಲ್ಲಾ ಮಾರ್ಗಗಳಿಂದಲೂ ಜನರು ಶ್ರಮಿಸಬೇಕು. ಈ ಪ್ರದರ್ಶನವನ್ನು ಜನರೆಲ್ಲರೂ ನೋಡಿ ಆನಂದಪಡುವುದಲ್ಲದೆ, ಅದರ ಸಂಪೂರ್ಣ ಪ್ರಯೋಜನವನ್ನು ಹೊಂದುವರೆಂದು ನಂಬುತ್ತೇನೆ.


**ಮಾದರಿ ಮನೆ ಮಾರಾಟಕ್ಕಿದೆ**

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂ 65 ಮಾದರಿ ಮನೆ [illegible] ಫೌಂಡ ನಲ್ಲಿ, ದೀಪ ಪ್ಲಂಬಿಂಗ್ ಇವೆ. "ಸಾಧ್ವಿ" ಪತ್ರಿಕಾಲಯದಲ್ಲಿ ವಿಚಾರಿಸಿ.

# ಪ್ರಭುದೇವಾ ಥಿಯೇಟರ್

(ಸದ್ಭಾ ಟಾಕೀಸ್, ಮೈಸೂರು)

10 10 53 ನೇ ಶನಿವಾರದಿಂದ ★ ಅನೋಘವಾದ 9 ನೆಯ ವಾರ ★ ದಿನವಹಿ 3 ಆಟಗಳು

# ಅವ್ವೈಯಾರ್

ಕೆ ಬಿ ಸುಂದರಾಂಬಾಳ್ ಪಾತ್ರವಹಿಸಿರುವ ಜೆಮಿನಿಯವರ ತಮಿಳು ಚಿತ್ರ

# ಪ್ರಭಾ ಪಿಕ್ಚರ್ ಹೌಸ್ ★

10-10-53ನೇ ಶನಿವಾರದಿಂದ ಅನೋಘ ಪ್ರಾರಂಭ ದಿನವಹಿ 3 ಆಟಗಳು

ಮಾದರ ಥಿಯೇಟರ್‌ಗಳವರ, ಕನ್ನಡ ಚಿತ್ರಪ್ರೇಮಿಗಳು ಎದುರುನೋಡುವ ಮಹೋನ್ನತ ಜಾನಪದ ಕಥಾ ಚಿತ್ರ

# ಮಂಗಳಗೌರಿ ★ ಮಂಗಳಗೌರಿ

ತಾರಾಗಣ — ಹರಿಣಿ, ಇಂದುಶೇಖರ್, ಬಾಲಕೃಷ್ಣ ಮತ್ತು ಜಯಶ್ರೀ

ರಿಜಿಸ್ಟರ್ಡ್ ನಂ. 792

[ಸಂಪಾದಕ: [illegible]]

ಬಿಡಿ ಪ್ರತಿಗೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೩ ] MYSORE SATURDAY 10-10-1953 ಮೈಸೂರು : ಶನಿವಾರ ೧೦ ೧೦-೧೯೫೩ [ ಸಂಚಿಕೆ ೬೬

# ಮೈಸೂರು ನಗರದ ಆರು ಭಾಗಗಳಲ್ಲಿ ಪ್ರತಿಬಂಧಕಾಜ್ಞೆ

## ನಗರದ ಹಲವು ಭಾಗಗಳಲ್ಲಿ ಪ್ರತಿಬಂಧಕಾಜ್ಞೆ

ಮೈಸೂರು, ೧೦

ರಾಜಧಾನಿಯ ಆದಿಕರ್ನಾಟಕಪುರ, ಕನ್ನೇಗೌಡನ ಕೊಪ್ಪಲು, ಹನುಮಂತಹಳ್ಳಿ, ಕ್ಯಾತಮಾರನಹಳ್ಳಿ, ಹೊಸ ಬಂಡೀಕೇರಿ ಮತ್ತು ಕುಂಬಾರಕೊಪ್ಪಲಿನಲ್ಲಿ ೫ ಜನರಿಗಿಂತ ಹೆಚ್ಚು ಮಂದಿ ಒಟ್ಟಿಗೆ ಸೇರಕೂಡದೆಂದೂ ಮತ್ತು ಸಭೆ ನಡೆಸಕೂಡದೆಂದೂ ೧೪೪ ನೇ ಸೆಕ್ಷನ್ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಹಾಕಲಾಗಿದೆ ನೆನ್ನೆಯಿಂದ ೧೫ ದಿನಗಳವರೆಗೆ ಈ ಆಜ್ಞೆಯು ಜಾರಿಯಲ್ಲಿರುವುದು

ಕನ್ನೇಗೌಡನ ಕೊಪ್ಪಲಿನ ನಿವಾಸಿಗಳು ಮತ್ತು ಹರಿಜನರು ಮತ್ತಿತರರುಗಳಲ್ಲಿ, ದಸರಾ ಕಾಲದಲ್ಲಿ ಅರಮನೆ ಮುಂದೆ ಹರಿಜನರಿಂದ ಕುಸ್ತಿ ಪಂದ್ಯವನ್ನಾಡಿಸುವ ಬಗ್ಗೆ ಬಲವಾದ ವಿಮನಸ್ಯ ಉಂಟಾಗಿರುವುದರಿಂದಲೂ ಮತ್ತು ಈ ಕಾರಣದಿಂದ ಅರಮನೆ ಕೋಟೆಯ ದಕ್ಷಿಣ ಬಾಗಿಲು ಬಳಿ ಹಲವು ಘಟನೆಗಳು ಸಂಭವಿಸಿ, ಪೋಲೀಸರು ಗುಂಡು ಹಾರಿಸಬೇಕಾಗಿ ಬಂದುದರಿಂದಲೂ, ಮತ್ತು ನೆನ್ನೆಯ ದಿನ ರಾಗಿ ಮಂಡಿಯೊಂದಕ್ಕೆ ಬೆಂಕಿ ಹಾಕಿದ ಪ್ರಕರಣವು ನಡೆದಿರುವುದರಿಂದಲೂ ಆ ಎರಡು ಗುಂಪಿನವರಲ್ಲಿ ಪುನಃ ಗಲಾಟೆಗಳು ಸಂಭವಿಸುವ ಭೀತಿಯಿರುವುದೆಂದು ತಮಗೆ ಖಾತರಿಯಾಗಿರುವುದರಿಂದ ಪ್ರತಿಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೆಂದು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರು ತಿಳಿಸಿದ್ದಾರೆ

### ಗುಂಡಿನೇಟಿಗೆ ತುತ್ತಾದವರು

ಮೊನ್ನೆ ಅರಮನೆ ಕೋಟೆ ಬಳಿ ಪ್ರದರ್ಶಕರ ಮೇಲೆ ೧ ಗುಂಡು ಹಾರಿಸಿದ ಪ್ರಕರಣದಲ್ಲಿ ನರಸಿಂಹರಾಜು ಮತ್ತು ಮಾದಯ್ಯ ಮತ್ತು ... ನ ಜಯ್ಯನವರುಗಳು ಮೃತಪಟ್ಟಿರುತ್ತಾರೆಂದು ಹೇಳಲಾಗಿದೆ ಮೃತಪಟ್ಟ ಮತ್ತೊಬ್ಬನ ಗುರುತು ಸಿಕ್ಕಿಲ್ಲ ಪ್ರದರ್ಶನಕಾರರ ಏಟಿಗೆ ಸಿಕ್ಕಿದ ಹರಿಜನರಾದ ಲಿಂಗಯ್ಯ, ಮಾದಯ್ಯ ಗರಗಯ್ಯ ಇವರುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು ಪೋಲೀಸು ಇಲಾಖೆಗೆ ಸೇರಿದ ಬಾಬ ಷರೀಫ್, ನರಸಿಂಹಯ್ಯ, ಜಿಲ್ಲಾ ಪೋಲೀಸು ಅಧಿಕಾರಿಗಳ ಡ್ರೈವರ್ ರತ್ನಂ ಎಂಬುವರಿಗೆ ವಿಪರೀತ ಗಾಯವಾಗಿ ಆಸ್ಪತ್ರೆಯಲ್ಲಿರುವರು ಗುಂಡಿನೇಟಿಗೆ ಸಿಕ್ಕಿದವನೊಬ್ಬನಿಗೆ ಶಿರಿಯಲ್ಲಿ ಗುಂಡು ಹೊಕ್ಕು ತಲೆಯ ಹಿಂಭಾಗದಿಂದ ಹಾದುಹೋಗಿರುವುದಾಗಿ ಹೇಳಲಾಗಿದೆ

## ಮದ್ರಾಸಿಗೆ ಇನ್ನೂ ಮೂವರು ಮಂತ್ರಿಗಳು

ಮಾಜಿ ಮಂತ್ರಿ ಎಂ ಭಕ್ತವತ್ಸಲಂ ಹಣಕಾಸಿನ ಮಂತ್ರಿಯವರ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ ರಾಜಾರಾಂ ನಾಯ್ಡು ಮತ್ತು ಮದ್ರಾಸು ನಗರದ ಷರೀಫರಾದ ಪಿ ವೆಂಕಟಾಚಲಂರವರ ಪತ್ನಿ ಜ್ಯೋತಿ ವೆಂಕಟಾಚಲಂರವರನ್ನು ರಾಜಾಜಿಯವರು ತಮ್ಮ ಮಂತ್ರಿಮಂಡಲದ ಸದಸ್ಯರಾಗಿ ತೆಗೆದುಕೊಂಡಿರುತ್ತಾರೆ ಮದ್ರಾಸು ಸರ್ಕಾರದಲ್ಲಿ ಇನ್ನು ಮುಂದೆ ೧೫ ಜನ ಮಂತ್ರಿಗಳಿರುವರು. ಜ್ಯೋತಿ ವೆಂಕಟಾಚಲಂರವರು ಪಾನ ನಿರೋಧ ಇಲಾಖೆಯನ್ನು ವಹಿಸಿಕೊಂಡಿರುತ್ತಾರೆ

## ನೀರಿನ ಕೆಲಸಗಾರರ ಬೇಡಿಕೆಗಳ ಬಗ್ಗೆ ಒಪ್ಪಂದ

### ಪತ್ರಿಕಾ ಸಮ್ಮೇಳನದಲ್ಲಿ ವಿವರಣೆ

ಮೈಸೂರು ೧೦

ನಗರದ ವಾಣಿವಿಲಾಸ ವಾಟರ್ ವರ್ಕ್ಸ್ ಕೆಲಸಗಾರರ ಬೇಡಿಕೆಗಳ ಬಗ್ಗೆ, ಅಧಿಕಾರಿಗಳಿಗೂ ಸಂಘದ ಸದಸ್ಯರಿಗೂ ನಡೆದ ಮಾತುಕತೆಗಳು ಯಶಸ್ವಿಯಾಗಿ ಕೊನೆಗೊಂಡು ಅವರುಗಳ ಬೇಡಿಕೆಗಳನ್ನು ಈಡೇರಿಸುವುದಾಗಿ ಸರ್ಕಾರದವರು ಭರವಸೆಯಿತ್ತಿರುವುದರಿಂದ ಅವರು ಕೈಗೊಳ್ಳಲಿದ್ದ ಮುಷ್ಕರವನ್ನು ರದ್ದು ಮಾಡಿರುವುದಾಗಿ ಗೊತ್ತಾಗಿದೆ ಸಂಘದ ಅಧ್ಯಕ್ಷರಾದ ಜ॥ ನೂರ್ ಹುಸೇನರ ಕಛೇರಿಯಲ್ಲಿ ನೆನ್ನೆ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಈ ವಿಷಯವನ್ನು ಹೊರಗೆಡಹಲಾಯಿತು ಲೇಬರ್ ಕಮೀಷನರ್ ಶ್ರೀ ಬಿ ಎಸ್ ಪುಟ್ಟಸ್ವಾಮಿ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಕೆ ಎಸ್ ಕೃಷ್ಣಸ್ವಾಮಿ ಎಕ್ಸಿಕ್ಯೂಟಿವ್ ಇಂಜನಿಯರ್ ಶ್ರೀ ನರಸಿಂಹಯ್ಯಂಗಾರ್ ನೀರಿನ ಇಲಾಖೆ ಸೂಪರಿಂಟೆಂಡೆಂಟರಾದ ಶ್ರೀ ಅಂಬರ್‌ಕರ್ ಮತ್ತು ಸಂಘದ ಪ್ರತಿನಿಧಿಗಳು ಹಾಜರಿದ್ದರು

ಕೆಲಸಗಾರರ ಬೇಡಿಕೆಗಳನ್ನು ಅಧಿಕಾರಿವರ್ಗದವರು ಸೌಹಾರ್ದದಿಂದ ಪರಿಶೀಲಿಸಿ, ಸೂಕ್ತ ಕಾರ್ಯಕ್ರಮ ಕೈಗೊಳ್ಳುವ ಭರವಸೆಯಿತ್ತಿರುವುದರಿಂದ ಮುಷ್ಕರವನ್ನು ರದ್ದು ಮಾಡಲಾಗಿರುವುದೆಂದು ಜ॥ ನೂರ್ ಹುಸೇನರು ತಿಳಿಸಿದರು ಮುಷ್ಕರ ಮಾಡುವುದೇ ಕಾರ್ಮಿಕರ ಉದ್ದೇಶವಲ್ಲವೆಂದೂ, ಅದರೆ ಬಹಳ ದಿನಗಳಿಂದ ಕೊಡಲಾಗಿದ್ದ ಭರವಸೆಗಳನ್ನು ಈಡೇರಿಸದಿದ್ದುದರಿಂದ ಬೇರೆ ವಿಧಿಯಿಲ್ಲದೆ ಉಗ್ರ ಕಾರ್ಯಕ್ರಮವನ್ನು ಕೈಗೊಳ್ಳಲು ನಿರ್ಧರಿಸಲಾಯಿತೆಂದೂ, ಇನ್ನು ಮುಂದೆ ನೌಕರರಿಗೂ ಅಧಿಕಾರವರ್ಗದವರಿಗೂ ಪ್ರೀತಿವಿಶ್ವಾಸಗಳು ಬೆಳೆದು ಘರ್ಷಣೆಗೆ ಅವಕಾಶವಾಗದಿರಲೆಂದೂ ಹಾರೈಸಿದರು

ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಕೃಷ್ಣಸ್ವಾಮಿ ಮತ್ತು ಕಾರ್ಮಿಕ ಕಮೀಷನರ್ ಶ್ರೀ ಬಿ ಎಸ್ ಪುಟ್ಟಸ್ವಾಮಿಯವರು ಮಾತನಾಡಿ, ಪ್ರಜೆಗಳ ಹಿತ ಸಾಧನೆಗಾಗಿ ಅಧಿಕಾರಿಗಳೂ ಕಾರ್ಮಿಕರೂ ಏಕೀಭವಿಸಿ ಕೆಲಸ ಮಾಡುವುದು ಅಗತ್ಯವೆಂದೂ ಈಗ ಆಗಿರುವ ಒಪ್ಪಂದದಿಂದ ಮುಂದೆ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆದುಕೊಂಡುಹೋಗುವ ಭರವಸೆಯು ತಮಗಿದೆಯೆಂದೂ ತಿಳಿಸಿ, ಕಾರ್ಮಿಕರ ಯೋಗಕ್ಷೇಮಕ್ಕೆ ಸರ್ಕಾರದವರು ಸಂಪೂರ್ಣ ಗಮನ ಕೊಡುವುದಾಗಿ ತಿಳಿಸಿದರು

ಈ ಒಪ್ಪಂದದಿಂದ ಉಂಟಾಗಿರುವ ಸಂತೋಷದ ಕುರುಹಾಗಿ ಕಾರ್ಮಿಕರು ಧರಿಸುತ್ತಿದ್ದ ಬಿಲ್ಲೆಗಳನ್ನೆಲ್ಲಾ ಲೇಬರ್ ಕಮೀಷನರಿಗೆ ಒಪ್ಪಿಸಿಬಿಡಲಾಯಿತು

೧೯೫೭ನೇ ಇಸವಿಯಿಂದಲೇ ನಿವೃತ್ತರಾದ ನೌಕರರಿಗೆ ಎರಡು ವೇತನವನ್ನು ಬರುವ ಜನವರಿಯಿಂದ ಕೊಡುವುದು, ಅದುವರೆಗೆ ಪರಿಹಾರಕ್ಕಾಗಿ ೧೦೦ ರೂ ಮುಂಗಡವನ್ನು ಅವರಿಗೆ ಕೊಡುವುದು ಇನ್ನು ಒಂದು ವಾರದೊಳಗೆ ನೌಕರರಿಗೆ ಬತ್ತಿಯನ್ನು ಕೊಡುವುದು, ೧

## ಅರಮನೆ ಮುಂದೆ ಹರಿಜನರ ಕುಸ್ತಿಗೆ ಏರ್ಪಾಡು

### ಹರಿಜನರಿಗಾಗಿ ಪ್ರತ್ಯೇಕ ಅಖಾಡಾ

ಮೈಸೂರು ೧೦

ಅರಮನೆ ಮುಂದೆ ನಾಳೆಯಿಂದ ಎರಡು ದಿನ ಸವರ್ಣ ಹಿಂದೂಗಳ ಕುಸ್ತಿ ಪಂದ್ಯಗಳು ನಡೆಯುವುವು ಮಾರನೆಯ ೨ ದಿನಗಳಲ್ಲಿ ಹರಿಜನರಿಂದ ಕುಸ್ತಿಗಳನ್ನು ನಡೆಸಲು ಏರ್ಪಾಡಾಗಿರುವುದು ಅವರುಗಳ ಕುಸ್ತಿಗಾಗಿ ಪ್ರತ್ಯೇಕ ಅಖಾಡಾವನ್ನು ನಿರ್ಮಿಸಲಾಗುವುದು ಅಲ್ಲಿಂದ ಮುಂದಕ್ಕೆ ಪ್ರತಿ ದಿನವೂ ಸವರ್ಣೀಗಳ ಕುಸ್ತಿಗಳು ನಡೆಯುವುವು ಈ ಬಗ್ಗೆ ಒಪ್ಪಂದವಾಗಿರುವುದೆಂದು ತಿಳಿದುಬಂದಿದೆ

## ಮಧ್ಯ ಪ್ರದೇಶದ ಪ್ರಾಣಿ ರಕ್ಷಣಾ ಕೇಂದ್ರಕ್ಕೆ ಮಹಾರಾಜರ ಭೇಟಿ

ಮಧ್ಯ ಪ್ರದೇಶದಲ್ಲಿರುವ ಮಾಂಡ್ಲಾ ಜಿಲ್ಲೆಯ ಕಿಸ್ಲಿ ಎಂಬ ಊರಿನ ಪ್ರಾಣಿ ಸಂರಕ್ಷಣಾ ಕೇಂದ್ರಕ್ಕೆ ಈ ತಿಂಗಳು ೨೧ ನೇ ತಾ॥ ಮೈಸೂರಿನ ಮಹಾರಾಜರು ಕೇಂದ್ರ ಸಹಕಾರಿ ಮಂತ್ರಿ ಟಿ ಡಿ ದೇಶಮುಖ್‌ರವರೂ ಭೇಟಿ ಕೊಡಲಿರುವರೆಂದು ವರದಿಯಾಗಿದೆ

### ಪ್ರೇಟರ್ ಕೊಲೆ ಸಂಬಂಧವಾಗಿ ಆಪಾದಿತನ ಮೇಲೆ ಚಾರ್ಜ್

ಬೆಂಗಳೂರು ಬಿಷಪ್ ಕಾಟನ್ ಸ್ಕೂಲಿನ ಪ್ರಿನ್ಸಿಪಾಲರಾದ ಶ್ರೀಮತಿ ಪ್ರೇಟರ್‌ರ ಕೊಲೆ ಸಂಬಂಧವಾಗಿ ವಿಚಾರಣೆಗೆ ಗುರಿಯಾಗಿರುವ ಕುಪ್ಪುಸ್ವಾಮಿ ಉರುಫ್ ಜೋಸೆಫ್ ಅಲಿಯಾಸ್ ಜೋಕರ್ ಎಂಬುವನ ಮೇಲೆ ಅಕ್ರಮ ಪ್ರವೇಶ, ದರೋಡೆ ಮತ್ತು ಕೊಲೆ ಆಪಾದನೆಗಳನ್ನು ಹೊರಿಸಲಾಗಿದೆ ಈ ಹಿಂದೆ ಆಪಾದಿತನು ತಾನ ತಪ್ಪಿತಸ್ಥನಲ್ಲವೆಂದು ಹೇಳಿಕೆಯಿತ್ತಿದ್ದನು

### ಪ್ರಾಣಿಗಳ ಪ್ರದರ್ಶನ

ರಾಜಧಾನಿಯ ಪ್ರಾಣಿ ದಯಾ ವರ್ಧಕ ಸಂಘದ ಆಶ್ರಯದಲ್ಲಿ ಇದೇ ೧೯ ನೇ ತಾ॥ ಬೆಳಿಗ್ಗೆ ೮ ರಿಂದ ೧೧ ಮತ್ತು ಮಧ್ಯಾಹ್ನ ೩ ರಿಂದ ೬ ಗಂಟೆ ವರೆಗೆ ನಜರ್‌ಬಾದ್ ಮೊಹಲ್ಲೆಯಲ್ಲಿರುವ ಪೀಪಲ್ಸ್ ಪಾರ್ಕಿನಲ್ಲಿ ಉತ್ತಮವಾದ ಕರೆಯುವ ಹಸು ಮತ್ತು ಕರುಗಳು, ಎಮ್ಮೆಗಳು ಹೋರಿಗಳು, ಜೋಡಿ ಎತ್ತುಗಳು, ಒಂಟಿ ಗಾಡಿ ಎತ್ತುಗಳು ಟಾಂಗಾ ಗಾಡಿ ಮತ್ತು ಕುದುರೆಗಳ ಕುರಿಗಳು ಆಡುಗಳು, ನಾಯಿಗಳು ಮತ್ತು ಕೋಳಿ ಹುಂಜ, ಪಾರಿವಾಳ, ಬಾತು, ನವಿಲು, ಮುಂತಾದ ಪ್ರಾಣಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಉತ್ತಮವಾದುವುಗಳಿಗೆ ಪ್ರತ್ಯೇಕ ಬಹುಮಾನಗಳು ಕೊಡಲ್ಪಡುವುವು ಎತ್ತು ಮತ್ತು ಕುದುರೆಗಳಿಗೆ ಉತ್ತಮ ದ ಮತ್ತು ಆಧುನಿಕ ರೀತಿಯಲ್ಲಿ ಪ್ರಾಣಿಗಳಿಗೆ ನೋವಾಗದಂತೆ ಲಾಳ ಕಟ್ಟುವ ಸ್ಪರ್ಧೆಯೂ ಇರುವುದು ಪ್ರದರ್ಶನಕ್ಕಾಗಿ ಬರುವ ಪ್ರಾಣಿಗಳಿಗೆ ಆ ದಿನ ಉಚಿತವಾಗಿ ಮೇವನ್ನೂ ನೀರನ್ನೂ ಒದಗಿಸಲಾಗುವುದು ಪ್ರದರ್ಶನದಲ್ಲಿ ಭಾಗ ವಹಿಸುವವರು ೧೭ನೇ ತಾ॥ ರೊಳಗೆ ಸಂಘಕ್ಕೆ ಲಿಖಿತ ಮೂಲಕ ತಿಳಿಸುವಂತೆ ಕೋರಲಾಗಿದೆ

---

ವ್ಯಕ್ತವಾಗಿರುವ ಚಿಕ್ಕ ಎಂಬುದನ್ನು ಮತ್ತೆ ಅಲಕ್ಷಕ್ಕೆ ತೆಗೆದುಕೊಳ್ಳುವುದು ಇದೇ ಮುಂತಾದ ಅಂಶಗಳ ಮೇಲೆ ಒಪ್ಪಂದವಾಗಿರುತ್ತದೆ

## ಬೊಂಬಾಯಿ ಕಲಾವಿದರ ಚಿತ್ರಕ್ಕೆ ಪ್ರಭುಗಳ ಬಹುಮಾನ

ಮೈಸೂರು ೧೦

ರಾಜಧಾನಿಯ ದಸರಾ ವಸ್ತು ಪ್ರದರ್ಶನದಲ್ಲಿ ಇಡಲ್ಪಟ್ಟ, ಬೊಂಬಾಯಿಯ ಶ್ರೀ ಎಸ್ ಎಲ್ ಹಲ್ದಣಕರರವರಿಂದ ಬರೆಯಲ್ಪಟ್ಟಿರುವ ವಾಟರ್ ಕಲರ್ ಚಿತ್ರಕ್ಕೆ ಮಹಾರಾಜರವರ ಬೆಳ್ಳಿ ಬಟ್ಟಲನ್ನು ಬಹುಮಾನವಾಗಿ ಕೊಡಲು ನಿರ್ಧರಿಸಲಾಗಿದೆ. "ಗಣಪತಿ ಪೂಜೆ"ಯ ತೈಲ ಚಿತ್ರವನ್ನು ಬರೆದುದಕ್ಕಾಗಿ ಪ್ರದರ್ಶನದ ಸಮಿತಿಯವರು ಶ್ರೀ ಎಂ ವೀರಪ್ಪನವರಿಗೆ ಚಿನ್ನದ ಪದಕವನ್ನು ಕೊಡುವರು

### ಜಂಬೂ ಸವಾರಿಯಲ್ಲಿ ಭಾರತ ಸೇವಾದಳದ ಪಾತ್ರ

ವಿಜಯದಶಮಿ ದಿನ ಶ್ರೀಮನ್ಮಹಾರಾಜರವರ ಜಂಬೂಸವಾರಿ ಮೆರವಣಿಗೆಯಲ್ಲಿ ಸೇವಾದಳದ ೭೫೦ ಮಂದಿ ಸ್ವಯಂಸೇವಕರು ಭಾಗವಹಿಸಲು ಸರ್ಕಾರದವರು ಅವಕಾಶ ಕಲ್ಪಿಸಿರುವರು ಮಾಧ್ಯಮಿಕ ಮತ್ತು ಕೇಂದ್ರ ನಾಯಕ ಶಿಕ್ಷಣ ಪಡೆದವರೆಲ್ಲರೂ, ವಿಶೇಷವಾಗಿ ಮೈಸೂರು ಮಂಡ್ಯ ಜಿಲ್ಲೆಯ ಸೇವಾದಳ ಕಾರ್ಯಕರ್ತರು ಈ ಮಹೋತ್ಸವದಲ್ಲಿ ಭಾಗಿಗಳಾಗಬೇಕಾಗಿ ವಿನಂತಿ ಬರುವವರಿಗೆ ಪ್ರವಾಸದ ಖರ್ಚು ಕೊಡಲವಕಾಶವಿಲ್ಲವೆಂದು ವಿಷಾದದಿಂದ ತಿಳಿಸಬೇಕಾಗಿದೆ ೪ ದಿನಗಳು ಶಿಬಿರದಲ್ಲಿ ಉಚಿತ ಊಟ, ವಸತಿಯ ಸೌಕರ್ಯ ಮಾಡಲಾಗಿದೆ ಸ್ವಯಂಸೇವಕರು ಸಮ ವಸ್ತ್ರ ಹಾಸಿಗೆ, ತಟ್ಟೆ ಇವುಗಳೊಂದಿಗೆ ೧೪ ನೇ ತಾ॥ ಸಂಜೆಗೆ ಸರಿಯಾಗಿ ಮೈಸೂರು ಕ್ರಾಫರ್ಡ್ ಹಾಲ್ ಬಳಿಗೆ ತಲಪಬೇಕು ಬರುವವರು ಮುಂಚಿತವಾಗಿ ನನ್ನಲ್ಲಿಗೆ ಕಾಗದ ಬರೆದು ಸ್ವಯಂ ಸೇವಕರ ಸಂಖ್ಯೆಯನ್ನು ಸೇವಾದಳ ಶಿಬಿರ, ಚಾಮುಂಡಿ ತೋಟದ ಬಂಗಲೆ, ಮೈಸೂರು-ಈ ವಿಳಾಸಕ್ಕೆ ತಿಳಿಸಬೇಕು ನಮ್ಮಿಂದ ಉತ್ತರಕ್ಕಾಗಿ ಕಾಯಬೇಕಾಗಿಲ್ಲ- ಎಂಬುದಾಗಿ ಭಾರತ ಸೇವಾ ದಳದ ದಳಪತಿ ಎ ಎಸ್ ಎ ಶ್ರೀ ರಾಮರಾಯರು ತಿಳಿಸಿರುತ್ತಾರೆ

### "ಸಾಹುಕಾರ" ನಾಟಕ

ನಾಟಕರತ್ನ ಶ್ರೀ ಜಿ ಹೆಚ್ ವೀರಣ್ಣನವರ ಗುಬ್ಬಿ ಶ್ರೀ ಚನ್ನ ಬಸವೇಶ್ವರ ಕೃಪಾ ಪೋಷಿತ ನಾಟಕ ಕಂಪೆನಿಯವರು ರಾಜಧಾನಿಯಲ್ಲಿ ಪ್ರದರ್ಶಿಸುವ ನಾಟಕಗಳ ಆರಂಭೋತ್ಸವವಾಗಿ ನೆನ್ನೆ ರಾತ್ರಿ ೧೦ ಗಂಟೆಗೆ ರತ್ನಾವಳಿ ಥಿಯೇಟರಿನಲ್ಲಿ ಸಾಹುಕಾರ ಎಂಬ ನಾಟಕವನ್ನು ಅಭಿನಯಿಸಿದರು ಹಿರಿಯ ಶಾಸನ ಸಭೆಯ ಅಧ್ಯಕ್ಷ ಶ್ರೀ ಹೆಚ್ ಸಿದ್ದಯ್ಯನವರು ಅಗ್ರಾಸನವನ್ನು ವಹಿಸಿದ್ದರು ಶ್ರೀ ಎಂ ಸಿ ಸುಬ್ರಹ್ಮಣ್ಯಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ಸಿನಿಮಾ ಚಿತ್ರಗಳ ನೋಟದ ಬಗ್ಗೆ ವಿಶೇಷ ಆಕ್ಷೇಪಿಸುವ ಈ ಕಾಲದಲ್ಲಿ ಶ್ರೀ ವೀರಣ್ಣನವರು ತಮ್ಮ ನಾಟಕ ಮಂಡಲಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದಕ್ಕೆ ಸಂತೋಷವನ್ನು ಸೂಚಿಸಿ ಕಂಪೆನಿಯವರಿಗೆ ಯಶಸ್ಸು ಗಳಿಸಿದ ಹಾರೈ ಸಿ

## ಟ್ರೀಎಸ್ಟೆ ಭಾಗವನ್ನು ಇಟಲಿಗೆ ಒಪ್ಪಿಸಲು ನಿರ್ಧಾರ

ಟ್ರಿಯಸ್ಟೆನಗರದ ಎ ವಿಭಾಗದಲ್ಲಿರುವ ೪ ಸಾವಿರ ಸೈನ್ಯಗಳನ್ನು ವಾಪಸು ಕರೆಸಿಕೊಂಡು ಆ ಪ್ರದೇಶವನ್ನು ಇಟಲಿಯ ಆಡಳಿತಕ್ಕೆ ಒಪ್ಪಿಸಲು ಬ್ರಿಟನ್ ಮತ್ತು ಅಮೆರಿಕಗಳು ನಿರ್ಧರಿಸಿರುವುದರಿಂದ ಅಧಿಕಾರವು ತವಾಗಿ ತೀವ್ರವಾಗಿದೆ ಈ ನಿರ್ಧಾರವನ್ನು ಯುಗೊಸ್ಲೇವಿಯಾವು ಪ್ರತಿಭಟಿಸುತ್ತಿದೆ

## ಬೆಂಗಳೂರಿಗೆ ಧನಲಕ್ಷ್ಮಿಯ ಪ್ರಯಾಣ

ಬೆಂಗಳೂರು ಆಸ್ಪತ್ರೆಯಲ್ಲಿ ಪರೀಕ್ಷೆ ಪಡೆಯಲು ನೆನ್ನೆ ತನ್ನ ಹಳ್ಳಿಯಿಂದ ಕೊಡಗಿನ ಶ್ರೀಮತಿ ಧನಲಕ್ಷ್ಮಿಯು ಪ್ರಯಾಣ ಮಾಡಿದರೆಂದು ತಿಳಿದುಬಂದಿದೆ ಆಕೆಯು ಈಗ ಆರೋಗ್ಯವಾಗಿಯೂ ಹರ್ಷಚಿತ್ತರಾಗಿಯೂ ಇರುವರೆಂದು ಹೇಳಲಾಗಿದೆ

## ಕ್ಲಾರ್ಕ್ ಗೇಬಲ್‌ರವರ ಐದನೇ ವಿವಾಹ

ಅಮೆರಿಕದ ಸುಪ್ರಸಿದ್ಧ ಸಿನಿಮಾ ನಟ ಕ್ಲಾರ್ಕ್ ಗೇಬಲ್ಲರು ಐದನೆ ಬಾರಿ ವಿವಾಹವಾಗಲಿದ್ದಾರೆಂದು ವರದಿಯಾಗಿದೆ ೨೭ ವರ್ಷದ ಫ್ರೆಂಚ್ ಸುಂದರಿ ಡಾರ್ಲ್ ಎಂಬಾಕೆಯು ... ನಟನಿಗೆ ವಧುವಾಗಲಿದ್ದಾಳೆ ಆಕೆಗೆ ಇದು ಮೂರನೇ ವಿವಾಹ

### ಹೈದರಾಬಾದಿನಲ್ಲಿ ಮೈಸೂರಿನ ಮುಖ್ಯಮಂತ್ರಿ

ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ದಹಲಿಯಿಂದ ಹೈದರಾಬಾದಿಗೆ ಆಗಮಿಸಿರುತ್ತಾರೆ ಅಲ್ಲಿ ನಡೆಯುವ ನಾಡ ಹಬ್ಬವನ್ನು ಅವರು ವೀಕ್ಷಿಸುವರು

### ಕಾಳವಾಡಿ ಶ್ರೀ ಕನ್ನಡಿಗರ ಸಂಘದ ಪ್ರಾರಂಭೋತ್ಸವ

ಗೊರೂರ ತಾಲ್ಲೂಕು ಜಿಲ್ಲೆಯ ಕಾಳವಾಡಿ ಶ್ರೀ ಕನ್ನಡಿಗರ ಸಂಘದ ಪ್ರಾರಂಭೋತ್ಸವವನ್ನು ಲೋಕಸಭೆಯ ಸದಸ್ಯ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ನೆರವೇರಿಸುವರು ... ಗಂಟೆಗೆ ಕಾಳವಾಡಿ ಗ್ರಾಮದಲ್ಲಿ ನೆರವೇರುವ ... ಮೈಸೂರು ಶಾಸನ ಸಭಾ ಸದಸ್ಯ ಶ್ರೀ ಯು ಎಂ ಮಾದಪ್ಪನವರು ಅಧ್ಯಕ್ಷತೆ ವಹಿಸುವರು.

### ಆಯುಧಪೂಜೆ ದಿನ ಬ್ಯಾಂಕುಗಳಿಗೆ ರಜಾ ಕೊಡಬೇಕು

ಮೈಸೂರು ಸರ್ಕಾರದವರು ಆಯುಧಪೂಜೆ ದಿನ ಸಾರ್ವತ್ರಿಕ ರಜಾವನ್ನು ಘೋಷಿಸಿರುತ್ತಾರೆ ಆದರೆ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಶಾಸನದ ಪ್ರಕಾರ ... ರಜಾ ... ವನ್ನು ಮಾಡಿಲ್ಲ ... ಬ್ಯಾಂಕುಗಳು ರಜಾ ವಿರುವುದಾಗಿ ... ಅಧಿಕಾರಿಗಳನ್ನು ಕೋರಿ ... ಒಂದು ಪತ್ರ ಬರೆದಿದ್ದಾರೆ

### ನವರಾತ್ರಿಯಲ್ಲಿ ಆಕಾಶವಾಣಿಯಲ್ಲಿ ಪ್ರಸಿದ್ಧ ಗಾಯಕರ ಸಂಗೀತ

ಈ ಕಾಲದ ಈ ವರ್ಷದ ದಸರಾಕ್ಕೆ ಮೈಸೂರು ಆಕಾಶವಾಣಿಯು ... ಪ್ರಸಿದ್ಧ ಗಾಯಕರಿಂದ ಸಂಗೀತ ಕಚೇರಿಗಳನ್ನು ಏರ್ಪಡಿಸಿದೆ ... ಶ್ರೀ ... ಮತ್ತು ... ಶ್ರೀ ... ಸಂಗೀತ ... ವೃಂದಗಳ ...

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಸಂಗೀತ ... ಮಧ್ಯಾಹ್ನ ... ಸಂಜೆ ... ಸಂಗೀತ ... ವಾರ್ತೆ ... ಮೈಸೂರಿನವರ ಕನ್ನಡ ... ಬಾಲೆ ಮುಂತಾದವು

## ಕರುವನ್ನು ಹಿಂಬಾಲಿಸಿ ಹಸು ಬಾವಿಗೆ ಹಾರಿತು

ಚಾಮರಾಜನಗರ ೮

ಇಲ್ಲಿನ ನಿವಾಸಿ ಚಂದ್ರಶೇಖರ್ ಎಂಬುವರ ಮನೆ ಕರುವು ಇದ್ದಕ್ಕಿದ್ದಂತೆಯೇ ಬಿದರಹಾಂದಾಗ ಪಕ್ಕದಲ್ಲಿದ್ದ ಬಾವಿಗೆ ನ ಗುಳಕೊಂಡಿತೆಂದೂ, ತಾಯಿ ಹಸುವು ಅದನ್ನು ನೋಡಿ ತಾನೂ ಬಾವಿಯೊಳಗೆ ಹಾರಿತೆಂದೂ ವರದಿಯಾಗಿದೆ ... ಪ್ರಯಾಸ ಪಟ್ಟು ಎರಡು ಪ್ರಾಣಿಗಳನ್ನೂ ಎತ್ತಲಾಯಿತು ಕರುವು ಸತ್ತು ಹೋಗಿದ್ದಿತು, ಹಸುವಿನ ಕೋಡು ಮುರಿದಿದ್ದಿತು

## ಕಾಸಿಂ ರಜ್ವಿ ಮೇಲಿನ ಮೊಕದ್ದಮೆಯ ವೆಚ್ಚ ೧೯ ಲಕ್ಷ ರೂ.

ಹೈದರಾಬಾದಿನ ರಜಾಕಾರರ ನಾಯಕ ಕಾಸಿಂ ರಜ್ವಿಯ ಮೇಲೆ ನಡೆಸಲಾದ ಬೀಬಿನಗರದ ದರೋಡೆ ಮೋಬುಲ್ಲಾ ಕೊಲೆ ಮತ್ತು ಮಾಜಿ ಮಂತ್ರಿಗಳ ಮೊಕದ್ದಮೆಗಳಲ್ಲಿ ಒಟ್ಟು ೧೯ ಲಕ್ಷ ರೂ ಗಳು ಸರ್ಕಾರಕ್ಕೆ ವೆಚ್ಚವಾದವೆಂದು ಗೊತ್ತಾಗಿದೆ

### ತಿರುನಕ್ಷತ್ರ ಮಹೋತ್ಸವ

ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಪರಕಾಲ ಮಠದಲ್ಲಿ ನಾಳೆ ಮತ್ತು ನಾಡಿದ್ದು ಬೆಳಿಗ್ಗೆ ೧೦|| ಗಂಟೆಗೆ ಮೊದಲಿನ ಸ್ವಾಮಿಗಳಾದ ಶ್ರೀ ಪರಕಾಲ ಯತೀಂದ್ರ ಮಹಾದೇಶಿಕ ಮತ್ತು ಶ್ರೀ ಅಭಿನವ ಪರಕಾಲ ಯತೀಂದ್ರ ಮಹಾದೇಶಿಕ ಶ್ರೀ ಸ್ವಾಮಿಗಳವರ ತಿರುನಕ್ಷತ್ರ ಮಹೋತ್ಸವಗಳು ನಡೆಯುವುವು ಭಕ್ತಾದಿಗಳು ಬಂದು ತೀರ್ಥಪ್ರಸಾದವನ್ನು ತೆಗೆದುಕೊಂಡು ಹೋಗುವಂತೆ ಶ್ರೀ ಮಠದವರು ಕೋರಿರುತ್ತಾರೆ

### ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಕ್ಷಣ ಶಿಬಿರ

ಮೈಸೂರಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶ್ರಯದಲ್ಲಿ ನೆನ್ನೆಯಿಂದ ೧೫ನೇ ತಾ|| ವರೆಗೆ ಶಿಕ್ಷಕ ಶಿಕ್ಷಣ ವರ್ಗವನ್ನು ಶಾರದಾ ವಿಲಾಸ ಹೈಸ್ಕೂಲಿನ ಬಳಿ ನಿತ್ಯವೂ ಬೆಳಿಗ್ಗೆ ೫|| ರಿಂದ ೧೦ ಮತ್ತು ಸಂಜೆ ೫ ರಿಂದ ೬|| ಗಂಟೆವರೆಗೆ ನಡೆಸಲಾಗುವುದು ೧೫ನೇ ತಾ|| ಸಂಜೆ ೫|| ಗಂಟೆಗೆ ಅದರ ಸಮಾರೋಪ ಸಮಾರಂಭವು ಗಣೇಶ ಟಾಕೀಸು ಪಕ್ಕದ ಮೈದಾನದಲ್ಲಿ ನಡೆಯುವುದು ಶ್ರೀ ಜಗನ್ನಾಥರಾವ್ ಜೋಷಿಯವರ ಭಾಷಣ ಮಾಡುವರು

### ಇದು ನಿಮಗೆ ಗೊತ್ತೇ ?


ದಸರಾ ಹಬ್ಬಕ್ಕೆ ಬೇಕಾಗುವ ...

## ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

... ಸ್ಥಳವೆಂದರೆ

## ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(... ಬಿಲ್ಡಿಂಗ್)

... ಮೈಸೂರು



Edited Printed and Published by A R Nagarajan at Sadhvi Press D Subbiah Road Mysore


## ಕೇವಲ ೧೭ ಪೌಂಡು ತೂಕದ ಪ್ಲಾಸ್ಟಿಕ್ ಬೈಸಿಕಲ್

ಡೆನ್ಮಾರ್ಕ್ ದೇಶದ ಇಂಜಿನಿಯರೊಬ್ಬರು ೧೭ ಪೌಂಡು ಮಾತ್ರ ತೂಗುವ ಪ್ಲಾಸ್ಟಿಕ್ ಬೈಸಿಕಲ್ಲನ್ನು ತಯಾರಿಸಿರುವರೆಂದು ವರದಿಯಾಗಿದೆ ಈಗ ತಯಾರಿಸಿರುವ ಮಾದರಿಯನ್ನು ಅಮೆರಿಕದ ಪ್ಲಾಸ್ಟಿಕ್ ಕಂಪೆನಿಯೊಂದಕ್ಕೆ ಕಳುಹಿಸಲಾಗಿದೆಯೆಂದೂ ಅಲ್ಲಿ ಅವನ್ನು ಅಧಿಕ ಸಂಖ್ಯೆಯಲ್ಲಿ ತಯಾರಿಸುವ ಬಗ್ಗೆ ಯೋಜನೆಯನ್ನು ಸಿದ್ಧಗೊಳಿಸಿದೆಯೆಂದೂ ಗೊತ್ತಾಗಿದೆ

### ಪ್ರಥಮ ದರ್ಜೆ ಕಾಲೇಜಿನ ರಜತೋತ್ಸವ

ದಾವಣಗೆರೆಯ ಪ್ರಥಮ ದರ್ಜೆ ಕಾಲೇಜಿನ ರಜತ ಮಹೋತ್ಸವವು ಮುಂದಿನ ಜನವರಿ ತಿಂಗಳು ನಡೆಯುವುದು ಶ್ರೀಮನ್ ಮಹಾರಾಜರು ಅದರ ಆರಂಭೋತ್ಸವವನ್ನು ನೆರವೇರಿಸುವರು ಕಾಲೇಜ ಪ್ರಿನ್ಸಿಪಾಲರಾದ ಶ್ರೀ ಎಲ್. ಸೀ ... ಯ್ಯನವರ ಅಧ್ಯಕ್ಷತೆಯಲ್ಲಿ ಉತ್ಸವ ಸಮಿತಿಯೊಂದನ್ನು ರಚಿಸಲಾಗಿದೆ

### ಸಂಗೀತ ಸ್ಪರ್ಧೆ ಮುಂದೆ ಹೋಯಿತು

ಮೈಸೂರ ಮಹಾರಾಜಾ ಕಾಲೇಜಿನ ಮಿತ್ರ ಮೇಳದ ಆಶ್ರಯದಲ್ಲಿ ನಗರದ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಇದೇ ೫ನೇ ತಾ|| ಏರ್ಪಡಿಸಿದ್ದ ಸಂಗೀತ ಸ್ಪರ್ಧೆಯನ್ನು ಈ ತಿಂಗಳು ೨೦ನೇ ತಾ|| ಗೆ ಮುಂದುವರಿಸಲಾಗಿದೆ ಭಾಗವಹಿಸಲಿಚ್ಛಿಸುವವರು ೧ ರೂ ಪ್ರವೇಶ ಶುಲ್ಕದೊಡನೆ ೧೫ನೇ ತಾ|| ರೊಳಗೆ ಸ್ಪರ್ಧೆಯ ಕಾರ್ಯದರ್ಶಿ, ಸಂಘ, ಮಹಾರಾಜಾ ಕಾಲೇಜು ಅಥವಾ ಈ ದಿನಗಳಲ್ಲಿ ಶ್ರೀ ವಿ ಎಸ್ ರಾಘವ ... ಒನೇ ಮೇನ್ ... ವಾಣಿವಿಲಾಸ ಮೊಹಲ್ಲಾ ಈ ವಿಳಾಸಗಳವರೊಡನೆ ಪತ್ರ ವ್ಯವಹಾರ ನಡೆಸಬಹುದು


# ದಸರಾ ಸವಿ ನೆನಪು

## ಎಲ್ಲಾ ಕಾಲಕ್ಕೂ ಇರಲಿ !

ಕೇವಲ ಒಂದೇ **1** ರೂಪಾಯಿಗೆ

1 ನಿಮ್ಮ ಫೋಟೋ ಪೋಸ್ಟ್ ಕಾರ್ಡ್ ಸೈಜಿನಲ್ಲಿ !

2 ಶ್ರೀಮನ್ಮಹಾರಾಜರ ಫೋಟೋ ಉಚಿತ ! ಮತ್ತು

3 ಅಕ್ಟೋಬರ್ ೧೫ನೇ ವರೆಗೆ ಕ್ಯಾಮೆರಾಗಳ ಉಚಿತ ಬಹುಮಾನ !



ಇಂದೇ ಭೇಟಿಮಾಡಿ

# ಮುರುಗನ್ ಅಂಡ್ ಕಂಪೆನಿ

ಸ್ಟಾಲ್ ನಂ. E 29

ದಸರಾ ವಸ್ತು ಪ್ರದರ್ಶನ, ಮೈಸೂರು.


## ಸೀಮೆಯೆಣ್ಣೆಯಿಂದ ಓಡುವ ಮೋಟಾರು

ಮೋಟಾರು ವಾಹನಕ್ಕೆ ಪೆಟ್ರೋಲ್ ಬದಲು ಸೀಮೆಯೆಣ್ಣೆ ಮತ್ತು ನೀರನ್ನು ಉಪಯೋಗಿಸಿ ಓಡುವಂತೆ ಮಾಡುವ ಪ್ರಯೋಗವನ್ನು ಪ ... ಇಕ್ಬಾಲ್ ... ಎಂಬ ವಿದ್ಯಾರ್ಥಿಯು ನಡೆಸಿ ಯಶಸ್ವಿಯಾಗಿರುತ್ತಾರೆ ೮ ಪೌಂಡು ತೂಕದ ಒಂದು ಸಾಧನದ ಸಹಾಯದಿಂದ ಸಾವಿರಾರು ಮೈಲಿ ವರೆಗೆ ಮೋಟಾರನ್ನು ನಡೆಸಲಾಗಿದೆ

## ಯಳಂದೂರು ವಿದ್ಯಾ ನಿಧಿ

ಜಹಗೀರ್‌ದಾರ್ ಶ್ರೀಮಂತ ಪೂರ್ಣಯ್ಯನವರ ಸ್ಮಾರಕಾರ್ಥವಾಗಿ ಸ್ಥಾಪಿಸಲಾಗಿರುವ ಯಳಂದೂರು ವಿದ್ಯಾನಿಧಿಯು ಕಳೆದ ಜೂನ್ ೩೦ಕ್ಕೆ ಮುಗಿದ ವಾರ್ಷಿಕ ಅವಧಿಯನ್ನು ಹಸ್ತಗತವಾಗಿದೆ, ಕಳೆದ ೩೩ ವರ್ಷಗಳಲ್ಲಿ ೩೪,೯೫೩ ರೂ ಗಳನ್ನು ವಿನಿಯೋಗಿಸಲಾಗಿ, ೩೩,೬೯೪ ರೂ ವೆಚ್ಚವಾಗಿದೆ ಎಲ್ಲಾ ಕೋಮುಗಳ ೫೩೦ ಬಡ ವಿದ್ಯಾರ್ಥಿಗಳ ಪೈಕಿ ಪ್ರೌಢ ಶಾಲೆ ಮತ್ತು ಮೇಲ್ಪಟ್ಟು ಕಾಲೇಜು, ತಾಂತ್ರಿಕ, ಶಿಕ್ಷಣ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ೬೫,೧೯೫ ರೂ ಗಳನ್ನು ಹಂಚಲಾಗಿದೆ ವರಮಾನ ಕಡಿಮೆಯಾಗಿರುವುದರಿಂದ ಇಂಟರ್‌ಮೀಡಿಯೆಟ್ ಬಿ ಎ ತರಗತಿ ವಿದ್ಯಾರ್ಥಿಗಳಿಗೆ ಸಹಾಯ ಒದಗಿಸಲು ಸಾಧ್ಯವಾಗಿಲ್ಲವೆಂದು ತಿಳಿಸಲಾಗಿದೆ ಪ್ರಸಕ್ತ ಸಾಲಿನಲ್ಲಿ ರೂ ೧೧೩೬ ೧೨ ೦ ಆದಾಯ ಆಗಿ ೯೬೬ ೭ ೦ ವೆಚ್ಚವಾಗಿದೆ ಸರ್ಕಾರದವರು ಕೊಡುವ ೫೦೦ ರೂ ವಾರ್ಷಿಕ ವಂತಿಗೆ ಅವಧಿಯು ಈ ವರ್ಷ ಪೂರ್ತಿಯಾಗುವುದರಿಂದ ಅದನ್ನು ಮುಂದುವರಿಸಲು ಪುನಃ ಸರ್ಕಾರವನ್ನು ಕೋರಲಾಗಿದೆ ... ನಿಧಿಯ ಸವಿ ತಿಳಿಯುವರು ಪ್ರಾರ್ಥಿಸಲು ... ತಿಂಗಳ ೨೫ ನೇ ತಾ|| ಭಾನುವಾರ ಬೆಳಿಗ್ಗೆ ೧೧ ಗಂಟೆಗೆ ಯಳಂದೂರು ಜಹಗೀರುದಾರರ ಮಾಧ್ಯಮಿಕ ಶಾಲೆಯಲ್ಲಿ ನಡೆಯುವುದು

### ಸಂಸ್ಥಾನದಲ್ಲಿ ಕೊಬ್ಬರಿ ಸಂಶೋಧನಾ ಕೇಂದ್ರಕ್ಕಾಗಿ ಕೋರಿಕೆ

ಮೈಸೂರು ಸಂಸ್ಥಾನದಲ್ಲಿ ತೆಂಗಿನಕಾಯಿ ಮತ್ತು ಕೊಬ್ಬರಿಗೆ ಸಂಬಂಧಿಸಿದಂತೆ ಒಂದು ಸಂಶೋಧನಾ ಕೇಂದ್ರವನ್ನು ತೆರೆಯುವ ಬಗ್ಗೆ ಸಂಸ್ಥಾನದ ಆಹಾರ ಉತ್ಪತ್ತಿ ಕಮಿಷನರಾದ ಶ್ರೀ ಎಂ ಕೆ ಅಪ್ಪಾಜಪ್ಪನವರು ಒಂದು ಯೋಜನೆಯನ್ನು ತಯಾರಿಸಿ ಕೇಂದ್ರ ತೆಂಗಿನಕಾಯಿ ಸಮಿತಿಯವರ ಒಪ್ಪಿಗೆಗಾಗಿ ಕಳುಹಿಸಿರುತ್ತಾರೆ ಈ ವಿಷಯವು ಕೇಂದ್ರ ಸಮಿತಿಯಲ್ಲಿ ಪರಿಶೀಲಿಸಲ್ಪಡುವುದು ಸಂಸ್ಥಾನದ ತಿಪಟೂರು ಅರಸೀಕೆರೆ ಮತ್ತು ಚನ್ನಪಟ್ಟಣ ತಾಲ್ಲೂಕುಗಳಲ್ಲಿ ತೆಂಗಿನಕಾಯಿಯು ವಿಶೇಷವಾಗಿ ಬೆಳೆಯುವುದು

### ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಆಣೆ | ರೂ ಆ |
|---|---|---|
| ರಾಗಿ | ... | ... |
| ಎಳ್ಳು | ... | ... |
| ಉದ್ದಿನಬೇಳೆ | ... | |
| ಹುರುಳಿ | ... | ... |
| ಹಲಸಂದೆ | ... | |
| ... | ... | ... |
| ಕೊಬ್ಬರಿ | ... | |
| ನೆಲಕಡಲೆಕಾಯಿ | ... | ... |
| ಬೆಲ್ಲ | ... | |
| ತೆಂಗಿನಕಾಯಿ ೧೦೦೦ಕ್ಕೆ | ... | ... |

# ಬೇಕಾಗಿದ್ದಾರೆ


ಒಳ್ಳೆಯ ಅನುಭವಸ್ಥರಾದ ಒಬ್ಬ ರೈಸ್ ಮಿಲ್ ಡ್ರೈವರ್ ಮತ್ತು ಒಬ್ಬ ಬಾಯ್ಲರ್ ಮ್ಯಾನ್ ಬೇಕಾಗಿದ್ದಾರೆ ಅನುಭವಸ್ಥರು ತಮ್ಮ ಸರ್ಟಿಫಿಕೇಟುಗಳೊಂದಿಗೆ ಕೆಳಗಿನ ವಿಳಾಸಕ್ಕೆ ಬರಲಿ —

## ಶ್ರೀ ಗಜಾನನ ರೈಸ್ ಅಂಡ್ ಆಯಿಲ್ ಮಿಲ್ಸ್, ಲಿಮಿಟೆಡ್,

... ಮೈಸೂರು

HERE IS THE LONG-AWAITED

# ABIDS OUTRIGHT GRAND AUCTION SALE

ON SUNDAY THE 11th OCT 1953 AT 10 A M

Under instructions from Mr Rangappa & others

Furniture & Household articles ... of Spring Cushioned Sofa Suites ... T W Single Co... Tables, Military Wooden boxes ... proof size 3×2×2 WINDOWS & DOORS with ... Stethoscope PALL & SONATA Gramaphones - U S A make DECCA Model 150 ... Electric Kettle ... Records, TARA Table Time-piece ... CYCLE CLIPPER in good order & several other articles

ರಿಜಿಸ್ಟರ್ಡ್ ನಂ 792 | ॥ ಶಂಕರ ಸಾಹಸ ॥ | ಇಂದಿನ ಪತ್ರಿಕೆ 6 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
**ಸಾಧ್ವಿ ದಿನ ಪತ್ರಿಕೆಗೆ**
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೩ ] MYSORE SUNDAY 11-10-1953 · ಮೈಸೂರು ಭಾನುವಾರ ೧೧ ೧೦-೧೯೫೩ [ ಸಂಚಿಕೆ ೬೭

# ಅರಮನೆ ಬಳಿ ಇಂದು ಕುಸ್ತಿ ಇಲ್ಲ; ನಾಳೆ ಆಗುವ ಸಂಭವ

## ಅರಮನೆ ಮುಂದೆ ಹರಿಜನರ ಕುಸ್ತಿಗೆ ಒಪ್ಪಿಗೆ

### ಗರಡಿ ಪೈಲ್ವಾನರುಗಳ ಸಭೆಯಲ್ಲಿ ನಿರ್ಧಾರ

ಮೈಸೂರು ೧೧

ನಗರದ ೪೨ ಗರಡಿಗಳ ಪ್ರತಿನಿಧಿಗಳ ಸಭೆ ನಿನ್ನೆ ನಜರಬಾದಿನಲ್ಲಿರುವ ಶ್ರೀ ಎಸ್ [illegible] ಚನ್ನಯ್ಯನವರ ಮನೆಯಲ್ಲಿ ನಡೆದ ಅರಮನೆ ಮುಂದೆ ನಾಳೆ ನಾಳಿದ್ದು ಹರಿಜನರು ಪ್ರತ್ಯೇಕ [illegible] ಕುಸ್ತಿ ಮಾಡಲು ಅವಕಾಶ [illegible] ವಂತೆ ನಿರ್ಧರಿಸಲಾಯಿತು ಪೈಲ್ವಾನರು [illegible] ಸುಮಾರು ೫೦೦ ೬೦೦ ಜನ ಗರಡಿ [illegible] ಗಳೂ ಸೇರಿದ್ದರು [illegible] ಶ್ರೀ ಎಲ್ ಎ [illegible]ಯವರ ಸಭೆಯ ಕಾರ್ಯಕಲಾಪಗ[illegible] ಯುವ ಹೊತ್ತಿಗೆ ಅದರಲ್ಲಿ ಒಂದು [illegible] ವಹಿಸಿದರು

ಮೇಲ್ಕಂಡ ನಿರ್ಧಾರದ ಬಗ್ಗೆ ವಿಶೇಷ [illegible] ನಡೆದು ಭಿನ್ನಾಭಿಪ್ರಾಯಗಳು ಹರಿ[illegible], ಕಡೆಗೆ ಒಂದ ರಾಜಿ ಒಪ್ಪಂದಕ್ಕೆ ಬರ[illegible] ಅದರ ಪ್ರಕಾರ ಈ ದಿನ ಮತ್ತು [illegible]ದ್ದಿನಿಂದ ಮುಂದಕ್ಕೆ ಇತರ ದಿನಗಳಲ್ಲಿ [illegible] ಹಿಂದೂ ಗರಡಿಯವರೂ ನಾಳ [illegible] [illegible] ಹರಿಜನರೂ ಕುಸ್ತಿ ಮಾಡ [illegible] [illegible] ವರ್ಮಾನಿಸಲಾಯಿತು ಅದರಲ್ಲಿ ಎಲ್ಲರೂ [illegible] ವುದಕ್ಕಾಗಿಯೂ ಭರವಸೆಯಿತ್ತರು ಈ [illegible] ಮೂಲಕವಾದ ನಿರ್ಧಾರವನ್ನು [illegible] ಮುಖಂಡರುಗಳಿಂದ [illegible] ತೆಗೆದುಕೊಳ್ಳಲಾಗಿದೆ ಈ ತೀರ್ಮಾನವ [illegible] ಹರಿಜನರಿಗೆ ತಿಳಿಸಿ, ಅವರ ಒಪ್ಪಿಗೆಯ [illegible] ಪಡೆಯುವ ಜವಾಬ್ದಾರಿಯನ್ನು [illegible] ವರು ತೆಗೆದುಕೊಂಡಿರುವರು

ಈ ಕಾರ್ಯದಲ್ಲಿ ಕನ್ನೇಗೌಡನ ಕೊಪ್ಪಲಿನ [illegible] ಖರಾದ ಶ್ರೀ ದೊರೆಯ್ಯ ಬಸವಯ್ಯ [illegible] ಸಭಾ ಸದಸ್ಯರುಗಳಾದ ಶ್ರೀಗಳು ಸಿ ದೇವನಾಥ್ ಮತ್ತು ಶಿವನಂಜೇಗೌಡ [illegible] ಕಾನವರೂ ಪ್ರಮುಖ ಪಾತ್ರ ವಹಿಸಿದ್ದರು

[illegible] ಕಳೆದ ೬ ನೇ ತಾ|| ನಡೆದ ಘಟನೆಗಳಿಗಾಗಿ [illegible] ಮುಖಂಡರುಗಳು ತಮ್ಮ ವಿಷಾದವನ್ನು [illegible] ಪಡಿಸಿದರೆಂದೂ, ನೊಂದವರಿಗೆ ಸಹಾನು[illegible] ತಿಯನ್ನು ಸೂಚಿಸಿದರೆಂದೂ ಗೊತ್ತಾಗಿದೆ

[illegible] ಚನ್ನಯ್ಯನವರು ನಿನ್ನೆ ಸಂಜೆ [illegible] ಸಮ್ಮೇಳನವನ್ನು ನಡೆಸಿ [illegible] ಕಾರವನ್ನು ವಿವರಿಸಿದರು ಸರ್ಕಾರದವರೂ [illegible] ಗಳೂ ಈ ರೀತಿ ಒಪ್ಪಂದಕ್ಕೆ ಬ[illegible] ಕಾಲ ಕಲ್ಪಿಸಿದುದಕ್ಕಾಗಿ ಸಂತೋ[illegible] ವ್ಯಕ್ತಪಡಿಸಿದರು ಗುಂಡಿನೇಟಿನಿಂದ [illegible] ಬಗ್ಗೆ ವಿಷಾದವನ್ನೂ ಅವರ [illegible] ವರ್ಗದವರಿಗೆ ಅನುಕಂಪವನ್ನೂ ಸೂ[illegible] ಇದರಿಂದ ಶಿಸ್ತಿಕ್ಕೆ ಗುರಿಯಾಗಿರುವ [illegible] ಜಾಮೀನನ್ನು ಪರಿಹಾರವನ್ನೂ ದಗಿಸ[illegible] [illegible] ಗಿಯೂ ತಿಳಿಸಿದ[illegible] ಅಧಿಕಾರಿಗಳು ಸಕಾಲದಲ್ಲಿ ವಿದ್ಯಮಾನಗಳ [illegible] ಜಾಗರೂಕತೆಯಿಂ[illegible] ದಕ್ಷತೆಯಿಂದಲೂ ವರ್ತಿಸಿದ್ದರೆ [illegible] ಘಟನೆ [illegible] ತಪ್ಪಿಸಬಹುದಾಗಿದ್ದಿ[illegible] ಅವರು ಅಭಿಪ್ರಾಯಪಟ್ಟರು ಅರಮ[illegible]ನೆ ಮುಂದೆ ಹರಿಜನರ ಕುಸ್ತಿಗಳನ್ನು [illegible]

## ನಗರದ ದ್ವಿತೀಯ ನ್ಯಾಯಾಸ್ಥಾನದಲ್ಲಿ ಹಣದ ಧಸಾವಣೆ?

### ಗುಮಾಸ್ತರ ಬಂಧನ

ಮೈಸೂರು ೧೧

ಇಲ್ಲಿನ ಲಕ್ಷ್ಮೀಪುರದ ಪೋಲೀಸರು ನಗರದ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಹೆಡ್ ಗುಮಾಸ್ತೆಯಾಗಿರುವ ಶ್ರೀ ಎಲ್ ಎ [illegible] ಬಟ್ಸ್ ರವರನ್ನು ನಿನ್ನೆ ದಸ್ತಗಿರಿ ಮಾಡಿ, [illegible] ದಿನಗಳ ರಿಮ್ಯಾಂಡನ್ನು ಪಡೆಗರು ಕೋರ್ಟಿನ [illegible] ರೂ ಧಸಾವಣೆ [illegible] ಈ ದಸ್ತಗಿರಿಯಾಗಿರುವುದೆಂದು ಹೇಳಲಾಗಿದೆ

### ವಿಶ್ವವಿದ್ಯಾಲಯದ ಘಟಿಕೋತ್ಸವ

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವು [illegible] ದಿನ ತಿಂಗಳು ನಡೆಯುವುದೆಂದೂ [illegible] [illegible] ಧ್ಯಾಪಕರಾಗಿದ್ದ [illegible] ಭಾಷಣ ಮಾಡ[illegible] ಹುಪ್ಪಾನಿಸಬೇಕೆಂದೂ ನಿರ್ಧರಿಸಿರುವುದಾಗಿ [illegible] ದಿಯಾಗಿದೆ

### ೬೦ ಆಡುಗಳ ಕಳುವು

ನೆರೆ ಪ್ರದೇಶದ ಹಲವರು ನಗರದ [illegible] [illegible] ಪರಿಸಿರುವರೆಂದೂ [illegible] ಬಂಧಿಸ[illegible] [illegible] ದ ಕಳುವಿನ ವಿಚಾರವು ಪತ್ತೆಯಾಗಿಲ್ಲವೆಂದೂ ಇಬ್ಬರ ದಸ್ತಗಿರಿಯಾಗಿರುವುದಾಗಿಯೂ ವರದಿಯಾಗಿದೆ

### ಕಾರಿಕಲ್ಲಿನಲ್ಲಿ ಹರತಾಳ

ಆಹಾರ ಧಾನ್ಯ ಬಟ್ಟೆ ಮತ್ತೆಲ್ಲ ಪದಾರ್ಥಗಳ ಮೇಲೆ ರೂಗೆ ಒಂದು ಆಣೆಯಂತೆ [illegible] ಓವರ್ ತೆರಿಗೆಯನ್ನು ವಿಧಿಸಿರುವುದಕ್ಕಾಗಿ ಪ್ರತಿಭಟಿಸಲು ಫ್ರೆಂಚರಿಗೆ ಸೇರಿರುವ ಕಾರಿಕಲ್ ನಗರದಲ್ಲಿ ಮೊನ್ನೆ ಹರತಾಳವನ್ನು ಆಚರಿಸಲಾಯಿತು ಫ್ರೆಂಚ್ ಭಾರತದ ಇತಿಹಾಸದಲ್ಲೇ ಇಂತಹ ಹರತಾಳವು ನಡೆದಿರಲಿಲ್ಲವೆಂದು ಹೇಳಲಾಗಿದೆ

[illegible] ಸಿದಾಗ ತಮ್ಮನ್ನಾಗಲಿ, ಗರಡಿ ಸಂಘದವರನ್ನಾಗಲೀ ಸಲಹೆ ಕೇಳಲಿಲ್ಲವೆಂದ ಅವರು [illegible] ಳಿದರು

ಹರಿಜನರ ಕುಸ್ತಿ [illegible] ಡೆಯಲು ಹಲವು ವರ್ಷಗಳಿಂದ ಪ್ರ[illegible] ನಡೆಯುತ್ತಿವೆ ಈ ಉದ್ದೇಶವನ್ನು [illegible] ಕೊಡುವುದಾಗಿ [illegible] ವರಿಗೆ ಭರವಸೆಯಿತ್ತಿದ್ದೇವೆ ಆದರೆ ಈ ವರ್ಷವೇ ಅದನ್ನು ಮಾಡಿಸುವುದಾಗಿ ನಾವು ಹೇಳಿರಲಿಲ್ಲ [illegible] ವರ [illegible] ಪರಿಸ್ಥಿತಿ [illegible] ವನ್ನು ಪಡೆದು ಈ ವಿಷಯ [illegible] ಎಂದು [illegible] ಹೇಳಿದ್ದೆವು ನಾವುಗಳು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಗಾಗಿ [illegible] ಹೋಗಿ ಬಂದನಂತರ ಈ ಕುಸ್ತಿಯ ಕಾರ್ಯಕ್ರಮಗಳು ಏರ್ಪಾಡಾಗಿರುವುದಾಗಿ ಗೊತ್ತಾಯಿತು ಎಂದು ಶ್ರೀ ಚನ್ನಯ್ಯನವರು [illegible] ಈ ವಿಚಾರದಲ್ಲಿ ಒಂದು ರೀತಿಯ [illegible] ನಿರ್ಧಾರಕ್ಕೆ ಬಂದಿರುವುದಕ್ಕಾಗಿ ಶ್ರೀ ಚನ್ನಯ್ಯನವರು ಸಂತೋಷವನ್ನು ಸೂಚಿಸಿದರು

## ಗುಂಡಿನೇಟಿನಿಂದ ಸತ್ತವರ ವಿವರ

ಮೈಸೂರು ೧೧

ಕಳೆದ ಗುರುವಾರ ಅರಮನೆ ಬಳಿ ನಡೆದ ಗುಂಡಿನೇಟಿನಿಂದ ಸತ್ತವರ ವಿವರ ಈ ರೀತಿ ಇದೆ —

೧) ಮಹದೇವಯ್ಯ, ತಂದೆ ಲಿಂಗಾಚಾರಿ ವಿಶ್ವಕರ್ಮ ೨೦ ವರ್ಷ ಕನ್ನೇಗೌಡನ ಕೊಪ್ಪಲು ೨) ಮುದ್ದುಬಸಪ್ಪ ತಂದೆ ಚಿಕ್ಕಬಸಪ್ಪ ವಯಸ್ಸು [illegible] ಗಾರೆ ಕೆಲಸ [illegible] ೩) [illegible] ರಂಗಣ್ಣ [illegible], [illegible] ಜಾತಿ ವಯಸ್ಸು [illegible] ನಾಲಬಂದಿ, ಮೈಸೂರು ೪) [illegible] ವಯಸ್ಸು [illegible], ಗುರುತು ಪತ್ತೆಯಿಲ್ಲ

### [illegible] ಗಳಿಗೆ ಬಡ್ತಿ

ಇಲ್ಲಿನ [illegible] ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ [illegible] ಕೃಷ್ಣಸ್ವಾಮಿ ಅಯ್ಯಂಗಾರ್ಯರಿಗೆ ಬಡ್ತಿ ಕೊಟ್ಟು ಮೈಸೂರ ಜಿಲ್ಲಾ ವಿದ್ಯಾಧಿಕಾರಿ [illegible] ನೇಮಿಸಲಾಗಿದೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಲ್ [illegible]ಯ್ಯನವರನ್ನು ಬಳ್ಳಾರಿ ಜಿಲ್ಲಾ ವಿದ್ಯಾಧಿಕಾರಿಗಳಾಗಿ ವರ್ಗಾಯಿಸಲಾಗಿದೆ [illegible] ಹೈಸ್ಕೂಲ್ ಹೆಡ್ ಮಾಸ್ಟರಾದ ಶ್ರೀ [illegible] ರಂಗಸ್ವಾಮಿ [illegible] ಜಿಲ್ಲಾ ವಿದ್ಯಾಧಿಕಾರಿಗಳಾಗಿ ಬಡ್ತಿಕೊಟ್ಟು [illegible] ವರ್ಗಾಯಿಸಲಾಗಿದೆ

### ಅರಮನೆ ಕೆಳ ದರ್ಜೆ ನೌಕರರಿಗೆ ೨ ರೂ ಹೆಚ್ಚು ಸಂಬಳ

ಅರಮನೆಯ ಕೆಳ ದರ್ಜೆ ನೌಕರರೆಲ್ಲರಿಗೂ ಕಳೆದ [illegible] ನೇ ತಾ|| ನಿಂದ ೨ ರೂ ಹೆಚ್ಚಿನ ಸಂಬಳವನ್ನು ಶ್ರೀಮನ್ಮಹಾರಾಜರು ಮಂಜೂರು ಮಾಡಿರುತ್ತಾರೆ

## ಅಧಿಕ ಧಾನ್ಯ ಶೇಖರಿಸದಂತೆ ವರ್ತಕರಿಗೆ ಎಚ್ಚರಿಕೆ

### ಪತ್ರಿಕಾ ಗೋಷ್ಠಿಯಲ್ಲಿ ಎಂ ವಿ ಕೃಷ್ಣಪ್ಪನವರ ಹೇಳಿಕೆ

ಸ್ವಂ ಸು ಫೋ[] ಬೆಂಗಳೂರು ೧೧

ಕೇಂದ್ರ ಸರ್ಕಾರದ ಆಹಾರ ಉಪ ಮಂತ್ರಿಗಳಾದ ಶ್ರೀ ಎಂ ವಿ ಕೃಷ್ಣಪ್ಪನವರು ಈ ದಿನ ಪತ್ರಿಕಾ ಗೋಷ್ಠಿಯನ್ನು ನಡೆಸಿ ದೇಶದಲ್ಲೆಲ್ಲಾ ಮಳೆಬೆಳೆಗಳು ಸಮೃದ್ಧಿಯಾಗಿ ಆಗಿರುವುದರಿಂದ ಧಾನ್ಯದ ಬೆಲೆಯು ಖಂಡಿತವಾಗಿ [illegible] ಇಳಿಯುವುದೆಂದ ಹೇಳಿದರು ಈ ಕಾರಣದಿ ದ ವರ್ತಕರು ಧಾನ್ಯಗಳನ್ನು ಮಿತಿಮೀರಿ ಸಂಗ್ರಹಿಸಿ ಅನಂತರ ನೋವು ಪಡಬಾರದೆಂದು ಎಚ್ಚರಿಸಿದರು ಅಂತರ ರಾಷ್ಟ್ರೀಯ ವಲಯಗಳಲ್ಲೂ [illegible] ಆಹಾರದ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಎಲ್ಲ [illegible] ಧಾನ್ಯಗಳು [illegible] ಸಿಗಲಿರುವುವೆಂದ ಅವರು ತಿಳಿಸಿದರು

ಹನುಮಂತಯ್ಯನವರು ಹಿಂದಿರುಗಿದರು

ದೆಹಲಿಗೆ ತೆರಳಿದ್ದ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ಮಧ್ಯಾಹ್ನ ಬೆಂಗಳೂರಿಗೆ ಹಿಂದಿರುಗಿದರು ನಾಳೆ ಬೆಳಗೆ ಅವರು ಮೈಸೂರಿಗೆ ಬರುವರು

○ ಪ್ರಧಾನಿ ನೆಹರೂರವರು ಮೊನ್ನೆ ಬೊಂಬಾಯಿಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಅವರ ಕಾರನ್ನು ತಡೆದ ಒಬ್ಬ ಯುವಕನು ಬಂಧಿಸಲ್ಪಟ್ಟಿರುವನು.

## ಈ ದಿನ ಅರಮನೆ ಮುಂದೆ ಕುಸ್ತಿ ಇಲ್ಲ

### ನಾಳೆಯಿಂದ ನಡೆಯುವ ಸಂಭವ

ಮೈಸೂರು ೧೧

ಈ ದಿನದಿಂದ ಅರಮನೆ ಮುಂದೆ ಕುಸ್ತಿಗಳು ನಡೆಯ ವುದಾಗಿ ನಿರೀಕ್ಷಿಸಲಾಗಿದ್ದಿತಷ್ಟೆ? ಈ ದಿನ ಮಧ್ಯಾಹ್ನದ ವರೆಗೆ ನಡೆದ ವಿದ್ಯಮಾನಗಳಿಂದ ಈ ವಿಷಯವು ಇನ್ನೂ ಸಂದಿಗ್ಧವಾಗಿಯೇ ಉಳಿದು ಯಾವ [illegible] ಒಪ್ಪಂದಕ್ಕೂ ಬರಲಾಗಿಲ್ಲವೆಂಬ ಸೂಚನೆಗಳೇ ಕಾಣಬರುತ್ತಿದ್ದುವು

ನಿನ್ನೆ ಶ್ರೀ ಚನ್ನಯ್ಯನವರ ಮನೆಯಲ್ಲಿ ನಡೆದ ಚರ್ಚೆಗಳೂ ತೀರ್ಮಾನಗಳೂ ಏಕ ಪಕ್ಷವಾಗಿದ್ದುವೆಂಬುದಾಗಿಯೂ, ಅವುಗಳು ತಮ್ಮನ್ನು ಬದ್ಧಪಡಿಸುವುದಿಲ್ಲವೆಂದೂ ಸವರ್ಣ ಹಿಂದೂಗಳ ಹಲವು ಗರಡಿಯವರು ನಿನ್ನೆ ಸಂಜೆಯಿಂದಲೇ ಹೇಳಲಾರಂಭಿಸಿ, ಈ ತೀರ್ಮಾನದ ಒಪ್ಪಿತತ್ವವನ್ನು ಸೂಚಿಸಲು ತೊಡಗಿದರೆಂದು ವರದಿಯಾಗಿದೆ

ಅತ್ತಲಾಗಿ ತಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಏಕಪಕ್ಷವಾಗಿ ಮಾಡಿರುವ ನಿರ್ಧಾರವು ತಮಗೆ ಒಪ್ಪಿಗೆಯಾಗುವುದಿಲ್ಲವೆಂದು ಹರಿಜನ [illegible] ವಾದಿಸತೊಡಗಿದರೆಂದ ಹೇಳಲಾಗಿದೆ ಈ ಮಧ್ಯೆ ಈ ಸಮಸ್ಯೆಯು ಬಿಗಡಾಯಿಸಿ ನಿನ್ನೆ ರಾತ್ರಿ ಮತ್ತು ಈ ದಿನ ಮಧ್ಯಾಹ್ನದ ವರೆಗೆ ಮುಖ್ಯಮಂತ್ರಿಗಳ ನಿವಾಸವಾದ ಬಲದರ್ಶಿನಿಯಲ್ಲಿಯೂ ಮತ್ತು ಉನ್ನತಾಧಿಕಾರಿಗಳ ವಲಯಗಳಲ್ಲಿಯೂ ಸತತವಾದ ಸಂಧಾನ ಪ್ರಯತ್ನಗಳು ನಡೆದು ಕೊನೆಗೆ ಒಂದು ಫಲಿತವನ್ನು ಮುಟ್ಟಿರುವುದಾಗಿ ತಿಳಿದುಬಂದಿದೆ

ನಿನ್ನೆ ದಿನ ಹಲವು ಸವರ್ಣ ಗರಡಿ ಪೈಲ್ವಾನರುಗಳು ಮಾಡಿದ ತೀರ್ಮಾನವನ್ನು ಅನುಸರಿಸಿ ನಾಳೆಯಿಂದ ಕುಸ್ತಿಗಳನ್ನು ಆರಂಭಿಸುವಂತೆ ಅಂತಿಮ ನಿರ್ಧಾರಕ್ಕೆ ಬಂದಿರುವುದಾಗಿ ಗೊತ್ತಾಗಿದೆ ಇದಕ್ಕೆ ಉಭಯ ಪಂಗಡಗಳವರ ಒಪ್ಪಿಗೆಯೂ ದೊರೆತಿರುವುದೆಂದು ಹೇಳಲಾಗಿದೆ

ಈ ಬಿಕ್ಕಟ್ಟಿನ ದೆಸೆಯಿಂದ ಈ ದಿನ ಕುಸ್ತಿಯನ್ನು ನಡೆಸಲಾಗುವುದಿಲ್ಲ ನಾಳೆಯಿಂದ ನಿಯಮಿತ ರೀತ್ಯಾ ದಿನಾಂಕಕ್ಕೆ ಜರುಗುವುವು

### ವಸ್ತು ಪ್ರದರ್ಶನದಲ್ಲಿ ವಿದ್ಯುಚ್ಛಕ್ತಿ ತಗುಲಿ ಮರಣ

ಈ ದಿನ ಬೆಳಗ್ಗೆ ವಸ್ತು ಪ್ರದರ್ಶನದಲ್ಲಿ ಶ್ರೀ ಎಂ ಆರ್ ಜೆಟ್ಟಪ್ಪನವರ ಸ್ಟಾಲಿನ ಬಳಿ ಮಾದ ಎಂಬ ಜಾಡಮಾಲಿಯೊಬ್ಬನು ವಿದ್ಯುಚ್ಛಕ್ತಿ ತಗುಲಿ ಮೃತಪಟ್ಟನು

## ರೂಪಾಯಿಗೆ ೨॥ ಸೇರು ಗೋಧಿ

ಭಾರತ ಸರ್ಕಾರದವರು ಮಣ ಒಂದಕ್ಕೆ ೧೪ ರೂ ನಂತೆ ಒದಗಿಸಿದ ೩೦,೦೦೦ ಟನ್ ಗೋಧಿಯನ್ನು ಕ್ಷಾಮ ಪೀಡಿತ ಪ್ರದೇಶಗಳಲ್ಲಿ ರಿಯಾಯಿತಿ ದರದಲ್ಲಿ ಸರ್ಕಾರದವರು ಸರಬರಾಜು ಮಾಡಲು ನಿರ್ಧರಿಸಿರುತ್ತಾರೆ [illegible] ಪೈಗೆ ೧ ಸೇರಿನಂತೆ (ಸುಮಾರು ರೂ ಗೆ ೨॥ ಸೇರು) ಗೋಧಿಯನ್ನು ಮಾರಲಾಗುವುದು ಅಭಾವ ಪೀಡಿತ ಪ್ರದೇಶದವರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದೆಂದು ಸರ್ಕಾರದವರ ಪ್ರಕಟಣೆ [illegible]

## ವಾರ ಭವಿಷ್ಯ

ಮೇಷ—ದುಷ್ಟಿಗಾಗಿ ... ಆರೋಗ್ಯ ... ಪ್ರವಾಸ ... ಜ್ಞಾನ ...

ವೃಷಭ—ಪ್ರವಾಸ ... ವಿಷಯ ...

ಮಿಥುನ—ಮಹತ್ವ ... ಪ್ರತಿಸ್ಪರ್ಧಿಗಳಿಗೆ ... ಆರೋಗ್ಯ ... ವ್ಯಾಪಾರ ... ಉದ್ಯೋಗ ... ಪ್ರಗತಿ ... ಸಾಂಪತ್ತಿಕ ಸ್ಥಿತಿ ... ಭೋಜನ ...

ಕರ್ಕ—ಗೃಹಮಾನ ... ಸಾಂಪತ್ತಿಕ ಸ್ಥಿತಿ ...

ಸಿಂಹ ... ಆರೋಗ್ಯ ... ಧನ ... ಆಶುಭ ವಾರ್ತೆ ...

ಕನ್ಯಾ—ಆರ್ಥಿಕ ಸ್ಥಿತಿ ...

ತುಲಾ—ಆರೋಗ್ಯ ... ಹಸ್ತದ ಕತ್ರು ...

ವೃಶ್ಚಿಕ ... ಉದ್ಯೋಗ ... ಪ್ರಸಿದ್ಧ ...

ಧನ—ಮಾನ ... ವ್ಯಾಪಾರ ... ದಾನ ...

ಮಕರ—ದೊಡ್ಡವರಿಗಳಿಂದ ... ಆರೋಗ್ಯ ... ವ್ಯಾಪಾರ ... ಉದ್ಯೋಗ ... ದ್ರವ್ಯ ... ಚಿಂತೆ ...

ಕುಂಭ—ಎಚ್ಚರಿಕೆ ... ಸ್ಥಿತಿ ... ವ್ಯಾಪಾರಿಗಳಿಗೆ ...

ಮೀನ—... ಉತ್ತಮ ... ಅಧಿಕಾರಿ ...

## ದೋಣಿ ಮಗುಚಿಕೊಂಡು

... ಜೊತೆ ... ಬಹಳ ... ಹಿಂದೆಯೇ ...

## ದಕ್ಷಿಣ ಕೊರಿಯಾ ನೀತಿಯನ್ನು ಪಿಕ್ಷಸಂಸ್ಥೆಯು ಖಂಡಿಸಬೇಕು

... ದಕ್ಷಿಣ ಕೊರಿಯ ... ಕೇಂದ್ರ ... ಭಾರತದ ... ಕೊರಿಯ ... ಯುದ್ಧ ... ಸರ್ಕಾರದವರು ... ಬರದಿಯಾಗಿದೆ

## ಕರ್ನಾಟಕ ಪ್ರಾಂತ ರಚನಾ ಸಮಸ್ಯೆಯಿಂದ ತೊಡಕುಗಳು

... ಬೊಂಬಾಯಿ ... ಪ್ರಾಂತ ... ಮೈಸೂರು ... ಬೊಂಬಾಯಿ ... ಕಾರಣದಿಂದ ... ಖಂಡಿಸಿದರು

## ಬ್ರಿಟಿಷ್ ಗಯೋನಾ ಸರ್ಕಾರದ ವಜಾ

... ಬ್ರಿಟಿಷ್ ಗಯೋನಾ ... ಸರ್ಕಾರ ... ಬ್ರಿಟಿಷ್ ... ಮಂತ್ರಿ ... ತಿಳಿಸಿರುತ್ತಾರೆ

### ಆಕಾಶವಾಣಿ ಕಾರ್ಯಕ್ರಮ

...

ಒಲಿಂಪಿಯಾ ಟಾಕೀಸ್

ಕೊನೆಯ 4 ದಿನಗಳು ಮಾತ್ರ

ನನ್ನ ಮುನ್ನ

15-10-53 ರಿಂದ ... ಸಂಗ್ ದಿಲ್

## ಪಾಕಿಸ್ತಾನ ರಾಜ್ಯದ ಹೆಸರಿನ ಬದಲಾವಣೆ

ಪಾಕಿಸ್ತಾನದ ಹೆಸರನ್ನು ಬದಲಾಯಿಸಿ, ಪಾಕಿಸ್ತಾನದ ಇಸ್ಲಾಮಿಕ್ ಪ್ರಜಾ ಪ್ರಭುತ್ವ ವೆಂದು ಕರೆಯ ... ಅಲ್ಲಿನ ... ಮಂತ್ರಿ ಚೌಧುರಿ ನಜೀರ್ ... ರವರು ... ಲಹೆ ಮಾಡಿರುತ್ತಾರೆ

ರಾಜಕಮಲ್,

9 10 53 ರಿಂದ 4ನೇ ಕಡೇ ವಾರ

ಆಶ್ಮೆಮಗನ್ (ತಮಿಳ)

Edited Printed and Published by A R Nagarajan at Sadhvi Press D Subbiah Road Mysore

## ಪರ್ಷಿಯಾ ವಿಮಾನ ಚಾಲಕನಿಂದ ವಜ್ರಗಳ ವಶ

ಬೊಂಬಾಯಿಗೆ ಪರ್ಷಿಯದಿಂದ ... ವಿಮಾನವೊಂದರ ... ವಜ್ರಗಳನ್ನೂ ... ಅಧಿಕಾರಿಗಳು ವಶಪಡಿಸಿ ಕೊಂಡಿರುವರೆಂದು ವರದಿಯಾಗಿದೆ

ಇದು ನಿಮಗೆ ಗೊತ್ತೇ ?

... ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ ...

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರ ಮಾರ್ಕೆಟ್ಟರ ...) ... ಮೈಸೂರು

ದಸರಾದಲ್ಲಿ ವಿಮಾನ ವಿಹಾರ

ಮೈಸೂರು ಏರೋಡ್ರೋಂನಲ್ಲಿ

8—10—53 ರಿಂದ ★ 26—10—53 ರ ವರೆಗೆ

ನಮ್ಮ ಹೊಸ 4 ಸೀಟಿನ ವಿಮಾನದಲ್ಲಿ ಹಾರಾಡಿ

ಸಂತೋಷಪಡಿರಿ

ದರ ಕೇವಲ 5 ರೂಪಾಯಿ

ಗೌರ್ನಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್, ಬೆಂಗಳೂರು

ಬೆಂಗಾಲ್ ಲ್ಯಾಂಪ್ಸ್

ದೇಶದ ಅತ್ಯುತ್ತಮ ಲ್ಯಾಂಪ್ಸ್

★ Bengal ★

Please visit our stall N 13 14 F BLOCK

MYSORE DASARA EXHIBITION

IT PAYS TO ADVERTISE !

WHERE ? — HOW ? — WHEN ?

MORE THAN 4,00,000 OF PEOPLE SEE WHAT YOU SAY ABOUT YOURSELVES OR YOUR GOODS

Thousands of Businessmen ... Lawyers Doctors Students, men and women of all ... cannot ... PROMINENT POSITION ... BOOK YOUR SPACE TODAY ALONE TO AVOID DISAPPOINTMENT

Cont S P SURENDRANATH

SRI GAYATHRI TALKIES

... 565 ... D 1 ...

ದಸರಾ ಸವಿನೆನಪು ಎಲ್ಲಾ ಕಾಲಕ್ಕೂ ಇರಲಿ

ಕೇವಲ ಒಂದೇ 1 ರೂಪಾಯಿ

★

1 ನಮ್ಮ ಫೋಟೋ ಫ್ರೇಮ್ ...

2 ... ಫೋಟೋ ...

3 ...

★



... ಕಂಪೆನಿ.

(Authorised Dealers for Kodak Materials)

ಸ್ಟಾಲ್ ನಂ E 29 . ದಸರಾ ವಸ್ತು ಪ್ರದರ್ಶನ

ಮೈಸೂರು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

॥ ವಂದೇ ಮಾತರಂ ॥

# ಸಾಧ್ವಿ

SADHVI LEADING NATIONALIST DAILY OF MYSORE

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ ೧೨ ] MYSORE TUESDAY 13-10-1953 ಮೈಸೂರು : ಮಂಗಳವಾರ ೧೩-೧೦-೧೯೫೩ [ ಸಂಚಿಕೆ [illegible]

# ಅರಮನೆ ಬಳಿ ಗುಂಡಿನೇಟಿನ ಬಗ್ಗೆ ವಿಚಾರಣೆಯಿಲ್ಲವೇ ?

## ಕುಸ್ತಿ, ಜಂಬೂಸವಾರಿಯನ್ನು ತ್ಯಜಿಸುವುದು ಅನಿವಾರ್ಯ

### ಶ್ರೀ ಹೆಚ್. ಸಿ. ದಾಸಪ್ಪನವರ ಅಭಿಪ್ರಾಯ

ಮೈಸೂರು ೧೨.

ಮಾಜಿ ಮಂತ್ರಿಗಳಾದ ಶ್ರೀ ಹೆಚ್. ಸಿ. ದಾಸಪ್ಪನವರನ್ನು ನಮ್ಮ ಪ್ರತಿನಿಧಿಯು ಭೇಟಿ ಮಾಡಿದಾಗ ಈ ಸಾರಿ ಜಂಬೂಸವಾರಿಯನ್ನು ಇದಿನ ಪರಿಸ್ಥಿತಿಯಲ್ಲಿ ನಿಲ್ಲಿಸುವುದು ಸರ್ವಥಾ ಅನಿವಾರ್ಯವೂ ಆಗಿರುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ.

ಹರಿಜನರ ಏಳಿಗೆಯ ವಿಷಯದಲ್ಲಿ ಸಮಸ್ತರಿಗೂ ಸಂಪೂರ್ಣವಾದ ಸಮಾನ ಭಾವನೆ ಇರುವುದಾಗಿ ಅವರು ಹೇಳಿ, ಸ ಧಾರಣೆಗಳನ್ನು ನಾಡ ಹಬ್ಬವಾದ ನವರಾತ್ರಿಯಂತಹ ಸಮಯದ [illegible] ಜಾರಿಗೆ ತರಲು [illegible] ಸಂಘದ [illegible] ಮಾತ್ರ [illegible] ಕೊಳ್ಳದೆ [illegible] ಪ್ರಯತ್ನ ಪಡಬೇಕೆಂದಾಗಿ [illegible] ಧಾರಣೆಗಳನ್ನು ಜಾರಿಗೆ [illegible] ಉಂಟಾಗುವ [illegible] ಪ್ರತಿನಿಧಿಗಳು [illegible] ಅರಿತುಕೊಂಡೆ [illegible] ಜಾರಿಗೆ ತರುವುದು [illegible] ಅವರ ಹೇಳಿರುತ್ತಾರೆ. [illegible] ಹರಿಜನರ ಕುಸ್ತಿ ನಡೆಸುವ ವಿಷಯದಲ್ಲಿ ಇದೇ [illegible] ನೀತಿಯನ್ನು ಅನುಸರಿಸಬೇಕೆಂದು ಅವರ ಕೋರಿರುತ್ತಾರೆ. ಕಳೆದ [illegible] ರೀತಿ ಅನಾವಶ್ಯಕವಾಗಿ ಉದ್ಭವಿಸಿದ [illegible] ಗೂ ಘರ್ಷಣೆಗಳಿಗೂ ಮತ್ತು [illegible] ಗಳಿಗೂ ಅವರು ತಮ್ಮ ಹೃತ್ಪೂರ್ವಕವಾದ ವಿಷಾದವನ್ನು ಸೂಚಿಸಿ, [illegible] ಎಲ್ಲರ [illegible] ವಿಶ್ವಾಸ ಮತ್ತು ವಿವೇಕಪೂರಿತವಾದ [illegible] ಈ ವಿಷಯವು [illegible] ಪರಿಹರಿಸಲ್ಪಡಲೆಂದು ಹಾರೈಸಿರುತ್ತಾರೆ.

## ಸಕ್ಕರೆ ಬೆಲೆ ಹೆಚ್ಚಿತು

ಬೆಂಗಳೂರು, ೧೨.

ಡಿಪೋಗಳ ಮೂಲಕ ಮಾರಾಟವಾಗುವ ಸಕ್ಕರೆ ಬೆಲೆಯನ್ನು ಸಂಸ್ಥಾನದ ಜಿಲ್ಲಾ ಕೇಂದ್ರಗಳಲ್ಲಿ ಪೌಂಡಿಗೆ [illegible], ತಾಲ್ಲೂಕು ಕೇಂದ್ರಗಳಲ್ಲಿ [illegible] ಮತ್ತು ಇತರ ಕಡೆಗಳಲ್ಲಿ [illegible] ಮೀರಿ ಬೆಲೆ ಮಾಡುವಂತೆ [illegible] ಲಾಗಿದೆ. ಜಿಲ್ಲೆಗಳಲ್ಲಿ ಒಟ್ಟು ವ್ಯಾಪಾರದ [illegible] ತಾಲ್ಲೂಕುಗಳಲ್ಲಿ [illegible] ಮತ್ತು ಒಳಪ್ರದೇಶಗಳಲ್ಲಿ [illegible] ನಿಗದಿಪಡಿಸಲಾಗಿದೆ.

ಈ ದರಗಳು ಇದೇ ೧೫ನೇ ತಾರೀಖಿನಿಂದ ಜಾರಿಗೆ ಬರುತ್ತವೆ. ಕಳೆದ ವರ್ಷ ಮಳೆಯ ಅಭಾವದಿಂದ ಕಬ್ಬಿನ ಬೆಳೆಯು ಕಡಿಮೆಯಾಗಿ ಮಂಡ್ಯದ ಕಾರ್ಖಾನೆಯಲ್ಲಿ ಸಕ್ಕರೆಯ [illegible] ಹೋದುದರಿಂದಲೂ ಮತ್ತು ಬೊಂಬಾಯಿ ಮೊದಲಾದ ಉತ್ತರ ಭಾರತದ ಪ್ರದೇಶಗಳಿಂದ ಸಕ್ಕರೆಯನ್ನು ಆಮದು ಮಾಡಬೇಕಾಗಿರುವುದರಿಂದಲೂ, ಅವರ [illegible] ಗಿ ತಗಲುವ ವೆಚ್ಚಕ್ಕಾಗಿ ಸಂಸ್ಥಾನದಲ್ಲಿ ಸಕ್ಕರೆ ಬೆಲೆಯನ್ನು ಹೆಚ್ಚಿಸಲಾಗಿದೆಯೆಂದು ಆಹಾರ [illegible] ಡೈರೆಕ್ಟರರಾದ ಶ್ರೀ [illegible] ತಿಳಿಸಿರುವರು.

## ಅರಮನೆ ಮುಂದೆ ಕುಸ್ತಿ ನಡೆಸುವ ವಿಷಯ

### ಜಲದರ್ಶಿನಿಯಲ್ಲಿ ಸಮಾಲೋಚನೆ

ಮೈಸೂರ ೧೨.

ಅರಮನೆ ಮುಂದೆ ಹರಿಜನ ಕುಸ್ತಿಯನ್ನು ನಡೆಸುವ ವಿಷಯವಾಗಿ [illegible] ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ತಮ್ಮ ನಿವಾಸವಾದ ಜಲದರ್ಶಿನಿ [illegible] ಸಭಾಸದಸ್ಯರನ್ನು [illegible] ಬರಮಾಡಿಕೊಂಡು ಸಮಾಲೋಚನೆ ನಡೆಸಿದರೆಂದು ತಿಳಿದು ಬಂದಿದೆ. [illegible] ಶ್ರೀಗಳು [illegible] ಸನ್ನ [illegible] ಭಾಷ್ಯಂ [illegible] ವೃದ್ಧಿ ಸಮಿತಿ [illegible] ಣ್ಣ ಶಾಸನ [illegible] ಶ್ರೀ [illegible] ಗೋಪಾಲ [illegible] ಸ್ ನೇರವೇ ಮಾಡಿ [illegible] ಟಿ [illegible] ನಾರಾಯಣಸ್ವಾಮಿ [illegible] ಗಳು [illegible] ಇದ್ದರು.

ದೀರ್ಘ [illegible] ಸಾಲೋಚನೆಯ [illegible] ನಂತರ [illegible] ಹರಿಜನರ ಕುಸ್ತಿಯನ್ನು ನಡೆಸಲು [illegible] ದೇಯ [illegible] ಪ್ರಯತ್ನಗಳನ್ನೂ ಮಾಡಲು [illegible] ತೀರ್ಮಾನಿಸಿದರೆಂದು ಗೊತ್ತಾಗಿದೆ.

## ಸಿಂಹಳದ ಪ್ರಧಾನಿಯವರ ರಾಜೀನಾಮೆ

### ಕೊಟೆಲವಾಲಾರವರಿಂದ ಹೊಸ ಮಂತ್ರಿಮಂಡಲದ ರಚನೆ

ಉದರದಲ್ಲಿ ಉಂಟಾದ ವ್ರಣ ರೋಗದ ಪ್ರಯುಕ್ತ ಸಿಂಹಳದ ಪ್ರಧಾನಿ ಡಡ್ಲಿ ಸೆನಾನಾಯಿಕೆಯವರು ರಾಜೀನಾಮೆಯನ್ನು ಸಲ್ಲಿಸಿರುವರು. ಅದನ್ನು ಗವರ್ನರ್ ಜನರಲ್ಲರಾದ [illegible] ವರು [illegible] ಸ್ವೀಕರಿಸಿ [illegible] ಮತ್ತು [illegible] ಮಂತ್ರಿ ಸರ್ ಜಾನ್ ಕೊಟೆಲವಾಲರವರನ್ನು ಪ್ರಧಾನಿಯಾಗಿ ನೇಮಿಸಿ ಮಂತ್ರಿಮಂಡಲವನ್ನು ರಚಿಸಲು ಸೂಚಿಸಿರುತ್ತಾರೆ. ನಾಳೆ ಹೊತ್ತಿಗೆ ಅವರು ಮಂತ್ರಿಗಳ ಪಟ್ಟಿಯನ್ನು ಒಪ್ಪಿಸುವರು. ಸರ್ಕಾರವನ್ನು ನಡೆಸುವುದರಲ್ಲಿ ಹೆಚ್ಚಿನ ಜವಾಬ್ದಾರಿಯು ಬಿದ್ದು ವಿಪರೀತ ಚಿಂತೆ ಮತ್ತು ಅಧಿಕ ಶ್ರಮದ ಪರಿಣಾಮವಾಗಿ ಡಡ್ಲಿ ಸೇನಾನಾಯಿಕೆಯವರ ಉದರ ವ್ರಣವು ಉಲ್ಬಣಿಸಿತೆಂದು ಹೇಳಲಾಗಿದೆ.

## ಡ್ರೈವರ್ ಕೊಲೆ ಆಪಾದಿತನು ಸೆಷನ್ ವಿಚಾರಣೆಗೆ ಗುರಿ

ಬೆಂಗಳೂರು ೧೨.

ಇಲ್ಲಿನ ಸಿವಿಲ್ ಪ್ರದೇಶದಲ್ಲಿರುವ ಬಿಷಪ್ ಕಾಟನ್ ಗರ್ಲ್ಸ್ ಹೈಸ್ಕೂಲಿನ ಪ್ರಿನ್ಸಿಪಾಲ್ [illegible] ಡ್ರೈವರನ ಕೊಲೆ ಸಂಬಂಧದಲ್ಲಿ ಆಪಾದಿತನಾಗಿರುವ ಕುಪ್ಪುಸ್ವಾಮಿ ಅಲಿಯಾಸ್ ಜೋಸೆಫನ ವಿಚಾರಣೆಯು ನೆನ್ನೆ ಮುಕ್ತಾಯಗೊಂಡು, ಆಪಾದಿತನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಯಿತು.

## ಈ ದಿವಸವೂ ಕುಸ್ತಿ ಇಲ್ಲ

ಮೈಸೂರು ೧೨.

ಅರಮನೆ ಮುಂದೆ ಇಂದು ಸಂಜೆ ಕುಸ್ತಿ ನಡೆಯುವುದಿಲ್ಲ. ಕುಸ್ತಿಯ ವಿಷಯವನ್ನು ಮಂತ್ರಿಮಂಡಲವು ಪರಿಶೀಲಿಸುತ್ತಿರುವುದಾಗಿಯೂ ಈ ಬಗ್ಗೆ ಯಾವ ಒಪ್ಪಂದವೂ ಆಗಿಲ್ಲವೆಂದೂ ತಿಳಿದುಬಂದಿದೆ.

## ವಸ್ತು ಪ್ರದರ್ಶನದಲ್ಲಿ ಸರ್ವೋದಯ ಮತ್ತು ಭೂದಾನ ಯಜ್ಞದ ಸ್ಟಾಲು

[illegible] ವಸ್ತು ಪ್ರದರ್ಶನದ ಕಟ್ಟಡದ [illegible] ಸರ್ವೋದಯ ಸಿದ್ಧಾಂತ [illegible] ಭೂದಾನ ಯಜ್ಞಕ್ಕೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ತಿಳಿಸುವುದಕ್ಕಾಗಿ ಒಂದು ಸ್ಟಾಲು ಏರ್ಪಡಿಸಲಾಗಿದೆ. ಈ ವಿಷಯ [illegible] ಅಲ್ಲಿಗೆ ಬರುವಂತೆ ತಿಳಿಸಲಾಗಿದೆ.

## ಹರಿಜನರ ಹಕ್ಕನ್ನು ರಕ್ಷಿಸಲು ಮಹಾರಾಜರಿಗೆ ಮನವಿ

ಶ್ರೀ [illegible] ಶ್ರೀಮನ್ ಮಹಾರಾಜರಿಗೆ ಪತ್ರವೊಂದನ್ನು ಬರೆದು [illegible] ನಡೆ [illegible] ಕುಸ್ತಿ ಪಂದ್ಯಗಳ ವಿಷಯವಾಗಿ ಮಹಾರಾಜರು ಮಾಜಿ ಮಂತ್ರಿ [illegible] ಪ್ರಾರ್ಥಿಸುತ್ತಾರೆ. [illegible] ವಾಗಿ [illegible] ಆಚರಣೆಯನ್ನು ನಿಷಿದ್ಧಗೊಳಿಸಲಾಗಿರುವ [illegible] ಹರಿಜನರ ಹಕ್ಕಿನ ರಕ್ಷಣೆ ವಿಚಾರದಲ್ಲಿ [illegible] ಪಾಲಕರೂ ಅವರ ಅಧಿಕಾರಿ ವರ್ಗದವರೂ [illegible] ನೀತಿಯನ್ನು [illegible] ಅನುಸರಿಸಬೇಕೆಂದು ಕೋರಿರುತ್ತಾರೆ.

## ಬ್ರಿಟನ್ನಿನ ಧನಿಕ ಜಮೀನ್ದಾರರ ಕೊಲೆ

ಬ್ರಿಟನ್ನಿನ ಶ್ರೀಮಂತ ಜಮೀನುದಾರರೂ ಮತ್ತು ಧನಿಕರೂ ಆದ ಬೆಡ್‌ಫರ್ಡಿನ ಡ್ಯೂಕರು ನೆನ್ನೆ ಅವರ ಜಮೀನಿನಲ್ಲೇ ಕೊಲ್ಲಲ್ಪಟ್ಟಿದ್ದರೆಂದೂ ಅವರ ಶರೀರ ರಕ್ತ [illegible] ಲೊಂದರಲ್ಲಿ [illegible] ಬಳ್ಳಿಗಳ ನಡುವೆ ಪತ್ತೆಯಾಯಿತೆಂದೂ ಗೊತ್ತಾಗಿದೆ.

## ದ. ಕೊರಿಯಾ ಸೈನ್ಯ ಭಾರತದ ಪಡೆಗಳ ಮೇಲೆ ಬೀಳದಂತೆ ತಡೆ

ದಕ್ಷಿಣ ಕೊರಿಯದ ಸೈನಿಕರು ಭಾರತದ ಪಡೆಗಳ ಮೇಲೆ ಕಾರ್ಯಕ್ರಮ ಕೈಗೊಳ್ಳದಂತೆ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಾಗಿ ಮೇ॥ ಜ॥ ಟೇಲರ್ [illegible] ಬ್ರಿಗೇಡಿಯರ್ [illegible] ತಿಳಿಸಿರುವರೆಂದು ವರದಿಯಾಗಿದೆ.

## ಮನೆ ಚಾವಣಿ ಕುಸಿದು ೭ ಜನರ ಮರಣ

ಸಿಕಂದರಾಬಾದಿನ ಒಂದು ಉದ್ಯಾನವನದ [illegible] ಮನೆಯೊಂದರ ಮೇಲ್ಛಾವಣಿಯು ಮೊನ್ನೆ ಬೆಳಗಿನ [illegible] ಕುಸಿದುಬಿದ್ದು ಒಳಗೆ ನಿದ್ರಿಸುತ್ತಿದ್ದ ಏಳು ಮಂದಿ ಮೃತಪಟ್ಟರೆಂದು ವರದಿಯಾಗಿದೆ. ಅಲ್ಲಿ ಮಲಗಿದ್ದ ಇನ್ನಿಬ್ಬರು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ಸೇರಿಸಲಾಗಿದೆ.

## ಅರಮನೆ ಬಳಿ ಗುಂಡಿನೇಟಿನ ಬಗ್ಗೆ ವಿಚಾರಣೆ ಅನವಶ್ಯಕ

### ಹೈದರಾಬಾದಿನಲ್ಲಿ ಹನುಮಂತಯ್ಯನವರ ಹೇಳಿಕೆ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಹೈದರಾಬಾದಿನಲ್ಲಿದ್ದಾಗ ಮೈಸೂರಿನಲ್ಲಿ ನಡೆದ ಗುಂಡಿನ ಪ್ರಕರಣದ ವಿಚಾರವಾಗಿ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರವಿತ್ತು, ವಿಚಾರಣೆಯ ಪ್ರಶ್ನೆಯೇ ಏಳುವುದಿಲ್ಲವಾದ್ದರಿಂದ ಅದರ ಆವಶ್ಯಕತೆಯಿಲ್ಲವೆಂದೂ ಹೇಳಿದ್ದುದಾಗಿ ವರದಿಯಾಗಿದೆ. ಸವರ್ಣರಿಗೂ ಹರಿಜನರಿಗೂ ಆದ ಘರ್ಷಣೆಯನ್ನು ಕುರಿತು ಅವರು ವಿಷಾದಪಟ್ಟು, ಭಾರತ ರಾಜ್ಯಾಂಗದಲ್ಲಿ ಸರ್ವರಿಗೂ ಸಮಾನವಾದ ಹಕ್ಕು ಇರುವ ಈ ಕಾಲದಲ್ಲಿ ಈ ವರ್ಣಭೇದವು ಹೋಗಬೇಕೆಂದು ತಿಳಿಸಿರುತ್ತಾರೆಂದು ಗೊತ್ತಾಗಿದೆ.

## ಜಂಬೂಸವಾರಿ ರದ್ದಾಗುವುದೇ?

ಮೈಸೂರು ೧೨.

ಅರಮನೆ ಮುಂದೆ ಕುಸ್ತಿ ಮಾಡುವ ಬಗ್ಗೆ ನಗರದ ಎರಡು ಪಂಗಡಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯ ಮತ್ತು ಕಲಕಿದ ವಾತಾವರಣದಿಂದ ೧೫ನೇ ತಾ॥ ಏರ್ಪಾಡಾಗಿದ್ದ ಜಂಬೂಸವಾರಿ ನಡೆಯುವ ಬಗ್ಗೆ ಸಂಶಯವುಂಟಾಗಿದೆಯೆಂದು ತಿಳಿದುಬಂದಿದೆ. ಶ್ರೀಮನ್ ಮಹಾರಾಜರು ಜಂಬೂಸವಾರಿಯು ಈ ವರ್ಷ ಬೇಡವೆಂದು ಸರ್ಕಾರಕ್ಕೆ ಸಲಹೆ ಮಾಡಿರುವರೆಂದೂ ಈ ವಿಷಯವು ಮಂತ್ರಿಮಂಡಲದ ಪರಿಶೀಲನೆಯಲ್ಲಿದೆಯೆಂದೂ ಹೇಳಲಾಗಿದೆ.

## ಬ್ರಿಟಿಷ್ ಗಯಾನಾದಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ

ಬ್ರಿಟಿಷ್ ಗಯಾನಾದಲ್ಲಿ ಜನತಾ ಪಕ್ಷದ ಸರ್ಕಾರವನ್ನು ವಜಾ ಮಾಡಿದ ಗವರ್ನರರ ಕ್ರಮದ ಬಗ್ಗೆ ಪ್ರತಿಭಟಿಸಲು ಆ ದೇಶದ ಪ್ರಜಾ ಪ್ರಗತಿ ಪಕ್ಷದ ಮುಖಂಡರಾದ ಡಾ॥ ಚೆಡ್ಡಿ ಜಗನ್‌ರವರು ಹೇಳಿಕೆಯೊಂದನ್ನಿತ್ತು, ಸಾರ್ವತ್ರಿಕ ಮುಷ್ಕರವನ್ನು ನಡೆಸುವ [illegible] ಕಾರ್ಮಿಕರಿಗೆ ಸೂಚನೆಯನ್ನಿತ್ತಿರುವರು. ಬ್ರಿಟಿಷ್ ವಸ್ತುಗಳಿಗೆ ಬಹಿಷ್ಕಾರ ಹಾಕುವಂತೆಯೂ ಬ್ರಿಟನ್ನಿನ ಜನತೆಯೊಡನೆ ಸಖ್ಯ ಬೆಳೆಸಕೂಡದೆಂದೂ ಅವರು ತಿಳಿಸಿತ್ತಾರೆ.

## ಅಜ್ಮೀರಿನ ಹಣಕಾಸಿನ ಸಚಿವರ ರಾಜೀನಾಮೆ

ಅಜ್ಮೀರ ಸಂಸ್ಥಾನದಲ್ಲಿ ಮಾರಾಟ ತೆರಿಗೆ ಮಸೂದೆಯನ್ನು ಜಾರಿಗೆ ತರುವ ಬಗ್ಗೆ ಅಲ್ಲಿನ ಹಣಕಾಸಿನ ಸಚಿವ ಶ್ರೀ ಬಾಲಕೃಷ್ಣ ಕೌಲರವರಿಗೂ ಮತ್ತು ಪ್ರಾಂತೀಯ ಕಾಂಗ್ರೆಸ್ಸಿನವರಿಗೂ ಭಿನ್ನಾಭಿಪ್ರಾಯ ಬಂದು, ಸಚಿವರು ರಾಜೀನಾಮೆಯನ್ನಿತ್ತರೆಂದು ಗೊತ್ತಾಗಿದೆ.

○ ಇನ್ನು ಮುಂದೆ ಯಾವ ಊರುಗಳ ಹೆಸರನ್ನು ಬದಲಾಯಿಸಬೇಕಾದರೂ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಬೇಕೆಂದು ತಿಳಿಸಲಾಗಿದೆ. ಐತಿಹಾಸಿಕ [illegible] ಊರುಗಳ ಹೆಸರನ್ನು [illegible]

## [illegible]ತ್ಯ ಕ [illegible] ಪರಿಜನರು ಎಂದಿಗೂ ಒಪ್ಪುವುದಿಲ್ಲ

ಮೈಸೂರು [illegible]

ಸಂಸ್ಥಾನದ ಆದಿ [illegible] ಸಂಘದ ಪ್ರಧಾನ ಕಾರ್ಯದರ್ಶಿ ಯವರಾದ ಶ್ರೀ ಎಸ್ ಎಂ ಸಿದ್ದಯ್ಯ [illegible] ಕೆಳಗಿನಂತ ಪತ್ರ ಬರೆದು ತಿಳಿಸಿದ್ದಾರೆ

ಈ ವರ್ಷ ದಸರಾ ಮಹೋತ್ಸವ ಕಾಲದ ಮೈಸೂರು ಅರಮನೆಯ ಮುಂದೆ [illegible] ದರ್ಬಾರಿನಲ್ಲಿ ಹರಿಜನರು [illegible] ಮಾಡಲು [illegible] [illegible] ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಹರಿಜನರ [illegible] ದರ್ಬಾರಿನಲ್ಲಿ ಕುಸ್ತಿ ಮಾಡಲು ಒಪ್ಪಿ [illegible] ಅಂಶವನ್ನು ಸಾರ್ವಜನಿಕರ [illegible] [illegible] ನ್ನು ರಚಿಸುವುದು [illegible] ವಿರೋಧವಾದ ದೆಂದೂ [illegible] ಲ್ಲಿ ಕುಸ್ತಿ ಮಾಡಲು ಹರಿಜನರು ಎಂದಿಗೂ ಒಪ್ಪುವುದಿಲ್ಲ [illegible]

### ಕತ್ತು ಕುಯ್ದುಕೊಂಡು ಆತ್ಮಹತ್ಯ ಪ್ರಯತ್ನ

[illegible] ಜಿಲ್ಲೆಯ [illegible] [illegible]

### ತಾರಾ ಶಶಾಂಕ ನಾಟಕಾಭಿನಯ

[illegible] ರಾಜಾಂ [illegible] ತೆಲುಗು ನಾಟಕವನ್ನು ಶನಿವಾರ [illegible] ನಲ್ಲಿ ಪುರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ [illegible] ನಾಟಕ [illegible] ಭಾಷಣ [illegible] [illegible] ಜನರು ನೋಡಿ ಆನಂದಿಸುವರೆಂದು ಆಶಿಸುತ್ತೇನೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible] ಕನ್ನಡ ಗೀತೆಗಳು [illegible] "ವಧು [illegible]" ಎಂಬ [illegible] ಕನ್ನಡ ನಾಟಕ

## ನೂರು ಎಕರೆಗೂ ಜಾಸ್ತಿ ಭೂಮಿ ಹೊಂದಿರುವವರು ೧½ ಲಕ್ಷ ಮಂದಿ

[illegible] ಎಕರೆಗೂ ಹೆಚ್ಚು ಜಮೀನುಗಳನ್ನು ಹೊಂದಿರುವವರು ಭಾರತದಲ್ಲಿ ೧½ ಲಕ್ಷ ಮಂದಿ [illegible] ಮೈಸೂರ [illegible] ಜನರು ಇರುವರೆ [illegible] ಹೈದರಾಬಾದು ಸಂಸ್ಥಾನದಲ್ಲಿ [illegible] [illegible] ಇಲ್ಲವೆಂದು [illegible]

### ಪ್ರತಿಮೆಯ ಸೂಚನೆಯಂತೆ ಮಕ್ಕಳನ್ನು ನದಿಗೆ ತಳ್ಳಿದ ತಂದೆ

[illegible] ಪ್ರತಿಮೆಯ ಸೂಚನೆ [illegible] ಶ್ರೀರಂಗಕ್ಕೆ [illegible] [illegible] ಪ್ರಶ್ನೆಗಳಿಗೆ ಅವನ ಉತ್ತರ [illegible] ಮಕ್ಕಳೊಡನೆ ಶ್ರೀರಂಗಕ್ಕೆ [illegible] ಶ್ರೀರಂಗದ ಕಾವೇರಿ ನದಿಯ [illegible] ಮಕ್ಕಳನ್ನು [illegible] ಅವರ ಮಧ್ಯ ಭಾಗಕ್ಕೆ [illegible] ಪ್ರತಿಮೆಯ ಸೂಚನೆ [illegible] ಅವನು ಹೇಳಿದನು

### ಗ್ರೀಸಿನಲ್ಲಿ ಅಮೆರಿಕದ ವಿಮಾನ ಮತ್ತು ನೌಕಾ ನೆಲೆ

ಅಮೆರಿಕಾ ಮತ್ತು ಗ್ರೀಸುಗಳಿಗೆ ಒಂದು ಮೈತ್ರೀ ಒಪ್ಪಂದವಾಗಿರುವುದೆಂದೂ, ಅದರ ಪ್ರಕಾರ ಗ್ರೀಸಿನಲ್ಲಿ ಅಮೆರಿಕದ ವಿಮಾನ ಮತ್ತು ನೌಕಾ ನೆಲೆಗಳನ್ನು ಸ್ಥಾಪಿಸಲು [illegible] ವಕಾಶವಾಯುಲಾಗಿರುವುದೆಂದೂ ಗೊತ್ತಾಗಿದೆ

### ಫಲಪುಷ್ಪ ಪ್ರದರ್ಶನ ಬಹುಮಾನ ವಿನಿಯೋಗ

ರಾಜಧಾನಿಯ ಪೌರಸಭೆಯವರು [illegible] ರಾಜಾ ಮಾರ್ಕೆಟ್ಟಿನಲ್ಲಿ [illegible] ಪುಷ್ಪ ಪ್ರದರ್ಶನದ ಸಂಬಂಧವಾಗಿ [illegible] ಸಂಜೆ ೪½ ಗಂಟೆಗೆ ಗೃಹ ಮಂತ್ರಿ ಶ್ರೀ ಹೆಚ್ ಸಿದ್ಧವೀರಪ್ಪನವರು ಮಾರ್ಕೆಟ್ಟಿನಲ್ಲಿ ಬಹುಮಾನಗಳನ್ನು ಹಂಚುವರು

## ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ [illegible] | [illegible] |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| [illegible] | [illegible] | [illegible] |
| ಹುಣಿಸೇಹಣ್ಣು | [illegible] | |
| ಸೀಗೆಕಾಯಿ | [illegible] | |
| [illegible] | [illegible] | [illegible] |
| [illegible] | [illegible] | [illegible] |


SRIGANESHA TALKIES
From 14-10-53 For 3 Days
THE DUEL AT SILVER CREEK
(Technicolour)
With Audie Murphy [illegible] Dominique Stephen McNally

TO DAY LAST DAY
BWANA DEVIL
THE 3D PICTURE

[illegible]
ಮಗಜಿ ಕೊಂಡಿ
ವೀವಿಂಗ್ ಮಿಲ್ಸ್, ಹುಬ್ಬಳ್ಳಿ
[illegible]
ದಸರಾ ವಸ್ತು ಪ್ರದರ್ಶನದಲ್ಲಿ
ಸಿ ಬ್ಲಾಕಿನ 26ನೇ ನಂಬರಿನ
[illegible]


## ಕನ್ನಡದ ಹೊಸ ಟೈಪ್‌ರೈಟರ್

[illegible] ವಕೀಲರಾದ ಶ್ರೀ ಟಿ ಎಲ್ ನಾರಾಯಣರಾಯರು ಕನ್ನಡ ಭಾಷೆಯಲ್ಲಿ ಟೈಪು ಮಾಡುವ ಯಂತ್ರ ಸಾಧನವನ್ನು ತಯಾರಿಸಿ, ಅದನ್ನು ಈಗಾಗಲೇ ಪ್ರದರ್ಶಿಸಿರುತ್ತಾರೆ ಈ ವಿಧಾನದಲ್ಲಿ ಕನ್ನಡದ ಲಿಪಿಯಲ್ಲಿ [illegible] ಮಾಡಬೇಕಾಗುವ ಅವಶ್ಯಕತೆಯೇ ಇರುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ [illegible] ಕನ್ನಡ [illegible] ಪ್ರದರ್ಶಿಸಲಿದ್ದಾರೆ

### ನಾರ್ವೆ ಹಡಗು ಮುಳುಗುತ್ತಿದೆ

[illegible] ಟನ್ ತೂಕದ [illegible] ಎಂಬ ನಾರ್ವೆ [illegible] ದ್ರೋಹದಿಂದ [illegible] ಮುಳುಗುತ್ತಿರುವುದಾಗಿ ಸುದ್ದಿಯು ಬಂದಿದೆ


ಪ್ರಭಾ ದಸರಾ ಹಬ್ಬದ ಪ್ರಯುಕ್ತ ವಿಶೇಷ ಬೆಳಗಿನ ಪ್ರದರ್ಶನ
14 10 53 ರಿಂದ ಪ್ರತಿ ದಿನ 10-30 ಕ್ಕೆ
[illegible] ವರೆ ★ ಪರ್ಛಾಯಿ
[illegible]

ಒಲಂಪಿಯಾ ಟಾಕೀಸ್
15 10 53 ರಿಂದ ಅಮೋಘ ಪ್ರಾರಂಭ
[illegible]
ಸಂಗ್ದಿಲ್
[illegible] ದಿಲೀಪ್‌ಕುಮಾರ್ [illegible]
[illegible] ಆವಾರಾ


Edited, Printed and Published by A R Nagarajan at Sadhvi Press D Subbiah Road Mysore


ದಸರಾ ಸವಿ ನೆನಪು ಎಲ್ಲಾ ಕಾಲಕ್ಕೂ ಇರಲಿ
ಕೇವಲ ಒಂದೇ 1 ರೂಪಾಯಿಗೆ
★
1 ನಿಮ್ಮ ಫೋಟೊ ಪ್ರೋಸ್ಟ್ ಕಾರ್ಡ್ ಸೈಜಿನಲ್ಲಿ !
2 ಕ್ರಮವಾಗಿ [illegible] ಫೋಟೊ ಉಚಿತ [illegible]
3 ಅಕ್ಕಿ ಡಿಪ್ ಗೆದ್ದವರಿಗೆ ಕ್ಯಾಮರಾಗಳ ಉಚಿತ ಬಹುಮಾನ !
★
ಇಂದೇ ದಯಮಾಡಿರಿ

ಮುರುಗನ್ ಅಂಡ್ ಕಂಪೆನಿ.
(Authorised Dealers for Kodak Materials)
ಸ್ಟಾಲ್ ನಂ E 29 :: ದಸರಾ ವಸ್ತು ಪ್ರದರ್ಶನ
ಮೈಸೂರು


ಮೈಸೂರು ಸರ್ಕಾರ

## ಸಂಕ್ಷಿಪ್ತ ಪ್ರಕಟಣೆ

1953 54 ನೇ [illegible] ಗಂಧದ ಮರಗಳನ್ನು [illegible] ಗಂಧದ ಎಣ್ಣೆ ಕಾರ್ಖಾನೆಗೆ [illegible] 1953 ನೇ ಅಕ್ಟೋಬರ್ 24 ನೇ ತಾರೀಖಿನವರಿಗೆ ಅರ್ಜಿಗಳನ್ನು [illegible]

| ರೇಂಜ | ಕೂಪಿನ ಹೆಸರು | ಮರಗಳು ದೊರೆಯುವ ಪ್ರಮಾಣದ ಅಂದಾಜು |
|---|---|---|
| ಚಾಮರಾಜನಗರ | 1) ಗುಡಿ [illegible] [illegible] | 500 ಟನ್ನು |
| | 2) [illegible] 1952 [illegible] | 500 ,, |
| | 3) [illegible] | 500 ,, |
| | ಒಟ್ಟು | 1,500 ,, |

[illegible] 1953 ನೇ ಸೆಪ್ಟೆಂಬರ್ 15 ಮತ್ತು [illegible] ನೇ ತಾರೀ[illegible] ಗೆಜೆಟ್ಟಿನಲ್ಲಿ ನೋಡಬಹುದು ಅಥವಾ [illegible] ದಿನ ಮತ್ತು ವೇಳೆಗಳಲ್ಲಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಜನರಲ್ ಮ್ಯಾನೇಜರವರ ಆಫೀಸಿನಲ್ಲಿ ಪಡೆಯಬಹುದು

ಜಿ [illegible]ಸ್ವಾಮಿ, ಜನರಲ್ ಮ್ಯಾನೇಜರ್,
[illegible] ಗಂಧದೆಣ್ಣೆ ಕಾರ್ಖಾನೆ ಮೈಸೂರು

ಟೆಲಿಫೋನ್ ನಂ. 792

ಮೈಸೂರು ಗೌ|| ಸಿಲ್ಕ್ ಸೀರೆಗಳು
ಎಲ್ಲಾ ಸೀರೆಗಳು ಮತ್ತು ಜರಿ ಸೀರೆಗಳು
ಧರ್ಮಾವರಂ, ಪೂನಾ, ನಾಗಪುರ,
M V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

[ ಶ್ರೀ ಮಾತಾ ಶರಣಂ ]

# ಸಾಧ್ವಿ

ಬಿಡಿ ಪ್ರತಿಗೆ ಮೂರು ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೩೧ ] MYSORE THURSDAY 15-10-1953 : ಮೈಸೂರು : ಗುರುವಾರ ೧೫-೧೦-೧೯೫೩ [ ಸಂಚಿಕೆ ೭೦

# - ಜಂಬೂಸವಾರಿ ರದ್ದಿನ ಬಗ್ಗೆ ಸರ್ಕಾರದ ವಿವರಣೆ -

## ಕುಸ್ತಿ ಮತ್ತು ಜಂಬೂಸವಾರಿ ನಿಲ್ಲಿಸಲು ನಿರ್ಧಾರ

### ಶ್ರೀಮನ್ ಮಹಾರಾಜರ ಸಲಹೆಗೆ ಸರ್ಕಾರದ ಒಪ್ಪಿಗೆ

ಸರ್ಕಾರದ ಪ್ರಕಟಣೆಯ ವಿವರ

ಮೈಸೂರು ೧೫

ಸರ್ಕಾರದವರು ಈ ಸಾರಿ ದಸರಾ ಮೆರವಣಿಗೆ ಮತ್ತು ಅರಮನೆ ಮಂಡಿ ಕುಸ್ತಿಯನ್ನು ನಿಲ್ಲಿಸುವಂತೆ ನಿರ್ಧರಿಸಿರುತ್ತಾರಷ್ಟೆ ಈ ಸಂಬಂಧವಾಗಿ ಅವರು ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿ ಈ ರೀತಿ ತಿಳಿಸಿರುತ್ತಾರೆ —

ದಸರಾ ಉತ್ಸವಗಳ ಕಾಲದಲ್ಲಿ ಅರಮನೆ ಮಂಡಿ ಕುಸ್ತಿ ಪಂದ್ಯಗಳನ್ನು ನಡೆಸುವ ಪದ್ಧತಿಯು ಬಹುದಿನಗಳಿಂದಲೂ ಇದೆ ಅವರಲ್ಲಿ ಭಾಗವಹಿಸುತ್ತಿರುವ ಹಲವು ಜನರಲ್ಲಿ ಬೆಳೆದಿರುವ ಮೇಲು ಕೀಳೆಂಬ ಜಾತೀಯ ಭೇದ ಮತ್ತು ವ್ಯತ್ಯಾಸ ಭಾವನೆಯಿಂದ ಆ ಸ್ಪರ್ಧೆಗಳಲ್ಲಿ ಭಾಗವಹಿಸಲು ಹರಿಜನರಿಗೆ ಅವಕಾಶವಿಲ್ಲ ಈ ಹಲವು ಜನರಲ್ಲಿ ಕುಸ್ತಿ ಮಾಡುವ ಬಗ್ಗೆ ತಮ್ಮದೇ ಸಂಪೂರ್ಣವಾದ ಹಕ್ಕು ಬಾಧ್ಯತೆಯೆಂಬ ಮನೋಭಾವನೆಯು ಇದೆ ಈ ರೀತಿಯ ವಿಶೇಷ ಹಕ್ಕನ್ನು ಪ್ರತಿಪಾದಿಸಬಾರದೆಂದು ಅವರನ್ನು ಒಪ್ಪಿಸಲು ಹಲವು ವರ್ಷಗಳಿಂದಲೂ ಆಗಾಗ್ಗೆ ಪ್ರಯತ್ನಗಳನ್ನು ನಡೆಸಲಾಗುತ್ತಿದ್ದಿತು.

ಹರಿಜನರ ಅಭ್ಯುದಯಕ್ಕಾಗಿ ಮಹಾತ್ಮಗಾಂಧಿಯವರು ನಡೆಸಿದ ಆಜೀವಪರ್ಯಂತದ ಪ್ರಯತ್ನದ ಪರಿಣಾಮವಾಗಿ ರಾಜ್ಯಾಂಗದಲ್ಲಿ ಅಸ್ಪೃಶ್ಯತೆಯನ್ನು ರದ್ದುಗೊಳಿಸುವ ನಿಬಂಧನೆಯನ್ನು ಸೇರಿಸಿ, ಎಲ್ಲಾ ವಿಧದಲ್ಲೂ ಅದರ ಆಚರಣೆಯನ್ನು ನಿಷೇಧಿಸಲಾಗಿದೆ ಅಸ್ಪೃಶ್ಯತೆಯ ಕಾರಣದಿಂದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವು ಶಾಸನೋಪಾಯ ಪ್ರಕಾರ ಶಿಕ್ಷಾರ್ಹವಾಗುವ ಅಪರಾಧವಾಗಿದೆ ಮಹಾತ್ಮ ಗಾಂಧಿಯವರ ನೈತಿಕ ನಾಯಕತ್ವವನ್ನು ಅಂಗೀಕರಿಸಿ ಮತ್ತು ರಾಜ್ಯಾಂಗದ ಪ್ರಕಾರ ಶಾಸನೋಪಾಯ ದತ್ತವಾಗಿರುವ ಕರ್ತವ್ಯವನ್ನು ನಿರ್ವಹಿಸಲು ಒಪ್ಪಿರುವ ಭಾರತೀಯರು ಹರಿಜನರಿಗೆ ಸಮಾನ ಹಕ್ಕುಗಳನ್ನು ಕೊಡಲೇಬೇಕಾಗಿದೆ ... ಅಸ್ಪೃಶ್ಯತೆಯು ಕಾನೂನಿನ ಪ್ರಕಾರ ಕೊನೆಗೊಂಡಿದೆ ಶ್ರೀಮನ್ಮಹಾರಾಜರು ... ರಾಜ ಒಡೆಯರ ಕಾಲದಿಂದ ಮತ್ತು ಈಚೆಗೆ ... ಹರಿಜನರನ್ನು ಅರಮನೆಗೆ ಆಹ್ವಾನಿಸಿ ... ದಿನವಾಗಿ ಬರುವ ಪದ್ಧತಿಯು ಬಂದು, ... ಅವರುಗಳು ಸಿಂಹಾಸನಕ್ಕೂ ಮತ್ತು ಮಹಾರಾಜರಿಗೂ ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ, ಹರಿಜನರನ್ನು ಒಪ್ಪುತ್ತಿಲ್ಲದೇ ಇರುವವರು ...

... ಹರಿಜನೇತರ ... ಹರಿಜನರಿಗೆ ಕುಸ್ತಿ ಶಿಕ್ಷಣವನ್ನು ಕೊಡುತ್ತಿರುವುದು ಸಂತೋಷಕರವಾದ ಸಂಗತಿಯಾಗಿದೆ ಮತ್ತು ಮೈಸೂರು ವಸ್ತು ಪ್ರದರ್ಶನದ ಮೈದಾನದಲ್ಲಿ ಹಲವಾರು ವರ್ಷಗಳಿಂದ ಒಂದೇ ಅಖಾಡಾದಲ್ಲಿ ಹರಿಜನರು ಮತ್ತು ಇತರರು ಕುಸ್ತಿ ಮಾಡುತ್ತಿರುವರು.

ದೇಶದ ಪ್ರತಿಯೊಬ್ಬ ಪ್ರಜೆಗೂ ಇರುವ ಸಮಾನ ಹಕ್ಕಿನ ತತ್ವದ ಆಧಾರದ ಮೇಲೆ ಅರಮನೆ ಮುಂದೆ ಕುಸ್ತಿಗಳಲ್ಲಿ ಹರಿಜನರೂ ಭಾಗವಹಿಸುವಂತಾಗಲು ತೀವ್ರವಾದ ಮತ್ತು ಮನಃಪೂರ್ವಕವಾದ ಪ್ರಯತ್ನಗಳನ್ನು ಕಳೆದ ವರ್ಷ ನಡೆಸಲಾಯಿತು ಹೊಸ ವಿಧಾನಕ್ಕೆ ಹೊಂದಿಕೊಂಡು ನಡೆಯಲು ಪೈಲ್ವಾನರುಗಳಿಗೆ ಕಾಲಾವಕಾಶ ಬೇಕೆಂದ ಕಾರಣಕ್ಕೆ ಸರಿ ಮಾಡಿಕೊಳ್ಳಲಾಯಿತು ಮುಂದಿನ ವರ್ಷದೊಳಗೆ ಸುಲಲಿತವಾಗಿ ಎಲ್ಲವೂ ನಡೆಯುವಂತೆ ಮಾಡಲಾಗುವುದೆಂದೂ, ಸಮಾನ ಹಕ್ಕು ಬಾಧ್ಯತೆಯ ದೃಷ್ಟಿಯಿಂದ ಹರಿಜನರು ಕುಸ್ತಿಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು ... ಹಲವು ಮುಖಂಡರಿಂದ ಸರ್ಕಾರಕ್ಕೆ ಭರವಸೆಗಳು ಬಂದಿದ್ದವು

ರಾಜ್ಯಾಂಗದ ನಿಬಂಧನೆಗಳನ್ನು ಜಾರಿಗೆ ತರುವುದು ಸರ್ಕಾರದ ಜವಾಬ್ದಾರಿಯಾಗಿದೆ ಹರಿಜನರ ಹಕ್ಕನ್ನು ಮಾನ್ಯ ಮಾಡಲು ಸರ್ಕಾರದವರಿಂದ ಸಾಧ್ಯವಿಲ್ಲವಾಗಿ ... ಸಮಿತಿಯವರ ಶಿಫಾರಸಿನಂತೆ ಈ ವರ್ಷ ಯಾವರೂ ಕುಸ್ತಿಗಳನ್ನು ನಡೆಸ ಸರ್ಕಾರದವರು ನಿರ್ಧರಿಸಿದರು

ಅರಮನೆ ಮಂಡಿ ಕುಸ್ತಿ ನಡೆದ ... ತಮ್ಮದೇ ಹಕ್ಕೆಂದು ಒತ್ತಾಯಪಡಿಸಿ, ಹರಿಜನರು ಕುಸ್ತಿಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಲು ಒಪ್ಪಲಿಲ್ಲ ದಸರಾ ಉತ್ಸವಗಳ ಮೊದಲನೆಯ ದಿನ ೮ ನೇ ತಾ|| ರಂದು ಹಲವು ಜನರು ಪುಂಡಾಟ ಮತ್ತು ಹಿಂಸಾ ಕೃತ್ಯದಲ್ಲಿ ತೊಡಗಿ, ಅದರಿಂದ ಪೋಲೀಸರು ಗುಂಡು ಹಾರಿಸಬೇಕಾದ ಪ್ರಸಂಗವು ಒಂದಿತು ಈ ಘಟನೆಗಳ ಬಗ್ಗೆ ೯ ನೇ ತಾ|| ವಿವರಗಳನ್ನು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಲಾಗಿದೆ ಆದರೆ ಕುಸ್ತಿ ಪ್ರದರ್ಶನಗಳನ್ನು ಆ ದಿನ ಮಾತ್ರ ನಿಲ್ಲಿಸಲಾಯಿತು

ಮನಸ್ತಾಪವಿರುವ ಪಂಗಡಗಳಲ್ಲಿ ಸೌಹಾರ್ದ ಮತ್ತು ಪರಸ್ಪರ ವಿಶ್ವಾಸವುಂಟಾಗಲು ವಿಶೇಷ ಪ್ರಯತ್ನಗಳನ್ನು ನಡೆಸಲಾಗುತ್ತಿವೆ ಅದರಲ್ಲಿ ಬಹಳ ಪ್ರಗತಿಯು ಸಾಧಿಸಲ್ಪಟ್ಟಿದ್ದರೂ, ಕುಸ್ತಿಯ ಬಗ್ಗೆ ಒಂದೇ ಅಖಾಡಾದ ಏರ್ಪಾಡಿನ ಮುಖ್ಯ ತತ್ವದ ಒಪ್ಪಿಗೆ ಇನ್ನೂ ಪರಿಹಾರವಾಗಿರುವುದಿಲ್ಲ

ಈ ಪರಿಸ್ಥಿತಿಯಲ್ಲಿ ಕುಸ್ತಿ ಪಂದ್ಯ ಮತ್ತು ವಿಜಯ ದಶಮಿ ಮೆರವಣಿಗೆಯನ್ನು ಈ ಸಲ ನಿಲ್ಲಿಸುವುದು ಉತ್ತಮವೆಂದು ಶ್ರೀಮನ್ ಮಹಾರಾಜರು ಅಭಿಪ್ರಾಯಪಟ್ಟರು ದೆಹಲಿಯಿಂದ ಮುಖ್ಯ ಮಂತ್ರಿಯವರು ಹಿಂತಿರುಗಿದ ಮೇಲೆ ಶ್ರೀಮನ್ ಮಹಾರಾಜರೊಡನೆಯೂ, ಇತರ ಸಾರ್ವಜನಿಕ ಮುಖಂಡರೊಡನೆಯೂ ಚರ್ಚೆ ನಡೆಸಿದರು ಪರಿಸ್ಥಿತಿಯನ್ನು ತೀವ್ರವಾಗಿ ಪರಿಶೀಲಿಸಿದನಂತರ ಶ್ರೀಮನ್ಮಹಾರಾಜರ ಇಚ್ಛೆಯನ್ನು ಗೌರವಿಸಲು ಪ್ರತಿಯೊಂದು ... ಕುಸ್ತಿ ಪಂದ್ಯ ಮತ್ತು ಜಂಬೂಸವಾರಿಯನ್ನು ನಿಲ್ಲಿಸಲು ಸರ್ಕಾರದವರು ನಿರ್ಧರಿಸಿದರು

ವಿರುದ್ಧ ಪಂಗಡಗಳಲ್ಲಿ ಸೌಹಾರ್ದ ಮತ್ತು ವಿಶ್ವಾಸವುಂಟಾಗುವಂತೆ ತೀವ್ರ ಪ್ರಯತ್ನ ನಡೆಸಲಾಗುವುದೆಂದು ಸರ್ಕಾರದವರು ಇನ್ನೂ ತಿಳಿಸಿರುತ್ತಾರೆ ಮತ್ತು ಕುಸ್ತಿ ಮಾಡುವವರು ಪ್ರತ್ಯೇಕ ಹಕ್ಕನ್ನು ಕೇಳಕೂಡದೆಂದೂ, ಮತ್ತು ಎಲ್ಲರಿಗೂ ಸಮಾನ ಹಕ್ಕನ್ನು ಕೊಡುವಂತೆಯೂ ಸರ್ಕಾರದವರು ಪ್ರಾರ್ಥಿಸುತ್ತಾರೆ

## ಮಾರ್ಕೆಟ್ ಮತ್ತು ಫಲಪುಷ್ಪ ಪ್ರದರ್ಶನ

ಮೈಸೂರು ೧೫

ನಗರದ ಪೌರಸಭೆಯವರು ದೇವರಾಜ ಮಾರ್ಕೆಟ್ಟಿನಲ್ಲಿ ಇಂದು ಬೆಳಗ್ಗೆ ಮಾರ್ಕೆಟ್ ಮತ್ತು ಫಲಪುಷ್ಪ ಪ್ರದರ್ಶನವನ್ನು ಏರ್ಪಡಿಸಿದ್ದರು ದೇಶವಿದೇಶಗಳ ವಿವಿಧ ತರಕಾರಿಗಳು, ಹಣ್ಣುಗಳು ತೆಂಗಿನಕಾಯಿ, ಹೂವ ಮತ್ತು ವೀಳ್ಯದ ಲೆ, ಆಟದ ಸಾಮಾನ, ಸುಗಂಧ ದ್ರವ್ಯ, ಬುಟ್ಟಿ ಮತ್ತು ಗೂಡೆ, ಕಾಗದದ ಹೂ, ವಿಮಾನ, ಮಾಂಸ ಕೋಳಿ ಮತ್ತು ಪೊಟ್ಟ, ಮಣ್ಣಿನ ಸಾಮಾನ ಇವೇ ಮುಂತಾದುವುಗಳನ್ನು ಪ್ರದರ್ಶಿಸಲಾಗಿದ್ದಿತು ಪ್ರತಿ ವರ್ಗದ ವಸ್ತುವಿಗೂ ಬಹುಮಾನಗಳನ್ನು ಕೊಡಲು ವ್ಯವಸ್ಥೆಯಾಗಿದೆ ಉತ್ತಮವಾಗಿ ಅಲಂಕರಿಸಲ್ಪಟ್ಟಿರುವ ದೊಡ್ಡ ಅಂಗಡಿ ಮತ್ತು ಸಣ್ಣ ಅಂಗಡಿಗಳಿಗೂ ಬಹುಮಾನದೊರೆಯುವುದು ನಗರದ ಮತ್ತು ಹೊರಗಿನ ಅನೇಕ ಮಂದಿಯುಕ ಮತ್ತು ಮಹನೀಯರು ಪ್ರದರ್ಶನವನ್ನು ನೋಡಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು

## ಸಂಸ್ಕೃತ ವಿದ್ಯಾಂಸರುಗಳಿಗೆ ಬಹುಮಾನ ವಿನಿಯೋಗ

ಸಂಸ್ಕೃತ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೩೦ ಮಂದಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಮತ್ತು ಸಂಭಾವನೆಗಳನ್ನು ಅರಮನೆಯಲ್ಲಿ ನೆನ್ನೆ ಶ್ರೀಮನ್ ಮಹಾರಾಜರು ದಯಪಾಲಿಸಿದರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಜಿ ಪ್ರೊಫೆಸರ್ ಶ್ರೀ ಬಿ ವೆಂಕಟೇಶಾಚಾರ್ಯರು ಮಾತನಾಡಿ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ಹೇಳಿದರು

## ವಿಜಯರಾಘವ ರೆಡ್ಡಿಯವರು ಲಂಡನ್ ಟ್ರೇಡ್ ಕಮೀಷನರ್

ಬೆಂಗಳೂರು ೧೫

ಇದುವರೆಗೆ ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಕಮೀಷನರಾಗಿದ್ದ ಶ್ರೀ ಕೆ ನಾರಾಯಣ ಸ್ವಾಮಿಯವರನ್ನು ಸಂಸ್ಥಾನಕ್ಕೆ ವಾಪಸು ಕರೆಸಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರಾಗಿ ನೇಮಿಸಲಾಗಿದೆ ಸದರಿ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿ ನೇಮಿಸಲಾಗಿದೆ ಸದರಿ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿದ್ದ ಶ್ರೀ ಎಚ್ ಜಿ ವಿಜಯರಾಘವರೆಡ್ಡಿಯವರನ್ನು ಲಂಡನ್ನಿನಲ್ಲಿ ಸಂಸ್ಥಾನದ ಟ್ರೇಡ್ ಕಮಿಷನರಾಗಿ ಹೊರಡೂರು ಮಾಡಲಾಗಿದೆ

## ಸಂಬಳಕ್ಕಾಗಿ ಫೋರ್ಜರಿ ಮಾಡಲೆತ್ನಿಸಿ ಸಿಕ್ಕಿ ಬಿದ್ದ ಉಪಾಧ್ಯಾಯ

ಬೆಂಗಳೂರು ಬಳಿ ಅರಗಂ ಶಾಲೆಯ ಉಪಾಧ್ಯಾಯರಾದ ಶ್ರೀ ವೀರಪ್ಪನವರು ತಮ್ಮ ಸಂಬಳವನ್ನು ಇದೇ ೯ ನೇ ತಾ|| ಪಡೆದ, ಬೇರೊಬ್ಬ ಉಪಾಧ್ಯಾಯ ಶ್ರೀ ಚನ್ನಿಗಯ್ಯ ಎಂಬುವರ ಹೆಸರಿನ ಎದುರಿನಲ್ಲಿ ರುಜು ಮಾಡಿ ಅವರ ಸಂಬಳವನ್ನೂ ಕಳೆದ ೧೩ ನೇ ತಾ|| ಪಡೆಯಲೆತ್ನಿಸಿದಾಗ, ಅದೇ ಸಮಯದಲ್ಲಿ ಅಲ್ಲಿ ಹಾಜರಿದ್ದ ಶ್ರೀ ಚನ್ನಿಗಯ್ಯನವರು ನಿಜಾಂಶವನ್ನು ಖಜಾನೆ ಅಧಿಕಾರಿಗಳಿಗೆ ತಿಳಿಸಲಾಗಿ, ಸದರಿ ವೀರಪ್ಪನವರನ್ನು ಪೋಲೀಸರ ವಶಕ್ಕೆ ಒಪ್ಪಿಸಲಾಗಿದೆ

## ಬೆಂಗಳೂರು ಬಳಿ ಹೊಸ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ

ಬೆಂಗಳೂರು ೧೫

ಇಲ್ಲಿಗೆ ಸ್ವಲ್ಪ ದೂರದ ಒಂದು ಪ್ರದೇಶದಲ್ಲಿ ೬೫ ಕಿಲೋವಾಟಿನ ವಿದ್ಯುಚ್ಛಕ್ತಿಯ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲು ಸಂಸ್ಥಾನದ ಸರ್ಕಾರದವರು ಯೋಚಿಸುತ್ತಿರುವರೆಂದು ವರದಿಯಾಗಿದೆ ಹಲವು ವರ್ಷ ಕಾವೇರಿ ಜಾಗ್ರತ ಪ್ರದೇಶಗಳಲ್ಲಿ ಮಳೆಯಾಗದೆ, ವಿದ್ಯುದುತ್ಪಾದನೆಗೆ ಉಂಟಾಗುವ ತೊಂದರೆಯನ್ನು ತಪ್ಪಿಸಲು ಹೊಸ ಕೇಂದ್ರವನ್ನು ನಿರ್ಮಿಸಲಾಗುವುದೆಂದೂ, ಈ ಬಗ್ಗೆ ವಿವರವಾದ ಯೋಜನೆಯನ್ನು ಸಿದ್ಧಗೊಳಿಸಲಾಗುತ್ತಿರುವುದೆಂದೂ ವರದಿಯಾಗಿದೆ

ದಕ್ಷಿಣ ಆಫ್ರಿಕದಲ್ಲಿ ದೊರೆಯುವ ಲಿಗ್ನೈಟ್ ಎಂಬ ಪದಾರ್ಥವನ್ನು ವಿದ್ಯುಚ್ಛಕ್ತಿ ತಯಾರಿಕೆಗೆ ಉಪಯೋಗಿಸಲೂ ಸಹ ಆಲೋಚಿಸಲಾಗುತ್ತಿದೆಯೆಂದು ಗೊತ್ತಾಗಿದೆ.

ಈ ಹೊಸ ವಿದ್ಯುಚ್ಛಕ್ತಿ ಕೇಂದ್ರಕ್ಕೆ ಪತಿಶೀರಿನ ಜಲಪಾತದ ಆವಶ್ಯಕತೆ ಇರುವುದಿಲ್ಲವೆಂದೂ, ಯಂತ್ರೋಪಕರಣದಿಂದಲೇ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಾಗುವುದೆಂದೂ ಹೇಳಲಾಗಿದೆ

## ಮೈಸೂರಿಗೆ ಭಾರತ ಸರ್ಕಾರದ ಸಹಾಯ

ಸ್ವಂ ಸು ಪ್ರೋ॥] ಬೆಂಗಳೂರು ೧೫

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದಿನ ಪತ್ರಿಕಾ ಸಮ್ಮೇಳನವನ್ನುದ್ದೇಶಿಸಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಕಾರ್ಯಕಲಾಪಗಳನ್ನು ವಿವರಿಸಿದರು ತುಂಗಭದ್ರಾ ಯೋಜನೆ ಕಾರ್ಯವನ್ನು ಮುಗಿಸಲು ಮೈಸೂರಿನ ಭಾಗಕ್ಕೆ ಭಾರತ ಸರ್ಕಾರದವರು ೫೦ ಲಕ್ಷ ರೂ ಕೊಡುವುದಾಗಿ ಹೇಳಿರುವರೆಂದೂ ಈಗಾಗಲೇ ೨೦ ಲಕ್ಷ ರೂಪಾಯಿಗಳನ್ನು ಸಲ್ಲಿಸುವುದಾಗಿ ಒಪ್ಪಿಕೊಂಡಿರುವರೆಂದೂ ಅವರು ತಿಳಿಸಿದರು ಲಕ್ಕವಳ್ಳಿ ಜಲಾಶಯದ ಕೆಲಸಕ್ಕಾಗಿ ಕೇಂದ್ರ ಸರ್ಕಾರದವರು ೩ ಕೋಟಿ ರೂ. ಕೊಡಲು ಒಪ್ಪಿರುವರೆಂದೂ, ಮೈಸೂರು ಸರ್ಕಾರದವರು ಇದಕ್ಕಾಗಿ ೧ ಕೋಟಿ ರೂ ವೆಚ್ಚ ಮಾಡಲಿರುವರೆಂದೂ ಹೇಳಿದರು ಗೃಹ ಕೈಗಾರಿಕೆಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರದವರು ೬ ಲಕ್ಷ ರೂ ಗಳನ್ನು ಕೊಡುವುದಾಗಿಯೂ ಸಹ ಅವರು ತಿಳಿಸಿದರು.

## ಬ್ರಿಟಿಷ್ ಗಯಾನಾ ಬಿಕ್ಕಟ್ಟಿನಲ್ಲಿ ನೆಹರೂ ಮಧ್ಯಸ್ತಿಕೆಗಾಗಿ ಕೋರಿಕೆ

ಬ್ರಿಟಿಷ್ ಗಯಾನಾ ಸರ್ಕಾರವನ್ನು ಅಲ್ಲಿನ ಗೌರ್ನರು ವಜಾ ಮಾಡಿದುದರ ಪರಿಣಾಮವಾಗಿ ಉಂಟಾಗಿರುವ ಕ್ಲಿಷ್ಟ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರ ಮತ್ತು ಗಯಾನಾ ಪ್ರಜಾವರ್ಗದವರಿಗೆ ಸೌಹಾರ್ದ ಉಂಟು ಮಾಡಲು ಭಾರತದ ಪ್ರಧಾನಿ ನೆಹರೂರವರು ಪ್ರಯತ್ನಿಸಬೇಕೆಂದು ಕ್ಯಾಂಬಿಯರ್ ಸಂಸ್ಥೆಯ ಕಾಂಗ್ರೆಸ್ ಸಭೆಯವರು ಇಂಗ್ಲೆಂಡಿನಲ್ಲಿರುವ ಭಾರತದ ಹೈಕಮಿಷನರ ಕಛೇರಿಯನ್ನು ಕೇಳಿರುತ್ತಾರೆ

## ಸ್ತ್ರೀ ವೇಷದ ಪೋಲೀಸರಿಂದ ಕಳ್ಳಭಟ್ಟಿ ಸಾರಾಯಿ ಪತ್ತೆ

ಕೋಲಾರ ಜಿಲ್ಲೆಯ ಕೂರಗೆಲ್ ಮತ್ತು ಬೇಟೆಗಂಡ ಹಳ್ಳಿಯಲ್ಲಿ ಕಳೆದವಾರ ಕಳ್ಳಭಟ್ಟಿ ಸಾರಾಯಿಯನ್ನು ಪೋಲೀಸರು ಪತ್ತೆ ಹಚ್ಚಿ ವಶಪಡಿಸಿಕೊಂಡಿರುತ್ತಾರೆ. ಅವರು ಗೋಸಾ ಹೆಂಗಸರ ವೇಷವನ್ನು ಧರಿಸಿ ಕೂರಗೆಲ್ ನಲ್ಲಿ [illegible] ವಶಪಡಿಸಿಕೊಂಡರು. ಈ ಸಂಬಂಧವಾಗಿ [illegible] ಮತ್ತು ಉರುಫ್ ಸ್ವಾಮಿ ಎಂಬ ಮಹಿಳೆ ಈ ನಾಲ್ಕು ಜನರನ್ನು ದಸ್ತಗಿರಿ ಮಾಡಲಾಗಿದೆ. ಮತ್ತೊಂದು ಹಳ್ಳಿಯಲ್ಲಿ [illegible] ಸಾರಾಯಿಯನ್ನು ವಶಪಡಿಸಿಕೊಳ್ಳಲಾಗಿದೆ. ಜಿಲ್ಲೆಯ [illegible], ತವಕಲ್ ಸಾಹೇಬ್, [illegible] ಮತ್ತು [illegible] ಹೆಂಗಸಿನ ದಸ್ತಗಿರಿಯಾಗಿದೆ. [illegible] ನ್ಯಾಯಸ್ಥಾನದಲ್ಲಿ ಮೊಕದ್ದಮೆ ಹೂಡಲಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಮುಸ್ಸಾದಿಕ್ಕರಿಗೆ ಫಾಸಿ ಶಿಕ್ಷೆ ವಿಧಿಸಲು ಸಾಧ್ಯವಿಲ್ಲವೇ?

ಮಿಲಿಟರಿ ಕೋರ್ಟಿನ ೪೭ ನೇ ವಿಧಿಯು [illegible] ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರನ್ನು ಫಾಸಿ ಏರಿಸಲು ಅವಕಾಶವಿಲ್ಲದರಿಂದ ಪರ್ಷಿಯದ ಮಾಜಿ ಪ್ರಧಾನಿ ಮುಸ್ಸಾದಿಕ್ ರವರಿಗೆ ಫಾಸಿ ಶಿಕ್ಷೆ ವಿಧಿಸಲು ಸಾಧ್ಯವಿಲ್ಲವೆಂದು ಲಂಡನ್ನಿನ ಅಧಿಕಾರಿ ವಲಯಗಳಲ್ಲಿ ಹೇಳಲಾಗುತ್ತಿದೆ.


## ಚಾಮುಂಡೇಶ್ವರಿ

ಟಾಕೀಸ್

16-10-53 ರಿಂದ ಅನೋಘ 3ನೇ ವಾರ

★ ದೇವದಾಸ್ ★

[illegible]


Edited, Printed and Published by A R Nagarajan at Sadhvi Press D Subbiah Road, Mysore

## ಅವಿವಾಹಿತಳು ಹಡೆದ ಶಿಶುವಿನ ಸಮಾಧಿಗೆ ವಿಫಲ ಪ್ರಯತ್ನ

ದಿಂಡಿಗಲ್ಲಿನ ಸೀತಾಲಕ್ಷ್ಮಿ ಎಂಬ [illegible] ವರ್ಷದ ಅವಿವಾಹಿತ ತರುಣಿಯೊಬ್ಬಳಿಗೆ ಮಧುರೆ ಆಸ್ಪತ್ರೆಯಲ್ಲಿ ಕೆಲವು ದಿನಗಳ ಹಿಂದೆ ಗಂಡು ಶಿಶುವು ಆಗಿ ಆಕೆಯನ್ನು ಆಸ್ಪತ್ರೆಯವರು ಅವಧಿ ಮುಗಿದನಂತರ ಹೊರಕ್ಕೆ ಕಳುಹಿಸಿದ ತರುವಾಯ ಮಗುವು ಸತ್ತಿರುವುದೆಂದು ಹೇಳಲಾಗಿ [illegible] ಕೊಟ್ಟು ಕಳುಹಿಸಿದಳೆಂದೂ ಸ್ಮಶಾನದಲ್ಲಿ ಗುಂಡಿ ತೋಡಿ ಅದನ್ನು ಒಳಗೆ ಮಲಗಿಸಿದಾಗ ಅದು ಅಳತೊಡಗಿತೆಂದೂ ವರದಿಯಾಗಿದೆ. ಸ್ಮಶಾನದ ಕಾವಲುಗಾರನು ಆಕೆಯ ತಂದೆಯನ್ನೂ ಮಗುವನ್ನು ಪೋಲೀಸರ ಒಪ್ಪಿಸಿದ್ದರಿಂದ [illegible] ಪೋಲೀಸರು ತಂದೆ ಮಗಳಿಬ್ಬರನ್ನೂ ದಸ್ತಗಿರಿ ಮಾಡಿದರೆಂದೂ ವರದಿಯಾಗಿದೆ.

## ದೇಶ ದ್ರೋಹಕ್ಕಾಗಿ ಈಜಿಪ್ಟಿನಲ್ಲಿ ಮೊದಲನೇ ಫಾಸಿ

ದೇಶ ದ್ರೋಹಕ್ಕಾಗಿ ಇದೇ ಮೊಟ್ಟಮೊದಲಿಗೆ ಈಜಿಪ್ಟಿನಲ್ಲಿ [illegible] ವರ್ಷದ ಮಹಮದ್ [illegible] ಎಂಬ ಮಾಜಿ ಬ್ರಿಟಿಷರ ನೌಕರನನ್ನು [illegible] ಫಾಸಿ [illegible]

### ಮಕ್ಕಳ ಪ್ರದರ್ಶನ

ದಸರಾ ಉತ್ಸವದ ಅಂಗವಾಗಿ ಮಕ್ಕಳ ಪ್ರದರ್ಶನದ ವಿಶೇಷ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. [illegible] ಮಕ್ಕಳ ಪ್ರದರ್ಶನದಲ್ಲಿ [illegible]

### ಮೈಸೂರು ಪೇಟೆ ಧಾರಣೆ

| | | |
|---|---|---|
| ಅಕ್ಕಿ | [illegible] | [illegible] |
| ಕಡಲೆ [illegible] | [illegible] | [illegible] |
| ಎಣ್ಣೆ | [illegible] | [illegible] |
| ಹುರುಳಿ | [illegible] | |
| ಮೆಣಸಿನಕಾಯಿ | [illegible] | [illegible] |
| ತೆಂಗಿನಕಾಯಿ [illegible] | [illegible] | [illegible] |

## ಬೇಕಾಗಿದ್ದಾರೆ

ಮೈಸೂರು ನಗರದ ಎಲ್ಲಾ ಮೊಹಲ್ಲಾಗಳಲ್ಲೂ ವೀರಕೇಸರಿ ದಿನ ಪತ್ರಿಕೆಗೆ ಚಂದಾದಾರರುಗಳನ್ನು ಮಾಡಿ ಪತ್ರಿಕೆ ಹಂಚಲು ದಕ್ಷರಾದ ನಂಬಿಕೆ ಉಳ್ಳ, ಯೋಗ್ಯರಾದವರು ಬೇಕಾಗಿದ್ದಾರೆ. ವಿವರಗಳನ್ನು ಈ ಕೆಳಗಿನ ವಿಳಾಸದಾರರಿಂದ ತಿಳಿಯಿರಿ.

ಎಸ್. ವಿ. ಶಂಕರ್, ಏಜೆಂಟ್,

ವೀರಕೇಸರಿ,

1325 ಅನಂತಸ್ವಾಮಿಯವರ ಅಗ್ರಹಾರ, ಕೊತ್ವಾಲ್ ರಾಮಯ್ಯನವರ ಬೀದಿ ಮೈಸೂರು

## ಪೋಲೀಸರು ಬಂದ ಬಗ್ಗೆ ಎಚ್ಚರಿಕೆ ಕೊಡುವ ನಾಯಿ

ಮದ್ರಾಸು ಟ್ರಿಪ್ಲಿಕೇನಿನ ಮನೆಯೊಂದರಲ್ಲಿ [illegible] ಎಂಬಾತನು ನ್ಯೂಯಾರ್ಕ್ ಹತ್ತಿ ದರದ ಜೂಜನ್ನು ನಡೆಸುತ್ತಿದ್ದನೆಂದೂ [illegible] ಪೋಲೀಸರು ಅವನ ಮನೆಯನ್ನು ಶೋಧಿಸಲು ಬಂದಾಗ ಅವನಿಂದ ತರಪೇತು ಹೊಂದಿದ್ದ ನಾಯಿಯು ಬೊಗಳುವುದರ ಮೂಲಕ ಪೋಲೀಸರ ಬರುವಿಕೆಯನ್ನು ಸೂಚಿಸಿತಲ್ಲದೆ ಅವರ ಬಾಯಿಗೆ ಸುಲಭವಾದ ಜೂಜಿನ ಚೀಟಿಗಳ ಒಂದು ಕಂತೆಯನ್ನು ಕಚ್ಚಿಕೊಂಡು ಪರಾರಿಯಾಯಿತೆಂದೂ ವರದಿಯಾಗಿದೆ. ಆದರೆ ನೆಲದ ಮೇಲೆ ಬಿದ್ದಿದ್ದ ಕೆಲವು ಚೀಟಿಗಳು ಪೋಲೀಸರಿಗೆ ಸಿಕ್ಕಿದುದರ ಮೇಲೆ ಸುಬ್ರಹ್ಮಣ್ಯಂನನ್ನು ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಡುಗಡೆ ಮಾಡಿರುವರೆಂದು ತಿಳಿದುಬಂದಿದೆ.

## ರುಮೇನಿಯದಲ್ಲಿ ಅಮೆರಿಕದ ಗೂಢಚಾರರಿಗೆ ಫಾಸಿ

ರುಮೇನಿಯದಲ್ಲಿ ಸಾಮ್ರಾಜ್ಯವಾದಿಗಳ ಸಹಾಯದಿಂದ [illegible] ಗೂಢಚರ್ಯ ಕೆಲಸದಲ್ಲಿ ತೊಡಗಿದ್ದ [illegible] ಜನ ಅಮೆರಿಕನ್ನರಿಗೆ ಫಾಸಿ ಶಿಕ್ಷೆ ವಿಧಿಸಿ, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. [illegible] ಮೂವರಿಗೆ ವಿವಿಧ ಅವಧಿಯ ಶಿಕ್ಷೆಗಳನ್ನು ವಿಧಿಸಲಾಗಿದೆ.

### ಸಂಸ್ಥಾನದ ದೇವಸ್ಥಾನ ಸೇವಕರ ಸಂಘದ ಸಕಲ ಸದಸ್ಯರ ಸಭೆ

ಮೈಸೂರು ಸಂಸ್ಥಾನದ ದೇವಸ್ಥಾನ [illegible] ಸಂಘದ ಮೊದಲನೇ ಸರ್ವ ಸದಸ್ಯರ ಸಭೆಯು ನಾಳೆ ಮಧ್ಯಾಹ್ನ [illegible] ಗಂಟೆಗೆ [illegible] ಶ್ರೀ [illegible] ದೇವಸ್ಥಾನದಲ್ಲಿ ನಡೆಯುತ್ತವೆ. ಸದಸ್ಯರೆಲ್ಲರೂ ಹಾಜರಾಗಬೇಕೆಂದು ಕೋರಲಾಗಿದೆ.

### ಸ್ವಾತಂತ್ರ್ಯ ಇತಿಹಾಸದ ರಚನೆ ಬಗ್ಗೆ ಮೈಸೂರಿನ ಸಮಿತಿ

ಸ್ವಾತಂತ್ರ್ಯ ಇತಿಹಾಸ ರಚನೆಗಾಗಿ ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಸಾಹಿತ್ಯವನ್ನು ಸಂಗ್ರಹಿಸಲು ಸರ್ಕಾರದವರು ಶ್ರೀಗಳಾದ ಟಿ. ಟಿ. ಶರ್ಮ, ಪಿ. ಆರ್. ರಾಮಯ್ಯ, ಹೆಚ್. ಕೆ. ವೀರಣ್ಣಗೌಡ, ಡಿ. ಎಂ. [illegible] ಮತ್ತು ಟಿ. ಸಿದ್ದಲಿಂಗಯ್ಯನವರಿಂದ ಕೂಡಿದ ಸಮಿತಿಯೊಂದನ್ನು ರಚಿಸಿರುತ್ತಾರೆ.

### ವಸ್ತು ಪ್ರದರ್ಶನದ ಪಂದ್ಯಗಳ ಫಲಿತಾಂಶ

ವಸ್ತು ಪ್ರದರ್ಶನದಲ್ಲಿ ನೆನ್ನೆ ನಡೆದ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ಯಂಗ್ ಸ್ಪೋರ್ಟ್ಸ್ ಟೀಮಿನವರು ನಂಜನಗೂಡಿನ ರತ್ನಾಯಕರ್ಸ್ ಕ್ಲಬ್ಬಿನ 'ಬಿ' ಟೀಮಿನವರನ್ನು [illegible] ಪಾಯಿಂಟ್ ಗಳಿಂದ ಸೋಲಿಸಿರುತ್ತಾರೆ.

## ಅಮೆರಿಕಾ ವೇತನದ ಅಂಗೀಕಾರಕ್ಕೆ ನಿಷೇಧ

ಭಾರತದ ಸರ್ಕಾರಿ ಅಧಿಕಾರಿಗಳು ಅಮೆರಿಕದ ಸಂಸ್ಥೆಗಳ ವೇತನವನ್ನು ಅಂಗೀಕರಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿರುವರೆಂದು ವರದಿಯಾಗಿದೆ.

## ನೋಟೀಸ್

ಕೃಷ್ಣರಾಜನಗರ ತಾಲ್ಲೂಕು ಸ್ಪೆಷಲ್ ಶಿರಸ್ತೇದಾರ್ ಎಸ್. ಕೃಷ್ಣರಾವ್ ತಿಳಿಯಪಡಿಸುವುದೇನೆಂದರೆ —

ಷೆಡ್ಯೂಲ್ ಸ್ವತ್ತುಗಳು ನನ್ನ ಪಿತ್ರಾರ್ಜಿತವಾಗಿ ನನಗೆ ಸೇರಿ ನನ್ನ ಸ್ವಾಧೀನಾನುಭವದಲ್ಲಿರುತ್ತೆ. ನನ್ನ ತಂಗಿ ಶ್ರೀ ಕೆ. ಸುಬ್ಬರಾವ್ ರವರ, ತನ್ನ ಗಂಡನಿಂದ ಏಸರ್ಜಿತಳಾಗಿ ಬಂದು, ಸರ್ಕಾರಿ ನೌಕರಿಯಲ್ಲಿರುವ ತನ್ನ ಮಗಳು ಶ್ರೀಮತಿ ಕಮಲಮ್ಮನೊಡನೆ ವಾಸ ಮಾಡುತ್ತಿದ್ದ ಶ್ರೀ [illegible] ಈ ಆಸ್ತಿಗಳಲ್ಲಿ ತಮಗಿದ್ದ ಹಕ್ಕನ್ನು ನನಗೇನೇ ಪಟಾಸಿ, ನನ್ನಿಂದ ಪ್ರತ್ಯೇಕವಾಗಿ ಮೈಸೂರಿನಲ್ಲಿ ಸದರಿ ಕಮಲಮ್ಮನೊಡನೆ ವಾಸವಿರುತ್ತಾರೆ.

ಇವರಿಗೆ ತುಂಬಾ ವಯಸ್ಸಾಗಿ ಸ್ವಬುದ್ಧಿಯಿಂದ ವರ್ತಿಸತಕ್ಕ ಸಾಮರ್ಥ್ಯ ಇರುವುದಿಲ್ಲ. ಆದರೆ ತಮ್ಮ ಮಗಳು ಶ್ರೀಮತಿ ಕಮಲಮ್ಮನ ಚಿತಾವಣೆಯಿಂದ ಗೃಹಕೃತ್ಯದ ಕಲಹದಿಂದ ಉಂಟಾದ ಕೋಪದಿಂದ ನಿಷ್ಕಾರಣವಾಗಿ [illegible], ಅವಶ್ಯಕತೆಯಿಲ್ಲದ ನನಗೆ ನಷ್ಟ ಉಂಟು ಮಾಡಬೇಕೆಂಬ ದುರುದ್ದೇಶದಿಂದ ಆ ಸ್ವತ್ತುಗಳನ್ನು ಪರಭಾರೆ ಮಾಡಲು ಹವಣಿಸುತ್ತಿರುವುದಾಗಿ ಕೇಳುತ್ತೇನೆ.

ಆ ರೀತಿ ಯಾರಾದರೂ ನನ್ನ ತಂದೆಯವರಿಂದ ಪರಭಾರೆ ಮಾಡಿಕೊಂಡಲ್ಲಿ ಅದು ಪೂರ್ಣವಾಗಿ ಊರ್ಜಿತವಾಗತಕ್ಕದ್ದಲ್ಲ. ಅವರಿಗೆ ಈ ಸ್ವತ್ತುಗಳ ಮೇಲೆ ಯಾವ ವಿಧವಾದ ಹಕ್ಕೂ ಇರುವುದಿಲ್ಲ — ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತೇನೆ.

ಷೆಡ್ಯೂಲ್ 1) ಚಾಮರಾಜನಗರ ತಾಲ್ಲೂಕು ಸರ್ಗೂರು ಹೋಬಳಿ, [illegible] ಗ್ರಾಮ ಇದರಲ್ಲಿ ನನ್ನ ಸ್ವಾಧೀನಾನುಭವದಲ್ಲಿರುವುದು, ಕಾಲು ಭಾಗ ಹಕ್ಕು. 2) ಮೈಸೂರು ತಾಲ್ಲೋಕು [illegible] ಗ್ರಾಮದ ಸರ್ವೆ 113 1 115 1 117 1 ಈ ಮೂರು ನಂಬರ ಗಳಲ್ಲಿ ನನ್ನ ಸ್ವಾಧೀನದಲ್ಲಿರುವ 0 33 1 3 ಗುಂಟೆ ತರಿ (ಜಿ. [illegible]) ಕೃಷ್ಣರಾಜನಗರ ತಾಲ್ಲೋಕು ಕೆಸ್ತೂರು ಗ್ರಾಮದ ಸರ್ವೆ 242, 243-1, 244, 245 ಈ ನಾಲ್ಕು ನಂಬರ ಗಳಲ್ಲಿ ನನ್ನ ಸ್ವಾಧೀನದಲ್ಲಿರುವುದು—2 ಎಕರೆ 25 ಗುಂಟೆ ತರಿ [illegible]

ಎಸ್. ಕೃಷ್ಣರಾವ್

14 10 1953


ರಣಜಿತ್ ★ 16 10 53 ನೇ ಶುಕ್ರವಾರದಿಂದ ಅನೋಘ ಪ್ರಾರಂಭ

ಕರ್ದಾರ್ ರವರ ★ ದಿಲ್-ಎ-ನಾದಾನ್ ★

(DIL-E-NADAAN)

[illegible]

ತಾ 17 ನೇ ಶನಿವಾರ ಮತ್ತು 18 ನೇ ಭಾನುವಾರ ಬೆಳಿಗ್ಗೆ ಚಿತ್ರದ ಸ್ಪೆಷಲ್ ಬೆಳಗಿನ ಪ್ರದರ್ಶನ 10 30 ಕ್ಕೆ ಇರುತ್ತೆ


### ಮೈಸೂರು ಸರ್ಕಾರ

## ಸಂಕ್ಷಿಪ್ತ ಪ್ರಕಟಣೆ

1953-54 ನೇ ಸಾಲಿನಲ್ಲಿ ಕೆಳಗೆ ಕಂಡ ಕೂಪುಗಳಲ್ಲಿ ಗಂಧದ ಮರಗಳನ್ನು ಕಡಿದು [illegible] ಮೈಸೂರು ಸರ್ಕಾರ ಗಂಧದ ಎಣ್ಣೆ ಕಾರ್ಖಾನೆಗೆ ಸಾಗಿಸುವ ಬಗ್ಗೆ ಮಾಹರಂಬ ಟೆಂಡರ ಗಳನ್ನು 1953 ನೇ ಅಕ್ಟೋಬರ್ 28 ನೇ ತಾರೀಖಿನವರೆಗೆ ಆಹ್ವಾನಿಸಲಾಗಿದೆ.

| ರೇಂಜು | ಕೂಪಿನ ಹೆಸರು | ಮರಗಳು ದೊರೆಯುವ ಪ್ರಮಾಣದ ಅಂದಾಜು |
|---|---|---|
| ಚಾಮರಾಜನಗರ | 1) ಗುಡಿ [illegible] | |
| | ಬಾಬಾ [illegible] ಪ್ರದೇಶ | 500 ಟನ |
| | 2) [illegible] ಬೆಟ್ಟಗಳ ಕೂಪ್) 1953-54 | 500 " |
| | 3) ಮರಡಿ ಕೂಪ್ | 500 " |
| | ಒಟ್ಟು | 1500 " |

ಪ್ರತಿ ಟೆಂಡರಿನೊಡನೆ 200 ರೂ ಅರ್ನೆಸ್ಟ್ ಹಣವು ಠೇವಣಿಯಾಗಿ [illegible]

ಹೆಚ್ಚಿನ ವಿವರಗಳನ್ನು 1953 ನೇ ಅಕ್ಟೋಬರ್ 15 ಮತ್ತು 28 ನೇ ತಾರೀಖಿನ ಗೆಜೆಟ್ಟಿನಲ್ಲಿ ನೋಡಬಹುದು. ಅಥವಾ ಕೆಲಸದ ದಿನ ಮತ್ತು ವೇಳೆಗಳಲ್ಲಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಜನರಲ್ ಮ್ಯಾನೇಜರರ ಕಛೇರಿಯಲ್ಲಿ ಪಡೆಯಬಹುದು.

ಬಿ. ತಿಪ್ಪೇಸ್ವಾಮಿ, ಜನರಲ್ ಮ್ಯಾನೇಜರ್,

ಸರ್ಕಾರಿ ಗಂಧದೆಣ್ಣೆ ಕಾರ್ಖಾನೆ, ಮೈಸೂರು


ದಸರಾ ಸವಿ ನೆನಪು ಎಲ್ಲಾ ಕಾಲಕ್ಕೂ ಇರಲಿ !

ಕೇವಲ ಒಂದೇ ರೂಪಾಯಿಗೆ

ನಿಮ್ಮ ಫೋಟೋ - ಸ್ಟೋಲ್ [illegible]

[illegible]

ಮುರುಗನ್ ಅಂಡ್ ಕಂಪೆನಿ,

(AUTHORISED DEALERS FOR KODAK MATERIALS)

ಸ್ಟಾಲ್ ನಂ E 29 ದಸರಾ ವಸ್ತು ಪ್ರದರ್ಶನ :: ಮೈಸೂರು

ರಿಜಿಸ್ಟರ್ ನಂ 792

|| ವಂದೇ ಮಾತರಂ ||

ಒಂದು ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

# ಸಾಧ್ವಿ

ಚಂದಾ ದರ — ಏಜಂಟರುಗಳ ಮೂಲಕ ತಿಂಗಳಿಗೆ ೧ಂಟಾಣೆ — ಅಂಚೆ ಮೂಲಕ ತಿಂಗಳಿಗೆ ಒಂದು ರೂ. ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೩ ] MYSORE FRIDAY 16-10-1953 ಮೈಸೂರು : ಶುಕ್ರವಾರ ೧೬-೧೦-೧೯೫೩ [ ಸಂಚಿಕೆ ೬೨

# ನೆಹರೂರವರಿಗೆ ಗಯಾನಾ ಮಾಜಿ ಪ್ರಧಾನಿಯ ಮೊರೆ

## ಭಾರತಕ್ಕೆ ಬ್ರಿಟನ್ನಿನ ೫೦ ಲಕ್ಷ ಪೌಂಡು ಸಾಲ

ಕೊಲಂಬೊ ಯೋಜನೆ ದೇಶಗಳ ಅಭಿವೃದ್ಧಿ ಸಂಬಂಧವಾಗಿ ಪ್ರಪಂಚದ ಬ್ಯಾಂಕಿಗೆ ಬ್ರಿಟನ್ನು ಕೊಟ್ಟಿರುವ ೬ ಕೋಟಿ ಪೌಂಡಿನ ಚಂದಾ ಹಣದಲ್ಲಿ ೫೦ ಲಕ್ಷ ಪೌಂಡುಗಳನ್ನು ಭಾರತಕ್ಕೆ ಸಾಲವಾಗಿ ಕೊಡುವಂತೆ ಬ್ರಿಟಿಷ್ ಸರ್ಕಾರದವರು ಸೂಚಿಸಲಿರುವುದಾಗಿ ವರದಿಯಾಗಿದೆ. ಈ ಹಣವನ್ನು ಉಪಯೋಗಿಸಿಕೊಳ್ಳುವ ವಿಷಯವು ಭಾರತ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿಯೂ ಹಣವನ್ನು ದಾಮೋದರ ಕಣಿವೆ ಮತ್ತು ಎರಡನೇ ಉಕ್ಕಿನ ಕಾರ್ಖಾನೆ ಸ್ಥಾಪನೆಗಾಗಿ ಉಪಯೋಗಿಸಬಹುದೆಂದೂ ಹೇಳಲಾಗಿದೆ

## ಎತ್ತುಗಳ ಅಭಾವದಿಂದ ನೇಗಿಲಿಗೆ ಮನುಷ್ಯರು

